UNIVERSAL LIBRARY

OU_198680

UNIVERSAL LIBRARY

ವೆಂಕಾಮಾತ್ಯ ಕವಿ ವಿರಚಿತಂ

ಶ್ರೀ ಮ ದ್ರಾ ಮಾ ಯ ಣ ಂ
ಅ ಯೋ ಧ್ಯಾ ಕಾಂ ಡಂ

AYODHYAKAṆḌAM

(RĀMĀYAṆAM) OF VEṄKĀMĀTYA

EDITED BY

T. CHANDRASEKHARAN, M.A., L.T.

Curator, Government Oriental Manuscripts Library, Madras

and the staff of the Library

(Under the orders of the Government of Madras)

PRINTED BY THE SUPERINTENDENT
GOVERNMENT PRESS
MADRAS
1954

[PRICE, *Rs.* 6-8-0.

ವೆಂಕಾಮಾತ್ಯ ಕವಿ ವಿರಚಿತಂ

ಶ್ರೀ ಮ ದ್ರಾ ಮಾ ಯ ಣ ಂ

ಅ ಯೋ ಧ್ಯಾ ಕಾ ಂ ಡ ಂ

AYŌDHYĀKĀṆḌAM

(RĀMĀYANAM) OF VEṄKĀMĀTYA

EDITED BY

T. CHANDRASEKHARAN, M.A., L.T.

Curator, Government Oriental Manuscripts Library, Madras

and the staff of the Library

(Under the orders of the Government of Madras)

PRINTED BY THE SUPERINTENDENT
GOVERNMENT PRESS
MADRAS

1954

INTRODUCTION.

The manuscript ot Rāmāyaṇa by Veṅkāmātya was selected by the Editorial Committee of the Government Oriental Manuscripts Library and was approved by Government for publication during 1951-52. Accordingly, the Sundara Kāṇḍa was taken up first, in view of the special significance with which it is looked upon and was published as No. 20 in the Madras Government Oriental Manuscripts Series. In the manuscript of Veṅkāmātya Rāmāyaṇa preserved in this Library, some verses in the beginning of Bālakāṇḍa and in the middle of Āraṇyakāṇḍa are wanting. Therefore, Ayodhyā Kāṇḍa, which is complete, was next taken for printing. Enquiries are being made to ascertain if any other copies of Veṅkāmātya Rāmāyaṇa are available which may contain the portions missing in this library manuscript and I appeal to the Kannaḍa public to inform me about the existence of any such manuscripts and thus enable me to publish this rare manuscript in complete form. The remaining Kāṇḍas will be published and placed before the Kannadigas in due course.

The literary importance of this Rāmāyaṇa and the particulars regarding the author, Veṅkāmātya and his scholarship were dealt with in the introduction to the Sundarakāṇḍa. It is not, therefore, proposed to repeat them here. It may, however, be pointed out that the description of Citrakūṭa for which one complete Chapter has been devoted and which is full of high poetic imagination and figures of speech, shows that the author was not merely a prosaic story teller but a poet of a high order.

My thanks are due to Sri V. Hanumanthachar, M.A., L.T., Librarian, and to Sri K. Krishna Sharma, former Pandit of the library, for preparing the press-copy. I have also to thank the Superintendent, Government Press, Madras, for completing the printing in an efficient manner within a short time.

GOVERNMENT ORIENTAL MANUSCRIPTS LIBRARY, MADRAS-5,
8th May 1954.

T. CHANDRASEKHARAN,
Curator.

ಮುನ್ನುಡಿ

ವೆಂಕಾಮಾತ್ಯ ವಿರಚಿತವಾದ ರಾಮಾಯಣವು 1951-52 ನೆಯ ಇಸವಿಯಲ್ಲಿ ಮುದ್ರಿಸುವ ಸಲುವಾಗಿ ಮದ್ರಾಸ್ ಸರಕಾರದ ಪ್ರಾಚೀನ ಹಸ್ತಲಿಖಿತ ಪುಸ್ತಕ ಭಾಂಡಾಗಾರದ ಸಂಪಾದಕೀಯ ಸಮಿತಿಯವರಿಂದ ಆರಿಸಲ್ಪಟ್ಟು ಸರಕಾರದಿಂದ ಅಂಗೀಕೃತವಾಯಿತು. ತದನುಸಾರವಾಗಿ, ಸಾಮಾನ್ಯವಾಗಿ ರಾಮಾಯಣವನ್ನು ಪಾರಾಯಣ ಮಾಡುವವರಿಗೆ ಸುಂದರಕಾಂಡದ ವಿಷಯದಲ್ಲಿ ಇರುವ ವಿಶೇಷವಾದ ಶ್ರದ್ಧಾ ಭಕ್ತಿಗಳನ್ನು ಹಿಡಿದು ಪ್ರಥಮವಲ್ಲಿ ಅದನ್ನು ಮುದ್ರಿಸಲಾಯಿತು. ಹಸ್ತಲಿಖಿತ ಪುಸ್ತಕ ಭಾಂಡಾಗಾರದಲ್ಲಿ ಇರುವ ರಾಮಾಯಣದ ಪ್ರತಿಯಲ್ಲಿ, ಬಾಲಕಾಂಡದ ಆದಿಯಲ್ಲಿಯೂ ಅರಣ್ಯಕಾಂಡದ ಮಧ್ಯದಲ್ಲಿಯೂ ಗ್ರಂಥಪಾತವಿರುವುದರಿಂದ, ಸಂಪೂರ್ಣವಾಗಿರುವ ಅಯೋಧ್ಯಾ ಕಾಂಡವು ಎರಡನೆಯ ಸಂಪುಟವಾಗಿ ಮುದ್ರಿಸಲ್ಪಟ್ಟಿದೆ. ಉಳಿದ ಕಾಂಡಗಳು ಕ್ರಮೇಣ ಒಂದೊಂದಾಗಿ ಮುದ್ರಿಸಲ್ಪಡುತ್ತವೆ. ಭಾಂಡಾಗಾರದ ಪ್ರತಿಯಲ್ಲಿನ ಗ್ರಂಥಪಾತಗಳನ್ನು ಪೂರ್ತಿಗೊಳಿಸಲು ಇತರ ಪ್ರತಿಗಳ ಆವಶ್ಯಕವಿದೆ. ಆದುದರಿಂದ ವೆಂಕಾಮಾತ್ಯ ರಾಮಾಯಣದ ಹಸ್ತಲಿಖಿತ ಪ್ರತಿಗಳುಳ್ಳ ಮಹಾಶಯರು ತಮ್ಮ ಪ್ರತಿಗಳನ್ನು ಭಾಂಡಾಗಾರಕ್ಕೆ ಎರವಲಾಗಿಕೊಟ್ಟು ಅಪೂರ್ವವಾದ ಈ ಗ್ರಂಥವನ್ನು ಗ್ರಂಥ ಲೋಪವಿಲ್ಲದೆ ಸಾಧ್ಯವಾದ ಮಟ್ಟಿಗೆ ಶುದ್ಧವಾಗಿ ಮುದ್ರಿಸಲು ನೆರವಾಗಬೇಕೆಂತ ಕೋರಲಾಗಿದೆ.

ಕನ್ನಡ ಸಾಹಿತ್ಯದಲ್ಲಿ ವೆಂಕಾಮಾತ್ಯ ರಾಮಾಯಣಕ್ಕೆ ಇರುವ ಸ್ಥಾನಮಾನಗಳು, ಕವಿಯ ಕಾಲದೇಶ ಮುಂತಾದುವು ಸುಂದರ ಕಾಂಡದ ಮುನ್ನುಡಿಯಲ್ಲಿ ನಿರೂಪಿತವಾಗಿವೆ. ಆದುದರಿಂದ ಅವನ್ನು ಇಲ್ಲಿ ಪುನಃ ಪ್ರಸ್ತಾಪಿಸಿಲ್ಲ. ಈ ಗ್ರಂಥದಲ್ಲಿ ಚಿತ್ರಕೂಟ ಪರ್ವತದ ವರ್ಣನೆಗೆ ಇಡೀ ಒಂದು ಸಂಧಿ ಮೀಸಲಾಗಿಡಲಾಗಿದೆ. ಆ ವರ್ಣನೆಯನ್ನು ಓದಿದವರಿಗೆ ಕವಿ ವೆಂಕಾಮಾತ್ಯನು ಸಾರವಿಲ್ಲದ ಬರಿಯ ಕತೆಗಾರನಾಗಿರದೆ ಉತ್ತಮ ದರ್ಜೆಯ ಕವಿ ಎಂಬುದು ಸ್ಪಷ್ಟವಾಗುವುದು.

ಇದರ ಮುದ್ರಣ ಪ್ರತಿಯನ್ನು ಸಿದ್ಧಪಡಿಸಿದ ಶ್ರೀ ವಿ. ಹನುಮಂತಾಚಾರ್, ಎಂ.ಎ., ಎಲ್.ಟಿ., ಮತ್ತು ಲೈಬ್ರರಿಯಲ್ಲಿ ಕನ್ನಡ ಪಂಡಿತರಾದ ವಿದ್ವಾನ್ ಶ್ರೀ ಕೆ. ಕೃಷ್ಣಶರ್ಮ ಇವರ ಕಾರ್ಯದಕ್ಷತೆಯು ಸಂಸ್ಮರಣೀಯವು.

ಕೊನೆಯದಾಗಿ ಈ ಗ್ರಂಥವನ್ನು ಸಕಾಲದಲ್ಲಿ ಅಂದವಾಗಿ ಅಚ್ಚು ಮಾಡಿಕೊಟ್ಟಿರುವ, ಸರಕಾರ ಮುದ್ರಣಾಲಯದ ಸೂಪರಿನ್‌ಟೆಂಡೆಂಟರವರಿಗೆ ಮತ್ತು ಅವರ ಸಿಬ್ಬಂದಿಗೆ ನಮ್ಮ ಕೃತಜ್ಞತೆಯು ಸಲ್ಲಬೇಕಾಗಿದೆ.

ಗವರ್ನಮೆಂಟ್ ಓರಿಯಂಟಲ್
ಮಾನ್ಯುಸ್ಕ್ರಿಪ್ಟ್ಸ ಲೈಬ್ರರಿ,
ಮದರಾಸ್-5.

ತಿ. ಚಂದ್ರಶೇಖರನ್,
ಕ್ಯೂರೇಟರ್.

ವೆಂಕಾಮಾತ್ಯಕೃತ ರಾಮಾಯಣಂ

ಅಯೋಧ್ಯಾ ಕಾಂಡಂ

ಒಂದನೆಯ ಸಂಧಿ.

ಸೂಚನೆ ॥ ಶ್ರೀಕಾಂತ ಸಾರಸಾಸನಮುಖ್ಯಗಾಂಧರ್ವ
ಪಾಕಶಾಸನ ಮುನಿರಾಜ ಮಂಡಲಜನಾ ।
ನೀಕ ಸಂತೋಷದಿಂದೆಸೆಯೆ ಭದ್ರಾಕಾರವೇದಿಕಾಮಧ್ಯದಿ ॥
ಭೂಕಾಂತೆಯಣುಗಿಸಹ ಕೌತುಕದಕರದಿಂದ ।
ನೇಕವಿಭವದೊಳನುಚರೊಡವೆರೆದು ಕುಳ್ಳಿರ್ಪ ।
ಲೋಕಲೋಚನ ಕುಲಾಗ್ರಣಿ ರಾಘವೇಶ್ವರಂ ಪಾಲಿಸುಗೆ ಮನದಿಷ್ಟಮಂ ॥ (1)

ಶರಧಿಯೊಳ್ಕರಗಳನ್ನಿಟ್ಟು ಲೋಕರಕರದು ।
ಕರದಾಸೆಯಿಂ ನಡೆವ ದೇವಸಂತತಿಗಳಂ ।
ತಿರಲಿ ನುತಿಸನು ನಮಿಸೆ ಕನಸಿನೊಳೊಗೂಡದಡಂ ಗಣಿಸೆ ನವಕುಗಳ ಬಳಿಕ ॥
ಕರದಗ್ರದೊಳ್ ಶರಧಿಯಿಟ್ಟ ಶಾಶ್ವತಕೃಪಾ ।
ಕರ ನೀರದಾಕಾರ ಶರಣಜನಮಂದಾರ ।
ತರಣಿ ವಂಶಜರಾಮ ಭದ್ರನಂಘ್ರಿದ್ವಯವ ಧ್ಯಾನಿಸುವೆ ಮಾನಸದೊಳು ॥ (2)

ಸಿಂಧುವನ್ನಂದುವೆಸಲತಿ ವೇಗದಾಂಟಿ ಮಣ ।
ಬಂಧುರದಸಾಲವಂ ಪೊಕ್ಕು ನಿಶಿಯೊಳ್ ಜಗ ।
ದ್ಬಂಧು ಗೋತ್ರಜನರಸಿಯಂ ಕಂಡು ಮಣಿಮುದ್ರೆಯಿತ್ತು ಸಂತಸಗೊಳಸಿದ ॥
ಕಂಧರಗಳೀರೈದ ನಾಂತವನ ಭಂಗಿಸಿದ ।
ಸಿಂಧುಸಮಗಂಭೀರ ನೆನೆದವಘಹರಶರಣ ।
ಬಾಂಧವನ ಶರ್ಮದಾತಾರ ಕಟ್ಟೇನಗರವಾಂಜನೇಯಂಗೆರಗುವೆ ॥ (3)

ಲಲಿತಸತ್ಕಳಿಗಳಾಧಾರನರ್ಗಳ ಶೂರ ।
ಛಲದಂಕನಿಶ್ಶಂಕ ಲಂಕಾಭಯಂಕರನ ।
ಸಲಲಿತೋದ್ಧಾರ ಭಕ್ತಾಧಾರ ಭವದೂರ ಮಾರುತಾತ್ಮಜನಂಘ್ರಿಗೆ ॥
ಒಲವಿನಿಂದೆರಗಿ ಪ್ರಾರ್ಥಿಸಿ ನುತಿಸಿ ಶ್ರದ್ಧೆಯಾ ।
ಕಲಿತಸಾಗುತೆ ರಾಮಚರಿತಾಮೃತೋದಧಿಯೊ ।
ಳಲಿವೆ ನಿಷ್ಟಾರ್ಥಗಳ ನೀವಯೋಧ್ಯಾಕಾಂಡಸಕಲಾಗಮೋದ್ದಂಡಮಂ । (4)

ಶೂತನಂ ಬೆಸಗೊಂಡ ರಖಿಳಮುನಿಗಣ ತತ್ವ ।
ಜಾತರದರ್ಥಂಗಳಂ ತಿಳಿದು ಹರಭೋಧಿಸಿದ ।
ಗೀತೆಯುತೆಯರ್ಧಾಂಗಿಗಮಿತ ಕೃಪೆಯಿಂ ಬಾಲಕಾಂಡದೊಳ್ಹರಿಚರಿತೆಯು ॥
ಭೂತಪತಿ ಮಗುಳ್ದೀನ ಪೇಳ್ದನೆಂಬರ್ಥಮಂ ।
ಪ್ರೀತಿಯಿಂದೆಮಗುಸುರಿ ಕೃತಿಗಳಂ ಪಾಳ್ವುದೆನೆ ।
ಆತತ್ವನಿಧಿ ಯಮಿಜನೋತ್ತಮರಿಗಿಂತೆಂದ ಪೇಳ್ದಥೆಯವಿಸ್ತರದೊಳು ॥ (5)

ತೋಳ್ ಬಲುಹಿಂದಮರರಾಳವನ ಸಖನಾಗಿ ।
ಖೂಳರಕ್ಕಸಗಣವನರಿದು ಸದ್ಧರ್ಮಗಳ ।
ಪೇಳಗೆಯುಪೆರ್ಚಿಸಿದೆನಖಿಳಯಾಗಂಗಳನ್ನೆಸಗಿದೆಂ ಬಹುವಿಧದಲಿ ॥
ಮೇಳಗೊಂಡಿದೆ ವಯೋಧರ್ಮ ಭೂಭಾರಮಂ ।
ತಾಳ್ವೆರ್ದದರೆಯಿಂದ ಜೀರ್ಣಮಾದುದುದೇಹ ।
ಬೇಳಲೇಂ ಪೊತೆಗಲ್ಪಿಶಿನ್ನು ವಿಶ್ರಮಿಸುವೊಡೆ ಬಯಸುತಿದೆ ತಾಣವನ್ನು ॥ (18)

ಸುರಪನಿಭವಿಕ್ರಮಂ ಸಕಲ ಕಲ್ಯಾಣಗುಣ ।
ದಿರವು ಕರುಣಾಕರಧಿ ಕಳೆಗಳೆಗ್ಗದದೇಹ ।
ತರಣಿಕುಲಭೂಷಣಂ ಮತ್ಪುತ್ರರಗ್ರಭವರಾಘವಂಗೀ ಭಾರಮಂ ॥
ಪೊರಿಸಿ ಭವದನುಮತದಿ ಸಕಲಸಂಭ್ರಮದಿಂದ ।
ಲಿರುವೆನೆಂದಿಚ್ಛೈಸುತಿರೆ ಚಿತ್ರಮೀಕಾರ್ಯ ।
ದಿರವನಾಳೋಚಿಸಿಯೆ ಬೆಸನೀಯಲಾಂಗ್ಯವೆನೆನಲರಸರಿಂತೆಂದರು ॥ (19)

ಧಾರುಣಿಯಭಾರಮಂ ಧರಿಸಿಬೆಳಗುವ ಮಹಾ ।
ಮೇರುವೆಯನಿಜನಿಳಯಪಕುಳಿಯಶಾಂತಿಸವಶ್ಯಂ ।
ಗಾರವಮಯಸ್ತಂಭಮಂವಾಳ್ಪನೆಂದೆಣಿಸಿ ಕೇಳ್ವ ನೃಪಕುಲತಿಲಕನೆ ॥
ಮೂರುಲೋಕಂಗಳಂಸೃಜಿಪ ಪಾಲಿಪಮಹ ।
ತ್ಕಾರಣನ ಭವದೀಯರಾಷ್ಟ್ರಕಧಿನಾಥನಂ ।
ಪೋರಂತೆಗೈಯಲೆಳಸಿದ ಮಂತ್ರವೈಚಿತ್ರ್ಯತರಮಾಯ್ತು ನೆರೆದಸಭೆಗೆ ॥ (20)

ಉತ್ತಮೋತ್ತಮಗುಣಂಗಳ ದೊರೆಯುನಿಖಿಳ ಭೂ ।
ಪೋತ್ತಮರ ಮಸ್ತಮಣಿ ಸತ್ಕಳಾನಿವಹಕಣಿ ।
ಚಿತ್ತಜ ವಸಂತನಳಕೂಬರ ಜಯಂತರಂ ಗೆಲುವ ಚೆಲುವಿನ ಧೋರಣೆ ॥
ಉತ್ತಮರ ಮನದಿಷ್ಟಮೀವ ಚಿಂತಾಮಣಿ ರ ।
ಘೋತ್ತಮಂ ಶ್ವೇತಾತಪತ್ರ ಸಚ್ಛಾಯೆಯೊಳ್ ।
ಮತ್ತೇಭವಡರಿ ಬಹುದೀಕ್ಷಿಪಭಿಲಾಷೆಯಿಂದಿಹುದೀ ಸಭಾಸಜ್ಜನಂ ॥ (21)

ಘನಸವಭ್ಯುದಯದಿರವ ಬಯಸುವ ಮಯೂರಗಳ ।
ಇನನಧಿಕ ಶ್ರೇಯಸ್ಸ ಕೋರುತಿಹ ಕಮಲಗಳ ।
ವಿನಯದಿಂ ಶಶಿವೃದ್ಧಿಯಂ ನೆನೆವ ಶರನಿಧಿಯ ಮಾನಸವ ಪೆರ್ಚುಗೆಯನು ॥
ಅನುದಿನದಿ ಬಯಸುವ ಮರಾಳನಾಯಕನಿರವ ।
ನನುಸರಣೆಗೈವುತಿದೆ ನೆರೆದೀ ಸಭಾಸದರ ।
ಮನದಿಷ್ಟ ರಘುಕುಲಾನ್ವಯ ರಾಮಚಂದ್ರಮನ ಭೂಗಮಾಸಂಪ್ರಾಪ್ತಿಯಂ ॥ (22)

ಋತುಗಳರಸನ ಬಯಸದಿರುವ ಭೂಜಾತಸಂ ।
ತತಿಗೆ ಶ್ರೇಯಸ್ಕರಮದುಂಟೆ ಸುರರಾಜನನು ।
ಮತಿಯುಪಡೆಯದಲೆಜೀವರಮುಮುಂಟೆ ರಘುಪತಿಯನರಸೆನಿಸದಿಹ ರಾಷ್ಟ್ರದೊಳು ॥
ಸ್ಥಿತಿಯ ಪಡೆದಿಹ ಮನುಜರಿಂಗೆ ಶುಭಕರವಾರ್ತೆ ।
ಯತಿಶಯಗಳುಂಟೆ ಜನನಾಥ ಮತ್ತೀನಗರ ।
ಪತಿಯೆನಿಸು ಬೇಗ ನಾಳೋಚಿಸುವುದೇನೆಂದು ಸಭೆನುಡಿಯೆ ನೃಪನೆಂದನು ॥ (23)

ಚಿರಕಾಲ ಸದ್ಧರ್ಮವಿಡಿದು ಮರ್ತ್ಯಲೋಕ ।
ಪರಿಪಾಲನಂಗೈದು ಪರಿಜನರ ಪುರಿಜನರ ।
ಪರಿಪೂರ್ಣಕಾಮರೆಂದೆನಿಸಿ ಹಿತದಿಂಪೊರೆವ ನೃಪತಿಯಾನಿರಲು ಬೇಗ
ತರಳನನಶಿಕ್ಷಕನ ರಾಜ್ಯಭಾರದಕುರುಪ ।
ನರಿಯದನ ಬಾಸಿಸಿದರೇನರಿತು ರಕ್ಷಿಸುವ ।
ಭರಕೆರುಹನೆಂತಪ್ಪನೆನಲರಸಗಿಂತೆಂದರಖಿಲ ಋಷಿದೊರೆಗಳೊಲಿದು ॥ (24)

ಲೇಸನಾಡಿದೆ ನೃಪತಿ ಶಕ್ರನಿಭವಿಕ್ರಮನ ।
ಕೂಸನುತ್ತಾತನೊಳಗಿಪ್ಪ ಸದ್ಗುಣಗಣ ಗ ।
ಳೀಸೆಂದು ಗಣಿಸಲಾಶಿಸುವರೆ ಭುಜಂಗೇಶ ಸೊಲ್ಲವೆಣ್ಣೆನೆಯರುಗಳು ॥
ಏಸರವರಕಟು ಸತ್ಕಳೆಗಳ ಸಮೂಹದೊಳ ।
ಗೀಸುದರ ವಾವೆಲ್ಲ ತಿಳದನಿತ ವಿಸ್ತರಿಸಿ ।
ಭಾಸುರಂಗೈದೆವಿದನಾಲಿಸಂದೆನುತುಸಿರ್ದ ರಾಸ್ಥಾನವಂಟಪದೊಳು ॥ (25)

ಬಲದೊಳಂವ್ರಂ ಬುದ್ಧಿಯೊಳ್ ಬೃಹಸ್ಪತಿ ಸತ್ವ ।
ದಲಿ ಮಹಾಬಲ ಶಾಂತಿಯೊಳು ಚಂದ್ರ ಧೈರ್ಯದಿಂ ।
ದಲಘುತುಹಿನಾಚಲ ಕ್ಷಮೆಗಂ ಧರಿತ್ರಿ ಕೋಪಕೆಣೆಯು ಕಾಲಾಗ್ನಿ ಶೌರ್ಯ ॥
ಜಲಜಮಿತ್ರಂ ಸತ್ಯದಲಿ ಧರ್ಮನೆರಡನೆಯು ।
ಚೆಲುವಿನೊಳಗಶ್ವಿನೀದೇವರ್ಕಳರಲೀತ ।
ಕಲಿತನದಿ ವಿಷ್ಣು ಕರುಣದಿಶಿವಂ ನಿಗಮದೊಳ್ಬ್ರಹ್ಮ ದಾನದಿಸುರತರು ॥ (26)

ಕರಿತುರಗದೇರಾಟ ಶರಚಾಪಗಳಕೂಟ ।
ಸರಿದೊರೆಗಳೊಡನಾಟ ಸಕಲಕಲೆಗಳವಾಟ ।
ನಿರತಗಾಂಧರ್ವವೀಣಾ ಕಲಾಪಾಬಿಗಳನರಿತ ಭಾವಜ್ಞರುಗಳ ॥
ದೊರೆಯೀತ ಕೇಳ್ಚತುಷ್ಷಷ್ಟಿಕಲೆಗಳೆದಾತ ।
ಪರಮತೇಜೋಭರಿತ ಪಾಪನಾಮಳಚರಿತ ।
ನರಸಕರುಣಾಪಾಂಗ ಸಕಲಮನುಜೋತ್ತುಂಗ ನಿಖಿಲಾರ್ಥದಾತ ತಾತ ॥ (27)

ದಾರುಣದನುಗಿಯಿಲ್ಲ ಧರ್ಮಕೆಡಿದೆಂಪಿಲ್ಲ ।
ನಾರಿದರಿರವಲ್ಲ ಸಾಹಸಕ್ಕೆಣೆಯಿಲ್ಲ ।
ಚಾರುತರಭಾಷೆಗೆರಡಿಲ್ಲ ಮರೆವೊಕ್ಕರಿಂಗೆಡರಿಲ್ಲ ದೈನ್ಯಸಲ್ಲ ॥
ಧಾರುಣೀಸುರರಲ್ಲ ವೃಥವಿ ಜಪಿಸುವರಲ್ಲ ।
ದೋರಂತೆ ಪೆರತಿಲ್ಲ ನಾರಾಯಣಾಂಶೆಯಿಂ ।
ಸೂರಿಜನರಕ್ಷಸಂಭವನಲ್ಲದೀರಾಮ ನರನಲ್ಲ ಲೋಕನಲ್ಲ ॥ (28)

ದರಹಾಸಯುತಭಾಷ ದೀನಜನರಂಸೋಡಿ ।
ಪೊರೆವ ಕರುಣಾರಾಶಿ ಕೃತವಾಪಗತಾಂಗ ।
ನೊರೆಯನೆಣಿಸಂ ಕಿಂಚಿಮುಪಕೃತಿಯು ನಡಿಗಡಿಗೆ ಪೊಗಳುತಿಹ ಸಜ್ಜನರೊಳು ॥
ಪಿರಿಯಗುರು ದೇವತಾರಾಧಕ ಮಹಾಪ್ರಾಜ್ಞ ।
ಸ್ಥಿರಬುದ್ಧಿ ಕಲಿತಕಲಿ ವಿಜಯನೀತನ ಕೋಪ ।
ವರನಿಷ ಉಗಳಾಗಲರಿದು ನಗರೀಜನರ ನೆಣಿಪನಾತ್ಮಜರಂದದಿ ॥ (29)

ಭಜಿಸಲಾರಾಗಲವರೀಪ್ಸಿತವ ಸಲಿಪ ಗೋ ।
ದ್ವಿಜರಾಯನಂ ಕಂಡು ಸ್ವೈರಿಸಸಮಕ್ಷದೊಳು ।
ಕುಜನರ್ಕಳಂ ನಿಲಿಸ ಪರರಂತರಂಗವ ನಿರೀಕ್ಷೆಯೊಳ್ತರಿವನು
ನಿಜವಲ್ಲದನೃತ ನುಡಿವಂಚಿಸಂ ಪರನಿಂದ್ಯ
ರುಚಿಯನಾಕರ್ಣಿಸಂ ಸ್ವಪ್ನದೊಳಗಾದೊಡಂ ।
ಯಜಮಾನ ಮೂಕಬಧಿರಾಂಧರ ಕಟೂಕ್ತಿಗಳ ನಾಡನವರಂ ಕೋಪಿಸಂ ॥ (30)

ಪರಸಮಾನೀಕರೊಳ್ ದರ್ಪಣಾನ್ಯಾಯದಿಂ ।
ಪರಿಶೋಭಿಸುತ್ತಿಹಂ ಪಾಪಪುಣ್ಯಂಗಳಂ ।
ನೆರೆಮರಾಳ ನ್ಯಾಯಮಾಗೈದೆ ಪಿಂಗಡಿಪ ಪಿಕನಂತೆ ಕಾಲವರಿತು ।
ಸ್ವರಗೊಡುವ ಭ್ರಮರದಂತರಸುವನು ವಾಸನೆಯ ।
ನುರಗದಂತತಿಜಾಗ್ರತೋರ್ದಪುದು ಸಾಗರದ ।
ಪರಿಯೊಳಿಹ ಗಂಭೀರ ಗುಣ್ಪಿನಿಂ ತಪ್ಪಿನಿಂ ಕೇಳವನಿಪಾಲತಿಲಕ ॥ (31)

ತಾಟಕೆಯು ತಂದಿಕ್ಕಿದವರಾರು ಮಾರೀಚ ।
ಕೀಟಕಸುಬಾಹುಗಳ ಪರಿಹರಿಸಿ ಕೌಶಿಕಪ ।
ರಾಟಪುರುಷರ ಮಖವ ರಕ್ಷಿಸಿದವರಾರಹಲ್ಯಾಂಗನೆಯ ನಿರ್ಮಲತೆಯನು ॥
ನೋಟಮಾತ್ರದಿ ಮಾಡಿದವರಾರು ಶಿವಚಾಪ ।
ಸೂಟಿಯಿಂ ನೆಗಗ್ಗೆತ್ತಿ ಸೀತೆಯಂ ಮಿಗೆ ಗೆಲಿದು ।
ಕೋಟಿನೃಪರಂ ಕೊಂದ ಭಾರ್ಗವನ ಗರ್ವಮಂ ಸೆಳೆದನಾರೀತನಲ್ತೆ ॥ (32)

ಪೊಗಳಲೆಂತಳವಪ್ಪುದೆಮಗೆ ಸದ್ಗುಣಗಣವ ।
ಬಗೆಗಳನಿಸೆಂದು ಲೆಕ್ಕಿಸಲ್ಕೆಗಂಗರಿದು ।
ಜಗತಿಯೊಳು ಮನುಜಾವತಾರಮಂ ಸ್ವೀಕರಿಸಿ ಶ್ರೀಮಹಾವಿಷ್ಣುತಾನೆ ॥
ಮಿಗೆ ಗೋದ್ವಿಜರ ಪೊರೆಯೆ ಕರುಣಾದಿಂದೈತಂದ ।
ಬಗೆಯಲ್ಲದಿಪ ಭೂಭುಜೋತ್ತಮರ ಸಂತತಿಗೆ ।
ಸೊಗಯಿಪುದೆ ಸರ್ವಗುಣಸಂದೋಹವೊಂದೆಸೆಯೆ ರಘುವೀರ ರಾಮನಂತೆ ॥ (33)

ಈತನೆಮಗಾದೊಡಂ ಸುಖದೊಳಿರ್ಪೆವೆಂದು ।
ಭೂತಳದ ಜನರೆಲ್ಲ ಬಯಕೆಗೊಂಡುದೆ ಮುನಿ ।
ವ್ರಾತಮುಡುಗಣ್ಣವರ ಬಳಗವಾಕಾಂಕ್ಷಿಸಿದೆ ಶ್ರೀರಾಮನಭ್ಯುದಯಮಂ ॥
ಪ್ರೀತಿಯಿಂದನುಮತಿಸಿ ಯುವರಾಜಪಟ್ಟಮಂ ।
ಆತನಿಂ ಕಟ್ಟಿ ಸಂತೋಷಗೊಳಿಸಲ್ ಜನಪ ।
ಖ್ಯಾತಮಾದಪುದು ನಿಜಕೀರ್ತಿ ಮೂಲೋಕದೊಳಗೆಂದು ಬುಧತತಿನುಡಿದುದು ॥ (34)

ಮೊಳಗೆ ಘನಮಾಗಸದೊಳಾಲಿಸುತ ಮನ್ನೆಗಂ ।
ಪುಳಕದಿಂ ಮೈಯುಬ್ಬಿ ನಲಿವ ಸೋಗೆಯ ತೆರದಿ ।
ಕಳಕಳಪದ್ವಿಜಗಣೋಕ್ತಿಗಳ ಕೇಳುತ ನೃಪತಿ ಹಿಗ್ಗಿ ಮೈಯುಬ್ಬುಮುದದಿಂ ।
ಬೆಳಗೆ ಮಿತ್ರೋದಯಂ ಸರಸಿಜಂ ಮಾಕಂದ ।
ಪೊಳಪಾಂತ ಮಾಳ್ಕೆಯೊಳ್ ರಾಮನಭಿಷೇಕಮಂ ।
ಬೆಳಗನಿಟ್ಟಳೆ ನೇತ್ರಯುಗ ತೊಳಗುವಂದದಿಂದುಣ್ಮೆ ಕಣ್ಬನಿಗಳಾಗ ॥ (35)

ಪತ್ತನೆಯ ದನಿಗೇಳಿ ಪಲವುವಿಧಚಿತ್ರತರ ।
ವೆತ್ತ ಬೆಳಗುಗಳುಳ್ಳ ನಿಜತೇಜದೊಡವೆರೆಯೆ ।
ಮುತ್ತಿನಂಪದೊಳುಮತುವಾ[illegible]ಂದಬಾಷ್ಪದಿಂ ರೋಮಾಂಚವಾಗಿಕರಣ ॥
ವೆತ್ತದುಃಖಗಳೆಲ್ಲದಾ[illegible]ಂದಮುಖದತಲ ।
ದತ್ತಮನ ಯೋಗಿಯಂದದಿ ಪಂಕ್ತಿರಥನಭೆ[illegible] ।
ಳತ್ತತ್ತ ಚಲಿಸವತಿ ಸಾತ್ವಿಕನಿ[illegible] ಹರ[illegible]ಯೆ[illegible]ಗಳಾತ್ತಿ ॥ (36)

ಸುಖದ ಸುಗ್ಗಿ[illegible] ಜೀವ[illegible]ವರು ।
ನ್ಮುಖಮುಳದು ಪ್ರಾರಬ್ಧದಶವೊಳಂತಳಕದಿಂ ।
ಸುನಾಗ [illegible] ನೃಪತಿಲಕನು ॥
ಮುಖನ್ಯೈದಿಯುಂ [illegible] ಜಾಗ್ರತಿ[illegible]ನೇವ ।
ಸುಖವಿಷ್ಯರನೋಡು [illegible] ಬೇಗ [illegible] ।
ಮುಖದಮರತತಿ ಮೆಚ್ಚೆ[illegible] ನುಡಿದ ವಾಳ್ಕೆಯೊಳತಿಶಯಮೆನೆ ॥ (37)

ಭರತಾಗ್ರಜಗೆ ಯುವರಾಜ್ಯಾಧಿಪತ್ಯಮಂ ।
ವಿರಚಿಪೊಡೆ ಭೂಸುರರ ಬಾಂಧವರ ಬೆಸಗೊಳಲು ।
ಹರುಷದಿಂದೆಲ್ಲ[illegible] ಚಿತ್ತಕ್ಕೆ ವಿದಿತಮಲ್ತೆ ॥
ಕರುಣದಿಂ[illegible] ಕನ್ನಮಂ ಬೆಸಸೆ ಶುಭ ।
ಕರವಸುಧಾರತತಿಗಳನೆಲ್ಲ ಸಂಗ್ರಹಿಸಿ ।
ಧರ[illegible] ಮುಂದೆ[illegible]ನಿಂತೆಂದವನು ॥ (38)

ಲೋಕಾಧಿನಾಥ ಕೇಳ್ ಶ್ರೀ ರಾಮಚಂದ್ರಮುನಿ ।
ನೇಕಾಧಿಪತ್ಯಕರ ಮಕುಟವಾಗಿಡೆಲೆಂದು ।
ಬೇಕಾದ [illegible] ರಘುವರರಕರೆಸಿ ॥
ಶ್ರೀಕಾಂತನಹುದೆಂದು ಪೇಳಲಾ ನೃಪತಿಲಕ ।
ನೇಕಾಂತ[illegible]ಮಂತ್ರನೊಳ್[illegible] ॥
ತಾಕಲ್ಮಷಘ್ನನೆಡೆಗೈದಿದಂ ಮಂತ್ರಿ[illegible]ಕಾಲವಿಳಂಬ[illegible]ದಿಂದೆ ॥ (39)

ಆ ಮಹಾಮಾತ್ಯ ನಿಜರಥವೇರಿ ಹರುಷದಿಂ ।
ಸೋಮವೀಥಿಯೊಳ್[illegible] ತ್ವರಿತದಿಂ[illegible] ।
ಪ್ರೇಮದಿಂ ರಘುವರರ [illegible] ॥
ಭೂಮಿಶಸಾಲಯುವ ಪೊಕ್ಕು ಕಕ್ಷಗಳುಳಿದು ।
ನೇಮಮಂ ಪಡೆದ ಭಾಗ್ಯೋದಯಸುಮುಹೂರ್ತದೊಳ್[illegible]ಯಂ ।
ರಾಮಪುರದಧಿನಾಥನಿಗೆ ಎನ್ನಪಂಗೆಯ್ಯಿ[illegible] ಸಾನ್ನಿಧ್ಯವಂ ॥ (40)

(ಸಂಧಿ 1, ಪದ 40.)

ಎರಡನೆಯ ಸಂಧಿ.

ಸೂಚನೆ ॥ ಗುರು ವಸಿಷ್ಠರ ಮತದೊಳ್ ಧರಾಭಾರಮಂ ।
ಧರಿಸಿ ಲೋಕವ ಪೊರೆಯೆ ರಘುಕುಲ ಲಲಾಮಶ್ರೀ ।
ಕರವ ದೀಕ್ಷೆಯ ನಾಂತು ರಾಜಸ್ಯಲೀಲೆಯುಂ ಬೆಳಗಿದಂ ಸುರಪತಿಯೊಲು ॥

ಬಸವಂತನಂ ಕಂಡ ಕೋಗಿಲೆಯ ಮಾಳ್ಕೆಯೊಳ್ ।
ವಸುಧಾಧಿಪತಿಸುತನನೀಕ್ಷಿಸಿ ಸುಮಂತ್ರ ಸಂ ।
ತಸದಿಂದ ಪೊಗಳಿ ಕರಗಳ ಮುಗಿದು ಮನ್ನಣೆಯನಾಂತು ಮಸ್ತಕದಿ ಬಳಿಕ ॥
ಪೊಸಪೀಠವಗ್ರದೊಳು ಕುಳ್ಳಿರ್ದ ಹರುಷರಸ ।
ಮೊಸರುವಂದದ ಮೃದುಳ ಭಾಷಣಗಳಿಂದ ಶುಭ ।
ದೊಸಗೆಯಂ ಬಿನ್ನವಿಸಲೆಳಸಿದಂ ವಿನಯದಿಂ ನಗರಾಜನುದರ ಶಶಿಯ ॥ (1)

ಧರಣೀಸುರೋತ್ತಮರು ಬಾಹುಜರ್ ಬಾಂಧವ ।
ವೆರಸಿ ದಶರಥರಾಜನೊಡ್ಡೋಲಗದೊಳಿರುತ ।
ಪರಿಪರಿಯ ಮಂತ್ರದುಪಮೆಗಳಿಂದ ಸರ್ವರಂ ಸಂತೈಸಿ ಸನ್ಮತದೊಳು ॥
ನಿರುತ ಸಾಮ್ರಾಜ್ಯಾಧಿಪತ್ಯದ ಭಿಷೇಕಮಂ ।
ವಿರಚಿಸಲು ನಿಶ್ಚೈಸಿ ತಾತನಾದಂ ನಿನ್ನ
ಸ್ಮರಿಸಿದರ್ಥವನು ವಿಜ್ಞಾಪಿಸುವರೈತಂದೆ ತಂದೆ ನರಕಂಠೀರವ ॥ (2)

ತಾತನಾಜ್ಞೆಯ ಮಹಾಮಾತ್ಯನಿಂದಲಿ ಕೇಳ್ದು ।
ಜಾತಹರುಷಾನ್ವಿತನೆ ತೆರಳಿದಂ ರಘುಕುಲೋ ।
ದ್ಭೂತ ಭೂಭುಜ ಮುಕುಟಮಣಿ ನಿಜಗೃಹಾಂತರ ದ್ವಾರ ದೇಶಗಳ ನುಳಿದು ॥
ಗೀತವಾದ್ಯಂಗಳಾರವಗಳ ಸ್ನಾಲಿಸುತ ।
ಪ್ರೀತಿಯಿಂ ಮಣಿರಥವನಡರೆ ಪರಿವೇಷ್ಟಿಸಿದ
ಸೂತಮಾಗಧವಂದಿ ಸಂದೋಹ ಕಲಕಲಧ್ವನಿ ಬೆರ್ಚಿತೆಣ್ಣಿಸೆಯನು ॥ (3)

ಸಿಂಗಾರ ರಾಜಮಾರ್ಗವ ಬೆಳಗುತಾಗ ರಘು ।
ಪುಂಗವನು ಪೊಂದೇರೊಳೈತಪ್ಪ ಶುಭಕರ ಬೆ ।
ಡಂಗ ನಿಟ್ಟಿಸಲಖಿಳ ನಾಗರರ್ ನಲವಿಂದೆ ನಿಂದುಭಯ ಪಾರ್ಶ್ವಗಳೊಳು ॥
ಇಂಗಡಲೊಳೊಗೆ ದವಳ ಸಂಗಡಿಗ ವಾರುಣಿಯ ।
ಭಂಗುರದ ಶೈಲಾಗ್ರದಲಿ ಪೊಳೆಯಲಾಮೋದ ।
ಹಿಂಗದೀಕ್ಷಿಸುವಂತೆ ಮೆರೆವಾರದಲ್ಲಿ ನೋಡಿವರ್ ಪಾಂಕಲೆಯರು ॥ (4)

ತಳಿರಡಿಯ ಗಿಳಿನುಡಿಯ ತೊಂಡೆವಣ್ಬಾಯ್ದೆರೆಯ ।
ಸುಳಿಗುರುಳ ತೊಳಪರಳ ಚೆಲ್ಗಂಗಳವೆರೆಯ
ಪಳಿವ ಮುಖಕಂಬು ಸುಕಂಠ ಮದನೋತ್ಕಂಠ ಬೆಚ್ಚಗೆಯ ಬಾಹುಲತೆಯ ॥
ನಳಿನಕರ ತಳಸುಕರ ಗರಿವೊಗಳಿನೆ ನಖರ ।
ಪೊಳೆವಲ್ಲ ಕಳೆವಲ್ಲವರ ಚಿತ್ರಬೆಳಗಿತ್ತ ।
ಸುಳಿನಾಭಿ ಮಿಗೆ ಶೋಭಿಸುವ ಚೆಲ್ವಯುವತಿಯರು ಬೆಡಗಿನಿಂ ದಿಟ್ಟಿಸಿದರು ॥ (5)

ನೆರೆದುಭಯ ಸೌಧಾಗ್ರದಲ್ಲಿ ಕುಳ್ಳಿರ್ದವರ ।
ತರುಣಿಯರ್ಮಜ್ಜನದುತ್ಸವದೊಳಂಬುಜಾಕ್ಷರ ।
ಕರಲಾಜಗಳ ರಘೂತ್ತಮನ ಮಕುಟಾಗ್ರದೊಳ್ಸೂಸಿದರು ಪೂವಳೆಯನು ॥
ಸುರರು ಸಿರಿಯರಸಂಗೆ ಕರೆವಂತೆ ಪಿರಿಯಜನ ।
ರುರುತರದ ಪಳವಾತಿನಿಂದ ತುತಿಗೈವುತಿರೆ ।
ನರನಾಥರೆಡಬಲದೊಳ್ಕೈತಂದು ಕೈಮುಗಿದು ವಂದಿಸಲ್ಕರಗಳೆತ್ತು ॥ (6)

ಸಂತಸದೊಳಖಿಳ ದಿಗ್ದೇಶದಧಿನಾಥರಾಗ ।
ಳಂತರವನರಿದು ಮೃದುನುಡಿಯಿಂದಲುಪಚರಿಸಿ ।
ಪಿಂತೆ ಬಹಭೂಸುರೋತ್ತಮರ ಗುರುಭಾವನೆಯೊಳಾನಂದ ಗೊಳಿಸಿ ಜನರ ॥
ಸಂತೆಯಂ ಮನ್ನಿಸುತೆ ರಾಜವೀಥಿಯೊಳೈದಿ ।
ಮುಂತೆಸೆವ ತಾತನರಮನೆಯ ಮುಂಗಡೆಯಲ್ಲಿ ।
ನಿಂತಿರಿಸಿ ರಥವನಿಳಿದಾಸುಮಂತ್ರನ ಹಸ್ತದುರುಲಾಘವ ದೊಲವಿನಿಂದ ॥ (7)

ಅರಮನೆಯನೊಳ ಪೊಕ್ಕು ಮಿರುಗುವಾಸ್ಥಾನ ದೊಳು ।
ಹರಿಪೀಠವಗ್ರದಲಿ ಕುಳ್ಳಿರ್ದತಾತನಂ ।
ದರುಶನಂಗೈದು ಚರಣಾಬ್ಜಕಭಿನಮಿಸಲುಂ ಸುತನ ಸಂತಸದೊಳಪ್ಪಿ ।
ಶಿರವನಾಘ್ರಾಣಿಸುತ ಹರುಷದಿಂದಂಕದೊಳು ।
ಸಿರಿಯರಸನಂ ತನೂಭವನೆಂದು ಕುಳ್ಳಿರಿಸಿ
ಸರಸತರ ಭಾಷಣಗಳಿಂದರಸನಿಂತೆಂದನಖಿಳ ಜನಸಮ್ಮತಿಯೊಳು ॥ (8)

ಪಾಕಶಾಸನ ಮುಖ್ಯ ದೇವತಾನಿಚಯಕ್ಕ ।
ನೇಕ ಸಾಹಾಯ್ಯ ಮನೆಸಗಿ ಸತ್ಕೀರ್ತಿಯಂ ।
ಜೋಕೆಯಿಂಗಳಿಸಿ ಸಕಲೇಷ್ಟಮೆಂದೆನೆ ಭೂಮಿ ಭಾರವಂ ಬಾಹುಯುಗದಿ ।
ಶ್ರೀಕಾಂತನಾಜ್ಞೆಯಿಂ ತಳೆದೆ ಬಹುವತ್ಸರಂ ।
ಬೇಕಾದ ಭೋಗವನ್ನನುಭವಿಸಿ ಭೂಸುರಾ ।
ನೀಕವಂ ಸತ್ಕ್ರತುಗಳಿಂ ಸಮೃದ್ಧಾರ್ಥರಂಗೈದೆ ಸುಖಕರ ದೊಳಾನು ॥ (9)

ಜರೆಯಿಂದ ಜೀರ್ಣಮಾಗಲ್ಕಂಗ ಧಾರಣೆಯು ।
ಪೊರೆಗಲಸಿದವು ಭುಜಗಳು ಭುಜಂಗೋಪಮದ ।
ಸಿರಿಕರದ ಭವದೀಯ ಬಾಹ್ವಾಶ್ರಯಂಗೈಯ್ಯೆ ಬಯಸಿದಳ್ ಭೂಕಾಂತೆಯು ।
ಧರಣೀಧವರ್ಸುರರು ಪರಿಪರಿಯಾಕಾಂಕ್ಷೆಯಿಂ ।
ವರವಬೇಡುತ್ತಿರ್ಪರೆಲೆ ಪುತ್ರ ಭೂತಳಕೆ ।
ದೊರೆಯಾಗಬೇಕೆನುತ್ತಖಿಳ ಜನರಿಂದು ಸಂಪ್ರೀತಿಯಂ ಬಯಸುವಂತೆ ॥ (10)

ಅದರಿಂದ ಪುತ್ರನೀ ಯುವರಾಜನಾಗಿ ಸ ।
ಮ್ಮುದಗೊಳಿಸು ಲೋಕವಂ ಮತ್ಸದೃಶ ಮೂಲೋಕ ।
ವಿದಿತ ಸದ್ಗುಣನಿಲಯ ಸುತಸಮುದಯಕೆ ಜ್ಯೇಷ್ಠ ಸಕಲಾಗಮ ಶ್ರೇಷ್ಠನು ॥
ಸದಯ ಸರ್ವಪ್ರಕೃತಿರಂಜಕ ಸುಧಾವಾಣಿ ।
ಯುದಯಮುಖಕದನಮುಖಕರ್ಕಶ ಮಹಾಪ್ರಾಜ್ಞ ।
ಚೆದುರನೀಂ ಯುವರಾಜನೆನಿಸು ಮರುದಿನ ಪುಷ್ಯಯೋಗದೊಳನುರಾಗದಿ ॥ (11)

ಕಾಮ ಮೋಹೋದ್ಭೂತ ಗುಣವುಳಿದು ಸದ್ಧರ್ಮ ।
ಕ್ಷೇಮದಿಂದನವರತ ದೇಶಕೋಶಂಗಳಂ ।
ಪ್ರೇಮದಿಂದಭಿವೃದ್ಧಿಗೊಳಿಸಿ ನಿಜಸುತರಂತೆ ಪ್ರಜೆಗಳಂ ಪರಿಪಾಲಿಪ ॥
ಭೂಮಿಪಾಲಕರ್ ಬಯಸುವರಖಿಲರಲ್ಲಿ ನೃಪ ।
ಸೋಮನೀನಾ ಪರಿಯಲಿ ಪ್ರಜಾಪಾಲನೆಯ ।
ಧೀಮಂತ ಯುವರಾಜನೆನಿಸಿ ನೀಂ ಗೈವುದೆನ್ನಭಿಮತವ ಸಲಿಸುವುದದಿ ॥ (12)

ಅವನಿಪತಿ ಯೀಪರಿಯೊಳೊರೆದ ಶುಭವಾರ್ತೆಯಂ ॥
ಯವನ ಕಾಂಭೋಜ ಕರ್ಣಾಟಕಾಂಧ್ರಾವನೀ ।
ಧವರೆಲ್ಲ ಕೇಳಿ ಭುಲ್ಲೈಸಲ್ಕೆ ಬುಧಗಣಂ ಸಂತಸದಿ ಮೆಚ್ಚುತಿರಲು ॥
ಸುವಿವೇಕದಿಂದೊರ್ವನಾಪ್ತ ನೀವಾರ್ತೆಯಂ ।
ತವಕದಿಂ ಕೌಸಲ್ಯೆಯೊಡನರುಹೆ ಸಂಭ್ರಮದಿ ।
ನವರತ್ನಭೂಷಣಾದಿಗಳನಿತ್ತುಪಚರಿಸಿ ನಲಿವುತಿರಲಿತ್ತಲರಸ ॥ (13)

ಸುತನಿಗಪ್ಪಣೆ ಗೊಟ್ಟು ಕಳುಹಿ ನಿಜಮಂದಿರಕೆ ।
ಮತಿಯಿಂದನಾತ್ಮಜಸಹಿತ ಭೂಪನೊಳಂತೆಂದ ।
ನತಿಶಯದ ಶುಭಪುಷ್ಯಯೋಗ ಬಂದಿದೆ ನಾಳೆ ತನಯನಭಿಷೇಕವನ್ನು ॥
ಹಿತದಿಂದೆ ರಚಿಪುದ ಭಿಮತವೆಂದು ಪೇಳಿದ ।
ವ್ರತಗೊಳಿಸಿ ಸಕಲರಂ ಸಂತೈಸಿ ಕಳುಹಿ ಮುನಿ ।
ಕ್ಷಿತಿಯರಸ ಸಹಿತಲಂತಃಪುರಕೆ ಗಮಿಸಿದಂ ಸಂತೋಷಚಿತ್ತನೆನಿಸಿ ॥ (14)

ನಳಿನ ಪತ್ರಾಕ್ಷ ಶ್ರೀರಾಮನಂ ಮಗುಳೆ ಮ ।
ನ್ನಿಳಯಕ್ಕೆ ಕರೆತಹುದೆನುತ್ತ ನೇಮಿಸೆ ಮಂತ್ರಿ ।
ತಳೆದು ಪತಿಯಾಜ್ಞೆ ಯಿಂದೈದಿ ಬಾಗಿಲೊಳಿರ್ಪ ಜನರಿಂದಲರಿಕೆಗೊಳಿಸೆ ॥
ಘಳಿಲನಪ್ಪಣೆಪಡೆದು ಬಂದೆರಗಿ ರಘುವೀರ ।
ನೊಳಗೆ ಪಿತ ಪೇಳ್ದಂತೆ ಬಿನ್ನವಿಸೆ ಸಂತಸಂ ।
ತಳೆದು ದರ್ಶನಲಾಭಕೆಂದು ಮತ್ತೆ ರಥವೇರಿ ಬಂದಂ ಸುಮಂತ್ರನೊಡನೆ ॥ (15)

ತನಯ ಮಂದಿರದೆಡೆಗೆ ಬಂದ ವಾರ್ತೆಯ ಕೇಳಿ ।
ಜನಪನಪ್ಪಣೆ ಗೊಂಡಲ್ಲಕ್ಷಾಂತರಗಳುಳಿದು ।
ವಿನಯದಿಂದೊಳಪೊಕ್ಕು ದೂರದೊಳ್ ಭೂಪನಂ ಕಂಡು ಭಯಭಕ್ತಿಯಿಂದೆ ॥
ತನುಪುಳಕದಿಂದೆ ವಂದನೆ ಗೈದು ಕೈಮುಗಿಯ ।
ಲಿನ ಪ್ರಿಯದೊಳಪ್ಪಿ ಸಂತಸದೊಳತಿ ಪ್ರೇಮದಿಂ ।
ಕನಕಪೀಠದೊಳೊತ್ತಿನಲಿ ಕುಳ್ಳಿರ್ದನೆ ಮನ್ನಿಸಿದ ರಘುವೀರನು ॥ (16)

ಸಸಿಯ ಸಮ್ಮುಖದಿ ಪೆರ್ಚುವ ಪಯೋನಿಧಿಯಂತೆ ।
ವಸುಮತೀರಮಣ ಕುವರನ ನೋಡಿದಂತರುಚಿ ।
ವಿಶದಮಂದರಹಾಸಮೊಸಗುತಂ ಮೃದು ಮಧುರ ಭಾಷಣದೊಳು ।
ಪೊಸತೆರಲ್ ನುಡಿದನೆಲೆ ಪುತ್ರಕ ಸ್ವವೀರ್ಯದಿಂ ।
ವಸುಧೆಯಂ ಪಾಲಿಸಿದೆನೇಕ ದಕ್ಷಣೆಯಿಂದ ।
ಲೆಸಗಿದೆಂ ಕ್ರತುಗಳಂ ಪಡೆದೆನು ಕುಮಾರ ಹಿತರಾದಾತ್ಮ ಸಂಜಾತರ ॥ (17)

ದೇವಋಷಿಪಿತೃಋಣ ವಿಮುಕ್ತನಾದೆಂ ಮನದಿ ।
ಭಾವಿಸಿದುದೆಲ್ಲಮಂ ಭೋಗಿಸಿದೆನೆನಗಿನ್ನು ।
ಈವಸುಧೆಯೊಳ್ಬಯಸುವರ್ಥ ನಿರಘಭಿಷೇಕರಚನೆಯಂ ಮಾಳ್ಪುದುಳಿದು ॥
ಕೋಪಿಸಿದನೆ ಮತ್ತನ್ಯವೊಂದಿಲ್ಲ ಮುದದಿಂದ ।
ಪಾವನೀ ಕೃತ ಮನಸು ಪ್ರಿಯದಿಂದೆ ಬೇಡುವರು ।
ದೇವತೆಗಳಂ ಸತತಾಂತಃಪುರದೊಳಿರ್ಪ ಜನರು ನಿನ್ನಭ್ಯುದಯಕೆ ॥ (18)

ಲೋಕಹಿತಕೋಸುಗಂ ನಾಳೆಯುವರಾಜ್ಯಾಭಿ ।
ಷೇಕಮಂ ಕೈಗೊಂಡು ಪೊಡವಿಯಂ ಪಾಲಿಪುದು ।
ಶ್ರೀಕಾಂತನಂತೆ ಮಗುಳೊಂದು ದಾರುಣ ಕನಸ ಕಂಡೆನಾಂ ಪೋದಿರುಳೊಳು ॥
ಆಕಾಶದಿಂದ ವುಲ್ಕಾಪಾತನಿರ್ಘಾತ ।
ಬೀಕರವ ನಕ್ಷತ್ರ ಪತನ ಸಸಿಕುಸಿವುದ ।
ನ್ನೀಕನಸ ದೈವಜ್ಞರೊಡನೆಯುಲವರಿಂದರಿವ ಫಲವಾಗಮವನು ॥ (19)

ತರಣಿಧರಣೀತನಯ ಸೌಮ್ಯಮುಂತಾದ ಗ್ರಹ ।
ಮುರುತರವ ವಕ್ರಗತಿಯಿಂ ತೋರ್ಪವಲ್ಲದದೆ ।
ಧರಣಿಪತಿಗಪ್ಪುವತಿ ಭೀತಿಯೆಂದೆರೆವರಾ ಕಾರ್ತಾಂತಿಕಾಗ್ರೇಸರರ್ ॥
ನರರಸ್ಥಿತಿಯಧ್ರುವ ಸಚಾಂಚಲ್ಯ ಚಿತ್ತಮಿದು ।
ತಿರಮಿಲ್ಲ ಮುದದಿಂದೆ ತ್ವರಿತದಿಂ ಪಟ್ಟಮಂ ।
ವಿರಚಿಸುವರಭಿಲಾಷೆ ಪೇಳುತಿದೆ ತನಯ ಕೇಳೆನ್ನೊಂದಭಿಪ್ರಾಯಮಂ ॥ (20)

ಮಾತುಳನ ಮನೆಯೊಳಹ ಭರತ ಸತ್ಯವ್ರತ ಪಿ ।
ನೀತ ಸದ್ಗುಣ ನಿಳಯ ಸಕಲಾಗಮಜ್ಞನತಿ ।
ಪ್ರೀತಿಭಕ್ತಿಯೊಳಿರುವ ತಿಳಿಯಲ್ ಭವದ್ವಿಷಯದೊಳಗಾವಡಂ ಮಾನಸ ॥
ಜಾತುಚಂಚಲ ಮೆನಿಸದಿರದು ಭ್ರಾಂತಿಯು ಪುರುಷ ।
ರೀತಿಯದರಿಂ ನಾಳೆ ಪುಷ್ಯಯೋಗದಿ ಋಷಿ ।
ವ್ರಾತಮೆಚ್ಚಲ್ ಪ್ರಬಲು ಯುವರಾಜ್ಯಾಧಿಪತ್ಯಮಂ ಧರಿಸು ಮತ್ಪ್ರೀತಿಕಾಂತ ॥ (21)

ಇದು ಮನ್ಮನೋರಥ ಭವನ್ಮಿತ್ರಮಿದೇಪರಿಯು ।
ಪದಮೆನಿಸಲರಸ ಶ್ರೇಯಸ್ಸಿಗತಿ ವಿಘ್ನಂಗ ।
ಳೊದಗುವುವೆನುತ್ತ ಬುಧರೊರೆವಪರು ಸತ್ಯಮದು ಶುಭಕಾರ್ಯ ಶೀಘ್ರದಿಂದ ॥
ಸದಯ ಕೈಕೊಳ್ಳಲನುಗೈದು ಮತ್ತೀನಿಶೆಯ ।
ವಿಧಿಯಿಂದ ಪತ್ನಿಸಹ ನೇಮದಿಂ ಕಳೆದು ರವಿ ।
ಯುದಿಸೆ ಭೂಸುರ ಮತದೊಳಸ್ಮನ್ಮನೋಭೀಷ್ಟ ಸಂಪೂರ್ಣಮೆನಿಸು ಪ್ರಿಯದಿ॥ (22)

ಎನುತ ಸಂಪ್ರೀತಿಯಿಂ ನೇಮಿಸಿದ ತಾತಗಂ ।
ವಿನಯದಿಂದಭಿನಮಿಸಿ ಬೀಳ್ಕೊಂಡು ಜನನಿಯಿಹ
ಮನೆಗೈದಿ ಮಾತೆಗಂ ನಮಿಸಿ ಕರಗಳ ಮುಗಿದು ಬೊಪ್ಪನೇಮಿಸಿದಪರಿಯ ॥
ಇನಿತ ಬೈಚಿಡದೆ ವಿಸ್ತರವಾಗಿ ಬಿನ್ನವಿಸೆ ।
ಸನುಮತಿಸಿ ಸಂತಸದಿಹಿಗ್ಗಿ ಸಾಮ್ರಾಜ್ಯಸಿರಿ ।
ತನಗಡಸಿತೆಂಬುತ್ಸವದೊಳು ಕುವರನನಪ್ಪಿ ಶುಕವಾಣಿ ಮಗುಳೆಂದಳು ॥ (23)

ಬಲುಕಾಲದಿಂ ಒಯುಸಿ ದೇವತಾರಾಧನೆಯು ।
ನಲವಿಂದಾನೆಸಗಿ ಪ್ರಾರ್ಥಿಸಿದ ಕಾಂಕ್ಷೆ ಬಂ ।
ದೊಲಿದುದೈ ರಾಮ ಜೀವಾತ್ಮಕ ದಯಾಪರನೆ ಶರಣಜನ ಪಾರಿಜಾತ ॥
ಗೆಲವಿಂದ ಪಾಂಚಾತಕನೆನಿಸಿ ಸಾಮ್ರಾಜ್ಯ ।
ದೊಲವ ನನುಭವಿಸಿ ತ್ರೈಶಂಕವ ಭಗೀರಥನೋ ।
ಲಲಘುಮತಿಯೆನಿಸಿ ಸುಖಿಯಾಗಿ ಚಿರಕಾಲ ನೀಂ ವಿಜಯಪರನೆನಿಸು ಕಂದ॥(24)

ನಿನ್ನಭ್ಯುದಯಕಾಂಕ್ಷೆಯಿಂದಿರ್ಪ ನಾ ಪಿತ್ರಿ ।
ಯನ್ನು ಸಂತಸ ಗೊಳಪುದೆನೆ ಕೇಳ್ದು ರಾಮ ಬಲ ।
ವಂ ನಮ್ಮಿ ಕೈಮುಗಿದು ನಿಂದಿರ್ಪ ಲಕ್ಷ್ಮಣನ ನಿಟ್ಟಿಸುತಲಿಂತೆಂದನು ॥
ಎನ್ನಸಿರಿ ಸಂಪದಕೆ ಕರ್ತನೀಂ ರಾಜ್ಯಸುಖ ।
ವನ್ನು ಭೋಗಿಸು ಯಥೇಪ್ಸಿತವಾಗಿ ಸತತಸಂ ।
ಪನ್ನಮೆಂದೆನಿಸನ್ನ ದೇಹ ರಾಜ್ಯದ ಭೋಗ ನಿನಗೋಸ್ಕರವೆ ರಕ್ಷಿಪೆಂ ॥ (25)

ಎಂದೊರೆದು ಮಾತೆಯೊಡನೆಂದ ನತಿವಿನಯದಿ ।
ದಿಂದಿನಿರುಳಾನು ಜಾನಕಿ ಸಹಿತ ನೇಮದಿಂ ।
ಪೊಂದಿ ದರ್ಭಾಸನವ ವ್ರುಪವಾಸದಿರವೇಳ್ಕುಮೆಂದು ಋತ್ವಿಜರುಸಹಿತ ॥
ತಂದೆಯಾಜ್ಞಾಪಿಸಿದ ನಾಳೆಯುಪ್ಪಭಿಷೇಕ ॥
ಬಂಧುರದ ಮಂಗಳಾಚರಣೆಗಳ ಶಾಸ್ತ್ರವಿಧಿ ।
ಯಿಂದೆಸಗುವಂತೆ ದಯೆಗೈವುದೆನುತೆರಗುತಂ ಜನನಿಯಪ್ಪಣೆಯನಾಂತು ॥ (26)

ನಿಳಯಕೈತರೆ ರಾಮದಶರಥ ಮಹೀಪಾಲ ।
ನಳನಭವಭವನೊಡನೆ ಪೇಳದಂ ಕಾಕುತ್ಸ್ಥ ।
ನಿಳಯಕ್ಕೆ ಗಮಿಸಿ ಸಂಪದ ರಾಜ್ಯ ಕೀರ್ತಿಗಳ ಪೆರ್ಚುಗೆಯು ಲಾಭತತಿಯು ॥
ಬೆಳವಿಂಗೆ ಸೀತೆಸಹ ಶ್ರೀರಾಮನುಪವಾಸ ।
ತಳೆವಂತೆ ದಯದಿಂದಲಾಜ್ಞಾಪಿಸಿಂದು ।
ಪೊಳಲಸಿಂಗರಗೈವೊಡಪ್ಪಣೆಯ ಪಾಲಿಸುಪ್ರದೈ ಕೃಪಾಸಿಂಧು ಬಂಧು ॥ (27)

ಸರಸಿಜಾಸನ ತನಯ ದಶರಥನ ವಾಣಿಯಂ ॥
ಹರುಷದಿಂ ಕೇಳ ರಥವೇರಿ ಶ್ರೀರಾಘವನ ।
ಸಿರಿಕರದ ಗೃಹಕೆನಡೆತಂದು ಹೋರತ್ರ್ಯವ ಕಳೆದು ಬಕವಾರ್ತೆಯನ್ನು ॥
ಚರರಮುಖದಿಂ ಕೇಳ ಭಯದಿಂದಲಿದಿರೆದ್ದು ।
ಗುರುವಿನಡಿಗೆರಗಿ ತೇರಿನಿಂ ಕರಲಾಘವ ।
ನ್ಯರಸಕೊಟ್ಟೆಳಚಿ ಸದ್ಭಕ್ತಿಯಿಂ ಕರೆದೊಯ್ದು ಮಣಿಯಗದ್ದುಗೆಯನಿತ್ತು॥(28)

ಕನಕಪಾತ್ರೆಯೊಳು ವೈದೇಹಿಯುದಕವನೀಯೆ ।
ವಿನಯದಿಂ ಪದಪಯೋಜವ ತೊಳೆದು ಪೂಜಿಸಿಯೆ ।
ತನುಪುಳಕದಿಂದ ತತ್ತೀರ್ಥಮಂ ಮಸ್ತಕದೊಳಾಂತು ಸತಿಸಹಿತ ನಮಿಸಿ ॥
ಮುನಿತಿಲಕ ಭವದೀಯ ಚರಣೋದಕದ ಭರಣ ।
ಘನತರದ ಧನ್ಯತೆಯ ನೆನಗಿತ್ತುದೆಂದು ರಘು ।
ಜನಪ ವಿಜ್ಞಾಪಿಸಲ್ ನಸುನಗುತ ವೈಧಾತ್ರನಿಂತೆಂದ ರಾಮನೊಡನೆ ॥ (29)

ಹರ ಭವತ್ಪಾದೋದಕವ ಮಸ್ತಕದೊಳಾಂತು ।
ನೆರೆಧನ್ಯನಾದ ಮತ್ಪಿತ ನಿನ್ನ ಚರಣಭವ ।
ಸಿರಿಕರದ ತೀರ್ಥಾವಗಾಹದಿಂ ಪೂತಮಾಯ್ತು ಗಾತ್ರಮೆಂದೆನಿಸಿ ಬಳಿಕ ॥
ನಿರತ ರಾಜಿಸುವನೀ ಲೋಕಕುಪದೇಶಕರ ।
ಕರವಾಣಿಯಿಂ ನುಡಿವಾದೊಡೆಯು ನಾಂಬಲ್ಲೆ ।
ಪರಕೆಪರತತ್ವ ಪರಮಾನಂದಮೂರ್ತಿ ಸರ್ವಾತ್ಮಗತ ಧ್ಯೇಯಮೆಂದು ॥ (30)

ದೇವಕಾರ್ಯಾರ್ಥವಂ ಸಿದ್ಧಿಗೈವೋಸುಗಂ ।
ಭಾವಿಸುವೆ ಭಕ್ತಜನ ದಿಷ್ಟಾರ್ಥಕೋಸುಗಂ ।
ಪಾವನಂತಲೆವ ದಶಕಂಧರನ ಸಂತತಿಯ ಸಂಹರಿಸಲೆಂದು ಜಗದಿ ॥
ಪಾವನತರಾಂಗವಂ ಧರಿಸಿ ನೀಂ ಬಂದಿಹುದ ।
ದೇವನಾಂ ಬಲ್ಲೆನಾದರು ಪೇಳಕೂಡದಿದು ।
ದೇವತಾಗೋಪ್ಯಮುದರಿಂ ಲೋಕಜನರಂತೆ ಮಾನವಾನುಸಾರಿಯೆನಿಸಿ ॥ (31)

ನಡೆವನಡೆಗನುಕೂಲವಾಗಿ ನೀಂ ಶಿಷ್ಯನಾ ।
ಗೊಡನೆ ಗುರುವೆಂದೆನ್ನೊಳೇರ್ಪಡಿಪೆ ಗುರುವಿಗಂ ।
ರೊಡೆಯ ತಂದೆಯ ತಂದೆ ಸರ್ವಾತ್ಮ ಚೈತನ್ಯ ಯಂತ್ರವಾಹಕ ರಮೇಶ ॥
ಪೊಡವಿಯೊಳ್ಬಾಳ್ವ ಮನುಜರಿಗೆ ಪೌರೋಹಿತ್ಯ ।
ಕಡುದೂಷ್ಯ ಜೀವನಂ ವಹಿಸ ಸಲ್ಲದು ವಾಣಿ ।
ಯೊಡನಾಜ್ಞೆಯೊಳಗೆ ಮತ್ತಾಮದೆನೆಯಿಕ್ಷ್ವಾಕುವಂಶ ಪೌರೋಹಿತ್ಯವು ॥ (32)

ಅಂದಿನಿಂದಮಿತಕಾಂಕ್ಷೆಯೊಳಾನು ಕಾಯ್ದಿರ್ದು ।
ದಿಂದಿಗಾದುದು ಮನೋಭೀಷ್ಟ ನಿನ್ನಯ ದಿವ್ಯ ।
ಸಂದರುಶನದೊಳೆನಗೆ ಪರಮಪಾವನ ಮೂರ್ತಿ ಶೋಕಮೋಹಿಸಿ ಮಾಯೆಯುಂ ॥
ಪೊಂದಿರ್ಪಳನುದಿನಂ ನಿನ್ನಾಜ್ಞೆಯೊಳ್ ರಘುಕು ।
ಲೇಂದು ದಯೆದಿಂದೆನಗೆ ಪಾಲಿಪುದು ಪ್ರಕೃತಿಗುಣ ।
ಸಂದಿಷ್ಟವಾಗದೊಲು ಭವದೀಯ ಸನ್ಮೂರ್ತಿ ಚಿತ್ತಮೆನ್ನಗಲದಂತೆ ॥ (33)

ಇಂತೊರೆದು ವಿಧಿಸುತಂ ರಘುವೀರ ನೊಡನೆ ಬಹು ।
ಸಂತಸದಿ ಪ್ರಕೃತೋಪಯೋಗ ಲೋಕಾನುಗತ ।
ವಾಂತಕಾರ್ಯವ ನುಡಿವನಿಂದು ದಶರಥ ಮಹೀಪಾಲ ನತಿಪ್ರೇಮದಿಂದ ॥
ಪಿಂತೆ ನಹುಷಂ ಯಯಾತಿಗೆ ರಾಜ್ಯಭಾರವ ದಿ ।
ಗಂತವರಿವಂತಿತ್ತ ತೆರದೊಳಗಯೋಧ್ಯಾಧಿ ।
ಕಾಂತನೆಂದೆನಿಸಲಿಚ್ಛೈಸಿರ್ಪನೆಲೆ ರಾಮ ಪುಷ್ಯಯೋಗದೊಳಾನಿನ್ನ ॥ (34)

ಸತಿಸಹಿತಲಿಂದು ನೀ ನುಪವಾಸಮಿರ್ದಪುದು ।
ಕ್ಷಿತಿಪನಾಜ್ಞೆಯೆನುತ್ತ ವೇಳ ವಿಧಿಯಿಂ ವಿಪ್ರ ।
ಪತಿಸುಮಂತ್ರಾರ್ಥೋಕ್ತ ಮತದಿಂದ ಉಪವಾಸ ವ್ರತವ ನೇಮಿಸಿ ಪ್ರೇಮದಿ ॥
ಅತಿಶಯದಿ ರಾಮನಿಂದುಪಚಾರಗಳನಾಂತು ।
ನುತಿಸಿ ಬೀಳ್ಕೊಂಡು ರಥವೇರಿ ನಡೆತಂದನಂ ।
ದತುಳ ಹರ್ಷೋದ್ರೇಕದಿಂದ ದಶರಥಮಹಾರಾಜನರಮನೆಗೆ ಬಳಿಕ ॥ (35)

ಗುರುವಸಿಷ್ಠಂ ಗಮಿಸಲಿತ್ತ ರಘುಕುಲತಿಲಕ ।
ಕರೆಸಿ ನಿಜಬಾಂಧವರ ಮಿತ್ರಜನರಾಪ್ತರಂ ।
ಪರಿಜನಂಗಳಿಗೆಲ್ಲ ತೋರಿದಿಷ್ಟವ ಸಲಿಸಿ ನಾಳೆಬಹ ರಾಜಸಿರಿಯ ॥
ಧರಣೀಶ ದಶರಥಂ ಮನ್ನಿಸಿದಪರಿಯ ವೃದು ।
ಕರದಿಂದಲರುಪಿ ಸಂತಸಗೊಳಿಸಿ ಮಾಂಗಲ್ಯ ।
ಕರವಸ್ತ್ರಭೂಷಣಗಳಂಧರಿಸಿ ಗುರು ಪೇಳ್ದತೆರದಿ ನೇಮದೊಳಿರ್ದನು ॥ (36)

ರಾಮಾಭಿಷೇಕದುತ್ಸವವಾರ್ತೆ ಪಸರಿಸಲ್ ।
ಭೂಮಿಸುರರೆರೆದು ತಮತಮಗೆ ಸಂತೋಷ ।
ಕಾಮಿತಗಳ ಹವೆಸುತಲಲ್ಲಲ್ಲಿ ಕುಳ್ಳಿರ್ದ ತಮ್ಮೊಳಗೆ ತಾವು ನಲಿಯೆ ॥
ಭೂಮಿಪತಿಗಳೆಲ್ಲ ಕೇಳುತುತ್ಸವವನ್ನು ।
ಪ್ರೇಮಗೊಳುತೆಂದರಿಸ್ಸಹಿತ ಭಯಮುದು ಸರಿದು ।
ದೀಮಹಾ ಸಾಮ್ರಾಜ್ಯಾಧಿಪತಿಯಪ್ಪನೆನುತುಬ್ಬಿ ಹಾರೈಸು ತೊಪ್ಪಿರ್ದರು ॥ (37)

ಬೆಳಗಿತಲ್ಲಲ್ಲಿ ಶುಭವಾರ್ತೆ ಪತ್ತನದೊಳುಂ ।
ಬೆಳಗಿತತಿಶಯಮನೋಹರ್ಷ ಸಂತೋಷಮುಂ ।
ತೊಳಗಿತಾವ್ಯಾಯವಿದ ಚಿತ್ತವೃತ್ತಿಗಳಲ್ಲಿ ಸಕಲಜನಸಂಮೋಹದ ॥
ಥಳಥಳಪ ಭೂಷಣಾಂಬರಗಳಂ ಸಿಂಗರಿಸಿ ।
ಕಳಕಳಪ್ಪೊಲಂಗಣಂಗಳನಲಂಕೃತಿಗೈದು ।
ಪಲಬಗೆಯ ಧೂಪದೀಪಿತ ಮಹಾವಾಸನಂಗೊಳಿಸಿದರು ಬೀದಿಗಳನು ॥ (38)

ಚತುರವಿಧವರ್ಣಜನರೆಲ್ಲ ಪೂಜಿಸಿ ಶ್ರೀಯುಃ ।
ಪತಿಯ ಬೇಡಿದರು ಶ್ರೀರಾಮನೀ ಮುನಿಮತದಿ ।
ಕ್ಷಿತಿಯರಸನೆನಿಸು ಪ್ರೋಲ್ಲಕೃತಿಗೆಯ್ಯ ವೇಳ್ಕೆನುತೆ ದೇವಾಲಯಂಗಳಲ್ಲಿ ॥
ಅತಿಶಯದಿ ಧೂಪದೀಪೋತ್ಸವಂಗಳನೆಸಗಿ ।
ಪ್ರತಿಪದಂಗಳೊಳು ರಘುವರನಗುಣ ಕಥನಗಳ ।
ಜತನದಿಂ ಪಾಡುತಿರುತಿರ್ದರಂದಿನದಿನದ ಸಂತಸವನೇವೇಳ್ವೆನು ॥ (39)

ಗುಣಿಯೆನಿಸಿ ಸರ್ವಭೂತಾಂತರಂಗದಿ ಮಣಿ ।
ಗಣಕಲಿತಸೂತ್ರದಂದದಿ ಮಿನುಗುತನುದಿನಂ ।
ಗುಣಗಳಂಟದ ವಿಶ್ವಸೂತ್ರಧಾರಕ ಜಗತ್ರಯ ಸರ್ವಸಾಕ್ಷಿಮಯನು ॥
ಪ್ರಣವ ಗೋಚರ ರಾಮಪುರದಧೀಶ್ವರ ಜನರ ।
ಕಣ್ಮನಕೆ ಮನುಜಲೀಲೆಯಂತೋರಿ ನೇಮದಿಂ ।
ಧಣಿಮಾಡಿ ಸಿದ್ಧಿಯುತ ಗುರುವಿನಾಜ್ಞೆಯೊಳಿರ್ದ ನಗಜೆ ವಿಬುಧಾರ್ಘಮಾಗಿ ॥
(40)

(ಸಂಧಿ 2, ಪದಗಳು 80.)

ಮೂರನೆಯ ಸಂಧಿ.

ಸೂಚನೆ॥ ಪಿಸುಣನಿಕ್ಕುವ ಋಷಿಯು ಪೊಂಬೊಡೆಯನಾಜ್ಞೆಯಿಂ ।
ವಸುಮತೀತಳಕಿಳಿದು ರಾಮನ ಪದಾಬ್ಜಕಂ ।
ಬೆಸಸಿ ನಿಜತತ್ವಮಂ ಗಮಿಸೆ ಸರಸತಿ ಬಂದಳಮರೇಂದ್ರ ನಪ್ಪಣೆಯೊಳು ॥

ಚಿತ್ರದಧಿನಾಥಕೇಳ್ ರಾಮರಾಜ್ಯಾದಯವಾರ್ತೆ ।
ಕೆತ್ತುರಿಯ ಕರಡಗೆಯ ಬಾಯ್ದೆರೆದ ವಾಳ್ಕೆಯೊ ।
ಳ್ಮೃತ್ತರಂಬೋಗೆ ದಿಗ್ದೇಶದ ಜನರ್ಸರೆದು ಸಂಭ್ರಮದೊಳ್ಬಿತರುತಿರೆ ॥
ಮತ್ತೀಶುಭೋದಂತ ಸಗ್ಗಕಿವರಲ್ಸುರಪ ।
ಚಿತ್ತದನುತಾಪದಿಂ ಸಕಲ ಮುನಿಜನಪ್ರಬುಧ
ಮೊತ್ತಮಂ ಕರೆಸಿ ಮಂತ್ರಾಳೋಚನಂಗೈದು ಮುಂದಪ್ಪಕಜ್ಜದಿರವ ॥ (1)

ವಾಸವಂ ದಿಕ್ಪಾಲ ಸುರಮುನಿಗಳೊಡವೆರೆದು ।
ಬಾಸವೆಣ್ಣೆ(ನಿಯ)ನೆಡೆಗೈ ಪೊರಮಟ್ಟು ನಿಜ ।
ಬೇಸರವ ಜತ್ತರದಿ ಜನ್ನಪಂ ಗೈದನೆಲೆ ದೇವ ಸಿರಿಪುರಸಮುನ್ನ ॥
ಭಾಷೆಯನ್ನಿತ್ತು ಮಾನಿಸರೂಪಮಂ ತಳೆದು ।
ಈಸುಜನರೆಡರ ಪರಿಹರ ಗೈಯುವಲೆ ಗ್ರಾಮ್ಯ ।
ಭಾಸುರವ ಭೋಗೇಚ್ಛೆಯಿಂವರಸುತನ ಕೆಳಸೆ ರಘುವೀರನೆಡೆ ಗೊಂಡನು ॥ (2)

ನಾಳೆ ಪುರದರಸುತನ ದಭಿಷೇಕ ಮತ್ಕಾರ್ಯ ।
ಜಾಳಪ್ಪುದದರಿಂದೆ ಬಾಧಿಸುವ ದಶವದನ ।
ಖೂಳಖಳನುಪಟಳ ಮದೆಂತು ನಿಲುವುದು ಸುಖವು ದೊರೆಕೊಂಬುದೆಂತುಪಾಯ ॥
ದೇಳಗೆಯನುಸಿರೆಂದು ಭಯದಿಂದಸುರರೆಲ್ಲ ।
ನಾಳೀಕಪೀಠನಂ ಬೆಸಗೊಳಲ್ ಸಸುನಗುತ ।
ವೇಳದಂ ಪಾಕಶಾಸನ ಮುಖ್ಯಬಿಡುಗಣ್ಣಜಂಗುಳಿಗೆ ಪ್ರೇಮದಿಂದೆ ॥ (3)

ಬೆಸರಲೇತಕೆ ನೀವು ಜಗದೀಶ ಸಿರಿಯರಸ
ಸದಯನತಿಸತ್ಯಸಂಕಲ್ಪನಾತನ ಭಾಷೆ ।
ಪದುಗುವುದೆ ನುಸುಳಸೊಳು ನಿಮಗಭಯ ಮಿತ್ತಂತೆ ದಶಶಿರನ ಸಂತತಿಯನು ॥
ಸದೆದಿಟ್ಟು ಗೋ ದಿವಿಜರಿಂಗಧಿಕ ಶುಭಗೊಟ್ಟು ।
ಪದುಮಾಕ್ಷ ಕೆಲಕಾಲ ಭೂತಳದಿ ಬಾಳ್ದಬಹ ।
ನಿದು ದಿಟಂ ಭಯಬೇಡ ಫಲಿಸುವುದು ಮನದಿಷ್ಟಮಿದಕೆ ಸಂದೇಹವಿಲ್ಲ ॥ (4)

ವನಜಾಸನಂ ಪೇಳ್ದವಾಣಿಯಿಂ ಸಂತುಷ್ಟ ।
ರೆನಿಸಿ ಸಂತೋಷದಿಂ ದೇವಸಭೆಯ್ಗೈದಲ್ಕೆ ।
ಮನದೊಳದ್ದಭಿಮತವ ಬೆಸಸಿದಂ ನಾರದನೊಳಂತೆಂದು ವಿನಯದಿಂದ ॥
ಮುನಿವರ್ಯನೀಂ ಪೋಗಿ ಕೋಸಲಾಭಿಧನಗರ ।
ವನುವಿನಿಂ ರಘುಪತಿಯ ಚರಣಾಬ್ಜವನು ಕಂಡು ।
ಮನುವಿನಂ ಮಾಡು ಮತ್ಕಾಂತರ್ಯದೇಶದೊಳ್ಪರತೆನಿಸಲರಿಯದಂತೆ ॥ (5)

ದುರುಳ ದಶಕಂಧರನ ತರಿದಿಕ್ಕಿ ಲೋಕವಮಂ ।
ಪೊರೆಸುವೆ ಗುಳ್ಳೈತಪ್ಪೆನೆಂವಭಯವುಮಂ ಕೊಟ್ಟು
ನರರೂಪತಾಳ್ದು ಭೂತಳ ಕ್ಕೈದಿ ಮನುಜ ಸುಖಲೀಲೆಯನೊಪ್ಪಗೊಂಡು ॥
ಅರಸು ತನವಭಿಷೇಕವುಮಂ ಮಾಡಿಕೊಳ್ ವಾಣಿ ।
ವರವೆನಿಪ್ಪುದೆಂತು ತ್ರಿದಶರಿಗಾರು ಹಾದಿ ಮುಂ ।
ದರಿಯುದಿದೆ ದಯದಿಂದ ಪೆಸಸವೇಳ್ಕೆಂದರುಪಿ ಬರ್ಪುದತಿ ವೇಗದಿಂದ ॥ (6)

ನಳಿನಪೀಠಂ ಪೇಳಲೀ ಪರಿಯ ಸಂತೋಷ ।
ಕಲಿತ ನಾಗುತಲೆರಗಿ ಬೀಳ್ಕೊಂಡು ಮೂಲೋಕ ।
ಕಲಹಕಧಿನಾಯಕಂ ನಿಖಿಳ ಮುನಿನಾಯಕಂ ನಾರದಂ ಭೂಲೋಕಕೆ ॥
ಲಲಿತಮೃದುತರ ದಿವ್ಯರಸ ಚರಿತಮಾಧುರ್ಯ ।
ಕಲನಾದಯುತ ವಲ್ಲಕಿಯನು ಬಾಜಿಸುತಲುಂ ।
ನಲವಿನಿಂ ಮೂರ್ಛನಾಕ್ರಮಗಳಾಲಿಸುತಲುಂ ಪಾಡುತೈತಂದ ಹರಿಯ ॥ (7)

ಸಿಂಗರದ ತೋರಣಗಳೋರಣದ ಪರ್ವತೋ ।
ತ್ತುಂಗವದ ವಾರಣದ ವಾರಣಗಳಕ್ಕಡೆಯ ।
ಶೃಂಗಾರ ಘಂಟಿಕಾ ಘಣ ಘಣೀರವದಿ ರಮ್ಯವಹವೀಥಿಗಳಲಿ ॥
ಸಂಗೀತ ನರ್ತನದ ಗಾಂಧರ್ವ ಗಾಂಧರ್ವ ।
ರಿಂಗಿತಗಳರಿತು ಸಂತೋಷಿಸುವ ತೋಷಿಸುವ ।
ಶೃಂಗಾರಜನ ಹೃದ್ಯಯೋದ್ಯಮನೊಳಪೊಕ್ಕ ಮುನಿರಾಯನತಿಮೋದದಿ ॥ (8)

ನಗರವೀಥಿಗಳಲ್ಲಿ ನಾನಾ ವಿನೋದಗಳ ।
ಬಗೆಬಗೆಯ ರಚನೆಗಳ ನಿಲಯಗಳ ನಿಟ್ಟಿಸುತ
ನಗೆಯ ಮಿನುಗಿಸುತ ನಾರದ ಮಹಾಮುನಿ ಮೌನಿವರನೈದಿ ರಘುವೀರನ ॥
ನೊಗಸಿನರಮನೆಯ ನೊಳಪೊಗಲು ದೌವಾರಿಕನು ।
ಬಗೆಯಮಿಯೆನುತ್ತ ಕೈಮುಗಿದು ಕೆಲಸಾರಲ್ಕೆ ।
ನೆಗವೈರಿಗತಿಹಿತಂ ನಡೆತಂದು ನೋಡಿದಂ ಶ್ರೀರಾಮ ಚಂದ್ರಮನನು ॥ (9)

ಪೊಸಕುಶಾಸ್ತರಣದೊಳು ದಿವ್ಯವಸಾಲ್ಯಾಂಬರಗ ।
ಳೆಸಕದಿಂ ಚಾಮರವ ಬೀಸುತಿರ ಲೆಡದೊಳುಂ ।
ವಸುಧಾತನೂಜಾತೆ ಸೌಮಿತ್ರಿ ಮುಂಭಾಗದಲಿ ನಿಂದತಿ ಭಕ್ತಿಯಿಂ ॥
ರಸಕಲಿತ ವಾಣಿಯಿಂ ನುತಿಸುತಿರೆ ಶ್ರೀರಾಮ ।
ರಸೆಯ ನಾಯಕನಂತೆ ಗುರುವೇಳ್ದ ಮೌನದಿಂ ।
ದೆಸೆದಿಪ್ಪ ಪರಬೊಮ್ಮನಂ ಕಂಡು ಸುರಮೌನಿ ಸಂತೋಷಮಯನಾದನು ॥ (10)

ಕರದಿ ವೀಣೆಯಂ ಪಿಡಿದು ವರತಂತ್ರಿಗಳ ಮಿಡಿದು ।
ನರಲೋಕ ಮೋಹಿಪೊಲು ನವರಸಸುಗಾನದಿಂ ।
ಶರದಿಂದು ನಿಭಗಾತ್ರ ಮೌನಿಯ್ಕೈತರುತಿರಲ್ಕಂಡು ರಘುನಾಥ ಪ್ರಿಯದಿಂ ।
ಹರುಷದಿಂದೆದ್ದುವಂದಿಸಿ ಪೂಜೆಗೈದು ಸಿರಿ ।
ಚರಣಂಗಳಂ ನುತಿಸಿ ಕರೆದೊಯ್ದು ಮಣಿಪೀಠ ।
ಶಿರದೊಳಗೆ ಕುಳ್ಳಿರಿಸುತುಪಚರಿಸಿ ಸಂತಸದೊಳಂತೆಂದ ಮೃದುವಚನದಿ ॥ (11)

ಸಂಸಾರವಿಷಯ ಚಿಂತಾಸಕ್ತಚೇತನಗ ।
ಹಿಂಸಾನುವರ್ತನದ ನಿರ್ಮಲದ ಹೃದಯವರ ।
ಹಂಸವಾಹನ ಪುತ್ರ ಭವದೀಯದರ್ಶನಂ ದೊರಕುವುದು ದುರ್ಲಭವಲೇ ॥
ಪುಂಸರಿಗೆ ಪೂರ್ವಕೃತ ಪುಣ್ಯಪರಿಪಾಕದಿಂ ।
ಹಂಸಸಲ್ಲಾಪ ಸಂದರುಶ ನಾದಿಗಳೊಳ್ಗರಿ ।
ರಂಗೆ ಪುಟ್ಟುವುದಲ್ತೆ ಕೃತಕೃತ್ಯನಾದೆನಾಂ ಫಲಿಸಿತಿಷ್ಟಾರ್ಥಮಿಂದು ॥ (12)
ಎನುತ ರಘುವೀರನಂ ನಿಟ್ಟಿಸುತೆ ಮೋಹದಿಂ ।
ಮುನಿತಿಲಕನಿಂತೆಂದ ಭಕ್ತವತ್ಸಲದೇವ ।
ಚಿನುಮಯಾತ್ಮಕ ರಾಮ ನೀಂ ನುಡಿದೆ ಸಂಸಾರಿಯೆನ್ನುತದು ಸತ್ಯವಲ್ತೆ ॥
ಘನತರದ ಮೋಹನದ ವಿದ್ಯೆನಿಟ್ಟಿಪೆ ನಿನ್ನ ।
ಮನೆಯೊಳಗೆ ತೊತ್ತಿನಂತಿರೆ ಭವತ್ಸಂಗದಿಂ ।
ವನಜಾಸನ ಪ್ರಮುಖ ಪ್ರಜೆಗಳುಂ ಪುಟ್ಟುವರು ಮುಂತೆ ಮಹಾಮಾಯೆಯೊ ॥ (13)
ನಿನ್ನಧೀನದ ಮಾಯೆ ಮೂರುಗುಣಮಂ ಪೊದ್ದಿ ।
ನಿನ್ನಬಲದಿಂ ಬಿಳಿದು ಕೆಂಪುಕಪ್ಪಿನ ವರ್ಣ
ವನ್ನಾಂತ ಪ್ರಜೆಗಳಂ ಪೇಳ್ವರದರಿಂ ಮೂರುಲೋಕ ಮುಮನ್ನಿಲಯವು ॥
ನನ್ನಿಯಾದರಿಂ ನೀಂ ಗೃಹಸ್ಥನೆಂಬುದು ದಿಟಂ ।
ಪನ್ನಗಾರಿಧ್ವಜ ರಘೂತ್ತಮನೆ ಲೋಕದೊ ।
ಳ್ಭಿನ್ನ ಮೇನಿಹುದು ಭವದೀಯ ಸನ್ಮಹಿಮೆಯಂ ತಿಳಿದನಿತುಸಿರ್ವ ಜೀಯ ॥ (14)
ಹರಿನೀನೆ ಸಿರಿಸೀತೆ ಹರ ನೀನು ಗಿರಿಜಾತೆ ।
ಧರಣೀಸುತೆ ಬೊಮ್ಮನೀಂ ಸರಸತಿಯು ವೈದೇಹಿ ।
ಸುರಪನೀಂ ಪೌಲೋಮಿ ಜಗತೀತನೂಭವೆಯು ಮರುತ ಸಖನೀನು ಸ್ವಾಹೆ ।
ನಿರುತ ಜನಕಜೆ ಕಾಲರೂಪ ನೀಂ ಸಂಯಮಿಯು ।
ತಿರೆಯಣುಗಿ ನೈಋತ್ಯ ನೀಂ ಕಾಮಿನೀಸೀತೆ ।
ವರುಣನೀಂ ಭಾರ್ಗವಿಯು ಭೂಜಾತೆ ಮರುತನೀಂ ಸೀತೆಯೆ ಸದಾಗತಿಯುಳ್ಳೈ ॥ (15)
ಧನಪನೀಂ ಸರ್ವ ಸಂಪತ್ಪ್ರದಾಯಕಿ ಸೀತೆ ।
ಘನರುದ್ರ ನೀನೆ ರುದ್ರಾಣಿ ಜಾನಕಿ ದೇವ ।
ದಿನ ಪ್ರಭಾರೂಪಳುರ್ವೀಜಾತೆ ಶಶಿನೀನು ರೋಹಿಣಿಯು ಜಗತಿಯಣುಗಿ ॥
ಎನಿತುಂಟು ಸ್ತ್ರೀವಾಚಕಂ ಲೋಕಮೂರರೊಳ್ ।
ಗನಿತು ಸೀತಾಪರಂ ಪುರುಷವಾಚಕ ಮೆಲ್ಲ ।
ವನಜಾಕ್ಷ ನೀನಲ್ತೆ ನಿಮ್ಮುಭಯ ಮುಳಿದನ್ಯ ಮೊಂದುಂಟೆ ರಘುಕುಲೇಶ ॥ (16)
ಚಿತ್ತಿನಾಭಾಸಮವ್ಯಾಕೃತಂ ಮತ್ತವರ ।
ಬಿತ್ತಿನೊಳಗಾದುದು ಮಹಾತತ್ವಮದರಿಂದ ।
ಪ್ರತ್ಯೇಕ ತತ್ವಂಗಳುದ್ಭವಿಸಲವ ಭಾಸಮಾನ ದೇಹತ್ರಯಗಳು ॥
ಸತ್ತುಪುಟ್ಟುವ ಕೋಟಲೆಗಳಾಂತು ದೇಹಗಳ ।
ಮೊತ್ತದೊಳು ಜೀವನಜ್ಞಾನವಶನಾಗಿರ್ದ ।
ತತ್ತರದ ಜೀವತ್ರಯಾಖ್ಯದಿಂ ಮೂರವಸ್ಥಾ ಭೋಗಭೋಗ್ಯಮೆನಿಸಿ ॥ (17)

ತನುಕುಂಭವಹಹಮುಂಬು ಮಧ್ಯದೊಳು ಜೀವತಾಂ ।
ಮಿನುಗೆ ಸುಖದುಃಖಾದಿಗಳ ನಂಟೆ ತೊಳಲುತಿಹ ।
ನನವರತ ಪ್ರಕೃತಿ ಬಲದಿಂದವಷ್ಟತೆವೆರಸಿ ನಿಜಭಾವವನ್ನು ಮರೆದು ॥
ವನಜಾಕ್ಷ ನಿನ್ನಪದ ಭಕ್ತಜನ ಸಂಸರ್ಗ ।
ಜನಿಸೆ ಮಾಯಾರಜ್ಜುಬಂಧ ಸಡಿಲಲ್ಮೋಹ ।
ಮನುನೀಗಿ ನಿತ್ಯಸುಖಿಯಪ್ಪನದರಿಂ ಭಕ್ತಿ ಮುಕ್ತಿಕಾರಣವು ಜೀಯ ॥ (18)

ಮೂರುತನುಗಳ ಮೂರವಸ್ಥೆಗಳ ಗುಣ ಮೂರ ।
ನಾರು ಭಾವವಿಕಾರಗಳ ನೊಂದದಿರುವ ನಭ ।
ವಾರು ನಿರ್ಮಲ ಜಗತ್ಸ್ರಷ್ಟ್ರಿ ಯಾಪೋಜ್ಯೋತಿರೂಪ ನೀನಲ್ತೆ ಜೀಯ ॥
ಚಾರುತರ ಪದ ಪದ್ಮವಂ ನೆನೆವರಂಘ್ರಿಗಳ ।
ಸಾರಿದರಿಗುಂಟೆ ಮಾಯಾವೇಷ ಸಂಪರ್ಕ ।
ಮೂರುಲೋಕದೊಳು ಜಗದೀಶ ಕೃಪೆಯಿಂದೆನ್ನ ಸಲಹು ನಿರ್ಮಾಯನೆನಿಸಿ ॥ (19)

ಲೋಕಗಳ ನಿರ್ಮಿಸುವ ಬೊಮ್ಮ ನಿನ್ನಯ ತನಯ ।
ನಾಕಮಲಸಂಭವನು ಮತ್ತಾತ ಮೊಮ್ಮನಾಂ ।
ವೈಕುಂಠ ನಿನ್ನಪದವಡಿ ಗೆರಗುತಲಾನು ಕಿಂಕರನೆನಿವೆನು ॥
ಶ್ರೀಕರ ಕಟಾಕ್ಷದಿಂದೀಕ್ಷಿಸೆನ್ನನು ಮಾಯೆ ।
ಸೋಕದಂದದಿ ಸಲಹು ನಿನ್ನವನೆನುತ್ತಲೆ ಕೃ ।
ಪಾಕರನೆ ರಘುಕುಲೋತ್ತಂಸ ಬಿನ್ನಪ ಮೊಂದು ಪ್ರಕೃತಾನುಸಾರ ಮಿಹುದು ॥ (20)

ಪಾಲಿಸು ಮಹೇಂದ್ರ ದಶರಥನೀ ಸುರಾಷ್ಟ್ರವಂ ।
ಪಾಲಿಸು ಪ್ರೌಢಧಿಕಾರವಂ ನಿಮಗೆ ಒಪ್ಪಿಸುವ ।
ನೀಲೋಕದೊಳಗೆಂಬ ವಾರ್ತೆ ಮುಂಬರಿದೈಪಲುಂ ಸಗ್ಗಲೋಕದೆಡೆಗೆ ॥
ಮೇಲೆನಿಪ ಭಯದಿಂದಲಮರೇಶನೈತಂದು ।
ಮೂಲೋಕ ಬೊಪ್ಪನಿಂಗರುಪಲಭಯವನಿತ್ತು ।
ಮೇಲೆನಿಸಿ ಚರಣಯುಗದೆಡೆಗೆನ್ನ ಕಳಪಿದಂ ಮನದಿಷ್ಟವಂ ಪೇಳ್ವೊಡೆ ॥ (21)

ವಸುಮತೀ ಭಾರವನ್ನಿಳುಹಿ ಗೋದ್ವಿಜಸುರ ।
ರಸುಗಳಂ ರಕ್ಷಿಸುವೆನೆಂದು ಭೂತಳಕೈದಿ ।
ವಸುಧಾಧಿಪತ್ಯಮಂ ಸ್ವೀಕರಿಸೆ ಮುಂದಪ್ಪ ಕಜ್ಜಕೇಂಗತಿ ಯೆಂಬುದ ॥
ಬೆಸನನೀಂ ಬೇಡಿಬಹುದೆಂದು ಕಳುಪಿದೊಡಾನು ।
ಬಿಸಜಾಕ್ಷನಿನ್ನ ಪದದೆಡೆಗೆ ಬಂದೆನು ದೇವ ।
ರೆಸಗುವೆನು ಕಾರ್ಯಗಳನಾಜ್ಞಾಪಿಸಿ ದೊಡೈದಿ ಬಿನ್ನವಿಪೆ ಕಮಲಭವಗೆ ॥ (22)

ಎಂದಿಗುಂ ಪುಸಿಯು ಪೊದ್ದದ ಸತ್ಯಕರವಾಣಿ ।
ಎಂದರಿವೆನಯ್ಯನಾದರು ಸುರಾಧಿಪನೆ ತಾ ।
ವೃಂದಬಂದರಿಪಿದುದ ಭವದೀಯ ಚರಣಕಂ ಬಿನ್ನಪಂ ಗೈದುಮುಗುಳ್ ॥
ಸಂದೇಹವಿನಿತಿಲ್ಲವಭಯವೆಂದೆನಿಸಿಪರ್ ।
ರೆಂದರಿತು ಕಳಪಿದನಿತಂ ಪೇಳ್ದೆ ದೇವರಿಗೆ ।
ಮುಂದಪ್ಪ ಕಾರ್ಯಮಂ ದೇವರೇ ಬಲ್ಲರೆನೆ ನಸುನಗುತ ಹರಿ ನುಡಿದನು ॥ (23)

ಪಿಂತೆ ಪೋದುದು ಪ್ರಕೃತ ಮಿಲ್ಲಪ್ಪ ಕಜ್ಜವಂ ।
ಮುಂತೆಸಗುವನಿತನುಂ ನಾಂ ಬಲ್ಲೆ ಪೆರತೊಂದ ।
ಚಿಂತಿ ಸಲದೇಕೆ ದಶಕಂಧರನ ವಂಶಮಂ ತರಿದಿಡುವೆ ನೀ ಕ್ಷಣದೊಳು ॥
ಸಂತರಗ್ರೇಸರಂ ವಿಧಿಯಿತ್ತಶಾಭವಾಣಿ ।
ಗಂತರವೆ ಬರ್ಪುದದರಿಂ ಕಾಲಮಿತ್ರರಬ್ಧ ।
ಸಂತ್ರಯಂ ನೀಗಿ ಮಾತ್ರಿರಿವೆನಿವು ಪುಸಿಯಲ್ಲ ದೇವಮುನಿಧೌರೇಯನೆ ॥ (24)
ಪೊಡವಿಯತಿಶಯದಾಸೆಯೆನಗೇನು ಬೆಳಗಿದೊಡೆ ।
ನಡೆವೆ ಸತಿ ಸೌಮಿತ್ರಿ ಸಹ ದಂಡಕಾವನಕೆ ।
ಒಡೆಯನಾಜ್ಞೆಯಾಧಂಸಿ ಪದಿನಾಲ್ಕು ವರುಷಮಂ ವನವಾಸದಲ್ಲಿ ಬಳಿಕ ॥
ಸಡಗರದೊಳದರ್ಜ ಸೀತಾವಿಷದಿ ದಶಶಿರನ ।
ಕೆಡಹಿ ಋಷಿಸಂತತಿಗೆ ಸಂತಸವನಿತ್ತು ಮ ।
ತ್ತೊಡನಯೋಧ್ಯಾಪುರಕೆ ಬರ್ಪೆನಿದು ಮನ್ಮನೋರಥ ಕೇಳು ಬಿಡಿಯಣುಗನೆ ॥ (25)
ಲೋಕಾನುಸಾರ ಮಾಗೆಲ್ಲರಾದಂದದಲಿ ।
ಬೇಕಾದ ಮನುಜನಂದದಿ ನಟಿಸಿ ಮತ್ತವಂ ।
ಗಾಕಾಮ್ಯ ಸಲುವಂತೆ ಸರ್ವಜನ ಸಮ್ಮತದೊಳ್ಳೈದಿ ವಿಪಿನಾಂತರದೊಳು ॥
ಜೋಕೆಯಿಂದಾನು ಋಷಿಗಳೊಡನೆ ಸಂಚರಿಸು ।
ತೇಕಾಂತ ಭಕ್ತರಂ ಪೊರೆದು ದುಷ್ಟರ ನರಿದು ।
ಶೋಕಾಹಿತನ ಕಾಂಕ್ಷೆಯಂ ಸಲಿಪೆನಿದು ಸತ್ಯವೆಂದು ರಘುನಾಥ ನುಡಿಯೆ ॥ (26)
ಕೇಳ ಸಂತೋಷಮಯನಾಗಿ ರಾಮನ ಚರಣ ।
ನಾಳೀಕಕಭಿನಮಿಸಿ ನುತ್ರಿಸಿ ಬೀಳ್ಕೊಂಡು ಪ್ರಮು ।
ದಾಳೀರವಾನುಗತತಂತ್ರೀಕಲಸ್ವನದ ವಲ್ಲಕಿಯ ಬಾಜಿಸುತಲಿ ॥
ಆಳದೊಡೆಯನ ಪೊರೆಗೆ ಪೇಳ್ ಜಗದೀಶನುಂ ।
ಪೇಳದನಿತಂ ತಿಳುಪಿ ಕಮಲಭವನಾಜ್ಞೆಯಂ ।
ತಾಳ ಸುರಪತಿ ಯೆಡೆಗೆ ಗಮಿಸೀ ಸುವೃತ್ತಮಂ ಚಿತ್ರರದಿನುಡಿದನೊಲಿದು ॥ (27)
ತದನಂತರದಿ ದೇವಋಷಿಗಣಂ ನೆರೆದುಬಹು ।
ವಿಧದಿ ಮಂತ್ರಾಲೋಚನೆಯನೆಸಗಿ ಸರಸತಿಯ ।
ಸದನಕ್ಕೈತಂದು ವಂದನೆಗೈದು ನುತಿಯಿಂದ ಸಂಪ್ರಾರ್ಥನೆಂ ಗೈದರು ॥
ಸದಯೆ ಪ್ರಜ್ಞಾನಿಲಯೆ ವಾಗ್ದೇವಿ ಸವ್ರಾಶ್ವ ।
ನುದಯ ಮಾದಡೆ ರಾಮಗಭಿಷೇಕಮುಪ್ಪದಿ ।
ನ್ನಿದಕಂತರಾಯಮನ್ನೆಸಗಿ ಕೃಪೆಯಿಂದೆಮ್ಮ ಕಾಯಬೇಕಧಿದೇವಿಯೆ ॥ (28)
ಮಂದರೆಯ ವದನದೊಳ್ ನೆಲೆಗೈದು ವಕ್ರತರ ।
ಬಂಧುರದ ನುಡಿಗಳಂದಶ್ವಪತಿಯಾತ್ಮಜೆಗೆ ।
ದಂಧತೆಯ ಬೋಧಿಸಿ ವಿಕಾರಮಂ ಪುಟ್ಟಿಸುತಲವಳಿಂದ ದಶರಥಂಗೆ ॥
ಸಂಧಿಸುವೊಲಪ್ರಬುದ್ಧತೆ ಪೂರ್ವವರ ಮತ್ತು ।
ಋಂಧಂಗಳಂ ಒಲಿದು ಸವಿನುಡಿಯ ಮೋಹಕಾ ।
ಮಾಂಧತೆಯ ಕವಿಸಿ ರಾಮಾಭಿಷೇಕೋದ್ವಿಘ್ನಗೈದೆಮ್ಮ ಪಾಲಿಸುವುದು ॥ (29)

ಬಿಡುಗಣ್ಣರೊಡೆಯ ಮುಂತಾದ ಸುರರೀಪರಿಯ ।
ಪೊಡವಟ್ಟು ಬಿನ್ನವಿಸೆ ವಾಣಿಯೊಪ್ಪಂಬಡೆದು ।
ಕಡುಮಮತೆಯಿಂದ ಪತಿಯಾಜ್ಞೆಯಂ ಕೈಕೊಂಡು ನಡೆದಯೋಧ್ಯಾನಗರಿಗೆ ॥
ಮಡದಿಮಣಿ ಮಂದರೆಯ ನಾಭಿಹೃದಯಂ ಕಲೆವ ।
ನುಡಿವ ಜಿಹ್ವಾಸ್ಥಾನದೊಳು ನಾಲ್ಕುಪಾದವಂ ।
ಮಡಗಿ ವ್ಯಾಪಿಸೆ ಪೂರ್ವಮತಿಯಡಗಿ ದುರ್ಬೋಧಮಂಕುರಿಸಿತಾಕ್ಷಣದೊಳು ॥ (30)

ಇದು ದೇವಕೃತಿ ಯಂತರಂಗ ಮತ್ತೀ ನಗರ ।
ದಧಿನಾಥನಿತ್ತಲೀಂಗೈದ ನೆಂಬುದವೇಳ್ವೆ ।
ಸುದತಿಯರ ಪಾಣಿಕವೆ ಮನವನ್ನೆ ಪ್ರೀತಿಯಿಂ ಆಲಿಪುದು ಮಂಗತೆಯನು ॥
ಸದಯ ಮೈತ್ರಾವರುಣಿ ರಾಮನರಮನೆಯಿಂದ ।
ಮುದವೆತ್ತು ನಡೆತಂದು ದಶರಥಮಹೀಪಾಲ ।
ಸದನ ಮನ್ನೊಳಪೊಕ್ಕು ನೃಪತಿಲಕನಂ ಕಂಡು ಬಂದ ವೃತ್ತಾಂತ ಪೊರೆಯ ॥ (31)

ಹರುಷರಸಮಂಕುರಿಸಿ ಪಂಕ್ತಿರಥ ಮಂತ್ರಿಗಳ ।
ಕರೆಸಿ ನೇಮಿಸಿದ ನಾಳೆಸಗುವ ಮಹೋತ್ಸವಕೆ ।
ಗುರು ನಿರೂಪಿಸಿದ ಮಾಳ್ಕೆಯೊಳಖಿಳವಸ್ತುಗಳ ಕಂತುರಗಧೇನುಗಳನು
ತರಿಸಿ ಯೋಲಗಶಾಲೆಯನ್ನು ಸಿಂಗರಗೈಸಿ ।
ನರಪತ್ರಿಗಳಖಿದಿಗ್ದೇಶದಿಂಬಂದ ಭೂ ।
ಸುರನೆರವಿನೆರೆವಂತೆಡಂಗುರವಪೊಯ್ಸಿತಾನಯೋಧ್ಯಾನಗರಿಯನುವೀಥಿಗಳಲಿ॥

ಗುರುವಿನಪ್ಪಣೆವಿಡಿದು ಪಂಕ್ತಿರಥಶುದ್ಧಾಂತ । (32)
ಕರುಹಲಿತ್ತಲು ರಾಮನಾ ಮೌನಿವೇಳ್ದಂತೆ ।
ಪರಿಮಳಾಂಬುವಿನಿಂದ ಮಜ್ಜನಂ ಗೈದು ಶುಭ್ರ ವಸ್ತ್ರಂಗಳನ್ನುಧರಿಸಿ ॥
ಸುರುಚಿರದ ಭೂಷಣಾಲಂಕಾರ ಯುತನೆನಿಸಿ ।
ಧರಣಿಸುತೆ ಸಹಿತ ದರ್ಭಾಸ್ತರಣದೊಳ್ಕುಳಿತು ।
ಸಿರಿಯರಸನಂಘ್ರಿಯಂ ಧ್ಯಾನಿಸಿದ ಮಾನಸದಿ ವೀರಾಸನವನು ಒಲಿದು ॥ (33)

ಸತಿಸಹಿತಲಗ್ನಿ ಹೋತ್ರವ ಪೂಜೆಗೈವುತ್ತೆ ।
ಕತಿಪಯ ಸುಮಂತ್ರತಂತ್ರಗಳಿಂದಲಿಹವಿ
ಸ್ಸತಿಶಯದೊಳಗ್ನಿ ಪುರುಷನಿಗಿತ್ತು ಮಿಕ್ಕುದಂ ಮನದಳ್ಳೆಸಹಭುಂಜಿಸಿ ॥
ಪ್ರತಿಪದದಿ ನಾರಾಯಣಾಂಘ್ರಿ ಪಂಕಜಗಳನು ।
ನುತಿಸುತ್ತಲಿ ತನ್ಮೂರ್ತಿಯಂ ಮನದ ಕೋಣೆಯೊಳಗೆ ।
ಜತನಗೈದು ದಿಟ್ಟಿಸುತ ಚಾಂಚಲ್ಯವನ್ನುಳಿದು ಭಕ್ತಿಯಿಂದೆಸೆದಿರ್ದನು ॥ (34)

ವಿಧಿಯೊರೆದನೇಮದಿಂ ಪ್ರಥಮಯಾಮವನುಳಿದು ।
ಮುದದಿಂದ ಲೆಚ್ಚತ್ತು ಮನೆಯಸಿಂಗರ ಗೈಸ ।
ಲೊದಗಿನಿಂ ಮೇಲ್ಕಟ್ಟು ನಂಬರಗಳಂತರಿಸಿ ನಾನಾವಿಚಿತ್ರತರದಿ ।
ಸದನವನಲಂಕಾರ ಗೈಸಿದಂ ಮೂಡಲಿನ ।
ನುದಯಿಸುವ ಸಮಯದೊಳ್ವಂದಿ ಮಾಗಧಘೋಷ ।
ದದುಭುತಂ ಕೇಳ್ದು ಪೂರ್ವಾಂಗಕೆ ಸತ್ಕ್ರಿಯೆ ರಚಿಸಿದ ಯಥಾವಿಧಿಯೊಳಾ ॥ (35)

ಉದಯಮುಖದೊಳು ವಾಯುಸಖನ ತೋಷಣಗೈದು ।
ಮುದದಿಂದ ಭೂಸುರರ ಸಂತತಿಯುಮಂ ಬರಿಸಿ ।
ಪದುಳದಿಂ ಪುಣ್ಯಾಹ ಗೈಸಿದ ದ್ವಿಜೋತ್ತಮರ ದೆಸೆಯಿಂದಲತಿ ವಿಭವದಿ ।
ಸದನದೊಳು ಸ್ವಸ್ತಿ ಪುಣ್ಯಾಹ ಮಂತ್ರ ಸುಘೋಷ ।
ವೊದವಿದುದು ದಿಕ್ತಟವ ಸರ್ವಜನರೀ ಶುಭದ ।
ವಿಧಿಯುಮಂ ಕೇಳ ಹರುಷಿತರಾದರಡಿಗಡಿಗೆ ಮನದಿಷ್ಟ ಮಾಡುದೆನುತ ॥ (36)

ಬಲಿದುದಲ್ಲಲ್ಲಿ ಶುಭವಾರ್ತೆಯಾ ನಗರದೊ ।
ಳ್ಕಲಿತ ಮಾದುದು ಸಕಲಜನ ಹರುಷರಸದಿಂದ ।
ಪಲವುವಿಧಮಾಗಿ ತಮ್ಮೊಳುತಾವೆ ಶ್ರೀರಾಮನತಿಶಯದ ಗುಣಗಣಗಳ ॥
ನಲಿವುತಲಿ ನಿಜಗೃಹಗಳಾದ್ವಾರದೇಶಗಳ ।
ಲಲಿತ ಸಾರಣೆ ರಂಗವಲ್ಲಿಗಳಸಿಂಗರಿಸಿ ।
ಪಲ ವಗೆಯ ಭೂಷಣಾಂಬರಗಳ ನ್ನಳವಡಿಸಿ ಭಾಸಿಸಿವರಚ್ಚರಿಯೆನೆ ॥ (37)

ಹಿಂದಣ ಮಹಾರಾಯರಾಯರುಗಳೀಜಗ ।
ದ್ವಂದಿತಾನತ ರಕ್ಷದಶರಥಗೆ ಪಾಸಟಿಯು ।
ಬಂದಪರೆ ಪರಿಕಿಸಲ್ ಬಹುಕಾಲ ಪೊಡವಿಯಂ ಪಾಲನಂ ಗೈದು ಕಡೆಗೆ ।
ಸಂಧಿಸಲು ವಾರ್ಧಕ್ಯ ನಿಜಕಾಯ ಕದರಿಂದೆ ।
ಸಿಂಧು ಮಂದರಸದೃಶ ರಾಘವಂಗಭಿಷೇಕ ।
ದಿಂದೆಸಗಿ ಮೆರೆವ ಗಡ ಕೃತಕೃತ್ಯ ನೃಪನೆಂದು ಪೌರಜನ ಹರ್ಷಿಸಿದುದು ॥ (38)

ಕುರುಜುಮೇಲ್ಗಟ್ಟುಗಳ ಪೊಂದಳಗೆ ದೋರಣಾ ।
ಸ್ಫುರಣೆಗಳವಲ್ಲಲ್ಲಿ ಬೆಳಗಿದುವು ಪ್ರಜ್ವಲಿಸಿ ।
ಥರಥರದೊಳೆತ್ತಿದರು ಸಿಂಧುಗೊಂದಣಗಳಂ ಶಶಿಸೂರ್ಯವೀಥಿಗಳೊಳು ॥
ಪರಿಮಳದ ಸಾಂಬ್ರಾಣಿ ಧೂಪಸಂಕಲಿತದಿಂ
ಪರಿಶೋಭಿಸುತ್ತಿರ್ದುದೇ ನೆಂಬೆ ತನ್ನಗರ ।
ಹರಿಯ ವೈಕುಂಠದೊಲು ದೇದೀಪ್ಯಮಾಗೆಸೆದುದೆಂತದಂ ಬಣ್ಣಿಸುವೆನು ॥ (39)

ಕರಿತುರಗ ಸಂದೋಹ ಸ್ಯಂದನಗಳಂದಣಂ ।
ಪರಿಪರಿಯ ನವರತ್ನದಿಂದಲಂಕೃತಗೊಳಿಸಿ ।
ಮಿರು ಮಿರುಗುತಾವಾವ ಕೇರಿ ಕೇರಿಗಳೊಳ್ಗಂ ನೆರೆದು ಪರಿವಾರಸಹಿತ ॥
ಧೊರೆದೊರೆಗಳಕ್ಕಲದಿ ಸಂರಂಭದಿಂದೊಪ್ಪು ।
ತರಮನೆಯ ಮುಂಗಡೆಯ ಕವಿಗಮಕಿ ವಾಗ್ಮಿಗಳ್ ।
ಮರಿದುಂಬಿಗುರುಳಾಂತ ವಾರಾಂಗನಾನಿವಹ ಪಂಡಿತರ್ಕವಿದಿರ್ದರು ॥ (40)

ಪರಿದುಮುತ್ಸವ ವಾರ್ತೆನಾನಾ ದಿಗಂತದೊಳ್ ।
ಪರಿಪರಿಯ ನೃಪಮೌನಿ ವರ್ಗಮಂ ಕರೆವಂತೆ ।
ಹರುಷರಸ ಮುಣ್ಕಂತೆ ಸಕಲದೇಶಾಧಿ ಪಭೂಸುರರ್ಬೇಗಬಂದು ।
ನೆರೆದುದಾನಗರ ದೊಳ್ನಖಿಲ ವೃಂದಾರಕರ ।
ನೆರವಿ ಸುರಪನಸಿರಿಯ ನಿಟ್ಟಿಸುವರೈತಂದ ।

ಕೆಲರು ದಶರಥ ಮಹೀಪಾಲನಂ ಸ್ತುತಿಸುತಿರೆ ।
ಕೆಲರು ರಘುವರ ಗುಣೋದಯಗಳಂ ಪಾಡುತಿರೆ ।
ಕೆಲರು ಮತ್ತಾನಂದ ನೀರಧಿಯೊಳಾಳುತಲಿ ಜಗದಘಂ ಪೋದುದೆನುತ ।
ಪಲಬಗೆಯೊಳಾ ಬಾಲವೃದ್ಧರುಗಳೆಲ್ಲರುಂ ।
ಫಲಿಸಿತೆಮ್ಮಭಿಮತವೆನುತ್ತ ಶ್ರೀರಾಮಪುರ ।
ನಿಲಯನಭಿವೃದ್ಧಿಯಂ ಹಾರೈಸುತೊಪ್ಪಿರ್ದರೇನೆಂಬೆನತಿಶಯವನು ॥ (42)

(ಸಂಧಿ 3, ಪದಗಳು 122.)

ನಾಲ್ಕನೆಯ ಸಂಧಿ.

ಸೂಚ॥ ಬೋಧಿಸಿದಳಮಿತ ಕುಟಿಲೋಪಾಯ ತಂತ್ರಗಳ ॥
ಸಾಧನೆಗಳೆನಿಪ ನುಡಿಗಳಲಶ್ವಪತಿಸುತೆಗೆ ।
ಸಾವರದಿ ಮಂಥರೆಯು ರಾಮಾಭಿಷೇಕಕಂ ಪ್ರತ್ಯೂಹರೂಪಳಾಗಿ ॥

ಇನ್ನೊರೆವೆಲಾಲಿಸು ಭವಾನಿ ಮೂಲೋಕಜನ ।
ಸನ್ನುತ ಶ್ರೀಭರಿತವಾದಯೋಧ್ಯಾನಗರ ।
ವನ್ನು ಪೊಕ್ಕುದು ಜಗತ್ತ್ರಯದ ಜನರೆಲ್ಲರುಂ ರಾಮನಭ್ಯುದಯವನ್ನು ॥
ಚೆನ್ನಾಗಿ ವೀಕ್ಷಿಸಿ ಕೃತಾರ್ಥರಹೆವೆನ್ನುತಂ ।
ಮನ್ನಿಯರ್ಮೊದಲಾದ ಮುನಿ ಸಮುದಯಂ ಪ್ರೇಮ ।
ದುನ್ನತದಿ ನಿಜಪುತ್ರದಾರಾ ಸಮೇತ ಮಾಗೇನೆಂಬೆ ನಚ್ಚರಿಯನು ॥ (1)

ಶರನಿಧಿಯು ಪೂರ್ವದೊಳ್ಬೊರ್ಗರೆದು ಪೆರ್ಚ್ವೊಲು ।
ನೆರೆದ ಜನ ಸಂದೋಹದಲಿ ತೂರ್ಯ ನಿರ್ಘೋಷ ।
ಕರಿತುರಗರಥನಿಚಯ ಬೃಂಹಿತಂ ಹೇಷಿತಂ ಚೀತ್ಕೃತಿಯಧ್ವನಿಯೊಸಗಲು ॥
ನರದೇವನರಮನೆಯ ಗೋಪುರವ ನಡರಿದಳ್ ।
ತ್ವರಿತದಿಂ ಮಂದರೆಯು ನಿರೀಕ್ಷಿಸೆಯಾಪುರದ ।
ಸಿರಿಯನೀಕ್ಷಿಸಿ ಕುತೂಹಳ ಚಿತ್ತಳಾಗುತ್ತೆ ಬೆರಗಾದಳಾಕ್ಷಣದೊಳು ॥ (2)

ಪನ್ನೀರ ತಳಿದು ಕಸ್ತೂರಿಸಿರ್ದ ರಾಜಪಥ ।
ವುನ್ನತ ಧ್ವಜತೋರಣಾಲಂಕೃತ ಗೃಹಗ ।
ಳನ್ನು ಮಾಲಿಕೆಲಾಜ ಮೋದಕಾ ಹಸ್ತದಿಂದೈತಪ್ಪ ವಿಪ್ರಕುಲವಂ ॥
ಚೆನ್ನಾಗಿ ದೇವಗೃಹನಾದಿತ್ಯನಾಮವುಂ ।
ಸನ್ನುತಿಪ ಬ್ರಹ್ಮಘೋಷಾನು ಹರ್ಷಂಗಳಂ
ಮಿನ್ನಾದ ರಥಗಜಾಶ್ವಗಳ ನೀಕ್ಷಿಸುತಾಗ ಬೆರಗಾದಳಾಮಂಥರೆ ॥ (3)

ನೆಗರದಲಿ ಶೃಂಗಾರ ದತಿಶಯಾವನೀಕ್ಷಿಸುತ ।
ನಗುತಲೊತ್ತಿನೊಳು ನಿಂದಿರ್ದ ಧಾತ್ರಿಯನೋಡಿ ।
ಮಿಗೆಹರ್ಷವಾಂತವಳತೆರನಂತೆ ಬೆಸಗೊಂಡಳೀ ವಿಭವ ಮೂರೊಳೆಲ್ಲ ॥
ನೆಗಳಹುದದೇನು ಪ್ರಕಟಭೇದನೆ ದೊಳಾವಾವ ।
ಬಗೆಬಗೆಯ ಜನರೆಲ್ಲ ಮೋದಗೊಳುತಿಹರಲ್ತೆ ।
ಜಗದೀಶನರ್ಧಾಂಗಿ ಕೌಸಲ್ಯೆ ಕಾಂಚನವ ನಿತ್ತಪಳೊ ವಿಪ್ರಕುಲಕೆ ॥ (4)

ಜನನಾಥ ಸವನಾಂಗ ಭೂರಿದಕ್ಷಿಣೆಗಳಂ ।
ಜನರಿಗೀವನೊ ಮೇಣ್ ದೇವತಾರಾಧನೆಯ ।
ವಿನಯದಿಂ ರಚಿಸುವನೊ ಪೇಳದೇಂ ದಿಗ್ದೇಶ ವೆಲ್ಲ ನೆಗೆದಿಹ ಪರಿಯನು ॥
ಎನೆಧಾತ್ರಿನಸುನಗುತ ಪುಷ್ಯಯೋಗದಿ ರಾಮ ।
ಗನುನಯದಿ ಪಂಕ್ತಿರಥ ಯೌವರಾಜ್ಯಾಧಿಪತಿ ।
ಯೆನಿಸುವತಿಶಯಮಿದಂ ನಿಟ್ಟಪಫಲಾಪೇಕ್ಷೆಯಿಂ ಬಂದಿರ್ಪ ದಖಿಲಜನವು ॥ (5)

ಕೇಳದಾಕ್ಷಣ ಶುಭೋದಯ ವಾರ್ತೆಯಂಕುಬ್ಜೆ ।
ತಾಳಚಿಂತೆಯನು ಹಮ್ಮೈಸಿ ಕೈಲಾಸನಿಭ ।
ದೇಳಗೆಯ ಪ್ರಾಸಾದದಿಂದಿಳದು ಕೋಪದಿಂದೈತಂದು ಮ್ಲಾನಳಾಗಿ ॥
ಆಳದೊಡತಿಯ ಪೊರೆಗೆಸಾರಿ ಕಡುದುಃಖದಿಂ ।
ಪೇಳಲಮ್ಮದೆ ನಿಮಿಷನಿಂದಿರ್ದು ಗದ್ಗದಿಸು ।
ತೊಳಗವ ಬಿಸ್ನೈಸಲನುಗೈದಳನ್ನೆಗಂ ಪಾಪದರ್ಶಿನಿ ಮಂಥರೆ ॥ (6)

ಸಕಲಸಾಮ್ರಾಜ್ಯಸುಖ ದನುಭವಿಯ ತೆರನಂತೆ ।
ನಿಕಟದೊಳ್ಬಂದ ಭೀತಿಯನು ಕಾಣದೆ ಬರಿದೆ ।
ಯಕಟ ಕೆಡೆದಿಹೆ ಮೂಢೆ ಬೇಗ ಎಚ್ಚರು ಮಹಾದುಃಖಸಾಗರದಿ ಮುಳುಗಿ ॥
ಝುಕುತಿಯನ್ನರಿಯ ಸಿರಿಯೊಳಗಿವೆನೆನ್ನುತಿಹೆ ।
ಪ್ರಕಟಗ್ರೀಷ್ಮದೊಳಂ ಪ್ರವಾಹತತಿ ಬರುವಂತೆ ॥
ರಕುತಿಯುಳದುದು ನಿನ್ನಸಂಪದವೆನಲ್ಕುಬ್ಜೆಯತಿಹರುಷ ತರದನುಡಿಯ ॥ (7)

ಲಾಲಿಸುತಲಶ್ವಪತಿಯಣುಗಿ ಮಂದರೆಯನ್ನು ।
ಲೀಲೆಯಿಂ ನಿಟ್ಟಸುತ ಬೆಸಗೊಂಡಳಂದಿದೇ ।
ನಾಲಸ್ಯಬಂದಡಸಿತತ್ರಿದುಃಖವಾಂತಿರುವರ್ಪೆ ಮುಖಮಲಿನತರದಿ ॥
ಲೋಲಲೋಚನೆ ನಗರದೊಳು ಕ್ಷೇಮವಾರ್ತೆಯನು ।
ಪಾಲಿಸುವ ನಾಥ ಸತ್ಕುಶಲದಿಂದಿಹ ಜಗ ।
ಜ್ವಾಲ ಸಂತೋಷಕರವಾಗಿರಲ್ಕಿನಗಿದೇಂ ತನುತಾಪಮುಸಿರೆನಲ್ಕೆ ॥ (8)

ಕ್ರೋಧಶಿಖಿ ಪೆರ್ಚುತಾ ಕುಬ್ಜೆ ಕ್ರೂರಾಕ್ಷರದಿ ।
ಬಾಧಿಸುವೊಲೊಡತಿಗತಿ ಪ್ರೀತಿ ಸಂಪನ್ನೆ ದು ।
ಬೋಧನೆಯ ಪೇಳಲುಜ್ಜುಗಿಸಿ ಮಾರುತ್ತರವನಿತ್ತಳತಿ ಖಾತಿಯಿಂದೆ ॥
ಭೂಧವಂ ಕೌಸಲ್ಯೆಯಾತ್ಮಜಗೆ ಯುವರಾಜ್ಯ ।
ದಾಧಿಪತ್ಯವನೀವನೆಂಬ ದುರ್ವಾರ್ತೆ ಸಂ ।
ಬಾಧೆಗೊಳಸಲ್ಕನುವ ನಿನ್ನ ಹಿತಕೋಸುಗಂ ಪೇಳ್ವೆನೈತಂದೆ ತಾಯೆ ॥ (9)

ಹಿತವ ನುಡಿವಂ ಸತತಮೃದುಮಧುರಭಾಷೆಯಿಂ ।
ದತಿಶಯವ ಪೆರ್ಚಿಸುತ ಮರುಳ್ಗೊಳಿಸಿ ನಿಮ್ಮವಂ ।
ಕ್ಷಿತಿಯರಸ ನಿಜಮನೋರಥವ ಕೋರದೆ ತೋರಮೆನುತ ಪೊಗಳುತೆ ಮೆಚ್ಚಿಸಿ ॥
ಸುತನ ಬಂಧುಗಳೆಡೆಗೆ ಕಳಪಿ ನಿಷ್ಕಂಟಕದ ।
ಯತ್ನದಿಂ ಕೌಸಲ್ಯೆಯಾತ್ಮಜಗೆ ನಗರಪತಿ ।
ಯುತ್ತನೆನಿಪ ವಂಚನಾಕ್ರಮವ ನೀಂ ತಿಳಿಯದಿಹೆ ಮೂಢೆ ಮರುಳೆನಿಸುತವಗೆ ॥
ಕಲುಷಹೃದಯಂಕರೆಯ ಕಪಟಗಳ ತವರ್ಮನೆಯು । [(10)
ನೆಲೆಯು ಭೇದೋಪಾಯಗಳಿಗೆ ಮಾಯಾನಿಲಯ ।
ಗೆಲವರಿದು ವಂಚಿಪ್ಪವನಿಪ್ಪೊಡಸದಳ ನಾಥನುಡಿದುದಂ ಸತ್ಯಮೆನುತ ॥
ಒಲಿದು ಪೇಳ್ದಂತೆ ದಾಸಿಯು ರೂಪಿನಂತಿರ್ದೆ ।
ಯೆಲೆ ಮರುಳೆ ನೀಂ ಮಹಾರಾಜನಂದನೆ ರಾಜ್ಯ ।
ದೊಳುಮೆಗಧಿಕಾರಿ ನಿನ್ನಿಳದನ್ಯವಶಮಪ್ಪುದೀ ಮಹಾನಗರಸಿರಿಯು ॥ (11)
ಅರಸುತನ ರಾಮಂಗೆ ದೊರಕೊಳ್ಳಲ್ ಕೌಸಲ್ಯೆ ।
ಗುರುತರದ ಸಂಪದಂ ಸಕಲಸಿರಿಸೇರುವುದು ।
ತರಳ ಭರತಗೆ ನಿನಗೆ ಪರಿಹರಿಸಲಸದಳದ ನಾಶಕರ ಬೀಜಮಹುದು ॥
ಅರಿತರಿಯದಾದೆ ನಿನ್ನಯ ಕಷ್ಟಮಿಂದೆನಗೆ ।
ಬರುವುದಭಿವೃದ್ಧಿಯಾದೊಡೆ ಸುಖಂ ದೊರೆಕೊಳ್ಳುಗು ।
ನಿರುತಮಿದು ಸತ್ಯಮಾದರಿಂದಾನು ತಿಳಿಪುವೊಡೆ ಬಂದೆನೀ ಪರಿ ತವಕದಿ ॥ (12)
ಮತಿಯೊಳಾಳೋಚಿಸುತ ದೂರದೃಷ್ಟಿಯೊಳರಿತು ।
ಸುತನ ನಿನ್ನಂ ತನ್ನ ದೇಹಂಗಳಂ ಸಲಹು ।
ವತಿಶಯದ ಕಜ್ಜಮಿನ್ನೆಸಗು ಮಗುಳೀನುಡಿಯು ಸಫಲಮೆಂದೆನಿಸದಿರಲು ॥
ಕ್ಷಿತಿಪರಾಮಗೆ ಪಟ್ಟಮಂ ರಚಿಸೆ ನಿನಗಿನ್ನು ।
ಜತನವಾಗದು ಸಿರಿಯು ದಿನದಿನಕೆ ತಗ್ಗಿಬರೆ ।
ಯತ್ನದಿಂ ಸಾಧ್ಯಮಾಗದು ಭೋಗ ತಿಳಿದುನೀ ಯೋಚಿಪ್ಪುದುಪಾಯತತಿಯ ॥ (13)
ರಾಮನಿಗೆ ರಾಜ್ಯಸಿರಿಯಹುದೆಂಬ ಶುಭನುಡಿಯ ।
ಪ್ರೇಮದಿಂ ಕೇಳದಾಕ್ಷಣ ಮುಖಂ ಪೌರ್ಣಮಿಯ ।
ಸೋಮನಂದದಿ ಕಳಾಭರಿತ ಮಾಗಲು ಹಿಗ್ಗಿ ಹರುಷದಿಂದರಸಿನಗುತ ॥
ಈ ಮಹಾ ಪೆರ್ಚುಗೆಯ ಪೇಳ್ದುದಕೆ ಸೌವರ್ಣ ।
ದಾಮಕುಟ ಕಂಗಳನ್ನಿತ್ತು ಕುಬ್ಜೆಯಸುತಿಸಿ ।
ತಾಮರಸನಯನೆ ತುರಗೇಶನಂದನೆ ನಲಿಯುತಿಂತೆಂದಳತಿಶಯದಲಿ ॥ (14)
ತರಣಿ ವಂಶಾಭೂಷಣಾಯುತ ಮಹಾಪ್ರಾಜ್ಞ ।
ಸುರಮೌನಿಸುತ ಸಾಧುಜನರಕ್ಷನತಿದಕ್ಷ ।
ಶರಣಾಗತತ್ರಾಣ ಸಕಲಭೂಸುರ ಭರಣ ರಾಮದೊರೆಯಪ್ಪಸಿರಿಯ ॥
ಚಿರಕಾಲ ತಾಂಕೇಳ್ದನೀ ಮಹಾಶುಭನುಡಿಯ ।
ಭರತನಿಂದಧಿಕ ಮತ್ಪ್ರಾಣಪದಕಂ ಗುಣಾ ।
ಕರದಯಾನಿಧಿ ಸರ್ವಜನಮನೋಹರನಾದ ಸಂಪದಗಳೆನ್ನವಲ್ತೆ ॥ (15)

ಎನುತೊರೆದ ಮಧುರತರ ಭಾರತಿಯು ನಾಲಿಸುತೆ ।
ಕಿನಿಸಾಂತು ಮಂದರೆ ಮನೋವ್ಯಥೆಯೊಳಂ ನುಡಿದ ।
ಳನಿಸನರಿಪಿದೊಡರಿಯ ದಾದುದು ಭವಚ್ಚಿತ್ರ ಕಾಪಟ್ಯದನರ ನಡೆಯು ॥
ಜನನಿನೀಂ ತಿಳಿಯ ನಕ್ರಕುಳದೊಳಡಿರ್ದ ।
ಘನವಾಪಿ ಗಾಂಭೀರ್ಯದಿಂ ತೋರುವಂತವರು ।
ಮನುಜರಂ ಮೆಚ್ಚಿಸುತಲರ್ಚಿಸುತ ತುದಿಯೊಳುಚುಚ್ಚುವರುವೆರರಸಿರಿಯು॥ (16)

ಮಾತಿನಿಂ ನಿನ್ನಂಮರುಳ್ಗೊಳಿಸಿ ಮಮತೆಯಿಂ ।
ನೋತಂತೆ ಬೇಡಿದುದನಿತ್ತು ನಿನ್ನವ ನೆನಿಸಿ ।
ಭೂತಳಾಧಿಪ ಸಕಲ ಸಂಪದವ ಕೌಸಲ್ಯೆಗಿತ್ತು ಕಪಟೋಪಾಯದಿ ।
ಆತಳೆವ ಮನದಿಷ್ಟ ಮಿದನರಿಯದಾತನಂ ।
ನೀತಿಯುತನೆಂದು ನೆಚ್ಚಿಹೆ ಮರುಳ್ಕಷ್ಟನಂ ।
ಜಾತವಾಗದೆ ಪ್ರಾಣದಿದರಿಂದೆ ಪ್ರಾಣಪಕಗೇಂ ಗತಿಯು ತಿಳಿದೆ ಮನದಿ ॥ (17)

ಮಗನಿಗೀ ರಾಜ್ಯಪದವಾಗಲಾ ಕೌಸಲ್ಯೆ ।
ಬಗೆಗೊಂಬಳೆಂತು ನಿನ್ನಂ ಮನದಿ ಸವತಿಯರ್ ।
ಜಗದೊಳೇಂ ಹಿತಕರರೆ ಕೊರಸಿಯು ಬಾಯಸ್ದಾರೆತಾಂ ಕಣಾ ಕಮಲಾಂಬಕಿ ॥
ಹಗೆಗಳೇಂ ಬೇರಿಹರೆ ಬಾಲ್ಯ ದೊಳ್ಸಹಭವ ।
ಮಿರ್ಗೆ ತಿಳಿಯ ಯೌವನಂ ಸಮನಿಸಿದ ಕಾಲದೊಳ್ ।
ತಗರಂತೆ ತರ್ಕಿಸುವರಿದು ನನ್ನಿ ನೀನರಿಯ ತೋರ್ದದಂ ಸೂಚಿಸುವೆನು ॥ (18)

ಕೇಳವ್ವೆ ದುರ್ಮತಿ ಯದೇನಡಸಿದುದುನಿನಗೆ ।
ಬೇಳದೊಡು ತಿಳಿಯ ಸವತಿಯು ಮಗಗೆ ಸಂಪತ್ತಿ ।
ನೇಳಗೆಯ ಬಯಸುತಿಹೆ ನಿಜಸುತನಿಗಹ ವಿಪತ್ತರಿಯ ನರಗುರಿಯ ಬರಿದೆ ॥
ಕೋಳುಹೋಗದೆ ಸಿರಿಯು ನಿಲ್ವಂತುಪಾಯ ಮಂ .... ।
ತಾಳೆಂದು ಬೋಧಿಸುವೆ ನೆನಿತರುಪಲಂ ತಿಳಿಯುಗೊಡವು ದುಷ್ಕರ್ಮ ಫಲವು ॥ (19)

ಧರೆಯೊಳತಿ ಬಲನಭಿಜ್ಞನು ತಿಳಿಯೆಲಕ್ಷ್ಮಣಂ ।
ದೊರೆಯಪ್ಪರಾಮನನು ಸರದಿಂದಲಾತನಂ ।
ಪೊರೆದು ಕೊಂಡಿಹನಿನ್ನ ತನುಭವನ ಪೊಂದಿಹಂ ಶತ್ರುಘ್ನ ಸೌಮಿತ್ರಿಯೊಳು ॥
ಸಿರಿಯು ಕೈಸಾರಿತವರೀರ್ವರಿಗೆ ಭೂಪತಿಯು ।
ಕರುಣಮವರೊಳ್ನಂದುದಂತೆ ನಗರೀ ಜನಂ ।
ಪರಿಜನ ವಶೀಕರಗೊಂಡು ದಿನ್ನೇನುಳಿದುದೈಸೆ ಭರತಂಗೆ ನಿನಗೆ । (20)

ನೆಲದೊಳ[1]ರಿಗಳ್ಗಶಕ್ಯಂ ರಾಮ ಶೌರ್ಯಯುತ ।
ಕಲಿಗಳ ಗ್ರೇಸರಂ ಸೌಮಿತ್ರಿ ಯುಭಯರುಂ ।
ಕಲಿತವಾದುದು ಧನಂಜಯ ಮರುತರೊಂದಾದ ಮಾಳ್ಕೆಯಂತಭಿವೃದ್ಧಿಯಂ ॥
ಸುಲಭದಿಂ ಗೈವನರನಾಥ ಭವದೀಯಸುತ ।
ನೆಲಗೆ ! ತೃಣದಂತಲ್ಲಿದೇಂ ಗಣನೆ ಭೂಕಾಂತೆ ।
ಯೊಲುಮೆಭುಜಬಲ ಮುಳ್ಳರಿಂಗಲ್ಲದುಳಿದರ್ಗೆ ದೊರೆದಪುದೆ ಮುಗುದೆ ಮಣಿಯೆ ॥ (21)

[1] ನೆಲದೊಳುಳ್ಳರಿಗ ಶಕ್ಯಂ.

ಕರುಣೆಕೊಸ್ಯೆ ಪ್ರೀತಿಸೊನ್ನೆ ದಾಕ್ಷಿಣ್ಯಮುಂ ।
ದೇರೆಯುದಿಹತಾಣ ಪರರಭಿವೃದ್ಧಿಯಂ ನೋಡಿ ।
ತರುಬುವುವನರ್ಥಕಾರಣ ಬೆರೆಸಾರದಿಹುದರ್ಥಮಂ ಸಾಧಿಸುವೊಡೆ ॥
ಬರೆಸಲೆವುದೆಲ್ಲರಂ ರಾಜಧರ್ಮವದಲ್ತೆ ।
ಧರೆಯೊಳಗೆ ಭೂಭುಜರ ಕುಲದೊಳುದ್ಭವಿಸಿದರ ।
ಚರಿತಮೊತ್ಸ್ಯನ್ಯಾಯಮೆಂದರಿಯದಾದೆ ದಿಟಮರುಳೆ ಕುಲಗೆಡುಕಿದುರುಳೆ ॥ (22)

ಸೀತಗೂಡಿದ ಕೆಂಡಗಳ ಕರೆವ ಪಕ್ಷಿಗಳು ।
ಸಾತಂಕಗರಳಯುತ ಮೃದುತರದ ವಾಣಿಗಳು ।
ಕೌತುಕದ ಕರುಣೋಪದೇಶ ಕತ್ತರಿವೆರೆದ ಹೃದಯದಿಂ ಲೋಕಜನರ ॥
ಭೀತಿಪ್ರೀತಿಗಳಿಂದೆ ಭಕ್ಷಿಪರು ಭೂಭುಜರು ।
ನೀತತ್ವವರಿಯೆ ಮತ್ತವರನುಣ್ಬನ್ನಣೆಯ ।
ಮಾತಿಂಗೆ ಮೆಚ್ಚಿ ಮರುಳಾಗಿ ಸಾಧುತ್ವವನ್ನೆಣಿಸಿ ದಣಿಸುವೆ ತರಳನ ॥ (23)

ಮುನಿಸೊಂದು ದೆಸೆಯು [1] ಕಾರ್ಯಗಳ ಕೈಸಾರಿಸುವು ।
ದಿನಿಸೊಂದು ದೆಸೆಯುನಗೆ ನುಡಿಗಳಿಂದುಪಚರಿಪ ।
ರಿನಿಸೊಂದು ದೆಸೆಯು ಮಾಯಾವೇಷ ಮಾಚಾರ್ಯಕೃತಕ ಮೃಗಧೂರ್ತನರಸು ॥
ಇನಿಬರುಂ ವಂಚನೆಗೆ ತವರಲ್ತೆಯಿಲೋಕ ।
ಜನರನೀಪರಿಯು ಮೋಹನಗೊಳಿಸಿ ಸರ್ವಸ್ವ ।
ವನುಸಳೆದು ಕಾಕಭಾಜನಗೊಳಪರೆಲೆತಾಯೆ ತಿಳಿಯೆನಾಂ ಪಳಯೆನೀನು ॥ (24)

ಸುತತನುಜ ಮಿತ್ರಬಾಂಧವ ಸುಜನ ಗುರುದೈವ ।
ಪಿತಮಾತೆ ಜಾಮಾತ ಧರ್ಮನೀತಿಗಳ ಸಂ ।
ಗತಿಗಳರಿವನೆ ಮಹಾ ದೊರೆತನದ ದುಷ್ಟಗ್ರಹಮಾವರಿಸಿಕೊಂಡನರರನು ॥
ಹಿತವರಿಲ್ಲವಗೆ ತಾನೇ ಪ್ರಾಜ್ಞತನ್ನನಡೆ ।
ಯಾತ್ರಿಕಯದ ಧವಳಪಥ ಮೆಂದೆಣಿಪ ನದುಂದೆ ।
ಕ್ಷಿತಿಯೊಳೊರೆದಪರು ಸಿರಿಗೆರವಿಡಿದರುನ್ಮತ್ತರೆಂತರಿವರ್ಗೆಸೆ ಗತಿಯು ॥ (25)

ಸತಿಯರಿಗೆ ಮಿತ್ರುತಾನಾರು ಸವತಿಯರುಗಳು ॥
ಪೃಥ್ವಿಯೊಳು ಪುರುಷರಿಗೆ ಯಮನಾರು ದಾಯಿಗಂ ।
ಮತಿಹೀನೆ ನೀನದಂ ಬಳಕರಿಯದಕಟಕಟ ನಮ್ಮಕ್ಕನೆಂದೆನುತ್ತೆ ॥
ಸತತ ಬೆರೆತಿಹೆ ರಾಮನಣೆಗ ನೆಂದಾಡುತ್ತಿಹೆ ।
ಪಿತು ? ಮೆ ಯುಂದಾಳೋಚಿಸಿರ್ದರದರಿಂದ ಭೂ ।
ಪತಿವಶೀಕರಗೈದು ಕೌಸಲ್ಯೆಕುವಲಯುಕ್ಕರಸಾದಳೆನೆಂಬೆನು ॥ (26)

[1] ಕಾ.

ವರತಪೋ ಶಾರ್ದೂಲ ಕಾಶ್ಯಪಮಹಾಮುನಿಯ ।
ತರುಣರಲೆ ಗರುಡನಾಗೇಂದ್ರರೇಂ ಮಿತ್ರತೆಯು ।
ಬೆರೆದಿಹುದೆ ಕದ್ರುವಿಗೆ ವಿನತಾನಿತಂಬಿನಿಯು ದಾಸಿಯಾಗನವರತವು ॥
ಚರಣ ಸೇವನೆ ಗೈದಕಥೆಯುನೀ ಕೇಳ್ದರಿಯ ।
ಮರೆಮಾಚಲೇಂ ಜನನಿ ರಾಜ್ಯಸಿರಿ ರಾಮನಿಗೆ ।
ದೊರಕೊಂಡಬಳಿಕ ನಾಯಕ ನಾದನೇ ಭರತ ಕೌಸಲ್ಯೆ ಕೃತಕೃತ್ಯಳು ॥ (27)

* ಕುಲಿಶ ಕಠಿಣತರ ನುಡಿಯಿಂದಲೀ ಪರಿಯಲ್ಲಿ ।
ಬಲುತರದ ಕೋಪದಿಂದೊರೆಯೆ ಮಂದರೆ ಕೈಕೆ ।
ನಲವಿಂದ ನಸುನಗುತ ಮತ್ತವಳವದನಮಂ ನೋಡುತಿಂತೆಂದಳೊಲಿದು ॥
ಎಲಗೆ ಪಾಪಾಚಾರಯುತೆ ರಾಮಚಂದ್ರಮನ್ನಿ ।
ಗೊಲಿದ ಸಂಪದಕಸೂಯೆ ಬಡುವೆ ದುರ್ಮೇಧೆ ।
ಜಲಧಿಮೇಖಲೆಯೊಳಾಪರಮಪುರುಷನ ಪೋಲ್ವ ಗುಣನಿಧಿಗಳುಂಟೆ ಮರುಳೆ ॥

ಗುರುಸೇವನಾಪರ ಕೃತಜ್ಞ ಧರ್ಮಜ್ಞನುಂ । [(28)
ನಿರತದಾಂತಂ ಸತ್ಯಭಾಷಿ ಸುಖವಿಕ್ರಮಂ ।
ಪಿರಿಯಸುತನರಸಿಂಗೆ ಸಕಲಗುಣಗಣ ಭರಿತ ಭ್ರಾತೃವತ್ಸಲ ಶಾಂತನು ॥
ದೊರೆತನಕೆ ಯೋಗ್ಯನೀ ನೆಲಕೆ ಸಮ್ಮತ ರಾಮ ।
ಸಿರಿಯ ಪೊಂದಿದೊಡೆ ನೀನೇಕೆಸಂತಾಪದಿಂ ।
ಕೆರಬುತಿಹೆ ಭರತಗಿಮ್ಮಡಿಯಲ್ತೆ ಮತ್ತಿವರೊಳೇಂ ಭೇದಮುಂಟು ತನಗೆ ॥ (29)

ಸೇವಿಸುವನನವರತ ಮತ್ಪದಪಯೋಜಮಂ ।
ದೇವಿಕಂ (ಕೌ) ಸಲೆಗಧಿಕಮೆಂದು ಭರತಂ ತನ್ನ ।
ಜೀವೋಪಮಿತನೆಂದು ಪ್ರೀತಿಯಿಂದಾರೈವನಖಿಲಜನ ಸಮ್ಮತಮೆನೆ ॥
ಈ ವಸುಧೆಯರಸನಾದೊಡೆ ತನಗೆ ಸೌಭಾಗ್ಯ ।
ತೀವಿದುದು ಹೃದಯಾಂತಸ್ಥಮಂ ನೀನರಿಯ ।
ದೀ ವಿಧದಿ ಪರಿತಾಪಗೊಳುವೆ ಮಂಥರೆ ಮೂಢೆ ರಾಮಚಂದ್ರನ ನಿಟ್ಟಿಸಿ ॥ (30)

ಧರಣಿಪಗೆ ನೂರುಜನಮಿರೆ ಸುತರು ಪಿರಿಯರಿಂ ।
ಗರಸುತನವನುಜರಿಗೆ ತತ್ಸೇವೆ ಭೃತ್ಯರಂ ।
ತಿರುವರಿದು ಕುಲಪರಂಪರೆಯೊಳಾಚರಣೆಯಂ ಮಾಡಿದುದು ರವಿವಂಶದಿ ॥
ದೊರೆಧರ್ಮನಿಷ್ಠ ಸತ್ಯಾಚಾರಿ ಬಹುದಿನಂ ।
ಧರೆಯ ನಾಳ್ದವರಾದ ಕತದಿಂದ ರಾಮಗಂ ।
ವಿರಚಿಸುವ ಯೌವರಾಜ್ಯಾಧಿಪತ್ಯವನಿದನು ನೀಂ ಕೇಳುತಳುವೆ ಮರುಳೆ ॥ (31)

ಸಕ್ಕರೆಯ ಸವಿನುಡಿಯಲನುದಿನಂ ನಿಜಹೃದಯ ।
ದಕ್ಕರಿಂದಖಿಲ ಸೌಖ್ಯವಲಿ ಪಾಲನೆಗೆಯ್ಯ ।
ವಕ್ಕಗಿನ್ನೆಂದಿಗಾದರು ರೋಷದೆ ವಚಂಗಳೇಂ ಪುಟ್ಟಿಬಹವೆ ಕೃಪೆಯ ॥
ಇಕ್ಕೆಯೆನಿಸುವ ರಾಮಚಂದ್ರ ಮತ್ಸುತ ಭರತ ।
ಧಿಕ್ಕಾರವಂ ಮನದಿ ನೆನೆದಪನೆ ಸೂರ್ಯಗತಿ ।
ಮಿಕ್ಕುನಡೆವುದೆ ಮರುಳೆ ಚಿಪಿಪಾಲಿನೊಳ್ಪುಳಿಯ ನಿಡಲೆಳಸಿಬೋಧೆಗೈವೆ ॥(32)

---

* ಕುಲಿಶಕರ ಕಠಿಣವೆಂದು ಇದೇ ಅರ್ಥದಲ್ಲಿರ ಬಹುದು.

ಪೊಡೆವೀಶರಾಘವಂಗೀ ರಾಜ್ಯಪದವಿಯಂ ।
ಕೊಡಲು ಮತ್ಸುತಗಖಿಲಭಾಗ್ಯಮಿತ್ತಂತಾಯ್ತು ।
ಗಡ ಭರತ ಗತ್ರಿಕರಂ ರಾಮನೂರ್ಮಡಿ ಯೆನಗೆ ಪಾಪಿ ಕೌಟಿಲ್ಯೆಗತಿಯಂ ॥
ಕೆಡಿಸಲೋಸುಗ ನುಡಿವೆ ನಿಜಧರ್ಮಮಂ ಮೀರಿ ।
ನಡೆವರಾರ್ಮೆಚ್ಚುವರ್ಸರ್ವಜನ ಸಮ್ಮತ ದೊ ।
ಳೊಡೆವೆರದು ಬಾಳದಿರಲುಭಯಕುಲಕೆಡುಗು ಬಹುದಪಕೀರ್ತಿಮೂಲೋಕದಿ ॥ (33)

ಎಂದು ಸತ್ಯಾಚಾರ ನುಡಿಗಳಂ ಕೇಳಲಾ ।
ಮಂದರೆಯು ಕೋಪದಿಂ ಪಲ್ಮೊರೆದು ಶೋಕಿಸುತ ।
ಕಂದಿದಾನನದಿಂದ ಕರಗಿ ಕೊರಗುತ ನುಡಿವ ಳೆಲೆದೇವಿ ಬಾಲ್ಯದಿಂದ ॥
ಕಂಡ ಭರತನಿಗಿಂವಲಿನ್ನಲ್ಲಿ ವಾತ್ಸಲ್ಯ ।
ಪೊಂದಿನೀ ನಾರ್ದೆದೆಸಾದ ಕತದಿಂದೀಗ ।
ಬಂದಡಸಿ ತತಿವಿಷಮ ಕಾರ್ಯಮಂ ಬಿನ್ನವಿಸಲಾವುದನುಮಾನವಾಗೆ ॥ (34)

ಒಡತಿ ನಿನಗಾದ ಸುಖಕೋಟಿಗಳಿನ್ನು ಬಂ ।
ದಡಸಿ ದಂದಲಿನಿಸುದಿನದೊಳಂ ಸಂತೋಷ ।
ದೊಡವಿರ್ದ ಮುಂದೆ ಭರತನಿಗಪ್ಪ ಪುಭವವನೆಣಿಸಿ ಸಂಕ್ಲೇಶದಿಂದ ॥
ಒಡನೆ ಕೆಂಡವಿಕೆಡಿದ ಮೂಷಕನಪಾಳ್ಕೆಯಂ ।
ತೊಡಲುರಿದು ತರಹರಿಸಲಾರದಾಂ ಬಂದೊರೆದ ।
ರೆಡೆಸಾಗಿ ತೋರ್ಪಡಿಸಿ ತ್ಯಸೆ ದಿಟ ಕೊಡಿದರ ನಗಲಿಸುವರಾವಾದೆವು ॥ (35)

ಮಂಜುಭಾಷಣೆಗಳಂ ಮನುತೆಯಂ ಪುಸ್ಟಿಸುತ ।
ರಂಜನಂಗೈದು ಸರ್ವಸ್ವಮಂ ಸೆಳೆದೊಯ್ವ ।
ಜಂಜಡೆವಠಕ್ಕುಗಳ ನೀನರಿವೆಯೆಂತು ವಿಷಮಾಚಾರಹೃದಯಗಳನು ॥
ಕಂಜಮುಖಿಯಮೃತಾನ್ನಮೃಷ್ಟಭೋಜನದಲ್ಲಿ ।
ನಂಜುಬೆರಸಿರ್ಪುದಂ ತಿಳದವರೆಂತಕಟದಂ ।
ಎಂಜಲಿಸೆ ತುದಿಗೆ ಕಾಣ್ಬುದುವುದನುಭವ ಮಲ್ಲದರುಪಿದೊಡೆನಿಜಮಕ್ಕುಮೆ॥(36)

ಪತಿಯು ಮಮತೆಯು ರಾಗಮದು ಪಶ್ಚಿಮದರಾಗ ।
ಸುತನ ಸವಿನುಡಿಬೆಡಗು ಘನವಿಲೀನದಗುಡುಗು ।
ಸತತ ಸವತಿಯ ಪ್ರೀತಿ ಸೌದಾಮಿನಿಯರೀತಿ ದಾಯಿಗರ ಸರಸವಿರಸ ॥
ಕ್ಷಿತಿಯೊಳದು ಸತ್ಯ ನಿನಗಿವ ಪಥ್ಯಮೆಂದೆಣಿವೆ ।
ಮತಿಹೀನೆ ಕಾಲಕರ್ಮಾಧೀನಗಳನರಿ ।
ಗತಿಯುಂಟೆ ಮನುಜರ್ಗೆ ಬುದ್ಧಿಕರ್ಮವ ಪೊದ್ದಿನಡೆವುದಿದು ಸತ್ಯಮಲ್ತೆ ॥ (37)

ಅರಸುತನ ರಾಮಂಗೆ ಚರಭಾವ ಭರತಂಗೆ ।
ಸಿರಿಯಾಸೆ ಕೌಸಲೆಗೆ ಗುರುದಾಸ್ಯಕರ ನಿನಗೆ ।
ಪರಿಪೂರ್ಣ ಸುಖವು ಲಕ್ಷ್ಮಣನಿಂಗೆ ಶತ್ರುಘ್ನಗಧಿಕತರ ದುಃಖಮೆಮಗೆ ॥
ನರಪತಿ ಯುಘಾಯದಿಂದೆಸಗಿ ಕೈಸಾರಿಸಿದ ।
ಪರಿಯು ಸರಿಯುದೆ ಬರಿದೆ ಮೋಸಪೋಪರೆತಾಯೆ ।
ಉರಿಯ ಸುಖವಾಪಿಷವೆನುತ್ತ ಚುಂಬಸಗ್ಗೆವ ಸಿಂಹಯಂತರದನುಡಿಗೆ ॥ (38)

ಜಗದಾಧಿಪತ್ಯಮುಂ ರಾಮಂಗೆ ಸೇರಿದೊಡೆ ।
ನಗರದೊಳಗಿರಲು ಭರತಗೆ ಘಟಿಸದಿದು ನಿಮಗೆ ।
ಮಿಗೆ ಪಲಾಯನ ಮೂಲಧನವು ಪರಲೋಕಾಧಿವಾಸಮೆಡೆಲ್ಲದಿಲ್ಲ ॥
ಬಗೆಬಗೆಯ ಭೋಗಗಳ ನನುಭವಿಸಿ ದಾರಿದ್ರ್ಯ ।
ಮೊಗೆಯೆ ಪ್ರಿಯಜನರೆಡೆಯಲೆಂತಿರ್ಪನಾಕುವರ ।
ಮುಗುದೆ ಬಂಧುಗಳ ಮಧ್ಯದಲಿ ನಿರ್ಧನನಿಹುದು ವ್ಯರ್ಥಮೆಂದರಿಯದಾದೆ ॥ (39)

ಜನಕಗತಿಶಯಮೆಂದು ಸೇವಿಸುವ ಲಕ್ಷ್ಮಣಗೆ ।
ನೆನೆಯನುಪಕಾರಮಂ ಮರದೊಮ್ಮೆಮಿಗೆನಿನ್ನ ।
ತನಯನಲಿ ದೋಷಂಗಳೆಣಿಸಿ ನಾಶನಗೈವ ರಾಮನಿದು ನನ್ನಿ ಮರುಳೆ
ನಿನಗೆ ತಿಳಿಯದು ಲೋಕದೊಳಗೆ ಜೀವರುಗಳಗೆ ।
ಮನವೆರಸಿ ತಾಂ ಗೈದ ಪುಣ್ಯಪಾಪಗಳೆರಡ ।
ನನುಭವಿಸಿದಲ್ಲದವ ಮೀರಲೆಂತಳವಹುದು ಕಾಲಗತಿ ಬಲಿಯಮಲ್ತೆ ॥ (40)

ವಿಧಿಲಿಖಿತಮಂ ಬುದ್ಧಿಯನುಸರಿಪ್ಪುದಂತೆಂದು ।
ಬುಧರೊರೆದ ಗಾದೆ ನಿಷ್ಫಲ ಮಪ್ಪುದೆಂತು ತನ ।
ಗಧಿಕಾರಮೆನಿತಿರ್ದೊಡಂ ಕರ್ಮಫಲಗಳಂ ಭುಂಜಿಸಿದ ಬಳಿಕಲ್ಲದೆ ॥
ನಿಧನಮಪ್ಪುದೆ ಜೀವತತಿಗೆನಾಂ ಪೇಳ್ದೀನು ।
ಬಧಿರ ಕರ್ಣೋಪದೇಶಂ ದರಿದ್ರನ ಕೋಪ ।
ಮಧುರಪೀಡನೆಯಲ್ಲದೇಂ ಫಲಂ ಕಾನನದ ರೋದನಬಗೆಯಲ್ಲದೆ ॥ (41)

ಪೊಡವಿಯೊಳು ಜೀವರಿಗೆ ಸುಖದುಃಖಸಂಬಂಧ ।
ಮಡಗುವುದು ಜಗದೀಶನಾಜ್ಞೆಯಲ್ಲದೆ ಬೇರೆ ।
ಜಡಮತಿಗಳುಪಮಂತ್ರ ತಂತ್ರದಾಲೋಚನೆಗಳೊಡಗೂಡಿ ಬಹವೆಕಂದ ॥
ಪಿಡಿದಿರ್ಪನವರವರ ಕರ್ಮ ಫಲವನು ಸೂತ್ರ ।
ದೊಡನೆ ಚಲಿಸದ ತೆರದೊಳರಿಯ ದೀಪರಿಯನ್ನು ।
ಬಡವರಾಯಾಸ ದುಗ್ಗಡಯತ್ನಗಳ ನೆನೆಯೆ ಫಲಿಸುವುದೆ ಮನದಿಷ್ಟವು ।(42)

ಒಡಲ ವ್ಯಾಪಿಸಿಯಲೆವ ಕ್ರೂರರುಜೆಯುಪಟಳವ ।
ಕೆಡಿಸುತಿರುವೌಷಧಿಯ ನೂಡಿಸಲ್ಕದು ರಸನೆ ।
ಗೆಡಸೆನಿಸಿ ತೋರ್ದಪು ದಪಥ್ಯಕರವಸ್ತು ರುಚಿಕರದಿಂದ ಮೋಹಿಸುವುದು ॥
ಕಡೆಗೆ ಕಾಂಬುದು ಕಾಂತೆ ಮುನ್ನುಡಿಯ ಕಾಠಿಣ್ಯ ।
ಮಡದಿಮಣಿ ಕೌಸಲೆಯ ಮೇಲ್ನುಡಿಯ ಮಾಧುರ್ಯ ।
ಸಡಗರಮದೆಲ್ಲಿ ಮೇಣೆಂಬುದೇಂ ಪೇಳಲೇಂ ಒಂದೆರಡು ವತ್ಸರದೊಳು ॥ (43)

ತಾಮರಸತಪನರವಿನಾಭಾವಸಂಬಂಧ ।
ಕೋಮಲಪ್ರಿಯಮಂಬು ನಿಲಯದೊಳಗಿರ್ಪಾಗ ।
ಸಾಮರಸ್ಯಂ ಪೋಗಿ ಶತ್ರುತ್ವ ಮಹುದುದಕ ಪೋದಡಾಕ್ಷಣಧರೆಯೊಳು ॥
ನೀಮಹತ್ಸಂಪತ್ತಿನಲ್ಲಿರಲು ಕೌಸಲೆಯು ।
ರಾಮರತಿಸ್ನೇಹದಿಂದಿರ್ಪರಾಪತ್ತಡನೆ ।
ಪ್ರೇಮವಳಿದಾತ್ಮಜನ ಮಗಳೆ ನಿನ್ನಂಜುಚ್ಚದುಳಿದಪರೆ ಹಿತವರಹರೆ । (44)

ಪಗೆಯು ಹಿತವೆಂದರಿದುಪೇಕ್ಷೆಗೈದಿರ್ದೊಡಂ ।
ಮಿಗೆ ಸಮಯ ಬಂದೆಡೆಯುಲಪಕೃತಿಗಳನ್ನೆಸಗಿ ।
ಬಗೆಯುಮುಳವನೆ ಕಳೆಬರಕೂನಮಂ ಮರುಳೆ ನೇಹಸಿಂದಗ್ನಿಯುರ್ವ್ವು ॥
ಬಗಲೊಳಗೆ ಬೈಬೆಚ್ಚು ತಿಗ[1] ಸುಳಿಯಂಸಾರ್ದೊ
ಡೊಗೆಯೆ ಪಾರಾತತನೂತಾಪ ಗೊಳಸದೆಮಾಣ್ದು ।
ಸೊಗಯಿಪ್ಪುದೆ ಶೀತಳಾಕೃತಿ ಯೆನಿಸಿಯೆಶ್ವರಸಿ ತಿಳಿನೊಳ್ನೊಳಾಳೋಚಿಸಿ ॥ (45)
ಹೃದಯವಂತಸ್ಥಮಂ ತಿಳಿಯವಳೆ ರಾಜಸಂ ;
ಪದವ ಕೈಸಾರಿಸುವೆ ರಾಮಂಗೆ ಸಿರಿಯು ಬಂ ।
ದೊದಗಿದೊಡೆ ಭವದೀಯ ಸಿಂವೆಗದ ಕಾಂತಿಯುಂ ಕೆಳೆಯುಮುಳದವನೆ ತಾಯೆ ॥
ವದನೋಪಮಿತಮೆಂದು ನೀರೇಜಬೀಜಮಂ ।
ಮುದದಿಂದ ವಾಪಿಯೊಳ್ಬಿತ್ತಿ ಪೋಷಿಸೆ ಕುಸುಮ ।
ಮುದಮಿಸಲ್ವಕ್ತ್ರ ಸುಂದರವನೊಯ್ದ್ದಲ್ಲದದು ಪಡೆದಪ್ಪುದೆ ತಿಳಿಯದಾದೆ ॥
ಕ್ರೂರತರದಾರ್ಭಟಿಯ ನುಡಿಯು ಕಂಡಂಜುವ್ರುದು । (46)
ಧಾರುಣಿಯು ಜನಮೆಲ್ಲ ಮೃದುಮಧುರ ವಾಣಿಯಿಂ ।
ಸಾರಿಪರಶಕ್ತಿಯುಂ ಸತತ ತೊಡೆಯೊಳಗಿಟ್ಟು ಮೃಗವ ಪ್ರಿಯದಿಂ ಸಲಹಿದ ॥
ತಾರೆಯರಸನನರು ಮೃಗಲಾಂಛನನೆನುತ್ತೊರೆವ ।
ರೋರಂತೆ ತತ್ಕುಲವ ನಲೆವ ಕೇಸರಿಯನ್ನು ।
ದಾರಮೃಗಪತಿಯೆಂಬರೀನೀತಿ ಧರ್ಮವಂ ತಿಳಿವು ನೆರೆಶಬ್ದಜ್ಞನನೆ ॥ (47)
ಪಲವು ಮಾತೇನಂಬುಜಾಕ್ಷಿ ರಾಮಗೆರಾಜ್ಯ ।
ಮೊಲಿಯಲವನರಸಿಯರ್ಗಂತಸದಿಹಿಗ್ಗುವ ।
ರ್ಬಲಾಕಟ್ಟದಿಂ ಭರತ ನಳಯಲಾತನ ಸತಿಯು ನಿನಗಳಲಿತೊಳಲುತಿಹಳು ॥
ನೆಲವನಾಕಾಂಕ್ಷಿಸದೆ ಸಿರಿಯುಸವತಿಯುತನುಜ ।
ಗೊಲಿಸಿನೀಂ ಸುಲಭ ವಹುದನುಚಿತಂ ಪೂರ್ವಕೃತ ।
ಫಲವ ಭುಂಜಿಸ ದುಳಯೆ ನಿನ್ನಳವೆ ರಾಮ ಪುರದರಸನಾಜ್ಞೆಯು ಮೀರ್ವೊಡೆ ॥
(ಸಂಧಿ 4, ಪದಗಳು 170.) [(48)

ಐದನೆಯ ಸಂಧಿ.

ಸೂಚನೆ ॥ ಶಾಂತಿಕರ್ಮದಲಿ ಬೇತಾಳ ಮಾಡಿದ ತೆರದಿ ।
ಸಂತಸದಿ ರಾಮಾಭಿಷೇಕಸಮಯದಲಿ ಬಹುತ ।
ರಾಂತರಾಯಂಗೈದಳಶ್ವಪತಿಯಾತ್ಮಭವೆ ಮಂಥರೆಯ ಬೋಧೆಯಿಂದ ॥
ಗಿರಿರಾಟ್ಸುತೆ ಕೇಳ್ಕಂದದೆ ಮಹಾಮಾಯ ।
ಪೆರೆದ ಬಿರುನುಡಿಗಳಂ ಗಂಧರ್ವಪತಿಯಣುಗಿ ।
ಗೊರೆದು ಮನವಂ ಕಲಕಿ ಮಗುಳೊಂದು ಪಾಯದಿಂ ಮತಿಹಿತವುದೆಂಬಂದದಿ ॥
ಪರಿಪರಿಯ ಕುಹಕವಂ ಪಣಿದು ದುರ್ಬೋಧನೆಯ ।
ನೆರೆದಳೇಕಾಂತ ದೊಳ್ಕರ್ಣ ಪೀಯೂಷಮೆನೆ ।
ಸಿರಿಗೆ ಪ್ರತ್ಯೂಹಗಳನೇಕ ಮೆನ್ನುವ ನ್ಯಾಯ ಸಫಲೀಕರಂಗೈವ್ವೊಲು ॥ (1)

---
[1] ಕಿರಿಯ.

ಕೇಳವ್ವೆ ರಾಮಂಗೆ ರಾಜ್ಯಸಿರಿ ದೊರಕಿದೊಡೆ ।
ಕೇಳ್ನಿಸಲೊಳಗವು ಭರತಗಹುದಲ್ಲದೊಡೆ ।
ತಾಳಿ ಮುನಿ ವೇಷಮಂ ಕಾನನಕೆ ಗಮಿಸುವುದು ತರುನಿಲಯಮಂ ಸಾರ್ವುದು ॥
ಆಳುವೊಡೆಯನವಗಾತೆ ಯೊಡೆಯ ದಾಸೀಜನರ ।
ಜೋಳಿಯಲಿ ನೀನಿಹುದು ನಿನ್ನ ಸೊಸೆಯರುಯಿಟ್ಟು ।
ಕೋಳಂಡು ಸೀತೆ ಪೇಳದ ತೆರದಿ ಸೇವೆಯೊಳಗೊಪ್ಪುವುದು ತಪ್ಪಲರಿದು ॥ (2)
ತನ್ನ ಸಿರಿಯಿಂದ್ರಪದ ತನ್ನ ದೌರ್ಭಾಗ್ಯಮದು ।
ನೆನ್ನಿ ಮೂಲೋಕದಾರಿದ್ರ್ಯತನ್ನುಳವಾದೊ ।
ಡುನ್ನತಂ ಯುಗ ಮರಳಿ ಪೋದುದೆಂದೆಣಿಸುವುದು ಧೀಮಂತರ ಮತವು ಮರುಳೆ ॥
ತನ್ನುದರ ಸಂಭವರ್ತ್ವಮಗಾಗ ರೆಂಬೆಡೆಯ ।
ಲನ್ನಿಗರು ಪೊರೆದಪರೆ ತಿಳಿ ನಿನ್ನೊಳೀಪರಿಯ ।
ಚೆನ್ನಾಗಿ ನಿಜಹಿತವ ನೀಂ ಗೈದು ಸುಖಿಯಾಗು ಪೆರರಿಂಗೆ ಬಾಯಬಿಡದೆ ॥ (3)
ಭರತನಂ ಪೊರೆ ಬರ್ಪಸಿರಿಯು ಬಾಗದೆ ಜಗ ।
ದ್ಭರಿತ ವಿಕ್ರಮರಾಮ ಭೂಪಾಲನಾಗದಂ ।
ತುರಾತರೋಪಾಯಮಂ ಬೇಗಲಾಳೋಚಿಪುದು ಕಾರ್ಯಮುಂಮೀರದಂತೆ ॥
ದೊರೆತನಂ ನಿನ್ನ ವಶಮಾದ ಬಳಿಕೀಲೋಕ ।
ಕರರಂತೆ ಸೇವಿಪರು ಕೆಲಕಾಲಕಂ ಭಾಗ್ಯ ।
ಚಿರಮಹುದು ಮೈಮರೆದು ನೆನೆಯೆ ಗತಜಲಸೇತುಬಂಧದಂತಫಲವಹುದು ॥ (4)
ರಾಮಂಗೆ ಯುವರಾಜಪಟ್ಟಮಂ ಕಟ್ಟುವರೆ ।
ನೇಮಿಸಿದ ಶುಭವಸ್ತು ನಿಚಯದಿಂ ಭರತಂಗೆ ।
ಸಾಮಾಜಿಕನುಮತದಿ ರಾಜ್ಯಾಧಿಪತ್ಯಕಭಿಷೇಕಮಂ ರಚಿಸಿ ಬಳಿಕ ॥
ರಾಮನಾರಾಮದಲಿ ಪದಿನಾಲ್ಕು ವತ್ಸರಂ ।
ನೇಮದಿಂ ಮಾನಿಯಂತಿಪ್ಪಂತೆ ನೀಂಗೈದೊ ।
ಡಾ ಮಗುಳೆ ನಾಡೆಲ್ಲ ವಶವರ್ತಿಯಾಗುವುದು ಸಂಪದಂ ಪೆರ್ಚಬಹುದು ॥ (5)
ನಾಡೆಲ್ಲ ನಿನ್ನಣುಗನವರಾದ ಬಳಿಕ ಕೈ ।
ಗೂಡುವುದು ಬಯಸಿದುದು ಕೌಸಲ್ಯೆಯಾತ್ಮಭವ ।
ಕಾಡಿಂದವೈತಂದೊಡಂ ಭೃತ್ಯಭಾವದಿಂದಿಹುದಲ್ಲದಿತರಮಲ್ಲ ॥
ನೋಡಿ ಸ್ವೈರಿಸದವನು ತನಗಾಗಬೇಕೆಂದು ।
ಮಾಡಿದರನೇಕವಿಧ ಯತ್ನಂಗಳಂ ಬಯಲ ।
ಕೂಡಿಕೊಳ್ಪುದು ಮನೋರಥವಲ್ಲದಾ(೦)ತಂಗೆ ಸಿದ್ಧಿಸುವ ಕಾರ್ಯವಿರವು ॥ (6)
ಅದು ನಿಮಿತ್ತದೊಳಂಬುಜಾಕ್ಷಿ ಜಾಗ್ರತೆಯಿಂದ ।
ಪದುಳದಿಂ ಸಿರಿಯುಪ್ಪುಪಾಯಮನ್ನೆಸಗೆಂದು ।
ಹೃದಯದುದಂತಸ್ಥಮಂ ತಿಳುಪಿದೆಂ ಬಲ್ಲನಿತ ಜನತಾವಿರೋಧಮಾಗೆ ॥
ಬೆದರದಿಹೆ ಭವದೀಯ ಕೃಪೆಯಿಂದಲೆಂದು ಬಹು ।
ವಿಧದಕುಹಕೋಪಾಯಗಳ ನುಸಿರಲವು ಸತ್ಯ ।
ಸದನ ಮೊಂದೆಣಿಸಿ ಮಾರುತ್ತರಂಗೊಡದೊಂದು ನಿಮಿಷ ನಿಟ್ಟಿಸುತಿರ್ದಳು ॥ (7)

ಪಾಲಿಸೊಳ್ಪುಳಯುಪಿಂಡಿ ಕಲಕಿದಂದದಲಿ ದು ।
ಶ್ಶೀಲಮಂತ್ರದಿ ಸೈಂಧವಾಧಿಪನ ಪುತ್ರಿಯು ಹೃ ।
ದಾಲಯುವ ವಿಕಳಗೊಳಿಸಲ್ಕೆ ವಿಸ್ಮಿತಳಾಗಿ ಮುಂಗಾಣದತಿಚಿಂತೆಯಿಂ ॥
ಲೋಲಾಯತೇಕ್ಷಣೆ ನಿಜಾಂಗುಷ್ಠಮಂ ನೋಡಿ ।
ಡೋಲಾಯಮಾನಮಾನಸಳಾಗಿ ರಾಮ ಭೂ ।
ಪಾಲನಾಗದ ತೆರದಿ ಯತ್ನಮಂ ಯೋಚಿಸುತ ಮಂದರೆಯೊಳಂತೆಂದಳು ॥ (8)
ಎನಗೆ ಹಿತಕರಮಾದ ಕಜ್ಜಮಂ ನಿನ್ನಂತೆ ।
ಮನದೊಳಾಲೋಚಿಸುತ ಪೇಳ್ವರಾರೀ ಪುರದಿ ।
ಜನನಿ ಸೋದರಿ ನೀನೆಯಲ್ತೆ ಭೂಧವನಪ್ಪನೆಂತೆನ್ನ ಕುವರನಿಂದು ॥
ಜನನಾಥ ಸಕಲ ಸಂಭಾರಮಂ ಸಂಗ್ರಹಿಸಿ ।
ಮುನಿಗಳನುಮತದಿಂದ ಪುಷ್ಯಯೋಗದಿ ಪಟ್ಟ ।
ವನು ಕಟ್ಟಲಿಚ್ಛೆಯಿಂ ಗೈದಿರ್ಪ ನಿದಕಂತರಾಯಮೆಂತಪ್ಪುದಬಲೆ ॥ (9)
ಜೀವನಂ ತನು ಧನಂ ರಾಜ್ಯಸುತ ಸರ್ವಸ್ವ ।
ವಾವುದುಂಟೆನಗದೆಲ್ಲಂ ನಿನ್ನಹಿಂದೆನಿಪೆ ।
ನೀವಸುಧೆ ಯಧಿನಾಥಳೆನಿಸಿ ಮದ್ಭಾಗ್ಯಮಂ ರಕ್ಷಿಸುವುಪಾಯಮೊಂದ ॥
ಸಾವಧಾನದೊಳರಿಪು ಜ್ಞಾನನಿಧಿ ಕಾಲತ್ರ ।
ಯಾವ ಬೋಧಾಶಾಲಿಯೆಂದು ನಾನಾ ವಿಧದ ।
ಲೋವಿಪ್ರಿಯದಿಂ ನುಡಿಸಿ ಜಾಗರವ ಲೆ ಕಡತಿಯೊಡನೆಂತೆಂದಳಾ ಮಂಥರೆ ॥(10)
ಸತತ ನಿಜನೇತ್ರದಿಂದತಿಶಯ ವಿದೆಂದೆನ್ನ ।
ಪ್ರತಿಪಾಲಿಸಿದ ಮಾತೆಯಾದ ಕತದಿಂ ಸಮಯ ।
ಕತಿಗೋಪ್ಯ ಮಂತ್ರಮಂ ಬಿನ್ನವಿಸಿ ಸಕಲ ಸೌಭಾಗ್ಯದೊಡತಿಯ ಮಾಳ್ಪನು ॥
ಸುತಗೆ ಪಟ್ಟಾಭಿಷೇಕೋತ್ಸವಂ ರಾಮಂಗೆ ।
ವಿತತಗಹನಾವಾಸಮಪ್ಪಂತೆ ಪೇಳ್ಪದಂ ।
ಹಿತಮೆಂದು ಕ್ಷಿತಿಯರಸನೊಪ್ಪುಗೊಳುವಂದಮಂ ಬಿತ್ತರಿಪೆ ನಬ್ಜಾಂಬಕೆ ॥ (11)
ವಾಸವಗೆ ಶಂಬರನೊಳಾಗಲ್ಮಹಾಸಮರ ।
ಗಾಸಿಗೆಟ್ಟಮರಪತಿಯೆಯ್ದಿ ತಂದು ಬೆಸಸಲ್ಕೆ ।
ಬೇಸರದೆ ಪ್ರೀತಿಯಿಂ ದಶರಥ ಮಹೀಪಾಲ ಸುರಪನೊಡನೈದಲಾಗ ॥
ಕೇಸೆಂದು ರಕ್ಕಸರ ಮೊತ್ತಂಬೆಂಬತ್ತಿ ಬಲು ।
ಬೇಸರಿಸಿ ಪೋರಾಡುತಿರಲು ರಣರಂಗದೊಳು ।
ಮೋಸಮಾಗಲ್ಕೆರಿನಚ್ಚು ತತ್ಸಮಯದೊಳು ಧೈರ್ಯಗುಂದದ ತೆರದೊಳು ।
ತೇರಿಂಗೆಕರವಿತ್ತುದಾರಜಯಸಿರಿದೊರೆಯ । [(12)
ನಾರುವಂದದಿ ಧೈರ್ಯಗುಂದದೆಸಗಿದ ಕಾರ್ಯ ।
ವಾರೈದು ನೃಪತಿಲಕ ನೋಡಿ ಸಂತಸದಿಂದಲಿಂತೆಂದ ವಿನಯದಿಂದ ॥
ನಾರಿಯರ ಕುಲದರಸಿ ಪತಿಹಿತೈಷಿಣಿ ನೀನೆ ।
ಯಾರಿಂದಲುಂ ತೀರದೀ ಸಮಯ ಕುಪಕೃತಿಯ ।
ಪೋರಂತೆ ನೀನೆಸಗಿದುದರಿಂದಲಿನವಂಶಜ ಸುಚರಿತಮರೆಸೆಯೆ । (13)

ಆದುದರಿಂ ಸಂತೋಷವದರಿಂದ ವರವೆರಡ ।
ನೋದವೆತ್ತಿತ್ತಪೆನು ಕೈಕೊಂಡು ಸುಖವ ಸಂ ।
ಪಾದಿಸುವುದೆನ್ನರಸಿ ಯೆಂದರಸನೊರೆಯಲ್ಕೆ ನಸುನಗೆಯೊಳಂವಂದಿಸಿ ॥
ಮೇದಿನೀಪತಿಯಿತ್ತವರಗಳೆರಡುಂ ಭವ ।
ತ್ಪಾದಾರವಿಂದಂಗಳೆಡೆಯುಲಿರಲೆನಗೆ ಬೇ ।
ಕಾದ ಸಮಯದಲಿ ಬಿನ್ನಪಗೈದು ಕೊಳುವೆನೆಂದರಸಿ ವಿಜ್ಞಾಪಿಸಲ್ಕೆ ॥ (14)
ಸಂತಸಂಗೊಂಡರಸನೆಂಬುವಂ ಪಿಂತೆನ್ನ ।
ಮುಂತುಸುರಿದಂದಿಂದ ಮರೆದಿರ್ದೆ ಭಾಗ್ಯದುರು ।
ಸಂತೆಯಿಂದವಸರಕೆ ಬೈಚಿಟ್ಟುದಂ ನೆನೆದು ಮನದೆ ನಿಜಹಿತಕರವೆನೆ ॥
ನಾಂ ತಳುವದುಸುರಿದೆಂ ಭರತಂಗೆ ರಾಜ್ಯಸಿರಿ ।
ಕಾಂತಾರವಾಸ ರಾಮಂಗೆನುತ ಯಾಚಿಪುದು ।
ಕಾಂತನಂ ಪೂರ್ವವರಬಲಮಿದೆಕೊ ಮನವಿಷ್ಮ್ಯಮಪ್ಪುದೆನೆಸಗೆ ನಿನಗೆ ॥ (15
ದಕ್ಕಿಣದ ದೆಸೆಯೊಳಾ ದಂಡಕಾರಣ್ಯದೊಳು ।
ಸೊಕ್ಕಿದಸುರೇಶ ಶತಮಾಯಂ ತಿಮಿಧ್ವಜನ ।
ನೊಕ್ಕಲಿಕ್ಕುವೊಡೈದಲಿಂದ್ರನಾ ಶಂಬರನ ವೈಜಯಂತೀ ನಗರಕೆ ॥
ತಕ್ಕದಿರಲಸುರ ಬೆಂಬಲಕೆ ದಶರಥನೈದೆ ।
ಕಕ್ಕಸದ ರಣದಿ ತೇರಚ್ಚುಗಿಯೆ ಪತಿಯುನ್ನು ।
ವಕ್ಕರಿಂ ಸಾಹಾಯ ಮೆಸಗಿ ಸಂಪಾದಿಸಿದ ಪ್ರೀತಿ ಮಾತ್ರೀ ಸಮಯದಿ ॥ (16)
ಉಪಕರಿಗಿತವ್ವೆ ಪದಿನಾಲ್ಕು ವತ್ಸರ ರಾಮು ।
ತಪಗಿಯಂತಾರಣ್ಯ ವಾಗಿಯಪ್ಪಂದ ದಿಂ ।
ಗುಪಿತದಿಂ ಬಿನ್ನವಿಪುದರಸಂಗೆ ನಿನ್ನಣುಗ ನರನಾಥ ನಪ್ಪಂದದಿ ॥
ತಪನ ವಂಶಾಗ್ರಣಿಯು ಕೊಟ್ಟ ಭಾಷೆಗೆ ತಪ್ಪ ।
ಕುಪಿತನಾಗಂ ಕಾಮಿಯಾದ ದೆಸೆಯಿಂ ತಾಯೆ ।
ಅಪರಿಮಿತ ಸೌಖ್ಯಮದರಿಂದಹುದು ಮನ್ನಿಡಿಯು ಪ್ರಿಯದಿಂದ ಪತಿಕರಿಸಲು ॥ (17)
ಪೋಗು ಕೋಪಗೇಹಮನ್ನಳವಡಿಸು ವೈಕಾರ ।
ಬಗೆಯಲಂಕೃತಿಗಳಂ ತಿರೆಗೆ ಮೊಗವನ್ನಿಟ್ಟು ।
ಸೊಗಸಿರುವ ಭೂಷಣಾವಳಗಳಂ ತೆಗೆದಿಟ್ಟು ಮೌನವಂ ತೊಟ್ಟುಗೊಟ್ಟು ॥
ಬಿಗಿಯನಿಸಿ ಕೇರಶಾರಿಕೆಗಳನುಸರಿಸಿರುವ ।
ಬಗೆಬಗೆಯ ನುಡಿಗಳಂ ನುಡಿಸುವರ ಬೇಳುಹೆಗೆ ।
ಮೊಗಗೊಡದೆ ಮನವ ಬಲುಸರಗೈದು ಮುಂತಪ್ಪ ಶುಭವ ಜಾನಿಪುದು ತಾಯೆ ॥
ತನ್ನ ಜೀವನಕೆಂದಲತಿಶಯಮೆನುತ್ತರಸ । [(18)
ನಿನ್ನಲ್ಲಿ ಚಿತ್ತದೆರಕದೊಳರ್ದ ಕೋಪಿಸಂ ।
ಕನ್ನೆಯರ ರನ್ನೆ ಮಾರುತ್ತರಂಗೊಡ ದೇಳ್ದನುಡಿಗೆ ಹಿತಮೆಂದೆಣಿಸುತ ॥
ನನ್ನಿ ನಿನಗೋಸುಗಂ ಪೊಗುವನಗ್ನಿಯನಿದಂ ।
ಮುನ್ನನಾಂ ಬಲ್ಲೆ ಬಂದಾತ ಮಣಿಧನಧೇನು ।
ಬಿನ್ನಣದರಾಜ್ಯ ಮೇನಿತೊಡದನೊಪ್ಪದಿರು ಮೃದುನುಡಿಗಳಾಡದಿಹುದು ॥ (19)

ಬಲು ತರದುಪಾಯಗಳ ಬೋಧಿಸಲ್ ಪ್ರಿಯನವಂ ।
ನಲವಿನಿಂ ನಿಟ್ಟುಸದೆ ಶೋಕಲಾಲಸೆಯಾಗಿ ।
ಪಲವು ವಿಧಕಠಿಣದುಕ್ತಿಗಳಿಂದ ಲಾತನಂ ನಿರ್ಭರ್ತ್ಸ್ಯನೆಂಗೈವುತ ॥
ಒಲಿಯುತಿರಲರೆನಿಮಿಷ ಬೇಡಿದುದನಿತ್ತಾ ನಿ ।
ನ್ನೊಲುಮೆಯಂ ಪಡೆಯಲಿಚ್ಛೈಸಿ ಶಪಥಂಗೈವ ।
ನಲಿವೇಣಿಯುದ ನೆನೆತು ಸ್ಮರಿಸು ಪೂರ್ವದಲಿತ್ತ ವರಗಳೆರಡಂ ಮರೆಯದೆ ॥ (20)

ನಾಡೊಡೆಯನಭಿಮತವ ತಿಳಿದು ನೀಂ ವರವೊರಡ ।
ಬೇಡು ಪದಿನಾಲ್ಕು ವರುಷಂ ರಾಮನೂರುಳಿದು ।
ಕಾಡಿಗಿರದೈದಲೆನ್ನಣುಗ ಭರತಂ ರಾಜ್ಯದಧಿನಾಥನೆನಿಸಲೆಂದು ॥
ಮಾಡದನುಮಾನವನ್ನಿತ್ತಪಂ ಬಯಸಿದುದು ।
ಕೊಡುವುದು ಮನದಿಷ್ಟ ತನುಜ ಭೂನಾಥನಹ ।
ನಾಡೆಲ್ಲ ವಶವಾದ ಬಳಿಕ ಲಾರಿಂದೇನು ಬಹುದು ತಿಳಿಯಬ್ಜಾಂಬಕೆ ॥ (21)

ಚತುರ ದಶವರುಷ ವನದೊಳಗಿರ್ದು ರಾಮ ಬಂ ।
ದತಿಶಯಮದೇನ ಕಾಣ್ಬಂ ಮುಂದೆ ಲೋಕ ಸಂ ।
ತತಿ ನಿನ್ನ ಪುತ್ರನಾಧೀನವಾಗೊಪ್ಪುವುದು ದೊರೆತನಂ ರಕ್ಷಿಯಹುದು ॥
ಮತಿಹೀನೆ ನಾಂ ಪೇಳ್ದುಪಾಯಗಳೊಳೊಂದನು ।
ನ್ನತಿಗಳಿಯದೆಸಗಿ ಸುಖಮಂ ಪಡೆಯಲೆಂದಶ್ವ ।
ಪತಿಯಣುಗಿಗೊರೆದಳಾ ಮಂದರೆ ಮಹಾಮಾಯೆ ಮೂರ್ತಿಯಾದುಭವಿಸಿದಂತೆ ॥

ಮಂದರಾಪಚನರಚನಾಕ್ರಮವ ಲಾಲಿಸುತ । [(22)
ಗಂಧರ್ವಪತಿಯಾತ್ಮಜಾತೆ ವಿಸ್ಮಿತಳಾಗು ।
ತೊಂದೆರಡುಘಳಿಗೆ ಪರಿಯಂತ ಮೌನದೊಳಿರ್ದುತನ್ನೊಳಾಳೋಚಿಸುತಲಿ ॥
ಬಂದುದೆಲ್ಲೀ ಮೇಧೆ ಈಕುಬ್ಜೆ ನಾಲ್ಕೊಗನ ।
ಸುಂದರಿಯಳಂಶವನ್ನಾಂತು ಭೂಮಿಾತಳಕೆ ।
ಬಂದಿರ್ಪಳಲ್ಲದಿರಲೀ ವಿವೇಕತೆ ದೊರೆಗುಮೆಂತು ವೈಚಾರಿಸತಿಗೆ ॥ (23)

ಎನುತ ಸಂತಸ ಪೆರ್ಚುತಾ ಕುಬ್ಜೆಯಂ ತುತಿಸ ।
ಲಸುಗೈದಳೀ ಪೂರ್ವವಿಧುವಕ್ತ್ರೆ ಕಾಂಚನವ ।
ಕನುವಂತಿಪ ನಾಸಿಕಂ ಸರಸೀರುಹದಳಾಕ್ಷಿಯಾಗ ಸ್ನಿಗ್ಧಗಂಡಸ್ಥಲಂ ॥
ಮಿನುಗುತಿಹ ಪ್ರಗಕಂ ಲಿಕುಚಕುಚ ಶುಕ್ತಿಯು ।
ನ್ನನುವಾಂತಕರ್ಣ ಶಾತೋದರಂ ಕರಿಕರಿಗ ।
ಳೆನಲೂರು ಕದಳೀಪಮಿತಜಂಘೆಗಳಂ ದೆಸೆವ ಚೆಲ್ವನಾನೇಂಬಣ್ಣಿಪೆಂ ॥ (24)

ಸುತನ ಮಾತುಳನೆಡೆಗೆ ಕಳುಪಿ ಪತಿ ಯಾತ್ಮಜಗೆ ।
ವಿತತರಾಜ್ಯದ ಸಿರಿಯ ಕೈಕೊಳಿಸಲನುಗೈದ ।
ಕತಿಪಯೋಪಾಯಂಗಳೆಂತಂತೆ ಕುಬ್ಜೆಯರ ಕುಲದೊಳಧಿಕ ॥
ಮತಿವಂತೆ ನೀನೆಯೆನ್ನಯ ಭಾಗ್ಯದೇಳಗೆಯ ।
ಹಿತಕಾರಿಯತಿಪ್ರೀತೆ ಸುತಗೆ ಸಿರಿಯಡಸಿದೊಡೆ ।
ಸತತ ಸಂತೋಷಮಂ ಕೈಗೈದೆ ಕೊಡುವೆ ನಿನಗಧಿಕ ಸಂಪತ್ಸುಖಗಳಂ ॥ (25)

ಶಂಬರನ ಶತಮಾಯ ಕಾಲನೇಮಿಯ ಕಪಟ ।
ಡಂಭ ಮಾಯಾಸುರನ ಕೃತ್ರಿಮಂ ಮಾರೀಚ ।
ಜಂಭಮೊದಲಾದ ಕುಟಿಲೋಪಾಯ ಸಂತತಿಯನಾಂತ ಮತಿ ನಿನ್ನದೈಸ ॥
ಅಂಬುಜಾಸನ ಸಕಲ ಕೃತ್ರಿಮಗಳಂ ಸ್ವಾಮಿ ।
ದೆಂಬಂತೆ ರಥಘೋಣದಾಯತವಮಾಡಿ ನಿ ।
ನ್ನಿಂಬೆನಿಪ ಬೆನ್ನಿನೊಳ್ಪುದುಗಿಸಿದನಲ್ಲದಿರಲಿನಿತು ಮತ್ತೆ ಸಂಜನಿಕುಮೆ ॥ (26)

ಕುಟಿಲಗಳ ಮನೆ ಕಪಟಮಂದಿರಂ ಆಟೋಪ ।
ಮಠ ಕೃತ್ರಿಮದ ನಿಲಯ ಮಾಯಾಸಮೂಹ ಸಂ ।
ಪುಟದನೃತದಾಗಾರ ವಂಚಸಾಲಯ ಮಹಾಮಿತ್ರಭೇದದ ತವರ್ಮನೆ ॥
ಪುಟಮಾಯಗಳ ತಾಣಮೆನಿಪ ಬೆನ್ನಿನ ಕೂಸೆ ॥
ಪುಟಮಿಡಿದ ಪೊಂಬಣ್ಣವಸನವನಲಂಕರಿಸಿ ।
ಲಟನೆಗೈದಪೆ ಪುರಕೆ ಭರತಗೀ ರಾಜ್ಯಾಧಿಪತ್ಯ ಕೈಸಾರಲೊಡನೆ ॥ (27)

ಕೊಡುವೆ ಮಣಿ ಧನ ಧೇನು ನಗರಾಧಿಪತ್ಯಗಳ ।
ಪೊಡವಿಯಧಿಪತಿ ಯುವರಾಗಸಾದೊಡಂ ನೀಂ ಬೇಳ್ದ ।
ಸ ಕಗರದ ಮತಿಯನಾಂ ತಿಳದೆ ಶಪಥಂಗೈವೆ ಮನವಿಷ್ಟವನ್ನೀಯದೆ ॥
ತಡೆಯ ಪತಿಯಿದಿರಿನೊಳಗಸುಗಳಂ ತೃಣಕೆಂತ ।
ಕಡೆಯೆನಲ್ಬಿಡುವೆನಿದು ನನ್ನಿ ಯೆಂದೆನಿಸಿ ಮುಂ ।
ಗಡೆಯ ನಿಟ್ಟಸುತಿರ್ಪುದೆನುತ ಹಯಪತಿಯಾತ್ಮಭವೆ ಕೋಪವನಳಾದಳು ॥

ತೊಡವುಗಳನೆಲ್ಲಮಂ ಪರಿದಿಟ್ಟು ಕಚ್ಚುರದ । (28)
ಉಡಿಗೆಯನ್ನುಟ್ಟು ಕೆದರಿದ ಕೇಶಪಾಶಗಳ ।
ಗುಡಿಗಟ್ಟ ಮುಖವಿಧುಂತುದಗೆ ಕಾಣಿಕೆಯಿತ್ತ ತೆರದಿ ಕೋಪಾಗಾರಮಂ ॥
ತಡೆಯದೊಳಪೊಕ್ಕು ಪಾಸಿಗೆಯ ಪರಿದೀಧಾಡಿ ।
ಪೊಡವಿಗಭಿಮುಖವಿಟ್ಟು ಕೆಡಾಕುತ್ತೊಡಲಂ ಕುಟ್ಟ ।
ಯೊಡನೆ ರೋಷಾವೇಶಕಲಿತವಾಕ್ಯಂಗಳಂ ನುಡಿವಳಾತ್ಮೋತ್ಸವವನು ॥ (29)

ಏನಾದೊಡಂ ಪಿಡಿದಕಾರ್ಯ ಕೈಸಾರದೇಂ ।
ನ್ಯೂನಮಪ್ಪಂತರಸ ಯೋಚಿಸಿದನಾದೊಡಿಂ ।
ದೀ ನೆಲದೊಳಸುವ ಪೊರೆಯೆನು ಬಿಡುವೆ ಪ್ರಾಣಗಳ ಸಾಧನದಿಗರ್ಪಿಸುವೆನು ॥
ಆನುಪಿಡಿ ದನರ್ಥವಂ ಜಗುಳಗಲ್ಕಶ್ವಪತಿ ।
ತಾನಾದೊಡಂ ಬಂದರಳವೆ ಮಂದರೆ ಪಿಡಿವ ।
ಮಾನಮಂ ನಿಜಮನೋರಥವಮಾದೊಡಲ್ಲದಾನುಳಯೆನಿದು ಶಪಥಮಖಿಲೆ ॥ (30)

ಕೊಳ್ಳೆನಾಹಾರಮನ್ನುದಕಮನ್ನಿಟ್ಟಸೆನು ।
ಬಳ್ಳುರನ್ನಂಗಳಂ ತಂದಿಟ್ಟರಿಟ್ಟಸೆನು ।
ಒಳ್ಳಿತಹ ಸವಿನುಡಿಗಳಾಡಿ ಬೆಲ್ಲಿಸಲದಂ ಪತಿಕರಿಸೆನೆನಸುವನುಳಸೆ ॥
ತಳ್ಳಂಕಮಿಲ್ಲದಟೆ ಭರತಂಗೆ ರಾಜ್ಯನಾ
ಡೊಳ್ಳುರಾಮಗೆ ವನಂ ಸಿದ್ಧಮಪ್ಪನ್ನ ಕೈ ।
ಕೊಳ್ಳನೊಂದನು ಕುಟ್ಟ ಮನದರ್ಥಮಿದು ಪುಸಿಯ ನುಡಿಯೆ ಹಿತಕಾರಿಯೆಡೆಯ ॥ (31)

ಪಲವುಮಾತಿನ್ನೇನು ಸುತಗೆ ಸಿರಿಸಂಪದಂ ।
ಕಲಿತವಾಗುವುದು ರಾಘವಗೆ ವಿಪಿನಾವಾಸ ।
ಸಲಿಗೆಯುಪ್ಪಂತೆಸಗಿ ಸಂತೈಸಿದೊಡೆ ನೃಪತಿಯಾನು ಸಂತಸದಲಿ ॥
ನೆಲದಲಿಹೆನಲ್ಲದಿರಲಾತನಿದಿರೊಳಗಸುವ ।
ಉಲಿತವೆಂದೆನಿಸಿ ಶಮನಿಲಯಮಂ ಸಾರುವೊಡೆ ।
ಫಲಿತಾರ್ಥವೆಂದು ತಿಳಿ ಇನ್ನಿದಕೆ ಪುಸಿಯನುಳ ತಪ್ಪೆನ್ನಂ ನೀಂ ಪಳ । (32)

ಎಂದು ತನ್ನೊಳ್ ತಾನೆ ಯತಿರೋಷದಾವೇಶ ।
ದಿಂದ ಪಲ್ಮೊರೆದು ಭುಜಗಳನೊದರಿ ಕೋಪಶಿಖಿ ।
ಮುಂದುವರಿದೈ ತರಲ್ಗೊಡವುಗಳ ತ್ರೋಟಕಂಗಳ ತಡೆಯದೀಡಾಡಿ ನೆಲಕೆ ॥
ಬಂಧುರವ್ಯಾಪಾದವೆಸಗೆ ಕುದಿವುತಲಾಗ ।
ಮಂದರೆಯ ಮೊಗನೋಡುತೊರಗಿ ಭೂತಳದಲ್ಲಿ ।
ಯಿಂದೀವರಾಕ್ಷಿ ಶ್ರೀರಾಮ ಪುರದರಸಂಗೆ ಕೃತಕವಮಂ ಯೋಚಿಸಿದಳು ॥ (33)

(ಸಂಧಿ 5, ಪದಗಳು 203.)

ಆರನೆಯ ಸಂಧಿ.

ಸೂಚನೆ ॥ ವಾಗಿಷುಗಳಲ್ಲೀಶನಂ ವ್ಯಥಿಸಿ ನಿಜಪುತ್ರ ।
ಗಾಗುವಂದದಿ ಸಿರಿಯ ಬೇಡಿ ರಘುವಲ್ಲಭನ ।
ಬೇಗದಿಂದಾ ರಾಮನೆಡೆಗೆ ಕಳುಪಲ್ ಬೆಸನ ಕೇಳದಳ್ ಭರತಾಂಬಿಕೆ ॥

ನಗರಾಟ್ಯನೊಜೆ ಕೇಳ್ ರಾಮಾಭಿಷೇಕಕಂ ।
ಒಗುಮಿಗೆಯ ಹರುಷದಿಂದನುಗೆಯ್ಯಲೆಂದು ನಿಜ ।
ಬಗೆಯ ಜನಕಪ್ಪಣೆಯನಿತ್ತು ಸುದ್ಧಾಂತಕಂ ನಡೆಯೆ ದಶರಥನೃಪಾಲಂ ॥
ನಗುವ ಗೃಹಶಾರಿಕೆಯ ನಲಿವ ಸೋಗೆಯ ಬಳಗ ।
ಮಿಗೆ ಸೊಬಗನಾಂತು ನರ್ತಿಸುವ ಪಾಂಚಾಲಿಕೆಗ ।
ಳಗಣಿತದಿ ನೋಡುತಾನಂದಮಯನಾಗುತ್ತಲೊಳಪೊಕ್ಕು ನಿಜನಿಳಯಮಂ ॥ (1)

ಒಂದೆಡೆಯಲಾಡುತಿಹರೊಂದೆಡೆಯ ಪಾಡುತಿಹ ।
ರೊಂದಡೆಯ ಹಾಸ್ಯರಸವೆಸಗುತಭಿನಂದಿಸುವ ।
ರೊಂದೆಡೆಯ ಕೇಳಿ ಮಯೂರಾದಿಗಳ ಜೀವತತಿಯಾಟಂಗಳತಿಸೊಗಯಿಸೆ ॥
ಬಂಧುರದ ವಿಭವಮಂ ನೋಡುತೊಳಪೊಕ್ಕನಾ ।
ನಂದದಿಂದಿಂದ್ರಭವನಕ್ಕೆ ಮೂಱವಡಿಯೆನಿಪ ।
ಮಂದಿರದಮಧ್ಯದೊಳಗಾತ್ಮೇಶಿಯಂ ಕಾಣದರಸುತ್ತೈತಂದ ನರಸ ॥ (2)

ಮೂಡಲಿಪ ಗಿಳಿಗಳಭಿವಾದಿಪ ಮಯೂರತತಿ ।
ಯಾದರಿಪ ಪುತ್ಥಳಿಗಳನುದಿನಂ ನಗಿಸುತಿಹ ।
ನಾದರದ ಕಾದಂಬ ಗೃಹಚಕ್ರವಾಕಗಳ ನಿಟ್ಟಿಸುತ ನಸುನಗುತಲಿ ॥
ಮೇದಿನೀಶನು ನಿಜಸತಿಯನಾವೆಡೆಯೊಳಂ ।
ಭೇದಿಸುತ ಕಾಣದನುತಾಪದಿಂ ಮುಂದೆಸೆವ ।
ದಾದಿಯಂ ನೋಡಿ ಬೆಸಗೊಂಡ ಗಂಧರ್ವೇಶನಣುಗಿಯಿರವಂ ತವಕದಿ ॥ (3)

ಬರುವ ಸಮಯದಿ ಬೇಗ ಕರದಿ ಪಾವುಗೆವಿಡಿದು ।
ಕರಿಗಮನೆ ಕಡೆವಾಗಿಲಲ್ಲಿರ್ದು ವಿದ್ಯುವಿತ ।
ಕರಲಾಘವನ್ನಿತ್ತು ತಕ್ಕೈಸಿ ಕರದೊಯ್ದು ನಸುನಗೆಯು ಪಸರಿಸುತಲಿ ॥
ಭರದಿಂದ ಕುಳ್ಳಿರಿಸಿ ಮುಖನೇತ್ರಗಲ್ಲಗಳ ।
ನಿರದೆ ಚುಂಬಿಸಿ ಗುಟುಕ ತಾಂಬೂಲ ನೀವುತೀ ।
ಪರಿಯಲುಪಚರಿಸಿ ಕಂಗೆಸೆಯಲೇಂ ಕತದೊಳೆಂದರಸ ತಾ ಬೆಸಗೊಳಲ್ಕೆ ॥ (4)
ದೇವಸಂವರ್ತದಕಟಾಟಂಕ ದುರುಕೋಪ ।
ಭಾವದಿಂ ತೊಡವುಗಳ ತೊಡಕುಗಳನುಳಿದು ರಾ ।
ಜೀವಾಕ್ಷಿ ತಿರೆಯೊಳೊರಗಿರ್ಪಳಾರೊಡನಿದನ್ನುಸುರದಲೆ ಮೌನವಿಡಿದು ॥
ದೇವಿಯ ಮನೋರಥವ ತಿಳಿಯಲಾರಿಂಗಳವು ।
ಕೋವಿದಾಗ್ರೇಸರ ಭವತ್ಪಾದದರುಶನದ ।
ಲಾವದಿಂ ನಿಜಮನೋರಥವ ವಿಜ್ಞಾಪಿಸುವರೊಂದೆಣಿಕೆ ಮನಕೆ ಜೀಯ ॥ (5)
ಕ್ರೂರತರನಿರ್ಘಾತಪಾತದಿಂದದ್ರಿಯು ನಿ ।
ವಾರಮಪ್ಪಂತಧಿಕಮಪ್ರಿಯದ ನುಡಿಗಳಿಂ ।
ಧಾರುಣೀಪತಿಹೃದಯ ಮರುಗಿತದನೇನೆಂಬೆ ಮಾರನ ಉದಾರಜಸವ ॥
ನಾರಿಯರ ಬಲೆಗೆ ಸಿಕ್ಕಿದ ಪುರುಷನತ್ಯಧಿಕ ।
ವೀರನಾದೊಡಂ ನೀರಿನಿಂ ಕನೀಯಸನಪ್ಪ ।
ನೋರಂತೆ ನನ್ನಿಯೆಂಬುದಕರಸ ದೃಷ್ಟಾಂತಮಾಗಿ ಮರುಳಾಗಿ ಸೋಲ್ದ ॥ (6)
ಬಂದುದೇಂಕತದಿ ಕೋಪಂ ದೋಷಮಾರಿಂದ ।
ಪೊಂದಿತಪರಾಧಮಾರಿಂದಾಯ್ತು ನಿಜಪ್ರಾಣ
ಕೆಂದಧಿಕಮೆನಿಪರಸ ಮುನಿದೊಡೆನ್ನಸುವೆಂತು ಸನುಮತಿಸಿ ಸುಖದೊಳಹುದು ॥
ಎಂದು ತನ್ನೊಳ್ ತಾನೆ ತೊಳಲುತಲಿ ಸತಿಯಿರ್ಪ ।
ಮಂದಿರವ ಸಾರಿ ಸ್ವರ್ಗಚ್ಯುತಾಪ್ಸರನಾರಿ ।
ಯಂದದಿಂ ಭೂತಳದಿ ಪೊರಗಿರ್ಪ ವಾಹೀಕನಂದನೆಯ ಕಂಡನರಸ ॥ (7)
ಸಗ್ಗಿಗರ ಪಿರಿಯನೊಳ್ ಮುನಿದು ಭೂಮಿತಳಕೆ ।
ನುಗ್ಗಿದಳೊ ನುಡಿವೆಣ್ಣು ಬಿಡುಗಣ್ಣರರಸನಿಂ ।
ದೊಗ್ಗಡದ ಶಚಿಯೊ ಬಗ್ಗನಪ್ಪಳಿದು ಬಾದ್ಯೆಕೆಲ್ವೆಟ್ಟನಣುಗಿಯೊ ನೋಡಲು ॥
ತಗ್ಗಿದುದೊ ಮುಗಿಲೊಡ್ಡನುಳಿದ ಪೊಸಮಿಂಚಿದೇ ।
ನುಗ್ಗಡದ ಶೌರಿಯರಸಿ ಯರಸಿಯೊ ಕಿನ್ನರಿಯೊ ।
ಅಗ್ಗಳದ ಚೆಲುವಾಂತ ಸತಿಯು ಕಾಣುತ ನೃಪಂ ಮೂದಲಿಸಲನುಗೈದನು ॥ (8)
ಮನಸಿಜನ ಮದದಾನೆ ಮತ್ಪ್ರಾಣವಲ್ಲಭೆಯೆ ।
ಕೆನಿಸಿದಾರಿಂದಾಯ್ತು ಮೃದುಲತರಮಾಲತಿಯ ।
ನನುಸರಿಪ ತನುಲತೆಯು ತಪ್ತನಾಗಿಹುದಿದೇಂ ಕಾರಣದಿ ತೊಡವುಗಳನು ॥
ಸನುಮತಿಸದುಳಿವೇಕೆ ನೆಲದೊಳೊರಗಿಹೆ ಲೋಕ ।
ನಿನಗದೇನಪಕಾರಮೆಸಗಿದರ್ ಪೇಳೆನ್ನ ।
ಘನಕಸೂಯಂ ಪುಟ್ಟ ಕೊರಗುವಂದದಿ ಮೌನವಿಡಿದಿರ್ಪೆ ಯಾತಕರಸಿ ॥ (9)

ಬಡವರಂ ಧನಿಕರಂ ಮಾಡೆಂದರುಂ ಮಾಳ್ಪೆ ।
ಪೊಡವಿಪತಿಯುಂ ನಿಸ್ವನೆನಿಪೆಂದರೆನಿಪೆ ಮುಂ ।
ಗಡೆಯ ಶಿಕ್ಷಿಪ ಮಹತ್ತ್ವಪರಾಧಿಗಳ ಸಲಹವೇಳ್ಕೆನಲ್ ಕಾಯ್ವೆ ವಿನಯ ॥
ನಡೆದಿರ್ಪನಾದೊಡಂ ಪೊಯ್ಯೆನಲ್ ಪೊಯ್ದಿಡುವೆ ।
ನುಡಿದೆರಡನಾಡೆನೆನ್ನಾಣೆ ಯೆನ್ನಯ ಪ್ರಾಣ ।
ದೊಡತಿಮನದಿಷ್ಟವಂ ಬೇಡು ಕಾಡದೆ ಬರಿದೆ ಮೌನದುಃಖವನಾಳದೆ ॥ (10)

ನವಶಿರೀಷದ ಕೋಶವನು ಪೋಲ್ವ ನಿಜತನುವ ।
ನವನಿಯೊಳಗೀಡಾಡಿ ಪಾಂಸುಸಂವಳಿತಮೆನೆ ।
ನವಕಿಸಾಲಸುಪಾಣಿಯಿಂದಾಸ್ಯಶಶಿಯನುಂ ಮುಚ್ಚಿ ಬೈಚಿಟ್ಟಳುತ್ತಲಿ ॥
ಖವಣಿಗೊಳ್ಳಲದೇಕೆ ಬನ್ನವಂ ನಿಟ್ಟಿಸಲು ।
ಯುವತಿಯೆನ್ನಯ ಚಿತ್ತಮನುತಾಪವಾಂತಿಹುದು ।
ತವಕದಿಂದೆನ್ನನೆರೆದುಳುಹು ಬೇಡಿದುದೀವೆನಿದು ಸನ್ನಿ ಯರಸಿ ಸರಸಿ ॥ (11)

ತನು ಧನಂ ಜೀವನಂ ನೀನಲ್ಲದನ್ಯರಿಂ ।
ದೆನಗದಾರ್ ತೆತ್ತಿಗರು ನಿನಗಿಂದಧಿಕವೇನು ।
ಮನವೊಲಿವುದಂ ಬೆಸಸು ಮಾಡದುಪಹತಿಯೆನ್ನಸುಗಳನ್ನಂಡಲೆಯದೆ ॥
ಎನಿತಿಷ್ಟಮುಂಟದಂ ಕೈಗೈವೆ ಬೇಡು ನಿನ ।
ಗನುಮಾನವೇಕೆ ನಚ್ಚಿದವ ಚುಚ್ಚುವುದೇನು ।
ವನಜಾಕ್ಷಿ ಯಿತ್ತ ಮಾತಂ ತಪ್ಪೆ ನಿದನೊಪ್ಪೆ ಸುಖಿಯಪ್ಪೆ ಕುಶಲನಪ್ಪೆ ॥ (12)

ಜಗತಿಯೊಳು ವಿಷಯಲಂಪಟರಿಗೆ ವಿವೇಕಗಳು ।
ಸೊಗಯಿಸುವುದಾದು ಸ್ಮರವಶನಾದ ಬಳಿಕಾತ ।
ಗೊಗುಮಿಗೆಯ ಬುದ್ಧಿಯುಂ ಮಸುಳ್ವುದು ದುರ್ಯಶವನಾಂತಪುದು ತಾಂ ತಪ್ಪದು ॥
ಬಗೆಗಗೇಚೋರ ಕೃತ್ಯಗಳ ನೆಸಗಲಿಚ್ಛೈಪೆ ।
ನಗಣಿತದ ದುಷ್ಕೃತ್ಯಗಳ ಮಾಳ್ಪುದನುದಿನಂ ।
ಬಗೆಬಗೆಯ ತೊಳಲಿಕೆಯನೊಪ್ಪುದಿಹು ದಿಟ್ಟಮೆನೆ ಕಾಮಿಗಳ ಹೃದಯಮಬಲೆ ॥

ಕೊಂಕಣಂ ಸೌವೀರ ಸೌರಾಷ್ಟ್ರ ಮಾಗಧಂ । [(13)
ತೆಂಕವಂಗಾಂಗ ಪ್ರಾಚೀನ ವತ್ಸಲ ನಿಷ್ಕ ।
ಳಂಕೆ ಕೋಸಲ ಕಾಶಿಯಾವ ಭೂಮಿತಳದೊಳು ವಿತತಜಾವಿಕ ಧನವನು ॥
ಶಂಕೆಸದೆ ಕೊಟ್ಟಪೆನು ವೃದ್ಧಕರುಣಾಪಾತ್ರ ।
ಕಿಂಕರನೆನುತ್ತ ಮಮತೆಯೊಳುಂ ಭವತ್ಪಾಣಿ ।
ಪಂಕಜದೊಳೆನ್ನುರವ ನೊಲಿದೊರಸಿ ಕೃತಿಯೆನಿಪುದರಸಿ ಮೋಹನದ ಸರಸಿ ॥ (14)

ಮನುಮಥನ ವರನಾಗಿ ಮಮತೆವೆತ್ತೀಪರಿಯ ।
ಇನಿನುಡಿಯಲುಪಚರಿಸುವಿನಿಯನಿರವಂ ನೋಡಿ ।
ವನಿತೆ ಕ್ರೂರತೆವೆತ್ತ ನುಡಿಗಳಿಂದಿಂತೆಂದಳೆದೆ ಝಲ್ಲು ಝಲ್ಲೆಂಬೊಲು
ಎನಗದಾರಿಂದಲಪಕಾರ ಗ್ರಹರೋಗಾದಿ ।
ಜನಿತದಾಯಾಸಮಿನಿತಿಲ್ಲ ಕೊಟ್ಟರ್ಪ ವರ ।
ಮನವನಂಡಲೆಯುತಿಹವಿದನರಿತು ಶಪಥದಿಂದುಸುರೆನಲ್ ಬಿನ್ನವಿಪೆನು ॥ (15)

ಮಡದಿಯಾಡಿದ ನುಡಿಯನಾಲಿಸುತ ಭುಲ್ಲವಿಸಿ ।
ಪಿಡಿದೆತ್ತಿ ಕುಳ್ಳಿರಿಸಿ ಕುಸ್ತರಿಸಿ ಕೂರ್ಮೆಯಿಂ ।
ಪೊಡವಿಪತಿ ಮಾತುತ್ತರವನಿತ್ತ ಕೇಳೆನ್ನಮನದನ್ನೆ ಜೀವಾತುವೆ ॥
ನಡೆಯರಿತು ಮಗುಳದಂ ಕೇಳ್ವಯಾದೊಡೆ ಪ್ರಾಣ
ದೊಡತಿ ನಿನಗಿಂದನ್ಯಮೇನುಂಟು ಧರ್ಮದಿಂ ।
ದುಡಿವ ಸುಕೃತದ ಮೇಲನಾಣೆಗೀಯದೆ ಮಾಣೆ ಪೇಳ್ವೆ ಕೇಳುವುದು ಜಾಣೆ ॥
ಜೀವನಕ್ಕಿಂದಧಿಕ ಮೆನಿಸುವಂ ಶ್ರೀರಾಮ । [(16)
ಭಾವಿಸಲ್ ನೀನರಿವೆ ಯಾ ಮಹಾಪುರುಷನಿಂ ।
ದಾವವಸ್ತುವು ಲಕ್ಷ್ಯಮೆನಿಸದಾತನ ಮೇಲನಾಣೆಯನ್ನಿಟ್ಟು ಪೇಳ್ವೆ ॥
ಈವಸುಧೆ ದನ ಜೀವ ಮುಂತಾದುದಂ ಕೇಳ ।
ಲೀವೆನಿದು ಪುಸಿಯಲ್ಲವೆನ್ನ ಕುಲದಧಿನಾಥ ।
ಪಾವನಾರುಣನಾಣೆ ಪೇಳು ಬಿಡದೆನ್ನಾಣೆ ಕಾಣೆ ನಿನಗನ್ಯವಿನಿತ ॥ (17)
ಈಶನಾಡಿದ ನುಡಿಯ ಕೇಳ ನುಡಿದಳ್ ಭೃಂಗ ।
ಕೇಶಿ ಸುರ ಗಾಂಧರ್ವ ಯಕ್ಷಕಿನ್ನರರುಂ ಧ ।
ನೇಶ ರವಿ ಶಶಿ ತಾರೆ ಹರಿಹರ ಮಹಾಸುರಗ್ ವಿಧಿ ಭುವನ ಸಾಕ್ಷಿಯಾಗಿ ॥
ಆಶರಾಂತಕ ನುಡಿಯ ಕುರುಪಿಟ್ಟ ವರಗಳನು ।
ಮೋಶನೆಡೆಯೊಳಗಿತ್ತ ಕಥೆಯನುಂ ಸ್ಮರಿಸದಿಹೆ ।
ಈಶ ಮತ್ತವನಾನು ವಿಜ್ಞಾಪನಂಗೈವೆ ಸರ್ವರುಂ ನೋಡುತಿರಲು ॥ (18)
ಮೊದಲು ದೇವಾಸುರರ ಕದನಸಮಯದಿ ನಿನ್ನ ।
ಬದುಕಿಸಲ್ ಮುರಿದಚ್ಚಿಗಿತ್ತಾನು ಕರವಜಯ ।
ಪದವ ಸಾರಿಸಲದಕೆ ಮೆಚ್ಚಿ ವರಗಳನೆರಡನಿತ್ತೊಡವ ನಿನ್ನಲ್ಲಿಯೆ ॥
ಸದನಗೈದಿಟ್ಟಿರ್ದೆನೀ ಸಮಯದೊಳಗದಂ ।
ಬೆದಕಲನುಗೈದೆ ಯೆನಗಿತ್ತ ವಸ್ತುಗಳೆರಡೆ ।
ಮುದದಿಂದಪಾಲಿಪುದುಮೂಲೋಕಮೆಚ್ಚುವೊಲ್ಮನದೊಲುಮೆಗಿಂ ಪೆರ್ಚುವೊಲ್ ॥
ನುಡಿಯ ಸತ್ಯಂಗೆಯ್ವುದನುಮಾನಮೆನಿಸಿದರೆ । [(19)
ಬಿಡುವೆನಸುಗಳ ತೃಣೋಪಮವಾಗಿ ಭವದೀಯ ।
ದಡಿಯೆಡೆಯಲೆಂದು ವಾಗ್ಬಂಧನಂಗೈದು ಮತ್ತುಸುರ್ದಳಸ್ವಾರ್ಥದಿರವ ॥
ತಡೆಯದೀ ರಾಘವಗೆ ಯುವರಾಜಪಟ್ಟಕಂ ।
ದೊಡನೆ ನೇಮಿಸಿದ ವಸ್ತುಗಳಲ್ಲಿ ಭರತಂಗೆ ।
ಪೊತವಿಪತ್ತಿಗಳ ಮುಂದೆ ಯುವರಾಜಪಟ್ಟಾಭಿಷೇಕಮಂ ಮಾಳ್ಪುದೊಂದು ॥
ಚೀರವಸನಗಳುಟ್ಟು ಮುನಿಗಳಂವದ ವೇಷ । [(20)
ಧಾರುಣಿಯೊಳಂ ರಾಮ ಪದಿನಾಲ್ಕುವರುಷ ಸಂ ।
ಚಾರಮಟವೀದೇಶದಲ್ಲಿರ್ಪ ತೆರದೊಳಂ ಮಾಳ್ಪುದೆರಡನೆಯ ವರದಿ ॥
ಧೀರ ಕುಲ ಶೀಲ ಸತ್ಯವ ಸಲುಹು ಧರ್ಮಮು ।
ದ್ಧಾರಮಂ ಮಾಡಿ ನಿಖಿಳಾವನೀಪಾಲರೊಳು ।
ಚಾರುಕೀರ್ತಿಯ ಪಡೆವುದೆಂದು ಮನದಿಷ್ಟಪನೊರೆದಳತಿಲಜ್ಜೆದೊರೆದು ॥ (21)

ಗರವೆರೆದ ಗಾಳಿ ಸೋಂಕಲು ಜೀವಸಂದೋಹ ।
ಪರವಶವಪ್ಪುದುವಂದದಿ ಸತಿಯು ದುರ್ವಾಕ್ಯ ।
ಸಿರವನಾಲಿಸಿ ಮಹಾರಾಜ ಮೂರ್ಛಾಕ್ರಾಂತನಾಗಿ ಚಿಂತಿಸಿದ ಮನದಿ ॥
ಕರಣಾವ್ಯೈಕಾರಿಕವೊ ಕನಸೊ ನೆನಸಿನ ಭ್ರಮೆಯೊ ।
ಬರಲಿದೇಂ ಕಾರಣಮೆನುತ್ತ ಕಂಗಳ ತೆರೆದು ।
ಪುರಶಿವಿಹ ಪತ್ನಿಯಂ ನೋಡಿ ವ್ಯಾಘ್ರಿಯಂ ಕಂಡ ಮೃಗದಂತೆ ಕಳವಳಿಸಿದ॥ (22)

ಮನದೊಳಗೆ ತೊಳಲುತಂ ಮತ್ತೆ ನಿಟ್ಟುಸಿರ್ವಿಡುತ ।
ಕನಲಿ ಕಂಗಳ ಕೆದಂ ಕಾಂತೆಯಂ ನೋಡುತಂ ।
ಪುನರಪಿ ಮಹಾಮೋಹಮಂ ಪೊಂದಿ ಮೈಮರೆದು ಮತ್ತೆ ಸಂಜ್ಞೆಯನು ತಳೆದು ॥
ವನಿತೆಯಂ ಧಿಕ್ಕರಿಸಿ ಪಾಪೆ ಕುಲಘಾತಿನೀ ।
ಮನುಜಾಧಿರಾಮನಿಂದೆನ್ನಿಂದ ಲಾದರುಂ ।
ನಿನಗದೇನಪಕಾರ ಬಂದಿಹುದು ದುರ್ಮೇಧೆ ದುರ್ವಿಚಾರಿಣಿ ಮರಾತ್ಮೆ ॥ (23)

ಒಡುವೆ ರಾಜ್ಯವ ಧನವ ಕೌಸಲೆ ಸುಮಿತ್ರೆಯರ ।
ನುಡಿಯಲೇಮ್ಮನು ರಾಮಗಪ್ರಿಯವ ಸತ್ಯದಿಂ ।
ಪೊಡವಿಯಂ ಮೆಚ್ಚಿಸುವ ಪಿತೃಮಾತೃವತ್ಸಲಂ ಹರಿವಶ್ಯನುದಯಿಸದಿರೆ ॥
ತಡೆಯ ಮಳೆ ಸಸ್ಯದಿ ಲೋಕವಸುಗಳನೆಂತು ।
ಪಿಡಿದಪರು ರಾಮನನ್ನರೆನಿಮಿಷ ಕಾಣದಿರ ।
ಲೊಡಲುಳಿವುದೆಂತು ಧರ್ಮಾತ್ಮನಿಂ ನಿನಗದೇನಪಕಾರವಾಯ್ತು ಹೇಳ ॥ (24)

ಮಾತೆಗಿಂದಧಿಕತರವಾಗಿ ಸೇವಿಪ ನಮಿಪ ।
ನೀತರವನೆನ್ನೊಡನೆ ಹೇಳುತಿಹೆಯನುದಿನಂ ।
ನೀತಿ ತಪ್ಪಿದುದೇನು ನಿಜನಾಶ ಕುಲನಾಶಕೆಂದು ನಿನ್ನಂ ತಂದುದು ॥
ಖ್ಯಾತಿವಂತಂ ಗುರು ವಿನೀತ ದಾಕ್ಷಿಣ್ಯಪರ ।
ನೀತಿಜ್ಞಶಾಂತಿದಾತಂ ಕೃತಜ್ಞಂ ಸತ್ಯ ।
ವಾತುಳ್ಯ ಲೋಕಸಮ್ಮತ ರಾಮನೆನ್ನಿಂತು ಕಳುಪುವೇಂ ಹೇರಡವಿಗೆ ॥ (25)

ಲೋಕವಂ ಸತ್ಯದಿಂ ದೀನರಂ ದಾನದಿಂ ।
ಪ್ರಾಕಟದ ಶುಶ್ರೂಷೆಯಿಂ ಗುರುಗಳಂ ಶರಾ ।
ನೀಕದಿಂದರಿಗಳಂ ಗೆಲಿದಿರ್ಪ ನತಿದಯಾಪರ ಸಾಧುಜನಸೇವಕಂ ॥
ಈ ಕುಮಾರನನಡವಿಯೆಡೆಗೆಂತು ಕಳುಪುವೆಂ '
ಶೋಕವನಿದೇಂಕತದಿ ತಂದಿಟ್ಟೆ ಪಾಪಿಷ್ಠೆ ।
ಲೋಕರೊಳ್ ಹೇಳ್ವೆನೇನಪರಾಧವಾತನಿಂವಾಯಿತೆಂದು ದುಶ್ಚರಿತ್ರೆ ॥ (26)

ಭರತನಿಂದಧಿಕತರವೆಂದೆಣಿಸು ರಾಮನಂ ।
ದುರುಳಬುದ್ಧಿಯದೇನು ಬಿಡು ಸಾಧುಮಾರ್ಗವನು ।
ಸರಿಸು ಪಿತೃಮಾತೆಯರ ಕುಲವೆನ್ನ ಕುಲವನುಂ ಅಕಳಂಕವೆನಿಸು ನಿನ್ನ ॥
ಚರಣಕೆರಗುವೆ ಕುವರನಂ ಕಾಯ್ದು ಕೀರ್ತಿಯಂ ।
ಪರಿಸೆಂದು ದೈನ್ಯನುಡಿಗಳಲಿ ಹೇಳದ ಪರಿಯು ।
ಭರತರದ ನುಡಿಗಳಂ ಧಿಕ್ಕರಿಸುತಿಂತೆಂದಳಾಗಳ್ಳೆಯನಂದನೆಯೊಲು ॥ (27)

ಮೊದಲಾನಿಲಿಂಪರೆಡೆಯೊಳ್ಸಗುತ ಪರಮಿತ್ತು ।
ತುದಿಯೊಳನುತಾಪಗೊಳ್ವುದಾವ ಮೋಧೆ ಯು ।
ಭ್ಯುದಯ ಗತಜಲಸೇತು ಬಂಧದಿಂ ಫಲಮದೇನಿಹುದನ್ಯತ್ರ ವಿಫಲಮಲ್ತೆ ॥
ಸದಯ ರಾಜರ್ಷಿಗಳ ಸಭೆಯೊಳುಂ ನೀನೆಂತು ।
ಪದುಳದಿಂ ಕುಳ್ಳಿರ್ದು ಧಾರ್ಮಿಕತ್ವಾದಿಗುಣ ।
ಸದನ ಜಯಸಿರಿಯ ಪೊಗಳಿಸಿಕೊಳ್ವುದೆಂತು ನಿಜಭಾಷೆಗೂಣಯಬಂದೊಡೆ ॥

ಧುರದೊಳಗೆ ಜೀವಮಂ ತೊರೆಯಲೋಸುಗ ಸೈಕೆ [(28)
ಗೊರೆದಿತ್ತು ಸುತನ ಮಾತುಳನೆಡೆಗೆ ಕಳುಪಿ ಬಂ ।
ಧುರದ ಸಿರಿಯುಂ ಪಿರಿಯಸುತನಿಗರ್ಪಿಸಿ ಸುಖದಲಿರ್ಪ ಕೌಸಲ್ಯೆ ಸಹಿತ ॥
ಪಿರಿದು ಪೋದುದು ಸಮಯ ಧರ್ಮಜ್ಞನಾನೆನ್ನು ।
ತೊರೆದಪೆಯ ದೊರೆಗಳದಿರಿನಲಿ ಯೊಮರ್ಬುದ್ಧಿ ।
ದೊರಕಿತೀಂ ಕಾರಣದಿ ರಘುಕುಲಕೆ ಕಲ್ಪಿಪವ ತರಲುದಿತವಾಯಿತೆನುತ ॥ (29)

ನುಡಿದ ಭಾಷೆಗೆ ಪುಸಿಯ ಯಾಚನೆಗೆ ಸಂಕಟಂ ।
ಕೊಡುಮೆಡೆಯೊಳಳಮನಂ ಮಾಡದತಿಧರ್ಮದಿಂ ।
ಪೊಡವಿಯಂ ಪಾಲಿಸಿದರಿಕ್ಷ್ವಾಕು ಸಂತತಿಯ ಲುದಿಸಿದರರಸುಗಳನುಸಯದಿ ॥
ಕಡೆಗೆ ಭೂಪಶ್ರೇಷ್ಠನವತರಿಸಿ ಸತ್ಯಮಂ ।
ಕೆಡಿಸಿ ಮಗುಳುತ್ತರವನಿತ್ತು ಸತ್ಕೀರ್ತಿಯಂ ।
ಪಡೆಪೆನೆಂದೆಣಿಸಿರ್ಪ ಪಡೆದರೇ ಸುಕೃತಿಗಳೊ ಕೃತಿಗಳೊಡನಾಡಿದವರು ॥ (30)

ಸಮಯ ಮುಲ್ಲಂಘಿಪರೆ ಸಾಧುಗಳು ಲೋಕದೊಳು ।
ಸುಮನಸರ ಮುಂದಳರ್ಕಂ ನೇತ್ರವನ್ನಿತ್ತ ।
ಮಮತೆಯಿಂ ಶೈಬ್ಯ ಪಾರಾವತಕ್ಕೋಸುಗಂ ನಿಜಮಾಂಸವಿತ್ತುದರಿಯ ॥
ಕ್ರಮದಿಂದಲುದಧಿ ಮರ್ಯಾದೆಯಂ ಮೀರದಿಹ ।
ಸಮಲಮತಿಗಳು ಸತ್ಯಕಾಣಯಂ ಪುಟ್ಟದೊಲು ।
ಸಮತೆಯಿಂದಿಹರದಂ ತಿಳಿದುತಿಳಿದೆಪರಿಯ ಭ್ರಮೆಯ ನಾಳುವರ ದೊರೆಯ ॥ (31)

ಪುಸಿಯಾಗಲದು ಸತ್ಯವಾಗಲದು ಧರ್ಮ ಸಂ ।
ಪಶವಾಗಲನೃತವಾಗಲಿ ಕೊಟ್ಟಭಾಷೆಗಂ ।
ನುಸುಳು ಜನಿಸದ ತೆರದಿ ಪಾಲಿಪುದು ಮೋಹದಿಂ ಜಾಗೆನಿಸದೀಕ್ಷಣದಲಿ ॥
ಪೊಸಸಂಪನೆಂಜಲಿಸಿ ಪಾದದೆಡೆಯೊಳ್ ಕೆಡಪ ।
ದಸುಗಳುಳಿಸೆಂ ರಾಮಗಭಿಷೇಕಮಾದೊಡೀ ।
ವಸುಮತಿಯಲರೆನಿಮಿಷ ಜೀವದಿಂದಿರೆನಿದಕೆ ಪುಸಿಯಿಲ್ಲ ರಸೆಯರಸನೆ॥ (32)

ಅರಸುತನನಣಗಾಗಲ್ನೋಡಿ ಕೌಸಲ್ಯೆ ।
ಹರುಷದಿಂ ಹಿಗ್ಗುತಿರಲಾಕೆಯುದರೊಳಗಾನು ।
ಕರಗಳಂ ಮುಗಿಯುತಲಿ ಬಾಳ್ವುದದರಿಂ ಮೃತಿಯೆ ಕುಶಲಮದು ಸತ್ಯಮೆನಗೆ ॥
ತರುಣ ಭರತನ ಮೇಲನಾಣೆ ರಾಮನ ವಿಪಿನ ।
ಕರಗಿಸದೆ ಮಮತೆಯಿಂ ಕೊಟ್ಟಭಾಷೆಗೆ ತಪ್ಪಿ ।
ಪೊರೆಯೆನಸುಮಂ ಧರಾವಲಯದೊಳ್ ಸತ್ಕೀರ್ತಿ ಸ್ಫೂರ್ತಿಯಪ್ಪಂತೆಸಗುವೆಂ ॥ (33)

ಉರಚರಿಸಿ ಭೂಷಣಾವಳಿಗಳನಿತಿತ್ತೊಡಂ ।
ಕುಪಿತ್ರದಿಂ ಧಿಕ್ಕರಿಸಲಾನೊಡಂಬಡೆ ರಾಮ ।
ವಿಪಿನಮಂ ಸಾರ್ವನ್ನ ಸತ್ಯಮಿದು ಮದ್ವಾಕ್ಯ ಮರಳಿ ನಾಂ ಪೇಳ್ವುದಿಲ್ಲ ॥
ಶಪಥಮೆಂದೊರೆದು ಮೌನದೊಳಿರ್ದ ಸತಿಯಿರವ ।
ನೃಪಲಲಾಮಂ ನೋಡಿ ವ್ಯಥಿತಮಾನಸನಾಗಿ ।
ತಪಿಸುತಿಂತೆಂದ ನಿಟ್ಟುಸಿರ್ವಿಡುತ ಧಿಕ್ಕರಿಸಿ ವಿನಯನತಿದೈನ್ಯತೆರದಿ ॥ (34)

ಅತಿಕ್ರೂರತರವೃತ್ತಿ ಯಾರಿಂದಲುಪದೇಶ ।
ಹಿತಮಿದೆಂದರಿವೆಂತು ಭರತಂಗೆ ರಾಜ್ಯಮಂ ।
ಪ್ರತಿಕರಿಸಿ ರಾಮನಂ ಕಾನನಕೆ ಕಳುಪೆಂದು ಪೇಳ್ ಮನ ಬಂದುದೆಂತು ॥
ಮತಿಯು ವಿಕಳತೆಯೊ ಗರಸೋಂಕಿದುದೊ ದುರ್ಮೇಧೆ ।
ಧೃತಿಯೊಳಂ ನಿರ್ಲಜ್ಜೆಯಾಂತೆಂತು ಭಾಷಿಸುವೆ ।
ಕ್ಷಿತಿಯೊಳೀ ದುರ್ವಚನ ಮಾರೊಡಂಬಟ್ಟಪರು ಪಾಪಿಷ್ಠೆ ಕುಲಪಾಂಸಿನಿ ॥ (35)

ಅರಿಯದಾದೆನು ಕುಲವಿನಾಶಿಯೆಂಬುದ ಮುನ್ನ ।
ತರುವೆಡೆಯು ಮತ್ಕೃತಿಯು ಮದ್ವೈಭವಮುಯವಾಯ್ತು ।
ತೊರೆವುದೀ ದುರ್ವಿಷಮತರಮಾದ ವಾಣಿಯಂ ರಾಮನಿಂದಧಿಕ ಭರತ ॥
ಧರೆಯನಾಳಲಿ ಗಹನಕೇಂ ನಿಮಿತ್ತದಿ ರಾಮ ।
ನರರಿಗೆಂದೊರೆವೆಯಾತನ ಕಳುಪಲೀ ಲೋಕ ।
ಹರುಷಿಪರದೆಂತು ಕೇಳದಿಗುತ್ತರಮೆಂತು ಪೇಳುತೊಡಗಬಡಿವೆ ಜನರ ॥ (36)

ಬಂದಿಹರನೇಕಭೂಮೀಶಬಾಂಧವನಿಚಯ ।
ಬಂಧುರದ ಹರುಷದಿಂದವನರೆಡೆಯ ಸುತನಿಗಾ ।
ನಂದದಿಂ ಯುವರಾಜಪಟ್ಟಮಂ ಕಟ್ಟುವಗೆ ನಿಶ್ಚೈಸಿ ಪೇಳ ಮಗುಳ್ ॥
ದಂದುಗಕ್ಕೊಳಗಾಗಿ ಸುತನ ವಿಪಿನಕೆ ಕಳುಪ ।
ಲೆಂದಪರದೇನು ಮಜ್ಜೀವನವು ಚಿರಕಾಲ ।
ದಿಂದಿರ್ದ ವಿಫಲ ಮಾಯ್ತ್ಯೈಸೆ ಮತ್ತಾಸಭೆಗೊಳೀನೆಂದು ಕುಳ್ಳಿರ್ದಪೆ ॥ (37)

ಆಲಯದೊಳುಳ್ಳಮರಧೇನುವಂ ಕಾನನಕೆ ।
ಚಾಲನಂಗೈದು ನಾಲ್ದೆಸೆಗೆ ಬಾಯ್ಬಿಡುವನೋಲ್ ।
ಬಾಲಿಶಂ ಪಂಕ್ತಿರಥ ಸರ್ವಗುಣನಿಲಯ ರಿಪುವಿಲಯನಂ ಕಳುಹಿ ವನಕೆ ॥
ಬಾಲ್ಯಾದಿವೃದ್ಧತೆಯೊಳಂ ಬುದ್ಧಿಯಿಂ ಪುರುಷ ।
ಪಾಲಿಸಿದನೆಂತು ಮೇದಿನಿಯನೆಂದಸುಗಳ್ ।
ಜಾಲಮಾದಿದರದಕುತ್ತರಮನೇ ನೀವೆ ಸ್ತ್ರೀವಶತೆ ಪಡೆದ ಜಾಲ್ಮ ॥ (38)

ಸಕಲಸದ್ಗುಣನಿಲಯ ಜಾನಕೀಜಾನಿಯು ।
ನ್ನಕಳಂಕ ಪೂರುಷನ ನಪ್ಪಲೇಂ ಕಪ್ಪಮಂ ।
ದಖಿಲಭುವನೇಶರುಂ ಬೆಸಗೊಳಲ್ಕಂ ಮುನ್ನ ಕೈಕೆಗಂ ವರಮಿತ್ತೆನು ॥
ಪ್ರಕಟ ಸತ್ಯಕೆ ತಪ್ಪ ಬಾರದೆನ್ನುತ್ತರಣ್ಯ ।
ನಿಕಟಕಂ ಕಳುಪಿದೆನೆನುತ್ತೊರೆಯಲಾ ನುಡಿಗ ।
ಳಕಮೆನಿಪುದದು ಸತ್ಯಮಾಗದಪಹಾಸಕ್ಕೆ ಬೀಜಮಹುದೇನೆಂಬೆನು ॥ (39)

ಸತಿಯಂತೆ ಸಖಿಯಂತೆ ದಾಸಿಯಂತರಸಿಯಂ ।
ತತಿಕೆಯಾದ ಭಗಿನಿ ಮಾತೆಯು ತೆರದೊಳನುದಿನಂ ।
ಹಿತವ ನಾಚರಿಪ ಕೌಸಲ್ಯೆಗಾನಪ್ರಿಯವನೆಸಗೆ ನಿನಗೋಸುಗದಲಿ ॥
ಸುತನ ನಟವಿಗೆ ಕಳುಪಿ ಕೃತಕವನ್ನೆಸಗಿ ನಿಜ ।
ಕೃತಕೃತ್ಯನಂತೆಸಂಭಾವಣಿಂಗೈವೆ ನಾ ।
ಸತಿಯು ಮುಖಮೇನೆಂದು ನೋಳ್ಪೆ ವಿಪರೀತಕರದುಃಖ ನಿರವಧಿಯಬಾಧಿಯು ॥
ನಿನ್ನೊಳನುರಾಗ ಪೆಗ್ಗಳಿಸಿ ಮೋಸಕೆ ಸಿಕ್ಕ । [(40)
ಮನ್ನಿಸದೆ ಕೌಸಲ್ಯೆಯನು ಪೆರತಿಯೆಂದೆಣಿಸಿ ।
. . . . ॥
ಬನ್ನಬಡಿಸುತ್ತಲಿರ್ದಳಾ ಸಮಯದೊಳಗಣಾಗ
ನನ್ನುಮಟವಿಗೆ ಕಳುಪಿ ಮಗುಳಾನು ತನ್ಮುಖವ ।
ನಿನ್ನೆಂತು ನೋಡುವೆಂ ಕೇಳಲೇಂ ಪೇಳುವೆಂ ದುಷ್ಕೃತಿ ಯನರ್ಥಕಾರಿ ॥ (41)
ಸುತವರಗೆ ಕಾನನಕೆ ಕೋಸಲಾಧಿಪತನುಜೆ ।
ಪತನಗೈದಪಳಸುವ ವೈದೇಹಿಪತಿಯುಳದು ।
ಕ್ಷಿತಿಯೊಳರೆನಿಮಿಷಮಿರ್ದಪಳೆ ಯಾವಿಧವನ್ನು ನೋಡುತಾಂ ತನುವಿಡಿವೆನೆ
ಮತಿಹೀನೆ ಪ್ರಿಯನ ಪೋಗಾಡಿ ನೀ ಸಂಪದವ ।
ಪತಿಗೊಳಸಲಿಚ್ಛೈಸಿ ಪಡೆದವೆಯದೇನು ಸ ।
ದ್ಗತಿಯು ಜೀವವಕೊಳುವ ನೇಣಹಿತವೆಂದರಿದ ತೆರನಾಯಿತನರ್ಥಕಾರಿ ॥ (42)
ಕುಂಭಿನಿಗೆ ಜೀವನಾಸ್ಪದವೆನಿಪ ಶುಭಾಂಶು ।
ಬಿಂಬವದನನ ಸುತನ ಪೊರಡಿಸಲು ಲೋಕವು ।
ನ್ನೆಂಬರತಿಬಾಲಿಕಂ ಮತಿಹೀನ ದುರ್ವಿಷಯವಶನಾಗಿ ಪ್ರತಿಭೆಪೋಗಿ ।
ಅಂಬುಜಾಂಬಕೆ ಕೈಕೆಗಾಳಾದನೆಸ್ನುತ ವಿ ।
ಡಂಬನಂಗೆಯ್ಯದುಳದವರೆ ಧಾರುಣಿಯನ್ನು ।
ಕೊಂಬ ಬಾಡಬನ ಧಿಕ್ಕಾರವಂತೆ ತ್ರಿಭುವನೀಜಾತನೇಕಾಪ್ತವಾತ್ರ ॥ (43)
ಬಂದುದಂತದ ಕಾಣದೀ ಮನೋವ್ಯಥೆ ಲೋಕ ।
ಬಂಧುವಿನ ಕುಲಕೆ ದುಷ್ಕೀರ್ತಿ ಯಾಮನಂದನೆಯು ।
ತಂದು ಮನೆಯೊಳಗಿಟ್ಟು ಸುಖಿಯಪ್ಪೆನೆಂದೆಣಿಸಿ ಭ್ರಾಂತಿಯಿಂ ಮರುಳುಗೊಂಡು ॥
ಮುಂದೆಸೆವ ನೀಲಪನ್ನಗನ ಪೀಲನಗೈವೆ ।
ನೆಂದು ಕರದಿಂ ಪಿಡಿದ ಬಾಲನಂತಾಯಿತು ಯೆನ ।
ಗಿಂದು ಪೂರ್ವಾರ್ಜಿತದ ದುಷ್ಕರ್ಮ ಸಾಂಗದಿಂದಡಸಿತು ಭವದೂಪದಿ ॥ (44)
ಕಾಮುಕಂ ದುರ್ವ್ಯಸನಿ ಕಾಪುರುಷ ಪೆಂಡತಿಯು ।
ಪ್ರೇಮಮಂ ಗಳಸುವರೆ ಸದ್ಗುಣಾರಾಮನಾ ।
ರಾಮನಿಚ್ಚೈದ ದುರ್ಮನೀಷಿ ಬವುಕಿದನೆಂತು ಚಿರಕಾಲವೆಂದು ಜನರು ॥
ಸೀಮೆಯೊಳಗಾಡದುಳದವರೆ ಮದ್ವಂಶಭವ ।

ಹಿತಮಹಿತ ಮೆಂದರಿಯದಾವದಾನುಸುರಿದೊಡೆ ।
ಪತಿಕರಿಸಿ ಮಸ್ತಕದೊಳಾಂತು ಪೂಜಿಸುವ ನೀ ।
ಸುತನ ಸದ್ಧರ್ಮರೂಪನನೆಂತು ತೊರೆದಪೆಂ ಜೀವಮೆಂತುಳಿವುದೆನಗೆ ॥
ಪ್ರಥಿತಸಾಧುಗಳೆನ್ನ ನೆಣಿಪರಗ್ಗದ ಮಹೀ ।
ಪತಿಗಳೆಡೆಯೊಳಗೆಂತು ಜಸಮಪ್ಪುದಾರ್ಯ್ಯಸಂ ।
ಗತಿಯು ಬಿಟ್ಟೀ ನೆಲದೊಳರ್ದೇನುಫಲ ಮೂಢೆ ದುರ್ವಿನೀತಗಳನಾಡೆ ॥ (46)
ಕಂಸಲೆ ಸುಮಿತ್ರೆ ಜಾನಕಿ ರಾಮ ಲಕ್ಷ್ಮಣರ
ಪಾಂಸಲಾಗಾತ್ರ ಕೀರ್ತಿಯುತು ಪೊಂದಿದ ಜನಪ್ರ ।
ಶಂಸಮನ್ನುಳಿಸಿ ಸುತನಸುತ ರಾಜ್ಯವನಾಳ್ವರಿಚ್ಛೈಪೆ ದುರ್ವಿವೇಕ ॥
ರಂಶೆಯಂತೊಡಬಟ್ಟರಾಜಸುತೆಯೆನ್ನುತರಿ ।
ರಂಸೆಯಿಂ ಭ್ರಮೆಗೊಂಡು ಕೈವಿಡಿಸು ಕಡೆಯೊಳತಿ ।
ಹಿಂಸೆಗೊಳಗಾದೆ ಕೈಕಯವಂಶಪಾಂಸನಿ ಕೃತಘ್ನೆ ಕಪಟದ ಮಂದಿರೆ ॥ (47)
ಭರತ ನಿನ್ನಯ ನುಡಿಯನೊಪ್ಪಿ ರಾಜ್ಯವನಾಳ್ವ ।
ಹರುಷಕೊಡಬಟ್ಟನಾದೊಡೆ ಗತಾಯುಷ ಪಿತ್ರಗೆ ।
ಪರಕೃತ್ಯಮನ್ನೆಸಗಬೇಡ ಪಾಪಿಯ ಕೊಡದಿರಲು ಪ್ರಿಯನೆನಗೆ ನೋಡ ॥
ಕರುಣಮೆಳ್ಳನಿತಿಲ್ಲ ವಿನಯನಂ ಪೋಗಾಡಿ ।
ಧರೆಯ ಪಾಲಿಪೆನೆಂಬೆ ಯಿಕ್ಷ್ವಾಕುಸಂತತಿಯ ।
ತರಿಯುಬೆಳೆಸುವೆ ವಿಧವೆಯರು ಸ್ವೈರಿಪರಧಿಕತರಕ್ರೂರಮಶ್ಚರಿತೆಯಂ ॥ (48)
ಶಿಬಿಕಾಧಿರೋಹಣದಿ ವಾರಣದ ಮಸ್ತಕದಿ ।
ವಿಬುಧಹಯಮಂ ಪೋಲ್ವ ಘೋಟಕದಿ ದಿವ್ಯರಥ ।
ವಿಭವದಿಂ ಸಂಚರಿಪ ತಳರಡಿಯ ತಂಗದಿರಮುಖದ ಮೃದುತರಮೂರ್ತಿಯ ॥
ಸಭಯ ಕಂಟಕ ವೃಷತ್ತುರದ ಪಂಥಾನದೊಳ ।
ಗಬಾಜಾಕ್ಷನೆಂತು ಸಂಚರಿಪನೀ ದುರ್ಬುದ್ಧಿ ।
ಲಭಿಸಿತೆಂತಮರನಿಭಸಮ್ಗಣಾಕಾರನ ನೀಂ ಕಳುಪೆಂಬೆ ಕ್ರೂರೆ ಮೂಢೆ ॥ (49)
ಚಾರುತರ ಷಡ್ರಸೋಪೇತ ಮೃಷ್ಟಾನ್ನಮ ।
ನ್ನೀರಂತಶಂಪೂರ್ವಮೆನೆ ಸೂಪರೆಡೆಮಾಡು ।
ತಾಗೆಗಗಷ್ಠೆಯ ಸಮಯಮಂ ನೋಳ್ಪರಾಣ್ಮಸಾದನುದಿನಂ ಪ್ರೀತಿಯಿಂದೆ ॥
ಆರಾಮದೊಳ್ ತಿಕ್ತಕಟುಕಷಾಯಕವ ನಾ ।
ಹಾರಮಂ ಕೊಂಬ ದಿವ್ಯಾಂಬರಾಲಂಕೃತಂ ।
ಚೀರವಸನವೆ ತಾಳೆಂತು ದಿನಗಳೆವ ಸುಕುಮಾರ ಮಾರಸನ್ನಿಭಶರೀರ ॥ (50)
ಪರರ ದೋಷಮನೆಣಿಸ ಮರೆವ ನಪರಾಧಗಳ ।
ಪೆರರ ಗುಣವಂ ನುತಿಪ ಪೊಗಳದೊಡೆ ನಾಣ್ಚುತಿಹ ।
ಪರಿಕಿಪೊಡೆ ಸರ್ವಜೀವನದಯಾಪರ ಲೋಕಕಾಂತ ನಿಕ್ಷ್ವಾಕುಕಾಂತ ॥
ವರಧರ್ಮರೂಪನಂ ಕಾನನಕೆ ಕಳುಪೆನ್ನು ।
ತೊರೆವ ನಾಲಗೆ ಶತಚ್ಛಿದ್ರಮಾಗದೆ ಮಹಾ ।
ನರಕ ನಿನಗಲ್ಲದೇಂ ಸುಖಮಹುದೆ ದುರ್ಮೇಧೆ ಕೇಕಯಾನ್ವಯ ಪರ್ಭಾಕೆ ॥ (51)

ಮುಂದು ಸುಂಗುವ ಕಾಳರಾತ್ರಿಯಂ ಸತಿಯೆಂದು ।
ಹರುಷದಿಂ ನಿಳಯದೊಳಗಿಟ್ಟು ಕಾತರವಟ್ಟು ।
ತೆರಳ ಮನೆಗಟ್ಟು ಪೊರವಂಜು ಬರೆ ಮುಂಗಾಣದಲೆಸಿಕ್ಕಿ ಕೆಡೆವಂದದಿ ॥
ದೊರೆದುದು ಸ್ವಯಂಕೃತಂ ಶರೀರಪತನಕೆ ಮೂಲ ।
ಕರವಾಗಿ ಗಾನಸುಖಕರಿಯದೇಣವು ಸೋಲ್ದು ।
ಪೆರೆಗಾರದಲೆ ಸೊಕ್ಕುತಸುವ ನೀಗುವ ತೆರದಲೇಂ ಪೇಳ್ವೆಮತಿಯ ಗತಿಯ ॥ (52)

ಪದವಿ ಭರತಂಗಾಗಲೆನಗಿಷ್ಟ ರಾಮ ತಾಂ ।
ಪದುಳದಿಂ ನಿಜಗೃಹದೊಳಿರಲಿ ಮಜ್ಜೀವನವ ।
ಸದಯಹೃದಯದಿ ಕಾಯ್ದು ಜನಗಳನುಪೊಡೆ ನುಡಿಯ ನಂಗೀಕರಿಪುದು ॥
ಸುದತಿ ಕರಗಳ ಮುಗಿದು ಚರಣಕೆರಗುವೆ ನೆರೆದ ।
ಬುಧರೆಡೆಯುಲೆನ್ನ ಕುಲ ಭವದೀಯ ವಂಶಕ ।
ಭ್ಯುದಯಮಪ್ಪಂತೆ ಪಾಲಿಸೆ ಮುಂತೆ ಮೂಲೋಕ ಮೆಚ್ಚುಗು ಮಹೇಶನಂತೆ ॥ (53)

ಕಾಮಿನೀವಶನಾದನಾವನಾಗಲಿ ಮನೋ ।
ಭ್ರಾಮಕತ್ವದಿ ತ್ರೊಳಲಿ ಲಘಿಮನಪ್ಪಂತೆನ್ನ ।
ನಾಮಕೂಣಯಮಪ್ಪುದಿದು ತಪ್ಪದಖಿಳಾಮರೇಶನಪ್ಪಂಗಾಗಲಿ ॥
ಈ ಮಹೀಜಂತುಗಳಗೇಂ ಸ್ವತಂತ್ರವು ಕರ್ಮ ।
ದಾಮದೊಳ್ಬಂಧಿಸಿಯೆ ಸುಖದುಃಖದನುಭವವ ।
ರಾಮಪುರದರಗನೆಸಗುವನರಿಯದೀ ಪಿಥವ ನರಳುವರನೇಕಪರಿಯ ॥ (54)

(ಸಂಧಿ ೬, ಪದ 257.)

ಏಳನೆಯ ಸಂಧಿ-

ಸೂಚನೆ॥ ಧರ್ಮಾಪವಾದಕರತರದುಷ್ಟನುಡಿಗಳಂ ।
ಮರ್ಮಭೇದನಗೈದು ಕೇಕಯಾತ್ಮಜೆ ಪತಿಯ ।
ಶರ್ಮಗೊಡದಲೆ ರಾತ್ರಿಯಾಮ ಪರಿಹರಿತ್ರಮೆನಿಸಿದಳ್ ಮತ್ಸರದೊಳು ॥

ಮನದನ್ನೆ ಕೇಳ್ಚರಣಕೆರಗಿದಿನಿಯನ ನೋಡು ।
ತಿನಿಸು ಕರುಣಂ ಪುಟ್ಟದತಿಕ್ರೂರತರವಾದ ।
ವಿನಯವರ್ಜಿತಭಾಷೆಯಿಂದ ಧಿಕ್ಕೃತಿಗೈದಳೇನೆಂಬೆ ಡಾಕಿವಿಯೊಲು ॥
ಘನಕೆಲಜ್ಜೆಯ ಭೀತಿಯುಳದ ಮಾನಿನಿಯರಿಗೆ ।
ವನಧಿಮೇಖಲೆಯೊಳದಿರೇನಹುದು ಧರ್ಮಜ್ಞ ।
ಜನಪನ ತೃಣೋಪಮಿತವಾಗಿ ಕಂಡಳದೇನ ಪೇಳ್ವುದುಚ್ಚಾವಚವನು ॥ (1)

ಮುಗುಳೆದುರ್ವಚನ ಮನ್ನುಚ್ಚರಿಪ ಮಾನಿನಿಯ ।
ಮೊಗವನೋಡುತ ಕ್ರೋಧ ಪೆರ್ಚುತಾ ಜನನಾಥ ।
ಪೊಗೆಸುತ್ತಿದುರಿಯಂತೆ ಕನಲಿ ಕಿಡಿಗಳ ನುಗುಳ ಕಂಗಳಂ ಮರಳನುಡಿದ ॥
ಸುಗುಣ ಸತ್ಯವ್ರತ ಸದಾಚಾರನೀತಿಪರ ।
ನಗಣಿತ ಗುಣಾಢ್ಯನಮಿತಾಹ್ಲಾದಕರನಾದ ।
ಮಗನ ನಾರಣ್ಯಕೆಂತು ಕಳುಪುವೆ ಪಾಪಿ ದುಷ್ಕೃತಮನೇನನೆಸದೆ ॥ (2)

ಚಿರಕಾಲ ಸುತರಿಲ್ಲದಲಿ ತೊಳಲಿ ಬಳಲುತಂ ।
ಪರಿಪರಿಯ ಯಾಗವ್ರತಾಭಿಧಾನಗಳಿಂದ ।
ಸುರರ ಮೆಚ್ಚಿಸಿ ಪಡೆದ ಸುಗುಣರತ್ನಾಕರನ ಕುಲದೀಪನಂದಕರನ ॥
ಪರಮಪುರುಷನ ಜಿತಕ್ರೋಧನ ಜಿತೇಂದ್ರಿಯನ ।
ಸರಸಿಜಾಕ್ಷನ ಶೂರ ಕೃತವಿದ್ಯ ಸುವ್ರತನ ।
ಹರಿನೀಲನಿಭಶರೀರನ ನೆಂತು ಕಳುಪುವೆಂ ದಂಡಕಾವಿಪಿನದೆಡೆಗೆ ॥ (3)

ನೀಲಮೇಘಶ್ಯಾಮ ರಾಮನಭಿರಾಮನಂ ।
ಕಾಲಕಂಧರಧನುರ್ಭಂಗ ನುತ್ತುಂಗನಂ ।
ಲಾಲಿತಾಮರಧರಾಮರನಿಕರಪೂಜ್ಯನಂ ದುರ್ವಿನೀತತ್ಯಾಜ್ಯನಂ ॥
ಬಾಲಪ್ರವಾಳಪದ ನಿಖಿಲಸೌಖ್ಯಾಸ್ಪದ ಮಿ ।
ಶಾಲಾಕ್ಷ ನೌದಾರ್ಯದಕ್ಷ ಬುಧಲಕ್ಷನಂ ।
ಬಾಲಿಶ ದುರಾತ್ಮೆ ಕಾನನಕೆಂತು ಕಳಪುವೆಂ ಸರ್ಪ್ಯಾಪದಂಗಳೆಡೆಗೆ ॥ (4)

ಘಸಿ ಕ್ರೂರ ಕಾಠಿಣ್ಯ ಕಪಟ ವಂಚನೆ ಮಾಯೆ ।
ನುಸುಳು ನಿರ್ದಯ ಪಾಪ ಮಚುಚಿ ಸ್ವಾರ್ಥಪರತ್ವ ।
ರಸೆಯೊಳಂ ನಾರಿಯರ ಕುಲದಲವತರಿಸಿಪ್ಪವೆಂಬುದದು ಲೋಕವಾದ ॥
ಅಸಮಸಾಹಸ ನೃಶಂಸತೆ ದುಷ್ಟಚಾರಿತ್ರ ।
ಬಸರ ನೀನೆಂದರಿಯದಾದೆ ಮೋಸಕೆ ಸಿಲ್ಕಿ ।
ಬಿಸಿಲದೊರೆಯೊಳ್ ತೃಷೆಯ ಕಳೆಯಲಾಪೇಕ್ಷಿಸಿದ ಹರಿಣದಂತಾದೆ ಯಾಕೆಟ ॥ (5)

ಇಂತಗಿತದುಃಖಸಂತಾಪದಿಂ ಭೂಪನತಿ ।
ಚಿಂತಿಸುತ್ತಿರಲತ್ತಲರವಿಂದ ಬಾಂಧವ ನ ।
ನಂತಪದವಿನ್ಯಾಸದಿಂದಲಸಿ ಪಶ್ಚಿಮದ ಶಿಖರಿಯೊಳ್ ವಿಶ್ರಮಿಸಲು ॥
ಕಾಂತಿಯು ದುರಾರಾಧ್ಯತೆಯು ನೋಡಬಾರದಿ ।
ನ್ನೆಂತೆನುತಪಾಂಗ ಲೆಯು ತೆರದೊಳಾರಾಜೀವ ।
ಸಂತೆ ಕಂಗಳ ಮುಗಿದವಲ್ಲಿ ನಿಟ್ಟುಪರೆ ಸಾಧುಗಳು ದುಷ್ಕೃತಿಗಳ ॥ (6)

ಕತ್ತಲೆಯ ನೀಲಪಟಮುಟ್ಟು ನಕ್ಷತ್ರಗಳ ।
ಮೊತ್ತದ ವರಾಭಮಾಲಿಕೆಯ ಗಳದೊಳಗಿಟ್ಟು ।
ಮತ್ತೆ ಶೋಕಯುತನುಜೆಯುಪಯೋಗಂ ಲೋಕಮಂ ಮುಚ್ಚಿದೊಲ್ಲಾಸ್ತೆಸೆಯುನು ॥
ಕತ್ತಲಾವರಿಸಿ ಬಗೆ ಕಂಡು ಮರುಗುತಲಾ ನೃ ।
ಪೋತ್ತಮಂ ಬಾನೆಡೆಯಲಿಟ್ಟು ನಿಜದಿಟ್ಟಿಗಳ ।
ಮತ್ತೆ ಸಂಪ್ರಾರ್ಥಿಸಿದ ನಿರುಳೆಂಬ ದೇವತೆಯ ನಿರುತವಿಹುದಗಲದೆಂದು ॥ (7)

ನಿಬಿಡತರಹೃದಯವ್ಯಾಕುಲದಿಂದಲವನೀಶ ।
ನಬಲೆಯನ್ನೀಕ್ಷಿಸುತ ಮತ್ತೆ ಕರಗಳ ಮುಗಿಯು ।
ತಬುಬಾಕ್ಷಿಯನು ಬಹುವಿಧದಬ್ರಾರ್ಥನೆಗೈದ ದೈನ್ಯಪ್ರಲಾಪದಿಂದ ॥
ಪ್ರಬಲತರರಾಜ್ಯಲಕ್ಷ್ಮಿಯನಾಂತು ಸುತಸಹಿತ ।
ವಿಭವದಿಂದಿರು ಯಥೇಪ್ಸಿತಭೋಗಭಾಗ್ಯಮಂ ।
ಲಭಿಸಲೆನೆಗಿಷ್ಟಮೆನೆ ಜ್ಯೇಷ್ಠತಮ ರಾಮನಂ ಕಳಪದಿರು ಕಾನನಕ್ಕೆ ॥ (8)

ಕುಲವನೆನ್ನಂ ಸಲಹು ಕೀರ್ತಿಯಂ ಗಳಿಸು ನಿ ।
ನ್ನೊಲವಿಡಿದು ನಡೆವೆನಿದಕಾಂ ಮಸಿಯೆ ವಿಬುಧಜನ ।
ದೊಲುಮೆ ಯಶಂತ್ರಭಿರಾಮ ರಾಮನಂ ಕಾಣದಿರಲರೆನಿಮಿಷದೊಳಗೆ ಕಡೆಗೆ ॥
ತೊಲಗದಿರದೀಜೀವ ಸಗ್ಗದೊಳಗಾದೊಡೆ ।
ನ್ನಲಘುತರಸುಖ ಲಭಿಸದದರಿಂದೆ ನೀ ದಯಾ ।
ಕಲಿತೆಯಾಗುತ್ತಲೆನ್ನ ನುಡಿಯ ನೊಪ್ಪಂಬಡೆಯಲಪ್ಪುದತಿಸೌಖ್ಯ ನಿನಗೆ ॥ (9)

ಎಂದನೇಕವಿಧ ಪ್ರಪಂಚಮಂ ವಿಸ್ತರಿಸಿ ।
ಬಂಧುರಸ್ನೇಹದಿಂದೊಡೆವೆರೆದ ನುಡಿಗಳಂ ।
ಚಂದದಿಂದೆನಿತು ಕುಸ್ತರಿಸಲವರಿಂದಧಿಕಕ್ರೂರತರವಾದ ಗರದ ।
ದಂದುಗದ ಬಾಸೆಯಲಿ ಗಾಸಿಗಿಕ್ಕುತ ಬರ
ಲ್ಕಂದುತಂ ತೊಳಲಿ ಬಳಲುತ ದೀನನೆಂದದಿಂ ।
ದೆಂದು ಭೂವಿಹಾರವಣ ಮೂರ್ಛೆಯಂ ಪೊಂದುತಿರಲಿಟ್ಟಸುತ ಮತ್ತೆಂದಳು ॥ (10)

ಸತ್ಯವೇ ಪರಬ್ರಹ್ಮ ಧರ್ಮಂಗಳೆಲ್ಲವುಂ ।
ಸತ್ಯವನ್ನಾಶ್ರಯಿಸಿ ಕೊಂಡಿರ್ಪವದರಿಂದ ।
ಸತ್ಯಮೇವಾಕ್ಷಯಂ ಪರಲೋಕಮನ್ನೀವ ವೆಂದೊರೆಯೆ ಪಿರಿಯರರಿಯ ॥
ಸತ್ಯರನುಸರಿಪ ಪಂಥಾನವನು ಕೆಡಿಸುತಲ ।
ಸತ್ಯಾನುಮೋದಮಂ ಮಾಳ್ಪರಿಚ್ಛೈಸಿ ದು ।
ಷ್ಕೃತ್ಯಮ ನೊಡಂಬಟ್ಟು ಕೊಟ್ಟನುಡಿಯಂ ಬಿಟ್ಟು ಬಳಲಿದರದೇನು ಬಹುದು ॥ (11)

ಸಕಲಧರ್ಮಗಳು ಸತ್ಯವ್ರತ ಸದಾಚಾರ ।
ನಿಕರಕ್ಕೆ ತವರೆನಿಪ ರವಿವಂಶದೊಳ್ ಪುಟ್ಟಿ ।
ಒರೆಯೆನಿಸಿ ಸತ್ಯಭಾಷೆಯನುಳಿದು ಪಿತೃಗಳಂ ನಿರಯಗತರೆನಿಸಿ ಸಾಧು ॥
ನಿಕಟದೊಳಗೆಂತು ಕಾಳ್ಕರ್ಪ ಪಾಪವ ಗಳಿಪ ।
ಯುಕುತಿಯನ್ನಾರೊರೆದ ರರಸೆ ಭಾಷೆಯನೊರಸೆ ।
ನಿಖಿಲಲೋಕಾಪವಾದಂ ನಿರಾಸವು ಜನಿಪುದಲ್ಲದೇಂಫಲವು ದೊರೆಗು ॥ (12)

ಪೂರ್ವಾನುಚರಣೆಯಂ ಚಿತ್ತವನುಸರಿಸಿದೊಡೆ ।
ಕೂರ್ಮೆಯಿಂ ಪಿತೃಮಾತೃಕುಲವ ಸಂರಕ್ಷಿಪೊಡೆ ।
ಧಾರ್ಮಿಕಶಿರೋರತ್ನ ನೆನಿಸುವೊಡೆ ನೀನಿತ್ತ ನುಡಿ ಸಫಲಮೆಂದೆನಿಪೊಡೆ ॥
ಪೆರ್ಮಗನ ದಂಡಕಾವನಕೀಗಲೇ ಕಳುಪಿ ।
ನಿರ್ಮಲಸುಕೀರ್ತಿಯಂ ಗಳಿಸಿ ಜಗತೀನಾಥ ।
ಶರ್ಮದಿಂದಿಹುದೆನ್ನಮತವಿದಕೆ ಪ್ರತಿಕೂಲವಾಗೆ ಲಘುವಹುದು ಮೇಗೆ ॥ (13)

ಎಂದಧಿಕ ಕ್ರೂರವಾಣಿಯನೊರೆದ ದುಸ್ಸತಿಯ ।
ಬಂಧುರದ ಧೈರ್ಯ ನಿರ್ಲಜ್ಜ ನಿಶ್ಶಂಕೆಯ ।
ನ್ನೆಂದು ನಿಟ್ಟುಸಿ ನೃಪತಿ ಭ್ರಾಂತಮಾನಸನಾಗಿ ಬಳಲಿ ತನ್ನೊಳಗೆ ತೊಳಲಿ ॥
ಕಂದಿದಾನನದಿಂದ ಕಂಗಳೊಳ್ ಸುರಿವ ಜಲ ।
ಬಿಂದುಗಳನೊರಸುತಂ ಕೃಚ್ಛ್ರದಿಂ ಧೈರ್ಯಮಂ ।
ತಂದು ಮುಂದಿಹ ದುಷ್ಟೆಯಂ ನೋಡಿ ಧಿಕ್ಕರಿಸಿ ಜರೆದನತಿರಭಸದಿಂದ ॥ (14)

ಕುಲಗೇಡಿ ಪಾಪಿ ರಕ್ಕಸಿ ಕ್ರೂರೆ ದುಷ್ಟಾತ್ಮೆ ।
ನೆಲೆಗೊಂಡುದೆಂತು ಪಾತಕಬುದ್ಧಿ ಯಾರಿಂದ ।
ಕಲಿತವಾದುದು ನಿನ್ನ ಸುತನೀಕ್ಷಣ ತ್ಯಜಿಸೆ ರಾಮಗಂ ಪಟ್ಟಗಟ್ಟಿ ।
ನೆಲದೊಳುಳ್ಳರ ಪ್ರೀತಿಯಂ ಗಳಿಸಿ ಸುಖವಿರ್ಪ ।
ನಲಘುಮತಿಗಳು ಮೆಚ್ಚುವಂತೆ ಮುಖಮಂ ಮುಂತೆ ।
ನಲವಿಂದ ನಿಟ್ಟಿಸೆಂ ದುಷ್ಕೃತಿಯನೀ ಲೋಕ ಮೂಲೋಕ ಗೆಯ್ಯದಂತೆ ॥ (15)
ಎನುತನೇಕವಿಧಪ್ರಳಾಪದಿಂದರಸು ಬ ।
ಳ್ಕನಿಗಿಂದ ತೊಳಲಿ ಬಳಲುತಲಿರ್ದನನ್ನೆಗಂ ।
ಇನ ಪೌರಹೂತೀದಿಶಾಚಕ್ರಮಾಕ್ರಮಿಸಲಾ ನಿಶಾನಾಶಮೆನಿಸೆ ॥
ಅನಿತರೊಳ್ಕೇಕಯಾತ್ಮಜೆಗವಿತತರಕೋಪ ।
ಜನಿಸಲೀಶಾನನೊಡನಿಂತೆಂದಳೀಂ ಪಾಪ ।
ಮನೆಯಾದೆ ಕುಲಧರ್ಮವನ್ನುಳಿದೆ ನೀಂ ಗಳಿಸಿದಮಳ ಜಸವನ್ನು ಕಳೆದೆ ॥ (16)
ಕೆಡುವೊಡಲ ನಿಜವೆಂದು ವಿಷಯಸುಖಮಂ ನಚ್ಚಿ ।
ನುಡಿಯ ಪುಸಿಯಂ ಚುಚ್ಚಿ ಸಾಧುಜನರಿಗೆ ನಾಚ್ಚಿ ।
ಕಡೆಗಂ ನೃಪಾಧಮಂ ಕಾಲಸೂತ್ರಕೆ ಸಾರ್ದ ಬಾಳ್ದೇನು ಫಲ ಧರೆಯೊಳು ॥
ಪೊಡವಿಯಂ ಭರತಂಗೆ ಕೊಟ್ಟು ರಾಘವನ ಬೇ ।
ರಡವಿಗೀಕ್ಷಣ ಕಳಪಿ ನಿರ್ವಿವಾದಂಗೈದು ।
ಪೊಡವಿಪತಿ ನೀಂ ಕೃತಾರ್ಥತೆವಡೆದು ಸುಖಮಿಹುದು ಸಲವೆಣಿಸಲೇನಪ್ಪುದು ॥ (17)
ಬಿರುನುಡಿಯ ನಾಲಿಸುತ ಭೀತಿಯಿಂದ ನೃಪಾಲ ।
ಕರಗಿ ಕೊರಗುತಲೆರೆದ ಕೇಕಯಾತ್ಮಜೆಯೊಳಂ ।
ಧರೆಯ ನಿನಗಿತ್ತು ಬಂಧಿತಧರ್ಮಪಾಶದಿಂ ಬೇಯುತ್ತಿದಂತಾದುದು ॥
ಮರುಗಿ ಮಾಡುವುದೇನು ಪೂರ್ವಕೃತ ಕರ್ಮವ ।
ನ್ನೊರಸಿದರ್ ಪೋಪುದೆ ಪಿರಿಯಸುತನಂ ನೋಳ್ಪ ।
ತೆರಗುತಿದೆ ಮನಮೆನ್ನೊಳಾಡುತತಿಮೋಹದಿಂ ಮೈಮರೆದು ಮರುಗಲಿತ್ತ ॥ (18)
ಅರವಿಂದ ಸಖನುದಿಸಲಾಗ ಮೈತ್ರಾವರುಣಿ ।
ತ್ವರಿತದಿಂ ಸ್ನಾನ ಸಂಧ್ಯಾಕೃತ್ಯಗಳ ರಚಿಸಿ ।
ಪರಮಹರುಷದಿ ದ್ವಿಜೋತ್ತಮರ ನೊಡಗೊಂಡಖಿಲ ವಸ್ತುನಿಚಯಗಳು ಸಹಿತ ॥
ಸುರುಚಿರಾಲಂಕಾರದಿಂದಮರಪಟ್ಟಣವ ।
ಕಿರಿದೆನಿಪಯೋಧ್ಯಾಭಿಧಾನ ನಗರಿಯ ಪೊಕ್ಕು ।
ಬರುತಲಂಕೃತಿವೆತ್ತ ರಾಜವೀಧಿಯನೋಡುತೈತಂದು ನಲವಿನಿಂದ ॥ (19)
ಕತ್ತುರಿಯ ಸಾರಣೆಯ ಕಮನೀಯ ಕಾರಣೆಯ ।
ಯೆತ್ತಿಹಪತಾಕೆಗಳ ಎಡಬಲದ ನೀಕಗಳ ।
ಮುತ್ತಿನಾರತಿಗಳಂ ಪಿಡಿದು ನಿಜ ನಿಲಯಗಳ ಮುಂದೆ ನಿಂದಿರುವ ಚೆಲುವ ॥
ಕತ್ತುರಿಯ ಗಂಧಿಯರ ಕನಕಲತಿಕಾಂಗಿಯರ
ಮೊತ್ತಮಂ ನೋಡುತ್ತ ಮತ್ತೆನಲವೇರುತ್ತ
ಚಿತ್ತರದ ರಾಜವೀಥಿಯೊಳಾದ್ವಿಜೋತ್ತಮಂ ನಡೆದನರಮನೆಗೆ ಮುದದಿ ॥ (20)

ದೀನಾನುಕಂಪಿ ರಘುವೀರಂಗೆ ಸಿರಿಲಕುಮಿ ।
ಹಾನೊಲಿದು ಬಪ್ಪಳೀಯುತ್ಸವವ ನೋಡುವರೆ ।
ಮಾನಿನಿಯರರಸುಗಳು ಜಾನಪದ ಹರುಷದಿಂದಲ್ಲಲ್ಲಿ ಕರವ ಪಿಡಿದು ॥
ಕಾನಕಾಂಬರವು ಪ್ರಸೂನಮಾಲಿಕೆಗಳಾ ।
ಮ್ಲಾನಹರುಷದೊಳಿತ್ತು ಕಾಣಲುಜ್ಜುಗವೆತ್ತು ।
ನಾನು ನೀನೆಂದೊದರುವನಿತ ನಿಟ್ಟಿಸಿ ಮುನಿಪ ಸಂತಸದಲೈತಂದನು ॥ (21)

ಪೊಡಮಡುವರಂ ಪರಸಿ ಪಾಡುವರ ನಯವೆರಸಿ ।
ನುಡಿಗಳಿಂದುಪಚರಿಸಿ ನುತಿಪರಂ ಸಂಭ್ರಮಿಸಿ ।
ಕೊಡುತ ಮನದಿಷ್ಟವಂ ಕಡೆಗೊಳಿಸಿ ಕಷ್ಟವಂ ಮುನಿತಿಲಕ ಕೃಪೆಯೊಳೈದಿ ॥
ಪೊಡವೀಶನರಮನೆಯ ಕಕ್ಷಾಂತರಂಗಳಂ ।
ಕಡೆದು ಬರಲಿದಿರೊಳ್ ಕಾಣುತ ಸುಮಂತ್ರನಂ ।
ತಡೆಯದೆ ಮದಾಗಮನವಂ ನೃಪತಿಗರುಹೆಂದು ಪೇಳ್ದಂ ದೀನಬಂಧು ॥ (22)

ದಧಿಲಾಜಘೃತ ಕ್ಷೌದ್ರ ಸರ್ವಬೀಜಂಗಳಂ ।
ವಿಧುನಿಕಾಶಚ್ಛತ್ರ ವಿಶದವಾಲವ್ಯಜನ ।
ಕುಧರಾಭವಾರಣಂ ಶ್ವೇತಪುಂಗವ ತ್ರಿಣತ ರಹರಿದಿವ್ಯರಥವು ॥
ಸುಧೆಯ ಪೋಲ್ವಧರೆಯರು ಸುರುಚಿರದ ವೇಶ್ಯೆಯರು ।
ಬುಧರು ಸಿಂಹಾಸನವು ಪೀಠಮೌದುಂಬರಂ ।
ಭಿದುರಾದಿ ರತ್ನಮುಂ ಕ್ರೂರಶಿಖಿಕಾವ್ಯಖಿಳವಸ್ತುನಿಚಯಂಗಳ ಪಿಡಿದು ॥ (23)

ನಿಗಮಸಾಂಗೋಪಾಂಗ ವೇತ್ತೃಭೂಸುರರುಗಳ್ ।
ಮಿಗೆ ಪುಣ್ಯಪಶುಪಕ್ಷಿಸುರುಚಿರ ಸುಧೇನುಗಳ್ ।
ಬಗೆಬಗೆಯ ಪೌರಜನ ಜಾನಪದ ಪಾರ್ಥಿವರ್ ಸಕಲಾಗಮಜ್ಞಜನರು ॥
ಅಗಣಿತಸುವಸ್ತುಗಳನರ್ಪಿಸುತ ರಾಘವನ ।
ಸೊಗಸಿನತಿಶಯುವ ನಿಟ್ಟಿಸುವ ರಭಿಲಾಷೆಯಿಂ ।
ಜಗತೀಶ ಲೋಕ ಕಾದಿದೆ ಯೆಂದು ಬೇಗದಿಂ ನೃಪತಿಯೆಚ್ಚರಿಸು ಪೋಗಿ ॥ (24)

ಎನುತೊರೆಯೆ ಮೌನಿವರನಾಜ್ಞೆಯಿಂದ ಸುಮಂತ್ರ ।
ಜನಪತಿಯ ಶಯ್ಯಾಗೃಹದ್ವಾರಕೈತಂದು ।
ವಿನಯದಿಂ ನುತಿಗೆಯ್ಯಲನುಗೈದನಿಕ್ಷ್ವಾಕುವಂಶಚೂಡಾಮಣಿಯನು ॥
ಇನ ಪೂರ್ವಶೈಲಶಿಖಾಗ್ರ ಭೂಷಿತನಾದ ।
ಮುನಿವರರ್ ಜಾನಪದ ಸಾಮಂತರೈತಂದು ।
ವನಜಾಕ್ಷ ರಾಮನಭ್ಯುದಯಮಂ ನೋಡುವುಜ್ಜುಗದಿಂದಮಿರ್ಪರರಸ ॥ (25)

ಮಾತಲಿಯು ನುತಿಗೆಯ್ಯೆ ಮೇಘವಾಹನನು ಪಾ ।
ಕ್ಕಾತುರನ ನೊಡಗೊಂಡು ದಿತಿಜರಂ ಗೆಲಿದಂತೆ ।
ನೀತಿಯುತನೆನ್ನ ನುಡಿಯಿಂದ ಬೇಗದಲುಪ್ಪವಡಿಸಿ ಯೀ ಲೋಕವನ್ನು ॥
ಜಾತ ಸಂಭ್ರಮರೆನಿಪುದಮರೇಂದ್ರನಾ ಸುಧಾ ।
ಸೂತಿಸಹಿತೈದಿ ಪೊಂಬೊಡೆಯನಂ ಪ್ರೀತಿಯಿಂ ।
ಸಾತಿಶಯದಿಂದೆಚ್ಚರಿಪೊಲಾನು ಭವದೀಯ ಚರಣಕಂ ಬಿನ್ನವಿಪೆನು ॥ (26)

ಸುರಪನೀಯಲಿ ಜರುಪ ನಗ್ನಿ ಶುಭಭಾವವಮಂ ।
ತರಣಿಸುತ ಶೌರ್ಯವಮಂ ನಿಋತಿ ಯತಿಧೈರ್ಯವಮಂ ।
ವರುಣನಾಜ್ಞಾಸತ್ವಮರುತನತಿ ಬುದ್ಧಿಯಂ ಧನದ ನವಧಾನ್ಯತೆಯನು ॥
ಹರ ನಿಖಿಲವಾನ್ಯತೆಯ ನಿತ್ತು ಸಲಹಲಿ ಜಗ ।
ದ್ಭರಿತ ವಿಕ್ರಮ ಪಂಕ್ತಿರಥ ರಾಜರಾಜೇಶ ।
ಕರುಣದಿಂದುಪ್ಪವಡಿಸೆಂದು ನಾನಾವಿಧದಿ ತುತಿಸಿದಂ ಸೂತ ನಯದಿ ॥ (27)

ಎಂದು ನಾನಾವಿಧದ ನುಡಿಗಳಂ ತುತಿಗೆಯ್ಯ ।
ಲಂದರಸ ನಾಲಿಸುತ ಲತಿದೈನ್ಯಕರವಾದ ।
ಮಂದ ಬಾಷಣೆಯಿಂದ ಸೂತ ನೊಡನಿಂತೆಂದ ನೀಯುರುಂತುದ ವಾಣಿಯಿಂ ॥
ಬಂಧುರದ ಸಂಕಟಂಗೊಳವೆ ಯಾತಕೆ ಲೋಕ ।
ಬಾಂಧವನ ಕುಲಕಳಂಕಿಯ ನೆನೆಲ್ ಸೂತ ಭಯ ।
ದಿಂದ ವೆರಸಾರಿ ಕಂಪಿತನಾಗಿ ಬೆಸಗೊಂಡನಾ ಕೇಕಯಾತ್ಮಜೆಯನು ॥ (28)

ಏನಿದಚ್ಚರಿ ತಾಯೆ ಜನನಾಥ ನೆನ್ನೊಡನೆ ।
ದೇನು ಕಾರಣ ಕೋಪತರ ನುಡಿಯ ಬೆಸಸಿದಂ ।
ನಾನೇನು ವಿಪರೀತಕರವಾದ ದುರ್ಗತಿಯ ನನುಸರಿಸಿ ಬಿನ್ನವಿಸಿದೆ ॥
ನೀನೊರೆಯ ಬೇಹುದೆನಲರಸ ನೀ ರಾತ್ರಿಯೊಳು ।
ಸೂನುವಂ ನೆನೆನೆನೆದು ನಿದ್ರೆಯನ್ನಾಳದಲೆ ।
ಮ್ಲಾನವಾನಸನಾಗಿ ತೊಳಲುತಿಹ ರಾಮನಂ ಕರೆತಹುದೆನುತ್ತೊರೆದಳು ॥ (29)

ತ್ವರಿತದಿಂದೈದಿ ರಾಘವನ ನೃಪನನ್ನಿಧಿಗೆ ।
ಕರೆತಹುದೆನುತ್ತೆ ಕೇಕಯರಾಜ ಸಂಭೂತೆ ।
ಯೊರೆಯಲಾ ಸೂತ ಸಂತಸದಿಂದ ಮಂಗಳಂ ದೊರೆಕೊಳ್ಳುಗೆನುತ್ತ ಪೊರಟು ॥
ಬರುತ ಜನಸಂಬಾಧವಂ ಕಳೆದು ಶ್ರೀರಾಮ ।
ಪರಮಮಂಗಳವಮೂರ್ತಿಯಂ ನೋಡಲಭಿಲಾಷೆ ।
ವೆರಸಿ ಭೂಧವನ ಪೊಗಳುತ ಹರ್ಷದಿಂದೈದಿ ಕಂಡನವನಿಪರ ಮುದದಿ ॥ (30)

ಉದಿಸೆ ಬಾಸ್ಕರ ಪುಷ್ಯಯೋಗ ಸಮನಿಸೆ ದ್ವಿಜರು ।
ಮುದದಿಂದ ರಾಮಾಭಿಷೇಕಮಂ ನಿಚ್ಚೈಸುವ ।
ರದುಭುತದ ಹರುಷದಿಂ ಮಂತ್ರಿಗಳ್ ಪುರೋಹಿತರು ಸಕಲಸಂಭಾರ ಸಹಿತ ।
ಉದಧಿಯೂರ್ಧ್ವವು ತಿರ್ಯ ಪ್ರಾಕ್ಪಶ್ಚಿಮಾದಿ ದಿ ।
ಗ್ವಿದಿತ ಲಹರೀಜಲವ ಕೊಂಡು ಗಂಗಾಯಮುನೆ ।
ನದಮುಲದ ಸಂಗತೋದವ ಪಿಡಿದು ನಡೆತಂದರಾ ನೃಪನ ಮಂದಿರಕ್ಕೆ ॥ (31)

ನೆರೆದ ವಿಪ್ರ ಸಮೂಹ ಜಾನಪದ ನೃಪತಿಗಳು ।
ಪರಿಪರಿಯ ಜನರೆಲ್ಲ ಸಂಭ್ರಮದೊಳೈದಿ ಧವ ।
ನರಮನೆಯ ಬಾಗಿಲೊಳು ನಿಮ್ಮ ನಡೆತಹ ಸೂತನಂ ನೋಡುತಿಂತೆಂದನು ॥
ಬರವ ನರುಪುವುದರಸಿಗೆನಲಾ ಸುಮಂತ್ರ ಬಂ ।
ಧುರದ ಹರುಷ ದೊಳೈದಿ ದತಿಶಯ ಶಯ್ಯಾಗೃಹದ ।
ಪೊರೆಯೊಳಗೆ ನಿಂದು ನುತಿ ಗೈದ ನಮರೇಶನಂ ಮಾತಲಿಯು ತುತಿಸುವಂತೆ ॥ (32)

ಸೋಮ ಸೂರ್ಯರ್ಗಂ ಪಾಶಿ ಸುರಪ ನಗ್ನಿಯುಂ ಧನದ ।
ಭೀಮ ಋಷಿನಿವಹಂಗಳೊಲಿದೀಗೆ ಮಂಗಳವ ।
ತಾಮಸಿಯು ರಾತ್ರಿ ಯ್ಯೆದಿದಳಹಸ್ಕರ ಪೂರ್ವಶೈಲಾಗ್ರ ದೊಳ್ ತೊಳಗಿದಂ ॥
ಪ್ರೇಮದಿಂ ಭೂಸುರ ಜನಪತಿಗಳೈದೆ ಸು ।
ತ್ರಾಮ ಪಾಲಿತ ನುದಯಮಂ ಬಯಸಿ ಬಂದಿಹರು ।
ತಾಮರಸಗೋತ್ರಭೂಷಣ ಮಹಾರಾಜ ನೀನೆಚ್ಚರಂಗೊಳ್ಳುವುದೆನುತ ॥ (33)

ಶ್ರುತಿಗೈದ ಸೂತಭಾರತಿಯ ನಾಲಿಸುತರಸ ।
ನತಿಶಯ ಕ್ರಮದಿಂದ ಲಿಂತೆಂದ ಮಂತ್ರಿ ನಿಜ ।
ಸುತನ ನಿಟ್ಟಿಸುವ ಕಾಂಕ್ಷೆ ಯೊಳಿರುಳು ನಿದ್ರೆಯನ್ನಾಳ ದೆಚ್ಚತ್ತಿರ್ಪನು ॥
ಮತಿಯುತನೆ ಬೇಗ ರಘುನಾಥನಂ ಕರೆತಂದು ।
ಹಿತವನಾ ಚರಿಸೆನಲ್ ನೃಪನಾಜ್ಞೆಯು ಮೌಳ ।
ಜತೆಯೆನಿಸಿ ರಾಮ ನಿರ್ಪೆಡೆಗೆ ಸತ್ವರದಿಂದ ಲೈತಂದ ಮಂತ್ರೀಶನು ॥ (34)

ಹರುಷರಸ ತುಳ್ಕಾಡುತೈತರುತ ಸೂತ ರಘು ।
ವರನ ಶುಭವಿಭವಮಂ ಹಾರವಿಸೆ ನಗರದೊಳ್ ।
ಪರಿಪರಿಯಲಂಕಾರವೆತ್ತುಪಾಯನವಿಡಿದು ಸಕಲಜನ ಸಂತಸದಲಿ ।
ಅರವಿಂದಬಾಂಧವನ ಕುಲಶಿಖಾಮಣಿಯು ಬಹ ।
ಪರಿಯಿಂದ ಶ್ರುತಿಪುದಂ ಕೇಳುತಾನಂದದಿಂ ।
ತ್ವರಿತದಿಂದೈತರುತ ರಾಜಪಥಮಂ ಕಳಿದು ಕಂಡನರಮನೆಯ ಸಿರಿಯ ॥ (35)

ಸುರಚಾಪ ದೋಲೆಸೆವ ತೋರಣಗಳೋರಣದ ।
ಪರಿತ ಮುಕ್ತಾಫಲದ ತಳ್ಕುಗಳ ಪಳ್ಕುಗಳ ॥
ಸಿರಿಕರದ ಬಜ್ಜರದ ಕಂಬಗಳ ಸಕಲರುಚಿಗುಂಫಗಳನಾಂತು ತೋರ್ಪ ॥
ಅರಮನೆಯೊಳೊಪ್ಪುವರಸಂಚೆಗಳ ಸಂಚುಗಳ ।
ಲೊರೆವ ಗಿಳಿವಿಂಡುಗಳ ಕಲಕಂಠ ದಂಡುಗಳ ।
ಪರಮೆಗಳ ಕಲರುತದ ಪರಭೃತದ ಸುಲಲಿತದಲೆಸೆದುದಾ ನಿಲಯ ಮುದದಿ ॥ (36)

ಕುರುವಿಂದಖಚಿತಕರುಮಾಡಗಳ ಬಜ್ಜರದ ।
ಸರಸಸೋಪಾನಗಳ ರುಕ್ಮದ ಕವಾಟಗಳ ।
ಮೆರೆವ ಗಾರುತ್ಮತೋಪಲಲೋವೆಯಿಂದೆಸೆವ ಶಿಖರ ಪುಷ್ಕರ ಚುಂಬಿಯ ॥
ನೆರವಿಗಳ ನೋಡುತ್ತಲೊಳಪೊಕ್ಕನಿಕ್ಕೆಡೆಯು ।
ಲಿರುವ ಭೂಸುರರಾಜಮಂಡಲವ ನಿಟ್ಟಿಸುತ ।
ಹರುಷದಿಂ ಜಾನೇಜಾನಿಯಂ ಕಾಣ್ಬೊಡುಜ್ಜುಗದಿಂದಲೈತಂದನು ॥ (37)

ನಲಿವ ನೋಗೆಯ ಸಂತತಿಯುಲಿವ ಕೋಗಿಲೆ ಮುಂತೆ ।
ಲಲಿತಗಿರಿಯುಲಿ ಪಿಂತೆ ಕಲಮಧುರರವದಂತೆ ।
ಚೆಲುವಸಿತ್ರ್ಪುಟತ್ರಿಯನೊಲವಿಂದಲುಪಚರಿಪ ಪಾಂಚಾಲಿಕಾನಿಚಯಮಂ ॥
ಕಲಿತಾವಸರ ಹಾಸ್ಯಲಾಸ್ಯದ ಜನಂಗಳಂ ।
ಪಲವುವಿಧಮತಿಪಾಠಕರ ನೆರವಿಗಳ ನೋಡು ।
ತಲಘುಮತಿ ಶ್ರೀರಾಮನಿಪ್ಪಮಂದಿರದೆಡೆಗೆ ತ್ವರಿತದಿಂದೈತಂದನು ॥ (38)

ಆಸುಮಂತ್ರಂ ನೆರೆದ ಜನಸಂಗಮನ್ನುಳಿದು ।
ವಾಸವಾಲಯಕೆ ಸಾಟ್ಕಡಿಯೆನಿಪ ಗೃಹಮಂ ವಿ ।
ಲಾಸದಿಂದೊಳಪೊಕ್ಕು ತ್ವರಿತದಿಂ ದೈತರಲ್ ಕಕ್ಷೆ ಪ್ರದೇಶದಲ್ಲಿ ॥
ಪ್ರಾಸಮುದ್ಗರಪರಶುಧಾರಿಗಳ್ ಜವ್ವನದ ।
ಲೇಸೆನಿಪ ಧರ್ಮಕೋಂಡಲಮಾಲ್ಯಯುತರಿರಲ್ ।
ವಾಸರದಿ ವೇತ್ರಕಯರೆನಿಪ ವೃದ್ಧರ ನೆರವಿಯಂ ಕಂಡ ಮಂತ್ರಿ ಮುದದಿ ॥ (39)

ಬರಲವಾತ್ಯನ ಕಾಣುತಾದ್ವಾರಪಾಲಕ ।
ರ್ಭರದಿಂದಲೆದ್ದು ಕರಗಳ ಮುಗಿಯುಲಿಟ್ಟೆಸುತ ।
ದೊರೆಯೊಳೆಸ್ನಾಗಮನಮಂ ಪೇಳ್ವೆವೆಂದೊಗೆಯೆ ಲಧಿಕಸಂತೋಷದಿಂದ ॥
ಚರರೈದಿ ಬಿನ್ನವಿಸಲಾ ವಾಣಿಯಂ ಕೇಳ ।
ಕರುಣದಿಂದಪ್ಪಣೆಯನೀಯಲುಪಜೀವಿಗಳ್ ॥
ನೆರವಿಾಲನಾಜ್ಞೆಯಿಂದೈತಂದು ಮಂತ್ರಿಗಂ ಪೇಳ್ದರತಿಮೋದದಿಂದ ॥ (40)

ಪರಿವೃಢನ ಕಾಖ್ಬರು ತ್ವುಕದಿಂದಲೊಳಪೊಕ್ಕು ।
ಪರಿಪರಿಯ ಚಿತ್ರಪುತ್ಥಳಿಕೆಗಳ ಮೃದುನುಡಿಗ ।
ಳೊರೆವ ಸಾರಿಕೆಗಳಂ ನರ್ತಿಪ ಮಯೂರಗಳ ನುಣ್ದನಿಗಳಂ ತೋರುವ ॥
ಪರಭೃತಗಳಂ ಮನೋಹರ ಕಾಮಿನೀಜನವ ।
ಸರಸತರ ಹಾಸ್ಯಂಗಳೆಸಗುವರ ವಾಮನಕ ।
ನೆರವಿಯಂ ನೋಡುತಚ್ಚರಿಯಿಂದಲೈತಂದ ರಘುನಾಥನಂ ನೋಳ್ಪರೆ ॥ (41)

ಥಳಥಳಪ ರತ್ನಮಯಸಿಂಹಾಸನಾಗ್ರದೊಳ್ ।
ತೊಳಪ ಮಣಿಗಣಖಚಿತದಿವ್ಯಭೂಷಣವಿಟ್ಟು ।
ಲಲಿತಹಾಟಕವಸನ ಮುಟ್ಟಲಂಕೃತಿವಟ್ಟು ಶಿವವಯಸ್ಯೋಪಮದಲಿ ॥
ನಳನಮಿತ್ರನ ತೆರದಿ ಮಂಡಿಸಿರೆ ಪಾರ್ಶ್ವದೊಳ್ ।
ನಳನಮಂದಿರೆಯಂತೆ ಸೀತೆ ವಾಲವ್ಯಜನ ।
ತಳೆದಿರಲುಖಂಡ ತೇಜೋರಾಶಿಯಂ ಕಂಡು ಸೂತ ಮುಂಕೊಂಡು ನಮಿಸೆ ॥ (42)

ತುತಿಸಿ ವಂದಿಸಿ ವಿನಯದಿಂ ನಿಂದ ಸೂತನಂ ।
ಪತಿಕರಿಸಿ ಕುಶಲಮಂ ಕೇಳ್ದಾಗ ಬಂದ ಸಂ।
ಗತಿಯ ಬೆಸಗೊಂಡೊಡಾ ಸೂತನುರುವಿಭವದಿಂ ವಿಜ್ಞಾಪಿಸಂ ಗೈದನು ॥
ಕ್ಷಿತಿವರಂ ಕೇಕಯಾತ್ಮಜೆಯೊಡನೆ ಕುಳ್ಳಿರ್ದು ।
ಮತಿಶಯಪ್ರೀತಿಯಿಂ ತಾತಪಾದಂ ನಿಮ್ಮ ।
ಪ್ರಥಿತಸನ್ಮೂರ್ತಿಯಂ ನೋಳ್ಪೊಡಭಿಲಾಷೆಯಿಂದಟ್ಟಿದಂ ನರವರೇಣ್ಯ ॥ (43)

ಎನೆ ಕೇಳಿ ಸಂತಸದಿ ಸೀತಾಮುಖವ ನೋಡಿ ।
ವಿನಯದಿಂ ನಸುನಗುತೆ ರಾಮನೆಂದಂ ತನ್ನ ।
ಜನನಿಯಸಗಭ್ಯುದಯಮಂ ಬಯಸಿ ತಾತನಡಿಗೆಳ್ಚರಿಸೆ ತೋಷದಿಂದೆ ॥
ಮನವೊಲಿದು ಯುವರಾಜಪಟ್ಟಮಂ ಕಟ್ಟುವರೆ ।
ಸನುಮತಿಸೆ ಸೂತನಂ ಕಳುಹಿರ್ಪ ಕತದಿಂದ ।
ಮುನಿಗಳನುಮತದಿಂದ ಬಹುದು ಸಿರಿ ಬೇಗದಿಂ ತಾತನಂ ಕಾಣ್ಬೆನುದದಿ ॥ (44)

ಎಂದು ಸನ್ಮಾನದಿಂದೊರೆದ ಪತಿವಾಕ್ಯಗಳ ।
ಚಂದಮಂ ನಿಟ್ಟಿಸುತ ಧರಣೀತನೂಜಾತೆ ।
ಬಂಧುರಸ್ನೇಹದಿಂದ ದ್ವಾರಕೈತಂದು ಮಂಗಳಾಚರಣೆಗೈದು ॥
ವೃಂದಾರಕೇಂದ್ರನಂ ಬೊಮ್ಮ ಪಟ್ಟವ ಕಟ್ಟೆ ।
ದಂದದಿಂ ನೃಪಕುಲಾಗ್ರಣಿ ರಾಜ್ಯಸಂಪದವ ।
ಪೊಂದಿಸುವ ನಿಖಿಲಭೂಪಾಲಮುನಿಮುನಿಜನರ ಸಮ್ಮತ ದೊಳೀ ದಿನದಲಿ ॥ (45)

ವ್ರತಯುಕ್ತ ದೀಕ್ಷೆಯುತ ಅಜಿನಧರ ನಿರ್ಮಳನ ।
ಕತಿಪಯ ವ್ಯಜನಾನ್ವಿತನ ಮೃಗಶೃಂಗದಿಂ ।
ಯುತಪಾಣಿಪಂಕಜನ ರಘುಕುಲಾಗ್ರೇಸರನ ಸಿಂಹಾಸನಾಗ್ರದೊಳಗೆ ॥
ಅತಿಶಯದಿ ಮಂಡಿಪುದ ನಿಟ್ಟಿಸುತ ಭಜಿಸುವೆಂ ।
ಕ್ಷಿತಿಯರಸ ವಜ್ರ ಮೂಡಲು ತೆಂಕ ಯಮ ಪಾಶಿ ।
ಮತಿಯುತಂ ಪಶ್ಚಿಮದಿ ಯುತ್ತರದಿ ವೈಶ್ರವಣ ಕೊಡುಗೆ ಪದಕಂ ವಿಜಯಮಂ॥ (46)

ಧರಣೀತನೂಭವೆಯು ಬೀಳ್ಕೊಂಡು ಕೌತುಕದ ।
ಕರದಿಂದ ದ್ವಾರಗಳ ಕಳೆದು ಮಧ್ಯಮಕಕ್ಷ ।
ಪೊರೆಯಲಿ ನಮಿತಹಸ್ತನಾಗಿ ವಂದನೆಗೈದ ಸೌಮಿತ್ರಿಯಂ ನೋಡುತ ॥
ನೆರೆದಿಹ ಸುಹೃಜ್ಜನರನೊಡಗೊಂಡು ಗುಹೆಯಿಂದ ।
ಪೊರಡುವ ಮೃಗೇಂದ್ರ ನಂತೈತಂದು ಮಂತ್ರಿಸಹ ।
ಮೆರೆವ ಪೊಂದೇರನೇರ್ದಂ ಪೂರ್ವಶಿಖರಿಯಂ ಪೂಷ ಭೂಷಂಗೆಯ್ಯಲು ॥ (47)

ಘನರವವನನುಕರಿಪ ರತುನಮಯಚಕ್ರಂಗ ।
ಳನುವಿನಿಂ ಕಲಭನಿಭಗಾಂಧರ್ವಕಲಿತದಿಂ ।
ದಿನಪಶೋಭಾತಿರಸ್ಕೃತಕತಾಂಗಮನೇರ್ದು ಒಲವ್ನೆರಿ ಯೈತಪ್ಪೊಲು ॥
ಇನಕುಲಾಗ್ರೇಸರಂ ಗೃಹವನುಳದೈತರಲು ।
ವಿನಯದಿಂ ಸೌಮಿತ್ರಿ ಛತ್ರಚಾಮರಗಳಂ ।
ಘನಚಾಪತೂಣೀರಗಳನಾಂತು ಪಿಂದೆಸೆಯ ಸೇವಿಸುತ ಬರಲು ಮುದದಿ ॥ (48)

ತರದಿನುಗ್ಗಡಿಪ ಮಾಗಧರಿಂದೆ ಕಾಂಸ್ಯಾದಿ ।
ಪರಿಪರಿಯ ವಾದ್ಯಗಳ ಬಾಜಿಸುವ ಜನರಿಂದ ।
ಪರಕೆಗಳನೀವ ಭೂಸುರಸಮೂಹಂಗಳಿಂ ಪಾಡಿಸುವ ಶೂರರಿಂದ ॥
ಕರಿಹರಿಸ್ಯಂದನಗಳವಿತವೈಭವದಿಂದ ।
ಸಿರಿಕರದ ರಾಜವೀಥಿಯನಲಂಕೃತಿಗೈವ ।
ತರಸ ಮುಗಿಲೊಡ್ಡನೊತ್ತರಿಸಿ ಬಹ ಶಶಿಯಂತೆ ಪೊಳಪಿಂವಲೈತರುತಿರೆ ॥ (49)

ಎಡಬಲದ ಪ್ರಾಸಾದದಗ್ರದೊಳ್ ನಿಟ್ಟಿಸುವ ।
ಮಡದಿಯರು ಹರುಷದಿಂ ಕುಸುಮವೃಷ್ಟಿಯ ಕರೆಯ ।
ಒಡಿಗಡಿಗೆ ನಲವಿನಿಂ ಪಾಡಿಪೊಗಳುತ ಕೆಲರು ನುಡಿಯೆ ಪರಿಪರಿಯ ನುಡಿಯ ॥
ಪೊಡವೀಶಸಧರ್ಮಾಂಗಿ ಕೌಸಲ್ಯೆ ಸಂಭ್ರಮಂ ।
ಪಡೆದು ವಿಪ್ರೌಘಕಂ ಬೇಡಿದಿಷ್ಟಂಗಳಂ ।
ಕೊಡುವಂತೆ ಸಿಂಹಾಸನಾಗ್ರದೊಳ್ ಸುರಪನಂತಿಹುದೆನುತ ಕೆಲರಾಡಲು ॥ (50)

ಅರಸಾಗಲೀ ಮಹಾರಾಜನಂಬುಧಿಯುಟಾಗ ।
ನಿರದೋಷಧಿಗಳ ಬೆರ್ಚಿಸುವಂತೆ ಲೋಕಮಂ ॥
ನಿರವಧಿಕಹಾರ್ದದಿಂ ಪೊರೆದಪಂ ಕುಕ್ಷಿಸ್ಥ ತರ್ಣಕರ ಮಾಳ್ಕೆಯಂತೆ ।
ಪಿರಿಯರಸುಗಳ ನೇಮಕಧಿಕತರಮೆಂದೆನಿಸಿ ।
ಸಿರಿಯುಬ್ಬುಳೀತನಂ ನೋಡಿ ಚಾತುರ್ವರ್ಣ್ಯ ।
ಪುರುಷರೋತ್ಸವಗೊಂಬರಾ ದಿಲೀಪಾದಿ ನಿಜರಾಜರದ್ಧಿ ನೆಲಸಿದಂತೆ ॥ (51)
ಜವ್ವನಿಗರುಂ ಮನೋಜನ್ಮನೆನೆ ನೇಣ್ಮಯ್ಯ ।
ಬಾವ್ವೀಶರಿಂಗೆ ಬುಧಜನರಿಗಿಂಗಡಲಳಿಯು ।
ಯುವ್ವನಾಹಂಕಾರ ಜನಕೆ ಬಿಡುಗಣ್ಣೊಡೆಯುನಾರ್ತರಿಗೆ ಪಾರಿಜಾತ ॥
ಪುವ್ವಿಲ್ಲ ಮಾತ್ರುಳ್ಗಂ ಕುವಲಯುಕೆ ಶರಜನ್ಮ ॥
ಯುವ್ವೆಯುಹುದದರಿಂ ಸದಾನಂದವೊಂದೆನುತ ।
ವಿವ್ವಿದ ದೊಳತ್ತೆರದ ಸೌಧಾಗ್ರದೊಳ್ಪೇಳ್ವುದಾಲಿಸುತ ನಡೆತಂದವಂ ॥ (52)
ಆವನೀ ಚೆಲುವಿಕೆಯು ನೋಡದಿಹ ಕಂಗಳುಂ ।
ದಾವನನ್ನೀ ಮಹಾಪುರುಷ ನಿಟ್ಟಿಸದಿರುವ ।
ನಾವನಾಗಲಿ ನಿಂದ್ಯ ನಿಜಮನೋರಥ ವಂದ್ಯ ಧೀಯುತ್ತರೊಳತಿಮಾನ್ಯನು ॥
ಪಾವನೀಕೃತಮೂರ್ತಿ ಪಟ್ಟವಣೆಯಗ್ರದೊಳ ।
ದಾವ ಮೌಹೂರ್ತದಲಿ ಮಂಡಿಸುವ ವಿಭವವಂ ।
ನಾವೆಲ್ಲರುತ್ಸವದಿ ನೋಳ್ಪೆವೆಂದಾಡುವುದನಾಲಿಸುತಲೈತಂದನು ॥ (53)
ತೊಳಪ ಪಾರ್ವಣವಿಧುವ ಕಂತ ಜೀವಂಜೀವ ।
ಬಳಗಮೆನಲಿನಿರಸವ ನಿಟ್ಟಿಸಿದ ಬಿಡುಗಣ್ಣ ।
ಕುಳಮೆಂಬೊಲಾಲೋಕನೋತ್ಸುಕದಿ ನೋಳ್ಪ ಜನದೃಜ್ನಿಚಯು ತುರಳದಂತೆ ॥
ಬಳಿದುದೇನೆಂಬೆ ಘನರವವಂಡಿ ಮುಂಬಂದು ।
ಲಲಿತ ತಾರಾವಾಸವಾಂತ ಯೋಗಿಯು ಚಿತ್ತ ।
ನಿಲಯುದಂದದೊಳಾತ್ಮಭಾವಮಕ್ಕೈದಿಸುವುದನ್ಯಕರಣಂಗಳನ್ನು ॥ (54)
ಇಂತನಂತೌತ್ಸುಕ ದೊಳಟ್ಟುಸುತ ಪೊಗಳುತಿಹ ।
ಸಂತರಂ ನೋಡುತ್ತ ಲತಿಹರುಷದಿಂದ ಭೂ ।
ಕಾಂತನಾಲಯುಕ್ಕೈದಿ ಬರ್ಪೆಡೆಯುಲಾ ರಾಜಮಾರ್ಗದೊಳಖಿಲ ಜನರು ॥
ಮುಂತೆಸೆದರತುಳಲಂಕೃತಿ ವೆತ್ತು ಕರಗಳೊಳ ।
ಗಾಂತುಫಲ ಪುಷ್ಪಗಳ ಕರಮಿತ್ತು ಪೊಗಳ್ದರ್ ।
ಪಿಂತಣ ದಿಲೀಪ ರಘುರಾಮ ನಿಮ್ಮಡಿ ಯೆನಿಸಿ ವಿಜಯುನಾಗೆಂದುಲಿದರು ॥ (55)
ನಟನಾವಿಲಾಸಗಳ ನರ್ತನದ ಹಾಸಗಳ ।
ಪಟುದುಂದುಭೀರವದ ಘೋಷಗಳ ಹೇಷಗಳ ।
ಚಟುಲಾಶ್ವ ಸಂತತಿಯು ಉಳತಗಳ ಮಣಿಗಳ ನಣಕಿಸುವ ಚೆಲುವಿನಿಂದ ॥
ವಿಟದಗ್ಧಿಯುರ ಚೆಲುವ ಮಾತುಗಳ ರೀತಿಗಳ ।
ಕುಟಿಲ ಕುಬ್ಜಕರಂಗಭಂಗಗಳ ಭಂಗಿಗಳ ।
ನಿಟಿಲಾಕ್ಷಸಖನೋಡುತ್ತೈತಂದ ನಲವಿಂದಮಾರಾಜಸದನದೆಡೆಗೆ ॥ (56)

ಸುರಪಥನುರಾಕಾರ ತೋರಣದ ಮೇಲ್ಕಡೆಯು ।
ಹರನಿಲಯಮೆಂಬಂತುದಾರ ಸೌಧಾಗ್ರಗಳ ।
ಳಿರುವ ಮೃಗನಯನೆಯರಪಾಂಗಪ್ರಭಾಹಾಸ ಮುಂಕೊಂಡು ಬರಲು ॥
ಅರಸನುರುಕೀರ್ತಿಪ್ರತಾಪ ವಿಶ್ವಾಕಾರ ।
ವೆರಸಿ ಮೂರ್ತೀಭವಿಸಿದಂತಖಿಲಜನವೆಲ್ಲ ।
ವರರತುನಬಜ್ಜರದ ಮೈದೊಡವನಾಂತಂತೆ ತೋರ್ದರಚ್ಚರಿಯ ಪರಿಯ ॥ (57)

ಶ್ರೀನಿಲಯಮೆಂತಖಂಡ ವೈಭವವ ಭೂ ।
ಜಾನಿಯಾಲಯವನ್ನು ಕಾಣುತ್ತ ತೇರಿಳಿದು ।
ಭಾನುವಿಕ್ರಮನೈದುತಿರುವೆಡೆಯ ಕಕ್ಷಾಂತರಸ್ಥಾನುಚರನಿವಹವು ॥
ಸಾವೆಂದವೆತ್ತ್ರರಗಿ ಸರಭಸಂ ಪೊಗಳುತಿರೆ ।
ಮಾನಿನಿಯರಾಚಾರಲಾಜಗಳ ಸೂಸುತಿರೆ ॥
ಮಾನಸೋತ್ತಮ ನೋಡಿ ಮನ್ನಿಸುತಲೊಳಪೊಕ್ಕು ನೃಪರಗ್ರಗಣ್ಯನೆಡೆಗೆ ॥ (58)

ಕಂದನ ನುಕಂಡ ಜನಜಂಗುಳಿಯ ಮಾಳ್ಕೆಯೊಳ್ ।
ಮಂದೇಹವೈರಿಯಂ ನಿಟ್ಟಿಸಿದ ದ್ವಿಜಗಣದೊ ।
ಲಿಂದುವಂ ಕಂಡುದಧಿಯಂತೆ ಪರಮಾನಂದವೆತ್ತಖಿಳಜನರು ಮುದದಿ ॥
ಬಂಧುರಸ್ನೇಹದಿಂ ಬಹುವಿಧದಿ ನುತಿಗೆಯ್ಯ ।
ಲಿಂದಿರಾವರ ರಾಮಪುರದರಸ ಕರುಣದಿಂ ।
ದಂದು ಮನ್ನಿಸುತ್ತ ಲೈತಂದು ಗುರುವಂ ಕಂಡ ಮುಂದೆ ಮಾನಸ ರೀತಿಯಿಂ ॥ (59)

(ಸಂಧಿ 7, ಪದ 316.)

ಎಂಟನೆಯ ಸಂಧಿ-

ಸೂಚನೆ॥ ಜನಕನಾಜ್ಞೆಯ ನುಪರಿ ಮೌಳಿಭೂಷಣಮೆನಿಸಿ ।
ಜನನಿಯಂ ಕಾಣ್ಬೊಡುಜ್ಜುಗದಿಂದ ಶ್ರೀರಾಮ ।
ಜನಪರಂ ಮನ್ನಿಸುತ ಗಂಧಗಜಗತಿಯಿಂದ ಲೈತಂದ ಹರುಷದಿಂದ ॥

ಒಡನೆ ಬಹ ಮಂತ್ರಿಗಳ ಮಾಗಧರ ವಂದಿಗಳ ।
ಗಡಣಮಂ ಕಕ್ಷಾಂತರಂಗ ದೊಳ್ ನಿಲಿಸಿ ಮುಂ ।
ಗಡೆಯ ವಂದಿಪ ನುತಿಪ ದ್ವಾಃಸ್ಥರಂ ಮನ್ನಿಸುತ ಶುದ್ಧಾಂತಕೈದಿ ಮುದದಿ ॥
ಪೊಡವಿಪತಿಯಂ ಕಂಡು ಪೊಡಮಟ್ಟು ಮಾತಾಂಘ್ರಿ ।
ಜಡಜಗಳಿಗಭಿನಮಿಸಿ ನಿಂದಿರ್ದ ತನಯನಂ ।
ನುಡಿಸದಲೆ ಮೌನದಿಂ ದಿಟ್ಟಿಸಿದನೇನೆಂಬೆ ನಗರಾಟ್ತನೂಸಂಭವೆ ॥ (1)

ವಿಕಲವಾದಿಂದ್ರಿಯದ ಪೂರ್ಣನಯನಂಗಳಂ ।
ಸಕಲವದನದೊಳುದುರ್ವಖರ್ವಬೆಮರ್ವನಿಗಳಂ ।
ಪ್ರಕಟಿಸುತ ಮುಂಬರಿವ ನಿಟ್ಟುಸಿರ ಸಂಬಾಧದಿಂದ ಪೊಯಿವಳ್ಳೆಗಳಲಿ ।
ನಿಕಟಪೀಠಾಗ್ರದೊಳಿರ್ಪ ಬೊಪ್ಪನ ನೋಡಿ ।
ಚಕಿತಮಾನಸನಾಗಿ ಪಿತನದೇಂ ಕಾರಣದಿ ।
ಭ್ರುಕುಟಿಯಂ ಬಂಧಿಸಿದನೆನ್ನ ಮನ್ನಿಸದೆಂದು ತನ್ನೊಳಾಲೋಚಿಸಿದನು ॥ (2)

ಕೊಂದಿಡುವ ಕಡುಗೋಪವಿಡಿದ ಸಮಯದೊಳಾನು ।
ಬಂದು ವಂದಿಸೆ ನಗುತಲಪ್ಪಿ ಮನ್ನಿಸುತ ।
ಚಂದಚಂದದ ನುಡಿಯುಲುಪಚರಿಪ ಕರುಣಾಳು ಕ್ರೂರತರವಾಗಿರ್ಪುದು ॥
ಇಂದಿದೇಂ ಕಾರಣಮೆನುತ್ತ ಚಿಂತಿಸಿ ಭಯದೊ ।
ಳೆಂದು ರಘುವೀರ ಭರತಾಂಬಿಕೆಯು ಪೊರೆಗೈದಿ ।
ಬಂಧುರದ ವಿನಯದಿಂ ಬೆಸಗೊಂಡೆ ನಿಜಜನಕ ಚಿತ್ತಾನುತಾಪವನ್ನು ॥ (3)

ಏನಿದಚ್ಚರಿ ತಾಯೆ ಭೂಭೃಚ್ಛಿರೋರತ್ನ ।
ನೇನುಕಾರಣ ಕುಪಿತನಾಗಿ ವಿರಗಿಂದದೇ ।
ನೂನ ಕಿಲ್ಬಿಷವುತ್ತಸಿತಂತರಂಗವಮಶುಭವಾರ್ತೆಗಳ್ಬಂದುಕುತ್ತದು ॥
ಸ್ಥಾನವೊಂದಿನಿಸಿದವ್ರೊ ನಿಜಬದ್ಧ ಶಾಸನ ।
ಕ್ಕೂನವೇಂ ನೋಂಕೆದುದೊ ವಿಹಿತಪ್ರತೀಪನೃಪ ।
ರೇನಾದೊಡಂ ಕ್ರೂರತರಕಾರ್ಯಮೆಸಗಿದಗೊ ವಿಸ್ತರಿಸು ಕರುಣದಿಂದ ॥ (4)

ಕರುಣಾರಸಕೆ ಪಾತ್ರ ಭರತನರಿಬಲದರ್ಪ ।
ಹರನೆನಿಪ ಶತ್ರುಘ್ನರೆಡೆಯಿಂದಶುಭವಾರ್ತೆ ।
ದೊರಕಿದುದೊ ಮಾತುಳರ ದೆಸೆಯಿಂದಲಪರಾಧಲೇಶವೇಂ ಜನನವಾಯ್ತು ॥
ಚರಣಸೇವೆಯೊಳು ಮನ್ಮಾತೆಯರಾದ್ಯಖಿಳ ಜನ ।
ನೆರವಿಯಿಂ ದುಷ್ಕೃತವು ನೋಂಕೆದುದೊ ವಿಸ್ತರದೊ ।
ಳೊರೆಯದೇಂ ಕಾರಣವಿ ಮಾನವಿಂದಿಹ ನಯ್ಯ ವಾಂಛಲ್ಯ (ಚಾಂಚಲ್ಯ) ಮುಣ್ಕಿ ಮನದಿ॥

ಪಳವಾತಿನಧಿಕತೆಯು ಗುರುವಚನ ಗೌರವವ । (5)
ನಿಳಗೊಡೆಯು ನಾಜ್ಞೆಯನದಾರಾದೊಡಂ ಮೀರಿ ।
ಬಳಸುವರೆ ನಿವೃತ್ತಿಯು ದುವೃತ್ತಿ ನೋಂಕದೇಂಕತವಿ ಕೋಪಂ ಬಂದುದು ॥
ಪೊಳದುದೇನುದ್ಧತಾಮಯದ ಸಂಕಟ ಮನದಿ ।
ನಿಳಯದೊಳ್ ವಿಸ್ತರಿಸೆ ತತ್ಪ್ರತೀಕಾರಮಂ ।
ಘಳಲನೆಸಗುವೊಲೊರೆಯವೇಳ್ಕೆಂದು ನಯವಿನಯ ವಚನದಿಂ ಬಿನ್ನವಿಸಿದಂ ॥

ಪಿರಿಯ ಗುರು ದೊರೆ ಸುರಪಸನ್ನಿಭಂ ಸರ್ವಜನ । (6)
ರೊರೆಯೆ ಪ್ರತ್ಯಕ್ಷ ದೇವಸ್ವರೂಪಂ ಖತಿಯೊ ।
ಳಿರಿಸೆ ಮನಮಂ ನೋಡುತಾವವಂ ಸುಖವಡೆವ ನೀಜಗದ ಜೀವರಲ್ಲಿ ॥
ಆರುಪಿದೊಡೆ ಭವದೀಯಚರಣಾನುಶಾಸನವ ।
ಶಿರಸಾಭಿನಂದನಂಗೈದು ಸಾರ್ಥಂಗೈವೆ ।
ನೊರೆಯವೇಳ್ಕೆಂದವಿತ ನಮ್ರವಚನಗಳಿಂದಲುಪಚರಿಸಲಿಂತೆಂದಳು ॥ (7)

ಮುಳಗಿತಾಶಾಸಮುದ್ರದಿ ಲಜ್ಜೆದಾಕ್ಷಿಣ್ಯ ।
ಮಿಳತ ಮಾಯಿತ್ತೈತಪ್ಪಸಿರಿ ಬಿಸಿಲ್ದೊರೆಯೊಳಗೆ ।
ಗಿಳತಮೆನಿಸಿತು ಮನೋರಥ ಕಾಳಕೂಟ ನಿಭಕಾನಾರದೊಳ್ಪ್ರೀತಿಯು ॥
ಬೆಳಗೆ ಪುಳಕಾಂಕುರಂ ಮನದಿ ಕಾಕಾಣಿಯೆನು ।
ತ್ತಾಳಸದುದ್ಧತ ದುರಾಧರ್ಷಹರ್ಷೋರ್ಜನ್ನತದೊ ।
ಳಳ ನೀಲವೇಣಿ ಮುಂತಪ್ಪ ಕಜ್ಜವನೊಪ್ಪವೆಸಲುಸುರ್ದಳೀ ವೇಳ್ವೆನು ॥ (8)

ಶಾರೀರಸಂಭೂತ ರುಜೆಯಿಲ್ಲ ಮುಂದೊಂದ ।
ಹಾರೈಪ ಬಗೆಯಿಲ್ಲ ನರಿಭಯ ಕದಾಚಿತ್ತು ।
ಸಾರಲಿಲ್ಲೈ ಪುತ್ರ ಮಿತ್ರ ಭೃತ್ಯ ದೋಷಕೃತ್ಯಮಂ ನೆನೆಯಲಿಲ್ಲ ॥
ತೇರಾಯಕರದಾಧಿಯಡಸಿರ್ಪುದಿಟ್ಟಿಸಲ ।
ಪೂರುವಮದೇನೆಂದೊಡದಕೆ ರಾವೆನಿಸಿರ್ಪ ।
ಕಾರಣಂ ನೀನಲ್ತೆ ನೃಪತಿಯ ಮನೋರಥವ ಪ್ರೂಸಲ್ ನಿರುತ್ತರಮಹುದು ॥ (9)

ಮೊದಲು ದೇವಾಸುರರ ಕದನದೊಳ್ ಸಂಪ್ರೀತಿ ।
ಯುದಯಿಸಲ್ಕೆನ್ನಲ್ಲಿ ಕರುಣಿಸಿದ ವರಮೆರಡ ।
ಕೆದು ಸಮಯ ಗೆಯ್ಯಮೇಳ್ಕೆಂದು ಯಾಚಿಸಿದೆನವನೀಶ ಮಕುಟಮಣಿಯ ॥
ಸದಯಾಂಬುರಾಶಿಯಾಡಿದುದ ಕೊಡಯ ಜವಿಸ ।
ಲೊದವುದು ದುರಿತವೊಪ್ಪೊಡೆ ನಿನ್ನದಾಕ್ಷಿಣ್ಯ ।
ದದುಭುತದ ದಯದಿಂದ ಖಿನ್ನನಾದಂ ನೃಪತಿ ಯುಕುತಿ ಮಂ ತೋರದನಘ ॥

ಖರಕಿರಣನುರುಬೆಯಿಂ ಗಿರಿಶಿಖರ ಸಿಡಿವಂತೆ । (10)
ಕರಕರದ ನುಡಿಯನಾಲಿಸಿದನಾತುರದಿಂದ ।
ಕರಗಿತತಿಧೈರ್ಯ ನಿರ್ಜುದ್ಗರಳದರಶನದ ನಿಖಿಲ ಪ್ರಾಣಿಗಳು ತನುವ ॥
ಮರೆದಚೇತನರಪ್ಪ ತೆರದಿಂದ ಲಿವಿಮಿಸುಕ ।
ದರೆನಿಮಿಷ ಚಿತ್ರಪುತ್ಥಳಿಯಂತೆ ತನ್ನೊಳಗೆ ।
ಪರಿಕಿಸಿಟ್ಟಿಸಿ ಮತಿಯಗತಿಯಿಂವಲಿಂತೆಂದನುಪಮಂ ನಾತೆಯೊಡನೆ ॥ (11)

ಶೀತಕಣದಿಂ ದ್ವಾದಶಾತ್ಮಂಗೆ ಭೀತಿಸಂ ।
ಜಾತ ಸಮನಿಪ್ಪುದುಂಟೆ ಯಿತರತುಷಿತ ಶಿಧರಾ ।
ನೇತಾನುತಾಪಕರಮೆನಿಪ್ಪುದಚ್ಚರಿಯಾಗಿ ತೋರಿತೀಯವಸರದೊಳು ॥
ತಾತನಾಡಿದ ನುಡಿಗೆ ಜಾತುಜಿತು ಪುಸಿಯಂಬ ।
ಮಾತುಂಟೆ ನೂರಂಚಿನಲಗು ಮಾಹೇಂದ್ರ ।
ದಾತುರಕ್ಕಳುಕ ಬಳ್ಕುವುದು ದುಷ್ಕಾಲಗತ್ತಿ ಮತಿಗಗೋಚರಮಂಬಿಕೆ ॥ (12)

ನೆನೆದ ಬಯಕೆಯ ಸಲಿಪ ನಾವನುತ್ತಮಸುತಂ ।
ಮನಪ್ರೊಲಿದು ಪೇಳ್ದುದಂ ಮಾಳ್ಪನವ ಮಧ್ಯಮಂ ।
ಕನಲಿಸುತ ನುಡಿಯ ಪಾಲನೆಗೆಯ್ಯದಾತ್ಮಭವ ನಾತನೆ ಕನೀಯಸಾತ್ಮ ॥
ವನಧಿಮೇಖಲೆಯಣುಗಿ ಸೌಮಿತ್ರಿ ಧನರನ್ನ ।
ವನು ಬಿಟ್ಟು ಗರವಸೇವಿಸು ತುರ್ಚಿಪನ ಪೊಗ ।
ಲೆನೆ ಜನಪಕೊಪ್ಪುವಂ ತಪ್ಪೆನುಡಿದೆರಡಾಡೆ ನಿಮ್ಮ ಸತ್ಯಮಂಬಿಕೆ ॥ (13)

ಸಂದೇಹಮಿನಿತಿಲ್ಲಮಯ್ಯನ ಮನೋರಥವ ।
ನಂದದಿಂ ಬಿತ್ತರಿಸೆ ಕೈಗೈವೆನಿದು ಸತ್ಯ ।
ಮೆಂದೊಡಂಬಡುತ ದಯೆಗೈವೇಳ್ಕುಮೆಂದಿಗುಂ ರಾಮನೆರಡಂ ನುಡಿವನೆ ॥
ಕುಂದದುಸುರೆನಲಶ್ವಪತಿಯಣುಗಿ ನಸುನಗುತ ।
ಳೆಂದಳ್ ಮನೋರಥಂ ಫಲಿಸಿತೆಂಬಾನಂದ ।
ದಿಂದ ಮುಂದಣ ಕಜ್ಜ ಮೋರೆಪೋರೆಗಳಾಗದೆಂದುಪಾಯದ ವಿಸಯದಿ ॥ (14)

ಪಿಂತೆ ನಿರ್ಜರರಸುರರಾಜಿಯೊಳ್ ಸಂಪ್ರೀತಿ ।
ಪಂಕ್ತಿರಥಗುದಿಸಲ್ಕೆ ಪಾಲಿಸಿದ ವರಗಳ ।
ನ್ನಿಂತಿರಿಸಿ ನೃಪತಿಯೊಳಗಾಂ ಬೇಡಿದಿರ್ದೆ ನೀ ಪರಿಯಂತ ವಸ್ತುಗಳನು ॥
ಅಂತರಂಗದ ಪಾಣಿಯಲ್ಲ ಸಾಕ್ಷಿಕಸುರರ
ಸಂತೆಯೀ ಯವಸರದೊಳಾಂ ಕೇಳ್ದೆನೆಲೆ ತನಯ ।
ನೀಂ ತಿಳಿದೊಡಾಲಿಪುದು ಮೃದುದಾಂತ ನಿಜವನುಡಿವಾತರೊಳಗಗ್ಗಳಸಲೆ ॥ (15)

ರಾಮಚಂದ್ರಗೆ ಯೌವ ರಾಜ್ಯಾಭಿಷೇಕಮಂ ।
ನೇಮಿಸಲ್ಕೆರೆದಿರ್ಪ ಸಂಭಾರದೊಳಗಿಂದು ।
ಮಾಮಕಾತ್ಮಜ ಭರತಗೀ ರಾಜ್ಯಪದವಿಯಂ ಕರುಣದಿಂದಿತ್ತು ಬಳಿಕ ॥
ಈ ಮಹಿಯನುಳಿದು ಪದಿನಾಲ್ಕು ವರುಷಂ ಮುನಿ ।
ಸ್ತೋಮದೊಡವೆರೆದು ವನ್ಯಾಹಾರನಿಯಮದಿಂ ।
ರಾಮ ನಿರವೇಳ್ಕೆಂತು ಕೃಪಗೆಯ್ಯೆ ಭವದೀಯಭಾಷೆ ಸತ್ಯವಪ್ಪಂತುದು ॥ (16)

ಮದ್ವಚನ ರಚನೆಗಳ್ ಶ್ರುತಿಕಲಿತ ಮಾಗಲ್ ಭ ।
ಯದ್ವಯಂ ಜನಿಸಿದುದು ಧರ್ಮಲೋಪದೆ ನಿರಯ ।
ಮದ್ವಯಂ ಸತ್ಯಮೆನಿಸಲು ಶೂರ ನೀನಾಗೆ ನಿನ್ನದಾಕ್ಷಿಣ್ಯಮಡಸಿ ॥
ಹೃದ್ವನಜದೊಳ್ಕದಕ್ಕದಕೊಂಡು ಪೇಳ್ದೊಡಾ ।
ಖದ್ವಚ್ಛಿರೋರತ್ನ ಮೌನವಿಡಿದಿಹನಿದು ರ ।
ಘೂದ್ವಹನೆ ನೀಂ ದಯದಿ ಪಾಲಿಸಲ್ವೇಳ್ಕುಮೆನೆ ನಸುನಗುತಲಿಂತೆಂದನು ॥ (17)

ತರುಣ ಪರಿಮೌಳಕಲನಂಗೈದು ಭೂಭಾರ ।
ದಿರವ ಮೊದಲಂ ಪೊರೆವುದೆಂದು ಸುಖರೂಪಮಂ ।
ತರಳಂಗೆ ನೇಮಿಸಿದಿರು ಭಯಮಂ ಪರಿಕಿಸಿದೊಡೆನ್ನಲ್ಲಿ ವಾತ್ಸಲ್ಯವು ॥
ಭರಿತಮಾಗಿದೆ ತಾಯೆ ನೋಯದೆನ್ನಯ ಮನಂ ।
ಹರುಷಗೊಂಬುವದಿಂದೆ ಬೇಗಲಪ್ಪಣೆಗೊಡಲು ।
ಚರಿಪೆನಟವಿಯೊಳು ಪದಿನಾಲ್ಕು ವರುಷಂ ಪಿತನ ನುಡಿಯ ಸತ್ಯಗೈವರೆ ॥ (18)

ರನೆಯರಸನುಕ್ತಿಯಂ ಪಾಲಿಸುವೊಡಾಂ ಚೀರ ।
ವಸನಂ ಜಟಾಧಾರಿ ಯೆನಿಸಿ ವನಮಂ ಪೋಗುವೆ ।
ಪುಸಿಯೆನೊಂದಂ ತಿಳಪೊಡಿಚ್ಛೈಪೆ ಪಿತನೆನ್ನ ನುಡಿಸದಿಹುದೇಂ ಕಾರಣಂ ॥
ಪೊಸತೆನಿಪುದಿದಕೆ ಮುನಿಸಂದಾಳಸಲ್ಗದೀ ।
ವಸುಮತಿಯನುಳಿದು ಮುನಿಯಾಕೃತಿಯೊಳೀ ದಿನವೆ ।
ಪೆಸನಗೊಳದೈದುವೆಂ ಸುಖಿಯಾಗಿ ಸಂತಸದೊಳಹುದಿನಿಸ ಮನಕೆ ತರದೆ ॥ (19)

ಧನಕನಕರಾಜ್ಯಮಂ ವಸ್ತುವಾಹನನಿಚಯ ।
ಮೆನಿತುಂಟದಂ ಪ್ರಿಯದೆ ಭಂತಗಾಗಿತ್ತಪೆಂ ।
ಜನಪಗುರುಪಿತ ಹಿತಕೃತಜ್ಞ ನೇಮಿಸಿದುದಂ ಮಾಡದಾನತಿಗಳೆವೆನೆ ॥
ಕಿನಿಸಿಂದ ಪೊಗವನಿಳೆಗರ್ಪಿಸುತ ಕಂಬನಿಯ ।
ನನುವಿನಿಂದೊಂದ ನಡಿಗಡಿಗಮರ್ಚಿಪುದು ।
ಕಸಲಿಪುದು ಮನ್ಮನವಿದೊಂದನಾಂ ಬೆಸಗೊಳಲು ಪ್ರತಿಪದಂ ಪದಮೆನಿಪುದು ॥
[(20

ಭರತನಂ ಬಾಗರೆಯಲಟ್ಟುವುದು ಚಾರರಂ।
ದೊರೆಯೊರೆಯದಿರ್ದೊಡಾಂ ಪೋಗುವೆ ವನಕ್ಕೆಂದು।
ಹರುಷಗೊಳಿಸಲ್ ಭವಚ್ಚಿತ್ತಮಂ ಮತ್ತಿದಕ್ಕೊಕ್ಕಣೆಯಂ ಜನಿಸದೆನುತ ॥
ನರನಾಥನಂದನಂ ಕೇಳಲಾನಂದದಿಂ।
ತರುಣನಂ ಕರೆಯಲಟ್ಟುಹೆನಶ್ವಸಾರಥಿಗಳ।
ಪೊರಮಡುವುದುಚಿತಮಾಲಸ್ಯಮಿಲ್ಲದೆನುತ್ತಮೊರೆದಳಾ ಭರತಾಂಬಿಕೆ ॥ (21)

ನಿನ್ನ ಮುಂಗಡೆಯಲೀ ಮಾತನುಸಿರಲ್ಕರಸ।
ಖಿನ್ನತೆಯನಾಂತಿಹಂ ವನಕೆ ನೀಂ ಗಮಿಸದಿ।
ರ್ದನ್ನ ಸ್ನಾನಾನ್ನಪಾನಂಗೊಳ್ಳದನುತಾಪಗೊಳುತಿರ್ದನಿದು ಸತ್ಯವು ॥
ಎನ್ನುವೀ ದಾರುಣದ ವಾಣಿ ಶ್ರುತಿಪಥಮಂಟು।
ವನ್ನೆಗಂ ಹಾ ಕಷ್ಟಮೆನುತ ಭೂತಳಕುರುಳ।
ಬನ್ನಬಡುವಯ್ಯನಂ ಪಿಡಿದೆತ್ತಿ ಸಂತೈಸಿ ರಾಮ ಮಾತೆಯೊಳೆಂದನು ॥ (22)

ಧನಕಾಂಕ್ಷೆ ರಾಜ್ಯಾಭಿಲಾಷೆಗಳ ನುಳಿದು ಸ।
ನ್ಮುನಿಹೃದೋಪಮಮೆನ್ನ ಮನಮರಣ್ಯಾವ ಗಮನ।
ದನುಮಾನಮೊಳ್ಳನಿತ ಸೋಂಕದಂಬಿಕೆ ತಾತನಪ್ಪಣೆಗೆ ನೂರುಮಡಿಯಾ ॥
ಬಿನದಂ ಭವದ್ವಾಕ್ಯ ಮಿಂದಾನುಪೋಗಿ ನಿಜ।
ಜನನಿಗಾನತನಾಗಿ ಸೀತೆಯಂ ಸಂತೈಸಿ।
ಮನದ ಹರುಷದೊಳೈದೆ ಬಂದು ವಂದಿಸಿ ಪೋಪೆನಿದಕೆ ಸಂಶಯಗೊಳದಿರು ॥ (23)

ಈ ರಾಜಧಾನಿಯಂ ಮೊದಲರಸುಗಳ ತೆರದೊ।
ಳಾರಾಜಿಸುತ ಮಖಿಲ ಲೋಕಮ ಪೊರಯಿಪಂ।
ತಾರಾಜನೆನಿಸಿರಲಿ ಭರತ ನಿನವಂಶಜರ್ಸಕಲಮುನಿ [illegible]ಳಯಿಂ ॥
ನೀರಾಜಿತಾಂಘ್ರಿ ಪದರೆನಿಸಿರ್ಪರಾತಂದ।
ಲಾರಾಜನಾರ್ಯೆವ ನೆಲಕ್ಕೈದೆ ಪೋಪೆನೆನ।
ಲಾರಾಜ ನಾಲಿಸುತ ಘನರವವನುರೆಕೇಳದಗಸಂಚೆಯಂತಾದನು ॥ (24)

ಎಂದೊರೆದಚೇತನದ ಪಿತಗೆರಗಿ ಬೇಗ ಬಲ।
ವಂದು ಕೇಕಯಸುತೆಗೆ ನಮಿಸಿ ಕಕ್ಷಾಂತರಗ।
ಳೊಂದೊಂದ ಕಳೆಕಳೆದು ಬರುತ ನಮಿಸುವ ಭೃತ್ಯಮಿತ್ರಾದಿಗಳ ನೇಹದಿ ॥
ಬಂಧುರದ ವಚನರಚನೆಗಳಲುಪಚರಿಸಿ ನಡೆ।
ತಂಪು ರಾಜ್ಯಾಭಿಷೇಕಾರ್ಥಸಂಭಾರಕಂ।
ವಂದಿಸಿ ಶಶಿಪ್ರಭಾಛತ್ರಚಾಮರಗಳಂ ಮನ್ನಿಸದೆ ಮಮತೆವಿಡಿದು ॥ (25

ಬರುತಿರಲು ಪಿಂತೆ ಮೊರೆವೃತ್ತಮುರಗೇಶನಂ।
ತರಿನಿಕೃಂತನ ಸುಮಿತ್ರಾತ್ರನಯ ನೈದುತಿರೆ।
ನೆರೆದ ನೃಪಮಂಡಲಂ ವಿಪ್ರಬಾಂಧವನಿಚಯಲೋಕ ವಿಸ್ಮಯಮಾಗುತ ॥
ದೊರೆತನದ ಚಿಹ್ನೆಯೊಳ್ಳನಿತಿಲ್ಲ ವಾಜ್ಞೆಯಮ।
ವೆರಸಿ ತ್ವರಿತದೊಳೈನುತಿಹುದಿದೇಂ ಕಾರಣಂ।
ತೆರೆಗಚ್ಚರಿಯ ಬೀರುತ್ತಿದೆ ಎನುತ ಸಲ್ಲಾಪಗೈದು ಚಿಂತಿಸುತಿರ್ದುದು ॥ (26

ಕರಗತದ ರಾಜ್ಯದಭಿಷೇಕಸಂಭಾರವುಂ ।
ಬೆರತಾದುದೆಂದು ಮನ ಕುಗ್ಗಿದುದೆ ಮಲಿನತೆಯು ।
ಪೊರೆದುದೇ ಮುಖಮೈಕೆಲಿಂದ ತಂಗದಿರಗೇಂ ಕಲೆಗೂಣಿಯುಂ ಬರ್ಪುದೇ ।
ಎರಗಿದರನುಪಚರಿಸಿ ಸ್ನೇಹಿತರ ಸಂತೈಸಿ ।
ಪುರಜನವ ಮನ್ನಿಸುತ ಸಂತೋಷಚಿತ್ತದಿಂ ।
ದೊರೆಯುಂತೆ ತಾಯ್ವನೆಗೆ ನಡೆತಂದನೊಲವಿಂದ ಚಿಂತೆ ಲೇಶಂ ತೋರದೆ ॥ (27)
ಜಡೆನುಡಿಯನಾಡದೊಡೆ ಬೇಸರಂಗೊಳಸದೊಡೆ ।
ತಾಡುಕದೆ ವಿಷಾದವಂ ತನ್ನಮಾತಾಧಿಕ್ಯ ।
ದೆಡೆಯಲ್ಲಿ ಕಂಡೆಮ್ಮನಾರೈವ ಸತತರುವನೈದೆ ಕಾನನಕೆ ಕಳಪಿ ॥
ಮಡದಿಯುಳ ನುಡಿವಿಡಿದು ಮುಂದಾವಗತಿಗಳಂ ।
ಪಡೆದಪೆನೆನುತ್ತುರಗನೇಂ ಗೈದನೆಂದೆನು ।
ತ್ತಡಿಗಡಿಗೆ ಶುದ್ಧಾಂತದಬಲೆಯರ್ ಕರುಗಾಣದೆಳಗಂದಿಯುವೊಲಾದರು ॥ (28)
ಮರುಗಲಂತಃಪುರಸ್ತ್ರೀಣಾಮೆಡಬಲದಲ್ಲಿ ।
ದೊರೆಯನುರೆ ಬರುನುಡಿಯು ನಾಡುವವರಂ ನೋಡಿ ।
ಕರಿಗಮನನಿಂ ಪೊರೆಗೆ ಬಂದಮಾತ್ಯಾದಿಗಳನುಪಚರಿಸಿ ನಿಳಯದೆಡೆಗೆ ॥
ಬರಲು ಪೊರವಾಗಿಲೊಳರ್ದು ವೃದ್ಧರ್ ನಮಿಸೆ ।
ಹರುಷದಿಂ ನೋಡುತ್ತಮೆರಡನೆಯ ಬಾಗಿಲೊಳು ।
ಧರಣೀಸುರಾದಿಗಳ್ ಪ್ರಾಜ್ಞರಿರೆ ವಂದಿಸುತ ಸಂತವಿಸಿ ಮುಂತೆ ನಡೆದು ॥ (29)
ಪೋಗಲಂತಃಪುರದ ಬಾಗಿಲೊಳ್ ಸ್ತ್ರೀಬಾಲ ।
ರಾಗಾಹಿತ ಶ್ರೀಕರಿದಿರೆವೃದ್ಧ ಮೃದುಕಲಿತ ।
ವಾಗಿರ್ಪ ನುಡಿಗಳಂ ನುತಿಸುತಿರಲನಿತರೊಳಗೀ ವಾರ್ತೆಯಂ ತಿಳಿಪಲು ॥
ಪೋಗಿ ಕಂಡರ್ ಪೀಠಮಧ್ಯ ಮಧ್ಯಾಸೀನ ।
ವಾಗಿ ವಾಚ್ನಿಯಮದಿಂದಂತರಾಯಾಪಹ ।
ದ್ಯೋಗರುದ್ಯೋಗದಿಂದಿರುವ ನಿರ್ಮಲೆಯನುರುಮೌನಿ ಮಸ್ತಕಮಣಿಯನು ॥
[(30)
ಎಡದ ಮಡದಿಂದೊತ್ತಿ ನಾಲ್ಕುದಳಗಳನಾರ ।
ರೆಡೆಯಲ್ಲಿ ದಕ್ಷಿಣಾಂಘ್ರಿಯನಿಟ್ಟು ದಶದಳದ ।
ಜಡಜಮಂ ಬಲಿದು ಪದಿನಾರುಸಂವರ್ತಿಕಾಬಂಧನಂಗೈದು ಬಳಿಕ ॥
ತೊಡರಿಸುತಷ್ಟಳವ ಸಭ್ರಭೂಶಿಖಿಗಳಂ ।
ಪಿಡಿದು ರುದ್ರಸ್ಥಾನ ಮರುತ ವೃಜ್ಮನಗಳಂ ।
ತುತುಕೆ ಸರಸ್ವತಿಯು ತನ್ನಯಾವಸ್ಥೆಯಿಂದಿಹ ದೇವಿಯಂ ಕಂಡನು ॥ (31)
ಕುಸುಮಾಕ್ಷತಂ ಲಾಜೆ ದಧಿ ದೂರ್ವೆಘೃತಗಳಂ ।
ಲಸಿತ ಜಲಪೂರಿತಸ್ವರ್ಣಕುಂಭಂಗಳಂ ।
ಕುಸಮಚೆರುಗಳಲಿ ಕ್ರತುಭುಗನಿಗರ್ಪಿಸುತ ಭೂಸುರರ್ವೆರಸು ಬಳಿಕ ॥
ನಿಶೆಯೊಳಗೆ ನಿರ್ಮಾಯಮೆಸೆವ ಋಙ್ಮಂತ್ರದಿಂ ।
ಶಶಿಧರನ ಸತಿಗೆ ವಂದನೆಗೈದು ಸಾಮ್ರಾಜ್ಯ ।
ದೆಸಕಕಕ್ಕೆ ನಿರ್ವಿಘ್ನಮಪ್ಪಂತೆ ಮಾಡಿ ಸಿರಿಯರಸನಂ ಧ್ಯಾನಿಸುತಿರೆ ॥ (32)

ಅನಿತರೊಳು ರಾಮಾಭಿಗಮವಾರ್ತೆಯಂ ದೂತಿ ।
ಯನುಸರಿಸುತೆಚ್ಚರಿಸೆ ಜನನಿ ಜನಿತಾನಂದ ।
ಮನಸಿನಿಂದೀಕ್ಷಿಸುತಲಿಪ್ಪನ್ನ ಮಹಿತೋನ್ನತಾರ್ಣವಂ ಬರೆ ಕೊರಳಕೆ ॥
ಘನರವದೆ ಸಂತುಷ್ಟಿಯಾಗಿರರ್ಚಿ ಜ್ಯೋತಿ ।
ಮಿನುಗೆ ಪ್ರತಿಪದೃಷ್ಟಿಯಿಂದವಾನಂದಿಸುವ ।
ಮುನಿಯಂತೆ ಬೆರದಿರ್ದಳಾತ್ಮಭವನಂ ನುಡಿಸಲೆಚ್ಚರಿಕೆ ಮೈದೋರದೆ ॥ (33)

ಬಂದೆರಗಿ ಭಕ್ತಿಯಿಂ ಕೈಮುಗಿದ ಸುಮನಸಾ ।
ನಂದನನ ನಂದನನ ನಿಟ್ಟಿಸುತ ಸುಮಮಾಲೆ ।
ಯಿಂದಧಿಕ ಮೃದು ರುಚಿರ ವೆತ್ರಬಾಹಾಲತಿಕೆಗಳಲಪ್ಪಿ ಮುದ್ದಿಸುತ್ತ ॥
ಮುಂದುವರಿದಾನಂದವೊಗೆಯೆ ಮಸ್ತಾಗ್ರಮಂ ।
ಚಂದದಿಂದಾಘ್ರಾಣನಂ ಗೈದು ತುಷ್ಟಿವಡೆ ।
ದಂದದಿಂದಂಕದೊಳ್ ಕುಳ್ಳಿರಿಸಿ ಪರಸಿದಳ್ ರಘುವಂಶವಾರ್ಧಿಶಶಿಯ ॥ (34)

ವರವೃದ್ಧರಾಜರ್ಷಿ ಧರ್ಮಿಷ್ಠರಿಂದಧಿಕ ।
ತರಕೀರ್ತಿ ಸಂಪದಾಯುಷ್ಯಗಳನೈದಿ ನೀಂ ।
ದೊರೆವೊಳ್ಪ ಯೌವರಾಜ್ಯಾಭಿಷೇಕಮನಾಂತು ಹರಿವಿಷ್ಟರದೊಳೆಸೆವುತ ॥
ಇರುವುದಂ ನೋಡಿ ಸಂತಸಗೊಂಬೆನೆಲೆ ಮಗನೆ ।
ಪರಿಪರಿಯ ಭಕ್ಷ್ಯಭೋಜ್ಯವನುಂಡು ಸಂತೋಷ ।
ಕರಗೊಳಪುದೆನಲವ್ವೆಗಭಿನಮಿಸಿ ಮೆದು ಮಧುರವಾಣಿಯಿಂದಿಂತೆಂದನು ॥ (35)

ಕ್ಷೇಮಂಕರಂ ಭವತ್ಕರುಣಾಕಟಾಕ್ಷದಿಂ ।
ಕಾಮಮೆನೆ ಕೈಗೂಡಲಹುದಾದೊಡವಸರದಿ ।
ಭೂಮಿಪಾಲಂ ಸತ್ಯಸಂಧಮಾಸ್ತಿಕಮಣಿಯುದಾರತೇಜೋರಾಶಿಯು ॥
ನೇಮಿಸಿದ ತತ್ವಮಂ ವಿಸ್ತರಿಸಿ ತ್ವತ್ಪಾದ ।
ತಾಮರಸಕೈತರಲೆಂದೈತಂದೆ ನೋಡೆನುತ ।
ರಾಮಪುರನಾಯಕಂ ಮಾತೆಯೊಳ್ ಪೇಳ್ಪುದಂ ಮುಂದೊರೆವೆನಗಸಂಭವೆ ॥ (36)

(ಸಂಧಿ 8, ಪದ 353.)

ಒಂಬತ್ತನೆಯ ಸಂಧಿ.

ಸೂಚನೆ ॥ ತಾತನಾಡಿದ ನುಡಿಯ ಸತ್ಯಮೆಂದೆನಿಸುವರೆ ।
ಮಾತ್ರೆಯ ಮನೋರಥಂ ಜಾತುಚಿತ್ರಸವಿಕಲ್ಪ ।
ರೀತಿ ಯನುಸರಿಸದಂತುಪಚರಿಸಲನುಗೈದನನುಜನಂ ರಘುವೀರನು ॥

ಭರತಗೀರಾಜ್ಯಾಧಿಪತ್ಯಮಂ ದಯೆಗೈದು ।
ಸುರುಚಿರದ ವನ್ಯಮೂಲಾಹಾರ ಯಮಿಗಳಂ ।
ಪರಿಪಾಲನಂಗೈಯೆ ಪದಿನಾಲ್ಕುವತ್ಸರಂ ವಾತ್ಸಲ್ಯದಿಂದಮೆನಗೆ ॥
ದೊರೆ ನಿಯಾಮಕಗೈದಕತದಿಂ ಫಲಾಹಾರ ।
ನಿರುಗೆಯಾಗಿರಲದಂ ಬಿಟ್ಟು ಸಿದ್ಧಾನ್ನಮಂ ।
ವರಿಸಲೆಂತಹುದವ್ವೆ ಯೆಂದನಾ ರಘುವರಂ ಶೈಲಾಧಿರಾಜತನುಜೆ ॥ (1)

ಶೀತಾಳು ಕಮಲೋಪವೀತವೆನಿಸಲಾವೊಗಂ ।
ವೇತಾಳಸೋಂಕನನುಕರಿಸಿ ಒರೆ ಶುಭರದಂ ।
ಸೋತಾಳಯಂದದೊಳ್ಕೆಡೆದಳಪ್ರಿಯವಾಣಿ ಶ್ರುತಿಕಲಿತವೆಂದೆನಿಸಲು ॥
ಭೀತಾಳಯೊಳ್ಕ್ರೂರ ನಿಕರವರಪಿರೆ ನೋಡಿ ।
ಮಾತಾಡಲಮ್ಮದುಮ್ಮಳಗೊಂಡು ರಘುವರಂ ।
ಆ ತಾಳದೆತ್ತಿ ಕುಳ್ಳಿರಿಸಿ ಸಂತೈಸುತಂ ಮಗುಳೆ ಮೌನದೊಳಿರ್ದನು ॥ (2)

ಬೀಸಿ ಬಿಜ್ಜಣಿಗಳಂದಖಿಲೋಪಚಾರಗಳ ।
ರಾಸಿಗಳ ನೆಸಗಲೆಚ್ಚತ್ತು ನಿಟ್ಟಿಸುತಾಗ ।
ಳಾಸತೀಮಣಿ ರಾಮಚಂದ್ರನೊಡನಿಂತೆಂದಳೆಲೆಮಗನೆ ಪತ್ರಿಯ ದೆಸೆಯಿಂ ॥
ಈಸು ಸುಖಮಂ ಪಡೆಯದಾದೆನೈ ನಿನ್ನಿಂದ ।
ಲೇಸನಾರ್ಜಿಪನೆನ್ನುವಾಸೆಯಿಂದಿರೆ ಬಂದು ।
ದೀ ಸಮಯದೊಳಗತುಳ ದುಸ್ತರ್ಕ್ಯ ವಿಘ್ನಮನ್ನೇನೆಂಬೆ ಕೃತಕೃತ್ಯಮಂ ॥ (3)

ಕಲಿತವಂತೌಷಧಿಗಳೆಲ್ಲ ಸಫಲಗಳಂವ ।
ವಲಘು ಸಂಕಲ್ಪಸಿದ್ಧಿಗಿತಾತ್ಮಸಂತೋಷ ।
ಕಲಿತನಿಧಿ ಕಂಗೆಸೆದುದೆತ್ತುವೆನೆನುತ್ತ ತುಳ ಸಂಭ್ರಮಂಗೊಳುವೆಡೆಯೊಳು ॥
ಬಲಿತಚಿಕುರಂಗಳಂ ಕೆದರಿ ಕೆಂಗಿಡಿಗಣ್ಣ ।
ನಲುಗಿಸುತ ಪಿಡಿಯಲವ್ವಳಸುವ ಪಿಶಾಚಿ ಖಂ ।
ದಲೆವಂತೆ ಕೈಕಾಮಹಾಭೂತವಾಕ್ರಮಿಸಿತಸ್ಮನ್ಮನೋರಥವನು ॥ (4)

ನಿರತಿಶಯ ಸುಖವನನುಭವಿಪೆನೆಂಬಾಸೆಯಲಿ ।
ಚಿರಕಾಲ ತಪವಿರ್ದು ಪಡೆದು ಪುತ್ರರ ಹರುಷ ।
ತರಗೊಂಬ ಸಮಯದೊಳಗನಿಷ್ಟ ಸಂಜನಿಸಲಾನೆಂತು ಪೊರೆದಪೆನಸುವನು ॥
ತರುಣರಂ ಪಡೆವುದತಿದುಃಖಾಕರಂ ಮಕ್ಕ ।
ಳಿರಿಯದಳಗನಿತೆ ಪುಸಿ ಶೋಕಮೆಂಬೀಗಾದೆ ।
ಪರಿಕಿಸೆ ನಿಜವಾಯ್ತು ಹಂಕಾರಮುಂ ಪೋಯ್ತು ವಿಧಿಕೃತವಿಘೋರದಾಯ್ತು ॥ (5)

ತನಯಗತಿಶಯರಾಜ್ಯ ಸಿರಿಯಡಸೆ ತನ್ಮಾತೆ ।
ತನುಭಾವವಂ ಮರೆದು ತನ್ನವರ ಮುಂಗಡೆಯ ।
ಲನುದಿನಂ ಬಿರುನುಡಿಯ ನಾಡುತಿರಲಾಂ ಕೇಳ್ದನಾಥೆಯಂದದಿ ತೊಳಲುತ ॥
ತನುವ ಪೋಷಿಪುದಕೆಂದಧಿಕ ಸುಖ ನಿನ್ನೊಡನೆ ।
ವನದಿ ತಾಪಸಿಯೆನಿಸಿ ದಿನವ ಕಳೆದಪೆನೆಂದು ।
ಮನದ ಸಂಕಟದಿಂದ ಮಗನೊಳೆಂ ಬೇಳ್ವುದಂ ವಿಸ್ತರಿಸಲೆಂತಪ್ಪುದು ॥ (6)

ಹರಿಯಾಣವನೋನ್ಮಾದಿ ಮೆರೆವ ಸೀಧುರಸಾಪ್ತ ।
ಚರಣದಪ್ಪಾಳ ಸನ್ಮೈತ್ರಿ ಪೈಶಾಚವಿಧ ।
ಕೊರೆಯ ಲಿಂತಹುದವಿತ ವೈಭವದ ದುರ್ಮೇಧೆ ಸಿರಿಯಡಸೆ ಪರರನೆಂತು ॥
ಅರಿದಪಳೆ ನರರೆಂದು ದುರುಳೆಯಾಜ್ಞಾಕಲಿತ ।
ಪುರಜನಪರಿಜನರ್ಕಾಣದೆಡೆಹುತಮೆನ್ನ ।
ಪೊರೆದಪರದಾರೆಡರ ತಿಂತಿಣಿಯೊಳಂತಿರಲಕ್ಕು ಪರಿಪಂಕ್ತಿಗಳೊಳು ॥ (7)

ಪತ್ತಾರುಸಾಸಿರದ ವರುಷ ತಪದಿಂ ಬಯಸಿ ।
ಪೆತ್ತು ನೇತ್ರೋತ್ಸವಂಗೊಳುವೆಡೆಯೊಳನಿತೀ ವಿ।
ಪತ್ತಡಸಲೆಂತಸುವ ಪೊರೆದಪಂ ಮೃಗಿಗಳನ್ನಲೆವ ಕಾಠಿಣ್ಯ ಶನಿಯು ॥
ಮೊತ್ತದೊಳ್ ಮನೆಗಟ್ಟಿ ಬಾಳ್ವುದೇನಯ್ಯ ನೃಪ ।
ಸತ್ತಮನೆ ನೀಚಕೆಂದತಿನೀಚಕರಮೆನಿಪ ।
ತತ್ತರದೊಳಾನಿರ್ಪುದನುಚಿತಂ ನಿನ್ನೊಡನೆ ಕರೆದೊಯ್ಯುವದಧಿಕ ಲೇಸು ॥ (8)

ಎತ್ತಣಿಂದೈತಂದುದಿಂದ್ರಜಾಲೋಪಮಿತ ।
ಮಿತ್ತು ಕೈಕಾವಚನ ರೂಪಾಂತು ಕಾಲಕುಲ ।
ವೆತ್ತುದಂ ನೃಪಕೇಳ ಬಾಳಕಪ್ಪಣೆಯನಿತ್ತು ನಿಷ್ಕೃಪೆಯೊಳೀವೃತ್ತಮಂ ॥
ಎತ್ತಲಾದುದು ಕನಸು ಲರಿವೆನೇ ಕರ್ಮಫಲ ।
ಮೊತ್ತರಿಸಲನುಭವಿಸದನ್ನ ತೀರದು ಭಾಷೆ ।
ಪೆತ್ತು ಭರದಿಂ ಮನೋರಥಮಾದುದೇಂ ಪೇಳ್ವೆ ವಿಧಿವಶವ ಮೀರಲಳವೆ ॥ (9)

ಅವಧಿಯಿಲ್ಲದನಂತಚಿಂತಾಪ್ರಳಾಪದಿಂ ।
ದವಿರಳದ ದೈನ್ಯಗೊಳುತಿಹ ಮಾತೆಯಂ ನೋಡು ।
ತವಸರದ ವಾಣಿಯಿಂ ಸೌಮಿತ್ರಿ ಯಿಂತೆಂದ ತಾಯ ಕರಗತದ ಸಿರಿಯು ॥
ನವಸಿ ವನಕೈದುವುದನೌಚಿತ್ಯಮಾದಪನಿಂ ।
ಯುವತೀವಶಂವದಂ ದುರ್ನೀತಿ ಜರಠ ಮೋ ।
ಲವಿವೇಕದಿಂ ನುಡಿದ ನುಡಿ ಸತ್ಯಮೆಂದಾರೊಡಂಬಡುವರೀನೆಲದೊಳು ॥ (10)

ಉದಿತ ದಕ್ಷಂ ದಾಂತ ಶಾಂತ ಸರ್ವಾಲಪ್ಪದಿ ? ।
ವಿದಿತಾಗಮಾರ್ಥ ಪಿತೃಮಾತೃವತ್ಸಲ ಮೃದುಲ ।
ಸದಯನಾಗಸರಹಿತ ರಘುವೀರನಂ ವನಕೆ ಪೋಗೆಂದನೆಂತು ನೃಪತಿ ।
ಅದುಭುತೋನ್ಮತ್ತ ಪ್ರಳಾಪದಿಂದೀಧರಾ ।
ಭ್ಯುದಯಗಳನುಳದಟವಿಗೈದುವುದಿದೇಂ ಭರತ ।
ಪದವಿಗೈತಹನೆಂತು ಸ್ತ್ರೀವಚನಕಳ್ಕುವುದು ವೀರಮತವಲ್ಲೆಂಬಿಕೆ ॥ (11)

ಮರದಿಷ್ಟಮಂ ಮದನಪಾರವಶ್ಯತೆಯಿಂದ ।
ಮರೆದು ಕೃತ್ಯಾಕೃತ್ಯಮತಿಯನುಚ್ಛೃಂಖಲತೆ ।
ವೆರೆದವಂ ಗುರುವಾದೊಡಾತನಂ ಶಿಕ್ಷಿಸುವುದಿದು ಧರ್ಮಸಿದ್ಧಾಂತವು ॥
ಭರತನಂ ತಂದಿಟ್ಟು ದುಷ್ಕಾರ್ಯ ಕರಣೆಗಳ ।
ನೊರಸಿ ನಿರ್ಮಾನುಷ್ಯವೆನಿಪೆನೀ ಧರಣಿಯಂ ।
ತ್ವರಿತದಿಂ ತೋರ್ಪೆನಿಂದಗ್ರಜನ ಪದಯುಗಕೆ ಭುಜಬಲಪರಾಕ್ರಮವನು ॥ (12)

ಅಬಲಾವಚನದಿಂದ ಕರಗತದ ದೊರೆತನವ ।
ನಬಲಾಗತಮೆನಿಸಿ ಪೋದೊಡೆಮ್ಮಂ ಲೋಕ ।
ಮಬಲಾಖ್ಯಗೈದಿಹರೆ ನೆರೆದರಿಗಳಂ ತರಿದು ಕೈಗೈವೆ ನರಸುತನವ ॥
ಅಬಲಾನನೋದ್ಯುಕ್ತ ಮಾತುಳನ ನೊಡವೆರೆದು ।
ಸಬಲಾಢ್ಯನೆಂದೆನಿಸಿ ಭರತನೈತಂದೊಡಂ ।
ಕಬಲಾಳ ಯೆನಿಸುವೆಂ ಶಾಕಿನೀಗಣಕೆಂದು ಪಲ್ಮೊರೆದುಗರ್ಜಿಸಿದನು ॥ (13)

ಇಂತನಂತ ಕಠೋರ ತರ ನುಡಿಗಳಿಂದ ಕ ।
ಲ್ಪಾಂತರುದ್ರನ ತೆರದಿ ಕೋಪಿಸುವ ಸೌಮಿತ್ರಿ ।
ಯಂತರಂಗಾ ಕ್ರೋಶವಂ ತಿಳಿದು ಘನಿನಗೆಯೊಳಾತನೊಡಂಬಡಿಪೊಡಿ ।
ಚಿಂತಿಸುತ ತನ್ನೊಳಗೆ ತಾನೆ ದುಃಖಾಸ್ಪದಕೆ ।
ಶಾಂತಿ ವೇದಾಂತಬೋಧೆಯೊಳಲ್ಲದುಳಿದ ವ್ಯ ।
ತ್ಯಾಂತದಿಂ ಕಡೆಗೊಳಿಸಲೆಂದು ಲಕ್ಷ್ಮಣನೊಡನೆ ಮೃದುತರವೊಳಿಂತೆಂದನು ॥ (14)

ಹಾಲಾಹಲದಿ ಪುಟ್ಟಿ ಹತ್ತಿ ಸತಿಯರ ಚಿತ್ತ ।
ಮೇಲಾಮುಸರಣಿಯಿಂ ವರ್ಧಿಷ್ಣುವಾಗಿ ಯುವ ।
ಲೀಲಾನುಕಾರಮಂ ಪಡೆವಗ್ನಿಯೊಳ್ಪ್ರೌಢತರವೆನಿಪ ಪಾಪಂಗಳ ॥
ಮೇಲಾದ ವೃತ್ತಿಗೊಳಿಸುವ ಕ್ರೋಧವಂ ನಚ್ಚಿ ।
ಬಾಲಾನುಲಾಪದಿಂ ದುನ್ಮತ್ತನೆನಿಸಿ ಭೂ ।
ಪಾಲತೆಯ ಪಡೆವೆನೆಂಬುತ್ಸವದಿ ತೊಳಲುತಿಹ ಮರುಳೆ ಮತ್ತದನರಿಯದೆ ॥ (15)

ಕೋಪಗೊಂಬುದೆ ಸಕಲ ಪಾಪಕ್ಕೆ ಕಾರಣಂ ।
ಕೋಪವೆಂಬುದೆ ಸಾಧುಸಂಗಪ್ರತಾರಣಂ ।
ಕೋಪವೆಂಬುದೆ ಸಕಲ ಸನ್ಮಾರ್ಗದಾರಣಂ ಚಿತ್ತವೈಕಲ್ಯಕಾರಣಂ ॥
ಕೋಪವೆಂಬುದೆ ನಿರಯಸೌಖ್ಯಗಳನೊಳ್ಕೊಂಬ ।
ಕೋಪವಶುಭಾಗಾರವಪಯಶೋಮಂದಿರಂ ।
ಕೋಪವಾದ್ಯಂ ಬಧಿರಮೂಕಜಡತಾನಿಲಯ ವಿಲಯಶ್ರೇಯಃ ಶ್ರೇಣಿಗೆ ॥ (16)

ಶಮನಿಂದ ಭೇದವೀ ಕ್ರೋಧಮದರೊಳ್ ಜನಿತ ।
ಕಮನ ತೃಷ್ಣಾದ್ಯಖಿಲ ಪರಿವಾರವೊಡೆವೆರೆದು ।
ಕ್ರಮದಿಂದ ಪುರುಷನಂ ಮೋಹಿಸುತ ಸನ್ಮಾರ್ಗಸರಿಗೆಳಿಪ ಕೆಂಗೆಂಡದ ॥
ಧಮನಿಯಂ ಸುಖವೆಂದು ಮುದ್ದಿಸಲೆತ್ತೀಗೆ ಸುಖ ।
ಸಮನಿಪ್ಪುದೆ ದೀಪಕಳಿಕಾಸ್ವಾದನಂಗೈವ ।
ಭ್ರಮೆಗೊಳ್ವ ಖದ್ಯೋತದಂದಪ್ಪುದಲ್ಲಪೇ ರೋಷ ಹರ್ಷಮನೀಪ್ಪುದೇ ॥ (17)

ಎಲುಮಜ್ಜೆ ಮಾಂಸಾಂತ್ರ ಮೇದಸ್ಸುರಕ್ತಸಂ ।
ಕಲಿತ ಸರ್ವಾಶುಚಿನಿಧಾನ ಮಾಳ್ಪುಪಕೃತಿಯ ।
ನಿಲದನಿತ ಗಣಿಸದ ಕೃತಘ್ನ ಜಲಬುಲ್ಬುದಪ್ರಾಯಮೀದೇಹ ಬಳಿಕ ॥
ಹಲವುಸುಖಕಂ ಗಾಳ ಮೇಘಾಳಿ ಮಿಂಚುಗಳ ।
ಸಲಲಿತಪ್ರಿಯಮಿದಂ ನಚ್ಚಿ ಮತಿಯಂ ಚುಚ್ಚಿ ।
ಕೊಲೆಗೆಳಸುತಿಹುದಾವ ಮೇಧೆಯೀ ದುರ್ಬೋಧೆಯೆಂತು ಸಂಜನಿಸಿತಕಟ ॥ (18)

ತಾರುಣ್ಯ ಯೌವನಾದಿಗಳೆಲ್ಲ ವೀಚಿಕಾ ।
ಕಾರ ಸ್ತ್ರೀ ಭೋಗಾದ್ಯನೇಕಸುಖಮುಂ ತಡಿ ।
ತ್ಸರ ಸ್ವೀಕಾರ ತಪ್ತಾಯಸೋಪರಿಪತಿತಕಂಕಣಕ ಮಾಯುಸ್ಸಿದಃ ॥
ತೋರುವೀ ವಿಶ್ವಮೆಲ್ಲಂ ಸ್ವಪ್ನ ಗಂಧರ್ವ ।
ವೀರ ನಗರೋಪಮಿತಮಿದ ಸತ್ಯವೆಂದೆಣಿಸಿ ।
ಧಾರುಣಿಯೊಳಂ ಸುಖಕ ಬಯಸುವರು ದಷ್ಟಾಹಿ ಹರಿದಂಶವಂ ಗ್ರಹಿಪೊಲು ॥ (19)

ಬಾಲತನದಿಂದೊಂದು ನಿಮಿಷ ಯೌವನದಿ ಸ್ತ್ರೀ ।
ಲೋಲನೆಂದೆನಿಸಿರ್ಪುದರೆನಿಮಿಷ ಧನಧಾನ್ಯ ।
ಜಾಲದಾಢ್ಯತೆ ಮೆರೆದನೆಂದು ಬೀಳುವ ಹೆಮ್ಮೆಯೊಮ್ಮೆ ಮತ್ತೊಂದುನಿಮಿಷ ॥
ಮೇಲಿದಾರಿದ್ರ್ಯಮರೆನಿಮಿಷ ನರೆಜರೆಯಿಂದ ।
ಸೋಲಿರುವತನುವಿನಿಂದರೆನಿಮಿಷ ವೇಷಗಳ ।
ಲಾಲಿಸುವ ಖಳನಂತೆ ತೋರುತ್ತಡಗುವ ಸುಖವ ಬಯಸುವರೆ ಬುದ್ಧಿಪರರು ॥ (20)

ಪೊಳೆದೇಹ ಮಾಶುತರನಾಶಿ ಭೋಗಗಳೆಂಬ ।
ರಲೆವವರೆ ನಿಮಿಷಬಿಡದರಿ ರೋಗಸಂದೋಹ ।
ಕಲಿತವಾಗಿಪ್ಪುದು ಜರಾಪ್ರಕ್ಷ ನೋಡುತಿಹಮೃತ್ಯು ಶಾರ್ದೂಲ ಬಳಕ ।
ನೆಲದೊಳುಂ ಪುಟ್ಟಿಪೋಪುವ ನೋಡಿ ಕಾಣಾವಂ ।
ತಲಘುಪ್ರಯತ್ನಗೈದಪರಸ್ಯಶೋವಣೆಗೆ ।
ಬಳಸುಕುತಿಹರೇಂ ಪೇಳ್ವೆ ಮೂಢರಜ್ಞಾನದಿಂ ತನುಸುಖವ ಬಯಸಿ ಬಯಸಿ ॥ (21)

ಸತಿಯಿಲ್ಲದೊರೆಕಲುಂ ಸುತರಿಲ್ಲವಾದೊಡೇ ।
ನತಿಶಯದ ಧನವಿಲ್ಲ ದೊರದಡಿದರೊಳಗೊಂದು ।
ವಿಧಿಕರಂ ಬಂದಡಸಲತಿಕ್ಲೇಶ ತೊಳಲುತಿರಲನಿತರೊಳು ಮೃತ್ಯುಬಾಧೆ ॥
ಜೊತೆಗೊಂಬುದೆಂಬ ದುಃಖದ ಬಾಧೆಯೊಳ್ಸರಳ ಪೊರಳುತಂ ।
ಕ್ಷಿತಿಯೊಳೀದೇಹಿಗಳು ಪಶುಗಳಂದದಿ ತಿಳಿಯ ।
ದತಿಶಯದ ಸುಖಗಳನು ಸಾರೈಪರನುದಿನಂ ಮೌಖ್ಯದಿಂದೀ ಪುಸಿಯನು ॥ (22)

ತೀಡುವೆಲರಿನಗಂಪು ತೀವ್ರಾಭ್ರಗಳ ಗುಂಪು ।
ಮೂಡಿಬಹ ಚಪಲಾತಿ ಶಯದಿಂಪು ತೈಜಸದಿ ।
ಕೂಡಿರುವವೈಭವದಲಂಪು ಕಂಗೆಸದಿರುವ ಮೃಗತಮರೀಚಿಕದ ತಂಪು ॥
ಸೂಡುತಡಿಗಡಿಗೆತರ ಸೊಲುಗಳಸುತ್ತಿಹ ಜಡರ ।
ನಾಡೆಬಾರವತೊಡರ ನಡುಪಥೀನರ ಸೊಡರ ।
ಬೇಡೆಂಬುದರಿಯದಿದ ಚಿರಮೆನುತ ಲಾಲಿಸುವ ಮೂಢರಿಂಗೇನೆಂಬೆನು ॥ (23)

ಶತಕೋಟಿ ಬ್ರಹ್ಮಾಂಡದದರೊಳಗಿದೊಂದಂಡ ।
ಕತಿಪಯದ್ವೀಪಂಗಳವರೊಳೊಂದೀ ದ್ವೀಪ ।
ಕ್ಷಿತಿವಿಭಾಗದೊಳು ನವಖಂಡವಾಖಂಡದಲಿ ಚಪ್ಪನ್ನದೇಶದೊಳಗೆ ॥
ಕತಿ ಖೇಟಖರ್ವಾಟ ನಗರಮಾಭೀರಗಳ ।
ಜತೆಯೆನಿಪ ಪತ್ತಣದೊಳಖಿಳ ಬಾಗೆಗಳಿಳದು ।
ಕ್ಷಿತಿಯೊಂದೆಗೇಣಿಲ್ಲದಿಲ್ಲ ಮಿದಕೋಸುಗಂ ಬಯಸುವರ್ಬಯಲಾಸೆಯಿಂ । (24)

ಪಿತಮಾತೆಸೋದರರ್ಸತಿಸುತಬಾಂಧವರ್ ॥
ಹಿತಮೆನಿಪ ಭೃತ್ಯಾದ್ಯರೆಲ್ಲ ಪ್ರಾರಬ್ಧಸಂ ।
ಗತಿಯಿಂದ ಪಾನೀಯಶಾಲೆಯೊಳ್ ನೀರಡಿಕೆಗೋಸುಗಂ ನಿಖಿಲ ಜನರು ॥
ಜತೆಗೂಡಿ ತೃಷೆಯನುಪಚರಿಸಿ ಪೋಪಂದದಿಂ ।
ರತಿಗೊಳಿಸಿ ನಿಜಗತಿಗಳರಸಿ ಕೊಳ್ಳುವರೆಲ್ಲ ।
ಯತನವಾಗೋರ್ಸುಗದಿ ಮೂಢರೆಳಸುವರ್ಕೈಸೆ ಪುಸಿಯ ಬಯಲಭ್ರಾಂತಿಗೆ ॥ (25

ನರಪತ್ರಿಗಳಾಶ್ರಯಿಸಿ ತರಿದರಿಕುಲಂಗಳಂ ।
ಧರಣಿಧನಧಾನ್ಯಗಳ ಗ್ರಹಿಸಿ ಸಂಬಂಧಿಗಳ ।
ಪೊರೆದು ತನುಸುಖಕೆಂದು ದುಷ್ಕೃತ್ಯಗಳಮಾಡಿ ನೋಡೆದಾಯಾಸಗೊಂಡು ॥
ಮರುಳರಂದದಿ ನರಳುತಿರುವರರಿಯದೆ ಕಡೆಗೆ ।
ನರಿನಾಯ್ಗಳಿಂಜಟಿಸಿ ಮೃದ್ಭಸ್ಮಮಯಮಪ್ಪ ।
ನಿರುಗೆ ಮಾಯಾವರಣ ಮಹಿಮೆಯಿಂದೇನೆಂಬೆನೆಂತೊರೆವೆ ನದರ ಸಿರಿಯ ॥(26)

ಧರೆಜಲಮರುತ್ತಗ್ನಿಯಾಕಾಶದಿಂ ಜನಿತ ।
ಕರಣ ದಶಕಂಗಳಂ ತನ್ಮಾತ್ರೆ ಬುದ್ಧಿಯೊಡ ।
ವೆರೆದ ಮಾನಸ ಮಹಂಕಾರ ಚಿತ್ತಾದಿಗಳ ಕ[ತ್ರದಿಯೊ] ಮೂರ್ತಿಬಳಿಕ ॥
ವಿರತ ಪದಿನೇಳುತತ್ತ್ವಾಕಾರ ಸೂಕ್ಷ್ಮತ ।
ತ್ರೊಪ್ಪಿಗೆಯಾಲವಿಕೃತಿಕಾರಣಾಖ್ಯವಿಹ ಮೂರರನುಂ ।
ಪರಿಕಿಸಿದರಂದಿರಂ ಪುರುಷ ನಿರ್ವೈಕಾರ ಭೋಗಿಗಳ್ತನುಗಳತ್ತೆ ॥ (27)

ಮೂಲಪ್ರಕೃತಿಯಿಂದ ಜನಿಸಿದ ಮಹತ್ತತ್ತ್ವ ।
ಮೇಲಹಂಕಾರಮಂ ಸೃಜಿಸಲದು ಪ್ರ[ನೀತ]ಕಂ ।
ಲೀಲೆಯಿಂ ಮೋಹಿಸುತಲಖಿಲ ಕರ್ಮಂಗಳಂ ಪೊರೆಗುತಂ ಮತ್ತಾತಗೆ ॥
ಕಾಲಕರ್ಮಗಳುಂಟು ಮಾಡಿದುರ್ಗತಿ ಸುಗತಿ ।
ಯಾಲೋಕನಂ ಗೊಳಿಸಿ ಸಂಸರಣೆಯೆನಿಸುತಿಹು ।
ದಾಲೋಕಿಸಲ್ಪುರುಷ ನಿರ್ವಿಕಾರಂ ಭೋಗದುಃಖಂಗಳೊಂದಂಟನು ॥ (28)

ದಶವಾಯುಗಳು ಕರಣ ಪತ್ತಹಂಕಾರಾದಿ ।
ವಶವೀ ಪ್ರಪಂಚಗಳು ಗುಣ ಮೂರರಾಕಾರ ।
ಮಶುಭಭಾಗಾರ ಮೆಂದರಿ(ದು) ಸುವಿವೇಕದಿಂ ಶಾಂತಿಯಂ ಗೊಳಿಸೆ ಬಳಿಕ ॥
ಕುಶಲಮಪ್ಪುದು ಹರುಷ ಕಾಮಧುಗ್ಬೇಡಿದುದ ।
ವಶಗೈವುದಾಶ್ರಮದಿ ನೋಡಿದರೆ ನಿರ್ವೈರ ।
ವಿಶದಮೆನೆ ಕಾಣ್ಬಡುಗುವಾನಂದ ತನ್ನಿಂದತಾನೆ ಸಂಭೂತಮಹುದು ॥ (29)

ನೀರಮೇಲಣಗುಳ್ಳೆ ಕಾಷ್ಠವಿಕ್ಷೇಪಮಂ ।
ಶಾರೀರ ಮಲ್ಪಾಯು ಮಖಿಳರೋಗಾಗಾರ ।
ತೋರುತಡಗುವುವು ತಾರುಣ್ಯಾದಿಗಳು ತರಂಗೋಪಮಿತಮೀಬಾಳ್ಕೆಗೆ ॥
ಆರುಬೋಧಿಸಿಗ್ರಹಿಸಿದರ್ಥಮಂ ಭುಂಜಿಸುವ ।
ರಾರುಪುರುಷಂ ನಿರ್ವಿಕಾರಿಯೆಂದರಿದಿದಂ ।
ನಾರೆ ಶಾಂತಿಯ ಪಗೆಗಳಲ್ಲಿಯುಂ ಸಂಜನಿಸಲತಿ ಸೌಖ್ಯ ಕೈಸಾರ್ವುದು॥ (30)

ಬಸಿಗದಿರನು ದಯಾಸ್ತಮಾನದಿಂ ದಾಯುಷ್ಯ ।
ನಸಿದಖಿಲ ಪ್ರಾಣಿಗಳ್ಕಾಲವಶರೆಂದೆನಿಪ ।
ರಸುರ ರೂಪಿನಹಮ್ಮಿನೆಮ್ಮಿ ತಿಳದಿಟ್ಟಸಿದರೆಲ್ಲ ಪುಸಿನುಸುಳ ಬಳಗಂ ॥
ಗಸಣಿಗೊಳ್ಳದೆ ಬಯಲ್ಭ್ರಾಂತಿಗಳ ನಪಹರಿಸಿ ।
ಸಸಿನೆ ನಿತ್ಯಾನಂದ ಮಯನೆನಿಸಿ ಬಾಳ್ವುದೆಂ ।
ದುಸುರಿ ಮಾತೆಯೊಳೆಂದ ವಿಜ್ಞಾನಕರ ಕಂದ ರಘುಜ ನಾನಂದದಿಂದ ॥ (31)

ಬೊಪ್ಪನನುಶಾಸನದಿ ಬನಕೆಪೋಗಲ್ಕೀಗ ।
ಲಪ್ಪಣೆಯನಿತ್ತು ಕಳುಪಿದೊಡೆ ನಿಯಮವಸಲಿಸಿ ।
ಬಪ್ಪೆಂ ಭವತ್ಪದಾಂಬುಜವೆಡೆಗೆ ದಯಗೈವುದೆಂದು ನುಡಿಯಲ್ಕೇಳುತ ॥
ಅಪ್ಪ ಭರತಗೆ ರಾಜ್ಯಸಿರಿಯನಿತ್ತಾದೊಡಂ ।
ತಪ್ಪದಿಂದೆನ್ನ ದೃಗ್ಪಥವನಗಲದೆ ಸುಖದೊ ।
ಳಪ್ಪುದುಚಿತವು ಭವಚ್ಛ್ರುತ ನಸುಮತಿಯಂತೆ ಮಾತೃನುಡಿಯಲ್ತೆನಿನಗೆ ॥ (32)

ಗುರುವಚನ ಗೌರವದಿ ಭರತಗಾಗಲಿರಾಜ್ಯ ।
ಸಿರಿಯ ಪಂಗಿಲ್ಲೆನಗೆ ಸಿಂಹ ಸಿಂಹನನ ನೀ ।
ನಿರೆ ಕಂಗಳದಿರಿನಲಿ ಸಕಲ ಸಂಭ್ರಮದಿ ಸಂಭೂತವಾಗಿಹವು ಗೃಹವು ॥
ಕರುಣವಿಲ್ಲದೆ ಬನಕೆ ತೆರಳ್ವೆಯಾದೊಡೆ ಜೀವ ।
ಭರಣ ಗೈದಪುದಿಲ್ಲವೆಂದು ನಿರ್ವ್ಯಾಜ ದು ।
ಷ್ಕರದುಃಖ ಸಂಕಲಿತವಾದ ವೃದ್ಧದೈನ್ಯದಿಂ ನುಡಿದ ದಂ ಬೇಳಲಲಳವೆ ॥ (33)

ಜನನಿಯೀಪರಿಯ ಬಿರುನುಡಿಯ ದುಃಖದೊಳಾಡಿ ।
ವನಿತನುಂ ಕೇಳ ಧರ್ಮಾತ್ಮ ಮಗುಳಂತೆಂದ ।
ನೆನಗೆ ಪಿತೃವಾಕ್ಯ ಮೆಳ್ಳನಿತ ಮೀರಲ್ಬಾರದಾಯ್ತು ಪೂರ್ವಾನುಮತದಿ ॥
ಜನಪಸಗರನ ಮಾತಿಗೋಸುಗಂ ಧರಣಿಯಂ ।
ಖನನ ಗೈದರು ಮತ್ತೆ ಸಾಸಿರಮಹಾರಥರ್ ।
ಮುನಿಯ ಕೋಪಾಗ್ನಿಗಿಂಧನವಾದರೆನ್ನ ಕುಲವರಸುಗಳ್ಧರ್ಮ ವಿಡಿದು ॥ (34)

ತಾತನಾಜ್ಞೆಯ ಮೀರದಾವಿಪಚ್ಛಿದ್ರತ್ನ ।
ಘಾತಿಸಿದ ಧೇನುವಂ ಜಾಮದಗ್ನ್ಯಂತನ್ನ ।
ಮಾತಾವಧಂ ಗೈದನೀ ಪರಿಯ ಪೂರ್ವದೊಳ್ ಧರ್ಮಶೀಲರುಗಳಮಿತ್ರ ॥
ಖ್ಯಾತಿಯಂ ಗಳಸಿವರ್ಸತ್ಯ ಸ್ವರೂಪಕುಲ ।
ಜಾತನೆಂದೆನಿಸಿಂತು ಪಿತೃವಚನಕೇಬ ಸಂ ।
ಗಾತಮೆನಿಸುವೆ ಧರ್ಮಲೋಪ ನಿರಯಾಸ್ಪದಂ ಮೀರಲೆಂತಪ್ಪುದೆನಗೆ ॥ (35)

ಮೊದಲೊಗೆದ ಸತ್ಪುರುಷ ರಖಿಲಾಗಮಜ್ಞರ ।
ಭ್ಯುದಯಮಂ ಗೈದರಲ್ಲದೆ ಸತ್ಯಕೊಣಿಯವ ।
ವಿಧಿಸಲಿಲ್ಲದರಿಂದಲಾಂ ಪುರಾತನ ಮಾರ್ಗವನುಸರಣೆಯಂ ಮೀರದೆ ॥
ಪದುಳದಿಂದೈದಿ ಪದಿನಾಲ್ಕು ವರುಷಂಗಳಂ ।
ಹೃದಯದಾನಂದದಿಂ ಕಳೆದು ನಿಮ್ಮಯ ಚರಣ ।
ಪದುಮಂಗಳಂ ಕಾಣ್ಬೆನೆಂದೊರೆದು ಸೌಮಿತ್ರಿಯೊಡನೆಂದ ರಘುವೀರನು ॥ (36)

ಮನದೊಳಹ ಭಕ್ತಿಯಂ ವಿಕ್ರಮವ ನಿಜಬಲಗ ।
ಳನಿತನುಂ ಬಲ್ಲೆ ನಾನತಿಗಳೆಯೆ ಧರ್ಮಗಳ ।
ಜನಜನಿತದುಷ್ಕೀರ್ತಿ ಸಂಪ್ರಾಪ್ತಮಾಗದಿರದರಸನಪ್ಪಣೆಯುಲೆನಗೆ ॥
ವನರಾಜ್ಯದಾಳ್ಕೆ ಗನುಮತಿಯಿತ್ತುಳಿಭರತ ।
ಜನನಿಯದರಿಂ ಕ್ಷತ್ರಧರ್ಮವ ನಿರೀಕ್ಷಿಸದೆ ।
ಜನಪತಿಯ ವಚನವಂ ಸತ್ಯಮೆಂದೆನಿಸೆ ಸುಖಮಿಪ್ಪುದಾಗ್ರಹವ ತುಳದು ॥ (37)

ಎಂದೊರೆದು ಸೌಮಿತ್ರಿಯೊಡನೆ ಮಾತಾಚರಣ ।
ವಂದನಂಗೈದು ಮುಗುಳಂತು ವಿಜ್ಞಾಪಿಸಿದ ।
ಚಂದದಿಂದೆನಗೆ ಸ್ವಸ್ತ್ಯಯನಗಳನುಂ ಮಾಡಿ ಬೇಗಲಪ್ಪಣೆಯ ನೀಯೆ ॥
ಮುಂದಕೈದುವೆ ಪ್ರತಿಜ್ಞೆಯ ಕಳೆದು ಜವದಿನಲ ।
ವಿಂದ ಬಹೆನೀನುಡಿಯ ನಿಜಚಿತ್ತನಿಲಯಕಂ ।
ತಂದು ಕಳುಪುವುದೆಂದು ಮುಗುಳುತ್ತರವನೀಯಲೆನ್ನಾಣೆ ಸುರಪನಾಣೆ ॥ (38)

ದೇವಿಕೇಳ್ಳೀನಾನು ವೈದೇಹಿ ಲಕ್ಷ್ಮಣಂ ।
ಕೋವಿದೆ ಸುಮಿತ್ರೆ ಸಹ ಪಿತೃರಾಜ್ಞೆಯಿಂದಿಹುದೆ ।
ದೇವಮಾನುಷ್ಯಾದಿ ಸಮ್ಮತಂ ಕುಲಧರ್ಮವದರಿಂದೆ ದುಃಖವನ್ನು
ಸಾವಧಾನದಿ ತಡೆದು ಸಂಭಾರಗಳನೆಲ್ಲ ।
ಠಾವವೊಂದಿಸಿ ಯೆನಗೆ ಗಮಿಸಲಪ್ಪಣೆಯೀವ ।
ಭಾವಭಾವಿತಮೆನಿಸು ಚಿತ್ತಮಂ ಕೃಪೆಯಿಂದಲೆನೆ ಕೇಳದಾಕ್ಷಣದೊಳು ॥ (39)

ಮಗೆದು ತನುವಂ ಮೂರ್ಛೆಯಿಂದ ನಿಸ್ಸಂಜ್ಞೆಯೊಳ ।
ಗರೆನಿಮಿಷಮಿರ್ದು ಮುಗುಳೆಚ್ಚತ್ತು ರಾಮನಂ ।
ಪುರದಲೀಕ್ಷಿಸಿ ನುಡಿದಳೆಲೆ ಪುತ್ರ ಪಿತನೆಂತು ನಿನಗಂತು ನಾನೆಂಬುದು ॥
ಪರಮಧರ್ಮಂ ದುರೂಪರನೀನು ದುಃಖದೊಳ್ ।
ಪೊರಳಿಸಿಯೆ ಪೋಪುದುಚಿತವೆ ನಿನ್ನ ಬಿಟ್ಟ್ಯಾನು ।
ಪೊರೆವರೆನೆ ದೇಹಮಂ ಕರುವಿಲ್ಲದೆಳೆಗಂದಿ ಜೀವಿಪ್ಪುದೆ ಜಗತಿಯೊಳಗೆ ॥ (40)

ಇಂತು ದೈನ್ಯಾಲಾಪಗೈವ ಜನನಿಯ ಕಾಣಾ ।
ತಂತರಂಗದಿ ಕ್ರೋಧಶಿಖಿ ಪೆರ್ಚೆ ಸೌಮಿತ್ರಿ ।
ಮುಂತರಿಯದಧಿಕತರ ನಿಟ್ಟುಸುರ್ಗಳ ಬಿಡುತ ಭೋಗೇಂದ್ರನಂತೊಪ್ಪಿರೆ ॥
ಠಾಂತಳೆಯ ದೀಕ್ಷಿಸುತ ರಾಮ ನಯವಿನಯದಿಂ ।
ದಿಂತೆಂದ ಭವದೀಯ ಶೌರ್ಯಾನುರಾಗಮು ಸ ।
ಮಂತಮಂಬಲ್ಲೆ ನಾ ನೀಸಮಯ ಮನುಕೂಲವಲ್ಲ ಕಡುಗೋಪಸಲ್ಲ ॥ (41)

ಗುರುದೊರೆಯ ಪಿತೃವೃದ್ಧ ರಾಜರ್ಷಿಕಲ್ಪನೆಮ ।
ಗರಿಯದಾಗಲಿ ಕಾಮಕ್ರೋಧ ಹರ್ಷಂಗಳೊಳ ।
ಗೊರೆದರುಂ ಶಾಸನವ ಮಸ್ತಕದೊಳಾಂತದಂ ಮುಗುಳುತ್ತರವನೀಯದೆ ॥
ಸರಸನಿಂಗೈವುದಿದು ಧರ್ಮಮೀಪರಿಯದಾ ।
ನರಿತರಿತು ಕೈಕೊಳ್ಳದತಿ ನೃಶಂಗತೆ ಯಾಂತ ।
ರೊರೆವರಾರಿದಕೆ ನಿಷ್ಕೃತಿಯ ದುಷ್ಕೃತಿಯ ನೆಳಸಿ ಬಾಳ್ದಂಗೇಂಫಲ ಧರೆಯೊಳು ॥ [(42)

ಲೋಕದೊಳು ಧರ್ಮಕಾಮಾರ್ಥ ಮೋಕ್ಷಂಗಳೀ ।
ಪ್ರಾಕ್ಕರ್ಮಮಖಿಳ ಶಾಸ್ತ್ರಂಗಳಲಿ ಮತ್ತಮಾ ।
ಳೇಕಮಿಹ ಪರಸೌಖ್ಯಕರಮದಂ ಧಿಕ್ಕರಿಸಲುಳದೆರಡು ವಸ್ತುಗಳೊಳು ॥
ಶೋಕ ಮೋಹಾಭಿಧಾಯಕ ಮಲ್ಲದವು ಶುಭಾ ।
ನೀಕವೀಯುವೆನುತ್ತೆ ತಿಳಿದ ಸಜ್ಜನರುಂ ವಿ ।
ವೇಕದಿಂ ದನುಸರಿಪರ್ಕೈಸೆ ಪ್ರಾಥಮಿಕಮಹ ಧರ್ಮವೇ ಪರಮೆನುತಲಿ ॥ (43)

ತನಯರಿಗೆ ಪಿತೃಸೇವೆಯಾಮ್ನಾಯ ಬೋಧಿತಂ ।
ವನಿತೆಯರಿಗಧಿಕತರ ವೀವ್ರುದಲೆ ವಿೂರದಲೆ ।
ಸನುಮತಿಸೆ ಪತಿಯಾಜ್ಞೆಯಿದು ಸತ್ಯ ಧೀಮಂತಸಮ್ಮತಂ ಲೋಕದೊಳಗೆ ॥
ಜನಪಸಾಯುಷ್ಮಂತ ನೆನಿಸಿರಲ್ಕೆನ್ನೊಡಸೆ ।
ಬನಕೆ ಬಪ್ಪುದಿದಾವ ಧರ್ಮವಾರೊಪ್ಪುವರು ।
ಜನಶಾಸ್ತ್ರ ವೈರದಿಂದಾಂಗಾದರು ಸುಖಂ ಸಮನಿಪ್ಪುದೆ ಸತ್ಯಮಾಹುದೆ ॥ (44)

ಸತ್ಯಶೌಚಾಚಾರ ಸತ್ಕುಲ ಪರಂಪರೆಗೆ ।
ನಿತ್ಯನಿರಘತೆ ಕೀರ್ತಿ ದೇವತಾಪ್ರೀತಿ ಮ ।
ತ್ತತ್ಯಧಿಕ ಸಂಪದಂ ಪತಿಸೇವೆಯಿಂದೊದಗುತ್ತಿದೆಂಬುದಿದು ಸದ್ಧರ್ಮವು ॥
ಪ್ರತ್ಯೇಕವಾಗಿ ಪತಿಯಾ ಪಾ ಒಟ್ಟುಸುರಸೌಖ್ಯ ।
ಭೃತ್ಯಾನುಮೋದದಿಂದಿರಲಾಕೆಗಂ ಪಾತ ।
ವ್ರತ್ಯಮೆಂತೊದಗುವುದು ಶುಭಲೋಕ ಪಂಥಾನಮೆಂತು ಗೋಚರಸುಪ್ಪುದು ॥ (45)

ಪೌಲೋಮಿ ಸಾವಿತ್ರಿ ಗೋತ್ರನಾಯಕಪುತ್ರಿ ।
ನೀಲಾಂಬರನ ಸತಿಯು ಸಂಜ್ಞೆಸಸಿಯುಮ ನಿರತ ।
ಬಾಲಾಯತ್ತಳೆನಿಪ್ಪ ವೀರಪಾತಿವ್ರತೆಯರೆಲ್ಲ ವಲ್ಲಭರಿಂವಳಿ ॥
ಮೂಲೋಕಪೂಜ್ಯರೆಂದೆನಿಸಿರ್ಪ ಸತ್ಕಥೆಯ ।
ರಾರಾಯ ಕೇಳುತಂ ಬಧಿರತೆಯನಂತು ಶಿಶು ।
ಲೀಲಾನುಕಾರಮನುಗೈದೊಡೇನೆಂಬುದೀ ಚಾಪಲ್ಯತರಲೌಲ್ಯಕೆ ॥ (46)

ತಂದೆಯಾಧೀನ ಸುತರೀಶಾನ ಚಿತ್ತ ಕುಂ ।
ಬಂದುವನುಸರ ಗೈವುದೇ ಸತೀಲಕ್ಷಣಂ ।
ಪಿಂದಾವ ಚಕ್ರವರ್ತಿಗಳು ಸದ್ಧರ್ಮಪರ ರಾಯರುಂ ಸತ್ಯಕೆಳಸಿ ॥
ದಂದುಗಂಬಟ್ಟರಿದ ಕೇಳುಯುಪೇಸಿರಿಯ ।
ಬಾಂಧವ್ಯಮೇ ಪರಮೆನುತ್ತ ಸಂತ್ರಸಗೊಂಡು ।
ಮುಂದಪ್ಪ ದುರ್ಗತಿಯ ನೋಡದುಚ್ಛೃಂಖಲತೆಯಿಂದ ನಡೆವಪುದುಚಿತವೇ ? ॥ (47)

ಪಿಡಿದು ಧೈರ್ಯವ ಶೋಕರೋಷಂಗಳೆರಡ ಕಂ ।
ಗೆಡಿಸುತ್ತ ಮಾನಕಂದಪಮಾನಮಂ ತೊಡಿಸಿ ।
ನುಡಿಯುತ್ತರಗಳಿಂ ಪ್ರೀತಿಯಿಂ ವಭಿಷೇಕಕೆಂದು ತಂದಿಟ್ಟವಸ್ತು ॥
ಒಡವೆಗಳನೆಲ್ಲ ವೊಂದೆಡೆಗೆ ಸೇರಿಸು ಮಾತೆ ।
ಯೊಡನೊಡನೆ ನೋಡಿ ಸಂಕಟುಗೊಳುವಕ್ಲೇಶಮಂ ।
ಕೆಡಿಸು ಮಗುಳಾ ಶೋಕಮಿಟ್ಟಸಲು ಸಂಕ್ಲೇಶಮಡಕುವುದು ಮನ್ಮನವನು ॥ (48)

ಕೇಳು ಲಕ್ಷ್ಮಣ ಸಿರಿಯ ಬುದ್ಧಿಪೂರ್ವಕವಾಗಿ ।
ಚಾಳುಗೈವವನಲ್ಲ ಪಿತನಿತ್ತನುಡಿಯುಸ್ಮೃತ ।
ದಾಳಕೆ......ದಗೊಡ ಬಾರದೆಂಬಾವಸತ್ಯವುಂದೆನ್ನ ಹೃದಯದೊಳಗೆ ॥
ತಾಳಸಂಭಾರಗಳ ನುಪಸಂಹರಂಗೆಯ್ಯ ।
ವೇಳದೆನು ಮತ್ತಿದರೊಳಧಿಕಗುಣ ನೃಪಗೆ ಪರ ।
ರಾಳಕಾಭೂಮಿಯುಂ ಭೀತಿಪೊದ್ದದು ಭೀತಿ ನಿರ್ಧಾರಣಂ ಗೈದರೆ ॥ (49)

ನೆರಪಿದೀ ಸಾಮಗ್ರಿಯನ್ನು ಪಿಂದೆಗೆಸಿ ನಾ ।
ನೆರುಗೆ ವನವತ್ತ್ರ ಭರತಾಂಬಿಕೆಗೆ ಸಂತುಷ್ಟಿ ।
ಭರಿತಮಪ್ಪುದು ಮಹಾರಾಜಸನ್ನಿಧಿಯೊಳಗೆ ಕ್ರೂರನುಡಿಗಳ್ತಪ್ಪುಗು ॥
ದೊರೆತನಂ ಭರತಂಗೆ ದೊರೆಯೆ ಜಗತೀತಳದಿ ॥
ಪರಿಕೃತಮದಪ್ಪುದಶ್ಯತಂ ನೃಪಗೆ ಪರಲೋಕ ।
ಪರಿಕರಂ ಸ್ವಾಧೀನ ಮಕ್ಕಳ ಮಗ್ಗಮನದಿಂ ದಧಿಕಸುಖದೇಳ್ಗೆಯಿನಿತು ॥ (50)
ಜನಜನಿತವಾಗಿ ಲೋಕಂ ನುಡಿಸುವಂದದಿಂ ।
ದಿನದೊಳರೆಘಳಿಗೆ ಬಾಳ್ದರೆ ಸಾಕು ಧರ್ಮದಿಂ ।
ಕುನಿಯುವಂತೆ ಸರ್ವರಿಂ ದತಿ ತಿರಸ್ಕೃತರಾಗಿ ಬಾಳ್ದರೇಂ ಚಿರಜೀವಿಯು ॥
ಮನೆಮನೆಗಳಂ ತಿರುಗಿ ಮತ್ತೆ ಕಲ್ಯನ್ನಗಳ ।
ತಿನುತ ಸಾಸಿರಕಾಲ ಬಾಳ್ವೀಯ ಫಲ ಲೋಕ ।
ದನುಮತಂ ಪರಗತಿಗೆ ಸಮ್ಮತಂ ತಾನ್ ಪೂರ್ವಾರ್ಜಿತಮತಿಕೆಮತ್ತೆ ॥ (51)
ತಾತಕೇಳ್ನಖಿಲ ಲೋಕಪ್ರಾಣಿ ಸಂಕುಲಂ ।
ಪ್ರೀತಿಯಿಂದೈಶ್ವರ್ಯ ಶುಭವ ಬಯಸುವರಲ್ಲ ।
ದೇತರೊಳಗಾದೊಡಂ ನೆರೆಯಶುಭವ ಮನೋಚಾಂಚಲ್ಯದಾಸೆಯಿಂದ ॥
ಕಾತರಂ ಬಟ್ಟು ಕಳವಳಪರಲ್ಲದೆ ತನ್ನ ।
ಮಾತಿನಿಂ ಬಯಕೆಯಿಂದೆತ್ನ ಕೈಗೂಡಿದೊಡ ।
ದೇತಕ್ಕೆಬೇರೆ ದೈವದ ತಂತ್ರಮಿಹುದೆಂದು ಪೇಳ್ವರಬುದ್ಧಿಯುತರು ॥ (52)
ವೇಗದಿಂದಖಿಲ ಕಾರ್ಯೋದ್ಯೋಗಮನರಾಗ ।
ಲಾಗಿತೋರುವುದು ದೈವಾಧೀನಸನ್ಮತ ।
ರಾಗದಷ್ಟೈಶ್ವರ್ಯ ಯುತನಾದೊಡನುದಿನಂ ಭೋಗಿಪ್ಪುದುದೈವಗತಿಯು ॥
ಸಾಗರಾಂತಾಧಿಪತ್ಯವ ಪಡೆಯಲಮಸ್ವವಶ ।
ವಾಗಿತೋರುವುದು ದೈವಾಧೀನವೊಂದಾಯು ।
ವಾಗುಹೋಗಿಲ್ಲದತಿ ಮರುಳಾದೊಡಾತಗಂ ಫಲಮಹುದು ದೈವವಶವೂ ॥ (53)
ವೀತರಾಗಾನುಗತ ಹೃದಯ ಯೋಗೀಂದ್ರರುಗ ।
ಳಾತ......ತಕಕ್ಕೆಳಸುವುದು ಸ್ವರ್ಗಫಲ ।
ರಾತ್ರಿಯನ್ನನುಭವಿಪರತಿವೇಗ ಪತನ ಮಹುದಲ್ಪನಿಗೆ ರಾಜ್ಯಸಿರಿಯು ॥
ಜಾತಮಪ್ಪುದು ಹಸ್ತಗತವಾದ ಸಂಪತ್ತು ।
ನೀತಮೆನಿಪುದು ದೈವದಾಧೀನ ಮಲ್ಲದಿಂ
ನೇತರದ ಮನುಜರಗುರಿಯಂತೆ ಪರವಶದಿಚರಿಸುವಂ ಚಾಂಚಲ್ಯದಿ ॥ (54)
ಮರುಳರಿವನರಿಂದ ದತಿಸಾಹಸದಿ ಯತ್ನಮಂ ।
ನಿರತಸ್ತ್ರೈವ್ರತಲಭ್ಯವಾಗ ದಿರೆಚಿತ್ತದೊಳ್ ।
ಕೊರಗುತಂ ಕ್ರೋಧಪರವಶರಾಗಿ ಸಂಕಟಂಗೊಳುವತೊಳಲುವರಲ್ಲದೆ ॥
ಸಿರಿರಾಮಪುರದರಸ ಕರುಣದಿಂದೀಯದಿರೆ ।
ದೊರೆವುದೆಂದೀವನೋ ಸಂಕಲ್ಪಮಾತ್ರದಿ ।
ಬರಿದೆ ತ್ರಪಿಸಲ್ಪೇವು ಕೈಸಾರುಪ್ರದೆ ಸಾಧುಶಾಂತಿಯುಳಿದ ಮನುಜರಿಂಗೆ ॥ (55)

(ಸಂಧಿ 9, ಪದ 408.)

ಹತ್ತನೆಯ ಸಂಧಿ-

ಸೂಚನೆ ॥ ತಿಳುಪಿ ಲಕ್ಷ್ಮಣನ ಬಹುವಿಧ ನೀತಿ ಬೋಧೆಯಲಿ ।
ತಳೆದು ಮಾತಾ ವಚನ ರಚನೆಯಂ ಮಸ್ತಕದ ।
ಇಳೆಯ ಸುತೆಯನ್ನು ಸಂತೈಸಿದಂ ರಘುವೀರ ವಿನಯ ಮೃದುವಾಣಿಯಿಂದ ॥

ಹಿಮರಾಪ್ತನೂಜೆ ಕೇಳ್ ರಾಮಚಂದ್ರಂ ಮೃದುಲ ।
ಕ್ರಮದಿಂದ ನೀತಿಯಂ ಬೋಧಿಸುತ ಬರುತಿರಲ್ ।
ಕ್ರಮಿತ ಕ್ರೋಧಾನಲಂ ಪರ್ಚಿದುದನೇನೆಂಬೆ ಸೌಮಿತ್ರಿಗತಿಶಯದಲಿ ॥
ವಿಮಲನೇತ್ರಗಳಗ್ನಿ ಕಲ್ಪಮೆನಿಸಲ್ ವಿಪುಲ ।
ಭ್ರಮಣೆಯಂ ತೋರುತಿರೆ ಭ್ರುಕುಟಿಗಳ್ ನಿಟ್ಟುಸುರ ।
ಸಮದೇಭ ವೈರಿಯೊಲ್ ಗರ್ಜಿಸುತಲಿಂತೆಂದ ನಣ್ಣನೊಳ್ ರೋಷದಿಂದ ॥ (1)

ಜಗತಿಯೊಳ್ನಿಜಧರ್ಮ ವಿಗುಣ ಮಾಗಲ್ಸುಗುಣ ।
ಬಿಗುಮಿಗೆಯ ಪರಧರ್ಮ ಮತಿಭಯಪ್ರದಮೆನುತ ।
ಸುಗುಣ ನೀತಿಜ್ಞರತಿ ನಿಪುಣರಾಡುವ ನುಡಿಗಳಿಂ ಚಿತ್ತಕಜ್ಞಾತಮೇ ॥
ಮಿಗೆ ಶಾಂತಿ ದಾಂತಿಗಳ್ವಿಪ್ರಕುಲದಾಚಾರ ।
ವಗಣಿತ ಮಹೀಪಾಲರದನೊಪ್ಪುಗೊಳ್ಳದತೆ ।
ಬಗೆದರಿಗಳೊಡಲುಗಳ ಬಾಳ್ದರತಿ ಸತ್ಕೀರ್ತಿ ಲೋಕ ವಿಶ್ರುತಮೆನಿಪೊಲು ॥ (2)

ಅತಿಶೌರ್ಯ ಧೃತಿ ತೇಜಮಾಧಾರ್ಷ್ಟ್ಯ ಮಾಜಿಯೊಳ್ ।
ಕ್ಷತ ಶತ್ರುಕುಲಮೆನಿಸಿ ದಾನಮೀಶ್ವರಭಾವ ।
ಮತಿಯಿಂದಲಿಪ್ಪುದೇ ಕ್ಷತ್ರಧರ್ಮವನುಳಿದು ಬಡಪಾರ್ವರಂತೆ ನುಡಿಯ ॥
ಜೊತ್ತೆಗೊಳಸಿ ಕರಗತದ ರಾಜ್ಯಸಿರಿಯೌನ್ನತ್ಯ ।
ಕ್ಷಿತಿಗೈವ ಶಕ್ತಗೊಡ್ದೈವವಶ ಮೆಂದೆನುತ ।
ಸತಿಸೋದರರ ನುಳಿವುದಾವ ಧರ್ಮವಿದಾವ ಶೂರಸಮ್ಮತ ಲೋಕದಿ ॥ (3)

ಬಲಪೌರುಷದ ಸತ್ವಮಿಲ್ಲದಧಮಾಧಮರು ।
ಪಲವು ನೀತಿಯ ನೆಣಿಸಿ ದೈವಕೃತದಿಂದಲ್ಲ ।
ದೊಲಿಯದಧಿಕತೆ ಯೆನುತನಾಥವಚನಗಳಿಂದ ಪಲುಬುವರನೇಕ ವಿಧದಿ ॥
ಅಲಘು ಬಲಶೌರ್ಯದಿಂದಪ್ಪಳಿಸಿ ಶತ್ರುಗಳ ।
ನಲೆದೊಲಿದು ಕಡಿಖಂಡಗೈದು ಭೂತಾಳಿಗಂ ।
ಮೆಲುವಿತ್ತು ಗೆಲಪಾಂತು ತೋರುವೆಂ ಶಕ್ತಿಯಂ ದೈವಮೇನಧಿಕಮೆನಗೆ ॥ (4)

ಬರಲಿಂದ್ರನಗ್ನಿಯಮ ನಿರುತಿ ಪಾಶಿಯು ಮಗುಳೆ ।
ಮರುತ ವೈಶ್ರವಣ ವೃಷಕೇತನರ್ಕೋಪದಿಂ ।
ಶರಚಾಪಗಳ ಧರಿಸಿ ನಿಜಬಲೋತ್ಸುಕ್ಯಮಂ ತೋರುವುದೆಂದಿಚ್ಛೆಗೈದು ॥
ತರಿದು ದಿಗ್ಬಲಿಗೊಡುವೆನಾವದೈವವು ಬಂದು ।
ಮರೆಯಾಗಲದರಸುವ ಪೀರುವೆಂ ರವಿವಂಶ ।
ದರಸುಗಳ ಕುಲಪರಂಪರೆಯ ವಿಕ್ರಮಗಳಂ ತೋರ್ಪೆನೀ ಸಮಯದೊಳಗೆ ॥ (5)

ಕಿಡಿಗರೆವ ಕೊಡಲಿಯಂ ಪಿಡಿದು ಕಡುಗೋಪದಿಂ ।
ಪೊಡವಿಯರಸುಗಳ ಮೂರೇಳು ಬಾರಿಯು ಕಡಿಯು ।
ತೊಡೆನವರ ಶೋಣಿತದಿ ಸ್ನಾನಾಹ್ನಿಕಂಗೈದು ಮಹಿಯ ನಿಜಕಾಲಕರ್ಪಿಸಿ ॥
ಪಡೆದ ಜಸಮಂ ಕೊಡೆನಸುತ್ತ ಸಪ್ತಸಾಗರವ ।
ಕುಡಿವನೊಕ್ಕುಡಿತ್ರೆಯೊಳಗಿಟ್ಟು ಬಡಪಾರ್ವರಿಂ ।
ತೊಡಸೆ ಕಾರ್ಯವಂಗಳಿಸಲಾತ್ಮೀಯ ಧರ್ಮಮಂ ಪ್ರಸಿಗೈವುದೆಂತಿಳೆಯೊಳು ॥ (6)

ಭರತನಾತ್ತನ ಮಾವನಿವಗೆ ಪಡಿಬಲಮಾಗು ।
ವರಸುಗಳ್ತನ್ನಾತೆಯ ಮಾತಿಯಿಂದೆಮ್ಮ ।
ದೊರೆ ತನವ ಸೆಳೆದ ಜಠರಾದಿಗಳ್ ಪ್ರಾಂಸ ಮಸ್ತಿಷ್ಕಲೋಹಿತದಿಂವಲಿ ॥
ವಿರಚಿಸುವೆ ಶಾಕಿನೀ ಭೂತಗಣಕೌತಣವ ।
ಧರೆಯೊಳೆಲ್ಲನೋಡಲೆನ್ನ ಬುಜಸಾಹಸವ ।
ಪರಿಕಿಪೊಡೆ ಸಂವರ್ತ ಭೈರವಾದಿಗಳಿನಗೆ ಡಿಂಗರಿಗರೆನಿಪೆ ಕ್ಷಣದಿ ॥ (7)

ಆದಿತ್ಯವಂಶ ಸಂಜಾತರರಸುಗಳೆಲ್ಲ ।
ಮೇದಿನೀಪಾಲರಂ ಗೈದು ಬಹುವಿಧದಶ್ವ ।
ಮೇಧಂಗಳಂ ಮಾಡಿ ಷೋಡಶ ಮಹಾದಾನದಿಂದ ದ್ವಿಜಕುಲವ ನಲಿಸಿ ॥
ಮೋದದಿಂ ಪಣುಗರಂ ಪಡೆದು ಸುಖಪಡೆದು ।
ಸೋದರಾದಿಗಳ ಸಂತಸಗೊಳಿಸಿ ವೈರಾಗ್ಯ ।
ಹಾದಿಯಂ ನಿಟ್ಟಿಸಿದರಲ್ಲದೀ ಪರಿಯಾರು ಸಾರಿದರ್ ನವ ಮನದಿ ॥ (8)

ನೆರಪಿದೀ ಸಂಭಾರದೊಳು ಪಟ್ಟವಂ ಕಟ್ಟೆ ।
ತ್ರಿದಂತರಾಯಗಳ ತೀವ ತರ ವ್ಯಾಧಿಯಂ ।
ಜರೆದು ದುಃಖವ ಮರೆದು ತಾಯ್ಗಳತಿ ಸುಖಪಡೆವೊಲೆಸಗುವೆಂ ನಿಮಿಷದೊಳಗೆ ॥
ಚರಣಸೇವಕನಿದ್ದು ಫಲವೇನು ಸಹಾಯಕಂ ।
ದೊರಕದೊಡೆ ಭಾನುಕುಲ ಸಂಭೂತಕಧಿನಾಥ ।
ನೆರವಿಗೆಂ ಸಕ್ಕೀರ್ತಿಯಹುದು ಕರಗತಮಾದ ಧರಣಿಯಂ ಬಿಟ್ಟರುಗಲು ॥ (9)

ಕುಲಪರಂಪರೆಯ ವಸುಗಳ್ ವೃತ್ತಿಗವಿರೋಧ ।
ಕಲನಾಭಿಷೇಕ ಕುತುಕಿತ ಮನಿಸೆ ಹರುಷಸಂ ।
ಕಲತ್ರಮಹುದೀಲೋಕಪಾಲರಂ ಪಡೆದಖಿಳ ಭೋಗಂಗಳಂ ಚುಂಬಿಸಿ ॥
ನಲಪಿಂದ ಪರಿವಾರ ಪ್ರಜೆಗಳಂ ನಿಜಪುತ್ರ ।
ಕುಲಪೊಂದು ರಕ್ಷಿಸುವೊಲಿತ್ತು ತನಯನ ಕರೆಕೆ ।
ಸಲೆತ್ತೋದಾರ ಸತಪೋರಾಜ್ಯಪಾಲನೆಗೆ ಗಮಿಸುವುದೆ ಸದ್ಧರ್ಮವು ॥ (10)

ಸಿರಿಯ ಬೆರಗೆ ನಾಚಿ ನರಗುರಿಗಳಂತೆ ವನ ।
ಕೆರಗುವರೆ ಶರಚಾಪ ವರಪಾದ ಮಕುಟಗ ।
ಳೆತ್ತೊರೆಯೊ ಜನರಂಜನವೊ ಕಾರ್ಯಕೇಂಕಾರಣಮೊ ಪುನ್ನಸಂಸಕ ಸೂಚ್ಯವೋ ॥
ಹೆರೆದ ದೊರೆಗಳ ಗುಂಪು ಪರಿಹಾಸಗೈವರೀ ।
ಪರಿಯದುರ್ಮಾರ್ಗ ಘಟಿತವಾದ ಬಾಳ್ಕೆಗೆ ಮನ ।
ಸ್ಥಿರಿಸಲೇನಿದ ನೀತಿಯಲ್ಲ ಗಮನವು ಸಲ್ಲ ಪುರುಷ ಸೂಚಕವಿದಲ್ಲ ॥ (11)

ಎನುತ ವನವಾಸಕೆಂ ಸನುಮತಿಪ ಸುತನ ನುಡಿ ।
ಯನು ಕೇಳಿ ಕೌಸಲ್ಯೆ ಯತಿಶೋಕದಿಂ ಬೆಳ್ದ ।
ಳೆನ್ನದೃಷ್ಟಮಪೂರ್ವಮೀದುಃಖ ನಿನ್ನಿಂದಲಡಸುವುದು ದುಶ್ಚರಿತವು ॥
ಜನಮನೋಹ್ಲಾದಿ ಕರುಣಾವನಧಿ ಭೂತಹಿತ ।
ದನುಕಾರಿ ಮನುಜೋತ್ತಮೋತ್ತಮಂ ನೀನೆನ್ನ ।
ಮನಕೆ ಸಂಕ್ಲೇಶಮಂ ಪುಟ್ಟಿಸುವುದನುಚಿತಂ ಧರ್ಮಸೂಕ್ಷ್ಮಗಳ ತಿಳಿದು (12)

ಸವತಿಯರ ನಡುವೆ ಸಂಕಟಗೊಳುತಲನುಪಮದೆ ।
ಳವರ ದುರ್ವಾರಗರ್ವಿತ ವಾಕ್ಯಶೌಂಡೀರ ।
ನವನವೋನ್ಮೇಷಗಳನಾಲಿಸುತ ನಾನೆಂತು ಬದುಕುವೆಂ ದೀನೆಯೆನಿಸಿ ॥
ಭವದೀಯ ಪಿತೃವಚನದಿಂದ ವನಕೈದುವರೆ ।
ತವಕದಿಂದೆನ್ನ ಕರವೊಯ್ಯು ಸುಖದಿಂದಿರ್ಪೆ ।
ಬವಣೆಗೊಳಿಸಲ್ವೇಡವೆಂದು ದೀನತೆಗೊಂಡ ಮಾತೆಯೊಡನಿಂತೆಂದನು ॥ (13)

ಭರತಪಂಚಿಕಾವಚನ ವಂಚನಾವಶನೆನಿಸಿ ।
ನಿರವಧಿಕ್ಲೇಶಕಂ ಮತ್ಕೃತದೆ ಫಲಾಧಿಕ್ಯ ।
ಭರಿತವಾಗಿದೆ ನಮ್ಮಗಮನದಿಂದಭಿವೃದ್ಧಿಯಾಗಿ ಪರಿಮಳಿತವಾಹುದು ॥
ಮರೆದೊಡೀಶಾನ ಸೇವೆಯ ಸತಿನೃಶಂಸತೆಯು ।
ನಿರುಗೆಯುಹಳದರಿಂದಲೀ ಮೂರ್ತಿಯಿಪ್ಪನ್ನ ।
ದೊರೆಯ ಶುಶ್ರೂಷೆಯಲ್ಲಿಪ್ಪುದೆ ಪರಂಧರ್ಮಮಿದು ಸನಾತನವು ತಾಯೆ ॥ (14)

ಉಪವಾಸವ್ರತ ಕಥಾಶ್ರವಣ ಗುಪಿತಾಮ್ನಾಯ ।
ಜಪತಪೋನಿರತೆಯಾದುದು ಭರ್ತೃ ಸೇವೆಯಿಂ ।
ದಪಗತತ್ವವ ಪಡೆದೊಡಾಕೆ ಪಾಪಿನಿಯೆನಿಪಳಮ ಲೋಕಸಮ್ಮತದು ॥
ಉಪಚಾರದಿಂ ಭರ್ತೃ ಶುಶ್ರೂಷೆಗೈವಸತಿ ।
ಗಪರಿಮಿತಸ್ವರ್ಗಾದಿಪದವಿಗಳ ಸುಖವು ಬಳು ।
ದುಪಮಿಸಲ್ಕೆಂತಹುದು ತಾಯೆ ಪರಿಗಾಯಾಸಗೊಳ್ಳಲೇಂ ಫಲಮಪ್ಪುದು ॥ (15)

ಜಡಬಧಿರ ಮೂಕಾಂಧತೆಯು ನಾಂತನಾದೊಡಂ ।
ಪೊಡೆ ಪಿಪತಿಯಾದೊಡಂ ಸತಿಗೆ ಪತಿಯೇ ದೈವ ।
ದೊಡನಿವಕೆ ಬೇರೊಂದು ವ್ರತ ನಿಯಮ ತಪಗಳಿಂ ದೊರಕವರೆ ಸದ್ಗತಿಗಳು ॥
ತುಡುಕಿದುದು ಕ್ಲೇಶ ಸುತ ವನಕೆ ಗಮಿಸಿದನೆನ್ನ ।
ತಡಿಗ್ಗಡಿಗೆ ಸರಸನಂದ . . ಕಳುಪಿ ಚಿತ್ತವಂ ।
ಪಿಡಿದು ನಡೆವುದು ಲೋಕಸಮ್ಮತಂ ಶ್ರುತಿಮತಂ ಬೇಳ್ಪೊಡಾನೇಸರವನು (16)

ಪತಿಯ ಸೇವೆಯೊಳಿರ್ದೊಡಾಕೆ ತ್ರಿಭುವನಪೂಜ್ಯ ।
ಳತಿಶಯದೆಸೊಳಖಿಳ ದೇವರ್ಕಳುಂ ಸಂಪ್ರೀತಿ ।
ಯುತರೆನಿಸಿ ಬೇಡಿದುದನಿತ್ತಪರು ನಾಡಿದ ನುಡಿಯಲ್ಲ ನಿಜವೆಂದೆನಿಪುದು ॥
ಮತಿಯುತರು ಮೆಚ್ಚುವಂದದ ನಡತೆಯಂ ಬಿಟ್ಟು ।
ಕ್ಷಿತಿಪತಿಮಹೋನ್ನತೆಯೊಳಿರ್ದನಾಥೆಯ ತೆರದಿ ।
ಸುತನೊಡನೆ ವನಕೆ ಬಹುದನ್ಯಾಯಮುಭಯಕುಲಕಪಕೀರ್ತಿ ಸಂಜನಿಪುದು (17)

ಧವ ಜೀವದಿಂ ಮಹಾರಾಜ ನೆಂದಿರುವಲ್ಲಿ ।
ಲವಲವಿಕೆಯಿಂ ಚರಣ ಧೂಳಿಗಧಿಕೃತೆಯಾಗ ।
ದವಿರಳಕ್ಲೇಶಮನ್ನಿತ್ತು ಒಹಾದನುಚಿತಂ ತಾಯ ಪ್ರಿಯಮೆಂದರಿವುದು ॥
ಭವದೀಯ ವಚನವಂ ಮೀರದತಿಭಕ್ತಿಯಿಂ ।
ಕುವರ ಭರತಂ ನಡೆವ ಧರ್ಮಿಷ್ಠಸುವಿವೇಕಿ ।
ಭವಣೆಯುಳಿದಪ್ಪಣೆಯ ನಿತ್ತೊಡೈತಹೆ ಬೇಗ ಧರ್ಮಾನುಸಾರವಿದು (18)

ನೆಲದಿ ಕರ್ಮೇಂದ್ರಿಯಂ ವಿಷಯೇಂದ್ರಿಯಂ ಜಲದಿ ।
ಜ್ವಲನನಿಂ ಬುದ್ಧೀಂದ್ರಿಯಗಳು ಪ್ರಾಣಾದಿಗಳ ।
ನಿಲನಿಂದ ಸಂಪ್ರಾಪ್ತ ಜೀವಾದಿ ತತ್ವಂಗಳೈದೈದರಿಂದೀದೇಹವು ॥
ಒಳಗೆ ಪದಿನೇಳು ತತ್ವಾತ್ಮಕಂ ಸೂಕ್ಷ್ಮಮದ ।
ರಲಘು ವಿಕೃತಿಯ ಕಾರಣಾಹ್ವಯಂ ತನುಗಳೊಳ್ ।
ಗಿಲುಕದಿಹ ಪರಬೊಮ್ಮ ನಿರ್ವಿಕಾರನೆನುತ್ತಲರಿಯ ಸುಖಜನಿಪುದನಘೆ । (19)

ಇದಿರೊಳಗೆ ತೋರ್ಪುದದು ದೃಶ್ಯ ನೋಳ್ಪುದೆ ದೃಕ್ಕು ।
ಚದುರ ನೇತ್ರವು ದೃಶ್ಯಮಾದ ಕಾಣ್ಬುವನದೃಕ್ಕು ।
ಪದುಳವಹ ಮನದೃಶ್ಯಮದನೋಳ್ಪ ಬುದ್ಧಿಯೇದೃಕ್ಕು ಮತ್ತಾಬುದ್ಧಿಯು ॥
ಹದನನರಿತವ ಸಾಕ್ಷಿಯೊಲ್ಮೂಲದೃಕ್ಕಹುದು ।
ಮದರಿಂದಲಕ್ಷ್ಯಮಿಲ್ಲೆಂದು ಪರಿಕಿಸಿನೋಡೆ ।
ಹೃದಯ ದುರ್ಗಂಧಿ ಶಿಥಿಲಪ್ರಾಯಮಾಗುವುದು ಸುಖವು ಸಂಭೂತಮಹುದು (20)

ಶೋಕಮೋಹಾದಿಪ್ರಪಂಚ ಮೆಲ್ಲಂಚಿತ್ತ ।
ದಾಕಾರಮದರ ಚೇಷ್ಟೆಗೆ ಪ್ರಾಣಮಾರುತಂ ।
ಜೋಕೆಯಿಂದಾಮರುತನಂಡಲೆಮ ತಾಣದೊಳ್ನಿಲಿಸೆ ಮಾನಸವೃತ್ತಿಯು ॥
ಜೋಕೆಯಿಂದುದ್ಭವಿಪುದಕಲಂಕವೃತ್ತಿ ನಿಜ ।
ಶೋಕಾಪಹರ ಶಕ್ತಿಯುದರಿಂದ ಶಾಂತಿತಾಂ ।
ಪ್ರಕಟಪುದಧಿಕತರದಾನಂದಸಿಂಧುವಂ ಕಲ್ಲೋಲರಹಿತಮೆನಿಸಿ ॥ (21)

ತಿಳಿದೀಪ್ರಪಂಚಮಂ ಕನಸೆಂದು ಶಾಂತಿಯು ।
ನ್ನಳವಡಿಸೆ ವಿಜನಮಹ ಠಾವಿನೊಳ್ಕುಳ್ಳಿರ್ದು ।
ಬೆಳಗುಕದಿವೆಗಳಮುಭಯದಿಟ್ಟಿಗಳ ನಾಸಾಗ್ರದಲ್ಲಿ ನೆಲೆಗೊಳಿಸೆ ಬಳಿಕ ॥
ತೊಳಲುವೀ ಮರುತನುಂ ಸ್ತಂಭಿಸುವವದರಿಂದ ।
ತಳುಕದಲೆ ಮನನಿಲುವುದೈಸೆ ನಿಲಲಂತರದಿ ।
ಬೆಳಗ ಖಂಡಾಕಾರದಲಿ ತೋರ್ಪುದಾಸ್ಫಟಿಕ ಕಲಶಸ್ಥ ಜ್ಯೋತಿಯಂತೆ ॥ (22)

ಇಂತು ಸತತಾಭ್ಯಾಸ ದಾರ್ಢ್ಯವಾಂತಿಹ ಮನಂ ।
ಶಾಂತಿಯಂ ಪೊಂದಿ ಬಿಡುವುದು ಬಾಹ್ಯವೃತ್ತಿಯಂ ।
ಅಂತರಂಗದಿ ರಮಿಸುತಾನಂದಮಯಮಪ್ಪುದಾ ಬಳಿಕ ಕ್ಲೇಶರೋಷ ॥
ಚಿಂತೆ ಮೊದಲಾದವಂಕುರಿಸಲಮ್ಮವು ತನ್ನ ।
ಸ್ವಾಂತಮಲ್ಲದೆ ಬೇರೆ ತೋರದದರಿಂ ಜನ ।
ಭ್ರಾಂತಿ ಜಗುಳುವುದಮಿತ ನಿಜಬೋಧೆಯುದ್ಬುದ್ಧಮಾಗಿ ಸೌಖ್ಯವನೀವುದು (23)

ಈ ವಿಧದೊಳನುದಿನಂ ನಿನ್ನೊಳಾಲೋಚಿಸಲ್ ।
ಸಾವಧಾನದೊಳಖಿಳವಿಷಯಾನಿರಸನವಹುದು ।
ನೋವುಸಂಕಟವೆಂಬ ಬೆಸರಿಲ್ಲದತಿ ಸುಖದೊಳಿರೆ ಮದಾಗಮನ ತಾಯೆ ॥
ರಾವಿನೊಳಗಿರ್ದಂತೆ ತೋರ್ದಪುದು ನಿಜಚರಿತ್ರ ।
ಪಾವನೀಕೃತ ಮೆನಿಪುದದರಿಂದಲಿಹಪರಗ ।
ಳೋವಿ ಕರಬದರೋಪಮಿತವಾಗಿ ಕಾಣ್ಬಡುವದಿದು ಸತ್ಯ ತಿಳಿಯು ನಿತ್ಯ ॥ (24)

ಎಂಪೊಗೆದ ತತ್ವಯುತವಾಣಿ ಶೋಕಾತುರವ ।
ಬಂದೀಕರಣಗೆಯ್ಯೆ ನಿಶ್ಚಿಂತೆಯಿಂ ಚೆದಾ ।
ನಂದಮಯಳೆನಿಸಿ ತನಯನೊಳೆಂದಳಯ್ಯ ಕೇಳ್ವ್ಯಾಧಿ ಪುರಾಕೃತಜನಂಗೆ ॥
ಬಂದಡೆಸಿದಲ್ಲದುಳಿವುದೆ ಸತ್ಯವನುಸರಣೆ ।
ಯಿಂದೈದಿ ಪದಿನಾಲ್ಕುವರುಷವಂ ಕ್ಷಣದಂತೆ ।
ಪಿಂದುಳುಪಿ ಬಂದುದಂ ಕಾಣ್ಬೆಯಾರ್ತ-ತತಿಹರುಷದಿಂದ ಕೌಸಲ್ಯೆ ಮುದದಿ ॥ (25)

ತೊಲಗಿಸುತ ಚಿತ್ತದಾಯಾಸ ವೈಮನ್ಯವಂ ।
ಜಲವುಪಸ್ಪೃಶನೆಗೈದಾನಂದ ನಿರ್ಭರದಿ ।
ಪಲಬಗೆಯ ಮಂಗಳಾಚರಣೆ ಗೈದಿಂತೆಂದಳಬ್ಜಾಕ್ಷ ರಾಮಭದ್ರ ।
ನೆಲದೊಳುಳ್ಳವಾಮ್ನಾಯ ಪೌರಾಣಮುಖ್ಯನುಡಿ ।
ಯಲಿ ಸಾರಭೂತಪರವೆಂದಾವಧರ್ಮ ಸಂ ।
ಕಲಿತವೆನಿಸಿದೆ ಮತಿಯ ಧೃತಿಯಿಂದಲಾನಿಯುತ ಧರ್ಮ ಸಲಹುಗೆ ಪುತ್ರಕ ॥ (26)

ತಂದೆತಾಯ್ಗುರುದೈವ ಶುಶ್ರೂಷೆಯಿಂದುದಿತ ।
ಬಂಧುರದ ಸತ್ಯವೇ ಸಲಹಲನುದಿನ ದೀನ ।
ಬಂಧು ವಿಶ್ವಾಮಿತ್ರನಿತ್ತಸ್ತ್ರಜಾಲಗಳ್ ರಕ್ಷಿಸಲಹೋರಾತ್ರದೊಳ್ ॥
ಕುಂದದ ಸಮಿತ್ಕುಶ ಪವಿತ್ರವೇದಿಕೆಗಳುಂ ।
ಚಂದಚಂದದ ವೃಕ್ಷಶೈಲಕ್ಷಮಾಹ್ರದಗ ।
ಳೊಂದಿರುವ ಪತಗ ಪನ್ನಗ ಶರಭ ಸಿಂಹಂಗಳೆಲ್ಲ ಸಲಹುಗೆ ನಿನ್ನನು ॥ (27)

ಸುರಪಶಿಖಿ ಮೊದಲಾದ ದಿಕ್ಪಾಲರೆಲ್ಲರುಂ ।
ಹರಿದಶ್ವಸೋಮಾದಿ ಗ್ರಹಗಳುಂ ನಕ್ಷತ್ರ ।
ನೆರವಿ ಸಪ್ತರ್ಷಿಗಳ್ಸಿದ್ಧವಿದ್ಯಾಧರರ್ ಸಾಧ್ಯಪನ್ನಗಯಕ್ಷರು ॥
ಮರುತರುಂ ಸೇನಾನಿ ಸಾಗರಂಗಳ್ವರುಣ ।
ನೆರವಿಗಳ್ ಋತುಮಾಸ ಪಕ್ಷದಿನರಾತ್ರಿಗಳ್ ।
ನಿರುತ ಸುಖಮಂ ಕೊಡುಗೆ ಶೋಭನ ಪರಂಪರಾವಸತಿಗಳ್ಪುತ್ರನಿನಗೆ ॥ (28)

ಕ್ರೂರ ಕರ್ಮಿಗಳೆನಿಪ ಪೈಶಾಚರಕ್ಕಸರ್ ।
ತೋರವಿಷಧರ ಕೀಟವಂಶಗಳ್ ಮಾಂಸದಾ ।
ಹಾರಿಗಳ್ಬಲಿಯುಂ ಕೊಂಡೆನ್ನದೆಸೆಯಿಂದ ಸಂತುಷ್ಟರೆನಿಸಿಮುದದಿ ॥
ತೋರದೆಂದಿಗು ದೋಷಲೇಶಗಳ್ ಲೋಕಗುರು ।
ಸಾರಸಾಸನ ಮುಖ್ಯ ದೇವರ್ಷಿಸಮುದಯವು ।
ದಾರಕೃಪೆಯಿಂದ ಕಲ್ಯಾಣದಾಯಕರಪ್ಪತಪ್ಪದೀ ವಾಣಿಯೊಪ್ಪ ॥ (29)

ಎಂದಖಿಳದೇವರ್ಕಳಂ ಸುತಿಸಿ ನತಿಸುತಾ ।
ನಂದದಿಂ ರಾಮಮಂಗಳವೃದ್ಧಿಗಭಿವೃದ್ಧಿ ।
ಯೆಂದು ಭೂಸುರರಿಂದ ಕ್ರತುಭುಜಾವಾಹನಂಗೈಸೆ ವಿಘ್ಯೈಕ್ಯಮಾಗಿ ॥
ಗಂಧಮಾಲ್ಯಂ ಶುಕ್ಲಸರ್ಷಪಂ ಘೃತಚರುಗ ।
ಳಂದ ಪೂಜಿಸುತ ಹುತಹವ್ಯಾವಶೇಷಮಂ ।
ಚಂದದಿಂದಂ ಬಲಿಯನೆಸಗಿ ವಿಪ್ರರತುಷ್ಟಿಗೊಳಿಸಿ ದಕ್ಷಿಣೆಗಳತ್ತು ॥ (30)
ಬುಧರ ಸಂತಸಗೊಳಿಸಿ ಭೂರಿಸತ್ಕಾರದಿಂ ।
ವಿಧಿಯು ಮನ್ನಿಸಿ ರಾಮಚಂದ್ರನೊಡನಿಂತೆಂದ ।
ಳದಿತಿವೃತ್ರಾಸುರನ ಮಥಿಸಲ್ಕೋಸುಗ ಕರುಣದಿಂದಾವ ಮಂಗಳವನು ॥
ಮುದದಿಂದ ರಚಿಸಿದಳ್ ಪುತ್ರಾಸುಮಂಗಳಂ ।
ಪದುಳದಿಮರೋಗವೃಷ್ಟ ಗಾತ್ರಸಿದ್ಧಾರ್ಥಮಂ ।
ದುದಿತಮೆನಿಸುತ ಶೀಘ್ರ ಪುನರಾಗಮನ ಗೈವುದೈಸೆ ಪುತ್ರಕ ಸಂತತಂ ॥ (31)
ಅರುಣನೆಣ್ಣಂ ಸುಧೆಯು ತರಗೈದುನವಸರದಿ ।
ವಿರಚಿಸಿದಳಾವ ಮಂಗಳವ ವಿನತಾದೇವಿ ।
ಸುರರಂಬುಧಿಯು ಮಥಿಸೆ ಹರಿತ್ರಿವಿಕ್ರಮನೆನಿಸೆ ಸಮಯದೊಳಗದಿತಿ ಮುದದಿ ॥
ಸುರುಚಿರದ ಮಂಗಳಮದಾವುದಂ ಮಾಡಿರ್ದ ।
ಳುರುತರದ ಸನ್ಮಂಗಳಗಳೆಲ್ಲ ಶುಭಕರವ ।
ನಿರತ ಕರೆಯುಳಿ ರಾಮ ಸಕಲಸದ್ಗುಣಧಾಮ ನಿನಗೆ ಸಂಪ್ರೀತಿಯಿಂದ ॥ (32)
ಇಂತೊರೆದು ಮಂತ್ರಾಕ್ಷತಾರೋಪಣೆಯಮಾಡಿ ।
ಶಾಂತಿಕರ ಮಂತ್ರಂಗಳಂ ಜಪಿಸಿ ತೋಷಧಿಗ ।
ಳಂ ತಳೆದು ಪರಸಿ ಕರತಳ ಕರ್ಪಿತಂಗೈದು ಮಸ್ತಕವನಾಘ್ರಾಣಿಸಿ ॥
ಸಂತೋಷದಿಂದಪ್ಪಿ ಪುತ್ರ ಕೇಳ್ಸುಬುದಲೋ ।
ರಂತೆಸಿದ್ಧಾರ್ಥನಂ ನಿರೋಗ ಸುಖಮಯನೆನಿಸಿ ।
ಸಂತೋಷದಿಂ ಬಂದು ದೊರೆಯಹುದನಿಷ್ಟಿಸುವೆ ಬೇಗ ಮತ್ತಾವ್ಯವಶದಿ ॥ (33)
ಜನಪತಿಯು ನುಡಿಯು ಸತ್ಯಕೆ ಸಾರ್ಚಿ ಬೇಗದಿಂ ।
ವನವಾಸಮಂ ಕಳೆದು ಮುನಿಜನವ ಸಂತೈಸಿ ।
ಪುನರಪಿಮದೀಯ ಪತ್ರಣಕೈದಿ ಪಟ್ಟವಣಿಯುಗ್ರದೊಳ್ಕುಳಿತು ಬಳಿಕ ॥
ಮನುವಂಶದರಸುಗಳ ಕೀರ್ತಿಯಂ ಕುಡಿಗೊಳಪು ।
ದನು ನೋಡಿ ಸಂತೋಷವಾರ್ಧಿಯೊಳಗೋಲಾಡಿ ।
ವಿನಯದಿಂದುಪಚರಿಸುವೆಂ ಮನ್ಮನೋರಥಗಳನ್ನೀವನೀ ಗೋತ್ರದೇವ । (34)
ಪರಿಪೂಜಿತಾಂಘ್ರಿಯುಗರಾದ ದೇವಾದಿಗಳ್ ।
ಪರಮಹರ್ಷದಿ ಮಹಾಸುರ ಪನ್ನಗಾದಿಗಳ್ ।
ಕರುಣದಿಂ ನಿನ್ನ ಸಂರಕ್ಷಿಸುವರೆನ್ನಿಂದ ಸಂಪ್ರಾರ್ಥರೆನಿಸಿ ಮುದದಿ ।
ತರುಣ ಸುಖದಿಂ ಬಪ್ಪುದೆಂದೊರೆದು ಬಳಸಂದು ।
ತಿರುಗಿ ಪುನರಪಿ ಪರಿರಂಭಣಾಂ ಗೈವುತಳಿ ।
ಶಿರದಗ್ರವಾಘ್ರಾಣದಿಂದ ಸಂಭ್ರಮಗೊಂಡಳಮಿತಾಹ್ಲಾದದಿಂದ ॥ (35)

ಈ ವಿಧದಲೊರೆದ ಮಾತಾಚರಣಕ್ಷಿನಮಿಸಿ ।
ಸಾವಧಾನದೊಳವನಿಜಾತೆಯಿಪ್ಪರಮನೆಗೆ ।
ದೇವಸನ್ನಿಭಸೈದುತಿರಲಿತ್ತ ಭೂಜಾತೆ ಸಿರಿಗಂತರಾಯದೆಡೆರು ॥
ತೀವದಂದದಿ ಮಂತ್ರತಂತ್ರೋಪಚಾರದಿಂ ।
ದೇವರ್ಕಳೆಲ್ಲರಂ ಪೂಜಿಸುತಲಿರುತಿರ್ದ ।
ಲೀವಿಧದ ರಾಜಕೀಯಂಗಳೀ ನೊಂದರಿಯುವತ್ತುಳ ಸಂತೋಷದಿಂದ ॥ (36)

ಪತಿಬರವನಿಟ್ಟಿಸುತ್ತಲಿರುತಿರಲ್ ರಾಘವಂ ।
ಸತತಗತಿ ವೇಗದಿಂದೈತರಲ್ಮಂದಿರಕೆ ।
ಕ್ಷಿತಿಯಣಿಗಿ ಕಾಣುತ್ತ ಭಯದಿಂದ ಬೆಸಗೊಂಡಳೆರಗಿ ಪದಪಂಕಜಗಳಗೆ ।
ವ್ಯಥಿತವಾಗಿದೆ ಪೂರ್ಣಶಶಿಯು ಪೋಲ್ವಾನನಂ ।
ಪತಿತಮುಕ್ತಾಫಲಿತ ಕಿರುಬೆಮರಿನಂಕುರಿತ ।
ಗತಿಯನಾಂತಿಹುದದೇಂ ಕಾರಣಂ ದಯದಿಂದ ತಿಳುಪಬೇಕೇ ಮಾಂದ್ಯಮಂ ॥ (37)

ವದನ ಶಶಿಯತಿಶಯಕೆ ಸಾಕ್ಷಿದುದೊ ಬೆಳ್ಗೊಡೆಯು
ಚದುರ ಸುಕಟಾಕ್ಷಗಳು ಚಾಮರಂಗಳ ಬೆಡಗ ।
ನದುರಿಸಿದವೊ ಸಿತಾಶ್ವಗಳಿಂದಲಂಕಾರವೆತ್ತ ರಥಭದ್ರದಂತಿ ॥
ಸದುಗುಣಂಗಳನುದಿಪ ವಂದಿಮಾಗಧರಲ್ಲಿ ।
ಯುವಿಸಿತೇಂ ಕತದೊಳೌದಾಸೀನ್ಯಮೊಪಿಧವ ।
ಸದಯವಿಸ್ತರ ಗೆಯ್ಯವೇಳ್ಕೆಂದು ಬಿನ್ನವಿಸಲರಸಿಯೊಡನಿಂತೆಂದನು ॥ (38)

ಕೇಳುಧರಣೀಜಾತೆ ಸತ್ಯಧರ್ಮಾಚಾರ ।
ಮೌಳಭೂಪೋತ್ತಮಂ ಬೊಪ್ಪ ಸಂಪ್ರೀತಿಯಿಂ ।
ತಾಳ ಭರತಾಂಬಿಕೆಗೆವರಗಳೆರಡಂ ಕೊಟ್ಟಪಿಂತೆ ಸುರನಾಥನೆಡೆಯು ॥
ಆಳಯಿಂದರುಹಾಗಲಾಕೆ ಕೇಳದಳಂದು ।
ಬಾಲಕಗೆ ಯುವರಾಜ ಪಟ್ಟವನ್ನಿತ್ತುವನ ।
ದಾಳಕೆಗೆ ರಾಮನಂ ಕಳುಪಬೇಕೆನೆ ತಾತನೊಪ್ಪಿದಂ ಧರ್ಮದಿಂದ ॥ (39)

ಪದಿನಾಲ್ಕುವರುಷ ವನವತಿಶಯಗಳನು ನೋಡಿ ।
ಮುಂದದಿ ಬಪ್ಪಂತೆನಗೆ ನೇಮಿಸುತ ಭರತಗ ।
ಭ್ಯುದಯಮಂ ಪಾಲಿಸಿದರಖಿಲಮುನಿಸನ್ಮತದಿ ಸತ್ಯಮೊಷನ್ನೀರದೆ ॥
ಅದರಿಂದಲಾವಯ್ಯನನುಮತಿಯಲೈದಿಮುನಿ ।
ಹೃದಯಸ್ಥಮಾದ ಕ್ಲೇಶಾದಿಕಾರಣ ಜನರ ।
ಪದುಳದಲಿ ನಿಗ್ರಹಿಸಿ ಬರ್ಪೆ ಕ್ಷಿಪ್ರಮಿದೆಂದು ತಿಳಿದಿಹುದು ಚಲನೆಯುಳದು ॥ (40)

ನಿರತನಿಯತಾಹಾರ ಮೆರಸಿಕಾಲ್ಯದಲೆದ್ದು ।
ಹರಿಯಂ ಯಥಾವಿಧಿಯೊಲಭ್ಯರ್ಚನಂ ಗೈದು ।
ಪರಮಧರ್ಮಿಷ್ಠಗುರು ದಶರಥಮಹೀಶಗಂ ವಂದನಂ ಗೈದು ಬಳಿಕ ॥
ಚರಣಸೇವೆಯೊಳು ಮನ್ಮಾತೆ ಕೌಸಲ್ಯೆಗಂ ।
ಹರುಷಗೊಳಸುತ ಉಳಿದ ತಾಯ್ಗಳಂ ಚಿತ್ತಾನು ।
ಸರಣೆಯಿಂ ಸುಖಿಯಾಗಿ ಬಪ್ಪ ಪದವಿಯ ನೋಡುತಿಹುದಚಲೆಯಾನಂದಿಸಿ ॥ (41)

ಭರತಶತ್ರುಘ್ನರೆಮ್ಮನುಜರವರೀರ್ವರುಂ ।
ಕರುಣಾಕಲಿತರೆಮಗೆ ಜೀವನೋಪಮಪುತ್ರ ।
ವರ ಪಿಂದು ತಿಳಿದವರ ಲಾಲನಂಗೈವುತ್ತಪೋಷಿಸುವುದನುದಿನದೊಳು ॥
ದೊರೆಯಮ್ಮರಾಜ್ಯದಧಿನಾಥಶೀಲಸಂ ।
ಭರಿತರಂ ಪೊರೆವನನುಚಿತಕಾರ್ಯಕೆಳಸಿದವ ।
ತರುಣಿಸಾದರು ಶಿಕ್ಷೆಗೈವಕಾರ್ಯಪ್ರದಂ ಪಾಲಿಸುವ ಧರ್ಮವಿಧಿವು ॥ (42)
ಭೂಮಿಶನೊಲುಮೆಯಂತಿರ್ದರವುಸರಣೆಯಿಂ ।
ಪ್ರೇಮಾರ್ಜನಂಗೆಯ್ಯವೇಳ್ಕುವುದರಿಂ ಸತ್ಯ ।
ನೇಮಾನುಕಾರಿಯೆಂಬೆನಿಸು ತಾತನ ವಚನವಂ ಮೀರದಿಹುವದೊಳು ॥
ಭಾಮಾಶಿರೋರತ್ನವೆಂದಖಿಲಸಾಧ್ವಿಯರ ।
ಸ್ತೋಮಮನುವೋದದೊಳ್ನುತಿಸುವಂತಿಹುದೆಂದು ।
ರಾಮಾಖ್ಯನಗರದಧಿನಾಥ ನಿಜವಲ್ಲಭೆಗೆ ಪೇಳ್ದ ಲಾಲಿಸು ಪಾರ್ವತಿ ॥ (43)

(ಸಂಧಿ 10, ಪದ 451)

ಹನ್ನೊಂದನೆಯ ಸಂಧಿ

ಸೂಚನೆ ॥ ಸಾಧುತರ ಮಾಧುರ್ಯದಾರ್ಯ ವಚನಂಗಳಂ ।
ಬೋಧಿಸುತ ನಿಜಸತಿಗೆ ಸಂತಸಂಗೊಳಿಸಿ ಕರು ।
ಣೋದಧಿಯು ಜನಕೆಂಘ್ರಿಸಾರಸಗಳಂ ಕಾಣ್ಬಡುಜ್ಜುಗದೊಳೈತಂದನು ॥

ಬಳಕೆ ಗಮಿಸುವೆ ಸುಖವೊಳಕುದೆಂದುವಾಚಿಸಿದ ।
ಘನತರ ಸುವಾಣಿ ಶ್ರವಣೋತ್ಕಲಿತವಾಗಲ್ಕೆ ।
ವನಧಿಮೇಖಲೆಯರಣಿಗಿಯಂಬಕಗಳತ್ಯಂತ ಕಳೆಗೊಳಲೋಕ್ಯಕನದೊಲು ॥
ವನಜಾತಪಾದಸಂದರ್ಶನದಲೌತ್ಸುಕ್ಯ ।
ಬಿಸದವಂ ಮೂದಲಿಸಲಾಸ್ಯರುಚಿ ರಾಮನಂ ।
ಕಿನಿಸಿಂದ ನೋಡುತಿಂತೆಂದಳವನೀಜಾತೆ ಕೇಳು ಶೈಲೇಂದ್ರಜಾತೆ ॥ (1)
ಅತ್ರೆಮಾವಂದಿರುಂ ಭಾವಮೈದುನರುಗಳು ।
ಮತ್ತಾತ್ಮಜಸೊರ್ಗಸೆಯರೆಲ್ಲರುಂ ತಮತಮ್ಮ ।
ಚಿತ್ತರದ ಪುಣ್ಯಾನುಭವಿಗಳೆನಿಸುವರಲ್ಲದದರಿಂದಲಿತರ ಜನಕೆ ॥
ಮತ್ತಾಸೆಯೇನಿಲ್ಲ ಪತಿಯ ಭಾಗ್ಯೋದಯಮೆ ।
ನಿತ್ತ್ರದಕೆ ಸತಿಕರ್ತಳದರಿಂದ ತನ್ನನುಂ ।
ಪೆತ್ತವರ್ದಲಾದರಾರಿದೋರ್ಡೇಂ ಸುದತಿ ಗಧಿಪಗತಿಯೆನಿಕುಜಗದಿ ॥ (2)
ಧವನಲ್ಲದನ್ಯದೈವಂಗಳುಂ ಮಾನಿನೀ ।
ನಿವಹಕಿಲ್ಲೆನುತ್ತ ಲೋಕವೇದಂಗಳೊಳು ।
ಸುವಿವೇಕಿಗಳ್ಪೇಳ್ವರದರಿಂದಲೀಶಾನ ಪಶ್ಚಾಯಿಯೆಂತಿರೆನುತ ॥
ಅವಿರಳಸ್ನೇಹದಿಂ ಪೇಳ್ದಪಿರಿಯರ್ನುಡಿಯು ।
ಲವಲವಿಕೆಯಿಂದಾನು ಮೀರಬಲ್ಲೆನೆ ಬುಧ ।
ಪ್ರವರ ಭವದೀಯ ಚಿತ್ತಕೆ ತಿಳಿಯದೇನಿಹುದು ಬಿನ್ನವಿಪ್ಪುದೇನಿಪ್ಪುದು ॥ (3)

ಬಗೆ ಬಗೆಯ ವಿಷದಾರು ಪಕ್ಷಿಘೋರಾಕಾರ ।
ಮೃಗಮಿರ್ಪ ದುರ್ಗಮಂ ಬನವಾದೊಡೊಂದನುಂ ।
ಬಗೆಯದೆಲೆ ಭವದೀಯ ಚರಣಸೇವಾಸಕ್ತಿ ಭಕ್ತಿಯಿಂದೈತಪ್ಪೆನು ॥
ನಿಗಿನಿಗಿಪ ಸೌವರ್ಣ ಹರ್ಮ್ಯಾಗ್ರ ಭೂಮಿಯೊಳ್ ।
ಸೊಗಯಿಪಂದದಿ ಸಂತಸದಲಿರ್ಪನೊರ್ವರೊ ।
ಶ್ಮಿಗೆ ಮಾನವ ವ್ಯಸನಕದಲಂಪಲೀಯದೆ ನಿಯತ ಬ್ರಹ್ಮಚರ್ಯವನು ಬಿಡದೆ ॥ (4)

ಫಲಮೂಲಮದು ಭುಕ್ತಸಂತುಷ್ಟಿಯಿಂ ಶೈಲ ।
ಚೆಲುವನದನದೀ ಪಲ್ಲವಾಸಿ ಸುಸ್ಥಳಗಳಲಿ ।
ಲೆಲವಿಂದ ಭವದೀಯ ಚರಣಕಲಸೆಯೊಳಾನು ಚಂಪಕೌತೂಹಲವನು ॥
ಚಲಿದಿರ್ಪ ಚಿತ್ರಮಂ ಪಡೆವೆನಲ್ಲದೆ ಲೇಶ ।
ಚಲನಾತ್ಮಕಂಗೆಯ್ಯನಪಸದೊಳಂ ದಿವ್ಯ ।
ಸಲಿಲ ಮಂಡಿತ ಕಮಲಕುಮುದಾಕರಂಗಳನು ಕಾಣ್ಬೆನಾನತಿಹರುಷದಿ ॥ (5)

ತೌರಿನತಿಶಯ ಸುಖಕೆತೌ ರೆನಿಪುದೀ ಸೇವೆ ।
ಪಾರ ಚಾಪಲರಕ್ತಿ ದುಕ್ತಿ ಮುಕ್ತಿಯ ಕೆಡಿಪ ।
ವೈರಿಯಂದರಿಪಿರ್ಪ ಪಿರಿಯರನು ಮತಿಯಿಂದ ಲೈತಪ್ಪೆ ನೊಡನೆ ಮುದದಿ ॥
ವೀರರಗ್ರೇಸರರ್ಸಲಹುವರೆ ತಾವಿರಲ್ ।
ತೋರದೆಂದಿಗು ಕ್ಲೇಶ ಮುದದಿಂದುದಾರ ಕರು ।
ಣಾರಸದೊಳಪ್ಪಣೆಯ ನೀಯಬೇಳ್ಕೆಂದು ಪತಿಗೆರಗಿ ಬಿನ್ನಪಂ ಗೈದಳು ॥ (6)

ಚರಣಸನ್ನಿಧಿಯಲಾಹಾರ ವರ್ಜಿತವಾಗಿ ।
ಯಿರಲದೇ ಸ್ವರ್ಗಸುಖಮೆನಿಪ್ಪುದಿತರತ್ರ ಬಂ ।
ಧುರದ ಸೌಖ್ಯದೊಳಲ್ಲರಕೋಪಮಿತಮಿಲ್ಲ ರುಚಿಸದೆನ್ನಯ ಮಾನಸಂ ।
ಅರಿವೆ ಮರವೆಗಳಿಂದಲೇನಾದೊಡಂ ತಿಳಿಯ ।
ದಿರುಪಿದುದ ಮರೆದೆನ್ನ ಕರದೊಯ್ಯುದನುಮನದ ।
ಲಿರುವಂತೆ ದಯಗೈವುದೆನೆ ರಾಮಚಂದ್ರ ಸತಿಗಿಂತೆಂದ ವಿನಯದಿಂದ ॥ (7)

ಸಕಲ ಧರ್ಮಸ್ವರೂಪಂತಿಳಿದ ಮೂಜಗದೊ ।
ಳಕಲಂಕಕುಲದೊಳವತರಿಸಿ ನಿಯಮಾಚಾರ ॥
ಸುಕುಮಾರತೆಯನರಿತಿಲ್ಲದೀ ಪ್ರಾಕೃತರ ಪಾಸಟಿಯಮೇಳಿಯಲ್ಲ ॥
ಪ್ರಕಟಕ್ಲೇಶಂಗಳಾಗಾರ ಮತ್ತಾಹಾರ ।
ನಿಕರ ಮೆಲ್ಲ ಮತ್ತೃಪ್ತಿಕರಕರಣಶೋಷಣೆಯ ।
ನಿಕಟವಮಾಯಾಸಭೂಯಿಷ್ಠಮದರಿಂ ಬನವ ಮನಸಿ ನಿಶ್ಚೈಸಬೇಡ ॥ (8)

ಎಲೆವನೆಯಲಿರಿಕೆ ಸಿಕ್ಕಿದ ಪರ್ಣಮೂಲಗ ।
ಳ್ಪೈಲಗಳಂ ಮೆಲುವುದನಿಶಂ ನಿದ್ರೆಸಮನಿಸದು ।
ಪಲವು ಮೃಗ ಪಕ್ಷಿಗಳ್ ಕ್ರೂರವಾರುಣನುಡಿಗಳಂ ಸೋಂಕೆ ಕಿವಿಗೆ ಭಯದಿ ।
ಸಿಲುಕದಿರೆಫಲ ನಿರಾಹಾರ ಕಾರ್ಶದಿ (?) ಬಟು ।
ಕಲಿತಮೆಂದೆನಿಸಿ ಋಷಿದೇವತಾತಿಥಿ ಪೂಜೆ ।
ಯಲಘು ಮತಿಯಿಂದ ಲನವರತ ಮಾಡಲ್ಪೇಳ್ಕು ಬನದುಃಖಮೂಲಕಂದ ॥ (9)

ಬರಸಿಡಿಲ ಧಿಕ್ಕರಿಪ ಸಿಂಹಶಾರ್ದೂಲಗಳ್ ।
ತರತರದ ಗರ್ಜನೆಗಳುರುಕಲಭಘೀಂಕಾರ ।
ದುರುಳನಿಸ್ವನದಿಂದ ದುಃಖ ಸಂಭವಮುಪ್ಪುದೈಸೆ ನುತ್ರಬಲೆಯರಿಗೆ ॥
ಪರಿಪರಿಯಕಂಟಕಕಾತೇರ್ಬರ್ ದುಷ್ಟಾಹಿಗಳ ।
ನೆರವಿವೃಕ ಕಂಕ ಗೋಮಾಯುಗಳ ಬಾಧೆ ಸಂ ।
ಕರಮೆನಿಪ ಪನವನೀಂ ಬಯಸುತಿಹೆ ಹಿತವೆಂದು ಕ್ಲೇಶಗಳ ಕಂಡರಿಯದೆ ॥ (10)

ಕಾಲತ್ರಯದ ಸ್ನಾನ ಸಲಿಲದಾಹಾರ ಮುಂ ।
ಮೇಲೆನಿಪ ಪುಷ್ಪೋಪಹಾರ ಮುಂತಾಮುದಂ ।
ಕಾಲಕಾಲದಲಾತ್ಮಕಶಯದಿಂದ ಸಮನಿಪ್ಪುದು ಋಷಿಗಳಾಚಾರ ವಿಡಿಮ
ಆಲಯಂ ತುಹಿನಕರ ದ್ವಾದಶಾತ್ಮಕರ ಪದ ।
ಜಾಲತವ್ರರಾಗಿಪ್ಪುದನವರತ ಮಾಹಾರ ।
ಶೀಲ ತೃಜಸಪಾಲ ಮಾಧುರ್ಯಮದುಂಬ ಬನಮುಸುಖಮೆನಿಪ್ಪುದಬಲೆ ॥ (11)

ಶಾರೀರಕಪ್ಪ ಮಿನಿ ತನಿತೆಪುತ ಬಿಸ್ತರಿಪೊ ।
ಡಾರಿಗಳಪಡುವ ದಬ್ಬಾಸ್ವಕ್ಷಿ ಕ್ರೋಧಾದಿಗಳ ।
ತೋರಿಪಿಪಯಾ ದ್ಯಖಿಲ ಕಂಟಕಗಳಂ ಕಳೆದು ಭಯಮೋಹಗಳವರ್ಜಿಸಿ ॥
ಚಾರಣಂಗೈವ್ರದತಿಸಂಕಟಂ ಪೇಳ್ದಂತೆ ।
ಬಾರದದು ಕಾರಣಂ ಬನಕೆಬಹುದೆಂಜೀವಿ ।
ಚಾರಗಳಸಾರಮೆಂದರಿತು ಸುಖದಿಂ ಗೃಹದೊಳಹುದೆ ಲೇಸೆನಿಪ್ಪುದಬಲೆ ॥ (12)

ಅತಿಕಠಿಣ ಕಠಿಣ ಕ್ರೂರ ಕ್ರೂರತರಮಾಗಿ ।
ಗತಿನಿರೋಧಾಸ್ಪದದ ವಾಣಿಯಂ ಕೇಳಿ ಶುಭ ।
ಮತಿಮನ್ಯು ಮುಖಿಯಾಗಿ ಮೆಲ ನೆತ್ತಿ ವಿನಯದಿಂ ಒನ್ನಪಂಗೈದಳೊಲಿದು ॥
ಅತುಳದೋಷಗಳು ವನವಾಸಸಂಭವಮೆಂಮ ।
ವಿತತಭಾಷಾ ನಿರೂಪಿತ ಮಾದುದೆಲ್ಲಮುಂ ।
ಪತಿಭವತ್ಪದ ಭಕ್ತಿಯಿಂದೆನಗೆ ಸುಖರೂಪ ಫಲವನಿತ್ತಪ್ಪುದನುದಿನಂ ॥ (13)

ಶರಭಶಾರ್ದೂಲ ಮೃಗಸಿಂಹ ಕೀಟಾದಿಗಳ್ ।
ಕರಿಸರೀಸೃಪ ಪಕ್ಷಿಗಣಗಳೆಂದಿಗುಕಾಣ ।
ಪರಿಯಬಾರದ ಘೋರರೂಪುಳ್ಳುವಾದಡಂ ನಿಟ್ಟಿಸಲ್ಸಮರ್ಥೆಯು ॥
ಭರಿತ ಭಯದಿಂದೋಡಿ ಪೋಪಮಾವಾವೆಡೆಗೆ ।
ಗುರುಜನಾನುಜ್ಞೆಯಿಂ ಬಪ್ಪಪದಸಂಗತಿಯ ।
ಪರಿಹರಿಸೆ ದೇಹಮುಂ ಧರೆಯೊಳರದಿದು ಸತ್ಯವೆಂದೆಣಿಸು ರಘುಕುಲೇಶ ॥ (14)

ಚರಣ ಸೇವೆಯೊಳಿರ್ಪ ಸೇವಿನಿಯದಿಕ್ಪಾಲ ।
ಸುರನಾಥನಾದೊಡಂ ನಿಟ್ಟಿಸಲಸಾಧ್ಯಮಿದ ।
ಧರೆಯ ಜನರುಂ ಬಲ್ಲರೈಸೆ ಮತ್ಪಿತೃಗೇಹದಲ್ಲಿರ್ಪಕಾಲದಲ್ಲಿ ॥
ಸುರಪಗುರು ಸಂಕಾಶ ಕಾರ್ತಾಂತಿಕೋತ್ತಮರು ।
ಪರಿಕಿಸುತ ನಿಜಶಾಸ್ತ್ರಮೆಲ್ಲಮಂ ಪ್ರಿಯದಿಂದ ।
ಒರೆದ ವಾಣಿಯಸತ್ಯಮೆನಿಸದದ ಬಿತ್ತರದಿ ಬಿನ್ನವಿಪೆ ಚರಣಯುಗಕೆ ॥ (15)

ಇನನೊಡನೆ ಕೆಲಕಾಲ ವಿರತಿಯಿಂದತಿ ಸುಖವ ।
ಜಗಗಲನುಭವಿಸ ವೇಳ್ಕೆಂದು ಸಾಮುದ್ರಿಕದ ।
ಘನವೇತೃಗಳು ಮಾತೆಯೆಡೆಯೆ ವಿಸ್ತರವಾಗಿ ಪೇಳ್ದುದಂ ಕೇಳರ್ದನು ॥
ವನಿತೆಗಂ ಪತಿದೈವಮೆಂದೊರೆವ ಶ್ರುತಿತತಿಯು ।
ಗ ನುಸರಿಸದಿರಲು ಸಂಭವಮಪ್ಪುದಘ ಮುಂದೆ ।
ಜನಿತವಾಗದು ಸುಖಂ ಪಳಿಪಾತು ಪೂರ್ವರಂ ಮನ್ನಿಸಲ್ವೇಳ್ಕು ಮುದದಿ ॥ (16)

ನಿರತಿಶಯ ಸುಖದಿಂದ ತವರುಮನೆಯೊಳಿರ್ದ ।
ತೆರದಿ ಬನದೊಳ್ ಭವತ್ಪಾದ ಸೇವೆಯೊಳಿರ್ದ ।
ಪರಿಕಿಸಲ್ಕೆನ್ನಿಂದ ಲಘು ಲೇಶಮಂ ತೋರದದಸಕರದೊಯ್ಯದುಳಸೆ ॥
ಗರಳ ಸೇವನೆಯಗ್ನಿ ಜಲಗಳೊಳಗೇ ನೊಂದ ।
ಘೋರದಸುಗಳಂ ಕಳೆವದಲ್ಲದುಳಸಂ ರಾಮ ।
ಕರುಣಾಕಲಿತ ಹೃದಯ ಕಾಯ್ವುದುಚಿತಂ ಪೇಳ್ವೆನೆನ್ನ ಮಾನಸದಲಿಹುದಂ ॥ (17)

ದೀನೆಯ ಪತಿವ್ರತೆಯ ಸಂಕ್ಲೇಶವಶದಿಂದ ।
ಮ್ಲಾನೆಯಂ ಸುವ್ರತೆಯ ಸ್ವೀಯ ಸುಖಸಂತೋಷ ।
ಮಾನ ಭಾಗಿನಿಯೆನಿಸುವೆನ್ನ ವರ್ಜಿತಗೈಪ್ರದಾವಧರ್ಮಂ ಮಹೀಶ ॥
ಆನು ವಿಜ್ಞಾಪಿಸಲ್ತಕ್ಕುದೇ ನೀ ಶಾನ ।
ತಾನಾವೆಡೆಯೊಳಪೋಡಲ್ಲಿ ಮಜ್ಜನಮಹು ।
ದೂನಮಿಲ್ಲಮೆನುತ್ತಲೊರೆದಶ್ರುಪೂರ್ಣಾಕ್ಷಿಯೆನಿಸಿ ಮೌನದೊಳಿರ್ದಳು ॥ (18)

ನೋಡಿ ಬಹುವಿಧದಿಂದಲುಪಚರಿಸುತಿನಿನುಡಿಗ ।
ಳಾಡಿದಿನಿಯನ ಮುಖಾಬ್ಜವ ನಿಟ್ಟಿಸುತಲೆಂದ ।
ಳೊಡವುಡು ವಿಡುವೆಡೆಯ ಲೇನು ಕೊರತೆಗಳಿಲ್ಲದತಿಸುಖದೊಳಹುದಾದರು ॥
ಪಾಡೊಳೆಲ್ಲರು ಸತಿಯನುಳಮು ಗಮಿಗೆದವೆನ್ನು ।
ತಾಡುವರು ಸ್ತ್ರೀ ತನುಜರನುಜಾತರುವೆಡೆಯ ।
ಮೂಡಿದಾನಂದದಿಂ ದಿರಲಣ್ಣೆಯಂ ಗೆಯ್ಯ ನುಳವಗೇ ಸರ್ವಜನರು ॥ (19)

ಸತಿಯು ಸಲಹುವರೆ ಸಾಹಸಮಿಲ್ಲದುಳುಹಿದಂ ।
ಕ್ಷಿತಿಪನೆಡೆಯೊಳಗೆಮ್ಮ ಕೆಲರಾಡುವರು ಮಗುಳೆ ।
ಪತಿಯನುಳವೀ ಪುರದೊಳೇಂ ಕತದೊಳೀ ಮಹಿಳೆಯಿಪ್ಪಳೆಂದೆನುತ ಕೆಲರು ॥
ಮಿತಿಯಿಲ್ಲದಮಿತ ಜನರಾಡದುಳಿಯದೇವ ।
ಹಿತವಬಿನ್ನವಿಪೆ ನಲ್ಲದೆ ವಿಷಮದುರ್ಮನದ ।
ಗತಿಯು ನಂಟೆನು ಸಾಧು ಸತ್ಕುಲಜ ಪೌರಂಧ್ರಿಯರ್ನಡೆವ ನಡತೆ ವಿಡಿದು ॥ (20)

ಮತ್ತೆ ಕುಶಕಾಶವೃಷಿಕ ಕಂಟಕಾದಿಗಳು ।
ಬಿತ್ತರದ ಸುಖಮೀವ ಬಿರುಗಾಳಿ ಕಳ್ತಲೆಯು ।
ಮೊತ್ತಮುಪಕರಿಸದಿರದಮಿತ ಪ್ರಸ್ತರಶರ್ಕರಾದಿ ಶಯನಂಗಳೆನಗೆ ॥
ಮೆತ್ತನಾಸ್ತರಣಕಲ್ಪಂ ಪತ್ರಫಲ ಮೂಲ ।
ವಿಸ್ತರದಲುಪಹಾರ ಮಮೃತ ನಿಭಮೆಂದೆನಿಪ್ಪ ।
ದುತ್ತಮ ಪತಿವ್ರತ್ಯ ಹೃದಯಸ್ಥಮಾಗಿರಲ್ಕಡವಿಯೊಳಿರನಿಪ್ಪದಸಳ ॥ (21)

ಬಾಧಿಸೆನು ಚಿತ್ರಮಂ ಭವದೀಯಚರಣ ಸಂ।
ಬಾಧೆಗೊಳಸೆನು ನಿಮ್ಮ ನುಳಿದವ್ಯಯಂ ತನಗೆ।
ಮೋದಮೀಯದು ನಿರಯನಿಭಮೆನಿಪ್ಪುದದರಿಂದ ಮೊಡಗೊಂಡು ಪೋಪುದುಚಿತಂ॥
ಭೇದ ವೆನಿಸಿದೊಡಿಂದೆ ಗರಳಸೇವನೆಯಿಂದ।
ಭೇದಿಸುವೆನಸುಗಳೆ ಭವತ್ಸಮಾಗಮ ಮುಳಿದು।
ಮೇದಿನಿಯೊಳರೆನಿಮಿಷ ಜೀವಿಪುದಕಿಂದಧಿಕಲೇಸು ನಿಧನದಕಾಂಕ್ಷೆಯು॥ (22)

ನೋಡದಿರಲರೆಘಳಿಗೆ ಯುಗಮೆನಿಪ್ಪುದೈಸೆ ಮಗು।
ಳಾಡಲೇನದನು ಪದಿನಾಲ್ಕು ವತ್ಸರ ಕಾಣ।
ಮಾಡುವೆನದೆಂತು ಜೀವಿಸುವೆ ಪಿಂತಣ ಮಹಾರಾಮಾಯಣದ ಕಥೆಯನು॥
ನೋಡಿಕೇಳಪ್ಪುದುಂಟಾ ದೊಡದರೊಳ್ ರಾಮ।
ಜೋಡಗಲಿ ಸೀತೆಯಂ ಬನಕೆ ಗಮಿಸಿದನೆಂಬ।
ರೂಢಿಯುಂಟೇ ನಿರಾಗಸೆಯ ನಿಷ್ಕಾರಣದಿ ಬಿಡುವುದುಚಿತವೆ ನರೇಶ॥ (23)

ಎಂದನೇಕ ವಿಧ ಪ್ರಲಾಪಸಂತಾಪಮಂ।
ಪೊಂದಿದಗ್ಗದ ವಾಣಿಯಿಂದ ನಿಸ್ಸಂಜ್ಞೆಯಿಂ।
ಬಂಧುರಕ್ಲೇಶದಿಂ ಪೊರ ಪೊಣ್ಮಲಂಬಕದಿ ಕಂಕಣಗಳುಷ್ಣತರದಿ॥
ಸಿಂಧುಜಲಸಂಪರ್ಕ ಸಾರಸಮೊ ಹಿಮಕಲಿತ।
ಯಿಂದು ಬಿಂಬಮೊಯೆನಲ್ಮುಖ ಮೆಸೆಯ ಳಿಟ್ಟಸುತ।
ಳಿಂದೀವರಾಕ್ಷಿಯಂ ಮೃದುಮಧುರವಾಣಿಯಿಂದುಪಚರಿಸುತಿಂತೆಂದನು॥ (24)

ದೇವಿ ಕೇಳೆನ್ನೊಡನೆ ಕರದೊಯ್ಯಲನುಮಾನ।
ಭಾವಮೆಳ್ಳನಿತಿಲ್ಲ ಮತ್ತಾರದೆಸೆಯಿಂದ।
ದಾವಭಯ ಸಮನಿಸುಗು ಮೆಂಬಭಯ ಶಂಕೆಯಲ್ಲೇನೊಂದ ನೆನೆಯಲಿಲ್ಲ।
ದೇವದಾನವರೊಳಗದಾರು ಬಂದಡೆಸಿದರು।
ನೋವಿಸುವುದಲ್ಲದಳ್ಕಲ್ಲ ಬನ ಭೀಕರದ।
ತಾವೆನುತಮಿನಿತ ವಿಸ್ತರಿಸ ಬೇಕಾದುದಕೆ ಸಂತಾಪಗೊಳಲೇತಕೆ॥ (25)

ತಾತನಾಜ್ಞೆಯ ಮೀರಲಳವಲ್ಲ ಧರ್ಮಂ ಸ।
ನಾತನಂ ಪಿತೃಮಾತೃಗಳು ದೇವರಿಂದಧಿಕ।
ನೀತಿಯರಿಯದಲವರನುಪಚರಿಪ್ಪುದುಳಿದಿತರ ದೈವಮಂ ಭಜಿಸೆ ಸುಖವು॥
ಜಾತವಾಗದು ಜಗಕೆ ಲೋಪ ಸಮನಿಪ್ಪುದೆಂಬ।
ಮಾತಿನಿಂ ಗಮಿಸುವೆಂ ಕ್ರೂರ ಕಾಠಿಣ್ಯತರ।
ದಾಠಿಕಾಯಿತಮರಣ್ಯಂ ಸ್ತ್ರೀಯ ರೊಡನೈದನುಚಿತ ಮದೆಂದು ತಿಳಿದು॥(26)

ಪುರದಲಿಹುದೆಂದು ಸೂಚನೆಗೈದೆಮಾತುರದೊ।
ಳುರುತರಕ್ಲೇಶ ಸಂಭವಮದುದಾ ದೊಡೆಯು।
ಧರೆಯೊಳುಂ ನಿಜಕೀರ್ತಿ ಬೇರಿಹುದೆ ರವಿಯುಳಿದು ಛಾಯೆಮತ್ತಿರಂಗಿಹುದೆ॥
ಕರಿಶಮವಿನಾಭಾವ ಮೆಂದರಿದು ಕರೆದೊಯ್ವೆ।
ತರುಣಿರನ್ನಳೆ ಶೋಕಮಂ ಪರಿದು ಸಂತೋಷ।
ಭರಿತಮಾಗುತಲಿ ಪ್ರಸ್ಥಾನ ಸಾಮಗ್ರಿಯಂ ನನುಗೆಯ್ಯವೇಳ್ಕುಜವದಿ॥ (27)

ಗುರುಜನರ್ಮದ್ವಂಶಸಂಭವರ್ಮತ್ತ್ರಸ್ಯ ।
ಇರದೆಪಿತೃಮಾತೃಸೇವೆಯ ನೇಮದಿಂಗೈದು ।
ಸುರಪ ಗಾಂಧರ್ವ ಬ್ರಹ್ಮಾದಿಲೋಕಂಗಳಂ ಗೆಲಿದರರೆನಿಮಿಷದೊಳಗೆ ॥
ಪರಮಪುರುಷರ ಸಾಧುವೃತ್ತಮಂ ಕೈಕೊಂಡ ।
ಇರದೆ ತ್ರೈಲೋಕ್ಯ ಸ್ವಾಧೀನಮೆನುತಂ ಪಿರಿಯ ।
ರರುಪಿದುದ ತಿಳದಾನು ಮೀರ ಬಲ್ಲೆನೆ ಲೋಕವಾದಕಾಂ ಗುರಿಯಪ್ಪೆನೆ ॥ (28)

ಯಾಗಾದಿ ಸರ್ವತೀರ್ಥಸ್ನಾನಫಲಗಳುಂ ।
ಯೋಗಾದಿ ಜಪತಪಧ್ಯಾನ ಸತ್ಕರ್ಮಗಳ್ ।
ಸಾಗರಾಂತದ ಧರೆಯ ದಾನಗಳ ಫಲಗಳುಂ ಗುರುಸೇವೆಯಿಂದಲೊದಗಿ ॥
ಭೋಗ ಮೋಕ್ಷಗಳೀವುವದುನಿಮಿತ್ತಂ ಬನಕೆ ।
ಪೋಗದುಳದಪುದಿಲ್ಲ ನೀಂ ಬಪ್ಪುದತಿಶಯದ ।
ರಾಗಾನುವೃತ್ತಿ ಯೆಂದೆನುತ ನೇಮಿಸೆ ಜನಕಜಾತೆ ಸಂತಸಗೊಂಡಳು ॥ (29)

ಸತಿಗೆ ಸಂತಸದಲಪ್ಪಣೆಗೊಟ್ಟುದಂ ಕಾಣು ।
ತತಿಶೋಕದಿಂದ ಸೌಮಿತ್ರಿ ರಘುನಾಥ ಗಾ ।
ನತನಾಗಿ ಬಿನ್ನಪಂ ಗೈದ ನಿಜಚಿತ್ತಾನು ವೃತ್ತಿಯಂ ಮರೆಯಿನಿಸದೆ ॥
ವಿತತ ಮೃಗ ಪಕ್ಷಿಯೂಥಗಳಪ್ಪ ಕಾನನ ।
ಕ್ಕತಿವೇಗ ಧರಣಿಸುತೆ ಸಹಿತ ಗಮನಿಪುದಾದೊ ।
ಡಿತರಮಂ ನೋಡದಗ್ರಜನೆನಿಪೆಶರಚಾಪ ಧರನಾಗಿ ದೇವಮುದದಿ ॥ (30)

ಸುರಲೋಕ ಭೋಗಮಂ ದೇವತಾತ್ವಂಗಳಂ ।
ನಿರತಿಶಯದೈಶ್ವರ್ಯ ಮುಂತಾದ ಭೋಗಗಳ ।
ಪರಿಕರವನಾಂ ಬಯಸೆ ಭವದೀಯ ಪದಸೇವೆಯೈಕತಾನದೊಳರ್ಪೆನು ॥
ಬರುವೊಡಪ್ಪಣೆಗೊಡುವುದೆಂದೊರೆದ ಸೌಮಿತ್ರಿ ।
ಯಿರವನೋಡುತರಾಮ ಬಹುವಿಧದಲುಪಚರಿಸಿ ।
ಪರಿಹರಿಸುತೈತರಲೆಕ್ಕ್ರೀಥದಿಂ ರಾಮನೊಡನಿಂತೆಂದ ವಿನಯದಿಂದ ॥ (31)

ಕೊದಲಪ್ಪಣೆಯನಿತ್ತು ಮಗುಳೆ ಪರಿಹರಿಸುತಿಹು ।
ದಿದು ಹೃದಯಕನುಮಾನಮೆನಿಸಿ ಕಂಗೊಳಸುತಿದೆ ।
ಸದಯ ಮದ್ಗಮನಕೆ ನಿಷೇಧಮೇಂಕತ್ರದಿಂದ ಲಡಸಿದುದು ಪೇಳ್ವುದೆನಲು ॥
ಚದುರಿಂದ ರಘುವೀರನೆಂದ ಕೇಳ್ ಸೌಮಿತ್ರಿ ।
ಯುದಿತವಶ್ಯಂ ಸಖನು ಪ್ರಾಣ ಸಮಪ್ರಿಯತರಂ ।
ವಿದಿತಾಗಮಜ್ಞ ನೆಂದರಿತಿರ್ದ ನಾದೊಡಂ ಬನಕನೀಂ ಬರಲು ಪ್ರಿಯದಿ ॥ (32)

ಪೊರೆವಲಾರ್ಗಸಹ್ಯ ಸುಮಿತ್ರೆಯರ ಚಿತ್ತದಿರ ।
ವರಿದು ಪೋಷಿಸುವವನಾರು ಮದ್ಗಮನಸಂ ।
ಭರಿತಹೃತ್ತಾಪದಿಂ ತೊಳಲುತಿಹರುಪಚರಿಪ ದತ್ತಿಗರದಾರಿರ್ಪರು ॥
ಧರಣೀಶ ಕೈಕೆಗುಂ ವಶನೆನಿಸಿ ಮುನ್ನಿರ್ದ ।
ನುರುತರ ವ್ಯಾಕುಲಂ ಜನಿತಮಾಗಲ್ಕಿತರ ।
ಇರವ ನೋಡುವರೆಂತು ಮಾತೆಯರಸೇವೆ ಯೊಳಗಿಹುದೆಂದುಪೇಳ್ವುದೈಸೆ ॥ (33)

ಅರಸ ಮನ್ಮಥಪಾಶದಿಂ ಒಲಿದು ರಾಜ್ಯಮಂ ।
ಕರಗತಂ ಗೈದಶ್ವಪತಿಯಣುಗಿ ಸ್ವಪ್ನದೊಳ್ ।
ಸ್ಮರಿಸುವಳ್ ಮನ್ಮಾತೆ ಕೌಸಲೆ ಸುಮಿತ್ರೆಯರ ಮನುಜರೆನ್ನುತ ಬಗೆವಳ್ ॥
ಭರತನಂ ಸಿಂಹಾಸನಾಧಿಪತ್ಯಂಗೈವು ।
ತಿರದೆ ಮಸ್ತಕದಿ ಮಾತೃಶಾಸನದಿ ನಮ್ಮವರ ।
ಪೊರೆಯನದರಿಂದಧಿಕ ಕ್ಲೇಶಕಾರಣಮಪ್ಪುದೆಂದು ತೋರುವುದು ಮನಕೆ ॥

ಪತಿಯ ಪಂಗಿನಿತಿಲ್ಲ ಸವತಿಗಧಿಕಾರ ನಿಜ । (34)
ಸುತರಿಲ್ಲ ಸನ್ನಿಧಿಯಲಾವ ಪರಿಯಲಿ ದುಃಖ ।
ತತಿಯನಪಹರಮೆನಿಪಳವ್ವೆ ಮಾತಾಶುವರ ಕಾಣದನುದಿನ ತೊಳಲುತ ॥
ಹಿತವನಾಚರಿಸು ವೃದ್ಧರ ವಿಷಯದಲಿ ಸ ।
ನ್ಮತಿಯೊಳದು ದಿಟ್ಟಗಳ ಫಲವ ನೆನೆಯದೆ ಸುಖ ।
ಪ್ರತತಿಕೈಸಾರುವದು ಸೌಮಿತ್ರಿ ಮನ್ನುಡಿಯ ಮೀರದೊಳಗಿರ್ಪುದು ॥ (35)

ಎಂದನೇಕವಿಧ ಪ್ರಪಂಚಗರ್ಭಿತನುಡಿಗ ।
ಳಂದ ರಘುನಂದನಂ ಲಕ್ಷ್ಮಣನಿಗರುಪಲ್ಕ ।
ಮಂದ ನಯನುಡಿಗಳಿಂ ವಿಜ್ಞಾಪನಂಗೈದ ದೇವ ತ್ರಿಭುವನ ದೊಳಗೆ ॥
ಬಂಧುರದ ಭವದೀಯ ತೇಜಪ್ರಭಾವ ದಿಂ ।
ಬಂಧುಗಳ್ನಿಪ್ಪರವನೀಜನಂ ಭರತನಂ ।
ಪೊಂದಿ ಯೆನಗಿಂದಧಿಕಮೆನಿಸಿ ಸೇವೆಯೊಳಿರ್ಪ ಮಾತೃಚಿತ್ತಾನುಮತದಿ ॥ (36)

ಒಡೆಯ ಕೌಸಲ್ಯಾ ಸುಮಿತ್ರೆಯರ್ಧೀಮಂತ ।
ರೊಡತಿಯರ್ಮದ್ವಿಧಾನವ ಕೋಟಿಲೋಕಮಂ ।
ಪೊಡೆಯೊಳಿಟ್ಟನುದಿನಂ ಪೊರೆವ ಸಾಮರ್ಥ್ಯಮುಂಟಾ ಮಹಾಮಹಿಮರಿಂಗೆ ॥
ಪೊಡವಿಯಂ ಪೊರೆದಪರಿಗತಿಶಯಮೆ ಪಳ್ಳಿಯಂ ।
ದೃಢಕರಂಗೊಳಸುವುದು ಭೂರಕ್ಷಣಾಸ್ಯರಿಂ ।
ಗೊಡಲಪೊರೆದಪುದೇನಸಾಧ್ಯಮೇ ರಘುವೀರ ದಯದಿ ಡಿಂಗರಿಗನೆನಿಸು ॥ (37)

ಮುಂತೈತಪೆಂ ಭೃತ್ಯನಂತೆ ಪಂಥಾನಮಂ ।
ಸಂತಸದಿ ತೋರುತ ಖನಿತ್ರ ಪಿಟಕಂಗಳಂ ।
ತಾಂತಳೆದು ಫಲಮೂಲ ಪುಷ್ಪೋಪಕಾರಂಗಳನ್ನರ್ಪಿಸುತ್ತಲಡಿಗೆ ॥
ಚಿಂತಿಸದೆ ಬೆರತೊಂದ ಶರಪಾಣಿಯೆಂದೆನಿಸಿ ।
ನಾಂ ತಳುವದಿರುಳು ಪಗಲಾಯಾಸಮಂಕಳೆದು ।
ಸ್ವಾಂತ ದನುರಾಗದಿಂ ಸೇವಿಸುವೆ ಭವದೀಯಾಚರಣಾನುಮತದಿ ನಯದಿ ॥ (38)

ಸೇವೆಯೊಳಗಿರಿಸೆನ್ನ ಶರಣನ ನಿಷೇಧಿಸದೆ ।
ಪಾವನಾಂಘ್ರಿದ್ವಯವ ಮರೆಯೊಕ್ಕೆನೆಂದೆನುತ ।
ಕೋವಿದಾಗ್ರೇಸರಂ ಬಹುವಿಧದಿ ಬಿನ್ನವಿಸಲಾನುಡಿಯ ಕೇಳಪ್ರಿಯದಿ ॥
ಸಾವಧಾನದಿ ಸುಹೃಜ್ಜನ ಭೃತ್ಯ ಮಿತ್ರಜನ ।
ರೀವಿಧವನರಿವಂತೆ ತಿಳಪುಸಾಗರಸಾಥ ।
ತೀವಿಯಿಂದಿತ್ತ ತೃಣಕಂ ಶಿಲೀಮುಖಮುಭಯ ಖಡ್ಗಕವಚಂಗಳೆಲ್ಲ ॥ (39)

ಗುರುವಿನೆಡೆಯೊಳಗಿರ್ಪವಖಿಲೋಪಚಾರದಿಂ ।
ಸರಭಸದೊಳೈದಿ ಸಶರಾದಿಗಳ ತಹುದೆನುತ ।
ಲೊರೆಯುಲತಿಸಂತಸದೊಳೈದಿ ದಿವ್ಯಾಯುಧಗಳನ್ನು ಕೈಕೊಂಡು ಜವದಿ ॥
ಚರಣದೆಡೆಯೊಳಗಿಡಲ್ಕೊಡಿ ಸಂಭ್ರಮಚಿತ್ತ ।
ವೆರದು ಲಕ್ಷ್ಮಣನೊಳಂತೆಂದಂ ಸುಹೃನ್ಮಿತ್ರ ।
ಪರಿಜನಾದಿಗಳಗವಿತೋಪಚಾರ ದೊಳೀಯವೇಳ್ಕು ತದಭೀಷ್ಟಗಳನು ॥ (40)

ವೇದವೇದಾಂಗ ಪಾರಗ ವಿಪ್ರಸಂತತಿಗೆ ।
ಸಾಧುತಾಪಸರಿಂಗೆ ಸಜ್ಜನಸುಭೃತ್ಯರಿಗೆ ।
ಮೇದಿನಿ ಯೊಳೆಮ್ಮ ಸುಪಸರ್ಪಿತದಜನರುಗಳಗವಿತೇಷ್ಟಗಳನೀವೊಡೆ ॥
ಮೋದದಿಂ ಗುರುಪುತ್ರನಾಸುಯಜ್ಞಾರ್ಯನಂ ।
ಸಾದರದಿಕರತಹುದು ತನ್ಮುಖದೊಳಖಿಳ ಸಂ ।
ಬೋಧ ಶಿಷ್ಯರನರ್ಚನಂಗೈದು ಬಸಕೆಂದೆಗಮಿಸವೇಳ್ಕೆಂದೊರೆಯಲು ॥ (41)

ಕೇಳ ಲಕ್ಷ್ಮಣ ತ್ವರಿತದಿಂದೈದಿ ವಿಪ್ರಗಂ ।
ಮಾಳಯಿಂದರ್ಚನಂಗೈದು ರಘುನಂದನಂ ।
ಬೇಳ್ದರ್ಥವತಿಳುಪಿ ನಸುನಗುತ ಲೊಡಗೊಂಡು ಬರಲಾಸುಯಜ್ಞಮುದದಿ ॥
ಸಾಳೀಕಪೀಠನಂತೈತಂದು ಭೂಭುಜರ ।
ಮೌಕ್ತಿಕ ವರ್ಣಿಕೆ ರಾಘವೇಶಗೃಹಮಂ ನೋಡಿ ।
ತಾಳ 'ಸಂತೋಷಮಂ ನೊಳಪೊಕ್ಕು ರಘುವರನ ಕಂಡ ನಾನಂದದಿಂದ ॥ (42)

ಗುರುತನಯನಂ ಕಂಡು ಚರಣಕಭಿನತಿಗೈದು ।
ಹರುಷದಿಂದಂಗದಂ ಕುಂಡಲಂ ಕಟಿಸೂತ್ರ ।
ವರಮಣೀಕಂಕಣಂ ಬಹುರತ್ನಭೂಷಣಗಳಿತ್ತು ಸತ್ಕಾರಗೈದು ॥
ಪರಮರ್ಷಿಯೊಡನೆಂದ ಹಾರಕೇಯೂರಾದಿ ।
ಪರಿಪರಿಯ ವಸ್ತ್ರಾದ್ಯಲಂಕಾರದಿ ಸೀತೆ ।
ವಿರಚಿಸುವ ಪೂಜೆಯಂ ಕೈಕೊಳ್ವುದೆಂದೊರೆದೊಡಾ ದ್ವಿಜನೊಡಂಬಟ್ಟನು ॥ (43)

ನಾಗಶತ್ರುಂಜಯದನಾಮಕಂ ನಿಹಸ್ರ ।
ವೇಗಯುತಗಜದೊಡನೆ ಭವದೀಯ ಚರಣಕಂ ।
ಬೇಗಲರ್ಪಿತ ಗೈವೆನೆನೆ ವಿಪ್ರಸಂತಸದಿ ಕೈಕೊಂಡ ಹರ್ಷದಿಂದ ॥
ಸಾಗರಾತ್ಮಜಗಿಕ್ಕೆಯೆನಿಸಿ ನಾನಾರತ್ನ ।
ಪೂಗ ಭೂಷಿತಮೆನಿಪ ಪರಿಯಂಕಮನ್ನೀಯ ।
ಲಾಗುರುತನೂಭವಂ ಪರಸಿವಂ ಪರಮೇಷ್ಠಿಪಾಕಾರಿಯಂ ಪೊರೆವೊಲು ॥ (44)

ಸೌಮಿತ್ರಿ ಕೇಳ್ವುದಾಗಸ್ತ್ಯ ಕೌಶಿಕತಮ ।
ಸ್ತೋಮರೀರ್ವರು ದ್ವಿಜೋತ್ತಮರು ಮನ್ಮಾತೆಯಂ ।
ಪ್ರೇಮದಿಂದಾಶ್ರಯಂಗೈದಿರ್ಪರನುದಿನದೊಳಾ ಮಹಾ ಋಷಿಗಳಗೆ ॥
ಕಾಮಿತ ಸುವರ್ಣಧನ ವಸ್ತ್ರರತ್ನಂ ಹಯ ।
ಸ್ತೋಮ ಗೋಸಾಹಸ್ರ ಮುಖ್ಯ ವಸ್ತುಗಳ ನೀಂ ।
ನೇಮದಿಂದಿತ್ತು ತೋಷಣೆಗೈವುದೆನಲಂತೆ ಪೂಜಿಸಿದ ಸೌಮಿತ್ರಿಯು ॥ (45)

ತೈತ್ತಿರೀಯಶಾಖಾಚಾರ್ಯರ್ ವೇದ ವಿಚಕ್ಷಣೀಷ್ಟರಿಂ ।
ಗುತ್ತಮದ ಯಾನ ವಸ್ತ್ರಾಭರಣ ದಾಸಿಯರ ।
ನಿತ್ತು ಸಂತೋಷಗೊಳಪುದು ಸೂತಚಿತ್ರರಥ ಪೂರ್ವಾಶ್ರಿತಾರ್ಥನೆಮಗೆ ॥
ಮತ್ತೀಭರತ್ನ ಭೂಷಣಗಳತ್ತಾತನಂ ।
ಚಿತ್ರಕ್ಕೆ ಸಂತೋಷಮೆನಿಸು ಸ್ವಾಧ್ಯಾಯ ಸಂ ।
ಪತ್ತಿಯಿಂದಿತರಮರಿಸುದ ತಾಟಕಾಲಾಪದಂದ ಮಾನವರುಗಳಗೆ । (46)

ನವರತ್ನಖಚಿತ ಯಾನಂಗಳೆಂಬತ್ತನುಂ ।
ನವಶಾಲಿವಾಹ ಸಾಹಸ್ರಗಜಮಿನ್ನೂರ ।
ಪ್ರವಿಮಲದ ಗೋಸಹಸ್ರಗಳೀಯದಿರೆ ಮಾತೆ ಸಂಭ್ರಮಂಗೊಳ್ಳುವುದೆಂತು ॥
ತವಕದಿಂದಾಪರಿಯಲಖಿಳ ವಿಪ್ರೋತ್ತಮರ ।
ಸವಿರಳದ ಧನಧಾನ್ಯದಿಂದೊರ್ವರೊರ್ವರಂ ।
ಸುವಿವೇಕದಿಂ ಪೂಜಿಸುವುದೆನಲ್ ಲಕ್ಷ್ಮಣಂ ಪ್ರಿಯಕಲಿತ ಚಿತ್ತನಾಗಿ ॥ (47)

ತರಿಸಿ ಧನಮಂ ರಾಮಪೇಳ್ದಂತೆ ವಿಪ್ರಕುಲ ।
ವರವನಭ್ಯರ್ಚಿಸಲ್ಕೆಡೆಬಲದಿ ಕಂಬನಿಗ ।
ಳೊರತೆಯಿಂ ಕಂಗೊಳಪ ಭೃತ್ಯೋಪಜೀವಿಗಳ ನೋಡುತತಿ ಕೃಪೆವೆರಸುತ ॥
ಪರಿಪರಿಯ ಮೃದುನುಡಿಯಲುಪಚರಿಸಿ ಮನದಿಷ್ಟ ।
ದಿರವಂತು ಬೇಡಿದುದನೀವುದೆನೆ ಸೌಮಿತ್ರಿ ।
ಕರುಣದಿಂದಖಿಲ ಜನರಿಂಗೆ ಧನ ಪೌಷ್ಕಲ್ಯ ಮೆನಲಿತ್ತು ಕೃತಿಯನಿಸಿದಂ॥ (48)

ಸ್ತ್ರೀ ಬಾಲ ವೃದ್ಧರಿಗೆ ಕೃಪಣಂಗೆ ನಿಜನಿಲಯ ।
ಶೋಭಾಕರರಿಗೆಲ್ಲ ಬೇಡಿದುದನಿತ್ತು ಮುನಿ ।
ಜಾಬಾಲಿಮುಖ್ಯರಿಗೆ ಕರಿತುರಗ ರಥ ಕನಕ ವಸ್ತ್ರಾದಿಗಳನರ್ಪಿಸಿ ॥
ಶೋಭಾನುಕಾರಿಗಳ ತೃಪ್ತಿಗೊಳಸುತ ಧನಿಕ ।
ಶೋಭಾಢ್ಯರೆನಿಪಂತಸಂಖ್ಯೆಯಿಂದಿತ್ತು ಕೇಳ್ ।
ಶೋಭಾಲಿಯಾಹಗಮನ ನಿಚ್ಛೆಯದೊಳನುವಾಗಿ ನಿಂದಿರ್ದ ಸೌಮಿತ್ರಿಯು ॥ (49)

ಫಾಲಕುದ್ದಾಲ ಲಾಂಗುಲಿಯು ಪಿಂಗಳಗಾರ್ಗ್ಯರ್ ।
ಶೂಲಿ ಸಂಕಾಶ ತ್ರಿಜಟಾನಾಮ ವಿಪ್ರೇಂದ್ರ ।
ಶೀಲಂ ಶಿಲಾವೃತ್ತಿಯಿಂದಿರ್ದ ಕಾನನದೊಳಾತನರ್ಧಾಂಗಿ ಮುದದಿ ॥
ಬಾಲಕರನೊಡಗೊಂಡು ಬಂದು ಪತಿಯೊಡನೆಂದ ।
ಳಾಲಯದಿದಾರಕರ ಸಂಬಾಧಬಹುಳಮಿದ ।
ಲಾಲಿಪರಕಾಣೆ ಸರ್ವಜ್ಞರಾಮನ ಕಂಡುಪರಿ ದರಿದ್ರವನೆಘಹರ ॥ (50)

ಪೆಂಡತಿಯ ನುಡಿಗೇಳ ಶಾಟಿಯಂ ಕಟಿತಟದಿ ।
ದಿಂಡುಡಿಗೆಯಂಗೈದು ಭೃಗ್ವಂಗಿರಾಭನಡೆ ।
ಗೊಂಡು ರಘುವೀರನರಮನೆಯ ಬಾಗಿಲ್ಗಳಂ ಕಳದು ಮುದದಿಂದ ಪೊಕ್ಕು ॥
ಕಂಡುರಾಮನಮುಖವ ತ್ರಿಜಟನಿಂತೆಂದ ಭೂ ।
ಮಂಡಲಾಧಿಪ ಕೇಳು ಬಹುಪುತ್ರ ನಿರ್ಧನಿಕ ।
ನಂಡಲೆವ ದಾರಿದ್ರ್ಯಮಂ ತಿರಸ್ಕೃತಿಗೆಯ್ಯವೇಳ್ಕೆನುತ ವಿಪ್ರನುಡಿದಂ ॥ (51)

ದ್ವಿಜನ ವಾಣಿಯಂಕೇಳ ರಾಮ ನಸುನಗುತ್ತ ಗೋ ।
ವ್ರಜವ ನಿತ್ತಪೆ ದಂಡದಿಂದೆಸೆಯದಾವೆಡೆಯು ।
ಘಳಿಸುವುದನಿತ್ತ ನಿನಗಿತ್ತಪೆನೆನಲ್ವಿಪ್ರ ನುತ್ತರೀಯವನು ಬಲಿದು ॥
ವಿಜಯನೋಡೆಂದೆಚ್ಚೊಡಾದಂಡ ಸರಯುವಂ ।
ತ್ಯಜಿಸಿ ಗೋಶತ ಸಹಸ್ರಂಗಳಂ ಕಳೆದು ಭೂ ।
ಯಜ ಮನಿಸಲಾತನಂ ಪಿಡಿದಪ್ಪಿ ರಘುವೀರ ನುಪಚರಿಸುತಿಂತೆಂದನು । (52)

ಪರಿಹಾಸದಿಂದಾನು ಪೇಳ್ದುದಕೆಕೋಪವಂ ।
ಧರಿಸ ಸಲ್ಲಂ ಜೀಯಭವದೀಯ ತೇಜಸ್ಸು ।
ದುರವಗಾಹಂ ತಿಳಿವೊಡಿಚ್ಛೈಸಿ ದಪರಾಧಮಂ ಮನದಲಿಡದೆ ಬಳಿಕ ॥
ಪರಿಪರಿಯ ಕನಕಮಣಿ ವಸ್ತ್ರ ಮುಂತಾದುದಂ ।
ಪರಿಸು ಮದ್ಘನವಿಪ್ರ ಕಾರಣಂ ಸತ್ಯಮಿದ ।
ನರಿತೆನ್ನ ಕೃತಿಯೆನಿಪುದೆನಲಾ ತ್ರಿಜಟಮುನಿ ಸಂತಸದೊಳಂ ತೆಂದನು ॥ (53)

ಕೃತಯುಗದ ಭೂಪಾಲ ರತುಲಕೀರ್ತ್ಯಂಗನಾ ।
ವಿತತಸೀಮಂತ ಮುಕ್ತಾಭಂ ಭವದ್ಯಶಂ ।
ಮತಿವಂತರನುದಿನಂ ನೋಳ್ಪಂತೆ ಸದ್ಧರ್ಮ ಸಾಂಗಮೊಮೂರ್ತಿ ಬಳಿಕ ॥
ಕ್ಷಿತಿಯಮರಘೋಷಣೆಗೆ ಬದ್ಧಕಂಕಣ ಮಲ್ತೆ ।
ಕ್ಷಿತಿಪಕುಲರತ್ನದರ್ಶನದಿಂದಲಾಂ ಧನ್ಯ ।
ನತಿಶಯಿತನಾದೆನೆಂದುಸುರಿ ಪರಸಿದನಮಿತ ಹರುಷದಿಂದಾ ವಿಪ್ರನು । (54,

ಅಮಿತ ಗೋವ್ರಜವ ಕೈಕೊಂಡು ಸತಿಯೊಡಗೊಂಡು ।
ಗಮಿಸಲ್ಕಹಾಮುನಿ ಯಿತ್ತ ರಘುನಂದನಂ ।
ಪ್ರಮುದಿತಾಂತಃಕರಣದಿಂ ಸ್ವಾರ್ಜಿತವಿತ್ತ ಸಂತತಿಯ ಭೂಸುರರ್ಗೆ ॥
ಕ್ರಮದಿಂ ಯಥೇಷ್ಟವಾಗಿತ್ತು ಮಿತ್ರರನೆಲ್ಲ ।
ಸಮತೆಯಿಂ ಸಂತೈಸುತಾಪಜೀವ್ಯರಂ ಪ್ರೀತಿ ।
ಮಮತೆಯಿಂ ಮನ್ನಿಸುತ ತಾತನಿಪ್ಪೆಡೆಗೈದಲಿಚ್ಛೈಸಿದಂ ಜವದೊಳ್ ॥ (55)

ಪೊರೆವವರ ಪೊಂದಿದರ ನಿರತ ಸೇವಿಪಜನರ ।
ಪರಿಪರಿಯ ವಸ್ತ್ರ ಭೂಷಣಗಳತ್ತುಪಚರಿಸಿ ।
ಧರಣಿ ಸಂಭವೆ ಸುಮಿತ್ರಾನಂದನಂ ಸಹಿತ ದಶರಥಮಹೀನಾಥನ ॥
ಚರಣಮಂ ಕಾಣಲುದ್ಯುಗದಿಂದ ಲೋಕಜನ ।
ರಿರವನಂಗೀಕರಿಸಿ ಶ್ರೀರಾಮ ಪುರದರಸ ।
ಬರುವ ಸಿಂಗರವನೆಂತೂರೆವೆ ಮುಮ್ಮೂರ್ತಿಗಳ ಪಡೆದನತಿಶಯಲೀಲೆಯ ॥ (56)

(ಸಂಧಿ 11, ಪದ 507.)

ಹನ್ನೆರಡನೆಯ ಸಂಧಿ.

ಸೂಚನೆ ॥ ಸಾದರದಿ ತಾತ ನಪ್ಪಣೆಗೊಂಡು ಶುದ್ಧಾಂತ।
ಮೋದಗೊಳುವಂದದುಪಚರಣೆಯಿಂ ಸಂತೈಸಿ ।
ಭೂದಿವಿಜ ಮಕುಟಮಣಿ ಗುರುವಸಿಷ್ಠರ ನೇಮವಾಂತನಾ ರಘುವೀರನು ॥

ಮೇನಕಾತ್ಮಜೆ ಕೇಳು ರಘುನಾಥ ಗೃಹದಿಂದ।
ಸಾನುರಾಗದಿ ಬರ್ಪ ವಾರ್ತೆಯಂ ಕೇಳುತಂ ।
ಜಾನಪದ ನಗರವಾಸಿಗಳೆಲ್ಲ ನಿಟ್ಟಿಸಲ್ ಹರ್ಮ್ಯಾಗ್ರಗಳ ನಡರಲು ॥
ಜ್ಞಾನಿಗಳ್ಪರಿಜನರು ವಿಪಣಿವೀಥಿಯೊಳಿರ್ದ।
ರೂನಮತಿಯಿಂದ ಸಲ್ಲಾಪಕೆಳಸಿದರಕಟ।
ದೇನೆಂಬೆ ಸರ್ವಜನ ವೈಮನಸ್ಯದ ಬಗೆಯ ನುಡಿವಡೆಸದಳ ಧರೆಯೊಳು ॥ (1)

ಪೊರವಡೆಯು ಚತುರಂಗ ಬಲಛತ್ರಚಾಮರಂ ।
ಸುರುಚಿರದ ವಾದ್ಯ ಮಾಗಧವಂದಿ ಸಂದಣಿಗ ।
ಳುರುತರದ ವಿಭವದಿಂದೈತಪ್ಪರುಳಿದು ನಿಜಪತ್ನಿಲಕ್ಷ್ಮಣರಿರ್ವರ ॥
ಕರದೊರ್ವನೈತಪ್ಪ ಧರ್ಮಸ್ವರೂಪಿ ನಿಜ ।
ಗುರುವಾಕ್ಯ ಗೌರವದೊಳಾದೊಡಂ ನೋಳ್ಪಜನ ।
ತರಹರಿಪರೆಂತಕಟ ವಿಧಿಕೃತಮದಾರಿಗಂ ಮೀರಲಳವಲ್ಲ ಮಲ್ತು ॥ (2)

ನವಶಿರೀಷದಕೋಶ ಮೃದಿಮಾಭಿಮಾನಮಂ।
ನವಸುಮೀ ಮೃದುಳ ಪದಕಾನನದ ವಿನ್ಯಾಸ।
ದವಿರಳದಕಷ್ಟ ಕೋಚರ್ಮವೃದೆಂತು ಸುಕುಮಾರಿನಡೆವಳ್ . . . . ನೊಡನೆ ।
ನೆವನೇನ ಕಾಣದಲನಾಗಸನ ಸದ್ಗುಣನ।
ಕುವಲಯಪ್ರಿಯನ ಕುವರನ ಪ್ರವಾಸಂ ಗೈದ।
ಭುವಿಯರಸನೇಂ ಕತದೊಳೆಂತು ಸಮ್ಮತಪಿಂವ ಲಿರವೇಳ್ಕುನಗರಿಯೊಳಗೆ ॥ (3)

ಬಲಿಯಿಲ್ಲದೊಡೆ ಸಕಲ ಭೂತವೇತಾಳಂಗ।
ಳೆಲೆವಂತೆ ಜಗತಿಯಂ ಬಾಧಿಸುವರಹಿತರುಂ।
ಜಲವಿಲ್ಲದಲೆ ಸರ್ವಸತ್ವತತಿ ಲಯಮಪ್ಪ ಮಾಳ್ಕೆಯಂತೀರಾಜ್ಯದ।
ಚೆಲುವು ಶೋಷಣೆಯಾಗದಿರದು ಲೋಕಂ ಪೆರ್ಚೆ ।
ಬಲ ಧರ್ಮಮೂಲಮದನರಿಯೆ ಶಾಖಾ ಪುಷ್ಪ ।
ಫಲಗಳೇಂ ಬದುಕುವವೆ ರಾಮ ಪೋದೆಡೆಗೆಲ್ಲ ಪೋಪುದೇ ಪರಮಸುಖವು ॥ (4)

ಧನಕನಕ ವಸ್ತುವಾಹನ ಕ್ಷೇತ್ರ ವಾರಾಮ।
ಮನೆಗಳನ್ನುಳಿದೆಲ್ಲ ರಾಮ ನೊಡನೈದಲಾ।
ವನಮೆ ಪತ್ತಣಮಹುದು ಕ್ರೂರಸತ್ವಗಳೆಲ್ಲ ಕುಡಾಗೆ ಮದ್ಬಾಂಧವ್ಯಮಂ ॥
ಜನರಹಿತ ಪುರಿಯೊಳನುದಿನ ಕೈಕೆ ತನ್ನಸುತ।
ನನುಜನ್ಮ ಬಾಂಧವರ್ವೆರಸಿ ಸುಖವಿರಲೆನುತ।
ಜನಜನಿತಮಾಬಾಲವೃದ್ಧರಾಡುವ ವಾರ್ತೆಯಂ ಕೇಳುತೈತಂದನು ॥ (5)

ಪಿತ್ರನರಮನೆಯ ಬಾಗಿಲೆಡೆಯೊಳ್ಸುಮಂತ್ರನಂ ।
ಮತಿಮಂತರಗ್ರಭವನಂ ನೋಡುತಿಂತೆಂದ ।
ಕ್ಷಿತಿಪಗೆಚ್ಚರಿಪ್ಪುದಾಂ ಬಂದ ವಾರ್ತೆಯನುಲ್ಲಸಿತ ನತಿ ತಾಪದಿಂದ ।
ಕತಿಪಯದ್ವಾರಗಳ ಕಳೆದು ನಿಸ್ತೋಯ ಸಂ ।
ಗತಸ್ರೋತಟಾಕದ ತೆರದಿ ಭಸ್ಮಲೀನಾನಲನ ।
ಜೊತೆಯೆನಿಸಿ ನಿಷ್ಪ್ರಭೆಯೊಳೆಸೆವ ನೃಪತಿಯಕಂಡು ವಂದಿಸುತ ನುತಿಗೈವುತ ॥ (6)

ಭೂದಿವಿಜಸಂತತಿಗೆ ಬೇಡಿದುದ ನಿತ್ತು ಮಾಗು ।
ಳಾದರಿಸಿ ಮಿತ್ರರಂ ಮಿಸುನಿ ಭೂಷಾದಿಗಳ ।
ಮೋದಗೊಳುವಂತ್ಯಥೇಷ್ಟಂಗೊಟ್ಟು ಭೃತ್ಯಜನಕಮಿತ ಸಂತೋಷಗೊಳಿಸಿ ॥
ಮೇದಿನೀಸುತೆ ಸುಮಿತ್ರಾತ್ಮಜರ ನೊಡಗೊಂಡು ।
ಪಾದಂಗಳಂ ಕಾಣ್ಬ ಕೌತುಕದಿಂದಾ ದ್ವಾರ ।
ದಾದಿಯೊಳ್ನಿಂದಿರ್ಪರಖಿಲೇಶ ಬಿನ್ನಪವ ನವಧರಿಸು ಮಮತೆಯಿಂದ ॥ (7)

ಮನುಜೇಶ ಸೂತವಾಣಿಯ ಕೇಳುತಿಂತೆಂದ ।
ತನಯ ಕೇಳಂತಃಪುರಾಂಗನೆಯರೆಲ್ಲರಂ ।
ವಿನಯದಿಂ ಕರತರುವುದಾಸ್ತ್ರೈಣದೊಡಗೂಡಿ ನೊಳ್ಪೆರಘುವರನನೆನಲು ॥
ಜನಪ ನೇಮಿಸಿದಂತೆ ಶುದ್ಧಾಂತಕಧಿಪತಿ ।
ಯನುಮತಿಯ ಬಿತ್ತರದಲರುಪುತಲವರೊಡಗೊಂಡು ।
ಯಿನನೆಡೆಗೆ ಬಂದು ವಿಜ್ಞಾಪಿಸಿದ ನೊಳಗವ ಚರಣಕಭಿನಮಿಸಿ ಜವದಿ ॥ (8)

ಬರಲರ್ಧ ಸಪ್ತಶತ ತರುಣಿಯರ್ಕೆಗಸಲೆಯ ।
ಪರಿವೇಷ್ಟನಂಗೈದು ಧರಣಿಪನ ಸನ್ನಿಧಿಗೆ ।
ಹರುಷದಿಂದರಸ ಸೂತನೊಳೆಂದ ರಾಮನಂ ಕರತರಲ್ಬಪ್ಪುದೆನುತ ॥
ಧೊರೆವೇಳ್ದ ಮಾಳ್ಕೆಯೊಳ್ ರಾಮಲಕ್ಷ್ಮಣರುಗಳ ।
ಕರತರಲ್ನಿಟ್ಟಿಸುತಲಿದಿರೆದ್ದು ಬಂದು ತ ।
ಮ್ಮುರು ಭುಜಾದಂಡಗಳಲಪ್ಪಿದಂ ತನಯನಂ ದಶರಥ ಮಹೀಪಾಲನು ॥ (9)

ತೆಗೆದಪ್ಪಿ ರಾಮನಂ ಬಹಳ ಶೋಕೋದ್ರೇಕ ।
ಮಿಗೆವೆರ್ಚೆ ಕೆಡೆದು ಮೂರ್ಛಿತನಾಗಿ ಬಿದ್ದಿರ್ಪ ।
ಬಗೆಯ ಕಾಣುತ ಸ್ತ್ರೈಣಮತುಲಾರ್ತರಾವದಿಂದಳಲುತಿರಲನಿತರೊಳಗೆ ॥
ಖಗವಂಶಸಂಭೂತನನುಜ ಸಹಿತಂ ದುಃಖ ।
ಪೊಗೆಸೂಸೆ ಪಿಡಿದೆತ್ತಿ ಪರ್ಯಂಕದೊಳಗಿಟ್ಟು ।
ಬಗೆಬಗೆಯಲುಪಚರಿಸಲರೆಘಳಿಗೆಗೆಚ್ಚರುಂ ತಲೆದೋರಲವನೀಶಗೆ ॥ (10)

ಕಿಂಚಿದೆಚ್ಚರು ತೋರಲರಸಗಭಿನಮಿಸಿ ದುಃ ।
ಖಾಂಚಿತದ ವಾಣಿಯಿಂ ಬಿನ್ನಪಂಗೈದ ಭೂ ।
ಪಂಚ ಮುಖ ದಂಡಕಾವನಕಪ್ಪಣೆಯನಿತ್ತೊಡರುಗುವೆ ನಿರಾಲಸ್ಯದೆ ॥
ಚಂಚರೀಕಾಳಕಿಯು ಮೈಥಿಲಿಯು ಬರುತಿರಲು ।
ದಂಚಿತದ ಗಮನದಿಂ ಸೌಮಿತ್ರಿ, ಬಪ್ಪೆನೆನೆ ।
ವಂಚಿಸದೆ ಪಲವು ವಿಧದಿಂದರುಪಲಾ ನುಡಿಯ ಕೇಳದೈತಪ್ಪರೊಡನೆ ॥ (11)

ಎಂದು ಬಿನ್ನಪಗೈದ ತನಯನ ಮನೋವೃತ್ತಿ ।
ಯಂದವಂ ಲಾಲಿಸುತ ಮಹೀಪಾಲ ನಿಂ ।
ತೆಂದ ಕೈಕಾವಚನಮೆಂಬ ಗರಸೋಂಕಿನಿಂದಾಂ ಪೇಳ್ದ ನುಡಿಯನುಳಿದು ॥
ಇಂದು ನೀ ಪುಷ್ಯಯೋಗದಿ ಪಟ್ಟಮನ್ನಾಂತು ।
ದಂದುಗದಶೋಕಮಂ ಪರಿದುಹರುಷಂ ಗೊಳಪ್ಪು ।
ದೆಂದರುಪೆ ನೃಪತಿಯಡಿಗಭಿನಮಿಸಿ ಕೈಮುಗಿದು ಮಗುಳ್ ವಿಜ್ಞಾಪಿಸಿದನು ॥

ತಾತ ಬಹುಸಾಹಸ್ರವರ್ಷಂಗಳುಂ ಧರಾ । [(12)
ನೇತ್ರನೆಂದೆನಿಸಿರ್ದು ಸತ್ಯವಚನಕ್ಕೂನ ।
ಜಾತಮಾಗದ ತೆರದಿ ಪರಿಪಾಲನಂಗೈದಿರ್ದೈಸೆ ತ್ರಿಜಗಂ ಮೆಚ್ಚಲು ॥
ಪಾತಕಕೊಡಂಬಟ್ಟು ಸಲುಬಲೇಂ ವತ್ಸರಂ ।
ನೀತಮೆನಿಪವು ಚತುರ್ದಶಮೊಂದು ನಿಮಿಷಮೆನೆ ।
ಕಾತರಮದೇ ಕಪ್ಪಣೆ ಗೊಡುವುದು ಚಿತ್ರಮೆನಲರಸ ಶೋಕದೊಳಿಂದನು ॥ (13)

ಬಲಮಾಯುಶ್ರೀಯಸ್ಸು ಪುನರಾಗಮಂಗಳಂ ।
ಚೆಲುವ ಸತ್ಕೀರ್ತಿ ಜನಕೋಸುಗಂ ಗಮಿಸು ಬಲು ।
ಬಲಿತಮಾಗಲಿ ಪಥಂ ನಿರ್ಭಯದಿ ಸಕಲೇಶ ಸಲಹಲನುದಿನ ಬಿಡದಲೆ ॥
ಬಲಿದು ನೆಲೆಗೊಂಡು ಧರ್ಮದಿ ಚಿತ್ತ ಪಿಂತಿರುಗಿ ।
ಚಲನೆಯಾನದು ಸತ್ಯರೂಪನೀನವರಿಂದ ।
ನಿಲಿಸಲಳವಲ್ಲಮಿಂದಿನ ರಾತ್ರಿಯನ್ನು ಗೃಹದೊಳಗಿರ್ದು ಗಮಿಸೆಲೇಸು ॥ (14)

ವೃತ್ತಸಾದಿನಿಯಗ್ನಿ ಕಲ್ಪನಾರ್ಯಪದೀನೆ ।
ಬಿತ್ತರದ ಗೋತ್ರ ಪಾಂಸಿನಿ ಯಶ್ವಪತಿಸುತೆಯ ।
ಮಿತ್ತಿನಂದವ ನುಡಿಗೆ ಮರುಳಾಗಿ ಬುದ್ಧಿಯಂ ಪಳಿದೆನ್ನ ನುಡಿಯನುಳಿದು ।
ಇತ್ತರದಲಿಹ ಭವನ್ಮಾತೃಕಾದೀನತೆಯ ।
ಚಿತ್ತದೊಳ್ತಂದು ಮುಂದಿರ್ದಮ್ಮನುಳುಹೆಂದು ।
ತತ್ತರದೊಳೊರೆದ ತಂದೆಯ ನುಡಿಗೆ ರಘುವೀರ ಮಾರುತ್ತರಂಗೊಟ್ಟನು ॥ (15)

ಸಗ್ಗಂ ಸರಾಷ್ಟ್ರಧನ ಧಾನ್ಯವಸ್ತುಗಳೆಲ್ಲ ।
ವೆಗ್ಗಳದಿ ಭರತನಾಧೀನಗೈವುದು ಸುಖಂ ।
ವಗ್ಗದೀ ಹಿತಜನಕಜಾತೆ ಯೀರಾಷ್ಟ್ರಮಂ ಬಯಸಲೇಚಿತ್ತಮಿಹುದು ॥
ಅಗ್ಗಳದ ಸತ್ಯಮೊಂದನೆ ಕಾಂಕ್ಷಿಪುದಸತ್ಯ ।
ನುಗ್ಗತ್ತಿ ಶೋಕಮಂ ಧೈರ್ಯಮಂ ಧರಿಸುವುದು ।
ಬಗ್ಗುವುದೆ ನೀ(ನ)ಧಿಕ ದಾನಿ ಭೂಪರ ಮಕುಟಮಣಿಯೆ ದಯಗೈವುದೆನಗೆ ॥

ಒಂದನುಂ ಬಯಸೆ ಭವದೀಯ ಚರಣಗಳಾಣೆ । [(16)
ಚೆಂದದಿಂ ಬನಕಪ್ಪಣೆಯನೀವುದಾಡಿದೋಲ್ ।
ಬಂದಪುದು ಪದಿನಾಲ್ಕುವರುಷ ಮಾತ್ರಂ ಸಲಿಸಿ ತ್ವರಿತದಿಂ ಬಪ್ಪೆ ಮುದದಿ ॥
ಎಂದಿಗಾದರು ಭವದ್ವಚನ ವಂಧ್ಯತೆಯಪ್ಪ ।
ದಂದುಗವ ಬಯಸುವೆನೆ ಭರತಗೀರಾಜ್ಯಸುಖ ।
ದಿಂದೆಕೈಗೈದಿತ್ತು ಬನಕಪ್ಪಣೆಯ ನೀವುದೆನಗೆ ಚರಣಕೆ ಮಣಿವೆನು ॥ (17)

ಗಮನವಾರ್ತಾಶ್ರವಣದಿಂದ ಭೂಮೀಶಗಂ ।
ಭ್ರಮೆಯಡೆಸಿ ಪಲುಬುತ್ತ ವುಭಯಕರದಿಂದಪ್ಪ ।
ತಮಿತಶೋಕಾರ್ಣವನಿಮಗ್ನತೆಯುಳ್ಳಪಂಚಾವಸ್ಥೆಯಂ ಮರೆಯಲು ॥
ರಮಣನಾದಾದಿಯಂ ಕಾಣಿತಂತಶಿಪ್ರರದ ।
ರಮಣೀಜನಂ ಪರಿಮ್ಲಾನ ಮುಖರೆನಿಸುತಂ ।
ಕಮಲಾಯತಾಕ್ಷ ಹಾಯೆಂದಳಲುವಾರ್ತರವಪರ್ಬಿತೆಣ್ದೆಸೆಯ ಬಿಡದೆ ॥ (18)
ಈಕದಾರ್ದಶೆಯನುಂ ಪ್ರಕೃತಿಜನವಾರ್ತವಾ ।
ವೇಶಮಂ ನಿಟ್ಟಿಸುತ ಶೋಣಪಂಕೇಜಾತ ।
ಕೋಶಕಣ್ಣೆಯಾಂತಿರಲ್ಕಾ ಸುಮಂತಂ ಕೋಪಶಿಖಿ ಪೆರ್ಚಿಪಲ್ಮೊರೆಯುತ ।
ಆಶವಾತ್ಮಜೆ ಕೈಕೆಯಂ ನೋಡಿ ಧಿಕ್ಕರಿಸು ।
ತಾಕುತರವಾದ ಝಂತುದನುಡಿಗಳಂದಾ ಸು ।
ರೇಶವಜ್ರೋಪಮಿತ ಹೃದಯದಿಂ ದೂಷಿಸುವ್ರೊಡಿಚ್ಛೆಗೈದಂ ಕ್ರೋಧದಿ ॥ (19)
ಕುಲವಿನಾಶಿನಿ ಧವಾದಿನಿ ಪಾಪಿ ದುರ್ಮಾರ್ಗೆ ।
ಕಲಿತೆ ಸುರಪತಿಯಂತ್ರಜೇಯನಂ ಗಿರಿಯಂತೆ ।
ಚಲನೆಯಿಲ್ಲದನಂ ಮಹೋದಧಿಯೊಲಕ್ಷೋಭ್ಯರಾಜನ್ಯಮಕುಟಮಣಿಯಂ ॥
ಪಲವುವಿಧ ಕರ್ಮದಿಂ ಸಂತಾಪಗೊಳಿಸುತಿಹೆ ।
ನೆಲದೊಳಂ ನಾರಿಯರ ದೇವತೆಯು ಪತಿಯಲ್ತೆ ।
ಸುಲಭಸಂಭವೆಯಧಿಪನನ್ನುಳಿದು ಸಾಮ್ರಾಜ್ಯ ಕೆಚ್ಛೈಪೆ ಧೃಷ್ಟೆ ಮದದಿ ॥
ಧರಣಿಪನ ಹೋಗಾಡಿ ಧೊರೆತನವ ಮಾಳ್ಪೆನೆಂ । [(20)
ಬರುತರ ಪ್ರೇಮಮಂ ತಾಳ್ದಪೆ ದುರ್ಮೇಧೆ ।
ಯಿರುವರೆ ಧರಾಮರಪರಿಜನಪರಿವಾರಮೊನೆಲದಿ ನಿನ್ನೆಡೆಯೊಳು ॥
ಖರನಗರದೊಳ್ಕವರ ಸಹಿತ ಸುಖವೇನುಂಬೆ ।
ಮರುಳೆ ದುರ್ಯಶಭವನ್ಮಾತೆಯಿಂದಾಧಿಕ್ಯ ।
ತರವ ಘಳಸದೆ ದೀಪಕಲಿತಾಘಿಲಾಷೆಯಿಂ ಮಡಿವ ಶಲಭಪ್ರಾಯದಿ ॥ (21
ಸಕಲ ಭೂತರುತಂಗಳಂ ತಿಳಿಯವೇಳ್ಕೆನುತ ।
ಲಕಳಂಕ ದೇವತೋಪಾಸನಂಗೆಯ್ಯೆ ನಿಜ ।
ಭಕುತಿಗಂ ಮೆಚ್ಚಿ ತದ್ದೇವತೆಯು ವರವಿತ್ತೊಡಂದಿನಿಂದಖಿಲ ನುಡಿಯು ॥
ಪ್ರಕಟವಾಗದು ಹೋದುದೈಸೆ ನಿಮ್ಮಯ್ಯನತಿ ।
ಸುಕರದಿಂ ಮಂಚದೊಳ್ಮಲಗಿರೆ ಪಿಪೀಲಿಕಾ ।
ಪ್ರಕರಪೋಗುತ್ತದರೊಳೊಂದು ತನ್ನರಸಿಯೊಳ್ ಸಲ್ಲಾಪ ಕ್ರೀಡೆಗೆಳಸೆ ॥ (22)
ಚತುರತೆಯ ಮಾತುಗಳ ಕೇಳುತರಸಂ ಹಾಸ್ಯ ।
ಪತಿತನಾಗಲ್ಕಂಡಿದೇನೆಂದು ಬೆಸಗೊಳಲ್ ।
ಸತಿಯೊಡನೆ ನೃಪನೆಂದ ಪೇಳ್ವಮಾತಲ್ಲೆನಲ್ಕಿಂತೆಂದಳರಸನಿಂಗೆ ॥
ಅತಿಶಯ ಮಿದೇನೆನಗೆ ಪೇಳ ದಿರಲಸುಗಳವೆ ।
ಕ್ಷಿತಿಯೊಳಿರೆನೆಂದಧಿಕ ಕ್ಲೇಶಗೊಳಸುತ ಬರ ।
ಲ್ಕತಿವಂತ ರಾಣಿಯೊಡನೆಂದ ಸಂತಸಗೊಳುವ್ರೊಲತಿ ವಿನಯದಾಪ್ತದಿಂದ ॥ (23)

ಪೆರರಿಗಿದ ತಿಳುಹದಿರು ಪೇಳ್ದೊಯಾದರೆ ಮೂರ್ತಿ ।
ಪೊರೆಯುಪ್ಪುದೆನುತೆಮ್ಮ ಗುರುನಿರೂಪಣೆಗೈದ ।
ಪರಿಯಿಂದ ನಿನ್ನೊಡನೆ ಬಿತ್ತರಿಸಕೂಡದೆನಲರಸನೊಡನಿಂತೆಂದಳು ॥
ಶರೀರವಿರಲಲ್ಲಯುಲೀ ಹಸನದಿರವಂತಿಲ್ಲಯು ।
ಲೊರೆಯುವೇಳ್ಕನೆ ನೃಪತಿಜರೆದು ಧಿಕ್ಕರಿಸುತಂ ।
ಹರುಷದಿಂ ಧನದನೆಂಬಂತೆ ಸುಖಪೂರ್ವನಿದು ಲೋಕಸಿದ್ಧಮಲ್ತೆ ॥ (24)

ಪೆತ್ತವಳ ನಡತೆಯಂ ಮೀರದನುಸರಿಸಿ ಭೂ ।
ಪೋತ್ತಮನ ದುಃಖಸಾಗರಮಗ್ನಗೈದು ಮೇ ।
ಣ್ಪೊತ್ತ್ರದುರ್ಯಶವ ಸಂತತಿಯು ಕಡಿಸಲ್ಬಗೆವೆ ಮೂಢೆ ನಿನ್ನಂನೋಳ್ಪರೆ ॥
ಬಿತ್ತರದ ಪಾಪಮಾರ್ಗವನುಳಿದು ಸಾಧ್ವಿಯರ ।
ವೃತ್ತಮಂ ಪಿಡಿದುಭಯಸುಖ ಸಂಪದದ ಹರುಷ ।
ಮೊತ್ತಮಂ ಗಳಿಸು ಭರ್ತಾರನನುಮತಿಯುಳಿದು ಬಾಳ್ವುದನುಚಿತ ಲೋಕದಿ ॥ (25)

ಸಕಲ ಸದ್ಗುಣ ಖನಿ ಶ್ರೀರಾಮನರಸನೆನಿಸೆ ।
ಸುಕರಮಪ್ಪುದು ಲೋಕ ಸಾಮ್ರಾಜ್ಯ ವೈಭವ ।
ಪ್ರಕರಮಂ ಭರತನನುಭವಗೆಯ್ಯಲುಭಯರಂ ನೋಡಿ ಪೋಷಣೆಗೆಯ್ಯುತ ॥
ಅಕಳಂಕ ಜಸವ ಸಂಪಾದಿಪುದು ಸ್ಯಂದನದ ।
ನಿಕಟಕ್ಕೆ ಪೂರ್ವಾನುಮತಿಯಿಂದ ನೃಪನೈದ ।
ಲಕಿಯನಿಸಲನುತಪಿತ ದೈನ್ಯದಿಂದ ಸುಮಂತ್ರ ತಿಳುಪಿದಂ ಪಲವುವಿಧದಿ ॥ (26)

ಈ ರಾಜಧಾನಿಗಧಿಕಾರಿ ರಘುವಲ್ಲಭಂ ।
ಶೂರಾಗ್ರಗಣ್ಯ ನಾತನನುಳಿದು ಭರತನಿಂ ।
ದೀರಾಜ್ಯ ಸುಖಮಿಹುದೆ ತಿಳಿದೆನ್ನ ವಚನವಂ ಮನ್ನಿಸುವುದೆನುತ ನಯದಿ ॥
ಆ ರಾಜ ಸೂತ ಬಹುವಿಧದಿಂದ ಪೇಳ್ದೊಡಂ ।
ತೋರಾಯುಗೆಯ್ವನುಮಾನ ಗೊಳದಲೆಮುಗುಳ್ ।
ಕ್ರೂರಾಪ್ತ ದುರ್ವಾಣಿಯುಸ್ಸುಡಿಯಲನುಗೈದಳೀಂ ಪೇಳ್ವ ಕ್ರೌರ್ಯದಿರವ ॥ (27)

ಅನಿತರೊಳು ಸೂತ್ರವೆಂಡತಿಯರ ಸಂವಾದಮಂ ।
ಜನನಾಥ ಕೇಳುತತಿಶೋಕದಿಂದಿಂತೆಂದ ।
ತನಯಗೆ ಚತುರಂಗ ಬಲಮಂ ನೆರಪು ಶರಜಾಲ ನಿಖಿಲಾಯುಧಂಗಳನ್ನು ॥
ಘನಮಣಿಗ್ಗಣವ ಕರಿತುರಗ ಶಕಟಾದಿಗಳ್ ।
ವನಮಾರ್ಗ ಕೌಶಲವನನುಗೆಯ್ವುದತಿವೇಗ ।
ವನಜಾಕ್ಷ ರಾಮ ನೊಡನೈದುವರೆ ಧನಕನಕ ವಸ್ತುಗಳನೆಲ್ಲ ನೆರಸು ॥ (28)

ವಂದಿಮಾಗಧರೂಪ ಜೀವನೆಯರಂ ವಿಪ್ರ ।
ವೃಂದಾದಿ ಕರಮತ್ತಂಗಜಹಯೋತ್ಕರಗಳಂ ।
ಚೆಂದದಿಂ ಜೊತೆಗೈದು ಕಳುಪುವುದು ರಘುವೀರನೊಡನೆ ಸತ್ವರದಿಂದಲಿ ॥
ನಂದನದಿಸುಖಮೊಪ್ಪಮಾಗಿರಲಿ ಭರತನಲ ।
ವಿಂದ ಭೂಪಾಲನಂ ಗೆಯ್ಯಲೆನುತ ಲಜ ।
ನಂದನ ಸುಮಂತ್ರನೊಳ್ಪೇಳ್ದುದಂ ಕೇಳುತ್ತ ಕೈಕೆ ಕ್ರೋಧದೊಳೆಂದಳು ॥ (29)

ಪುರಿಯೊಳುಳ್ಳಖಿಳವಸ್ತುಗಳನೆಲ್ಲವ ಸುತನ ।
ಕರೆಸಿತ್ತು ಸರ್ವಜನರಂ ಕೂಡೆ ಕಳುಪಿಮಗೆ ।
ಭರತನಂ ದೊರೆಗೆಯ್ಯಲೇಂ ಗೈವ ಬಂನೆಗರದೊಳಗಿರ್ದು ಸುಖವ ಪಡೆವ ॥
ಪರಮ ಕರುಣದೊಳತ್ತ ವರ ಸಫಲಮಾಯಿತೆಂ ।
ದುರು ತರಕ್ರೋಧದಿಂ ಪೇಳಲಮ್ಮದನುಡಿಯ ।
ನೆರಸ ಗೆಚ್ಚರಿಸಲತಿಸಂಕಟಪ ನರನಾಥ ಪಲ್ಮೆರೆವುತಿಂತೆಂದನು ॥ (30)

ಕ್ರೂರ ಘಾತಕಕೆಳಸಿ ಕುಜನ ವೃತ್ತಿಯಗಳಸಿ
ದಾರುಣಕೃತಿದಾಳ್ದು ಧರ್ಮಮಾರ್ಗವಪ್ಪೂಳ್ದು ।
ನಾರಿನಿರ್ಲಜ್ಜೆಯಂ ಸಾಧ್ವಿಯರ ಪಜ್ಜೆಯಂ ಮಾಜಲನುಗೈದೆ ಬರಿದೆ ॥
ಆರಾದೊಡಂ ನಿನ್ನನೆಣಿಸುವರೆ ದುರ್ಮೇಧೆ ।
ದೂರೀಕರಿಸಿ ಸತ್ವಶೀಲಮಂ ದಾನವಿಯ ।
ರೋರಂತೆ ಕೆಳೆಗೊಂಡೆಯೆನುತೊರೆದ ಪತಿಯನುಂ ಧಿಕ್ಕರಿಸುತಿಂತೆಂದಳು ॥ (31)

ಭವದೀಯವಂಶದಧಿನಾಥ ಸಗರಂ ಪೂರ್ವ ।
ದವರೊಳಗಗ್ಗಳ ಜ್ಯೇಷ್ಠಪುತ್ರನ ಸಮಂಜಸನ ।
ತವಕದಿಂದಟವಿಗಟ್ಟಿದ ಪರಿಯ ಕೇಳ್ದರಿಯದಾದೆ ಮರುಳಾದೆ ಬರಿದೆ ॥
ಕುವಲಯ ದೊಳಪಕೀರ್ತಿಯಂತೆ ಯೆನುತ್ತಿರ್ದುದಂ ।
ಭುವಿಯರಸ ಕೇಳ ಕೇಶದೊಳರಲ್ ನೆರೆದ ಸು ।
ಪ್ರವರರೆಲ್ಲನ್ನರ್ಣಜ್ಜುಲವರೊಳ್ಮಹಾಮಾತ್ಯ ಸಿದ್ಧಾರ್ಥನುಡಿವ ಜವದಿ ॥ (32)

ಅಸಮಂಜದುರ್ಮೇಧೆಯಿಂದ ಲೋಕರ ಶಿಶುಗ ।
ಳಸುಗಳೆಯುತಿರೆ ನೋಡಿ ಸರ್ವ ಜನರೆಲ್ಲರುಂ ।
ವಸುಮತೀಪತಿಗೆರಗಿ ವಿಜ್ಞಾಪನಂ ಗೈದರೇ ನಗರವಾಸವೆಮಗೆ ॥
ಪಸನಿಲ್ಲದಪ್ಪಣೆಯ ನಿತ್ತೊಡೈದುವೆವೆನಲ್ ।
ರಸೆಯರಸನೆಂದನೇಂ ಭಯದಿಂದಲೀ ನಗರ ।
ವಸತಿಯನ್ನುಳಿದಪಿರೆನಲ್ಕಾಗಲಖಿಲಜನ ಬಿನ್ನಪಂಗೈದರೊಲಿದು ॥ (33)

ತರಳರಂ ಪಿಡಿಪಿಡಿದು ಸರಯೂನದೀಜಲದೊ ।
ಳುರುಳಸುತ ಕ್ರೀಡಿಪ ಭವತ್ಪುವರನೀ ಭಯಂ ।
ದೊರಕಿತೆಮಗದರಿಂದ ಪತ್ತಣವ ತ್ಯಜಿಸ ಬೇಕಾಯಿತೆನಲರಸ ಮುಳಿದು ॥
ವರಸುತನ ನಟ್ಟಡವಿಗಟ್ಟಿ ಲೋಕವನೆಲ್ಲ ।
ಪೊರೆದನಾ ಸಗರ ಧರ್ಮ ಸ್ವರೂಪಂ ಮೂಢೆ ।
ನಿರಪರಾಧಿಯ ರಘೂತ್ತಮನ ಕಳುಪಿಂದೇನತಿಳದೆಂಬೆ ದುರ್ಮೇಧೆಯಿಂ ॥ (34)

ಇನಿತಾದೊಡಂ ರಾಮನಲ್ಲಿ ದುರ್ಗುಣಲೇಶ ।
ಮಿನಿಸಿದುದ ನೋಡದೀಪರಿಯ ದುರ್ವೃತ್ತಿಗಳ ।
ನನುಸರಿಸಿ ರಾಮನಂ ಬನಕೆ ಕಳುಪೆಂಬುದೇಂ ದುರ್ಬುದ್ಧಿ ಯಾತನೊಡನೆ ॥
ಜನಪಸಹಿತೆಲ್ಲರುಂ ಪೋಪೆವೀನಗರಿ ನಿ ।
ರ್ಜನವಾಗಲದರಾಧಿಪತ್ಯಮಂ ಗೈದು ನಿಜ ।
ತನಯ ಸಹ ಸುಖದಲಿಹುದೆನುತಮಾತ್ಯಂ ಜರೆದನಶ್ವಪತಿಯಾತ್ಮಜೆಯನು ॥ (35)

ಈ ಪರಿಯಧಿಕ್ಕರಿಸುವಾಮಹಾಮಾತ್ಯ ಸಂ ।
ತಾಪಮಂ ಕಾಣುತ್ತ ರಘುವೀರ ಮತ್ತಾಮ ।
ಹೀಪನೊಡನಿಂತೆಂದ ದೇವಜನ್ನಪ ಮೌನಿವೇಷದಿಂ ವಿಪಿನದೆಡೆಗೆ ॥
ಪೋಪೆನಗೆ ಚತುರಂಗಬಲ ಧನಾದ್ಯುಪಚಾರ ।
ಲೇಪದಿಂದೇಂ ಪ್ರಯೋಜನ ಚೀರವಸನಗಳ ।
ಸೋಪಕರಣಂಗಳಂ ದಯೆಗೆಯ್ಯೆಲೆರಗುವೆನು ಭವದೀಯ ಶಾಸನದೊಳು ॥ (36)

ಕರಿಯ ವಿಕ್ರಯಗೈದು ಮಗುಳಂಕುಶದಿ ಪಾದ ।
ಪರಿಕಾಸವೆನಿತು ಗತಜಲಸೇತು ಬಂಧನದ ।
ಕರಣವನುಚಿತ ವಚನ ಸತ್ಯಮಪ್ಪಂದದಿಂ ದಯೆಯಿಂದ ಸಾಮಗ್ರಿಯಂ ॥
ತ್ವರಿತದಿ ಖನಿತ್ರಪಿಟಕಾದ್ಯಖಿಲಮಂ ತರಿಸಿ ।
ಕರುಣಿಸುವುದೆನಗೆ ಪದಿನಾಲ್ಕು ವರುಷಂಗಳಂ ।
ತರಿಸಿ ಚರಣಗಳೆಡೆಗೆ ಬಪ್ಪೆನೆನಲಶ್ವಪತಿಯಣುಗಿ ನಗುತಿಂತೆಂದಳು ॥ (37)

ಮಗನೆ ಸತ್ಯವ್ರತಾಗ್ರಣಿ ಭಾಷೆಗೊಣಯಂ ।
ಸೊಗಯಿಪ್ಪುದೆ ನೀನೆ ಕೃತಿಯೆನುತ ನಯನುಡಿಯಿಂದ ।
ಬಗೆಬಗೆಯ ಮುನಿಜನೋಚಿತ ವಸನಗಳ ನೃಪನಮುಂಗಡೆಯಲೀಯೆ ಮುದದಿ ॥
ತೆಗೆದು ಪ್ರಾಚೀನಾಂಬರಗಳಂ ಪ್ರತಿಲೋಕ ।
ಮಿಗೆ ಮೆಚ್ಚುವಾಭಾರನಂಗಳೆ ನಲಂಕರಿಸ ।
ಲಗಣಿತಗುಣಾಢ್ಯ ಸೌಮಿತ್ರಿಯುಂ ತಾನುಟ್ಟು ಪಾರಿಕಾಂಕ್ಷಿತ ವಸ್ತ್ರಮಂ ॥ (38)

ರಾಮಲಕ್ಷ್ಮಣರುಟ್ಟ ಮುನಿವಸ್ತ್ರಗಳನೋಡಿ ।
ಪ್ರೇಮದಿಂದಿಟ್ಟಿಸುತಲಾ ಕೇಕಯಾತ್ಮಭವೆ ।
ತಾಮರಸನಯನೆ ಜಾನಕಿಯ ಕರತಳಕೀಯಲಾಮೌನಿವಸ್ತ್ರಗಳನು ॥
ತಾಮಗೀಮುಖದರ್ಶನದಿ ವಿಕೃತಿಯಾಂತೆಸೆವ ।
ಸೋಮನಂ ಕೆಳೆಗೊಡಲ್ಕವನ ಬರುಗಾಳಿಯಿಂ ।
ಭ್ರಾಮಕಂಗೊಳುವ ಕದಳಿಯತೆರದಿ ಕಂಪಿಸುತ ಧರಣೀಸುತೆಯಿಂತೆಂದಳು ॥ (39)

ಎಂತುಡುವರೀ ವಸ್ತ್ರಗಳನು ಮುನಿಪತ್ನಿಯರ ।
ದೆಂತೆನಗೆ ತಿಳಿಯದೆಂದಶ್ರು ಪೂರ್ಣಾನನೆಯು ।
ಚಿಂತಿಸುತ್ತಿರೆ ನೋಡಿ ರಾಘವಂ ಕರದಿಂದ ಪಿಡಿದು ಚೀರವನು ಮುದದಿ ।
ಮುಂತುಟ್ಟ ಕೌಶೇಯಕಂ ಮೇಲೆವೇಷ್ಟಿಸ ।
ಲ್ಕಾಂತನ ಮುಖವನೋಡಿ ನಾಣ್ಚಿ ತಲೆಗುತ್ತಿರ ।
ಲ್ಕಂತಃಪುರಾಂಗನೆಯರಾರ್ತಸ್ವರಂ ಪರ್ಬಿತೆಣ್ದಿಸೆಯ ಭೀಕರಮೆನೆ ॥ (40)

ಅಂತಃಪುರಾಂಗನೆಯರಾರ್ತಸ್ವರದಲಳುತ ।
ಲಿಂತೆಂದರಾ ರಘುಜನೊಡನೆ ಪಿತನಾಜ್ಞೆಯಂ ।
ನೀಂತಳೆದು ಬನಕೆರಗಲಿಚ್ಛೈಪೆ ಸೌಮಿತ್ರಿಯೊಡನೆ ಬಹುರಾಗದಿಂದೆ ॥
ಕಾಂತೆಕೋಮಲೆ ಸೌಕುಮಾರಪದೆಯುವತಿಯಳಿ ।
ತಾಂ ತೆರಳಲನುಚಿತಂ ನಗರದೊಳ್ಬಿಟ್ಟಿಪ್ಪು ।
ಸಂತೋಷಗೊಳಿಸ ವೇಳ್ಕನುತೆಲ್ಲರುಂ ಪೇಳೆ ರಾಮ ಮಗುಳಿಂತೆಂದನು ॥ (41)

ತಾತನಾಜ್ಞೆಯೊಳೆನಗೆ ವಿಪಿನ ರಾಜ್ಯದ ಸಿರಿಯು ।
ಮಾತೆಯು ನಿರೂಪಿಸಲ್ಕನೊಡಂಬಟ್ಟೊಡೀ ।
ಸೀತೆ ಪಾತಿವ್ರತ್ಯ ಮೆಣಿಸಿ ಬಂದಪಳೆನಿತ ವೇಳ್ದೊಡನಿವಾರ್ಯ ಮೆನೆಗೆ ॥
ಪ್ರೀತಿಯಿಂಸಲಿಸವೇಳ್ಕನುತ ಚೀರಾಂಬರವ ।
ಶ್ರೀತರುಣಿ ಗುಡಿಸಲನುಗೆಯ್ಯೆ ಮೈತ್ರಾವರುಣಿ ।
ತಾಂ ತಳುವದಲೆ ಕೋಪದಿಂದ ಪರಿಹರಗೈದು ಕೈಕೆಯೊಡನಿಂತೆಂದನು ॥ (42)
ಕುಲಗೆಡುಕಿ ದುರ್ಮೇಧೆ ಪಾಪಿ ಕೇಕಯ ತನುಜೆ ।
ಒಲಿಸಿ ವಂಚಿಸಿ ಮಹಾರಾಜನಂ ಕಾರ್ಪಣ್ಯ ।
ಕಲಿತ್ರನೆಂದೆನಿಸಿ ದುರ್ವೃತ್ತಿಯಿಂ ಜನಕಜೆಯ ಬಸಕೆ ಗಮಿಸೆಂಬೆ ಕ್ರೂರೆ ॥
ಲಲನೆಸಹ ಶ್ರೀರಾಮ ನಾವೆಡೆಯೊಳರ್ಪನಾ ।
ಪೊಲಬಿಗಖಿಲ ಪ್ರಜೆಯು ಪರಿವಾರಸಹಿತೆಲ್ಲ ।
ರಲಘುಬಲ ಭರತಶತ್ರುಘ್ನರೊಡನೈದುವೆವು ಧರ್ಮಪಂಥಾನವಿಡಿದು ॥ (43)
ಜನರಹಿತ ಪಾದಪ . . . . . ರಕವಾಗಿಹ ನಗರ ।
ಘನ ಪಾಲನಂಗೈವುತಿರು ಮಾಥೆ ಶ್ರೀರಾಮ ।
ಬನದಲಿರಲದೆ ರಾಜಧಾನಿಯೆನಿಸುವುದಾತನುಳಿಯಲಿದು ಶೂನ್ಯವಹುದು ॥
ಮನುಜವರ್ಗಹಾವಾತ್ಮ್ಯ ಮೃಗಪಕ್ಷಿ ಮುಂತಾದ ।
ವಿನಿತಲ್ಲವಾ ಮಹಾಮಹಿಮನೊಡನೈದುವವು ।
ನಿನಗೆ ಗೋಚರವಹುದು ಭವದೀಯ ಮುಖವರ್ಣನವಮಾಳ್ಪರಾರು ನೆಲದಿ ॥ (44)
ಚೀರವಸನಂಗಳೆಂತೆಗೆಸಿ ದಿವ್ಯಾಭರಣ ।
ತೋರಹಾರಂಗಳಂ ಸೊಸೆಗಿತ್ತು ಕಳುಪೆಂವು ।
ಧೀರಾಗ್ರಗಣ್ಯಂ ವಸಿಷ್ಠ ಕೇಕಯಸುತೆಯ ಧಿಕ್ಕರಿಸಿ ಮಗುಳೆಂದನು ॥
ವೀರ ರಾಘವ ನೋರ್ವನೇ ಬನದಲಿಪ್ಪಂತೆ ।
ಕ್ರೂರೆ ನೀನೆಸಗಿದೆ ಮಹಾರಾಜ ನಂದನೆಯು ।
ಚಾರುವಸ್ತ್ರಾಭರಣದಿಂದಲಂಕೃತಿವೆತ್ತು ಸೌಖ್ಯದಿಂದಿರಲಿದಿರೊಳು ॥ (45)
ಯಾನರತ್ನಾಭರಣ ನಿಖಿಲವಸನಾದಿಗಳ ।
ನೂನಮಿಲ್ಲದಲಿತ್ತು ಸತ್ಕರಿಸಿ ಕಳುಪಿದೊಡೆ ।
ಮಾನಿನೀಮಣಿ ವಿಲಾಸದಿ ರಮಣನಂಕದೊಳ್ಸಂಚರಿಸಿ ವಿಭವದಿಂದ ॥
ಈನಗರವುಳಿದ ಕ್ಲೇಶ ಸಂಭವಿಸ । . . . . . .
ದಾನಂದದಿಂ ರಾಮಪುರದರಸನಿರಲೆಂದು ।
ಜ್ಞಾನನಿಧಿಯಶ್ವಪತಿಯಣುಗಿಗುಸುರಲ್ನುಡಿಯದಿರ್ದಳ್ತಿ ಮೌನವಿಡಿದು ॥ (46)

(ಸಂಧಿ 12, ಪದ 553)

ಹದಿಮೂರನೆಯ ಸಂಧಿ

ಸೂಚನೆ ॥ ಅಜತನೂಜಾತನಪ್ಪಣೆ ವಿಡಿದು ಮಾತೆಯರ ।
ಭಜನೆಗೈದತಿ ವೇಗದಿಂದ ಮಾತ್ಯಪ್ರಭೃತಿ ।
ಸ್ವಜನರಂ ಬೀಳ್ಕೊಂಡು ಸರಯೂ ಮಹಾನದಿಯ ದಾಂಟಿದಂ ರಘುವೀರನು ॥

ಧರಣೀಧರಾತ್ಮಭವೆ ಕೇಳ್ ರಾಘವಂ ಮುದದಿ ।
ಧರಿಸಿ ಮುನಿವೇಷಮಂ ತಾತನೊಡನಿಂತೆಂದ ।
ಚರಣ ಬಲದಿಂದ ವನವಾಸಮಂ ಕಳೆದಾನು ಬಪ್ಪೆನಾ ಸಾಕೇತನವ್ಪೆಸು ॥
ಕರುಣಿ ಮನ್ಮಾತೆ ದೈನ್ಯಂದಿಸೋದಿತ ದೈನ್ಯ ।
ವೆರೆದು ಸಂಕಟಗೊಳ್ಳದಂತೆ ಕೃಪೆಗೈದು ಸುಖ ।
ದಿರುಗೆಯಿಂ ಪಾಲಿಸಲ್ವೇಳ್ಕು ಸಾಧ್ವೀಮಣಿಯೆನೆಂದು ವಿಜ್ಞಾಪಿಸಿದನು ॥ (1)

ರಾಮನಾಡಿದ ನುಡಿಯ ಕೇಳಿ ನಿಜಜೀವನ ।
ಪ್ರೇಮಮಂ ಪಳದರಸ ಮೈಮರೆದು ಮೂರ್ಛೆಯಿಂ ।
ತಾಮಸಿಯೊಳಗೆ ನಿಮಿಷಮಿರ್ದು ಮಗುಳೆಚ್ಚತ್ತು ಶ್ರೀರಾಮರಾಮನುತ ॥
ಪಾಮರಿ ದುರಾಢ್ಯೆ ಕೈಕಾವೇಗ ನಾದ ।
ಕಾಮಿಗರ್ಯಮ ತನಯನೊಳ್ಗಳಂ ಬಾಧೆಯಹ ।
ನೇಮಮಿಲ್ಲ ಮೆನುತ್ತ ಬಹುವಿಧದಿ ಪಲುಬಿದಂ ದಶರಥಮಹೀನಾಥನು ॥ (2)

ಪೂರುವದಲೆನಿತು ಜೀವರ ಬಾಧೆಗೊಳಸಿರ್ದ ।
ಘೋರಪಾತಕ ಮಾಡಿ ಕೈಕೆಮುಂದೆಸೆಯಲಾ ।
ದಾರ ವೈಶ್ವಾನರೋತ್ತಮೆಯಾಗಿ ಮಗುಳ್ ಶಮಕೀಕರರ ಬಯಸಲೇಕೆ ॥
ನಾರ ಸೀರೆಗಳುಟ್ಟು ಸುಕುಮಾರರೀಪರಿಯ ।
ತೋರುವ್ರದ ನೋಳ್ಪುದಾಯ್ತೆನುತಳಲಿ ಬಳಲಿ ಮುಂ ।
ದೋರದರೆನಿಮಿಷ ಮೈಮರೆದಿರ್ದು ಪಂಕ್ತಿರಥ ಸೂತನೊಡನಿಂತೆಂದನು ॥ (3)

ಪತ್ತಿಹಯಗಜರಥಗಳಂ ಬರಿಸಿ ಬೇಗ ಸಂ ।
ಪತ್ತಿನಿಂ ಮಣಿಖಚಿತಮಾದ ತೇರಿಂದಂರ ।
ಘೊತ್ತಮನ ಜನಪದಾಲೋಕನಂ ಗೈಸೆಂದು ಪೇಳಲಾ ಮಂತ್ರೀಶನು ॥
ಮುತ್ತುಮಾಣಿಕರಚಿತ ಪೊಂದೇರನಳವಡಿಸಿ ।
ಮತ್ತೇಭತುರಗಾದಿಗಳನೆಲ್ಲ ಜೊತೆಗೊಳಿಸಿ ।
ಬಿತ್ತರಿಸಿದಂ ಭೂಧವ್ರೋತ್ತಮನೊಳತಿ ಭಕ್ತಿಯಿಂದಮಾತ್ಯರ ಮೌಳಿಯು ॥ (4)

ಸೂತವಾಣಿಯಕೇಳಿ ದಶರಥ ಮಹೀನಾಥ ।
ನಾತ ನೊಡನಿಂತೆಂದ ವಸ್ತ್ರಮುಕ್ತಾಫಲ ।
ವ್ರಾತ ಮಣಿ ಕನಕಭೂಷಣಗಳಂ ತರಿಸಿ ಜನಕಾತ್ಮಭವೆಗೀವ್ರದೆನುತ ॥
ಶೀತಾಂಶುನಿಭ ಬಜ್ಜರಾಭರಣ ರನ್ನಗಳ ।
ನೀತಾಗ್ನೆಗೈದಂತೆ ತಂದೀಯೆ ಗೋತ್ರಸಂ ।
ಭೂತೆ ಸಂತಸದಿಂದಲಂಕಾರ ಗೈದೆಸಯೆ ನೋಡಿ ಕೌಸಲ್ಯೆ ಜವದಿ ॥ (5)

ತೆಗೆದಪ್ಪಿ ಮುದ್ದಾಡಿ ಮಮತೆಯಿಂ ಚುಂಬಿಸುತ ।
ಮಿಗೆಗದ್ಗದಂ ಚಿತ್ತನುಡಿಗಳಂದಿಂತೆಂದ ।
ಳಗಣಿತಗುಣೋತ್ಕರ್ಷೆ ಕುಲಜೆ ಧರಣೀತನುಜೆ ಲೋಕದೊಳ್ ಸ್ತ್ರೀಚಿತ್ತವು ॥
ಸೊಗೆಯಿಪ ಬಿಸಿಲ್ದೊರೆಯನೆಳೆಮಿಂಚಿನತಿಶಯವ ।
ಮಿಗೆಪೊಲ್ದುಕ್ಷಣ ಪ್ರತಿಕ್ಷಣ ನಿಲ್ಲದನುಪದಂ ।
ಬಗೆಬಗೆಯ ಚೇಷ್ಟಾನುಕಾರದಿಂ ಕಪಿಯಂತೆ ಚಲಿಸುತಿಹುದಿದು ನೈಜವು ॥ (6)

ಪುಸಿನುಸುಳ್ಕಾರಣದ್ವೇಷಮತಿಸಾಹಸಂ ।
ಪೊಸಧೈರ್ಯಮಶುಚಿ ನಿಷ್ಕರುಣ ಮೌಖ್ಯಾರ್ತಿಶಯು ।
ರಸೆಯೊಳ್ಗಂ ಲಲನೆಯರ ಸಹಜಾತಮಿನಿಸಲ್ಲದತಿ ವಂಚನಾನಿಪುಣತೆ ॥
ಪೊಸತಾಣ ವಾವೆನದು ಒಲುಮೆಸಲೆ . . . . ಸತ್ಯಮೆ । ?
ಣ್ದೆಸಗೊಟ್ಟು ನೆನೆಹೆಂಬುದದು ಮುಗಿಲ ನೆಳಲೆಂಬು ।
ದಸಿತಾಂಗಿಯರ ಸಂಪ್ರದಾಯ ಮೂಲೋಕದೊಳಗಿದು ಸಿದ್ಧ ಜನಕಜಾತೆ ॥ (7)

ಆವರೆಣ್ಣೆಯಿಲ್ಲ ನಯಗಲ್ಲ ಸತ್ಯಾಚಾರ ।
ಹಾದಿಮುನ್ನಿಲ್ಲದಯ ಪೊಲ್ಲ ಕೃಪೆವೆಸರೆಂಬ ।
ಸೋದೆಯಿನಿಸಿಲ್ಲವನೃತೋದರೀ ಸಂತತಿಯೊಳಮ ಯಥಾರ್ಥಂಜಗದೊಳು ॥
ಬೋಧಿಸುವರ್ಸವಿನುಡಿಯಲಪ್ಲಿಯೊಳ್ಕಥಾಹೃದು ।
ಸಾಧಿಪರು ಗಳಸಿದರ್ಥವನು ಬೇಡಿದುದೀಯು ।
ನಾದೊಡವನಾ ದೊಡಾಸ್ಯದರ್ಶನಗೆಯ್ಯದಟ್ಟುವರು ಪೇರಡಿವಿಗೆ ॥ (8)

ಧನಧಾನ್ಯಪ್ರಿಯವಾಣಿ ಯುಳ್ಳಕುಲದಿಪುರುಷ ।
ನನುವರ್ತನಂ ಗೈದು ಮೋಹಿಸುತ ಭೇದವಂ ।
ಜನವರಿವ್ರೊಲೆಸಗುವರು ನಿರ್ಧನಿಕನಾದೊಡಂ ಕ್ರೂರ ನೈಷ್ಠುರ್ಯದಿಂದ ॥
ನೆನೆಯಂದು ಸ್ತ್ರೀಸ್ವಭಾವಂ ಲಕುಮಿತಾನಿರ್ಪ ।
ವನಜವ ದಿನಾಂತ್ಯದೊಳ್ ಬಿಡುವಳೀ ಚಾಂಚಲ್ಯ ।
ವನಿತೆಯರ ಕುಲಪರಂಪರೆಯೊಳಚ್ಚರಿಯಲ್ಲ ಲೋಕಪ್ರಸಿದ್ಧಮಬಲೆ ॥ (9)

ಪರವನಿಟ್ಟಸದಲ್ಪಸುಖಕೆಳಸಿ ಪರಿವೃಢನ ।
ತೊರೆವನರ್ಥವಬಯಸಿ ನಿಜಶರೀರದಹಾನಿ ।
ಯರಿಯರದರಿಂದ ಚಪಲಾನೊವು ನಾರಿಯರಿಗಡಸಿತಾಪಂಶದೊಳಗೆ ॥
ನಿರುತ ಪತಿದೇವತೆಯರಿಪ್ಪರೆಂದಿಗುಧರ್ಮ
ದಿರವವಿೂರದಲುಭಯಕುಲಕೆ ಜಸಮಂ ಗಳಸಿ ।
ಸುರಮುನಿಗಳಭಿವೃದ್ಧಿ ಗೈವಸಾಧ್ವೀ ಜನರ ಮಹಿಮೆ ನಿಸ್ಸೀಮೆತಾಯೆ ॥ (10)

ಸಿರಿವಂತನಾಗಲಿ ದರಿದ್ರನಾಗಲಿ ಸುಖವ ।
ಬೆರದಿರಲಿ ಕಷ್ಟಸಂಕಟದಾದಿ ಯಾಂತಿರಲಿ ।
ತರುಣಿಯರಿಗಧಿಪ ಪರದೇವತಾನೀಕಾಶಮೆಂದುದು ಸುಕೃತವಡೆದು ॥
ಧರಣಿಯೊಳ್ಚರಿಪ ಸುಚರಿತ್ರೆಯರ ಸಂತತಿಗೆ ।
ವರಮಕುಟಮಾಣಿಕ್ಯಮೆಂಬಂತೆ ಪರಿಯು ಶ್ರೀ ।
ಚರಣಗಳ ನನುಸರಿಸಿ ಸುಖವಿೂವ್ರುದೀ ನೆಲಕ್ಕೆನುತ ಬೋಧನೆಗೆಯ್ಯಲು ॥ (11)

ಕೋಸಲಾತ್ಮಜೆಪೇಳ್ದ ಧರ್ಮ ಬೋಧಾಕ್ರಮವಿ ।
ಲಾಸಮಂ ಕೇಳ ಹರ್ಷದಿ ಜನಕಸಂಭೂತೆ ।
ಪೊಸರಳ ಮಾತೆ ವಿಜ್ಞಾಪಿಸಿದಳಂತೆಂದು ನಯವಿನಯಭಕ್ತಿ ವಿಡಿದು ॥
ವಾಸವನ ಸತಿಯು ದಾಕ್ಷಾಯಣಿಯರಾರ್ಚಿಸಿದ ।
ರಾಸಿಗಾಧಿಕ್ಯವನಸೂಯೆ ಲೋಪಾಮುದ್ರೆ ।
ಯೀಸುಜನರಿಗೆ ಜಸವಗಳಸಿ ನಿಮ್ಮಡಿಯನುಗ್ರಹವ ಸಂಪಾದಿಸುವೆನು ॥ (12)

ವಿಪದ ಸಂಪದ ವ್ಯಸನ ಹರ್ಷ ಕೋಪಂಶಾಂತಿ ।
ವಿಪರೀತಹಾಸ ಮುಂತಾದವಸ್ಥಾನಿಚಯ ।
ನೆಪಮಾವುದಾಂತಿರ್ದೊಡಾದಿತ್ಯನಿಂದನ್ಯ ಮೆನಿಸದೊಲು ಕಿರಣಂಗಳು ॥
ನೃಪಶಿಖಾಮಣಿ ಯಂಘ್ರಿಯನುಮತಿಯೊಳಿರ್ದುತ್ತ ।
ಲ್ಲಪನಾನುಮೋದಮಸ್ಮನ್ಮೋದ ಮೆಂದೆನಿಸಿ ।
ಪ್ರಪದಸ್ಮರಣೆಯಿಂದ ಪ್ರಾಂತ ಕೃತಹನಿದಂ ಸತ್ಯಮೆಂದರಿವುದಾರ್ಯೆ ॥ (13)

ನಿರತಿಶಯ ಸುಖಮೀವ ಪರಿಯು ಪರದೇವತೆಯು ।
ಮರೆದು ನಿರಯಕ್ಕೆಳಸುವರ್ಗೈಸೆ ದುರ್ಮೇಧೆಯರು ।
ವರಪುರಂಧ್ರಿಯರ ಮತವಲ್ಲವೆಂಬುದೆ ಲೋಕ ಸಮ್ಮತಮೆನುತೆತ್ತರೆಯಲು ॥
ಹರುಷದಿಂ ಕೌಸಲ್ಯೆ ಬಿಗಿದಪ್ಪಿಮಸ್ತಕವ ।
ಸರಭಸಘ್ರಾಣಸಂಗೈದು ತುತಿಸುತ ಬೇಗ ।
ಪರಸಿದಳನೇಕ ವಿಧದಿಂದಲಾನಂದಾಬ್ಧಿಯೊಳಗಾಳುತೇಳುತನಘೆ ॥ (14)

ಎನುತ ಸಾತ್ವಿಕಚಿತ್ತಳಾಗಿ ಕಂಬನಿಗಳಂ ।
ವನಧಿಮೇಖಲೆಯು ಪಂಕಿಲಮೆನಿಪ ಪಾಯದಿಂ ।
ಸನುಮತಿಸಿ ಸಂತೈಸಿ ರಘುನಾಥನಿಂತೆಂದ ವನವಾಸವತ್ಸರಗಳು ॥
ನೆನಹುಮಾತ್ರದಿ ನಿಮಿಷಮೆಂಬಂತೆ ಕಳೆದಪುವು ।
ಮನೆಯೊಳಿರ್ದಂತಾಕುತರ ಬಂದುಕಾಣ್ಬೆಪದ ।
ವನಜಮಂ ಸಂತಾಪ ಬೇಡವಾರ್ಯೆ ಸ್ವಾಂತಸಂತಸಂ ಗೊಳಸುತಾಯೆ ॥ (15)

ವಾಸರಗಳತಿವೇಗಲರುಗುವವು ಚಿತ್ರಸಂ ।
ವಾಸಮಹುದಾನಂದ ಚಿಂತೆ ಬೇಡೆಂದು ಮೃದು ।
ಹಾಸಯುತವಾಣಿಗಳ ನಿಜಜನನಿಗೊರೆದು ಮಗುಳಳದ ಮಾತೆಯರೊಳೆಂದನು ॥
ಮೋಸದಿಂದಜ್ಞಾನದಿಂದೆನ್ನ ದೆಸೆಯಿಂದ ।
ಲೇಸು ಹೊಲ್ಲಿಯಮಾಗಿ ತೋರ್ದೊಡಂ ದಯದಿಂದ ।
ಬೇಸರಂಗೊಳದೆ ಪಾಲಿಸವೇಳ್ಕುಮೆಂದೊರೆದ ಭಾಷೆಯಂ ಕೇಳಿ ಕ್ಷಣದಿ ॥ (16)

ಮರುಗಿ ಶೋಕಾವಿಷ್ಟರಾದರಾ ಸದ್ಗುಣವ ।
ಪರಿಪರಿಯಲೋರ್ವ ರೊರ್ವರೊಳೊರೆವುತಿರಲಿತ್ತ ।
ಧರಣಿಜೆಯು ಲಕ್ಷ್ಮಣಂ ಸಹಿತ ದಶರಥನಂಘ್ರಿಗೆರಗಿ ನುತಿಗೈದು ಮುದದಿ ॥
ತ್ವರಿತದಿಂ ಕೌಸಲ್ಯೆಗಘನಮಿಸನುಜ್ಞೆಯಿಂ ।
ತೊರಡುತಿರೆ ಸೌಮಿತ್ರಿ ನಿಜಮಾತೆಯೆಡೆಗೈದಿ ।
ಚರಣಕಾನತನಾಗಿ ನಿಂದಿರಲ್ತಗೆ ದಪ್ಪಿ ತನಯನೊಡನಿಂತೆಂದಳು ॥ (17)

ತಾತನೀನೆ ನೆದರ್ಥಮಿದು ಧರ್ಮ ಸಂಗತಿ ।
ವ್ರಾತಕಾರಣ ಕುಲಪರಂಪರೆಯನೃಪಕೀರ್ತಿ ,
ಜೇತ್ರಮಾದುದು ಪಿರಿಯರನುವರ್ತನಂ ಶುಭೋದಯದ ನೆಲೆಯಲ್ತೆ ನೆಲದಿ ॥
ಭ್ರಾತಾಂಘ್ರಿ ಪಂಕ್ತಿಯಂ ಬಿಡದೆ ಸುಖದುಃಖಗಳ ।
ರೀತಿಯೊಳ್ ಶೋಕಹರ್ಷಂಗಳಂಟದೆ ಸೌಖ್ಯ ।
ಜಾತಮೆಂತಪ್ಪುದಂತಿಪ್ಪುದೈದುವುದೆನುತು ಬೇಳ ಮಗುಳಂತೆಂದಳು ॥ (18)

ತಿಳಿದಾಶರಥಿಯು ದಶರಥನೆಂಬವಸುಂಧರಾ ।
ತಳವಣಿಗಿಯಿಂದಯೋಧ್ಯಾನಿಭವಹುದಿದೆಂದು ।
ಘಳಿಲನತ್ತಿ ಸುಖದಿಂದ ಲೈದೆಂಬ ಪರಕೆಗಳ ನಿತ್ತು ಬೀಳ್ಕೊಡಲಿತ್ತಲು ॥
ಥಳಥಳಿಪ ಪೊಂದೇರ ಸಿಂಗರಂಗೈದು ಬಂ ।
ದೊಳಪೊಕ್ಕು ಕೈಮುಗಿದು ಸೂತವಿಜ್ಞಾಪಿಸಿದ ।
ನಳಿನಾಕ್ಷರಾಮ ಬಂದಿದೆಕೊ ಸ್ಯಂದನವರುಣ ಗಾಂಧರ್ವಹಯಕಲಿತದಿ ॥ (19)

ಸುರಪನಿಗೆ ಮಾತಳಿಯು ಬಿನ್ನಪಂ ಗೈವಂತೆ ।
ಪರಮಭಕ್ತಿಯೊಳಂ ಸುಮಂತ್ರ ವಿಜ್ಞಾಪಿಸಲ್ ।
ಹರುಷದಿಂ ಶ್ರೀರಾಮ ಪೊಂದೇರನಡರುವೊಡೆ ನಿಶ್ಚಯಂಗೈದು ಬಳಿಕ ॥
ಧರಣಿಜಾತೆಗೆ ನಿರ್ಯಾಣಿಸಲತ್ತೆಯಿತ್ತ ಶುಭ ।
ಕರ ಭೂಷಣಾಂಬರಗಳಿಂದಲಂಕೃತಿ ವೆತ್ತು ।
ಸರಭಸದಿ ಪೊಂದೇರ ನೇರಲಾ ಜನಕಸುತೆ ಸೌಮಿತ್ರಿಯತಿವೇಗದಿ ॥ (20)

ಶರಚಾಪ ಕವಚ ಕಠಿಣಂ ಚರ್ಮವೇಲೆನಿಪ ।
ಕರವಾಳ ಮುಖ್ಯೋಪವಸ್ತುಗಳನಾರಥದೊ ।
ಳಿರಿಸಿ ಬಲವಂದು ವಂದಿಸಿ ರಾಮಲಕ್ಷ್ಮಣರ್ಪೊಂದೇರ ನೇರಲಾಗ ॥
ತ್ವರಿತದಿ ಸಮೀರಸಮ ವಾಜಿಗಳನಾ ಸೂತ ।
ಕರಕಶಾಘಾತ ಗೆಯ್ಯಲ್ತತ್ಕ್ಷಣ ದೊಳಾ ।
ತರಣಿಯುಂ ಪಿಡಿಯಲವ್ವಳಿಪಂತೆ ಗಮಿಸಿದವು ಘನಗರ್ಜನಂ ಗೈವುತ ॥ (21)

ನಡೆಯೆ ಪೊಂದೇರು ಸೌದಾಮಿನೀ ಪ್ರಭೆಯಿಂದ ।
ಅಡಿಗಡಿಗೆ ತತ್ಪುರಸ್ತ್ರೀ ಬಾಲವೃದ್ಧರುಂ ।
ತುಡುಕಿದತಿಶೋಕದಿಂದಲ್ಲಲ್ಲಿ ತದ್ವ್ಯಸನದಿಂದ ಮೂರ್ಛೆಯನಾಂತಿರೆ ॥
ಅಡಿಗಡಿಗೆ ಪಶುಪಕ್ಷಿ ಯುಳಿದಜನರೆಲ್ಲಬೆಂ ।
ಬಿಡದೆ ಪಿಂದೈದುತಿರಲುಳಿದ ನರನಿವಹಸಂ ।
ಗಡಿಗರೆನಿಸುವವೆನುತಲಾರ್ತರವವೆಸಗೆ ಶಬ್ದಾದ್ವೈತಮಾಕ್ಷಣದೊಳು ॥ (22)

ಸೂತರಶ್ಮಿಯು ಪಿಡಿದು ಮೆಲ್ಲನೈದಿಸು ರಥವ ।
ಶೀತಾಂಶುನಿಭ ವದನವಂ ನೋಳ್ಪವರೆನಿಮಿಷ ।
ವೀತಕತಿತ್ವರೆಗೈವೆ ಯೆನುತ ಕೆಲರೊರಲುತಿರಲಡಿಗಡಿಗೆ ಮತ್ತೆಕೆಲರು ॥
ಬೀತಿರ್ಪುದೆಂತು ದೇವ್ಯೋಪವಿತ್ರಗರ್ಭಸಂ ।
ಭೂತತನಯರ ಶಿಲಾಹೃದಯ ಮಾಯಿತ್ತು ತ ।
ನ್ಮಾತೆಗೇಂ ಗೈವೆವೆಂದೆನುತ ಪಲುಬುತ ಜನರ್ಬೆಂಬತ್ತಿಪೋಗುತಿರಲು ॥ (23)

ಕೃತಿಯುತ್ತಿ ವೈದೇಹಿ ಪತಿಯನಗಲದಲೆ ಸಂ ।
ಗತಿಗೈವಳಮಿತಧನ್ಯತೆವೆತ್ತ ಸೌಮಿತ್ರಿ ।
ರತಿಯಿಂದಲಣ್ಣನನುಸರಗೈದ ಧರ್ಮವಂ ಮೀರದತಿಸನ್ಮಾರ್ಗದಿ ॥
ಸತಿಸುತರ್ಸಹಿತಾವ ಧನ್ಯರಾದೆವೆನುತ್ತ ।
ಅತಿಶಯಿತ ಶೋಕದಿಂ ಪಲುಬುತಿರಲವರಿತ್ತ ।
ಕ್ಷಿತಿಪ ಸುತನಂ ನೋಳ್ಪೆನೆಂದು ನಿಜಸ್ತ್ರೀ ಜನರ್ಸಹಿತ ಪೊರವಂಟ ಜವದಿ ॥ (24)

ತ್ವರಿತದಿಂ ರಥವ ನಡೆಸೆಂದು ರಾಘವ ಪೇಳೆ ।
ಪರಿಜನಪೌರಜನರ್ನಿಲಿಸೆಂದು ಕೂಗುತಿರ ।
ಅರಸಪಿಂದಟ್ಟಿಬರುತಿರೆ ನೋಡುತೀಪರಿಯು ಸೂತ ಮಧ್ಯದಿ ನಿಲುವೊಡೆ ॥
ಪರಮದುರ್ಲಭವಾಗೆ ಪದಹತಿಯು ಕೆಂಧೂಳಿ ।
ಪರಪಿ ಕಳ್ತಲೆಗೆಯ್ಯೆ ಕಂಬನಿಯು ವಾಹಿನಿಯು ।
ಸರಿಸಗೈದುದು ತತ್ಕ್ಷಣಕದೇಂ ಬಣ್ಣಿಸುವೆನಂದಿನದಿನೋಪಮವನು ॥ (25)
ಪೊರಮಟ್ಟು ದೈಸೆ ಲೋಕರ ಶೋಕದಾವಾಗ್ನಿ ।
ಯುರುಧೂಮ ಲೋಕವಾಂಧ್ಯತೆಗೆಯ್ಯೆ ಪಥವ ಮುಂ ।
ದರಿಯದಖಿಲರು ತೇರಪರಿವೇಷ್ಟನಂ ಗೆಯ್ಯಲನಿತರೊಳುಪಿಂತೆ ಬರುವ ॥
ಅರಸಿನೆಡಬಲದ ಕಂಚುಕಿಗಳಾರಾವಸಂ ।
ಭರಿತವಾಗಲ್ನೆರೆದ ಜನರಿಟ್ಟಸುತ ಕೋಡಿ ।
ವರಿಸಿದರ್ಕಂಬನಿಗಳಾ ದಿನದಿನಾದ್ಭುತವ ನುಸುರಲೆಂತಳವಡುವುದು । (26)
ಹಾರಾಮಲಕ್ಷ್ಮಣ ಸುಮಂತ್ರ ವೈದೇಹಿ ಯೆಂದೆನು ।
ತ್ತಾರಾವಗೈವುತ್ತ ಪಿಂತೆ ಬಹ ಮಾತೆಯರ ।
ತೋರಾಯ ದೈನ್ಯವಮಂ ನಿಟ್ಟಿಸುತ ರಾಘವಂ ಚಿತ್ತಸಂಕೋಚಗೊಳುತೆ ।
ಈ ರಾಜ ಶುದ್ಧಾಂತದನುತಾಪಮಂ ಕಂಡು ।
ಸಾರತ್ತಮಿದು ತೇರ ತ್ವರಿತದಿಂ ನಡೆಸೆಂದು ।
ಧೀರಾಪ್ತಮೌಳಿಗೆ ಸುಮಂತ್ರಗಾಜ್ಞಾಪಿಸಲ್ಕಾ ಧ್ವನಿಯಕೇಳುತರಸ । (27)
ನಿಲಿಸೆಲವೊರಥಮಂ ಸುಮಂತ್ರ ಪೋಗದಿರೆಂದು ।
ಮುಲಿವುತ್ತೈತರೆ ಪಂಕ್ತಿರಥ ರಾಮ ನಡೆಸೆಂದು ।
ಪಲುವೊರೆಯಲುಭಯಮಧ್ಯದಿ ಸೂತ ಸಿಲುಕಿದಂ ಪೋಗಲಿರಲಳವಲ್ಲದೆ ॥
ಲುಲಿತಾಂತರಂಗನಾಗಿರೆ ರಾಮ ಮಾತ್ರೆಯರು ।
ಪಲುಬುವುದ ನೋಡುವರೆ ಸಹಿಸಲಮ್ಮದೆಸೂತ ।
ನಿಲಿಸದಿರುರಥವ ನಡೆಸೆಂದು ನಿಟ್ಟುರಗೆಯ್ಯಲಾತ ಜವದಿಂದ ನಡಸೆ । (28)
ಬಡವರಿಗನಾಥರಿಗಶಕ್ತರಿಗೆ ತಾಪಸರ ।
ಪಡೆಗಾವ ರಕ್ಷಕನದೆಲ್ಲಿ ಪೋದಪ ಕೋಪ ।
ವಿಡಿದು ಶಪಿಸಲ್ಸಹಿಸಿ ಪಾಲಿಸುವ ಸದ್ಧರ್ಮಮೂರ್ತಿಯೆಲ್ಲಿಗೆ ಪೋದನು ॥
ಪಡೆದಾಕೆ ಯೆಂತೆನ್ನ ನೋಡುತಲಿ ಕೃಪೆಗೈದು ।
ಪೊಡವಡುವ ಸತ್ಯಸ್ವರೂಪ ಪೋದಪನೆಲ್ಲಿ ।
ತುಡುಕಿತೇಂ ದುರ್ದಶೆಯೆನುತ್ತ ಮರುಗಿದರೆಲ್ಲ ಕ್ಲೇಶಮದನೇವೇಳ್ವೆನು ॥ (29)
ಸಾಧುಜನರಗ್ನಿಹೋತ್ರವನುಳಿಯೆ ಸೂರ್ಯಮರೆ ।
ಯಾದ ವಿಧು ನಕ್ಷತ್ರ ನಿಷ್ಪ್ರಭೆಯ ತಾಳ್ದತಿ ।
ಮೋದಕರಮಾರುತಂ ಸುಳಿವುದುಳಿದಂ ತುರಗನಾಗಾದಿಗಳ್ಗ್ರಾಸದ ।
ನೋದೆಯುಂಬಿಟ್ಟುವಂಗನೆಯರರ್ಭಕರಿಂಗೆ ।
ಸ್ವಾದುಸ್ತನ್ಯಗಳೀಯದೆಲ್ಲ ಶೋಕಾಕುಲಿತ ।
ರಾದುದೇ ನೆನವೇಳ್ಕು ರಾಮ ನಗರಮನುಳಿದು ಬನಕೈದುವವಸರದೊಳು ॥ (30)

ಮಾರುತಜವದಿಂ ತೇರು ಪುರವ ಪೊರಡಲ್ಕಿತ್ತ।
ನೆರೆದಜನರಂತಃಪುರಾಂಗನೆಯರಾ ನೃಪತಿ ।
ವೆರಸಿ ಭೋರೆಂದು ಕೂಗಲ್ ನಾದ ಮುಂಗಾರಸ್ತನಿತದಿಂದಲಿ ಪರ್ಬಲು ॥
ಜರನೆಂತೆ ಜಾನಪದ ಕಂಗೊಳಿಸಲರೆನಿಮಿಷ।
ಶರಿರಭಾರವನುಳಿದು ಚಿತ್ರಪುತ್ಥಳಿಗಳಂ।
ತಿರುತಲೆಚ್ಚತ್ತು ನಾಲ್ದೆಸೆಯ ನಿಟ್ಟಿಸಿ ಲೋಕ ಪಲುಬಿದರದೇವೇಳ್ವೆನು ॥ (31)

ಪತ್ತುದೆಸೆಗಳು ತಮಚ್ಛನ್ನವಾದವು ಕಂಪ।
ವೆತ್ತುದು ಧರಾತಳಂ ತಾರಾಗ್ರಹಂಗಳುಂ।
ಸುತ್ತಲೆಳಸಿದ ವಕ್ರಮಾನುಗತಿಯಿಂ ಬೀಸಿತೈಸೆ ಬಿರುಗಾಳಿ ಕೂಡೆ ॥
ತತ್ತರಂಗೊಳುತೆ ನಿಜಕೃತ್ಯಂಗಳುಳಿದು ರಥ।
ಮೆತ್ತ ಪೋದುದೆನುತ್ತಲರಸಿ ಕೊಂಡಖಿಲಜನ।
ಬಿತ್ತರದೊಳೈದಿದರ್ ನೆನೆವುತಲಿ ರಾಘವನ ಸಿರಿನಾಮವಂ ಬಿಡದಲೆ। (32)

ಪತಿಯು ನೋಡದಲೆ ಸುದತಿಯರು (ತರ್ಣಕರ್ಬಡುವ ?)।
ಖತಿಯು ನಿಟ್ಟಿಸಿದಲಾಹಾರ ಪಾನಾದಿಗಳ।
ರತಿಯುಳಿದು ಶ್ರೀರಾಮನೆತ್ತ ಪೋದನೆನುತ್ತಲರಸುತ್ತೈದಿದರು ಬಳಿಕ ॥
ಮತಿಗುಂದಿ ಮಾನವಂ ಗಣಿಸರರಸರ್ ವಿಪ್ರ।
ಪತಿಗಳಾಮಾರ್ಗವಂ ಪುಡುಕುತ್ತೈದಿದರಿತ್ತ।
ಕ್ಷಿತಿಪಾವರೋಧ ಮೊಂದುಳಿದು ನಿರ್ಜನವಾದುದಾ ನಗರಮಾದಿನದೊಳು। (33)

ತೇರೆ . . . ಗಿಸತೇನೆಂಬೆನತಿವೇಗದಿಂವಂಗ।
ಮಾರಣನ ಧಿಕ್ಕರಿಸುತೆಳೆಮಿಂಚಿನಂದದಿಂ।
ತೋರಗಮನದಿ ಪೋಗೆ ಜನರೆಲ್ಲ ನೋಡಿದರ್ ದಿಟ್ಟಿಗಳ ಪಾರುವನಿತ ॥
ದೂರಪಥಮಾಗಿ ಕಾಣಲ್ಬಾರದಿರಲರಸ।
ಹಾರಾಮ ಸೌಮಿತ್ರಿ ವೈದೇಹಿ ಯೆಂದೆನುತು ।
ದಾರದುಃಖಾಂಬುನಿಧಿಯೊಳ್ ಬೀಳು ವಂದದಿಂದೊರಗಿದಂ ಭೂತಳದೊಳು ॥ (34)

ಸೊರಗಿ ನೆಲಕೊರಗಿದರಸನ ನೋಡಿ ಕೌಸಲ್ಯೆ।
ಕರಲಾಘವನ್ನೀಯಲೆಡೆದಂಕದೊಳ್ ಬೇಗ।
ತುರಗಪತಿ ಯಶಾತ್ಮಭವೆ ಕೈಯ್ಯಾಯಲುಪಚರಿಸುತಂ ಬರೆ ಸುಮಿತ್ರೆ ನಯದಿ ॥
ಅರೆನಿಮಿಷವೆಚ್ಚತ್ತು ಬೆಚ್ಚುಸುರ್ಗಳ ಬಿಡುತ।
ತೆರೆದು ಕಂಗಳ ಕಕುಭಗಳ ನೋಡಿ ಕೋಪದಿಂ।
ಭರತಾಂಬಿಕಾಮುಖವ ಕಾಣುತಂ ಪಲ್ಮೊರೆದು ಜರೆದು ರೋಷಾವೇಶದಿ ॥ (35)

ಕುಲಗೆಡುಕಿ ಪಾಪಿಷ್ಠೆ ಕ್ರೂರೆ ಬಾಂಧವಿಯಲ್ಲ।
ಲಲನಾಕೃತಿಯ ದುಷ್ಟರಕ್ಕಸಿ ಭವತ್ಕರಂ।
ಕಲಿತಾಗ್ನಿಕಲ್ಪಮದರಿಂದೆಮ್ಮ ಸಂಸ್ಪೃಶಿಸಬೇಡ ಪಾಪಿಷ್ಠೆ ನೆಲವಂ ॥
ಗೆಲಿದೆ ಕೃತ್ರಿಮ ಬುದ್ಧಿವಿಡಿದು ಲೋಕವನೆಲ್ಲ।
ಕೊಲುವೊಡಿಚ್ಛೈಸಿದ ಮಹಾಪಾಪಿ ದೊರೆತನದಿ।
ನಿಲಿಸಿ ಸುತರಂ ಸುಖದಿ ಬಾಳೆಂದು ಗರ್ಜಿಸುತ ಧಿಕ್ಕರಿಸಿದಂ ಸತಿಯಸು ॥ (36)

ಎಂದನೇಕವಿಷಾದದಿಂದ ಸತಿಯನು ಜರೆದು ।
ಕಂದುತಲಿ ಪಾಂಸುಕುಂಠಿತ ಮೂರ್ಛೆಯಾಂತೆಸೆವ ।
ವೃಂದಾರಕೇಂದ್ರಾಪ್ತಪತಿಯು ನಿಟ್ಟುಸುತಾಗ ಕೌಸಲ್ಯೆ ಖಿನ್ನಳಾಗಿ ॥
ಚಂದದಿಂ ಪಿಡಿದೆತ್ತಿ ಸಂತೈಸಿ ನಯವಿನಯ ।
ದಿಂದ ವಿಜ್ಞಾಪಿಸಲ್ ನಿಟ್ಟುಸಿರ್ಗಳ ಬಿಡುತ।
ನಂದನಂ ಪೋದ ಮಾರ್ಗವ ನೋಡಿ ಮರುಗಿದಂ ಕಿಚ್ಚುಕಂಡೆರಳೆಯಂತೆ ॥ (37)

ಸುತ ವನವಿಹಾರಕ್ಕೈದಿದನೆಂದು ಪಂಕ್ತಿರಥ ।
ನತುಳಸಂಕಟದಿಂದ ನಿಜಸತಿಯೊಳಂತೆಂದ ।
ನತಿಶಯದ ಸೌಧಾಗ್ರದೊಳು ಹಂಸತೂಲಿಕಾತಲ್ಪದೊಳು ಮೃಗಮದಾದಿ ॥
ವಿತತ ಘುಮುಘುಮಿತ ಪರಿಮಳ ಪೂರಿತಾಂಗಿಯರ ।
ಸತತ ಕರಪಲ್ಲವದ ತಾಳವೃಂತಗಳಿಂದ ।
ಲತಿಶಯದ ಸೌಖ್ಯದಿಂ ಪವಡಿಸುವ ಭೂಪಾಲ ಬನದಲೆಂತಿರ್ಪನಕಟ ॥ (38)

ಮೃದುಳಶಯ್ಯೋಚಿತಸುಮೂರ್ತಿ ಪಾಷಾಣಾದಿ ।
ಹೃದಯದಾರುಣಶಯನದಿಂದೆಂತು ಸುಖಗೊಂಬ ।
ಚದುರೆಯರ ಕರಪಾಕ ಶಾಲ್ಯನ್ನ ಭೋಕ್ತೃಮಟವೀಪತ್ರ ಫಲಗಳಿಂದ ॥
ಉದರಭರಣಂಗೈವುದಾಯ್ತು ಪಾಪಿಷ್ಠೆ ಕೆ ।
ಟ್ಟಿದೆಗೈದು ಲೋಕವಿದ್ವಿಷ್ಟ ಕರ್ಮವ ನೆಪೆದೆ ।
ಮದಮುಖದಲೆಂದು ಕೈಕಾಸತಿಯ ಧಿಕ್ಕರಿಸಿ ನುಡಿವನಾ ಭೂಪಾಲನು ॥ (39)

ಕ್ರೂರಕಂಟಕಶರ್ಕರಾನ್ವಿತದ ಪದವಿಯೊಳು ।
ದಾರಕೋಮಲಪದದೊಳೆಂತು ಸಂಚರಿಸುವರು ।
ಘೋರತರಶ್ವಾಪದನಿನಾದಶ್ರವಣದೊಳೆಂತು ಧರಣಿಸುತೆ ಜೀವಿಸುವಳು ॥
ತೋರಕಷ್ಟಂ ನಿನ್ನ ದೆಸೆಯೊಳುದ್ಭವಿಸಿತೆಂ ।
ದೋರಂತೆ ಸತಿಯ ಧಿಕ್ಕೃತಿಗೈದು ರಾಘವನ ।
ಚಾರುಸದ್ಗುಣಗಳಂ ಸ್ಮರಿಸುತ್ತ ಪತ್ತನವ ಪೊಕ್ಕನಾ ಪಂಕ್ತಿರಥನು ॥ (40)

ಕರಿತುರಗಸಂಚರಣೆ ಕಾಲಾಳವಾದಗಳು ।
ಪರಿಪರಿಯ ಶೃಂಗಾರಕಲಿತಜನದಿಂ ಶೂನ್ಯ ।
ಪೆರೆದ ನಗರಿಯ ನೋಡಿ ಸಂಕಟಂಗೊಳುತ ಬಹುವಿಧದಿಂದ ಪಲುಬಿ ಮರುಗಿ ।
ಅರಮನೆಯ ಪೊಕ್ಕು ನಿಟ್ಟುಸುತ ಹವ್ಮ್ಯೈಸಿದಂ ।
ತರುಣನಂ ಕಾಣದಳಲುತ ನಿಮಿಷ ತಿರೆಗೊರಗಿ ।
ಮರಳಿ ನಿಟ್ಟುಸಿ ನೆರೆದ ಪರಿಜನದೊಳಂತೆಂದನಾ ಪಂಕ್ತಿರಥ ದೈನ್ಯದಿ ॥ (41)

ಇದುವೆ ಕಾಲಾಹಿನಿಲಯು ಮಕ್ಕಂಗಸಂತಪ್ತ ।
ಮಿದನುಳಿದು ಕೌಸಲ್ಯೆಯರಮನೆಗೆ ಕರೆದೊಯ್ದುದ ।
ರುದಿತಸಂತಸದಿಂದಲಿಹೆನೆಂದು ಬೇಳಲ್ಕೆ ಪರಿಜನರ್ ಜೀಯಯೆನುತ ॥
ಪದುಳದಿಂ ಕರದೊಯ್ದೊಡಲ್ಲಿ ಸುಖಶಯ್ಯೆಯೊಳ್ ।
ಬಧಿರ ಮೂಕಾಂಧತೆಯನಾಂತಂತೆ ನಾಲ್ದೆಸೆಯ ।
ನೆದುಭುತದಿ ನಿಟ್ಟುಸುತ ಸುತರ ನೆನೆದಂ ವಿವಿಧತರವಾದ ಗತಿಯ ಗುಣಿಸಿ ॥ (42)

ಉತುವ ಸುಳದಂಬರದ ತೆರದಲಿರಲಾಗಾರ ।
ಪೊಡವೀಶ ನೋಡಿ ಹವ್ಮೈಸಿ ಹಾ ರಾಮ ಯೆಂ ।
ದೊಡನೊಡನೆ ಕಡುಶೋಕದಿಂದ ಹಂಬಲಿಸುತಂ ಕೌಸಲ್ಯೆಯೊಡನೆಂದನು ॥
ತುಡುಕಿತಧಿಕವ್ಯಸನ ಶ್ರೀರಾಮ ಪುರದರಸ ।
ನೊಡನೆ ಗಮಿಸಿದ ದಿಟ್ಟಿ ಮನ ಮುಭಯವಿಕ್ಷಾವರೆಗೆ ।
ಕಡೆಗೆ ಬರಲಿಲ್ಲಬಲೆ ಯಾದರಿಂದ ಯೆನ್ನಂಗವಂ ಸ್ಪೃಶಿಸು ಕರದಲೆನುತ ॥ (43)

(ಸಂಧಿ 13, ಪದ 596.)

ಹದಿನಾಲ್ಕನೆಯ ಸಂಧಿ.

ಸೂಚನೆ ॥ ಧರಣಿಸುತೆ ಸೌಮಿತ್ರಿ ಸೂತ ಸಹ ರಾಘವಂ ।
ಹರುಷದಿಂದರುಗೆ ಗೋಮತಿಯೆಡೆಗೆ ಪುರಜನರ ।
ಪರಮದೈನ್ಯಾಪಹೃತಗೈದ ನಿಜತತ್ವೋಪದೇಶದಿಂ ವಾಮದೇವಂ ॥
ಹೈಮವತಿ ಕೇಳ್ ಪಂಕ್ತಿರಥ ಪುತ್ರನಂ ಸ್ಮರಿಸಿ ।
ಭ್ರಾಮಕಂಗೊಳುತ ಪಲುಬುತಿರಲ್ ಕೌಸಲ್ಯೆ ।
ಗಾ ಮಹತ್ತರವ್ಯಸನವುದುಭವಿಸಿ ರಾಮನಂ ತದ್ಗುಣಗಳನ್ನು ನೆನೆದು ॥
ಈ ಮಹೀಜನರ ಸಂಕಟಗೊಳಿಸಲೆಂದುದಿಸಿ ।
ಕಾಮಚಾರಿಣಿ ಯೆನಿಸಿ ಕಲಿತನವ ನಿರ್ವಹಿಸಿ ।
ತಾಮಸೀ ಕೈಕೆ ಯಿನಿತಂಗೈದಳೇನೆಂಬೆ ದುಷ್ಟಾಹಿಯಂತೆ ಗೃಹದಿ ॥ (1)
ಪರಮಧರ್ಮಸ್ವರೂಪಿಯು ರಾಮಚಂದ್ರನಂ ।
ಪೊರಮಡಿಸಿ ಕ್ರೂರಕುಂಭೀನಸದ ಮಾಳ್ಕೆಯೊಳ್ ।
ಪುರವ ನಿರ್ಜನಗೈದು ಸಂಪೂರ್ಣಕಾಮಳೆಂದೆನಿಸಿದಳು ಕೈಕೆಯೊಲಿದು ॥
ಸ್ಮರವಶದಿ ವರಮಿತ್ತು ಮರುಗಿ ಮಾಡುವುದೇನು ।
ಕರಿಶರಭಬೇರುಂಡಕಲಿತಕಾನನದೊಳಿಂ ।
ತಿರುವರೆನ್ನಾತ್ಮಜರದೃಷ್ಟ ಕಷ್ಟವೆನುತ್ತ ಪಲುಬಿದಳ್ ನೆನೆದು ನೆನೆದು ॥ (2)
ವನವಾಸವಂ ಕಳೆದು ವಾಸವೋಪಮರೆನಿಸಿ ।
ಘನಭೂಷಣಂಗಳನಲಂಕರಿಸಿ ರಥವೇರಿ ।
ಜನರ ಸಂತಸಗೊಳಸಲೈತಪ್ಪುದಂ ಕಾಣ್ಬೆನೆಂದಿಗತುಲಾನಂದದಿಂದ ॥
ವನಿಮನೆಯು ಮುಂಗಡೆಯುಲಾರತಿಗಳಂ ಪಿಡಿದು ।
ಮನದ ಹರುಷದ ಪುಷ್ಪಲಾಜೆಗಳ ತಳವ ಸ ।
ದ್ವನಿತೆಯುರ ಸುಸ್ವರಗಳಾನೆಂದಿಗೀಕ್ಷಿಪೆನೊ ತಾಳ್ದುವೆನೊ ಸಂಭ್ರಮವನು ॥ (3)
ಧರಿಸಿ ನಿಸ್ತ್ರಿಂಶಶರಚಾಪಗಳ ಸುಶ್ವೇತ ।
ಕರಿಯು ಮಸ್ತಕದಿ ಮಂಡಿಸಿ ಲೋಕ ನಾಲ್ದೆಸೆಯು ।
ಪರಿಪರಿಯು ತುತಿಘೋಷಗೈವುತಿರೆ ಪರ್ವಣಿಯೊಳುದಧಿ ಘೋರ್ಮರವೆಂದದಿ ॥
ವರಪತಾಕಾಧ್ವಜಂ ಕಳತಪನ್ನೀರಿಂದ ।
ಪರಿಮಳತ ವಿಪಣಿಗಳನಾಂತಯೋಧ್ಯಾನಗರ ।
ದಿರವನೆಂದಿಗೆ ಕಾಣ್ಬೆ ಹರುಷಮಂ ತಾಳ್ದುವೆನೆನುತ್ತ ಮರುಗಿದಳು ಪಲುಬಿ ॥ (4)

ಇಂತಪಾರಪ್ರಲಪಿತಂಗಳಂ ಕೌಸಲ್ಯೆ ।
ಚಿಂತಿಸುತ್ತಲಳುತಿರಲ್ಕಂಡಾ ಸುಮಿತ್ರೆ ತದ ।
ನಂತರದೊಳಂತೆಂದಳಸ್ಮತ್ಪರಂಪರೆಯ ರಾಜಧರ್ಮವನು ಬಿಡದೆ ॥
ಸಂತಸಂಗೊಳಸಲಖಿಲರ ತಾತನಾಜ್ಞೆಯಂ ।
ತಾಂ ತಳೆದಗಣ್ಯಜಸಮಂ ಗಳಸಲ್ಕೈದಿದ ಮ ।
ಹಾಂತ ರಾಮನ ನೆನೆದು ಮರುಗಲೇಂ ಕಾರಣಂ ಗಮನಸಂತಾಪಹರಣಂ ॥ (5)

ಪಿಂತೆ ಶಿಷ್ಯಾಚರಣೆವಿಡಿದು ಬನಕ್ಕೈದಲೋ ।
ರಂತೆ ಲಕ್ಷ್ಮಣ ಪದಾನುಗನೆನಿಸಿ ಸೇವಿಸುತ ।
ಸ್ವಾಂತಃಕರಣದಿಂದಲೈದಿರ್ದ ವೈದೇಹಿ ಸಾಧ್ವೀಮತವ ಮೀರದೆ ॥
ಸಂತಸವಲರುಗಿರ್ದಳದರಿಂದ ತ್ರಿಭುವನದಿ ।
ಗಂತವಿಶ್ರಾಂತ ಕೀರ್ತಿಯ ಗಳಿಸಿ ಪಿರಿಯನೃಪ ।
ಸಂತೆಗಾಧಿಕ್ಯ ಮಕುಟವನಿಡುವರತಿಶಯಕೆ ಮರುಗುವರೆ ಮಗುಳೆ ನೆನೆದು । (6)

ಪರಬಲಾರ್ದನ ರಾಮನಮಿತವಿಕ್ರಮ ಭೀಮ ।
ನುರುಬೆಯಂ ಬನದೊಳುಳ್ಳಖಿಳ ಪ್ರಾಣಿಗಳಿಲ್ಲ ।
ಚರರಂತೆ ಸೇವಿಸುವರಲ್ಲದಿತರಂಗೆಯ್ಯಲೊರ್ವಂಗೆ ಶಕ್ಯಮಲ್ಲ ॥
ತರಣಿ ಯುಷ್ಣವ ಬೀರ ಶಶಿ ಶೀತವನ್ನೆಸಗ ।
ಮರುತ ನುರುಬೆಯಗೆಯ್ಯದೆಲ್ಲರು ಯಥೋಚಿತದಿ ।
ಶರಣರೆನಿಸಿರ್ಪರದರಿಂ ಮಹಾಪುರುಷರಂ ನೆನೆದು ಚಿಂತಿಸಲೇತಕೆ ॥ (7)

ಪಗಲಿರುಳ್ಮೊದಲಪ್ಪ ಸರ್ವಭೂತಂಗಳುಂ ।
ನಿಗಮಾಗಮಾದಿ ವಾಗ್ಜಾಲಮೆಲ್ಲಂ ರಾಮ ।
ನೊಗುಮಿಗೆಯ ಬಗೆಯನನುಕರಿಸಿ ರಕ್ಷಿಪುವಲ್ಲದಿತರಮೇನುಂಟು ತಾಯೆ ॥
ಮಿಗೆ ಬಲೋದ್ಧತಿಯಿಂ ತಿಮಿಧ್ವಜನ ತನಯರಂ ।
ಬಗೆದಲ್ಲಿ ಮತ್ತಾವ ಶರಜಾಲ ಲಭಿಸಿರ್ದ ।
ವಗಣಿತ ಸುಖೋದಯಂಗಳತ್ತಪವು ಬನದಲಿರೆ ಮನೆಯಲಿರ್ದಂತೆ ಸಲುಮ ॥ (8)

ಕಲೆಗೆ ಕಲೆ ಬಲಕೆ ಬಲ ಸಾಹಸಕೆ ಸಾಹಸಂ ।
ಮುಳಿಸಿಂಗೆ ಮುಳಿಸು ಶಾಂತಿಗೆ ಶಾಂತಿ ಲೋಕದೊಳ್ ।
ಕಲಿತ ವಸ್ತುಗಳೊಳಗೆ ಪೆಗ್ಗಳಂ ರಘುವೀರ ತೃಣಕೆ ತೃಣ ಘನಕೆ ಘನವು ॥
ಫಲವಜಾಂಡಗಳ ನಿರ್ಮಿಸಿ ಪೋಷಣಂಗೈದು ।
ಕೊಲುವ ಚಾತುರ್ಯಧುರ್ಯನ ಮಾನುಷೋಪಮಿತ ।
ಕುಲಗೈದು ಶೋಕಿಸುವುದೇಂ ಪ್ರಯೋಜನ ತಿಳಿದು ನೋಡಿ ನಿಜತತ್ವವಿಡಿದು ॥ (9)

ತ್ರಿದಶಕುಲಂಗಳಂ ತಾಪಸಿಗಳಂ ಪೊರೆದು ।
ಜರದಹಿತ ಧರ್ಮಮಂ ಜಾಣ್ಮೆಯಿಂ ಮುಚ್ಚಿದರ ।
ಕರವಿಡಿದು ದಯಗೈದು ಸರ್ವಜನ ಸಂತೋಷಗೊಳುತ ಸನ್ನುತಿಗೈವ್ರೊಲು ॥
ನಿರತಿಶಯರಥವೇರಿ ಧರಣಿಜಾತೆ ಸಮೇತ ।
ಬರುವ ರಘುವರನ ಜವದಿಂ ಕಾಣ್ಬೆ ಶೋಕಕವ ।
ಸರಮಲ್ಲ ಚರಣಕೆರಗುವೆ ಕ್ಲೇಶಮಂ ಬಿಟ್ಟು ಶುಭವ ಚಿಂತಿಪುದು ತಾಯೆ ॥ (10)

ಅಮಿತವಿಭವಂಗಳಿಂದೈತಂದು ಮೃದುಲಪದ ।
ಕಮಲಂಗಳಗೆ ಮಣಿವ ಸುತರ ನಿಟ್ಟಿಸುತಲಾ ।
ಕ್ರಮದಿಂದಲಪ್ಪಿ ಮಸ್ತಕವನಾಘ್ರಾಣಿಸುತಲಾನಂದಕಂಬನಿಗಳ ॥
ವಿಮಲೋದಕಂಗಳಂ ಧರಣಿಯುಂ ಪ್ರಿಯಗೊಳಿಪ ।
ಸುಮನಸತೆಯುಂ ಬೇಗ ತೋರ್ಪುದೆಂದಾತ್ಮೀಯ ।
ವಿಮಲ ಬುದ್ಧಿಯೊಳು ಸಂತೈಸಿದಳು ಕೌಸಲ್ಯೆಯನು ಸುಮಿತ್ರೆಯು ವಿನಯದಿ ॥ (11)

ಇಂತರಮನೆಯೊಳಮಿತಸಂತಸದೊಳಿರಲತ್ತ ।
ಮುಂತಕ್ಕೈದುವ ರಾಮಚಂದ್ರಮನ ದಿವ್ಯರಥ ।
ಪಂಕ್ತಿಯಂ ಬಿಡದೆ ಬೆಂಬೊತ್ತಿ ಪೋಗುತ್ತಲಖಿಳಲೋಕಮಾಪ್ರಿಯಗುಣಗಳ ॥
ಸಂತೆಯನ್ನುಚ್ಚರಿಸುತಡಿಗಡಿಗೆ ನುತಿಗೈವ ।
ತಂತನಂತಸುಖಾಸ್ಪದಂಗಳಾಂತಂತಖಿಳ ।
ಜಂತುಗಳನಿಚೆಯ ಪೋಪುದ ಪೇಳ್ವೆನೇಂ ಭೂಮಿ ಬೆಸಲಾವ ಮಾಳ್ಕೆಯೊಳಗೆ ॥ (12)

ಬರುವಖಿಳಪ್ರಜೆಯ ನೋಡುತ ರಾಮನಿಂತೆಂದ ।
ಭರತಗೀರಾಜ್ಯ ಪಾಲನೆಯ ನೇಮಿಸಿ ನಿಂಮ ।
ಪೊರೆಯಲೇದಿತ್ತ ಬರೆಬೆಸನ ಸದ್ಗುಣವಂತ ಚಿಂತಿತಾರ್ಥದಾತನು ॥
ನರರೊಳಗಗ್ಗಳನಾಕುಮಾರನೊಳ್ ಸಂಪ್ರಿಯವ ।
ನರಸಿ ಭಾವಿಸಲೆಲ್ಲರುಂ ಯಥೋಚಿತಮಾಗಿ ।
ಕರುಣಿಸುವಮೃದುದಾಂತ ದಯವಂತನೀ ಪ್ರಜಾಪರಿಪಾಲನ ಸ್ವಾಂತನು । (13)

ಯುವರಾಜನಾಗಿರ್ಪ ಯುಕ್ತಸದ್ಗುಣಗಳಂ
ದವರವರ ವಿಧಮರಿತು ಸಂರಕ್ಷಣಂ ಗೈವ ।
ಕುವರರೊಳಗೆಲ್ಲರಂ ಪ್ರಿಯಮಿಃಟ್ಟು ನಿಟ್ಟಿಸಿದರುಭಯ ಲಾಭಂಲಭಿಪವು ॥
ಸುವಿವೇಕಮುಳ್ಳರೀ ಪ್ರಜೆ ಭೂಪನಾಜ್ಞೆಯಂ ॥
ಜವೆಯಂತೆ ಮೀರದನುವರ್ತಿಸುವರೆಂದಖಿಳ ।
ಭುವನದೊಳ್ಸತ್ಕೀರ್ತಿ ಧರ್ಮಾನುಸರಗಳವು ಕ್ಷಣದಿ ಕೈವಶ ಮಪ್ಪವು ॥ (14)

ಎಂದೆನುತ ವಿನಯೋಪಚಿತ ಮೃದುಲತರವಾಕ್ಯ ।
ದಿಂದಖಿಲಪ್ರಜೆಗಳಂ ಸಂತೈಸುತ್ತೈದುತಿರೆ ।
ಪಿಂದಿರುಗಲೊರ್ವರಿಗೆ ಮನಸಿಲ್ಲವಾದುದಾ ಸದ್ಗುಣಶ್ರೇಣಿಯೊಳಗೆ ॥
ಪೊಂದಿ ಪೊರಸೂಸದಿರೆ ಪರವಶತೆಯಿಂದಲಾ ।
ನಂದಾಶ್ರು ಕುಡಿವರಿವುತೆಲ್ಲರೈತರೆ ವಿಪ್ರ ।
ವೃಂದ ಮುತ್ತೆರದರರುಗಲತಿ ಶಕ್ಯಮಾಗದಿರಲುಸುರಿದರ್ಬಹುವಿಧದಲಿ ॥ ? (15)

ಆರಟ್ಟಜಗಳ್ ಜಾತ್ಯಾಧಿಕಗಳನುಪದದಿ ।
ತೋರಲಘುಪದದಿಂ ಶತಾಂಗಮಂ ನಡೆಸದತಿ ।
ಘೋರಕಂಟಕಿತಪಂಥಾನ ದುರ್ಗಮವೆಮಗೆ ಬಾಲತಾರುಣ್ಯತತಿಗೆ ॥
ಆರಯ್ಯಲೀ ರಾಮ ಬ್ರಾಹ್ಮಣ್ಯನೆದರಿಂದ ।
ಭೂರಿಬ್ರಾಹ್ಮಣ್ಯಮನುಸರಿಸಿ ಬಪ್ಪುದು ಕೃಪೋ ।
ದಾರತೆಯಲೆಮ್ಮ ಪಾಲಿಪುದೆಂದು ಪ್ರಾರ್ಥಿಸಿದರಶ್ವಗಳನಾವಿಪ್ರರು । (16)

ಎನುತಮಿತ ವಿಪ್ರಸಂತತಿ ಪಿಂತೆ ಭೋರ್ವೊಱೆವ।
ದನುಕೇಳ ರಾಮ ರಥದಿಂದಿಳಿದು ಕಾಲ್ನಡೆಯ।
ನನುಮತಿಸಿ ನಡೆವುತಿರಲನಿತರೊಳ್ವಿಪ್ರತತಿ ಜವದಿಂದಲೈದಿ ಮುಂದದಿ।
ವನಜಾಕ್ಷರಾಮ ಲಾಲಿಪುದೆಮ್ಮ ನುಡಿಯನೀಂ।
ಮನುಜೇಶನತಿದಯಾವಂತನಾರ್ತಸ್ವಾಂತ।
ವಿನಯದಿಂದಖಿಳರಂ ರಕ್ಷಿಸುವ ನಿಶ್ಚಿಂತ ಸದ್ಗುಣನಿಶಾಂತನಲ್ತೆ ॥ (17)

ಫಲಿತ ಮಸ್ತಕರಾವು ತರುಣಜ್ಞಾನಾಧಿಕರು।
ಕುಲವಂತರೆಲ್ಲ ಭವದೀಯ ಸದ್ಗುಣಗಳಂ।
ಕಲಿತವಾಗುತ ನಿಳಯಗಳನುಳಿದು ಬಂದಿರ್ಪೆವೆಮ್ಮ ಬೆಗಲೇರಿ ಬಿಡದೆ ॥
ಸುಲಭಮಲ್ಲದ ಕ್ರತುಲಿಹಂ ಬರ್ಪ ಹಿಂಗಡೆಯು।
ಚೆಲುವಶ್ವೇತಾತಪತ್ರಗಳ ಖಾತಮಿದರಿಂದ।
ಲಲಿತಸುಚ್ಛಾಯಗೈದಪೆವೆಂದು ಬಿನ್ನಪವ ಕೈಗೊಂಬುದೀಗಲೊಲಿದು ॥ (18)

ಭವದೀಯಗುಣರಜ್ಜುವೆಮ್ಮ ಬಂಧಿಸಿಸೆಳೆದ।
ವವತಿರಸ್ಕರಿಸಲಳವಲ್ಲ ಸಂಗಡಬರ್ಪ।
ರವಧರಿಸು ಸುಚರಿತ್ರಯಗೃಹದಲಿಹರವರನುಳಿದು ಬರ್ಪುದನುಚಿತಂ।
ನವನವಕಯಾಗ ಸಂತರ್ಪಣೆಯ ಫಲಗಳುಂ।
ಭುವನಾಧಿಪತ್ಯ ಕೋಸುಗಕೈದಿ ವಿರಚಿಸಿದೆ।
ವವಿರಳದೊಳದರಿಂದೆ ಪಿಂತಿರುಗಿ ಪಾಲಿಪುದು ನಿಖಿಲಭೂದೇವತತಿಯ। (19)

ನಿಗಮೋದಿತ ವಿಧಿಗಳೆಲ್ಲ ಬಾಹುಜರಿಂದ।
ಮಿಗೆ ಫಲಿತ್ರಮಪ್ಪುದದಱಿಂದೆಮ್ಮ ಕರ್ಮಗಳ।
ಸೊಗಯಿಸುವಸುಫಲ ಗೈವೊಡೆ ಯೌವರಾಜ್ಯಮಂ - ಕೈಕೊಂಡುನಗರದೊಳಗೆ ॥
ಸೊಗಸಿಂದ ರಾಜ್ಯಪರಿಪಾಲನೆಂಗೈವುತಿರ।
ಲಗಣಿತಾಧ್ವರಗಳಂ ಹರುಷದಿಂದಂ ಗೈದು।
ಮಿಗೆ ಸುರರ ಸಂತೋಷಗೊಳಿಸುವೆವು ನಿಮ್ಮಳಿದೊಡೆಂತು ಸುಖಕೈಸಾರ್ವುದು ॥

ತೊಳಲುತಿವೆ ಮೃಗ ಪಕ್ಷಿ ಕೀಟ ಸ್ಥಾವರಗಳುಂ। [(20)
ಬಳಲುತ ಪ್ರತಿಧ್ವನಿಗಳೀವುತಂ ಗುಣಗಣಗ।
ಳೊಳುಮಗ್ನವೆಂದೆನಿಸಿ ಕ್ಲೇಶಗೊಳುತಿವೆ ಸರ್ವಭೂತಾನುಕಂಪಿಯಲ್ತೆ ॥
ಬಳಲಿಸದೆ ಜಂಗಮಾಜಂಗಮಗಳಂ ಕೃಪೆಯ।
ಉಳಿದು ಕೀರ್ತ್ಯಂಗನೆಯ ಕರವಿಡಿದು ಗೋದ್ವಿಜರ।
ಕುಲವ ರಕ್ಷಿಸವೇಳ್ಕುಮೆನುತ ನಾಲ್ದೆಸೆಯವರುಂ ಯಾಚಿಸಿದರಖಿಳ ಜನರು ॥ (21)

ಭೂದಿವಿಜನುಡಿ ಸತ್ಯಮೆನಿಸುವೊಡೆ ಸುಜ್ಞಾನ।
ಬೋಧಿತದ ಧರ್ಮಮದನುಳ್ಲಾದ್ತ ನೀನಲ್ತೆ।
ಭೇದಿಸಜಲಿನಿಸು ಜನಮಾನಸಗಳಂ ಕೃಪಾದೃಷ್ಟಿಯಲಿ ನೋಳ್ಪುದೆನುತ ॥
ಮೋದದಿಂ ನಿಜಬಲಸಮೇತ ಪಡಿಬಲಕೆಂದು।
ಹಾದಿಗಡ್ಡೈಸಿ ನಿಂದಂತೆ ಭೋರ್ವೊರೆವುತವಿ।
ನೋದದಿಂ ಕಂಗೆಸೆಯ ಸೌಮಿತ್ರಿ ವೈದೇಹಿಯರೊಳೆಂದ ರಘುನಾಥನು ॥ (22)

ಮುಂಬರಿದುಬರ್ಪ ಕೆಮ್ಮೀನ್ಗಳಂ ಸೊಲ್ಗಳಂ ।
ತುಂಬಿ ಬೆಂಬಿಡದೆ ಬಹನೊರೆಗಳಂ ತೆರೆಗಳಂ ।
ಡೊಂಬಿಗೈದಲ್ಲಲ್ಲಿದನಿಗೈವ ಕಾರಂಡಚಕ್ರದಿಂ ನಕ್ರದಿಂದ ॥
ಶಂಬರಾಹಿತ ಶಿಲೀಮುಖ ನಿಲಯಮೆನೆ ವೇಣಿ ।
ಸಂಭ್ರಮಿತ ಮಾಗಿ ತೋರುವುದಿಂದು ಸುಖವಸತಿ ।
ಗೊಂಬೆನುತಾಜ್ಞಾಪಿಸಲ್ಕಾ ಸುಮಂತ್ರ ನಿಜರಥದಶ್ವಗಳನು ಪಿಡಿದು ॥ (23)

ಸೂರಿಯನ ರಥದಶ್ವಮೈದೆ ಮೇರುವಿನತ್ತ ।
ಪಾರುವವು ನಮಿಸುವೊಡೆ ಶುಚಿಗೈದು ಕಳುಪುವುದು
ದಾರ ಜಲದಿಂದ ಮೈದೊಳೆದು ತಣ್ಣೀರ್ಗುಡಿಸಿ ಕರಗಳಂ ನೇವರಿಸುತ ।
ತೀರದೊಳ್ಚರಿಪಂತೆ ರಶ್ಮಿಗಳ ಬಲಿದು ಸಂ ।
ಚಾರಗೈಸಿದನಿತ್ತ ರಘುವೀರ ಲಕ್ಷ್ಮಣನ ।
ಚಾರು ವಚನದಿ ಕರವುತಿಂತೆಂದ ನೆಲೆವತ್ತು ಪೂರ್ವದಿನಮಿಂದಿನಿರುಳು ॥ (24)

ವನವಾಸಕಿದು ಮೊದಲ್ದಿನವಾದ ಕಾರಣಂ ।
ಮನಮದುತ್ಕಂಠತೆಯೊಳದೆ ನೋಡುಕಾನನಂ ।
ಜನಿತದುಃಖೋನ್ಮುಖದಿ ಬರುತಿವೆ ನಿಲಾಯಕಂ ಮೃಗಪಕ್ಷಿಗಳ್ಬೇಗದಿ ।
ಜನಶೂನ್ಯ ಸ್ತ್ರೀ ಬಾಲರಮಿತ ಮಾಯೋಧ್ಯವು ।
ಜ್ಜನನಿ ಜನಕಾದಿಗಳ್ನೆನೆನೆದು ಮರುಗುತಿಹ ।
ರನುಪದದಿ ಭರತ ಧಾರ್ಮಿಕ ಶಿಖಾಮಣಿಯುವರನಾಶ್ವಾಸಗೈವ ಬಿಡದೆ ॥ (25)

ಇಂದಿನಿರುಳಾವು ಮರೆದುಮಲಗಲನುಚಿತ ಭಯಾ ।
ಕ್ರಂದಮೀ ಸ್ಥಳ ಮೆಚ್ಚಗಿಂದರಲ್ವೇಳ್ಕುಮಿಂ ।
ತೆಂದು ಸೌಮಿತ್ರಿಯೊಳ್ಪೇಳಿ ಸೂತನೊಳಿಂದ ರಾಮನತಿವಿನಯದಿಂದ ॥
ಸಂದೆಗವನುಳಿದು ರಥವಾಜಿಗಳ ನೆಚ್ಚರೊ ।
ಳ್ಪೊಂದಿ ರಕ್ಷಿಸುವುದೀದಿನ ಮುದಕದಾಹಾರ ।
ದಿಂದ ಕಳೆದಪೆವೆಂದು ಪ್ರಿಯದಿಪಲ್ಲವಶಯ್ಯೆಗೈದಿದಂ ರಘುನಾಥನು ॥ (26)

ಜಗದೀಶನಾದೊಡಂ ಪ್ರಾರಬ್ಧಮಂ ಮೀರೆ ।
ಜಗತಿಗತಿದುಷ್ಕರಮೆನುತ್ತ ತೋರಿಸುವಂತೆ ।
ಸೊಗಯಿಸುವ ಮೃದುಶಯ್ಯೆಮುಳಿದು ಯೆಲೆವಾಸಿಕೆಯೊಳೊರಗಿ ನೀರಾಹಾರಮಂ ॥
ಮಿಗೆಕೊಂಡನೇನೆಂಬೆನುಳಿದಮಾನವಜನರ ।
ಬಗೆಯು ವಿಧಿಕೃತವ ಮೀರಲ್ಕಕ್ಕುಮೇಯೆನುತ ।
ಲೊಗುಮಿಗೆಯ ಮರುಕದಿಂ ಸೂತ ಸೌಮಿತ್ರಿಗಳ್ಕಾಯ್ದಿರ್ದರೆಡಬಲದೊಳು ॥ (27)

ಉದಪಾನದಿಂದ ಕಿಸಲಯತಳ್ಪದೊಳ್ತನ್ನ ।
ಸುದತಿಸಹ ಶ್ರೀರಾಮ ನೊಪ್ಪಿರಲ್ ಲಕ್ಷ್ಮಣಂ ।
ಹೃದಯದನುತಾಪದಿಂ ಸೂತನೊಡನಿಂತೆಂದನೀರಾಜಮೌಳಿಗಿನಿತು ॥
ಕದಲಿ ಕೈಕಾಮಾತದೊಳಾಯ್ತೆಂದು ಧಿಕ್ಕರಿಸಿ ।
ಸದಯರಾಘವನ ಸದ್ಗುಣಗಳಂ ಪೊಗಳುತ್ತ ।
ವಿಧುವಸ್ತಮಿಸುವನ್ನಮತಿ ಜಾಗ್ರತೆಯೊಳಿರ್ದರಂದಿನಿರುಳೇ ವೇಳ್ಪೆನು ॥ (28)

ಅನಿತರೊಳು ರಾಮಗೆಚ್ಚರಾತೋರಲೆಚ್ಚೆತ್ತು ।
ಯಿನನುದಿಪದೆಸೆಯು ನಿಟ್ಟಿಸಿ ಕರೆದು ಲಕ್ಷ್ಮಣನ ।
ವಿನಯದಿಂದೊರೆದನೆಪ್ಪೊಡನೆ ಸ್ತ್ರೀಪುಂಸಾದಿಸರ್ವಜನಮೂರನುಳಿದು ॥
ಬನಕೆ ಬಂದಲ್ಲಲ್ಲಿ ಘನತ್ರುಹಿನಬಾಧೆಯೊಳು ।
ಕನಲುತೆದೆಗೆದೆಗೊರಸಿಕೊಂಡಿರ್ಪುದಂ ನೋಡು ।
ಜನಪ ಜನನಿಯರಿಂದಿಗಂ ನೆನೆದು ಶೋಕಿಸುವರತುಲಸಂತಾಪದಿಂದೆ ॥ (29)

ಪಾರವಿಲ್ಲದದುಃಖಮಡಸಿ ಪಿತೃಮಾತೃಗ ।
ಳೋತ್ರೀರಸಂಕ್ಲೇಶದಿಂ ಕಂಬನಿಗಳಂ ಕರೆದು ।
ದಾರಕಾರ್ಶ್ಯತೆಯಾಂತು ಜಡೆರಂಧರಂತಿರ್ಪರಾಗಳುಂ ಧರ್ಮವಿಡಿದು ॥
ಪಾರಮಾರ್ಥಿಕ ನುಡಿಯುಲುಪಚರಿಸುವಂ ಭರತ ।
ಕಾರುಣ್ಯಮುಳ್ಳಾತ ನುದಿಸೆ ಭಾಸ್ಕರ ಜನರ ।
ಪಾರಕೋಟಲೆ ಗೊಳಪರದರಿಂದಲಾವು ತೆರಳವೇಳ್ಕೃಸೆ ಮುದದಿ ತನಯ ॥(30)

ಎಂದಾಜ್ಞೆಯಂ ಕೊಡಲು ಸೌಮಿತ್ರಿಯಿದು ಸಹಜ ।
ಮೆಂದಾ ಸುಮಂತ್ರನಂ ಕರೆದಣ್ಣ ಪೇಳ್ದಂತೆ ।
ಕುಂದದರುಪಲ್ ಪೋಗಲೈದಿರಥದಶ್ವಗಳ ಪೂಡಿ ಸಂತೈಸಿ ಬಂದು ॥
ಇಂದೀವರಾಕ್ಷ ರಾಮಂಗರುಪೆ ನಸುನಗುತ ।
ಲಂದು ಸೌಮಿತ್ರಿ ವೈದೇಹಿಸಹ ರಥವೇರಿ ।
ಚಂದದಿಂ ತಮಸಾತರಂಗಿಣಿಯನುತ್ತರಿಸಿ ಪಥವಿಡಿದು ರಘುವೀರನು ॥ (31)

ಜನರಟ್ಟುಳಿಯನುಳಿಯೆ ರಥಮುದಙ್ಮುಖವಾಗಿ ।
ಸ್ವನಗೆಯ್ಯದೈದಿ ಪಿಂದಿರುಗಿ ಮತ್ತಾಮುಖವ ।
ನನುಸರಿಸಲೆಂದೊರೆಯಲಾಸೂತನಶ್ವಗಳನಪ್ಪಳಿಸಲಮ್ಮದದೊಳು ॥
ಅನಿಲವೇಗದೊಳೈದಲಪರಿಮಿತ ಯೋಜನಗ ।
ಳನು ಕಾಣ್ಬರತುಲ ದುರ್ಲಭಮಾಯಿತಾಕ್ಷಣದೊ ।
ಳನುಜನೊಡನತಿಹಾಸಮೆಸಗುತಾರಾಮಮಂ ನಿಟ್ಟಿಸುತ ರಾಮ ನಡೆದಂ ॥ (32)

ಉದಿಸೆ ಭಾಸ್ಕರನನಿತರೊಳ್ ಲೋಕಮೆಚ್ಚೆತ್ತು ।
ಸದಯರಾಮನ ಕಾಣದಲ್ಲಲ್ಲಿ ನೋಡಿ ನಿಜ ।
ವದನಂಗಳಾರಲತಿಶೋಕದಿಂ ಭೋರ್ಮೊರೆವರಖಿಲ ದಿಕ್ತಟಮೊದರ್ವೊಲು ॥
ಪುದಿದ ನಿದ್ರೆಯು ತಮಸ್ಸೆಂಬ ಸಂಕ್ಲೇಶದುರು ।
ಮದಗೊಳಸಿತೆಮ್ಮ ದುರ್ಬುದ್ಧಿಯಂ ಸುಡಲೆಂದು ।
ಗದುಗದಸ್ವನದಿಂದ ಮರುಗುತ್ತ ಗುಣಗಳನ್ನುಘ್ಘಡಿಸಲನುಗೈದರು ॥ (33)

ಎಲ್ಲಿ ಪೋದಂ ಸರ್ವಜೀವಾನುಕಂಪಿ ಮ ।
ತ್ತೆಲ್ಲಿಗೈದಿದ ಪೃಥೂರಸ್ಕಂ ಮಹಾಭುಜಂ ।
ಎಲ್ಲಿಗೈದಿದ ಭಕ್ತಜನರನುಳಿದೇಕಾಂತದೇಶಮಾವೆಡೆಯೊಳಹುದು ॥
ಎಲ್ಲಜನರಂ ಪುತ್ರರಂತೆ ತಿಳಿದನವರತ ।
ಸಲ್ಲಾಪ ಸೌಖ್ಯದಿಂ ಪಾಲಿಸುವ ರಘುವೀರ ।
ನೆಲ್ಲಿ ಪೋದನೆನುತ್ತ ಕಾನನದೊಳರಸುತ್ತ ಮರುಗಿದರ್ನಿಖಿಳ ಜನರು ॥ (34)

ಸಿರಿಯೆ ನಿಧನಂ ಮಹಾಪ್ರಸ್ಥಾನಭದ್ರಕರ ।
ಭರಿತಮಾಗಿದೆ ಶುಷ್ಕಕಾಷ್ಠಂಗಳಪರಿಮಿತ ।
ತ್ವರಿತದಿಂ ಚಿತೆಗೈದು ಕ್ರತುಭುಜನ ಸಂಸ್ಥಾಪನಂಗೈದು ಸರ್ವಜನರು ॥
ಭರದಲುರಿಯಂ ಪೊಕ್ಕು ತೆರನೆಸುತ ಶೋಕಸಂ ।
ಭರಿತ ಬಹುವಿಧಪ್ರಲಾಪಂಗೈವಜನರನೇ ।
ನೊರೆವೆ ಪೆತ್ತವರ ಸಂಕಟವ ಬಣ್ಣಿಪರೆಂತು ಮಾನವರಿಗಳವಕ್ಕುಮೇ ॥ (35)

ಎಂದು ವಿವಿಧ ಪ್ರಲಾಪದಿಂದಖಿಳಜನ ಹಿಂದು ।
ಮುಂದರಿಯದುನ್ಮತ್ತದತುಲಪ್ರಲಾಪಗಳ ।
ಕುಂದದೆಸಗುತ ಶತಾಂಗಂ ಪೋದ ಮಾರ್ಗದೊಳ್ ಪೋಗಿ ಪಿಂದಿರುಗಿ ಬಳಲಿ ॥
ಕಂದಿದಾನನದಿಂದ ತಮ್ಮ ತಾವು ಧಿಕ್ಕರಿಸು ।
ತೊಂದನೆಣಿಸದೆ ಮೃತೋಪಮರಾಗಿ ನಗರಕಂ ।
ಬಂದರಂದಿನದಿನದ ಕ್ಲೇಶಮಂ ಬಣ್ಣಿಪೊಡೆ ಫಣಿರಾಜಗಂ ಸಾಧ್ಯಮೆ ॥ (36)

ಶಶಿಯಿಲ್ಲದಾಗಸಂ ನೀರುಳದ ಕಾಸಾರ ।
ದೆಸಕವಂ ತಾಳ್ದ ನಗರಿಯು ಪೊಕ್ಕು ಸರ್ವಜನ ।
ಪೊಸತೆನಿಪ ಗೃಹರತ್ನ ಸ್ತ್ರೀಬಾಲರಂ ನೋಡದಲ್ಲಲ್ಲಿ ದುಗುಡದಿಂದೆ ॥
ಮಿಸುಪ ಕರುಮಾಡಗಳ ವಿಪಣಿವೀಥಿಗಳಲ್ಲಿ ।
ದೆಸೆದೆಸೆಯು ನಿಟ್ಟಿಸುತೆ ರಾಘವನ ಗುಣಗಳಂ ।
ಪಸರಿಸುತ ಪಲುಬುತಿರಲನಿತರೊಳಗೈತಂದ ವಾಮದೇವಂ ಮುದದೊಳು ॥ (37)

ನೋಡುತಾ ವಿಪ್ರಸಭೆಯಂ ಮಿಸುಪ ಹಾಸದಿಂ ।
ಕೂಡಿರುವ ಮೃದುನುಡಿಗಳಿಂದೆಂದ ದುಗುಡದೊಳ ।
ಗಾಡಿರುವಿರಖಿಳಾಗಮಜ್ಞರುಂ ಚೋದ್ಯಮಹುದೇನು ಮಾನಸಕೀಗಳ್ ।
ಆಡವೇಳ್ಕುಮೆನುತ್ತಲೆಸೆ ಸಭಾಸದರೆಲ್ಲ ।
ನೋಡಿ ಋಷಿಗಂ ಪೇಳ್ದರೈಯ್ಯ ಶ್ರೀರಾಮನೀ ।
ನಾಡುಳಿದು ಬನಕೈದಲೆಮಗಾದುದತಿಕ್ಲೇಶಮೆನಲಾಗ ಯತಿ ನುಡಿದನು ॥ (38)

ಪರತರ ಪರಾತ್ಪರಂ ಪಾವನಕೆ ಪಾವನಂ ।
ನಿರತಿಶಯನಿರಘ ನಿತ್ಯಾನಂದ ನಿರ್ಲೇಪ ।
ಪರಮಕಾರುಣಿಕ ಪರಬೊಮ್ಮನೀ ಲೋಕಮಂ ಪೊರೆವೊಡೆ ಪ್ರತಿಜ್ಞೆಗೈದು ॥
ಧರಣಿಯೊಳಗವತರಿಸಿ ದುರುಳರಂ ಸಂಹರಿಸಿ ।
ನಿರುತ ಭಜಿಸುವರಿಷ್ಟಮನ್ನೀಯಲೋಸುಗಂ ।
ನರನೆನಿಸಿ ಸಂಚರಿಪನಾಮಹಾಮಹಿಮೆಯಂ ತಿಳಿದನಿತ ವಿಸ್ತರಿಪೆನು ॥ (39)

ಪಿಂತೆ ತಮನೆಂಬಸುರ ದುರ್ಮೇಧೆಯಿಂ ವೇದ ।
ಸಂತತಿಗಳಂ ಕಳ್ದು ನೀರಧಿಯೊಳಂ ಪುಗಲ್ ।
ಚಿಂತಿಸುತಮನುಮತಿಸಿ ಪ್ರಾರ್ಥಿಸಲ್ಕಾತನಿಗೆ ಮೀನರೂಪವನೆ ತಾಳ್ದು ।
ಕುಂತಿಲ್ಲದಲೆ ಪ್ರಸನ್ನತೆ ವೆತ್ತು ದಾನವನ ।
ತಾಂ ತಲೆಯ ತರಿದು ನಿಗಮಂಗಳಂ ಕೈಗಿತ್ತು ।
ಸಂತೋಷಗೊಳಿಸಿದಂ ಬ್ರಹ್ಮಾದಿಸುರರೆಲ್ಲ ಮಣಿದು ಭುಲ್ಲವಿಸುವಂತೆ ॥ (40)

ಮರಣಬಾಧೆಯು ನೀಗುತಮರತ್ವಮಂ ಪಡೆಯೆ ।
ಗುರುವಿಶಸುಮತಿಯಿಂದ ಗಿರಿಯಸುದಧಿಯೊಳಿಟ್ಟು ।
ಉರಗನಂ ನೇಣ್ಗೈದು ಕಡೆವುತಲೆ ಕೈಬಿಡಲ್ ಶೈಲ ಪಾತಾಳಕಿಳಿಯೆ ॥
ಪರಮಕೃಪೆಯಿಂ ಕಮಠನಾಗಿ ಬೆನ್ನೊಳ್ ಪೊತ್ತು ।
ಕರದಮೃತವನ್ನೆರೆದು ತರಿದಸುರಸಂತತಿಯು ।
ಪೊರೆದ ಬಿಡುಗಣ್ಣವರ ಸಾಮಹಾಮಹಿಮನೀ ರಾಮಚಂದ್ರಂ ನಿಜ ಕಣಾ ॥ (41)

ಸೊಕ್ಕಿದತಿಬಲದಿಂದ ಭೂಮಿಯಂ ಕಂಕುಳೊಳ ।
ಗಿಕ್ಕಿ ಬಲಿ ಸದ್ಮಕೈದಿದ ಹೇಮಲೋಚನನ ।
ಕುಕ್ಕಿರಿಯುಲೋಸುಗಂ ಕ್ರೋಡರೂಪವನಾಂತು ಕಡಿದಿಟ್ಟು ದೈತೇಯನ ॥
ಸೊಕ್ಕ ದಾಡೆಯ ಕೊನೆಯಲೀ ತಿರೆಯನಮರತತಿ ।
ಯುಕ್ಕುವಾನಂದದಿಂ ನಿಗಮಾಗಮಂಗಳಗೆ ।
ಸಿಕ್ಕದತಿಶಯನೆಂಮ ನುತಿಗೈವ್ರೊಲೆಸಗಿದವ ರಘುವೀರನೀತನು ಕಣಾ ॥ (42)

ಅಗಣಿತದ ತಪದಿಂದಲಾರ್ಜಿಸಿದ ಬಾಹುಬಲ ।
ದೊಗುಮಿಗೆಯ ಸತ್ವದಿಂದಖಿಳದೇವತೆಗಳಂ ।
ಜಗತಿಯೊಳಗಿಲ್ಲೆನಿಸಿ ಮುಮ್ಮೂರ್ತಿಗಳ ತಾತ ತಾನೆಂದು ವೈರಗೆಯ್ಯೆ ॥
ಮುಗುವು ಕರೆಯಲ್ ಕೂಭದಿಂದೊಡೆದು ದಾನವನ ।
ಬಗಿದಿಟ್ಟು ನಿಜಮಹಿಮೆಯಂ ತೋರ್ದ ಕರುಣಾಳು ।
ನಿಗಮಗೋಚರ ನೃಕೇಸರಿ ಜಗತ್ಪೂಜ್ಯನೀ ರಾಮಚಂದ್ರಂ ಕಣಾ ॥ (43)

ಸೆಳೆದು ಸುರರಾಜನೈಶ್ವರ್ಯಮಂ ದೇವತೆಗ ।
ಳೊಳಗೊರ್ವರಿಲ್ಲದಂ ತಟ್ಟಿಬಲಿಯುಪಟಳ ।
ಕ್ಕಳುಕೆ ಸುರರೈತಂದು ಪ್ರಾರ್ಥಿಸಲ್ಕಾ ವಿಪ್ರನುತಿಯಿಂದ ಭೂತಳದೊಳು ॥
ತಳೆದು ವಾಮನರೂಪಿನಿಂದಧ್ವರಕ್ಕೈದಿ ।
ಯಿಳೆಯ ಮೂರಡಿಯ ಯಾಚಿಸಿ ತ್ರಿವಿಕ್ರಮನಾಗಿ ।
ತುಳಿದು ದನುಜನ ಸಿರಿಯನಣ್ಣಗಿತ್ತವನಾತ ನೀತ ರಘುರಾಮನಲ್ತೆ ॥ (44)

ಭೂರಿವಿಕ್ರಮದಿಂದ ಬಲಿದು ಕೃತವೀರ್ಯಸುತ ।
ಪೋರುವನ ಘಾತಿಸಲ್ ತಕುಘೋರಶಕ್ತಿಯ ಕು ।
ಠಾರಮಂ ಪಿಡಿದು ಕ್ಷತ್ರಿಯಕುಲವ ಮೂರೇಳುಸೂಳಲರಿದರಿದು ಬಳಿಕ ॥
ತೋರರಕ್ತಪ್ರವಾಹದಿ ಕರ್ಪಣಂ ಗೈದು ।
ಕಾರುಣ್ಯದಿಂದ ನೆಲನಂ ದ್ವಿಜರಿಗಿತ್ತನಾ ।
ದಾರ ಭೃಗುರಾಮ ನೀ ರಘುವಂಶಸಂಭೂತನಲ್ತೆ ನೀವರಿದು ನೋಡೆ ॥ (45)

ದುರುಳ ದಶಶಿರನುರುಬೆಗಾರದಮರರ ವೃಂದ ।
ಸರಸಿಜಾಸನ ಮುಖ್ಯರೆಲ್ಲ ಬಿನ್ನಪಗೆಯ್ಯೆ ।
ಧರಿಸಿ ಮನುಜಾಕೃತಿಯ ದಶರಥನೊಳವತರಿಸಿ ಪೊರೆದು ಮುನಿವರನ ಕ್ರತುವ ॥
ಹರಚಾಪಮಂ ಮುರಿದು ಧರಣಿಜೆಯ ಕರವಿಡಿದು ।
ತುರಗೇಶನಂದನೆಯ ಮತವಿಡಿದು ಬನಕೈದಿ ।
ಸುರರಿಷ್ಟಮಂ ಸಲಿಸಲೆಂದು ಸಂಚರಗೈವ ಕಪಟ ಮಾನುಷವೇಷದಿ ॥ (46)

ಗತಶೋಕ ಮೋಹನಿರ್ಲೇಪ ಚೇತನರೂಪ ।
ಗತಿಶಯಂ ಕುಂದೆಂಬುದುಂಟೆ ನಿಜಮಾಯೆಯಿಂ ।
ನ್ನತಿಶಯದಿ ಬಲಿದು ಜನರಂ ಮೋಹಕಂಗೊಳಿಸಿ ಚರಿಸುತಿಹನಲ್ಲದುಳಿದ ॥
ರತಿಯುಂಟೆ ತಿಳಿದು ತಿಳಿಯದ ತೆರದಿ ಕ್ಲೇಶಗೊಳು ।
ವತಿಕಷ್ಟಮನುಚಿತಂ ನೆನೆದಮಾತ್ರದಿ ಪಾಪ ।
ತತಿಗಳೋಡುವವಾ ಮಹಾಪುರುಷಗೆಲ್ಲಿಯದು ಸಂಗ ವಿಷಯಂಗಳೊಳಗೆ ॥ (47)
ಎಂದೊರೆದ ನಿಜತತ್ವ ಬೋಧೆಯಿಂದಖಿಳಜನ ।
ಬಂಧುರದ ಹರ್ಷಮಂ ತಾಳ್ದು ರಘುವೀರನಂ ।
ಇಂದಿರಾಪತಿಯೆಂದು ಭಾವಿಸುತ ಶುಭನಾಮಧಾಮಮಂ ಧ್ಯಾನಿಸುತಲಿ ।
ಮಂದಿರಂಗಳಿಗೈದಿ ಸುಖಮಿರ್ದರಿತ್ತ ರಘು ।
ನಂದನಂ ವೈದೇಹಿಲಕ್ಷ್ಮಣರನೊಡಗೊಂಡು ।
ನಂದನಂಗಳ ವಿಲಾಸಗಳ ನಿಟ್ಟಿಸುತೈದೆ ನಡೆದ ಗೋಮತಿಯ ತಟಕೆ ॥ (48)
ಶುಭವಾರಿಯುತ ದಿವ್ಯನದಿಯ ನೋಡುತ್ತಲಮಿತ ।
ವಿಭವದಿಂದುತ್ತರಿಸಿ ಪಂಥಾನವಿಡಿದು ಬಂ ।
ದಭವಮಸ್ತಕಮಾಲೆ ಯೆನಿಪ ಭಾಗೀರಥಿಯ ಕಂಡು ಹರ್ಷವನು ತಳೆದು ॥
ಇಭವಿಮಾನ್ಗಳಾಟಗಳ ಸುಳಿವ ಸುಳಿದೇಗಳಂ ।
ನಭಕೇಳ್ವ ಪನಿಗಳಂ ಕಾಣುತ್ತ ದನಿಗೈವ ।
ರಭಸಂಗಳೊಲುಮೆಗಂ ನಸುನಗುತ ಶ್ರೀರಾಮ ಪುರದರಸನೊಪ್ಪಿರ್ದನು ॥ (49)

(ಸಂಧಿ 14, ಪದ 645.)

ಹದಿನೈದನೆಯ ಸಂಧಿ.

ಸೂಚನೆ ॥ ಹಲವು ವಿಧದೊಳ್ ಕೇಳಕೊಂಡಾ ಸುಮಂತ್ರಂಗೆ ।
ತಳುವದಧಿಕಸ್ನೇಹಭಾವದಿಂ ನಿಜಭಕ್ತಿ ।
ನೆಲೆಯನೇಕಾಂತದೊಳ್ ತಿಳುಪಿ ಸಂತೈಸಿದಂ ಶ್ರೀರಾಮಚಂದ್ರನೊಲಿದು ॥
ಗಿರಿರಾಜತನುಜೆ ಕೇಳ್ ರಾಘವಂ ಪಥವಿಡಿದು ।
ಬರುತ ಪಿಂದಿರುಗಿ ನಿಜನಗರಿಯಂ ನಿಟ್ಟಿಸುತೆ ।
ಮರುಕದಿಂದೆಂದನೆಲೆ ಸೂತ ಮಗುಳೆಂದಾವು ಬಂದು ಸಂತಸದಿಂದಲೆ ॥
ಸರಯೂತಟದ ವನದಿ ಮೃಗಯಾವಿಹಾರಮಂ ।
ವಿರಚಿಪೆವು ಸರ್ವಜನಸಂತೋಷಗೊಳುವಂತೆ ।
ಪರಿದಪೆವು ಮನದ ಸಂಕ್ಲೇಶಮೆಂದರುಪುತ್ತ ಕಳೆದ ಕೋಸಲಭೂಮಿಯ ॥ (1)
ಎನುತಯೋಧ್ಯಾಮುಖದಿ ನಿಂದು ಕರಗಳ ಮುಗಿದು ।
ಮನುವಂಶದಧಿದೇವಿ ತಾಯೆ ನಗರೀಮಣಿಯೆ ।
ವನಕಪ್ಪಣೆಯ ಕೇಳ್ವೆ ಪಿತೃಋಣೋತ್ತಾರಣಂಗೈದು ಬಂದಪೆನು ಮಗುಳ್ ॥
ಎನುತಶ್ರುಪೂರಲೋಚನಗಳಂ ದಿಟ್ಟಿಸುತೆ ।
ಜನಪದವನನುಕಂಪದಿಂದಲತಿದೀನತೆಯ ।
ನನುಕರಿಸಿದಂತೆಲ್ಲಮುಪಚರಿಸುತೈದಿದಂ ಗಂಗಾತಟಕೆ ಮೋದದಿ ॥ (2)

ಕಂಡನುಂದಾಧಿಕ್ಯವೆರೆದು ರಘುನಂದನಂ ।
ಖಂಡೇಂದುಮೌಳಿಯ ಶಿರೋರತ್ನಕಂ ನಮಿಸಿ ।
ಗಂಡುಗಲಿಯುಂ ಮೃದುಲ ನುಡಿಗಳಂ ನುತಿಗೈದು ದಿವ್ಯಕಾನನವ ನೋಡಿ ।
ಮಿಂಡೆದ್ದ ಕೋಕಿಲಾರಾವ ಶುಕಕಲಕಲವ ।
ತಂಡತಂಡದಿ ಕೇಳುತತಿಹರುಷವೇಗಮಂ ।
ಕೊಂಡು ಬರಲಾಸೂತನಂ ಪೇಳದಂ ರಥವ ನಿಲಿಸೆಂದು ಮುದದಿ ॥ (3)

ಸುರನದಿಯ ತೀರದೊಳ್ ತೋರುವೀ ಬನದೊಳಗೆ ।
ಇರುಳಿದ್ದು ಭಾಸ್ಕರೋದಯವಾದ ಬಳಿಕ ಮುಂ ।
ದರುಗುವೆವೆನುತ್ತಿಳಿದು ಯಿಂಗುದೀಪಾದಪದ ಕ್ರೋಡಮಂ ಸಾರಿ ಕುಳಿತು ॥
ಕರುಣಾರಸೋತ್ಕಲಿತ ಮೃದುವಾಣಿಯಿಂದಮೃತ ।
ಮೊರವಂತೆ ಪ್ರೀತಿಯಿಂದಾಸುಮಂತ್ರನ ಕರೆದು ।
ಗುರುತರಪ್ರೇಮದಿಂದೊರೆದ ರಘುನಂದನಂ ಸುಮನಸಾನಂದಮೆನಲು ॥ (4)

ಧೀಮಂತ ಕೇಳ್ ನಗರದೊಳ್ ತಂದೆ ತಾಯಿಗಳ್ ।
ಮಾಮಕೀನವ್ಯಸನದತುಳಶೋಕಾಕುಲಿತ ।
ಭ್ರಾಮಕದಿ ತೊಳಲುತಿಹರದರಿಂದ ನೀಂ ಪೋಗಿ ತಿಳಿಪು ಶಿವತಾತಿಗಳನು ॥
ಪ್ರೇಮಾಸ್ಪದಸ್ವಾಂತರೆನಿಸವೇಳ್ಕುಮೆನುತ್ತ ।
ರಾಮನಾಜ್ಞಾಪಿಸಲ್ಕಾ ಸೂತ ಶೋಕನಿ ।
ಸ್ಸೀಮನಾಗುತ ಮರುಗಿ ಗದ್ಗದಸ್ವರದಿಂದ ಮಗುಳ್ ವಿಜ್ಞಾಪಿಸಿದನು ॥ (5)

ದೇವ ನಗರಿಗೆ ಪೋಪುದೆಂದು ನೇಮಿಸಿದೊಡಾ ।
ನೇವೇಳ್ವೆ ಚರಣಮಿರ್ದೆಡೆ ಯಯೋಧ್ಯಾನಾಮ ।
ಪಾವನಸುಪತ್ತನಂ ಸರ್ವಜನರಿರ್ದೊಡಂ ಶೂನ್ಯ ನೀನುಳಿದ ತಾಣಂ ।
ಜೀವವಿಲ್ಲದ ತನುವನನುಸರಿಸಲೈದುವನ ।
ದಾವಪುರುಷನಿರ್ಪ ಭಾರ್ಗವಪ್ರಭೃತಿಮುನಿ ।
ಪಾವನತಪಾದದಿಂದಾಕಾರ ಮೂರ್ತಿಯಂ ಕಾಣದಾನೆಂತಿರ್ಪೆನು ॥ (6)

ಸನಕಾದಿ ಮುನಿಗಳನವರತ ಮಾಡುವ ಧ್ಯಾನ ।
ಕೆನಿಸಾದೊಡಂ ಸಿಲ್ಕದೀ ಚರಣ ಪಲ್ಲವದ ।
ಸನಿಹದಲ್ಲಿರುವ ಪರಮಾನಂದಮಂ ಬಿಟ್ಟು ಮಗುಳ್ ಕಾರ್ಯಾಂತರಗಳ ॥
ನೆನೆದವರೆ ಧೀಯುತರು ಕರಗತದ ನಿಧಿಯುಳಿದು ।
ಮನೆಮನೆಯ ಭಿಕ್ಷಾಟನಂಗೈವರೇ ದೇವ ।
ರೆನಗಮಾಜ್ಞಾಪಿಸಿದ ನೇಮಕರ್ಹನೆ ಮೀರುವೊಡೆ ಬೊಮ್ಮನಿಗೆ ಸಾಧ್ಯಮೋ ॥ (7)

ಭರತ ಭವದೀಯ ಭಕ್ತಾಗ್ರಗಣ್ಯಂ ರಾಜ್ಯ ।
ಸಿರಿಯ ಬಯಸುವನಲ್ಲ ಪಿತೃಮಾತೃ ಧನಧಾನ್ಯ ।
ಧೊರೆದೇವತೆಯು ನಿಮ್ಮ ಪದಸರೋಜಗಳೆಂದು ಭಾವಿಸಿದನಲ್ಲದಿಲ್ಲ ॥
ಅರಿತರಿಯದಾನುಸಿರ್ವ ಭಾಷೆ ಪುಸಿದಿಹುವೆಂಬ ।
ಪರಿಯೆಂಬುದಂ ಚಿತ್ತಮರಿಯಿಪ್ಪುದೀಜಗ ।
ದ್ಭರಿತಮೂರುತಿ ಬುದ್ಧಿಸಾಕ್ಷಿಗಾಂ ಬಿನ್ನವಿಪುದೆಂತು ಕರುಣಾವನಧಿಯೇ ॥ (8)

ಇಂತಮಿತ ಸಂಕ್ಲೇಶದಿಂದ ಕಲುಷಿತನಾಗಿ ।
ಮುಂತಿರ್ದ ಸೂತನಂ ಸಂತೈಸಿ ಕಳುಪಲ ।
ತ್ಯಂತರಂಗಸ್ನೇಹದಿಂದ ರಘುನಂದನಂ ನುಡಿದಂ ಸುಮಂತ್ರನೊಡನೆ ॥
ಚಿಂತೆಯಿಂದೇಂ ಪ್ರಯೋಜನ ನಿನಗೆ ದೇಹಗಳ ।
ಪಂತಿದೆ ವಿಯೋಗ ಸಂಯೋಗ ಮಲ್ಲದೆ ವಸ್ತು ।
ಪಾಂತಿರನು ಹರ್ಷದೈನ್ಯಗಳ ಸೋಂಕಿರುವಾತನಲೆ ಮೂಢ ಲೋಕದೊಳಗೆ ॥ (9)

ನಿಸ್ಸಂಗನಭವನವ್ಯಯನಾದನೀದೇಹ ।
ದಾಸ್ಯಪಾಯಿಗಳುಪಾಸಕರ ಧ್ಯಾನಾರ್ಥಕಂ ।
ತಸ್ಸಯು ಸುಕಲ್ಪಿತ ಮದಲ್ತೆ ವಸ್ತುತಮಲ್ಲ ಸಲೆಕೃತ್ರಿಮದ ತನುಗಳ ॥
ಉಸ್ಸವದೊಳನುದಿನಂ ಧ್ಯಾನಿಸಲ್ ನಿಜಭಕ್ತಿ ।
ನಿಸ್ಸೀಮ ಮೆರೆಲುದಿಸಲದರ ದೆಸೆಯಿಂ ಶೋಕ ।
ದುಸ್ಸಹಂ ಪೋಗಿ ನಿರ್ವಾಣಮಹದಾಚಾರ್ಯನಿಂದರಿತು ಸೇವಿಸಿದರ ॥ (10)

ಮೇಲಹುದು ಮುಕ್ತಿ ಯದರಿಂ ಭಕ್ತಿಯಂ ಬಿಡದ ।
ಲಾಲೋಚಿಸುತ್ತೀಶ್ವರಾಕೃತಿಯ ನೆಡೆವಿಡದೆ ।
ಲೀಲೆಯಿಂ ಭಜಿಸುತಿಹುದೆನೆ ರಾಮಚಂದ್ರನೊಳೆಂವಂ ಸುಮಂತ್ರ ನಯದಿ ॥
ಬಾಲಾದಿಮೂಢರುಗಳಿಂತರಿವರೀ ಪರಿಯ ।
ಪಾಲನಂಗೈದುಪಾಸನೆ ಭಕ್ತಿಯುದಿಸುವುದ ।
ನಾಲಸ್ಯಮಿಲ್ಲದುಪದೇಶಿಸು ವುದೆನುತೆರಗಷೋದ ರಘುನಾಥ ಮುದದಿ ॥ (11)

ಕೇಳೈ ಸುಮಂತ್ರ ಮದ್ಭಕ್ತಿಶುದ್ಧಾಶುದ್ಧ ।
ಪೇಳಗೆಯಲಿರಡುವಿಧಮವರೊಳು ಕ್ರಿಯಾಮಿಶ್ರ ।
ಮಾಳಹುದ ಶುದ್ಧಗುಣಮಿಶ್ರಮೆಂದೆರಡುವಿಧಮವ ನಿರೂಪಿಸುವೆ ಮುದದಿ ॥
ಬೇಳ್ಪುದೇಂ ಸರ್ವಮೆನ್ನಿಂದಲಾಸರ್ವಮಂ ।
ತಾಳಿರುವೆ ಸರ್ವಮಂ ಮತ್ತಿಲ್ಲ ಮೆಂದರಿವು ।
ತೂಳಗಂಗೈವುದದೆ ಮುಕ್ತಿ ಪ್ರದಾಯಕಂ ಭಕ್ತಿಶುದ್ಧನಾಮಕಂ ॥ (12)

ಮಮಕಥಾಶ್ರವಣರತಿ ಪೊಗಳಪೊಗಳುವನುಮತಿ ।
ವಿಮಲಪದಸೇವನಾರ್ಚನ ದಾಸ್ಯನೇಹಾತ್ಮ ।
ಮಮತೆಯೆಂಬೀನವಂ ನವವಿಧದ ಭಕ್ತಿಗಳ್ ಕ್ರಿಯೆಯಿಂದ ಕೂಡಿರುವವು ।
ಕಮಲಸಂಭವ ಭವಾದಿಗಳು ವಾಲ್ಮೀಕಿಯುಂ ।
ಸುಮನಂ ಮರೀಚ್ಯಾದಿ ಭೂತನುಜೆ ಭರತನಾ ।
ಕ್ರಮದಿಂದ ಶಬರಿ ಪೌಲಸ್ತ್ಯ ಮಾರುತಿ ರವಿಜ ನರುಣಸುತರನುದಿನದಲಿ ॥ (13)

ಪಾವನೀಕೃತಕ್ರಿಯಾ ಮಿಶ್ರರೆನಿಸುವ ಭಕ್ತಿ ।
ಕೋವಿದರ ಮತದಲೊಂಭತ್ತು ವಿಧವಿಭಾಕಾತಿ ।
ಯಾವನಾದರು ಸಿಲುಕಲದ ಮುಕ್ತನೆಂಬುದಿದು ಶ್ರುತಿಶಾಸ್ತ್ರಸಮ್ಮತವಲೆ ।
ಈ ವಿಧದ ಗುಣಮಿಶ್ರ ಭಕ್ತಿಮೂರ್ವಿಧಮವರ ।
ಭಾವಮೊಂದೊಂದು ಮೂರಾಗಿ ತೋರುವವದಂ ।
ಸೋವಿ ತಿಳಿ ಗುಣಮೂರು ಸಾತ್ವಿಕಂ ರಾಜಸಂ ತಾಮಸಗಳೆಂಬ ಪೆಸರು ॥ (14)

ಸಕಲಶಾಸ್ತ್ರಗಳಿಂದ ನಿಶ್ಚಯಿಸಿಕೊಂಡು ಮ ।
ತ್ತಕಳಂಕಬುದ್ಧಿಯಿಂದನುದಿನಂ ಜಾನಿಸುತ ।
ಮುಕುತಿಗೈದುವೊಡೆ ಸಾತ್ವಿಕದ ಸಾತ್ವಿಕಮೆನಿಪುದಖಿಳಭೂತಂಗಳೊಳಗೆ ॥
ಪ್ರಕಟಮಾಗಿರ್ಪೆನ್ನನು ಪರೋಕ್ಷದಿಂ ಭಜಿಪ ।
ಯುಕುತಿ ಸಾತ್ವಿಕ ರಾಜಸಾಖ್ಯಜಡಜಂಗಮ ।
ಪ್ರಕರದೊಳಗಿರ್ಪೆನ್ನ ತಾರತಮ್ಯದಿ ತಿಳಿವೊಡದುವೆ ಸಾತ್ವಿಕತಾಮಸಂ ॥ (15)

ಸತತನಿಷ್ಕಾಮಕರ್ಮಗಳ ಮಾಡುತ ಕ್ವಚಿ ।
ದ್ಗತಿವಿಡಿದು ಕಾಮ್ಯಕೆಳಸುವ ಭಕ್ತಿಗೈವ ನರ ।
ಮತಿವಂತ ರಾಜಸದಿ ಸಾತ್ವಿಕಂ ರಾಜಸಂ ಮೋಹದಂಧಗಳಿಂದಲಿ ॥
ಅತಿಶಯದ ಭೋಗಕೋಸುಗ ಭಕ್ತಿಗೈವುದೇ ।
ಕ್ಷಿತಿಗೆ ರಾಜಸ ರಾಜಸಂವ್ರಪಣಾದಾಕಾಂಕ್ಷೆ ।
ಕತಿಪಯಾರ್ತಿವಿನಾಶಕೆಂದು ಭಕ್ತಿಯ ಮಾಳ್ಪುದದುವೆ ರಾಜಸತಾಮಸಂ ॥ (16)

ಶಾರೀರಸಂಸಾರಭರಣಕೋಸುಗವಧಿಕ ।
ತೋರದಂಧದಿ ಕಲತ್ರನೆನಿಸಿ ಶರಣಂಪೊಗುವ ।
ದಾರಭಕುತಿಯ ತಾಮಸಸಾತ್ವಿಕ ಮೆನುತ್ತ ತಿಳಿ ಸ್ಫೋರ್ಯವಂ ಪಡೆವೊಡೆ ॥
ಹಾರವಿಸಿ ದಂಭದಿಂ ಮಾಳ್ಪಭಕುತಿಯು ತಿಳಿದೊ ।
ಡೋರಂತ ತಾಮಸದ ರಾಜಸಂ ಮೂರ್ಖದಿವಿ ।
ಚಾರತನುದಂಡನೆಯ ಶಾಸ್ತ್ರಭಕುತಿಯು ಪ್ರಮತ್ತಾಮಸಕೆ ತಾಮಸವಲೆ ॥ (17)

ಪರಿಪರಿಗಳಿಂತು ಮದ್ಭಕ್ತಿ ತನ್ಮಧ್ಯದೊಳ್ ।
ಪರಿಕಿಸಲ್ ಗುಣ ಮಿಶ್ರ ಮತ್ತಲ್ಲಿಗೆನೆ ಗುಣಂ ।
ಪಿರಿದು ಸಾತ್ವಿಕಮದರೊಳಾಧಿಕ್ಯ ಮುತ್ತಿಕರ ತಿಳಿಯೆ ಸಾತ್ವಿಕಸಾತ್ವಿಕಂ ॥
ಹರುಷಗೊಂಬುವೆನಾವ ಭಕ್ತಿಯಿಂ ಭಜಿಸಿದರು ।
ಪರಮಹಿತಕರವೆಮಗೆ ಸಾತ್ವಿಕರ್ ಮನ್ಮಾರ್ಗ ।
ವರಿತು ಸಚ್ಛಾಸ್ತ್ರಾಗಮಂಗಳನುಮತಿವಿಡಿದು ತೋಷಣಂಗೈವರೊಲಿದು ॥ (18)

ಸರ್ವಭೂತಾವಾಸ ಚೈತನ್ಯರೂಪನಾ ।
ನೋರ್ವನೆಂದರಿತೆನ್ನ ಭಜಿಸುವರು ಸಾತ್ವಿಕದ ।
ಖರ್ವಸಂಪದಕೆಳಸಿ ರಾಜಸರು ಪೂಜಿಸುವರೈಸೆ ನೀರೇಜಭವನಂ ॥
ಪೂರ್ವದೇವಾದಿ ಭೇತಾಳಪತಿಯಂ ಭಜಿಪ ।
ರುರ್ವಿಯೊಳ್ ತಾಮಸೀಜನರು ತಾಮಸದಿಂದ ।
ಬೇರ್ವರಿದು ರಾಜಸಂ ಪುಷ್ಟಿಗುಮದನ್ನಳಿಯೆ ಸತ್ವಮುದಿಂ ಜನಿಪುದು ॥ (19)

ಕಳೆದು ರಾಜಸತಾಮಸಂಗಳಂ ಸಾತ್ವಿಕವ ।
ತಳೆದೊಂದು ಭಜಿಸುವರಿಗೀವೆ ಕೈವಲ್ಯಮಂ ।
ಬೆಳೆಗುವುದು ಸಾತ್ವಿಕದಿ ಮದ್ಭಕ್ತಿ ರಾಜಸದಲಹುದೈಕಭೋಗಾಪ್ತಿಯು ॥
ಕಳೆಗೊಳುವು ಗೀರ್ವಾಣ ಭೋಗಗಳ್ತಾಮಸಂ ।
ಬೆಳಸುವುದು ಮೋಹ ಭಯಗಳನಾಗುಣಂಗಳಿಂ ।
ಪೊಳೆದಪುವು ಚಿತ್ತದಿಂದಾಚಿತ್ತಮಂದೆಸೆದ ದೆಸೆಯಿಂದ ವೃದ್ಧಿಯಹುದು (20)

ನರಸಾವ ವಿಧದನ್ನಮಂ ಕೊಂಬನಾ ವಿಧದ ।
ವಿರಕವಾದಪ್ರಸಾದದರಿಂದ ದುರ್ವೃತ್ತಿಗಳ್ ।
ಬೆರೆದಪುವು ದೇಹಾಭಿಮಾನದಿಂ ಮುಂದಪ್ಪ ಸುಗತಿಗಂ ಒಯು ಬರ್ಪುದು ॥
ಬರಡುನಾಲಗೆಯ ಚಾಪಲ್ಯಮಂ ಪಳಿಯುಲುರು ।
ತರೇಂದ್ರಿಯಗಳೆಲ್ಲಮಂ ಜೈಸಿದಂತಪ್ಪುದದ ।
ನನಿಕೃಂತನ ಕ್ಷುಧೀಕಾಸೋಪಮಂ ಕಳೆಯೆ ನಿರ್ಮಲಸ್ವಾಂತಮಹುದು ॥ (21)

ಅದು ನಿಮಿತ್ತದಿ ಸಾತ್ವಿಕಾನ್ನ ಭೋಜನಗೈಯೆ ।
ಹೃದಯ ನಿರ್ಮಲವಾಗಿ ವೈರಾಗ್ಯ ಸಂಜನಿಪು ।
ದದರಿಂದೆ ದೇಹಾಭಿಮಾನ ನಾಶನಮಪ್ಪುದಭಿಮಾನಮೇ ಮಾಯೆಯು ॥
ಅದುವೆ ಜೀವರನೆಲ್ಲ ಬಂಧನಂ ಗೈದು ಮ ।
ತ್ತುದಯಶಾಸ್ತ್ರಮಾನಗಳ ಬಳಗುವದವಿದ್ಯೆಯಾದ ।
ರುದಯಮಿಲ್ಲದರದೇ ಮುಕ್ತಿಯೆನಿಪುದು ಕೇಳ್ ಸುಮಂತ ಶಾತಿಯಿಂದ [ತಿಳಿದು ॥ (22)

ಇತ್ತರದೊಳಭಿಮಾನ ಸಾಮಾನ್ಯ ವೈಶೇಷ ।
ಮತ್ತೆಮೊದಲದೆ ಶರೀರಾಭಿಮಾನಂ ಜಾರಿ ।
ಪುತ್ರಾದಿಭ್ರಮೆ ಯೆರಡನೆಯದೆಂದು ತಿಳಿ ಸತ್ಯ ಶಾಸ್ತ್ರ ಸಮ್ಮತಲೋಕದಿ ।
ಕೆತ್ತ ದೇಹಾತ್ಮಬುದ್ಧಿಯೆ ಪ್ರಥಮವಾದರಿಂದ ।
ಬಿತ್ತರದ ಜಾತಿಗೋತ್ರಾತ್ಮ ಸಂಬಂಧಗಳ ।
ಮೊತ್ತ ವಿಭ್ರಮಗಳಾದಿಗುವವು ತತ್ವಜ್ಞಾತಿಯಭಿಮಾನಮಧಿಕಮಹುದು ॥ (23)

ಇದು ಜಾತಿಗಂ ವಿಹಿತಮಿದು ನಿಷೇಧಮೆನುತ್ತ ।
ವಿಧಿಸುವೊಲ್ ಶಾಸ್ತ್ರಗಳ್ ವಿಹಿತಾಚರಣೆ ಪುಣ್ಯ ।
ಮದನುಳಿಯೆ ಪಾತಕಂ ಪುಣ್ಯಪಾಪಗಳೆರಡರಿಂದ ದುರ್ಗತಿಸುಗತಿಗಳ್ ।
ಉದಯವಹವದರಿಂ ವಿಚಿತ್ರತರ ಜನ್ಮಂಗ ।
ಳೊದಗುವವು ಜನಿಸಿದೊಡೆ ಮೃತ್ಯು ಬೆಂಬಿಡದು ಮೃತಿ ।
ಯೊದಗೆ ಪುನರಪಿ ಜನನಮಪ್ಪುದಿದು ಸುಜ್ಞಾನದಿಂದಲ್ಲದುಳಿಯದೆನಸು ॥ (24)

ಜಂತುಗಳ ಕರ್ಮವಿಧಿದಾ ಪಂಚಭೂತಗಳ ।
ಪಂತಿಯಿಂದೀಶ್ವರಂ ಸೃಜಿಪ ಸ್ತ್ರೀ ಪುಂಭೇದ ।
ಮಾಂತ ಪ್ರಾಣಿಗಳ ದೇಹವ ಧರಿಸಿ ಕುಲಗೋತ್ರ ಸೂತ್ರಾಶ್ರಮಂಗಳೆಲ್ಲ ॥
ಕೊಂತಿ ಶಾಖಾಶಿಖಾನಾಮ ರೂಪಕ್ರಿಯಾ ।
ಭ್ರಾಂತಿಯಂಟುವದು ತಾಯಿತಂಗಿ ಸತಿಸುತೆ ಸೊಸೆಯು ।
ರಂತೆ ತಂದೆಯು ಮಗಂ ಮೊಮ್ಮಮಾವಂ ಭಾವರೆಂಬ ಕಲ್ಪನೆಗಳಹವು ॥ (25)

ಇಂತು ಕಲ್ಪಿತದೇಹದಭಿಮಾನ ಕುಲಗೋತ್ರ ।
ಭ್ರಾಂತಿಯಂ ಪುಣ್ಯಪಾಪಗಳ ಪಾಶಗಳೆಸಗು ।
ವಂತೆ ಶಾಸ್ತ್ರಗಳು ಹೇಳ್ದಪವದರ ವಾಸನೆಗಳಿಂದಖಿಳಜೀವರೆಲ್ಲ ॥
ಸಂತತಂ ಸಿಲ್ಕಿ ತೊಳಲುವರು ವಾಸನೆ ಮೂರ ।
ಪಿಂತುಳಿವರೊಮ್ಮನದೊಳೆಮ್ಮನು ಭಜಿಸುವಶುಭ ।
ಸ್ವಾಂತರಿಗೆ ಸಕಲಪಾಪಗಳಳಿದು ಸುಖರಾಶಿ ವಶಮಹುದು ಸುಲಭದಲ್ಲಿ ॥ (26)

ಎಲುತೊಗಲು ನರಮಜ್ಜೆಮಾಂಸಾಸ್ತಿ ರಕ್ತಸಂ ।
ಕಲಿತಮಲಮೂತ್ರಾಂಶ ಸಂಭರಿತಮಶುಚಿಕರ ।
ನಿಲುವುದೀ ಪೊಲೆದೇಹ ಜಲಬುದ್ಬುದೋಪಮಿತಮುದಯಾಸ್ತಮಾನಬಿಡದೆ ॥
ಜಲದಿಂದ ಲೆನಿತುತೊಳೆದಡನಾರುತಿಹುದಿದಂ ।
ನಲವಿಂದಲೆನಿತು ತೀರ್ಥಸ್ನಾನ ಗೈಸಿದರು ।
ಪೊಲೆಯುಳಿದು ಪಾವಿತ್ರ್ಯವೆಂತಪ್ಪುದಾಶ್ರಮಕುಲಂಗಳಿಂದೇನು ಫಲವು ॥ (27)

ವಿಲಯಾತಿಶಯವದಾಮುಶ್ರವಿಕಮೂರುಗುಣ ।
ವೊಲವಾಂತು ಬೇಳುವುದು ತಾದಾರ್ಥ್ಯಮಂ ಜಡದ ।
ಉಲಿದಪುದು ಸ್ಮೃತಿಯುದರ ಮಾರ್ಗಾನುಸರಣೆಯಂ ಮಾಳ್ಪುದು ಪುರಾಣತತಿಯು ॥
ಸುಲಭವಲ್ಲದ ಪರಸ್ಪರವಾದಗಳ ಬಾಧೆ ।
ಸಿಲುಕಿಂದ ಮೋಹಕಂಗೊಳಿಸಿ ಭ್ರಾಮಕಗೊಳಿಸಿ ।
ಸಿಲುಕಿಪವು ಕಂಗಾಣದವರ ಕರವಿಡಿದರೇಂ ಸುಖದ ಹಾದಿಯು ದೊರೆವುದೇ ॥

ಪೌರುವಂ ಪಳವಾತಿನೊಳಗೆ ತಿಳಿದವ ಧರ್ಮ । [(28)
ಸಾರವಂ ಬಲ್ಲಾತ ಚೆಲುವ ಚೆನ್ನಿಗನಿವನು ।
ದಾರವೈಷ್ಣವ ಶೈವ ಶಾಕ್ತೇಯ ಹೈರಣ್ಯಗರ್ಭ ಸೌರಾದಿಮತದಾ ॥
ಚಾರಣಂ ಗೈದಾತನೆಂದು ಭೂಷಣಗೈದು ।
ಕ್ರೂರಕರ್ಮವಿಹೀನ ಕೃಪಣ ಶಾರ್ಯನೆನುತ್ತ ।
ತೋರದಿಂ ಕ್ರತುಗೈವ ಲೋಕರಿಂದೇನಪ್ಪುದೈಯ ಪರಮಾರ್ಥಗತಿಗೆ ॥ (29)

ನಿಗಮಾಗಮ ಪುರಾಣಮಾಗೆತ್ರೇಷ್ಟಾಪೂರ್ತ ।
ಮಿಗೆ ನೇಮ ದಾನಾದಿ ಸಂಗತಿಯೊಳಾಂ ಸಿಲ್ಕಿ ।
ಬಗೆಬಗೆಯ ಮತ್ತವಚನಾರಚನೆಗಳು ಸಮ್ಮತಂ ಎಲ್ಲವು ಪ್ರಸಿಕಣಾ ॥?
ತೆಗೆದಿಟ್ಟು ಲೋಕದೇಹಾದಿ ವಾಸನೆಗಳಂ ।
ಬಗೆಗೊಳಿಸಿ ವೈರಾಗ್ಯ ಮದದಂಭವನು ಬಿಟ್ಟು ।
ಸೊಗಯಿಸಿದರೇಕಾಂತ ಭಕ್ತಿಯುದರಿಂದಾನು ಶಕ್ಯನುಳಿದರಿನಶಕ್ಯಂ ॥ (30)

ಕರುಣಾರಸಂ ಬೆರ್ಚಿ ನಿಜತತ್ವಸಂಗತಿಗ ।
ಳರುಪಿ ಜಗದಾರಾಧ್ಯನಂಘ್ರಿಗಾಸತನಾಗಿ ।
ಪರಮ ಭಕ್ತಿಯೊಳು ಬಿನ್ನವಿಸಿದಂ ಜಗದೀಶ ಫಲಿತನುಡಿ ದಯದಿ ಪೇಳ್ದು ॥
ಪರಿಯನೆಲ್ಲವ ಕೇಳ್ದೇಕಾಂತಭಜನೆಯಂ ।
ವಿರಚಿಸುವುಪಾಯಮಂ ದಯೆಗೈಯ್ಯ ಭವದೀಯ ।
ಚರಣಾರವಿಂದಗಳ ಪೊಂದಿ ಕೃತಿಯೆನಿಪೆನೆನೆ ರಘುನಾಥನಿಂತೆಂದನು ॥ (31)

ಕಳೆದು ವೈರಾಗ್ಯಮಂ ವಾಸನಾತ್ರಯಗಳಂ ।
ಕಳೆದಖಿಲಭೂತಾನುಕಂಪಮಂ ಪಡೆ ।
ದೊಳಗಿರ್ಪ ಸರ್ವೇಶನಾದೆನಗೆ ಸಂತತಂ ಸಕಲಧರ್ಮಗಳರ್ಪಿಸಿ ॥
ಚಲನೆಯಿಲ್ಲದೆ ಮನವನೆನ್ನೊಳಿರಿಸುತ ಬೆರರ್ಗೆ ।
ತಿಳಿದನಿತಬೋಧಿಸುತ ಪಾಡಿ ಪೊಗಳುತ ಹರ್ಷ ।
ಗೊಳುವಾತನಾವನವಗೀವೆ ನಕ್ಷಯೊಪದವನೀವ ನಿರ್ಮಲ ಭಕ್ತಿಯಂ ॥ (32)

ಅನುದಿನ ದೊಳೇಕಾಂತ ದೊಳ್ ಕುಳಿತು ತನ್ನ ಹೃ ।
ದ್ವನಜದೊಳ್ ಮನ್ಮೂರ್ತಿಯಂ ಬಲಿದು ಧ್ಯಾನಿಸುತ ।
ಲನಿಶವುಪಚಾರ ಪದಿನಾರರಿಂದರ್ಚಿಸುತ ತನ್ಮಯಾವಸ್ಥೆಯೊಂದಿ ॥
ತನುಪುಳಕ ವೆರ್ಚಿ ಸ್ಮೃಮರೆದು ನಸುನಗೆಯ ಕಂ ।
ಬನಿಗಳುದುರುತಲಖಂಡಾನಂದ ರಾಜ್ಯವ ।
ನ್ನನುಭವಿಪ ನಾತನೇಕಾಂತ ಭಕ್ತನವಂಗೆ ವೆರತಿಲ ವೆಂದರಿವುದು ॥ (32)

ಜಲುತಪಃಪರಿಪಾಕದಿಂದೆನ್ನ ಭಕ್ತಿಯಿಂ ।
ದೊಲಿವುದವರಿಂವೆ ಸರ್ವಾತ್ಮಕನೆನೆಂದರಿದ ।
ಚೆಲುವ ಸುಜ್ಞಾನ ಸಂಪದವಹುದು ಮತ್ತದರ ದೆಸೆಯಿಂದ ವೈರಾಗ್ಯವು ॥
ಕಳಿತವಪ್ಪುದು ಸದಾನಂದಮುಮನೆಂದೆನಿಸಿ ।
ನೆಲದಿ ಸಂಚರಿಪನಾ ಸತ್ಪುರುಷ ಮನ್ಮಾಯೆ ।
ಗೆಲಿದು ಸುಖಮಿರ್ಪ ಪ್ರಾರಬ್ಧದಂತ್ಯದೊಳು ಮಗೆ ಸಾರ್ಪಗಿದು ಸಿದ್ಧಾಂತವು ॥ [(34)

ಪ್ರೇಮದಿಂದೊಲಿದು ಸೂತಂಗಖಿಲತತ್ತ್ವವಂ ।
ತಾಮರಸನೇತ್ರ ಬೋಧಿಸಲಾ ಮೃದೂಕ್ತಿಗಳ್ ।
ತಾಮಸೀಬುದ್ಧಿಗಳ ಪರಿಜಟ್ಟು ನಿಬಿಡತರದಾನಂದ ಮುಣ್ಮಿಸಲ್ಕೆ ॥
ರಾಮಪುರದರಸನತಿಭಕ್ತಿಯಿಂದಾವ ಪ್ರ ।
ಣಾಮ ಗೈದಭಿನುತಿಸಿ ಮಾರ್ಗದಿಯುಳವಲ್ಲ ।
ದಾಮಹಾಮಾತ್ಯನೊಪ್ಪಿದನಗಜೆ ಪೇಳ್ದರೆಂತಹುದು ಬ್ರಹ್ಮಾನಂದಮಂ ॥ (35)

(ಸಂಧಿ 15, ಪದ್ಯ 680)

ಹದಿನಾರನೆಯ ಸಂಧಿ

ಸೂಚನೆ ॥ ಸುರತರಂಗಿಣಿಯ ದಾಂಟುವರೆ ನಾವಿಕಗತ್ತುಳ ।
ತರಪಣ್ಯವನುಜಮೈತ್ರೀರೂಪದಿಂದಿತ್ತು ।
ಹರುಷದಿಂದಖಿಲವಿಪ್ರೋತ್ತಮರನುಪಚರಿಸುತ್ತೈತಂದ ರಘುವೀರನು ॥

ಗಿರಿಜೆ ಕೇಳೇಕಾಂತಭಕ್ತಿಯಿಂ ಸೂತಂಗೆ ।
ಕರುಣಾಳುಗಳದೇವ ನೊರೆಯೆ ಪರಮಾನಂದ ।
ಭರತನೆಂದೆನಿಸಿ ಪಾಡುತ ಪೊಗಳುತಡಿಗೆರಗಿ ಬೀಳ್ಕೊಂಡು ಗಮಿಸಲಿತ್ತ ॥
ನರನಾಥ ನೋಡಿ ಲೀಖಾಧುನಿಯ ಸಂತಸಂ ।
ಬೆರೆದು ಸೌಮಿತ್ರಿಯಂ ಕರದೊಡನಿರುಳಿರುವ ।
ದರರೆ ಈತಾಣಮತ್ರಿರಮ್ಯಕರವಾಗಿದೆಕೊ ನೋಡು ತೀರದ ಬನವನು ॥ (1)

ಎನುತ ಶ್ರೀರಾಮನೊರೆಯಲ್ಕಾಗ ಸೌಮಿತ್ರಿ ।
ಬನವನೊಳಪೊಕ್ಕು ನಾಲ್ದೆಸೆಯ ನಿಟ್ಟಿಸಿ ತನ್ನ ।
ಮನಕತೀವ ವಿಲಾಸವಾಗಿ ತೋರಿರಲೊಂದು ಇಂಗುದೀವಿಟಪದೆಡೆಗೆ ॥
ಸನುಮತದಿ ರಮ್ಯದಲೆವನೆಗೈದು ಬಂದು ಪದ ।
ವನಜಕಂ ಬಿನ್ನಪಿಸೆ ಜಾನಕಿಯನೊಡಗೊಂಡು ।
ಮುನಿಜನ ಸ್ತುತಸ್ತೈದಿ ತರುನೆಳಲೊ ಳೆಳೆಚಿಗುರಪಾಸಿಕೆಳ್ಮಂಡಿಸಿದನು॥ (2)

ಅನ್ನೆಗಂ ರಾಮನಾಗಮೋತ್ಸವದ ವೈಭವವ ।
ತನ್ನವರ ದೆಸೆಯಿಂದ ಕೇಳ್ದ ನಿಷಾದಪತಿ ।
ಉನ್ನತಾನಂದದಲಿ ಮಿಗೆ ಬೆರ್ಚಿ ಹಿಗ್ಗುತಂ ಸಂತಸಂದಳೆದು ಮನದಿ ॥
ಪುನ್ನಾಗಲಕ್ಷಮಶ್ವಗಳು ಲಕ್ಷತ್ರಯಂ ।
ಸನ್ನದ್ಧಮೆನಿಸುವ ಧನುರ್ಧರರ್ ಸವಲಕ್ಷೆ ।
ಮಿನ್ನಾದ ರಥಗಳಗಣಿತಮಾಗಿ ಪಯಣಕಂ ಸನ್ನಾಹಗೈದು ಬೇಗ ॥ (3)

ಮಧುಕಂಧ ಮೂಲಾದಿ ಫಲಗಳಂ ಕರವಿಡಿದು ।
ಸದಯನಂ ಕಾಣಲುಜ್ಜುಗದಿಂದಲೈತಂದು ।
ಮದನನಯ್ಯನೆ ಮಹೀತಳಕೆ ಬಂದನೆನುತ್ತಲರಿತು ಭಯಭಕ್ತಿಯಿಂದ ।
ಮುದದಿಂದ ತಂದ ಕಾಣಿಕೆಗಳಂ ಮುಂದಿಟ್ಟು ।
ಕದನಕರ್ಕಶ ಜಗನ್ನಾಥ ಕೋದಂಡಧರ ।
ಬುಧಶಿರೋರನ್ನ ತವ ದಾಸದಾಸನೆನುತ್ತ ನುತಿಸಿ ಪೊಡಮಟ್ಟನೊಲಿದು ॥ (4)

ಸರ್ವಲೋಕಶರಣ್ಯ ಸಕಲಾಗಮಪುರಾಣ ।
ಗೀರ್ವಾಣಗಣ ವೇತಾಳ ಗಿರಿಜಾಮನೋಹರನ ।
ಖರ್ವಮಾನಸಸರೋರುಹಹಂಸ ಹಂಸಜನಹೃದಯಚಿದ್ದೀಪ ದೀಪ ।
ಉರ್ವಿಜಾರಮಣ ಸುರಗೇಶವಂದಿತ ಚರಣ ।
ನಿರ್ವಾಣದಾಯಕ ನಿಜಾನಂದಮಯ ದುಷ್ಟ ।
ಗರ್ವಭಂಜನ ರಾಮ ಸಲಹೆನುತ ದೂರದೊಳ್ ನಿಂದು ಕೈಮುಗಿದೆಂದನು ॥ (5)

ದೇವ ಲಾಲಿಪುದೆನ್ನ ಸತಿಸುತಾದ್ಯಖಿಲಜನ ।
ರೀ ವಸುಧೆ ಗಜತುರಗ ಮಣಿಕನಕಧೇನುಗಳ್ ।
ಭಾವವಾಚಕಕಾಯಕಂಗಳಿಂದಾಂ ಗೈದ ಸುಕೃತಾದಿಗಳ ನೆಲ್ಲಮಂ ॥
ಪಾವನಶ್ರೀ ಚರಣಕರ್ಪಿಸಿದೆ ಸನಕಾದಿ ।
ದೇವರುಗಳರಿಯದೀ ಸುಮೂರ್ತಿಯ ಕಂಡೆ ।
ಶ್ರೀ ವಧೂರಮಣ ಮರೆವೊಕ್ಕೆನೆನ್ನಂ ಸಲಹು ದುರ್ವೃತ್ತನಹೆನು ದಯದಿ ॥ (6)

ಎಂದು ಸರ್ವಸ್ವಮಂ ರಘುನಾಥ ಗರ್ಪಿಸುತ ।
ನಿಂದು ಕರಗಳ ಮುಗಿದು ಕಂಗಳೊಳಗಾನಂದ ।
ಬಿಂದುಗಳ ಸುಮುರಿಸುತ ಗದ್ಗದ ಸ್ವರದಿಂದ ನುತಿಗೈದ ಭಕ್ತಿಯಿಂದೆ ॥
ಇಂದುಶೇಖರಪದ್ಮಭವನಾರದಾದಿಮುನಿ ।
ವೃಂದ ಪೊಗಳುವೊಡರಿಯದಾಪಾರಮಹಿಮನಂ ।
ದಂದುಗದ ಪಾಪಿಷ್ಠ ಕೈರಾತಗೋಚರಂ ಮೂಢ ನಾನೇಂ ನುತಿಪೆನು ॥ (7)

ಮಾತನಾಡುವರೆ ಮೊಗಮಂ ದಿಟ್ಟಿಯಿಂದೊಮ್ಮೆ ।
ಜಾತುಜತು ದಿಟ್ಟಿಸಲ್ ಬಾರದ ಜುಗುಪ್ಸಿತದ ।
ಜಾತಿಯೆನ್ನದು ದುರಾಚಾರ ಗೋಭಕ್ಷಕಂ ಕ್ರೂರಜನರಗ್ರೇಸರಂ ॥
ತಾತ ಕೇಳ್ ಶಬರ ಕಾಳಾಹಿಭ್ರಮಿ ಕಾಮಿಸುತೆ ।
ಯಾತುರನ ರುಕ್ಮಕಾರುಕ ಲತಿತ ಜೀವಕನ । ?
ಪಾತಕಂ ನಂಬದಿರೆಮೊಂದು ನೀತಿಜ್ಞರುರಿ ಬೋಧಿಪರು ಶಾಸ್ತ್ರದಿರವ ॥ (8)

ಕಲಶಸಂಭವ ಮುಖ್ಯರತುಳ ಧ್ಯಾನಂಗಳಿಗೆ ।
ನಿಲುಕದಿಹ ಪರಬೊಮ್ಮ ಶುಭವಿಗ್ರಹಾಕಾರ ।
ಕಲನೆಯಿಂ ಕಂಗಳಿದಿರಲಿ ತೋರ್ಪುದಾಂ ಕಂಡೆ ಪೊಡಮಟ್ಟು ಭಕ್ತಿಯಿಂದೆ ॥
ಬಲುಜನ್ಮಕೃತತಪಃಪರಿಪಾಕದಿಂದ ಬಂ ।
ದೊಲಿದೆಯಲ್ಲದೆ ಹರಾದ್ಯಖಿಲರಿಗಗೋಚರಂ ।
ಸಿಲುಕಲಪ್ಪುದೆ ಭವನ್ಮೂರ್ತಿ ದರ್ಶನದಿಂದಲಾಂ ಧನ್ಯ ದೇವದೇವ ॥ (9)

ಕೃತಕೃತ್ಯನೆಂದೆನಿಸಿ ಕಾವುದೆನ್ನನೆನುತ್ತ ।
ಅತಿಭಕ್ತಿಯಿಂದೆರಗಿ ಬಿನ್ನವಿಸೆ ಶ್ರೀರಾಮ ।
ನತುಳಪ್ರೇಮದೊಳಾತೆರಾತನಂ ಕುಸ್ತರಿಸುತಿಂತೆಂದ ವಿನಯದಿಂದೆ ॥
ಕ್ಷಿತಿಯೊಳ್ ಸಹಸ್ರರೊಳಗೊರ್ವನಿಗೆ ಮದ್ಭಕ್ತಿ ।
ರತಿಯುದಿಪ್ಪುದಾ ಭಕುತಿಯಿಂದಾಪನಾದೊಡಂ ।
ಮತಿಯುತರೊಳಗ್ಗಳನೆನಿಪ್ಪನಾಗುಪ ವ್ರತಾದಿಗಳಿಂದ ಪೂತನೆನಿಪ ॥ (10)

ಹರಕೇಶವದ್ವೇಷಿ ನೀಚ ಪಾಪಾಚಾರಿ ।
ನಿರತಗೋಹತ ಪುಲ್ಕಸ ಯವನ ಮೊದಲಾದ ।
ಪರಿಪರಿಯ ಕ್ಷುದ್ರಯೋನಿಜರಾದೊಡಂ ಜನಿಸಲೆನ್ನಲ್ಲಿ ಸದ್ಭಕ್ತಿಯು ॥
ನಿರುಗೆಯುದಾಕ್ಷಣಂ ಪರಿಶುದ್ಧನೆನಿಸಿ ಬಂ ।
ಧುರದವಿಗಮಾಚಾರ ಕರ್ಮಸತ್ಯವ್ರತಾ ।
ಚರಿಪ ವಿಪ್ರೋತ್ತಮರಿನಿಂದಧಿಕನಹುದೆಂಬ ನಿಗಮಾರ್ಥಮಿದು ಸತ್ಯವು ॥ (11)

ಜಾತಿವರ್ಣಾಶ್ರಮಾಚಾರದಭಿಮಾನಿಗ ।
ಳ್ಗೀತರ್ಕ ಶಾಸ್ತ್ರ ಕರ್ಮಾಚಾರರತರಿಂಗೆ ।
ಜಾತವಾಗದು ಭಕ್ತಿಯಾಗ ಯೋಗವ್ರತಂ ಸ್ವಾಧ್ಯಾಯ ತೀರ್ಥಂಗಳು ॥
ಪೂತಗೈಲಾರವೆಮ್ಮಯ ಭಕ್ತಿಪುಟ್ಟುವದು ।
ಭೂತಳದಿ ಬಹುಜನ್ಮಸುಕೃತ ಪರಿಪಾಕದಿಂ ।
ದಾತಗೀ ಕರ್ಮಯೋಗಾದಿಜಂಜತ ಕೃತ್ಯವೇಳ್ಪನಿತುವೇಡವನಘ ॥ (12)

ವಿಜಿತಮಾತ್ಸರ ವೀತರಾಗ ಸರ್ವಪ್ರಾಣಿ ।
ಋಜು ಮೈತ್ರಿಯಖಿಲಭೂತಂಗಳಲ್ಲಿ ಮದ್ಭಾವ ।
ಭಜನೆ ನಿರ್ಮಮತೆ ಯತ್ನವಿಶೂನ್ಯ ನಿಷ್ಪರಿಗ್ರಹ ನಿರ್ವಯನ್ನಿರಾಸೆ ॥
ಕುಜನರಲುದಾಸೀನ ದೊರೆದನಿತರಲಿ ತುಷ್ಟ ।
ತ್ಯಜಿಸಿ ಹರ್ಷವಿಷಾದಲಾಭನಷ್ಟಗಳಾವ ।
ಸುಜನಗಳವಷ್ಟರುವನವ ನೀಚನಾದೊಡಂ ಬ್ರಾಹ್ಮಣೋತ್ತಮವಿದು ದಿಟಂ ॥ (13)

ನಿರತ ಪಾಪಾಚಾರ ಜಾತ್ಯಾಶ್ರಮ ವಿದೂರ ।
ಪರಪುಲ್ಕಸಪುಳಿಂದ ನೀಚಾಂಗನಾಗಮನ ।
ಪರನೆನಿಸಿ ಭೋಗಲಂಪಟನಾಗಿ ಸತ್ಕರ್ಮಪೊಂದಿಲ್ಲದತಿಗರ್ವಿತ ॥
ದುರುಳನಾದರು ಮದೀಯೈಕತಾನಸ್ವಾಂತ ।
ವೆರೆದ ಭಕ್ತಿಯೊಳರಲ್ಕೊಂಡು ವಿಪ್ರೋತ್ತಮಂ ।
ಪರಮಪಾವನನೆನಿಪನಿದು ಸತ್ಯಮೆಂದರಿವುದಖಿಳವಾಮ್ನಾಯನುತದಿ ॥ (14)

ಕುಲಗೋತ್ರ ಜಾತಿಧರ್ಮ ಕ್ರಿಯಾದಿಗಳಿಲ್ಲ ।
ಬಲುತಪವ್ರತ ನೇಮನಿಷ್ಠೆಗಳ್ ಸಂತಾಪ ।
ಸಲಿಸಕಾರಣದ ಧಾವತಿಯಲ್ಲದವರಿಂದಲೆಮ್ಮ ಮಾರ್ಗಂ ಸಿಲುಕದು ॥
ಪಲವುವಿಧಕರ್ಮಗಳನಭಿಮಾನಗಳನುಳಿದು ।
ಸಲವಿಂದಲೆರಕದಂತಿರುವ ಸರಿಯಾದ ಭಕ್ತಿ ।
ಸುಲಭ ನಾನೆಂದರಿವುದಿದು ಸತ್ಯತಥ್ಯವೆಂದರಿತು ಸುಖವನುಭವಿಪ್ಪುದು ॥ (15)

ಎಂದೊರೆದ ವಾಣಿಯಿಂದಾನಂದನೆನಿಸಿ ಗುಹ ।
ಚೆಂದದಿಂ ತನ್ನಕರಗಳ ಮುಗಿದು ಮುಗುಳೆರಗಿ ।
ನಿಂದು ದೂರದಲಿ ಭಯಭರಿತ ಭಕ್ತಿಯೊಳಾ ರಘೂತ್ತಮನೊಳಿಂತೆಂದನು ॥
ಬಂದಿರುವ ಗಜತುರಗ ರಥಪದಾತಿಗಳ ಸುಖ ।
ಬಂಧುರವ ಸಿರಿಯರಸುತನವನವನಿಮ್ಮಯ ಪದ ।
ದ್ವಂದ್ವಕರ್ಪಿಸಿದೆನಿದನೊಪ್ಪುಗೊಂಡೆನ್ನಂ ಕೃತಾರ್ಥನಂ ಮಾಳ್ಪುದೊಲಿದು ॥
ವರಸುಧಾಚರಣದಮೃತಾರ್ಪಣಂ ಗೈದಂತೆ । [(16)
ಪರಮಪುರುಷಗೆ ಚತುರ್ದಶಭುವನಪತಿಗೆ ।
ಧರಣಿಯೊಳಗೆಳ್ಳನಿತನಾಂ ನಿವೇದನಗೈದುದ ಪಹಾಸಮಾತ್ತೆ ಜೀಯ ॥
ಚರಣಸೇವಕನ ಬಿನ್ನಪವ ಕೈಕೊಳವೇಳ್ಕು ।
ಕರುಣಾಳುಗಳ ದೇವ ಕಾಯಬೇಕೆಂದೆರಗಿ ।
ಪರಿಪರಿಯಲುಪಚರಿಸುವ ನಿಷಾದಪತಿ ಗುಹನ ನೋಡಿ ರಾಘವ ನುಡಿದನು ॥ (17)

ತಾತ ಕೇಳ್ನಿನ್ನಿಂದಲತುಳ ಸನ್ಮಾನ ಸಂ ।
ಪ್ರೀತ ನೆಸಿರ್ದೆವಾವು ಸರ್ವ ತ್ರಿಭುವನದ ।
ನೇತಾಕ್ಷಿಯಿಂದ ಕಂಗಳ ಹಬ್ಬವಾಯ್ತೆಂದು ನಿನ್ನ ಕಾಣ್ಬುದರಿಂದಲಿ ॥
ಪೋತಾದಿ ಶಾರೀರ ಸಂಬಂಧ ಜನರು ಸಹ ।
ಜಾತರಾರೋಗ್ಯ ಭಾಗ್ಯಕ್ಷೇಮವೇ ಎನುತ ॥
ಪ್ರೀತಿಯಿಂ ತೆಗೆದಪ್ಪಿ ಮುದ್ದಿಸಿದುದೇಂ ಪೇಳ್ವೆ ಭಜಕವಾತ್ಸಲ್ಯದಿರವ ॥ (18)
ನಿನ್ನ ಮನದತಿಶಯ ಪ್ರೀತಿಯಂ ನಾಬಲ್ಲೆ ।
ನಿನ್ನಾಧಿಪತ್ಯದೈಶ್ವರ್ಯ ಮೆನ್ನದು ಲೋಕ ।
ಸನ್ನುತನೆ ಮತ್ಪ್ರಾಣ ತುಲ್ಯನನ್ನುಳಿದನ್ಯ ಮೇನುಂಟು ಮೇಣಧಿಕವು ॥
ಎನ್ನಯ್ಯ ನಾಜ್ಞೆಯಿಂ ಮುನಿವೇಷಮಂ ಧರಿಸಿ ।
ಪನ್ನೆರಡು ಮತ್ತೆರಡು ವರುಷ ಬನದೊಳಗಿರ್ಪ ।
ದನ್ನು ಸಂಕಲ್ಪಿಸಿರುವೀ ಧರ್ಮಕೊಣೆಯಂ ಬರಗೊಡಲ್ಬಾರದನಘ ॥ (19)

ಅದು ನಿಮಿತ್ತದೊಳಾತ್ಮ ಸಂಭಾರ ವಸ್ತುಗಳ ।
ಸದನಕ್ಕೆಕಳುಪು ಸುಪ್ರೀತರಾದೆವೆನುತ್ತ ।
ಸದಯ ನಾಜ್ಞಾಪಿಸಲ್ ಸದಯನಾ ವಸ್ತುಗಳ ಪಿಂತಿರುಗಿಸಲ್ಕನಿತರೊಳ್ ॥
ಪದುಮದಿನಯಂ ಪಶ್ಚಿಮದಕಡಲ ಕಸೆಗೈದೆ ।
ಮುದದಿಂದರಾಘವಂ ತತ್ಕಾಲ ಕರ್ಮಗಳ ।
ಚದುರಿಂದ ಗೈದು ತತ್ತರುನೆಳಲ ನಾರಲ್ಕೆ ಸೌಮಿತ್ರಿ ಭಕ್ತಿಯಿಂದೆ ॥ (20)

ದೇವಗಂಗಾಜಲದಿ ಪದಪದ್ಮಗಳ ತೊಳೆದು ।
ಪಾವನಶ್ರೀ ತೀರ್ಥಮಂ ಕೊಂಡು ಮಗುಳೆ ಭೂ।
ದೇವಿಯಾತ್ಮಜೆಗೆರಗಿ ಸ್ವರ್ಣದೀಯುದಕಮಂ ತಂದು ಕರತಳಕೀಯಲು ॥
ಸಾವಧಾನದಿಕೊಂಡು ಜಾನಕೀಸಹಿತ ನರ ।
ದೇವ ತಳಪರ್ಣಸಿಕೆಯ ಸಾರೆ ಲಕ್ಷ್ಮಣ ದೂರ ।
ಕಾವಿಡಿದು ನಾಲ್ದೆಸೆಯನಾರೈವುತೊಪ್ಪಿರಲ್ಕಾಗ ಗುಹನಿಂತೆಂದನು ॥ (21)

ಅರಸ ನಿನಗೆಂದಾನು ತರಿಸಿರುವ ಪಾಸಿಕೆಗ ।
ಳುರುತರಾಹಾರಗಳನೊಪ್ಪುಗೊಂಡೆನ್ನನು ।
ದ್ಧರಿಸಿ ಶಯನಿಸವೇಳ್ಕುಮಿಂದಿರುಳೆಚ್ಚರದಲಿಹುದಾನು ಜಾಗ್ರತೆಯಲಿ ॥
ಪೆರತುಪದ್ರವ ಲೇಶಪುಟ್ಟದೋಲ್ ಕಾದಿರುವೆ ।
ಚರರು ವನಗೋಚರರು ಖಲ್ಲರೆಲ್ಲವರ್ಕೈರ್ಣವೆಯು ।
ವೆರದು ಪಾಲಿಪ್ಪುದೆಂದು ಬೇಡಿಕೊಳಲಾ ಗುಹಂಗೆಂದ ಸೌಮಿತ್ರಿ ನಯದಿ ॥ (22)

ಕೆಳೆತನದೊಳೆನಗೆ ನಿನ್ನಿಂದಧಿಕರಾರುಂಟು ।
ಜಲಧಿಮೇಖಲೆಯರಸ ರಾಜೋಪಭೋಗಗಳ ।
ನುಳಿದ ತಾಪಸರಂತೆ ತರುತಳದಲಿರ್ಪುದಂ ಪಂಬಲಿಸಿ ನೃಪತಿ ತನುವ ॥
ನುಳಿದಪಂ ಕೌಸಲ್ಯೆಯನುಸರಿಪಳಾ ಮಾತ್ರ ।
ಪಳಯದೊಡನೈದುವಳ್ ಮನ್ಮಾತೆ ವಿಪರೀತ ।
ಗಳ ಕೇಳ ಶತ್ರುಘ್ನ ನಿಪ್ಪನೆಂತಾ ನಗರಮೆಲ್ಲ ಜೆಲ್ಲಿಹುದು ಬಳಿಕ ॥ (23)

ಅಂತರಂತವಿಧಂಗಳನಾಂತ ಚಿಂತಾನಿಚಯ ।
ಸಂತಾನ ವೃದ್ಧಿಯೆನಿಸಿದೆ ನಿದ್ರೆ ಸುಖಸೌಖ್ಯ ।
ಮೆಂತಹದು ಪದಿನಾಲ್ಕು ಲೋಕನಾಥರಿಗಾಗಲಿದ ಮೀರಲಳವೆ ವಿಧಿಯ ॥
ಭ್ರಾಂತಿಗೊಂಡೇನು ಫಲವೆನುತ ಲಕ್ಷ್ಮಣವೇಳ ।
ಲಂತಸ್ಥವಾದ ಶುಚಿಮಾಂಬರಿದು ಬರಲು ಗುಹ ।
ಸಂತಾಪದಿಂ ಮರುಗಿ ಪಲುಬುತ್ತು ಗಂಡೆರಳೆಯಂತೆದೈನ್ಯದೊಳದ್ದನು ॥ (24)

ಕರವುತಲಿ ಕಂಬನಿಗಳುಸಿರುಸಿರೆನುತ್ತಲುಂ ।
ಪೊರಳೆ ಸಂಕಟಗೊಳುವ ಗುಹನ ನಿಟ್ಟಿಸಿ ಮನದ ।
ಮರುಕದಾ ಸೌಮಿತ್ರಿ ತನ್ನೊಳಿಂದಂ ಬೆರರ ತಾಪವಾತ್ಮೀಯವೆನುತ ॥
ಅರಿದು ಸಂಕಟಗೊಳುವ ನೀ ಮಹಾಪುರುಷ ಸ ।
ತ್ಕರುಣಾಳುಗಳಲಧಿಕ ತೊಳಲಲನುಚಿತವೀತ ।
ನುರುತಾಪಹೊರಗೈಯುವೇಳ್ಕೆಂದು ಸೌಮಿತ್ರಿಯನಿಷಾದಪತಿಗೆಂದನು ॥ (25)

ಗೆಳೆಯ ನಿರ್ಮಲಚಿತ್ತ ನೀನಿದೇಂ ಕಾರಣದೊ ।
ಳಳುವರುಜ್ಜಗಗೈವ ಶ್ರೀರಾಮ ಪರಬೊಮ್ಮ ।
ನಿಳೆಯಭಾರವ ಹರಗೆಯ್ಯೆ ಮನುಜಾಕಾರವೆತ್ತು ಜನರಂತೆ ತೋರ್ಪ ॥
ಬೆಳಗು ಕತ್ತಲೆಯೊಳಂ ಸಿಲುಕುವುದೆ ರಘುವೀರ ।
ತೊಳಲುವನೆ ನರರಂತೆ ದುಃಖ ಕೋಟಲೆಗಳೊಳು ।
ತಿಳಿಯದಾರದಕೆ ಸಂಕಟ ಗೊಳುವದೇನುಂಟು ತಂಗಾಳಯೊಳಗೆ ನಂಟು ॥ (26)

ಆರಾದೊಡಂ ವಿಧಿಯ ಮೀರಲಸದಳ ದುಃಖ ।
ವಾರಿಂದ ಸಂಗಡಿಸಿತೆಂಬುದಖಿಳಭ್ರಾಂತಿ ।
ತೋರಸುಖಮೆಲ್ಲಿಂದಲೊದಗಿದುದು ನಾಂ ಗೈದೆನೆಂಬುದಭಿಮಾನ ಬರಿದೆ ॥
ಆರಿಂದಲುಪಕಾರವಪಕಾರವೆಂಬೆರಡು ।
ತೋರುವುವುಪೆಸತೊರೆವ ಸೊಲ್ಲು ಪುಸಿ ಪ್ರಾರಬ್ಧ ।
ಕಾರಣಂ ಸರ್ವಜಂತುಗಳಿಂಗೆ ನಿಜಕರ್ಮಸೇಣಿಂದ ಬದ್ಧವನಘ ॥ (27)

ಪಿರಿಯ ಮಿತ್ರದ್ವೇಷಿಗಳು ಬಂಧುವರ್ಗವೆ ।
ಲ್ಲರು ಹರವರ ಪರಕರ್ಮಾನು ವಶರೆನಿಸಿ ಬಾ ।
ಳ್ವಗುಳದ ವರಿಗವರಿಂದೆ ಸುಖದುಃಖ ಪ್ರಾರಬ್ಧಗಳ ನೋಡದಲೆ ಪೋಪುದೆ ॥
ನಿರತಮಾದೇಶ ಮಾಕಾಲಮಾದಿನಘಳಿಗೆ ।
ಯಿರದೊದಗಿ ಬರ್ಪುದನುಮಾನಮಿಲ್ಲದೆ ಶುಭವು ।
ಪಂಪಂಥಿಸುಶುಭಮೆಂಬೆರಡಾರನುಂ ಬಿಡದವನ್ಯಾಭೋಕ್ತವ್ಯಾಂಸಿಗಳ್ ॥ (28)

ವಿಧಿಕೃತವಮೀರಲಳವಲ್ಲ ದೇವಾಸುರರು ।
ಪದುಮಭವಹರ ವಿಷ್ಣು ಯತಿತತಿಗಳೆಲ್ಲರುಂ ।
ಮೊದಲಿಂದಲನುಭವಿಸಿ ಮತ್ತುಳವರದರಿಂದಲೀ ಶುಭಾಶುಭವೆರಡರ ।
ಸವನವೀತನು ವಿದಕೆ ಪುಣ್ಯ ಪಾಪಗಳಂದ ।
ಮುಡಿಸುವುವು ಸುಖದುಃಖ ಮೊಂದೊಂದನುಳಿಯದಿದು ।
ಪದಿನಾಲ್ಕು ಲೋಕಸಂಭವರಿಂಗಲಂಘ್ಯಮಿವು ದಿನರಾತ್ರಿಗಳ ತೆರದೊಳು ॥
ನೀರೊಳಗೆ ಕೆಸರು ಕೆಸರೊಳ್ ನೀರು ತೋರ್ಪಂತು (29)

ದಾರ ಸುಖಮಧ್ಯದೊಳ್ದುಃಖ ದುಃಖದ ನಡುವೆ ।
ತೋರುವಮ ಸುಖಮಿವಂ ಪರಿಹರಿಸಲಳವಲ್ಲವಾರಿಂದ ತಿಳಿದುನೋಡೆ ॥
ಪೂರುವದ ಪ್ರಾರಬುಧವನುಭವಿಸದಲ್ಲದವು ।
ತೀರದಾರಿಂದಪ್ಪುದೇನಿಯು ಪ್ರಾಕ್ಕೃತಂ ।
ಕಾರಣಂ ಮತ್ತಿದಕೆ ಮರುಗಿ ಮಾಡುವುದೇನು ಬಯಲ ಭ್ರಾಂತಿಯನು ನೆನೆದು ॥
ಈರೇಳುಭುವನಗಳ ಸೃಜಿಸಿಪಾಲಿಸಿ ಕಡೆಗೆ । [(30)

ಶರೀರದೊಳ್ ಮಡಗಿ ತಾ ನಿರಾಮಯನಾಗಿ ।
ತೋರಿ ತೋರದ ಸಕಲರೊಳಗಿಪ್ಪ ಚಿನ್ಮಯಂ ಲೋಕಾನುಸಾರವಿಡಿದು ॥
ಪ್ರಾರಬ್ಧಮಂ ಮೀರಬಾರದೆಂದನುಕರಿಸಿ ।
ತೋರುವದೆ ಸುಖದುಃಖಲೇಶ ವಿಜ್ಞಾನಂದ ।
ಸೂಂಗೆತ್ತಣದು ಸೂರಿಯಗುಂಟೆ ಪಗಲಿರುಳ ಸಂಬಾಧೆ ಲೋಕದೊಳಗೆ ॥ (31)

ಎನುತ ಲಕ್ಷ್ಮಣ ತತ್ವಕಥೆಯಿಂದ ಲೊಡಂಬಡಿಸು ।
ವನಿತರೊಳಗಾದಿತ್ಯನುದಯಾದ್ರಿಗೈತರ ।
ಲ್ಕಿನವಂಶದರಸನೆಳ್ಚತ್ತು ಪೂರ್ವಾಹ್ನಿಕಾಕ್ರಿಯವ ವಿರಚಿಸಿ ಬೇಗದಿ ॥
ಘನವಗಂಭೀರನಿಸ್ವನದಿಂದ ಸೌಮಿತ್ರಿ ।
ಯನುಕರೆದು ಕೈವಲಿನಿಯಂ ದಾಂಟಲುಪಯೋಗ ।
ವನು ಕೊಳ್ಪುದೆಂದು ನೇಮಿಸಲಾತ ನಾನಿಷಾದಪತಿಗಿಂದ ನೊಲಿದು ॥ (32)

ಉಡುಪವುಂ ತರಿಸು ನದಿಯಂ ತರಿಸವೇಳ್ಕುಮೆಂ ।
ದೊಡೆಯ ನೇಮಗೈದಪನೆನೆ ಹಸಾದಮೆನುತ್ತ ।
ನಡೆದು ದಾಯಾದ್ಯರಿಂಗರುಪಲಾಕ್ಷಣ ದಿವ್ಯನಾವೆಯಂ ಸಿಂಗರಿಸುತ ॥
ತೊಡರಿ ತಂದಾ ತಟಿನಿಯೆಡೆಗೆ ಸತ್ವರದಿಂದ ।
ಪೊಡವೀಶಗಭಿನಮಿಸಿ ಬಿನ್ನಪಂಗೆಯ್ಯೆ ಮುಂ ।
ಗಡೆಯಲಿಟ್ಟಸುತಂಬುಸರಣಿಯಂ ಸಂತಸವ ತಾಳ್ದಮಿಗೆ ರಘುವೀರನು ॥ (33)
ಸುರುಚಿರ ಮೃದೂಕ್ತಿಯಿಂ ಕರೆದು ಗುಹನಂ ಜಗ ।
ದ್ಭರಿತವಿಕ್ರಮ ರಾಮಚಂದ್ರ ನುಡಿದಂ ಲೋಕ ।
ರಿರುವೆಡೆಯಲಾವಿರುವುದನುಚಿತಂ ಮುನಿಸೇವ್ಯ ನಿರ್ಜನಸ್ಥಾನಕೈದಿ ।
ಪರಮಸುಖದಿಂದಿರಲ್ವೇಳ್ಕು ಋಷಿವೇಷಗಳ ।
ಧರಿಸಿ ವಿಪಿನದಿ ಚರಿಸೆ ಸೌಖ್ಯಮುದಂ ಬೇಗ ।
ತರಿಪುದಾಲದ ಪಾಲನೆನುತೊರೆಯಲಾ ಗುಹಂ ತಂದೀಯೆ ವಟಕ್ಷೀರವ ॥ (34)
ತಂದಿತ್ತ ಪಾಲಿನಿಂದಂ ರಾಮ ಜಡೆಗಟ್ಟ ।
ದಂದದಿಂ ಸೌಮಿತ್ರಿಯಗ್ರಭವನೋಪಾದಿ ।
ಬಂಧಿಸಲ್ ವೇಣಿಗಳ ಲೋಕವಚ್ಚರಿವಟ್ಟು ಸಂಬಂಧಗೊಳುತಲಿರಲು ॥
ಇಂದೀವರಾಕ್ಷ ಸೌಮಿತ್ರಿಯರ್ ಮೌನಿಗಳ ।
ವೃಂದನಾಯಕರಂತೆ ಕಂಗೊಳಿಪ ಸಮಯದೊಳ್ ।
ಬಂದು ಪಿಚ್ಛಿಪಿಸಿದರರಸ ಲಾಲಿಪುದಂಬುಸರಣಿ ಬಂದಿರ್ಪುದೆನುತ ॥ (35)
ಸೌಮಿತ್ರಿ ಕೇಳ್ ನಾವೆ ಬಂದಿದೆಕೊ ! ಬೇಗ ।
ಭೂಮಿಜೆಯು ಸಹಿತ ತರಣಿಯನಡರುವೇಳ್ಕೆಂದು ।
ನೇಮಿಸೆಹನಿಾದವೆಂದಾ ವಿದೇಹಾತ್ಮಜೆಯ ಪ್ರೋತಾಭಿರೋಹಗೈಸಿ ॥
ಪ್ರೇಮದಿಂ ಬನ್ನಿಸಿ ಗುಹನ ಕರಪಿಡಿದಾಗ ।
ರಾಮಚಂದ್ರಂ ಸುಮಿತ್ರಾತನಯ ಸಹಿತ ಬಂ ।
ದಾಮಹಾ ನಾವೆಯನಡರಂದಂ ಸುರನದಿಯ ದಾಂಟುವಾತುರದಿಂದಲಿ ॥ (36)
ನದಿಯ ಮಧ್ಯದಿ ನಾವೆಯೊಳ್ ನಿಂದು ವೈದೇಹಿ ।
ಮುದದಿ ಕರಗಳ ಮುಗಿದು ಮುನಿಜನಸ್ತುತೆ ದೇವಿ ।
ಸದಯೆ ನಾಂ ಪ್ರಾರ್ಥಿಪುದ ಚಿತ್ತದನುಕಂಪದಿಂ ಕೈಗೆಯ್ಯೆ ಭಕ್ತಿಯಿಂದ ॥
ಪದಗಳಂ ಪೂಜಿಸಿ ಸಹಸ್ರಗೋಧನ ವಸ್ತ್ರ ।
ಪದುಭುತದ ಚಿತ್ರಾನ್ನದಿಂದ ಭೂಮಿಸುರರ ।
ಸದರ ಸಂತಸ ಗೊಳಿಪೆ ಸಕಲೋಪಚಾರಗಳಲೊಂದು ಕುಂದೆನಿಸದಂತೆ ॥ (37)
ವನವಾಸವಂ ಕಳೆದು ಪ್ರೊಪ್ಪದಿಂ ಪತಿಸಹಿತ ।
ಪುನರಾಗಮನ ವಪ್ಪೊಲ್ ನ್ನ ಬಿನ್ನಪವ ನಿಜ ।
ಮನದೊತ್ತು ಸಾರ್ಚಿದಯೆಗೆಯ್ಯಲತಿ ಭಕ್ತಿಯಿಂದಾನು ಮಿಗೆ ಸಲ್ಲಲಿತದ ॥
ಘನತರತ ಸಾಸಿರಸುರಾಘಟದ ಮಾಂಸಗಳ ।
ಲನುಪದಂ ಪದವ ಪೂಜಿಪೆ ತಟಾಂತರವಾಗಿ ।
ಜನದೇವತೆಗಳನ ರ್ಚನಂಗೈವೆನೆಂದೆನುತ ಬೇಡಿಕೊಂಡಳ್ ಗಂಗೆಯ ॥ (38)

ಪಾವನತರಂಗಿಣಿಯ ದಾಂಟಿ ತಟವಂ ಸಾರಿ ।
ನಾವೆಯೊಳದಾಕ್ಷಣದಿ ತೊಳೆದು ಕರಪದಗಳಂ ।
ಕೋವಿದಾಗ್ರೇಸರಂ ಪುನರಾಚಮನಗೈದು ಕರೆದಾ ನಿಷಾದಪತಿಯು ॥
ತೀವಿದಾನಂದದಿಂದೊರೆದನೀಂ ಪರಿಪಾಲಿ ।
ಪಾವನಿಗೆ ನಡೆದೆಮ್ಮ ಮೂರ್ತಿಯುಂ ಮಾನಸದಿ ।
ಠಾವ ಗೈದಾನಂದದಿಂದಿರ್ಪುದೆನೆ ನಮಿಸಿ ಗಮಿಸಿದಂ ನೃಪತಿ ನಯದಿ ॥ (39)
ಶೃಂಗವೇರಪುರಕ್ಕೆ ಕಳಪಿ ಗುಹನಂ ಚರಣ ।
ಸಂಗಡಿಗ ಲಕ್ಷ್ಮಣನೊಳೆಂದ ಮಾನುಷಲೋಕ ।
ಸಂಗವಿಲ್ಲದ ನೆಲಂ ಘುಡುಘುಡಿಸುತಿವೆ ಕ್ರೂರಶಾರ್ದೂಲಸಿಂಗಂಗಳು ॥
ಅಂಗನಾಮಣಿ ಜನಕತನಯಳೆಂದಿಗು ವಿಪಿನ ।
ದಂಘವಣ್ಣೆಯುಂ ತಿಳಿಯಳದರಿಂದ ಬೆವರದೋಲ್ ।
ಮುಂಗಡೆಯೊಳೈದಿ ನಾಲ್ದೆಸೆಯನಾರೈವುತಂ ಬರ್ಪ ಧರಣಿಜೆಯ ಪಿಂತೆ ॥ (40)
ಪಿಡಿದು ಶರಚಾಪಗಳನಾರೈದು ಸೌಮಿತ್ರಿ ।
ನಡೆಯೆ ಮುಂಗಡೆಯೆ ಪಿಂದೆಸೆಯೆ ರಾಘವ ಬರಲ್ ।
ನಡುವೆ ಜಾನಕಿ ಬರುತ ತೋರುವಳ್ ಪರಮಾತ್ಮಪ್ರತ್ಯಗಾತ್ಮರ ಮಧ್ಯದಿ ॥
ತಡೆಯದೊಪ್ಪಿರ್ದ ಮೂಲಪ್ರಕೃತಿಯೆಂಬಂತೆ ।
ಸಡಗರದಿ ಮೃದುಪದನ್ಯಾಸಗೈವುತ ತನ್ನ ।
ಒಡಹುಟ್ಟಿದವನ ಸಂತಸಗೊಳಿಪಳೋ ಎನಲ್ ನೋಟಕರಿಗಚ್ಚರಿಯೆನೆ ॥ (41)
ಸೋಮಾರ್ಕರಂತಖಿಳ ಭೂತಳವ ಬೆಳಗುತಂ ।
ತಾಮಸೀ ರಕ್ಕಸರ ಭಯದಿ ಬಹ ಬ್ರಾಹ್ಮಣ ।
ಸ್ತೋಮಕಭಯವಕೊಡುತಲಿತ್ತುತಮಿತ ಸಂಪದವ ನಿಟ್ಟಿಸಿದ ಧನ್ಯರಿಂಗೆ ॥
ರಾಮಪುರಸವನ ರಾಜೀವನಿರ್ಜಿತ ವದನ ।
ನಾಮಹಾರಣ್ಯಮಂ ಕಳೆದು ಮುನಿಮಂಡಲದ ।
ಸೋಮ ಕಲಶೋದ್ಭೂತನಾಶ್ರಮಸಮೀಪಕಂ ಬಂದನಗರಾತ್ಮನೊಜೆ ॥ (42)

(ಸಂಧಿ 16, ಪದ 722)

ಹದಿನೇಳನೆಯ ಸಂಧಿ-

ಸೂಚನೆ ॥ ಮುನಿಗಳುಪಚರಣೆಯಂ ಕೈಕೊಂಡು ರಾಘವಂ ।
ಮನದ ಹರ್ಷದಿ ಭರದ್ವಾಜಾಶ್ರಮವ ಸಾರ್ದು ।
ವಿನಯತರಸಲ್ಲಾಪದಿಂದಲಾ ರಾತ್ರಿಯಂ ಕಳೆದನಾ ರಘುವೀರನು ॥
ಹಿಮರಾಜತನುಜೆ ಕೇಳ್ ರಾಮಚಂದ್ರಂ ಪ್ರಿಯದಿ ।
ವಿಮಲತಟನಿಯ ದಾಂಟಿ ಬನದೊಳ್ ವರಾಹಮಂ ।
ಸಮಹಾದುರುಂ ಪೃಷಾಮೃಶ್ಯಮೆನಿಸುವ ನಾಲ್ಕುವಿಧದ ಮೃಗಗಳನು ವಧಿಸಿ ॥
ಅಮರಧುನಿಯೊಳಗೆ ಸಾಯಾಹ್ನಿಕಕ್ರಿಯೆಗಳಂ ।
ಕ್ರಮದಿಂದ ರಚಿಸಿ ಫಲಭೋಜನದೊಳಂ ಕ್ಷುದಾ ।
ಶ್ರಮನಿವಾರಣಗೈದು ಸಾರಿ ವಿಟಪಿಯ ನಗುತ ಲಕ್ಷ್ಮಣನೊಳಿಂತೆಂದನು ॥ (1)

ಇದು ಮೊದಲು ರಾತ್ರಿ ಬೇರಡೆಪಿರಿಯಾವಿರ್ಪರುಂ ।
ಇದು ಮೊದಲ್ಗೊಂಡು ಪುರವುಂ ಸೌರುವನ್ನೆಗಂ ।
ಸುದತಿ ಸೀತೆಯನು ರಕ್ಷಿಸಲೀಳ್ಕವೊಂದೆ ಕರೆದು ಸದಯ ಮಗುಳಂತೆಂದನು ॥
ಪುದಿದ ಸತ್ಕಂಠದಿ ಸುಮಂತ್ರ ಪಿಂತಿರುಗಿದುದು ।
ಹೃದಯಕ್ಕತೀವ ಸಂಕ್ಲೇಶಸಂಭವವಾವು ।
ದವರಿಂದಲೆಮ್ಮ ನಗರಸ್ಮರಣೆಯಾಗುತಿದೆ ಪೇಳ್ವೆನೆಂತಾ ಪರಿಯನು ॥ (2)
ನೆನೆದಪ್ಪಿ ಮರುಗುತ್ತ ನಿದ್ರೆಯಂ ನೀಗಿ ।
ಮನದನುತಾಪದಿಂದ ತಾಂ ತೊಳಲುತಿಹ ನಾ ಭರತ ।
ಜನನಿ ಸಕಲಾಭೀಷ್ಟವಾಯ್ತೆಂಬ ಸಂಭ್ರಮದಿ ಹಿಗ್ಗುತಿಹಳನವರತವು ॥
ತನಯ ಬರ್ಪನ್ನೆಗಂ ರಾಜ್ಯದಫಲಾಶೆಯಿಂ ।
ಜನಪನಂ ಬಾಧಿಪಳನಾಥ ವಾರ್ಧಕದೊಳಂ ।
ತನಗೆ ತೆತ್ತಿಗರೊರ್ವರಂ ಕಾಣದಳಲುತಿಹ ಪುಲಿಯ ಕಂಡೆರಳೆಯಂತೆ ॥ (3)
ಚಿತ್ತಾನುಸಾರಿಯಹ ಮಗನ ವಿಪಿನದ ಕಡೆಗೆ ।
ಮತ್ತನಾದರು ಕಳಪಲಾಪನೇ ಧರ್ಮಾರ್ಥ ।
ವಿತ್ತರಕ್ಕಧಿಕವಿಾಕಾಮವೊಂದೇ ಮನಕೆ ತೋರುತಿದೆ ಭರತನಿಂಗೆ ॥
ಉತ್ತಮದ ಪದವಿ ಕೈಸಾರಲರಸಿನ ತೆರದಿ ।
ಮತ್ತಾರನುಂ ಗಣಿಸದಖಿಲಸೌಖ್ಯದೊಳಿರ್ಪ ।
ಮತ್ತಾವು ಬನಕೈದಲುದ್ಯೋಗಂ ಮುಪ್ಪಡಸಿ ಸತಿಯ ವಶವರ್ತಿಯಾಗೆ ॥ (4)
ಪರಿದು ಧರ್ಮಾರ್ಥವೆರಡಂ ಕಾಮವೊಂದನೇ ।
ಪರಿಸೇವಿಸುವನಾವನೆಮ್ಮ ಬೊಪ್ಪನತೆರದಿ ।
ನರರೊಳಗತಿಗರ್ಹಣೀಯಾಕರನೆನಿಪ್ಪನಿವ ತಪ್ಪಲರಿದೇನೆಂಬೆನು ॥
ಅರಸಿನಂತಕ್ಕೆಮ್ಮ ಪೊರಡಿಪರೆ ರಾಜ್ಯಮುಂ ।
ಭರತಂಗೆ ಕೈಗೈದುಲಕ್ಷ್ಮಪತಿಯಾತ್ಮಜೆಯು ।
ಪರಮಕಾರಣವಾವಳೇನೆಂಬೆ ವೈಭವವ ಸೌಮಿತ್ರಿ ಪೇಳ್ವೆನೆಂತು ॥ (5)
ಸಿರಿಯ ಮದದಿಂ ಸೊಕ್ಕಿ ಕೈಕೆ ದುರ್ಮಾರ್ಗದಿಂ ।
ದರಸನಂ ಬಾಧಿಸುವಳಾ ದುಃಖದಿಂ ತೊಳಲು ।
ತಿರುವ ಕೌಸಲ್ಯೆಯು ಸುಮಿತ್ರೆಯು ಮಹದ್ಬಾಧೆಗೊಳಸದಿರಳನುದಿನದೊಳು ॥
ಎರೆಯರಿಲ್ಲದನಾಥರಯದೆಡೆಯೊಲಿರಸಲ ।
ಧರಿಣಿಜೆ ಸಮೇತ ನಾನಿರ್ಪ ಬನದೊಳ್ ಪೋಗಿ ।
ಹರುಷಗೊಳಸವ್ವೆಯರ ಧರ್ಮಪಂಥಾನವೊಂದರಿತೆಮ್ಮ ವಾಕ್ಯಂಗಳ ॥ (6)
ಪೆತ್ತವರ ಚಿತ್ತಕೆಮಳಾನಂದ ಹರುಷಗಳ ।
ನಿತ್ತರಿಸುತ ಧರ್ಮ ಪುಟ್ಟಿದಂದಿಂ ಸಲಹೆ ।
ಬಿತ್ತರದ ಶೋಕಸಾಗರದ ನಡುಮಡುವಿನೊಳ್ ಮುಳುಗಿಸುವುದಳಲಿಸುವುದು ॥
ಪುತ್ರಾವಧರ್ಮವೆನ್ನಂ ಪೋಲ್ವ ತನಯನಂ ।
ಪೆತ್ತಾಕೆಗಂ ಸುಖಂ ಪಡೆದವರಿಗತಿ ಶೋಕ ।
ವಿತ್ತು ಜೀವನಗೈವ ದುರ್ಜನ್ಮಮುಂ ಸುಡಲಿ ಫಲವದೇಂ ಬದುಕಿ ಜಗದಿ ॥ (7)

ಸೌಮಿತ್ರಿ ಕೇಳಮ್ಮ ಮಾತೆಯರಿಗತಿಶೋಕ ।
ಭೀಮಧಾಮವನಿತ್ತ ಪುತ್ರನಾಮಕಶತ್ರು ।
ರಾಮನೆನಿಪಂ ಪುಟ್ಟಲೀತಗೆಂದಖಿಲ ಜನರಾಡುವರನೇಕವಿಧದಿ ॥
ಈ ಮಹಾದುಃಖಮಂ ಮನ್ನಿಸುವರಾರಕಟ ।
ತಾಮಸೋತ್ತಮನಾದೆ ನಪಕೀರ್ತಿಯಂ ತಾಳ್ದ ।
ಕಾಮಚರನೆಂದೆನಿಸಿತ್ತೈ ವಿಧಿಯುದೇನೆಂಬೆ ತನಯ ಕೇಳ್ ದುಷ್ಕರ್ಮಕೆ ॥ (8)

ಇನಿತು ಕ್ಲೇಶಮದೇತಕೆನುತಯೋಧ್ಯಾಪುರವ ।
ಮೊನೆಗಣೆಯೊಳಾಂ ಸಮಾಪ್ತಂಗೈವೆ ಕ್ಷಣಮಾತ್ರ ।
ವೆನಗಧರ್ಮಗೈಯದಿಹಪರಂಗಳ್ಕೆಡುವರೆಂಬರಲ್ತಿರದಭಯವು ॥
ಮನಕಂಡು ಮುಂಗಾಣದನುತಾಪಮೆಡೆಗೊಂಡು ।
ಬನದಿ ತೊಳಲುವುದಾದುದೆಂದನೇಕಾತುರದಿ ।
ವನಜಾಕ್ಷ ಮಾನುಷರ ಲೀಲೆಯಿಂ ಪೇಳುತಿಗ ಸೌಮಿತ್ರಿ ಭಯದಿ ನುಡಿದಂ ॥ (9)

ದೇವ ನೀಮಾನಸರ ಲೀಲೆಯಂ ಸುಖದುಃಖ ।
ಭಾವಭಾವಿತನೆನಿಸಿ ನಟಣೆಗೈವುದರಿಂದ ।
ದೇವಿ ಜಾನಕಿ ಪರಿತಾಪಗೊಳ್ಳುವಳೆನಗೆ ಭಯಶೋಕ ಮುಂಬರಿವುದು ॥
ಪಾವನಾಂಘ್ರಿಯನುಳಿದು ತನುವಿನೊಳಗಿರ್ದಪುದೆ ।
ಜೀವ ಧರಣೀತನುಜೆ ಗೆನಗೆ ಮಾತಂತಿರಲಿ ।
ತ್ರಿವಿಧರುಚಿಂತೆ ಪುಸಿ ನಿರ್ಲಿಪ್ತ ಪರಬೊಮ್ಮ ಕ್ಲೇಶಮೆತ್ತಣದು ನಿನಗೆ ॥ (10)

ಜಗತಿಯೊಳ್ ಧರ್ಮಕೊಣೆಯು ಬಂದೊಡಾನುದಿಸಿ ।
ಬಗಿದಿಟ್ಟಧರ್ಮಮಂ ಧರ್ಮಸಂಸ್ಥಾಪನೆಯ ।
ಮಿಗೆ ಮಾಳ್ಪೆನೆಂದಮರರವುಗಳಿಗಭಯಮಂ ಮೊದಲಿತ್ತು ತಥ್ಯಗೈಯೆ ॥
ನಗೆಭೋಗಭೂಮಿಯೊಳಗವತರಿಸಿ ಸುಖದುಃಖ ।
ಬಗೆಗಳನುಕರಿಪುದಲ್ಲದೆ ನಿತ್ಯ ನಿರ್ಮಲಗೆ ।
ನಿಗಮಮಸ್ತಕಮಣಿಗದೆಲ್ಲಿಯದು ಸಂಕ್ಲೇಶ ಶುಚಿ ನೆನೆವರಿಂಗಪ್ಪುದೇ ॥ (11)

ಎಂದಖಿಲವೃದುತತ್ವನೀತಿಯುತ ವಾಕ್ಯಂಗ ।
ಳಂದ ಸೌಮಿತ್ರಿ ಬಿನ್ನಪಗೈಯಲವಧರಿಸಿ ।
ದಂದುಗದ ಶೋಕಮಂ ಪರಿದು ಹರ್ಷಾನಂದದನುಭವದೊಳಿರಲನ್ನೆಗಂ ॥
ಇಂದುವಾರುಣಿಯ ಕಳಿತನಕೆಳಸಲಾ ಲೋಕ ।
ಬಂಧು ಬಂದುದಯಾದ್ರಿಮಕುಟಮಾಣಿಕಮೆನಿಸ ।
ಲಂದು ಸುರನದಿಯ ಸ್ನಾನಂಗೈದು ರಚಿಸಿದಂ ಪೂರ್ವಾಹ್ನಿಕ ಕ್ರಿಯೆಯನು ॥ (12)

ತದನಂತರದಿ ಧರಿಸಿ ಶರಚಾಪಮಂ ಬೇಗ ।
ಮದಹಸ್ತಿಗತಿಯಿಂದ ಮಾರ್ಗವಿಡಿದೈತರುತ ।
ಸುದತಿ ಸೀತೆಗೆ ವಿನೋದ ಕ್ರಮವ ತರುಗಳಂ ತೋರಿಸುತಲಾನಂದದಿಂದೆ ॥
ಕದನಕರ್ಕಶರಾಮ ಸೌಮಿತ್ರಿಸಹಿತ ಬಹು ।
ವಿಧವೃಕ್ಷಷಾಡಗಳ ಕಳೆಕಳೆದು ಮುಂ ।
ದದುಭುತದ ಪುಣ್ಯಬನ ಕಂಗೊಳಸೆ ದಿಟ್ಟಿಸಿದರತಿಮೋದಕರಚಿತ್ತದಿ ॥ (13)

ಅತಿವಿಚಿತ್ರದದೃಷ್ಟಪೂರ್ವಬನಗಳ ನೋಡು ।
ತತಿಹರ್ಷದಿಂದ ಸುರನದಿಸೂರ್ಯಸಂಭವೆಯ ।
ರತಿಮೋದ ಸಂಗಮಸ್ಥಾನವಾದ ಪ್ರಯಾಗಮಂ ಕಂಡು ಸೌಮಿತ್ರಿಯೊಳ್ ॥
ಕ್ರತುವಹನ ಧೂಮಮಭ್ರಂಕಷಾದಿಶಿ ಕಾಣ್ಬುದಿದು ।
ಯತಿಗಳಾಶ್ರಮ ಮೆನುತ ತೋರುತ್ತಿದೆ ಚರಮಗಿರಿ ।
ಗತಿವಿಡಿದ ಭಾಸ್ಕರನುಮಿಂದಿನಿರುಳಲ್ಲಿರಲ್ವೇಳ್ಕು ಸಂತಸದೆನುತ ॥ (14)

ದೂರದೊಳ್ ವೈದೇಹಿಲಕ್ಷ್ಮಣರ ನಿಂದಿರಿಸಿ ।
ಸೂರವಂಶಾಗ್ರಣಿ ಮುನೀಂದ್ರನಾಶ್ರಮದೆಡೆಗೆ ।
ಸಾರಿ ಯತಿದಾರಕನ ಕರೆದು ನಗುತಿಂತೆಂದ ರಾಮಲಕ್ಷ್ಮಣರಿರ್ವರು ॥
ಧಾರಿಣೀಸುತೆಸಹಿತ ಬಂದಿರ್ಪರೆಂಬೀ ವಿ ।
ಚಾರಮಂ ಪಾರಿಕಾಂಕ್ಷಿಕ ಚಕ್ರವರ್ತಿಪದ ।
ಸಾರಸಕ್ಕರುಪಿ ಬಹುದೆನೆ ವಟುಕ ಜವದಿಂದಲೈದಿ ವಿಜ್ಞಾಪಿಸಿದನು ॥ (15)

ವರಸುಧಾರಸಪಾನದಿಂ ತೃಪ್ತಿಯಾದಾತ್ಮ ।
ಹರುಷಗೊಳುವಂತಾ ತಪೋಧನಂ ಬಾಲಕನ ।
ಪರಮಮಾಧುರ್ಯತರವಾಣಿಯಂ ಲಾಲಿಸುತ ನಿಜತಪಃಫಲದ ರಾಶಿ ॥
ಕರತಳಕೆ ಬಂದುದಿಂದಿನ ದಿನಂ ಸುದಿನಮೆಂ ।
ದರಿದು ವೇಗದಿ ಪ್ರವೇಶಂಗೈಸವೇಳ್ಕುಮೆಂ ।
ದೊರೆಯಲಾವಟುಕ ವೇಗದೊಳೈದಿ ಶ್ರೀರಾಮನಡಿಗೆ ವಿಜ್ಞಾಪಿಸಿದನು ॥ (16)

ವಟುಕ ವಿಜ್ಞಾಪಿಸಲ್ಕಾಗ ವೈದೇಹಿ ಸಹ ।
ನಿಟಿಲ ಲೋಚನಮಿತ್ರನಾಶ್ರಮವನೊಳಪೊಕ್ಕು ।
ಘಟಿತ ಸಮ್ಯಕ್ ಜ್ಞಾನಕಲಿತಮುನಿಯಂ ಕಂಡು ನಿಜಗೋತ್ರನಾಮಂಗಳ ॥
ಪಟುತರೋಚ್ಚಾರಪೂರ್ವಕದಿಂದಲಭಿನಮಿಪ ।
ನಟನೆಯಂ ಕಂಡು ಮುನಿಪತಿ ಯಮಿತಹರ್ಷಸಂ ।
ಪುಟಿತ ಮನದಿಂದೆತ್ತಿ ಕುಳ್ಳಿರಿಸಿ ಪಂಪರಿಯ ನುಡಿಯಲುಪಚರಗೈದನು ॥ (17)

ಮತ್ತೆ ಮುನಿರಾಯನತ್ಯಾನಂದಸಂದೋಹ ।
ಮೊತ್ತರಿಸೆ ರೋಮಾಂಚವಾಗಿ ಮೈಮರೆದಾರ ।
ಘೂತ್ತಮಂಗರ್ಘ್ಯಪಾದ್ಯಾಚಮನಂಗಳಂ ಗೈಯಲನುಗೈಯ ನೋಡಿ ॥
ಪೊತ್ತಲ್ಲಮೆನುತಲುಪಚರಣೆಯಂ ನಿಲಿಸಿ ಮುನಿ ।
ಪೋತ್ತಮನೊಳೆಂದ ಸಂಯಮಿರಾಯ ಪೊಸತಿದೇಂ
ಚಿತ್ರವಿದು ಮುಪಚಾರಗೈಯಲಿಚ್ಛೈಸುವೆಯೆನಗೆ ಕ್ಷತ್ರಕುಲಜಾತಗೆ ॥ (18)

ಅರಸ ದಶರಥನುದರದೊಳು ಪುಟ್ಟಿ ಸಕಲಸುಖ ।
ಭರಿತನಾಗಿರುತಿರ್ದ ರನ್ನಿಗಂ ಧರಣಿಪೊಳ ।
ಲೆರೆಯನಾಗೆಂದೆನಗೆ ನೇಮಿಸಿದ ರಾಕ್ಷಣದಿ ಕೇಳು ಭರತನ ಮಾತೆಯು ।
ಸ್ಮರಿಸಿ ಪೂರ್ವದ ವರಗಳನು ಮಂದರಾವಚನ ।
ದುರುಬೆಯಿಂದವನುಯಾಚನೆಗೈಯಲಾ ದಿವ್ಯ ।
ಪುರುಷ ಧರ್ಮವ ವಿಚಾರಲಳವಲ್ಲದಾರಾಜ್ಯಮಂ ದಯದಿ ಭರತಗಿತ್ತು ॥ (19)

ಪದಿನಾಲ್ಕು ವರುಷ ಬನದೊಳಗಿರ್ದು ಬರ್ಪುದೆಂ।
ದಧಿಪನಪ್ಪಣೆಯಿತ್ತೊಡಾಂ ಬರ್ಪೆನೆಂದೆನಲು ।
ಸುಮತಿ ಜಾನಕಿ ಸುಮಿತ್ರಾತನಯರೆರ್ವರುಂ ಬಂದರೆಡೆವಿಡದೆ ಮುದದಿ ॥
ಸದಯನಿವ ಸೌಮಿತ್ರಿಯೊಡನೆ ಧರಣೀತನುಜೆ ।
ಪದಪಯೋಜಾನುಚರನಾನೆಂದು ಚಿತ್ತದೊಳ್ ।
ಚದುರಿಂದ ತಿಳಿದನುಗ್ರಹಿಸವೇಳ್ಕೆನೆ ರಾಮಚಂದ್ರನೊಳ್ ಮುನಿನುಡಿದನು ॥(20)
ಭವದೀಯಚರಣಕರುಣದೊಳರಿದೆನೀಲೋಕ ।
ವಿವರಗಳನೆಲ್ಲಮಂ ನಿನ್ನುಪಾಸನೆಯಲುದು ।
ಭವಿತವಾಗಿಹ ಪ್ರತೀಚೀದಿಟ್ಟಗಳ ಬಲದಿ ಕಾಲತ್ರಯಾವಸ್ಥೆಯಾ ॥
ಭವಣೆಯಂ ತಿಳಿದೆ ಪರಬೊಮ್ಮ ಲೋಕವ ಪೊರೆಯೆ ।
ಭುವಿಯೊಳವತರಗೈದು ದಂಡಕಾರಣ್ಯ ಸಂ ।
ಭವಋಷಿಗಳಂ ಸಲಹಲೈತರುವನೆಂದೆನಗೆ ಬಿದಿ ಪೇಳ್ದ ಪೂರ್ವಯುಗದಿ ॥ (21)
ಅಂದಿಂದಲಾನಮಿತ್ರ ನೇಮದಿ ಭವಚ್ಚರಣ ।
ಸಂದರ್ಶನಾಕಾಂಕ್ಷೆವಿಡಿದು ತಾವಕನಾದು ।
ಬೃಂದಂಗಳಂ ಪಿಡಿಯುತತ್ತಿಭಕ್ತಿಗೈದುದಕೆ ಕರುಣಾಳುಗಳ ದೇವನೆ ॥
ಬಂಧಿಸಿ ಜಟಾಭರವ ಚೀರವಾಸಗಳುಟ್ಟು ।
ಚಂದದಿಂ ಶರಚಾಪವಂ ಧರಿಸಿ ಸೌಮಿತ್ರಿ ।
ಒಂದೆಸೆಯೆ ವೈದೇಹಿಸಹಿತ ಕಂಗೆಸದೆ ಕೃತಸುಫಲಂಗಳಂದೆ ॥ (22)
ಸರ್ವಭೂತಾವಾಸ ನೀಲಮೇಘದ್ಯುತಿಯೆ ।
ಪೂರ್ವದೇವಾಂತಕ ನಿರಂಜನ ನಿರಾತಂಕ ।
ಪರ್ವತಾತ್ಮಜೆಯ ಮಾನಸದೀಪ ಮುನಿತಾಪಹರಣ ನಿಜಚರಣಶರಣ ॥
ಶರ್ವನೀರೇಜಭವಕೇಶವಾದ್ಯರು ಮಾಳ್ಪ ।
ಖರ್ವವಾಚಾಮಗೋಚರ ಚರಾಚರಪೂರ್ಣ ।
ನಿರ್ವಾಣಪಕ್ಷ ದ್ವಿಜಸಂರಕ್ಷ ಚಿನ್ಮಾತ್ರ ನೀ ಕಣಾ ಪರಮ ಪುರುಷ ॥ (23)
ವ್ಯಾಪಕ ನಿರಂಜನ ಪುರಾಣಪೂರುಷ ಚಿತ್ತ ।
ಗೋಪಿಕಾನಂದಸ್ವರೂಪ ಶಾಶ್ವತ ನಿಖಿಲ ।
ರೂಪವಾಸಕ್ರಿಯೆಗಳೆಲ್ಲದುಳಿದ ಪರಬೊಮ್ಮ ನೇದಾರ್ಥ ವೇದರೂಪ ॥
ತಾಪಹರ ಹರವಿಷ್ಣು ಸೃಷ್ಟ್ಯಾದಿರೂಪ ನಿ ।
ರ್ಲೇಪ ಗಂಗಾಜನಿತಚರಣಪಂಕಜ ಚಿತ್ಸ್ವ ।
ರೂಪ ಪಾವನ ಪಾವನಾಂಘ್ರಿಯುಗ ಸನಕಾದಿಮೌನಿ ಹೃದಯಾಬ್ಜದೀಪ ॥ (24)
ತರಿದು ಭೂಭಾರಕರ ಪೊರೆದಖಿಳಧರ್ಮಗಳ ।
ನರರೂಪನಾಂತು ಗಳಸಲ್ಕೆಂದು ಬಂದು ನೃಪ ।
ವರನುದರಸಂಭೂತನೆನಿಸಿ ಮಾನುಷನಂತೆ ಮೋಹಿಸಿ ಜಗತ್ರಯವನು ॥
ಚರಿಪೆಯಲ್ಲದೆ ದುಃಖಸುಖಲೇಶಮೆಂಬೆರಡು ।
ಪೊರೆಯು ಪುದ್ದುವುವೆ ಭವದೀಯಾಧ್ಯಾಸಂಗಳಂ ।
ದರಿತಿರುವೆ ನೆಲ್ಲಮಂ ವಂಚಿಸದೆ ಶರಣನಂ ಸಲಹು ದಯಾದಿಂದ ಪ್ರಿಯಾದಿ । (25)

ಎನುತ ರಘುವರನ ಚರಣದ್ವಂದ್ವಗಳ ತೊಳೆದು ।
ಮನದಣಿಯೆ ಪೊತ್ತಮಿಟ್ಟು ಮಸ್ತಕಾಗ್ರದಿ ತಳೆದು ।
ತನಯಶಿಷ್ಯಾದಿಗಳಗಿತ್ತು ಸಂತಸವೆತ್ತು ತುತಿಸಿದಂ ಮಗುಳೆ ನತಿಸಿ ॥
ಸನಕಾದಿಮೌನಿಜನವನುದಿನದಿ ಜಾನಿಸಲ್ ।
ಮನದ ಕೊನೆಗಂಟದೀ ಚರಣದ್ವಯದಿಂದೆನ್ನ ।
ಮನೆಯೊಳಂ ಕಂಡೆ ನಾನೇನು ಧನ್ಯಂ ಮಾನ್ಯ ನೀಜೀವದೊಳಗೆ ದೇವ ॥ (26)

ಉಂಗುಟಾಗ್ರದಲಮರಧುನಿ ಜನಿಸಿಲೋಕರಥ ।
ಸಂಗಮಿಲ್ಲದ ತೆರದೆಳಖಿಳಲೋಕಂಗಳ ಬೆ ।
ಡಂಗಿನಿಂ ಪಾವನೀಕೃತಗೈದಳಾ ಜಲವ ಭವ ಮೌಳಿಯಲಿ ಧರಿಸಿ ॥
ಮಂಗಳಪ್ರದನಾಮನೆನಿಸಿದಂ ತಾವಕ ಪ ।
ದಂಗಳಂ ಕಂಡೆ ಕೃತಕೃತ್ಯ ನಾನಾದೆ ಭವ ।
ಪಿಂಗಿತೆಂದತುಲ ಸಂತಸವಿ ನುತಿಸುವ ಮುನಿಪಗಜಪೌತ್ರನಿಂತೆಂದನು ॥ (27)

ಮುನಿತಿಲಕ ನೀಂ ಗೈವ ಸಂಸ್ತವದೊಳಂದೆನ್ನ ।
ಮನಕತೀವ ಸುಹರ್ಷ ಸಂಭೂತವಾಯಿತು ನಿಜ ।
ನೆನಹದೇನುಂಟು ಯಾಚಿಸಲೀವೆನೆನೆ ಮೌನಿ ಕೈಮುಗಿಯುತಿಂತೆಂದನು ॥
ಇನುಕುಲಾಗ್ರೇಶ ಬೇಡುವೆನೊಂದ ಮಾತು ಬಂ ।
ದೆನಗೆ ಮರೆಯಾಗದೊಲ್ ಭವದೀಯಮೂರ್ತಿ ನಿಂ ।
ದನವರತ ಹೃದಯಾಬ್ಜದೊಳಗಗಲದಿರುವಂತೆ ಪಾಲಿಸನೆ ರಾಮನೆಂದಂ ॥ (28)

ಜಗದೊಳುಳ್ಳಖಿಳವಸ್ತುಗಳ ಸಂಯಮಿಗಳಂ ।
ಬಗೆಬಗೆಯೊಳರಿತು ಮನ್ನಿಯೆಯುಂ ಪೊದ್ದಗೊಡ ।
ದಗಣಿತವ ಮತ್ಪ್ರಸಾದೈಕವಮಂಪೆರ ನಿನಗದಿದ್ದೆ ? ಯೆಂದಿಗುಪೊದ್ದದು ॥
ನೊಗಸಿರುವುದೀ ಮೂರ್ತಿ ಬಗೆಯುಗಲದೆ ಸರ್ವ ।
ರೊಗುಮಿಗೆಯೆನಿಪ್ಪನಿದ ತಪ್ಪದೆಂದಭಯಮಂ ।
ನಿಗಮಗೋಚರ ರಾಮಚಂದ್ರ ನಾ ಮೌನಿವರಗಿತ್ತನತಿಕರುಣದಿಂದ ॥ (29)

ಭಜಕಗೀಪರಿಯೊಳಭಯವನಿತ್ತು ಮುಂದಿನೊಲ್ ।
ಭಜಿಸಿ ಲೋಕಾಚರಣೆಯಂ ಮನುಷ್ಯರ ತೆರದಿ ।
ಸುಜನಸನ್ನುತ ಮಹಾಮೌನಿ ನಿಮ್ಮಯಶ್ಯಾಲೆ ? ಯಿಂದಾನು ಧನ್ಯನೆನುತ ॥
ವಿಜಯಸಂಪ್ರಾಪ್ತಿಗೈದುದು ಭವತ್ಸಲ್ಲಾಪ ।
ಮಜಪದವಿಯಂ ನಿಮಿಷಮಾತ್ರದೊಳ್ ಕೈಗೈಸಿ ।
ರುಜುಮನೋರಥ ಗೈದುದೇಂ ಪೇಳ್ವೆನೆನುತ ಉಪಚರಿಸಿದಂ ಮುನಿನಾಥನಾ ॥ (30)

ದೊರೆಪ್ರಿಯಾತಿಥಿ ರಾಮನೈತಂದ ನೆಂದರಿದು ।
ವರಮೌನಿ ಯರ್ಘ್ಯಪಾದ್ಯಾಚಮನ ಪುಷ್ಪಫಲ ।
ಪೆರೆದೋಪಚಾರಂಗಳಿಂದ ಸಂತಸಗೊಳಿಸಿ ಪರಪ್ರೀತಿಯಲಿ ಪೊಗಳ ॥
ಪರಿಪರಿಯ ಚಿತ್ರಕಥೆಗಳ ಪೇಳುತಾನಂದ ।
ಭರಿತನಾಗಿರ್ದಂ ಭರದ್ವಾಜಮುನಿ ರಾಮ ।
ಪುರದಧೀಶನೊಳು ಸಂಭಾಷಣಂ ಗೈದತ್ತು ಕಳೆದನಾ ಯಾಮಿನಿಯನು ॥ (31)

(ಸಂಧಿ 17 ಕ್ಕೆ ಪದ 53)

ಹದಿನೆಂಟನೆಯ ಸಂಧಿ

ಸೂಚನೆ ॥ ಹರಿದಶ್ವನಂದನೆಯು ದಾಂಟಿ ಪಂಥಾನದೊಳು ।
ಮೆರೆವ ವಟವಿಟಪಿಯಂ ಕಂಡು ತತ್ಸ್ವಾವಸ್ನಾಯು ।
ನಿರುತ ವಾಲ್ಮೀಕಿಮುನಿಯಾಶ್ರಮಕೆ ನಡೆತಂದ ನಿಂದೀವರಾಕ್ಷ ದಯಾದಿ ॥

ಅಂಬುಜದಳಾಯತೇಕ್ಷಣೆ ಕೇಳು ಮಾನಿನಿಕು ।
ರುಂಬದೊಳ್ ಬೆರೆದಪವಿತ್ರಕಥೆಗಳಂ ಪೇಳುತಿರೆ ।
ಲಂಬುಜಾರಾತಿ ಪಶ್ಚಿಮದ ಕಡಲಂ ಸಾರಲನ್ನೆಗಂ ದ್ವಾದಶಾರ್ಕ ॥
ಬಿಂಬ ಪೂರ್ವೋದಧಿಯ ನುಚ್ಚೈಳಿಸಿ ಕತ್ತಲೆಯ ।
ದೊಂಬಿಯಂ ತುಳಿವುತುದಯಾಚಲಾಗ್ರದ ನಿಲ್ಕ ।
ಲಂಬುಜೋದರ ತಪೋಧನರೊಡನೆ ಸಂಗಮಸ್ನಾನಕೈತಂದ ನೊಲಿದು ॥ (1)

ಸ್ನಾನಾಹ್ನಿಕ ಕ್ರಿಯೆಗಳಂ ರಚಿಸಿ ಸಕಲ ಸ ।
ನ್ಮಾನದಿಂ ಮುನಿತಿಲಕಗಭಿನಮಿಸಿ ಕುಳ್ಳಿರ್ದು ।
ಸಾನಂದದಿಂದ ಸಂಯಮಿಗೆ ವಿಜ್ಞಾಪಿಸಿದ ದೇವ ಪದಿನಾಲ್ಕು ವರುಷ ॥
ಆನಿರ್ಪುದೊಂದುತಾಣವನರಿಪವೇಳ್ಕುಮೆನೆ ।
ಲಾನರೇಶನ ನುಡಿಗೆ ನಸುನಗುತ ಋಷಿನಿವಹ ।
ಮಾನಿತಭರದ್ವಾಜ ಮುನಿನಾಥನಿಂತೆಂದ ಬಂಧುರಸ್ನೇಹದಿಂದ ॥ (2)

ಅಮರಾಪಗಾಪುಣ್ಯಯಮುನಾನದಿಗಳಲ್ಲಿ ।
ವಿಮಲಸಂಗಮಶುಭಾಶ್ರಮ ಮೀ ಪ್ರಯಾಗಮಿದ ।
ಸುಮನಸರ್ ಬಯಸುವರನೇಕಸಂತೋಷದಿಂದೀ ತಾಣ ಬೇಕೆನ್ನುತ ॥
ನಮಿತಾಮರೇಂದ್ರ ಸತತರಕ್ಷಣದಯಾಸಾಂದ್ರ ।
ರಮಣೀಯಮಪ್ಪವನ ಸ್ಥಾನದೊಳಗಿರ್ದೆಮ್ಮ ।
ಶ್ರಮನಿವಾರಣಗೈಯವೇಳ್ಕೆನಲ್ಕಾ ಮುನಿಪಗಿಂತೆಂದನಂಬುಜಾಕ್ಷ ॥ (3)

ಉತ್ತಮೋತ್ತಮ ಶುಭಸ್ಥಾನಮಹುದಾರ್ಯರಲೋ ।
ಗೋತ್ರಮರು ದಯದಿಂದಲೆಮ್ಮ ನಿಟ್ಟಿಸಿರೆಂದು ।
ಮೊತ್ತಗೊಂಡೈತರ್ಪರೀ ಜನರಸಲ್ಲಾಪಸಂಕ್ಲೇಶಹರ್ಷಂಗಳ್ ॥
ಸುತ್ತಿಗೊಂಡಪವಖಿಲಭೋಗಂಗಳುಳಮು ಮುನಿ ।
ವೃತ್ತಿಯಲ್ಲಿರ್ಪರಿಗೆ ಸಂಸರ್ಗದೋಷ ಋಷಿ ।
ಸತ್ತಮನೆ ವಿಜನರಮಣೀಯ ಸುಸ್ಥಲವೊಂದ ಸೂಚಿಸೆನೆ ಯತಿ ನುಡಿದನು ॥ (4)

ತಾತ ಕೇಳಲ್ಲಿಂದ ಮೂಗಾವುದವ ದಾಂಟೆ ।
ಜಾತರೂಪನಿಕಾಶಕೂಟವಿಶ್ರುತತಟೋ ।
ದ್ಭೂತನಾನಾವೃಕ್ಷ ಮೃಗಪಕ್ಷಿ ಸಂಘಾತದಿಂದಪವಿತ್ರರಮ್ಯಮೆನಿಸಿ ॥
ವಾತಾತಪಂಗಳುಪಟಳವಿಲ್ಲದತಿಸುಖ ಸ ।
ಮೇತಮಿಂ ಗಂಧಮಾದನದಂತೆ ಕಂಗೊಳಿಪ ।
ಖ್ಯಾತವಪ್ಪಾ ಕಾಂಚನದ ಥಳಥಳಾಂಶುಪ್ರಭಾಜಿಪ್ಪುದು ಮೇರುಗಿರಿ ತೋರುವಂತೆ ॥ (5)

ಆಗಿರಿಯು ನಿಟ್ಟಿಸಿದರಿಂಗಖಿಲ ಸುಖಸಂಪ ।
ದಾಗುವುದು ಲೇಶಪಾತಕ ಚಿತ್ರಸಂಭೂತ ।
ಮಾಗದೆಂದಿಗೆನುತ್ತ ಉರಿತ್ರುತಾಪಸವರ್ಯರಾ ಶೈಲಕೂಟಂಗಳ
ಭೋಗಮಂದಿರಗೈದು ಬಿಡದಿರ್ಪರದರಿಂದ ।
ರಾಗ ವೆಗ್ಗಳಿಸೆ ಸುರಕಿನ್ನರಾದಿಗಳೆಲ್ಲ ।
ರಾಗಿರಿಯು ನಗಲದನವರತ ಸುಖದಿಂದಿರ್ಪರೇನೆಂಬೆ ನತಿಶಯವನು ॥ (6)

ಅಲ್ಲಿ ವೈದೇಹಿಸಹ ಸುಖದಿಂದಲಾನಂದ ।
ದಲ್ಲಿರಲ್ಬಹುದೆನುತ ಪೇಳದ ತಪೋನಿಧಿಯ ।
ಸೊಲ್ಲ ಕೇಳುತ ಹರುಷದಿಂದಲಭಿವಾದನಂಗೈದು ಬೀಳ್ಕೊಂಡು ಪೊರಟು ॥
ಅಲ್ಲಿಂದ ಸೂರ್ಯಸಂಭವೆಯ ತಟದೆಡೆಗೈದಿ ।
ಬಲ್ಲಹರದೆಸೆಯಿಂದ ಶೈವಲಿನಿಯಂ ದಾಂಟಿ ।
ಚೆಲ್ಲೆಗಂಗಳ ಚೆಲುವೆ ಜಾನಕಿಯನೊಡಗೊಂಡು ನಡೆದ ಪಂಥಾನವಿಡಿದು ॥ (7)

ಬರುತ ಬದರಿಯ ವನವ ಕಡೆಗೊಳಿಸಿ ಮುಂದೆಸೆಯೊ ।
ಮೆರೆವ ನೀಲಾಭ್ರನೀಕಾಶವತಿಶೀತಳತ ।
ತರುಗಳರಸೆಂಬಂತೆ ಕಂಗೊಳಿಸೆ ವಟವೃಕ್ಷಸಾಕ್ಷಾನ್ಮಹೇಶನಂತೆ ॥
ಧರಣಿಜಾತೆಯು ತೀವ್ರಹರುಷದಿಂದಭಿನಮಿಸಿ ।
ಕರಗಳಂ ಮುಗಿದು ಪ್ರಾರ್ಥನೆಗೈದು ಭಕ್ತಿಯಿಂ ।
ದೊರೆದಳಿಲೆ ನ್ಯಗ್ರೋಧಪಾದಪೋತ್ತಮ ಸಲಹು ವೀರರವಿಯೊಳಗೆನ್ನುತೆ ॥ (8)

ವನವಾಸವಂ ಕಳೆದು ಸುಖದಿಂದ ಪಿಂತಿರುಗಿ ।
ಮನೆಗೆ ಬಪ್ಪವಸರದಿ ಮಂಗಳಪ್ರದಮೆನಿಪ ।
ನನೆಗಳಂ ಫಲಸೀಧು ಪಕ್ವಾನ್ನಪಾನಂಗಳಂದರ್ಚನಂಗೈವೆನು ॥
ಎನುತ ಪ್ರಾರ್ಥನೆಗೈದ ಜಾನಕಿಯ ದಿಟ್ಟಿಸುತ ।
ಇನವಂಶಕೇತು ಸೌಮಿತ್ರಿಯೊಡನಿಂತೆಂದ ।
ವನಿತೆ ಸೀತೆಯನು ಕರೆದೆಯ್ದು ಮುಂಗಡೆಯ ಪಿಂತಾಂ ಬಪ್ಪೆ ನೋಡುತೆನುತೆ ॥ (9)

ಮುಂಗಡೆಯೆ ಲಕ್ಷ್ಮಣಂ ವೈದೇಹಿಯರ್ನಡೆಯೆ ।
ಸಿಂಗವಿಕ್ರಮರಾಮ ಮೆಲ್ಲಡಿಗಳಿಡುತನತ ।
ಮಂಘವರ್ಣೆಯಂ ಕಂಡು ಸರ್ವಲೋಕಾನಂದಗೊಳುತ ಭುಲ್ಲೈಸುತಿರಲು ॥
ಅಂಗನಾಮಣಿ ಸೀತೆ ಯಾವ ಫಲಪುಷ್ಪಗಳ ।
ನಂಗೀಕರಿಸಿ ಕೇಳಲಡಿಗಡಿಗೆ ಸೌಮಿತ್ರಿ ।
ಹಿಂಗದೀವ್ರವಲಾ ಬನಂಗಳೊಳ್ ಚರಿಸಿದರನೇಕ ಸಂತೋಷದಲ್ಲಿ ॥ (10)

ನುಡಿವ ಗಿಳಿಗಳಸೊಂಪು ನಡೆವಂಚೆಗಳ ಗುಂಪು ।
ಬಿಡಿವ ಮರುತನ ತಂಪು ತೊಡರುವಳಿಗಳ ಪೆಂಪು ।
ನಡಗರದ ಪಂಚಮಧ್ವನಿಗಳಂ ಪಾಡುತಿಹ ಕೋಕಿಲಸ್ವನದ ಸೊಂಪು ॥
ಬೆಡಗ ಬೀರುವ ಸೂರ್ಯಸುತೆಯ ತಟನಂದನದೊ ।
ಳಡಿಗಡಿಗೆ [illegible]ಸುತ್ತ ವಿನೋದಗಳ ನಿಟ್ಟಿಸುತ ।
ನಡೆದರಾಪಿನಮೇಕಕ್ರೋಶಮಾತ್ರವನಲ್ಲಿ ಪೆರು [illegible] ॥ (11)

ಮಾಡಿ ಸಂಧ್ಯಾವಂದನಾದಿಗಳ ಪಕ್ವಫಲ ।
ಮೂಡಿ ಸುಖನಿದ್ರೆಯಿಂ ಪವಡಿಸಿದರನಿತರೊಳ್ ।
ಮೂಡಗಡಲಿಂ ದೊಗೆಯಲರ್ಕ ನೆಚ್ಚತ್ತಾಗ ನಿಶಿಯು ಜಾಗರದಿಂದಲಿ ॥
ರೂಢಿಯೊಳ್ ಮಲಗಿರುವ ಲಕ್ಷ್ಮಣನನೆಚ್ಚರಿಸಿ ।
ಮಾಡಿ ಸ್ನಾನಾದ್ಯಖಿಲಕೃತ್ಯಂಗಳಂ ಬನವ ।
ನೋಡುತ್ತೈದಿದರು ಪಥವಿಡಿದು ವಾಲ್ಮೀಕಿ ಮುನಿಯಾಶ್ರಮಕ ಮೋದದಿಂದ ॥ (12)

ಸುರಪನಂದನದಂತನೇಕಫಲಪುಷ್ಪಸಂ ।
ಭರಿತವನನದಿನದಗಳಲ್ಲೆಸೆವ ಮೌನಿಗಳ ।
ಪರಮಪಾವನಿತ ಶುಭವಾಣಿಗಳನಾಲಿಸುತಲೊಳಪೊಕ್ಕು ದ್ವಿಜಿವಹದಿ ॥
ಮೆರೆವ ವಾಲ್ಮೀಕಿ ಮುನಿಯಂ ಕಂಡು ವೈದೇಹಿ ।
ವೆರದು ಚರಣಂಗಳಂಗಭಿನಮಿಸೆ ರಾಘವರ ।
ಪರಮಮಂಗಳಮೂರ್ತಿಯಂ ಕಂಡು ಹಿಗ್ಗಿದಂ ಪ್ರಾಚೇತಸಂ ಮುದದೊಳು ॥ (13)

ಕಂದರ್ಪನಿಭರೂಪಿನಮಿತ್ರಪ್ರತಾಪನಂ ।
ಬಂಧುರದ ನುಣ್ಚುರದ ಸುಜಟಾಕಲಾಪನಂ ।
ಇಂದೀವರಾಕ್ಷವೈದೇಹೀ ಸಹಾಯನುಂ ಸೌಮಿತ್ರಿ ಸಂಸೇವ್ಯನು ॥
ಮುಂದೆಸೆಯೆ ಗೋಚರಿಸಲೀತನೆ ರಘುನಾಥ ।
ನೆಂದರಿತು ವಾಲ್ಮೀಕಿ ಋಷಿನಿವಹಸಹಿತೆದ್ದು ।
ಚಂದದಿಂದರ್ಘ್ಯಪಾದ್ಯಾಚಮನಂಗಳಂ ಸತ್ಕರಿಸಿ ಮಗುಳೆ ನುತಿಸಿ ॥ (14)

ಮಧುರತರಫಲಮೂಲಕಂದಂಗಳಂ ತಂದು ।
ಮುದದಿಂದಲಿತ್ತು ಸತ್ಕರಿಸಿ ಮತ್ತುಪಚರಿಸಿ ।
ಸದಯ ಸುಕ್ಷೇಮವೆ ಧರಾತಳಕ್ಷೇಮಕೆಂದೈತಂದಿರೆನುತ ನಯದಿ ॥
ಪದುಮನೇತ್ರನ ಮನಸ್ತೋಷ್ಯಪಚಾರಗಳಂದೆ ।
ಹೃದಯಹರ್ಷಂಗೊಳುವ್ವೊಲೆಸಗಲಾ ಮುನಿವರನೆ ।
ಮುದದಿಂದಲೀಕ್ಷಿಸುತ ಶ್ರೀರಾಮನಿಂತೆಂದ ಮುಂತಪ್ಪ ಕಷ್ಟವೊಂದ ॥ (15)

ಪಿತುರಾಜ್ಞೆಯಿಂದಾನು ಬನಕೆ ನಡೆತಂದ ಸಂ ।
ಗತಿ ದಿವ್ಯಚಿತ್ತಕಂ ವಿದಿತಮುಂಟಾದರೀ ।
ಸತಿ ಸಹಿತಸುಖದಲಿರ್ಪಾವಾಸಮಂ ತೋರೆ ಕೆಲಕಾಲಮಿರ್ದಪ ಬಳಿಕ ॥
ನುತಿಸಿ ಮುಂದೈದುವೆನೆನುತ್ತ ಪೇಳದ ನುಡಿಯ ।
ಯತಿಶಿಖಾಮಣಿ ಕೇಳಿ ನಸುನಗುತಲಿಂತೆಂದ ।
ಕ್ಷಿತಿಸುತಾರಮಣ ಸಜ್ಜನನಿಚಯಸಂಸ್ಕರಣ ಪೇಳ್ವೆ ಕೇಳ್ವ ಬುಧಶರಣ ॥ (16)

ನೀನೆ ನಿಖಿಲಾವಾಸನಿಲಯನಾದರು ಲೋಕ ।
ಸಾನಂದದಿಂ ಭವಸ್ಥಾನ ಧರಣಿಜೆಸಹಿತ ।
ವಾನಿರ್ಪರೊಂದು ನೀಯುವ ತೋರ್ಪುದೆಂದೊರೆದರದೇನ ವಿಜ್ಞಾಪಿಸುವೆನು ॥
ಮಾನಹಾನಿಯನುಳಿದು ಮಗುಳೆ ವೈರಗಳಳಿದು ।
ಹೀನೋತ್ತಮಾಂಶಗಳ್ಗಳುಳಿದಖಿಲ ಭೂತಸಂ ।
ಸ್ಥಾನವಾನಸ ನಿಯತಮಂದಿರಂ ಭವದೀಯ ಚರಣಮಿರ್ಪೆಡೆಕ ಜೀಯ ॥ (17)

ಭವದೀಯ ನಾಮಕೀರ್ತನೆಯಿಂದ ಪಾವನಿತ ।
ಭವರಹಿತ ನಿರ್ದ್ವಂದ್ವ ನಿಸ್ಪೃಹ ನಿಜಾನಂದ ।
ಲವಲವಿಕೆಯಾಂತು ಧರ್ಮಾರ್ಥಧರ್ಮಗಳೆನುಳದು ಭವದೇಕಶರಣವೆನಿಸಿ ॥
ಶಿವಶಾಂತಿಯಂ ವಹಿಸಿ ಹಮ್ಮುಬಿಮ್ಮುಗಳುಳದು ।
ನವಲೋಷ್ಟಕಾಂಚನ ಸಮಾನಬುದ್ಧಿಯೊಳು ಮ ।
ತ್ತವಿರಳಾಚರಣಸಂಕಲಿತ ಮಾನಸಮದುವೆ ಮಂದಿರಂ ಮನುಕುಲೇಶ ॥ (18)

ಪೊಂದಿ ಹಿತವಂ ಹರ್ಷಗೊಳದರಿಷ್ಟಂಘಟಿಸಿ ।
ತೆಂದು ದುಃಖಿಸದೆ ಸಂತತತಿವ್ಯತೇಜದೊಳು ।
ಪೊಂದಿಸಿಯೆ ಮಾನಸವ ಮಗುಳೊಂದನರಿಯದಾನಂದದಿಂ ತುಷ್ಟಿವಡೆದು ॥
ಸಂದಿಲ್ಲದಖಿಲ ಭೂತಾವಾಸ ಪರವಸ್ತು ।
ವೊಂದೆನುತಲರಿತು ನಿರ್ದ್ವಂದ್ವ ನಿರ್ಲೇಪ ಸುಖ ।
ಮೆಂದರಿದಹೃದಯ ಮತ್ತಾವಗಂರೊಳ್ ಸೀತೆಸಹಿತ ನೀ ನಿರ್ಭಯನಪ್ಪಾ ॥ (19)

ನಿರತಬಡದಭ್ಯಾಸದಿಂ ದೃಢೀಕೃತವಾದ ।
ಚರಣಸೇವಾಸಕ್ತನಿಷ್ಠೆಯಿಂದನವರತ ।
ಪರಮಕೀರ್ತನೆಯಿಂದ ಪಾಪವಿರಹಿತಮೆನಿಪ ಶಾಂತಮಾನಸವು ನಿನಗೆ ॥
ಪರಮಮಂಗಳಗೃಹಂ ನಿತ್ಯಕರಕೇಳ್ನೀವ ।
ನೊರವೆನೇಂ ಭವದೀಯನಾಮ ಮಹಿಮೆಯ ಮಹ ।
ಚ್ಚರಿತೆಯನು ನಾ ಬ್ರಹ್ಮಋಷಿಯಾದುದೀ ಚೆಲ್ವನಾಮ ಪ್ರಭಾವಮಲ್ತೆ ॥ (20)

ಅವತರಣಮಾಯಿತು ದ್ವಿಜಕುಲದೊಳಗೆ ಮತ್ತಖಿಲ ।
ಕುವಲಯ ತಿರಸ್ಕಾರವಹಚಾರ ಕೃತ್ಯಸಂ ।
ಭವಮಾದುದೆನಗೆ ಶೂದ್ರಾಂಗನೆಯರನವರತ ಸಂಸಾರಗೈವುತಿರಲು ॥
ಕುವರರುದುಭವಿಸಿದರನೇಕರವರಂ ಪೊರೆಯೆ ।
ನವಸಿತು ಚೋರರೊಳ್ ಸಂಗಮಂದವರಿಂ ತಾನು ।
ವಿವಿಧ ಶಸ್ತ್ರಾಸ್ತ್ರಗಳ ಧರಿಸಿ ಹಿಂಸಾಕರ್ಮದೊಳಗೆ ಶಮನಂತಾದೆನು । (21)

ಕಲಿಕಾಲವಿಾಪರಿಯ ದಿನಗಳೆಯುತಿರಲೊಂದು ।
ಜ್ವಲನ ಮೇಲಾಕಾರಮೆತ್ತಂತೆವಾಸರ ।
ಕುಲಶಿಖಾಮಣಿಗಳೈತರುತಿರಲ್ ಮಾರ್ಗದೊಳ್ ಕಂಡು ಕಡುಕೋಪದಿಂದ ॥
ನಿಲುನಿಲಿಲ್ಲಿಗೆ ಪೋಪಿರೆಂದು ಘರ್ಜನೆಗೈಯ್ಯ ।
ತುಲಿಯುತ್ತೈತರುವದಂ ಕಂಡು ಭಯಮಂ ಕೊಂಡು ।
ಚಲಿತಮಾನಸ ಮೆನಿಸುತಾಗ ಧೈರ್ಯದೊಳೆನ್ನ ಬೆಸಗೊಂಡರತಿವಿನಯದಿ ॥ (22)

ಘೋರುವಾಧಮ ದುಷ್ಟಶಬರಜನಕೃತ್ಯವ್ಯಾ ।
ಪಾರಮಂ ಕೈಕೊಂಡೆ ಯಾತಕೆನಲಾನೆಂದೆ ।
ನೋರಂತೆ ಪಸಿಯಿಪ್ಪ ಸತಿಸುತಾದ್ಯಖಿಲರಂ ಪೊರೆಯಲೋಸುಗಮೆನುತ್ತ ॥
ವೀರ ನೀಂ ಗೈದ ಪಾತಕ ಸುತಾದಿಗಳಿಂಗೆ ।
ಸಾರುವದೊ ಮಗುಳಿಲ್ಲವೋ ತಿಳದು ಕೋಶೀವಿ ।
ಚಾರಮಂ ಕೇಳ್ದು ಬಹುದೆಂಲಾನು ಜವದಿಂದೆ ಗೃಹವ ಸಾರಿದನು ಬಳಿಕ ॥ (23)

ಸತಿಸುತಾದ್ಯಖಿಲರೆಲ್ಲರ ಕರೆದು ಸಾರ್ಗೈದ ।
ಪ್ರತಿದಿನದ ಪಾತಕವನೆಲ್ಲರುಂ ಪಂಚಿಕೊಂ ।
ಡತಿಶಯದೊಳನುಭವಿಪ್ಪ ಪ್ರೇಮೀ ಖಲ್ಪಮೋಪೇಳ್ವುದೆನಲೆಲ್ಲ ಕೂಡಿ ॥
ಕತಿಪಯಾಲೋಚನೆಗೈದು ನಿಶ್ಚಿತಮಾದ ।
ಮತಿಯಿಂದ ಪೇಳ್ದರನುದಿನ ತಂದ ವಸ್ತುಗಳ ।
ಪ್ರತಿಜನರ್ ಕೊಂಬೆವಲ್ಲದೆ ದೋಷವೆಮಗಿಲ್ಲನುಡಿ ಪೊಲ್ಲ ಪೋಪುದೆನುತ ॥ (24)
ಕೇಳ ವಿಸ್ಮಿತನಾಗಿ ಭಯದಿಂದ ಪಥವಿಡಿದು ।
ತಾಳದಾರುಚಿಂತೆಯೊಳ್ ನಿಗಳಪ್ಪಿಡಗೈದಿ ।
ಪೇಳೆ ವೃತ್ತಾಂತಮಂ ಶರಚಾಪಗಳ ಬಿಸುಟು ಪೊಡಮಟ್ಟು ದುಃಖದಿಂದ ॥
ಖೂಳತನದಿಂ ದುರಾಚಾರಕರ್ಮದಿ ಶವಂ ।
ಗಾಳಾದೆ ನಿರಯಗಳ ನೆನೆದು ನಡುಗುವ ಚಿತ್ತ ।
ದಾಳಾಪಮಂ ಕಳೆಸಿ ಬದುಕಿಪುದು ದಯೆವೆರಸಿ ಮಾಳ್ದ ದುಷ್ಕೃತಗಳೊರಸಿ ॥ (25)
ಎನುತಲತಿದೈನ್ಯದಿಂದೆರಗಿದೆನ್ನಂ ನೋಡಿ ।
ಮುನಿಗಳತಿಕರುಣದಿಂ ನುಡಿದರೇಪೇಳ್ ನಿನಗೆ ।
ಘನಸತ್ಪಮಾಗಮಂ ಫಲಿಸಿತುಪದೇಶಿಸುವೆವಮಿತಸುಖವಹ ಮಂತ್ರಮಂ ॥
ಮನವೊಲಿದೆನುತ್ತ, ತಮ್ಮೊಳ್ವೆ ದಿಶಿದಿಟ್ಟ? ।
ಯನುಕರಣೆಗೈದಿಪಂ ದುಷ್ಟ ವಿಪ್ರಾರ್ಥಮಂ ।
ವಿನಯದಿಂ ಮರೆವೊಕ್ಕನೀತನುದ್ಧರಿಸಲ್ಕದೇಂ ಪೇಳ್ವೆವೆನುತ ಮುದದಿ ॥ (26)
ಎಂದು ತಮ್ಮೊಳ್ ತಾವೆತಿಳದು ಸರಸಿಜಪೀಠ ।
ನಂದನಂ ಭವದೀಯನಾಮವರ್ಣಂಗಳಂ ।
ಚಂದದಿಂ ವ್ಯತ್ಯಸ್ತಮಾಗಿ ಯೆನಗುಪದೇಶಗೈಯಲಾಂ ಭಕ್ತಿಯಿಂದ ।
ಹಿಂದುಮುಂದೆಣಿಸದನುದಿನ ಜಪಿಸು (ತಿರು) ತಿರುತ ।
ಪೊಂದಿದಂತಃಕರಣ ತನ್ಮಯಾವಸ್ಥೆಯಂ ।
ಬಂಧುರದ ಲೋಕದಾಟವ ಮರೆದು ಬಹುಕಾಲ ಸುಖಸಂತಸದಲಿರ್ದೆನು ॥ (27)
ಇರಲಿರಲ್ ಬತ್ತು ಪರಿವೇಷ್ಟನಂಗೈದೆನ್ನ ।
ಮರೆಸಲದರೊಳಗೆ ನಿಸ್ಸಂಗ ನಿಶ್ಚಲಹೃದಯ ।
ಬೆರೆದಿರಲ್ಬಹುಕಾಲ ಮಗುಳ್ ಬ್ರಹ್ಮರ್ಷಿಗಳ್ ಬಂದರಾಮಾರ್ಗ ವಿಡಿದು ॥
ಕರುಣದಿಂ ವಲ್ಮೀಕಮಂ ಕಂಡು ನೆನೆದೆನ್ನ ।
ಕರೆಯಲ್ ಪೆಸಗೊಂಡು ಗುರುವಚನಗೌರವದಿ ।
ಪೊರಮಟ್ಟು ಚರಣಕಾನತನಾಗೆ ದಿಟ್ಟಿಸುತ ಮುನಿಗಳತಿಹರ್ಷದಿಂದ ॥ (28)
ಪೋದುದೈಕ್ಯರಾತ್ರಡನ್ನ ವಲ್ಮೀಕಭವ ।
ವಾದುದರಿಂದ ವಾಲ್ಮೀಕಿ ಪೆಸರಿಂದ ಮುಕ್ತಿ ।
ಗಾಧಾರ ನಿಖಿಲಾರ್ಥವೀವ ಕೃತಿಯಂ ರಚಿಸಿ ತ್ರಿಜಗಮಂ ಪೊರೆವುದೆನುತ ॥
ಬೋಧನಂಗೈದು ಗಮಿಸಿದರಿತ್ತಲಂದಿಗಿಂ ।
ದೀಧರಾಧರದೊತ್ತಿಲಿರ್ದೆ ರಾಘವ ತ್ವತ್ಪ ।
ದಾದಿನಾಮಸ್ಮರಣಮಹಿಮೆಯೆಂತುಟೋ ಪೇಳ್ವರಾರ್ಗಳವು ಮೂಜಗದೊಳು ॥ (29)

ಮರಸೆಂದು ಜಪಿಸಿ ಸನ್ಮಾನಿಯರಾದಂ ಕ್ರಮದಿ ।
ಸ್ಮರಿಸುವರದೇನಹರೋ ತರ್ಕ್ಕಹಾ ಮಹಿಮೆಯಂ ।
ತೊರೆಯಲಪ್ಪುದು ಮತಿಗಗೋಚರನೆ ನೀಂ ಬಲ್ಲೆ ಎಲ್ಲದಾರರಿವರಕಟ ॥
ಚರಣ ಸೇವಕನಾದ ಕತ್ರದಿಂ ದಯಾರಸದಿ ।
ಕರುಣಿಸಿದೆ ಶ್ರೀರಾಮ ಪುರದರಸನುತಲ್ಲ ।
ದುರುತವಸ್ವಾಖ್ಯಾಯ ಮಂತ್ರ ತಂತ್ರಗಳಲ್ಲಿ ಸಿಲುಕುವೆಯ ಪರಮಪುರುಷ ॥ [(30)

(ಸಂಧಿ 18, ಪದ 783.)

ಹತ್ತೊಂಭತ್ತನೆಯ ಸಂಧಿ

ಸೂಚನೆ ॥ ಮುನಿಯು ಪುಣ್ಯಶ್ಲೋಕಚರಿತೆಯಂ ಸಜ್ಜನರು ।
ಮನವೊಲಿದು ಕೇಳುತಾನಂದಗೊಳುವಂದದಿಂ ।
ವನಜಾಂಬಕನನಾಮ ಮಹಿಮೆಯಂ ಬಿತ್ತರಿಸಿದಂ ಶಿವೆಗೆ ಶಿವ ಮುದದೊಳು ॥

ಘೋರತರದುಷ್ಕರ್ಮವಶನಾಗಿ ಸಂತತಂ ।
ಚೋರತ್ವದಿಂ ಪಕ್ಷಿಮೃಗಹಿಂಸೆಯಿಂದೆ ಸಂ ।
ಸಾರಮಂ ಪೊರೆವಧಮನೀಚಜನ್ಮದೊಳುದಿಸಿ ಗೋವಿಪ್ರಹತಕನೆನಿಪ ॥
ಕ್ರೂರಾತಪ ತಿಗೆಂತು ಸುಜ್ಞಾನವುದಿಸಿದುದು ।
ಕಾರುಣ್ಯದಿಂ ಬೆಸಸವೇಳ್ಕೆಂದು ಭಕ್ತಿಯೊಳ್ ।
ಧಾರಿಣೀಧರಜಾತೆ ಕೇಳಲ್ಕೆ ವಿನಯದಿಂ ಗೌರೀಶ ನಿಂತೆಂದನು ॥ (1)

ಚೆಲುವಾದುದಂ ಕೇಳ್ವ ಪ್ರಶ್ನೆ ರಾಜೇಂದ್ರನಿ ।
ಸ್ನೊಲವಾದಂಗಲ್ಲದುಳಿದಂಗಸಾಧ್ಯವಿಾ ।
ನೆಲದೊಳಿಲ್ಲರು ಧನ್ಯರಪ್ಪ ಸಚ್ಚರಿತೆಯಂ ಬೆಸಗೊಂಡರದನಃಗಿರ್ವೆನು ॥
ಪಲವುವೇದಾಂತಂಗಳರಿತ ವಿಪ್ರೋತ್ತಮರ ।
ಕುಲ.ಲವತರಿಸೆ ಪಿತಮಾತೆಯರಗಸಿಯಲವ ।
ಪಲುಬುತೊಂದೆಡೆಯೊಳೊರಗಿರಲೊರ್ವ ಶಬರ ಕಂಡೆತ್ತಿ ಕೊಂಡೊಯ್ದು ಮುದದಿ ॥ [(2)

ಪೊರೆದನಾಶಿಶುವ ಕೆಲಕಾಲಂ ಪುಳಿಂದ ನಿಜ ।
ತರುಣನೆಂಬಭಿಲಾಷೆಯಿಂದ ಜವ್ವನಪವಗೆ ।
ಬರಲು ಜಾತೋಚಿತದ ಮದುವೆಯಂ ಮಾಡಿದಂ ತನಯನೆಂಬುತ್ಸವದಲಿ ॥
ಇರುತಿರುತಲಮಿತವೆಂಗಳ ಮಡೆಗಿ ಸಂತಸದಿ ।
ಕರುಣವಂ ಪಡೆಪು ಸುಖದಿಂ ಬಾಳುತಿಲ್ಲರಂ ।
ಪೊರೆವರೆ ಕಿರಾತಬಾಹುಳ್ಯಸಂಪಾದನಂ ಗೈದು ಬಾಹಾಬಲದಲಿ ॥ (3)

ಕ್ರೂರಹಿಂಸಕರ್ಮಗಳ ಮಾಡಿ ಕುಕ್ಕುಟವ ।
ಯೂರ ವಾಹಿಷವೃಷಭಮೃಗಧೂರ್ತವೈ . . . ।
ವಾರಾಹ ಮೊದಲಾದ ಜಂತುಗಳ ವಧದಿಂದ ತೀರದಿರೆ ಸಂಸಾರವು ॥
ಚೋರ ಕಳವಿಂಗೆಳಸಿ ಪೇಟಖರ್ವಾದಿಗಳ ।
ತೂರಿದರ ವಿತ್ತಾಪಹಾರಗೈವುತಲುದರ ।
ದಾರ್ಢ್ಯಕೆಯಿಂದಿರ್ದ ಕೆಲವು ದಿನವೇನೆಂಬೆ ಯಮರಾಜನೆಂಬಂಹದಿ ॥ (4)

ಅತಿಕ್ರೂರ ಕರ್ಮಿಣಿ ಹಿಂಸಾ ನಿರತ ನಿರ್ಮೋಹಿ ।
ಪತಿತ ಪಿಂಗಾಕ್ಷ ಪಿಸುಣಂ ನಾರಗೋವಿಪ್ರ ।
ಘಾತಕ ನೆನಿಸುತ ಚೋರವೇಷದಿಂ ಮಾರ್ಗಗಳ ಸುಲಿದು ಬಾಧಿಸುತ ಜನರ ॥
ಪ್ರತಿದಿನದೊಳೀಪರಿಯೊಳಿರುತಿರ್ದ ಘೋರಸಂ ।
ಗತಿವಿಡಿದರಣ್ಯದೊಳ್ ಮನೆಗಟ್ಟಿ ಸಂತಸದಿ ।
ಸತಿಸುತಾದ್ಯಖಿಲ ಬಂಧುಗಳಂದ ಲೆರಡನೆಯ ಮೃತ್ಯು ತಾನೆಂಬಂದದಿ ॥ (5)

ಕೆಲವು ದಿನವೀಪರಿಯೊಳಾ ಶಬರನಿರಲಿತ್ತ ।
ನೆಲಕೊಂದು ಪನಿ ಬೀಳದಂತನಾವೃಷ್ಟಿ ಬಂ ।
ದೊಲಿದು ಪನ್ನೆರಡು ವತ್ಸರ ಭೂಮಿಯೊಳಗೆಲ್ಲ ಪಸುರಿಲ್ಲದಂತಾಗಲು ॥
ಕಲಿತಸಂಕಟದಖಿಲಪ್ರಾಣಿಗಳು ನಿಲ್ಲುವರೆ ।
ನೆಲನಿಲ್ಲದಂತಾಗಿ ಸಂವರ್ತಕಾಲದಂ ।
ತಲೆಯೆ ಭಯದಿಂದ ದೆಸೆದೆಸೆಗೋಡುತಸುಗಳಂ ಕಳೆದರತಿದುಃಖದಿಂದ ॥ (6)

ಇಂತಪಾರ ವಿಕಾರ ಜನಿಸೆ ಸಪ್ತಋಷಿಗಳ್ ।
ನಿಂತಿರರ್ ನೆಲವಿಲ್ಲದಲೆ ತೊಳಲಿ ಹಿಮನಗ ।
ಪ್ರಾಂತಕ್ಕೆಯ್ದುಪವೆಯುತ ಬರುತಿರಲ್ ಪಥದೊಳಗೆ ಕಂಡನಾ ಶಬರನವರ ॥
ತಾಂ ತಳೆದು ಶರಚಾಪಗಳ ವೇಗದಿಂ ವಿಪ್ರ ।
ಪಂಕ್ತಿಗಂಡಡ್ಡೈಸಿ ಪೊಡೆದು ಸರ್ವಸ್ವಮಂ ।
ತಾಂ ತೆಗೆವೆನೆಂದೆನುತಲತಿವೇಗದಿಂ ಧೂರ್ತನೈತಂದ ಕೋಪದಿಂದ ॥ (7)

ಹಲಕಾಲಕೆನಗೆ ಸಿಕ್ಕಿತು ಬಹಳ ಧನಮೆನುತ ।
ನಲವೆತ್ತು ಕತ್ತಿಯಂ ಕಿತ್ತೆತ್ತಿ ಕೂಗುತ್ತಲೆಲ ।
ವೆಲವೊ ಪೋಗದಿರು ನಿಲುನಿಲ್ಲು ನಿಲ್ಲೆನುತ ಲಯಕಾಲರುದ್ರನಂತೆ ॥
ಖಳ ಬರುವದಂ ಕಂಡು ಸಪ್ತಋಷಿಗಳ್ನಡೆವ ।
ರಳವೂನಸವಿ ಮುಂದುಗಾಣದಲೆ ನಿಮಿಷದೊಳ್ ।
ಬಲಗುಂದಿ ಭಯದಿಂದಲೊರ್ವರೊರ್ವರ ನೋಡುತಾಲೋಚನಂ ಗೈದರು ॥ (8)

ಅಡಸಿದಾಪತ್ತಿನಲಿ ಧೈರ್ಯ ಗುಂದಲ್ ಕಾರ್ಯ ।
ಕೆಡುವದದರಿಂದೀವ ಪರಿಯೊಳಾಗಲಿ ಮನವ ।
ಪಿಡಿದು ಸಾಧಿಸವೇಳ್ಕುಮೆನುತೊರೆವ ಧೀಮಂತವಚನಮಂ ಸ್ಮರಣೆಗೈದು ॥
ಕಿಡಿಗಳುದುರಿಸುತಲಾರ್ಭಟಿಸುತ್ತೈತರುತ ದು ।
ರ್ನುಡಿಗಳಂ ಬೀರುವ ಪುಳಿಂದರಗ್ರೇಸರಂ ।
ಕಡೆಯಲೀಕ್ಷಿಸಿ ಕಮಲಪೀಠನ ತನೂಭವಂ ಪೇಳ್ದನುಪಾಯದಿಂದ ॥ (9)

ಜಲಜಪತ್ರಸ್ಥಜಲಬಿಂದುವೆನೆ ಜೀವಿತಂ ।
ಜಲಬುದ್ಬುದೋಪಮಿತ ಶಾರೀರಭೋಗಗಳು ।
ಕಲಿತವಿದ್ಯುನ್ನಿಭಂ ಸಂಪದಭ್ರಚ್ಛಾಯೆ ಯೌವನಂ ಕ್ಷಣಭಂಗುರಂ ।
ಬಲುಶೋಕ ಕಷ್ಟತಾಪತ್ರಯ ವಿದೂಷಿತಂ ।
ಲುಲಿತಜರ್ಜರ ಕ್ರೂರಮಲಮೂತ್ರ ದುರ್ಗಂಧ ।
ನೆಲೆಯೆನಿಪುದೀತನುವ ಸ್ವಾಧೀನಮೆಂದೆನಿಸಿ ನೀಚರುಂ ಜರಿಪರಕಟ ॥ (10)

ನೆರದಿಂದ ಬಲಿವೃತಸ್ಥಿಸ್ತಂಭ ಸ್ನಾಯು ಬಿಗಿ ।
ವೆರದ ಮಾಂಸಕ್ಷತಜಲೇಪನಂ ಮತ್ತದಕೆ ।
ಪೊರೆವದಕೆ ಚರ್ಮದುರ್ಗಂಧರುಜೆ ಶೋಣಿತದ ಮಂದಿರಂ ಮಗುಳೆ ಕ್ಷಣಿಕಂ ।
ಸುರಿವಪಿತ್ತಶ್ಲೇಷ್ಮಮಶುಚಿಯಾಗಾರಮಿದ ।
ನರಿಯದಲೆ ಹಿತವೆಂದು ಪರಲೋಕಶೋಕವಂ ।
ತೊರೆದು ನಿರಯವ ಸಾರ್ವರದರಿಂವಮಶುಭಮಿನ್ನೇನುಂಟು ಜೀವಿತರಿಗೆ ॥ (11)

ಭೂದಿವಿಜದೂಷಣಂ ತದ್ದ್ರವ್ಯಹರಣ ದಾ
ರಾದಿ ಸಂಕ್ಷೋಭಕರಣಾದಿಗಳ್ ಪಾತಕಂ ।
ಕ್ಷೋದಿಯಹ ಸಾಬ್ರಹ್ಮಹತ್ಯಮಧುಪಾನ ಗುರುವಂಗನಾಗಮನ ಸ್ತೇಯ ॥
ಬಾಧಿಪವು ವಿಪ್ರವಿತ್ತಾಗ್ನಿಯೊಂದೇ ಧರ್ಮ ।
ಭೇದನಂಗೈದು ಭಸ್ಮೀಕರಣಗೊಳಿಸುವದು ।
ಮೀಧಂತ್ರಿಯೊಳು ಶುಭಕೆಳೆಸುವರು ವಿಪ್ರಧನವಂ ಮುಟ್ಟಬಾರದಲ್ತೆ ॥ (12

ಪೊಂಪಿಪರ ಪೊರವುದಕೆ ಗೋವಿಪ್ರಲೋಕವಂ ।
ಕೊಂದು ತದ್ದ್ರವ್ಯವನ್ನಪಹರಿಸೆ ಪಾತಕಗ ।
ಳೊಂದನಿಟ್ಟಸಿ ಕ್ರೂರಮೀ ಪಾಪಭೋಕ್ತೃಜನಕಂ ಹೋಮಂಗಳಲ್ಲದೀಯನೆ ॥
ಎಂದು ತಿಳಿಯದೆನುತ್ತಲೊರೆಯಲಾ ಸಾಧುಜನ ।
ಸಂದರ್ಶನೋನ್ಮಹಿಮೆಯಿಂದ ಕಳಿಣಾವ್ಯಥ ।
ಪೊಂದಿದಂ ನಮ್ರತೆಯು ನೇನೆಂಬೆನೀ ವಿಪ್ರಜನಧರ್ಮ ಬೋಧನೆಗಳ ॥ (13)

ಸಾಧುಸಂಗತಿಯಿಂದ ಪಾಪ ಹತಮಹುದು ಮ ।
ತ್ತಾದಪುದು ಹೃತ್ಸಿದ್ಧಿ ಯದರಿಂದ ಪುಣ್ಯಸಂ ।
ಪಾದನಂ ದೊರಕುವುದು ತತ್ಫಲದಿ ಸ್ವರ್ಗಾದಿ ಭೋಗಗಳ್ ನೆಲೆಗೊಂಬುದು ॥
ಈಧರಾವಲಯದೊಳ್ ಸತ್ಸಂಗ ಕೈವಲ್ಯ ।
ಹಾದಿಯಲ್ಲವೆ ಚಂದ್ರಕರದಿಂದ ಶಿಲೆಗಳುಂ ।
ಮೋದಗೊಳ್ಳುವೆ ಸುಜನರಿದಿರಿನೊಳ್ ಕಾರುಣ್ಯ ನಿಲುವುದೇಚಧಿಕತರದಿ ॥ (14)

ಗಂಗಾವಗಾಹನಂ ತುಲಸೀಸಮರ್ಪಣಂ ।
ಸಂಗಸತ್ಪುರುಷರೊಳ್ ಹರಿಕೀರ್ತನಾದಿಗಳ್ ।
ಹಿಂಗಿಪುವು ಸಕಲಪಾತಕಸಮುದಯಂಗಳಂ ಸಾಧುಕರವೆಂದೆನಿಪವು ॥
ತುಂಗಪಾಪಿಷ್ಠಶಬರಂ ವಿಪ್ರವಾಕ್ಯಗಳ ।
ಸಂಗತಿಯ ಕೇಳಿ ಮತ್ತಭಿನಮಿಸಿ ಮೃದುನುಡಿಗ ।
ಳಂಘವಣೆಯಿಂದವೆಲ್ಲರ ಕುರಿತು ಕೇಳ್ವಂ ತನ್ನ ಮನೆವಭಿಮತವನು ॥ (15)

ಮನೆಗೈದಿ ತನ್ನವರ ಕೇಳ ಬರುವನ್ನೆಗಂ ।
ಸನುಮತಿಸಿ ನೀವಿಪ್ರದಾಸೆಂತು ನಂಬುವೆಂ ।
ಕೊನೆಗೆ ನಿಮ್ಮಯ ಜೀವಗಳ ಸೆಳೆಯದುಳಿಯೆ ನಾನೆಂತಿದಕುಪಾಯಗಳನು ॥
ಎನಗುಸಿರವೇಳ್ಕೆನಲ್ಕೊದಲೆ ಮೈತ್ರಾವರುಣಿ ।
ವಿನಯದಿಂ ಪೇಳ್ದ ಕೇಳ್ ಶಬರ ಪ್ರಾತಃ ಸ್ನಾನ ।
ವರು ಬಿಟ್ಟ ಸಪ್ತಹಮಿರ್ದ ವಿಪ್ರನ ಪಾಪಕಾಷ್ಠೈದುಪೆನೆಂ ತಾಂಪೋದೊಡೆ ॥
[(16)

ಪಾದಜಗ್ರಾಮಸಂವಾಸಮೆಂದೆನಿಸಿ ಸಂ ।
ಮ್ಮೋದದಿಂದೇಕಕೂಪೋದಕವ ಕೊಂಡಿರ್ದ ।
ಮೇದಿನಿಯಸುರರ ಕೋಪ ಪಾಪಕಾಸ್ಪದಮೆಂ ಎನುತ ಗಾಧೇಯನೊರೆಯೆ ॥
ಸಾದರದಿ ವೈಶ್ವದೇವಂಗೈಯದನ್ನವಂ ।
ಮೇದುವ ದ್ವಿಜಾಧಮನ ಪಾಪಕೈದುವೆ ಮುಂದೆ ।
ಪೋದೆನಾದೊಡೆ ಸೂತ್ರಲಕ್ಷಪಾದಂ ಕೇಳ್ ಜಮದಗ್ನಿ ತಾಂ ನುಡಿದನು ॥ (17)
ವ್ರತನಿಷ್ಠಶ್ರೋತ್ರಿಯಂ ವೃತ್ತಿಯಿಲ್ಲದೆ ದುಃಖ ।
ಜತೆಯಿಂದ ಬಳಲುತಿರಲಾತನ ತಿರಸ್ಕರಿಸಿ ।
ದತುಳಪಾತಕ ಬರಲಿ ಮುಂದಕಡಿಯಿಟ್ಟೊಡೆನಲಾ ಕಲಶಭವನೆಂದನು ॥
ಅತಿಶಯದ ವಿಭವದೊಳಗೇಕಸಾಕ್ಷಿಕನಾಗಿ ।
ಕ್ಷಿತಿಯೊಳನ್ನವನುಂಬ ವಿಪ್ರಪಾತಕವೆನಗೆ ।
ಜತೆಯಾಗಲಿಲ್ಲೆಂದ ಕೊರಟರೆಂದುಂ ನುಡಿಯೆ ಕಾಶ್ಯಪಂ ಮಗುಳೆಂದನು ॥ (18)
ತಂದೆತಾಯಿಗಳ ಮಾತಂ ಮೀರಿ ನಡೆದವಗಾವ ।
ಬಂಧುರದ ಪಾಪಮಡಸುವದು ತತ್ಪಾಪಮೇ ।
ಬಂದಡಸಲೈದದೊಡೆನಲ್ಕತ್ರಿ ತಾಂ ನುಡಿದನಾವ ದ್ವಿಜ ಮತಿಯಿಲ್ಲದೆ ॥
ಬಂದು ಪ್ರಾಚೀಮುಖದಿ ವಿಣ್ಮೂತ್ರಗಳ ಜಡೆವ ।
ದಂದುಗಂ ಬಂದಡಸಲೆಂದೆಲ್ಲರೀಪರಿಯು ।
ಚಂದದಿಂದುಸಿರಲ್ಕೆ ಶಬರ ಸಂತಸಗೊಳ್ಳುತೈದಿದಂ ಮಂದಿರಕ್ಕೆ ॥ (19)
ಮೊರೆವ ನಾಯಿಗಳ ತಂಡ ಪರಿವ ನರಿಗಳ ಹಿಂಡಿ ।
ನರುಗಿಲ ವರಾಹಗಳ ಕೊರೆವಸ್ತ್ರಧಾರೆಗಳ ।
ಸುರಿವ ಶೋಣಿತಮಾಂಸಕೆಱಗಿ ಗೃಧ್ರೋತ್ತಂಸ ಮೊರೆವ ಕಾಳ್ಕುಕ್ಕುಟಗಳ ॥
ಪರಿದಿಟ್ಟ ಪಕ್ಕಗಳಲುರುಳ್ವ ಕಾಳ್ವಕ್ಕಿಗಳ ।
ಪರಪಿ ನಿಜತುಂಡಗಳ ಕೆಡೆವ ವೇತಂಡಗಳ ।
ತಱಿ ಕೊಲ್ಲು ಕುಟ್ಟೆನುತಲಾರ್ಭಟಿಪ ಕೈರಾತಜನರಿಂದ ಪುರನೊಸೆದುದು ॥ (20)
ಒಂದೆಸೆಯು ಮಾಂಸರಾಶಿಗಳ ದುರ್ಗಂಧ ಮ ।
ತ್ತೊಂದೆಸೆಯು ಮಜ್ಜಮೇಧಸ್ಸಿನುರುಕಂಪಿಡಿದ ।
ವೊಂದೆಸೆಯು ಪಲವಗೆಯಮದ್ಯಭಾಂಡಂಗಳಂ ಸೂಸುತಿಹ ಪೊಲಸಿನಿಂದ ॥
ಒಂದೆಡೆಯಲಸ್ಥಿರಾಶಿಗಳ ಕೂರ್ಗಳಸಕ ।
ವೊಂದೆಡೆಯಲೆಲುಕಂಟಕಾಕೀರ್ಣ ಯಮಪಥಮೆ ।
ಮಂದಿರಕ್ಕಿಂದಧಿಕ ಮೆಂದೆನಿಸಿ ಕಂಗೊಳಿಸಿತೆಲ್ಲ ಭೂತಂ ಕಂಪಿಸೆ ॥ (21)
ಚಟುಲೋದ್ಯದಾಯುಧಗಳಂ ಪಿಡಿದು ಬಾಗಿಲೊಳ್ ।
ಭಟರಾರ್ಭಟಿಸುತಲ್ಲಿ ತೃಣಚಲನೆಯಾಗದಂ ।
ತಟನೆಗೈವುತ ಸರ್ವಜೀವಂಗಗಮ್ಯಮೆನೆ ತೋರುವತಿಘೋರ ನಗರ ॥
ದಟವಿಗೈತರೆ ಶಬರ ಪತಿಯು ನಿಟ್ಟಸುತೆರಗಿ ।
ಪಟುತರಸ್ತುತಿಗೈವು ದಾಲಿಸುತ ಪೊಕ್ಕು ನಿಜ ।
ಮಟಕೈದಿ ದುಮ್ಮಾನದಿಂದ ಶಯ್ಯಾಗೃಹವ ಪೊಕ್ಕಲ್ಲಿ ಕುಳಿತಿರ್ದನು ॥ (22)

ಮೌನದಿಂದ ಮಾತಾಡದೊಳಮನೆಗೈದ ।
ಉಮ್ಮಾನಸದ ಕದಡ ತಿಳಿಯಲ್ಕೆ ಮಯೂರ್ಯರ ।
ಧಮ್ಮಿಲ್ಲ ಪತಿಯು ಪೊರೆಗೈದಿ ಮಾಧುರ್ಯ ಮೃದುನುಡಿಗಳಿಂದುಪಚರಿಸಲು ॥
ಸುಮ್ಮನಿರಲಾಕೆಯುತಿಶಯಾದಿ ಪದಗಳನೊತ್ತಿ ।
ಕಮ್ಮಗೋಲನ ಚದುರ ತೋರಲಾ ಶಬರಪತಿ ।
ಯಾಂ ಮ್ಲಾನವದನದಿಂದಿಂತೆಂದ ಸತಿಯೊಡನೆ ಮಾಜದೆಳ್ಳನಿತಾದೊಡಂ ॥ (23)

ನಾರಿ ನಿನ್ನುಪಚಾರಶತಕದಿಂದಂ ಸುಖವು ।
ತೋರದೊಂದಂ ಕೇಳ್ವೆನಿದ ಸತ್ಯದಿಂದುಸಿರ ।
ಲಾರ್ಕೈವೆ ದುಷ್ಟನಹೆ ಸತ್ಯಸದ್ಗತಿಜನಕ ವನೃತವೆನ್ನುವದೆ ನರಕ ॥
ಪಾರಮಾರ್ಥಿಕವಾಗಿ ಪೇಳ್ವುದೆನೆ ಸತಿ ನಗುತ ।
ಚೋರೇಶಗೆಂದಳಾಂ ತನುಮನಗಳರ್ಪಿಸಿಹೆ ।
ಕೂರ ವಂಚನೆಗೈಯೆ ದಯೆಗೈವುದೆನಲಾಕೆಗಿಂತೆಂದನಾ ಶಬರನು ॥ (24)

ಚೋರತ್ವಕೃಷಿತ ವಾಣಿಜ್ಯ ವಂಚನೆಯಾತ್ಯ್ಯ ।
ದಾರಮಿತ್ರದ್ರೋಹ ಗೋವಿಪ್ರಹತಿಗಳ ವಿ ।
ಚಾರಕೃತ ಕರ್ಮಗಳನೇಕಮಂ ನಾಂ ಗೈದು ಸಂಪಾದಿಸಿದೆ ವಿತ್ತಮಂ ॥
ಆರೈದು ಗಳಿಸಿದರ್ಥದಿ ಪುತ್ರ ಪೌತ್ರರುಂ ॥
ತೋರ ಸುಖದಿಂದಿರ್ಪರಿನಿಸುದಿನ ನೀನಸತ್ಯ ।
ದಾರಭೋಗವನುಂಡು ಸುಖಿಯಾದೆ ಸಂಪದಂ ವಶವಾಯ್ತು ನಿನಗೆ ಪ್ರಿಯದಿ ॥ (25)

ನಿಮಗೋಸುಗದೊಳನಿಸುದಿನ ಮಾಡಿದೀ ಪಾಪ ।
ವಮಿತವಿದರೊಳ್ ಕೆಲವನೀ ಪಂಚಿಕೊಳವೇಳ್ಕು ।
ರಮಣನರ್ಧಾಂಗ ನೀನಲ್ತೆ ಯೆನಲಾ ಚೋರಪತ್ನಿ ನಗುತಿಂತೆಂದಳು ॥
ಮಮತೆಯಿಂದೆನ್ನ ದಾಯಾದ್ಯಬಾಂಧವರುಗಳ ।
ಗಮಲಭೂಷಣವಸ್ತ್ರಮಾಲ್ಯಂಗಳಿತ್ತು ವಿ ।
ಕ್ರಮದಿಂದ ಪಾಲನಂಗೈದುದು ಯಥಾರ್ಥ ಸುಖದಿಂದಿರ್ದೆ ವಿನಿಸುದಿನವು ॥ (26)

ಎಲ್ಲರುಂ ಸೇವಕರು ಶಿಕ್ಷಾರ್ಹರುಂ ಮುನಿದು ।
ಕೊಲ್ಲಲುಂ ಪೊರೆಯಲುಂ ದಕ್ಷರಹುದದರಿಂದ ।
ಬಲ್ಲವಿಕೆಯಿಂದವರಪಾಪಂಗಳರಿತರಿತು ಶಿಕ್ಷೆಗೈವೇಳ್ಕು ಜವದಿ ॥
ಅಲ್ಲಿ ಪ್ರೇಮದಿ ಮೋಹದಿಂದ ಪಾಲನೆಗೈವ ।
ರೆಲ್ಲರೇಂ ಮಾಳ್ಪರದರಿಂದಕ್ಕಟ ಕೇಳ್ ಮತ್ತೆ ।
ನಲ್ಲ ನಿಮ್ಮಯ ಪಾಪಮಂ ಕೊಳ್ಳಲಾರ್ಗೈದ ರಾರಾದರುಂ ಕೊಳ್ವರೆ ॥ (27)

ತಾಂ ಗೈದ ಪಾತಕಗಳನ್ಯರುಂಬುದು ಶಾಸ್ತ್ರ ।
ದಂಘುವಣೆಯಲ್ಲ ಸತಿಪುತ್ರಶಿಷ್ಯರು ಮಾಳ್ಪ ।
ಮಂಗಳಂ ಗುರುವಿಗಂಟುವುದಲ್ಲವವರಗೀತನ ಪಾಪಸಮುದಯಗಳು ॥
ಸಂಗಿಯೆನಿಸವು ಪತಿಯ ಧರ್ಮಭಾಗಂ ಸತಿಗೆ ।
ಹಿಂಗದಾ ಸತಿಗೈದ ಪುಣ್ಯಪುರುಷಂಗೆ ನರ ।
ಪುಂಗವನೆ ಬರಲರಿಯದವರೆಲ್ಲ ಪೇಳದಂತಿರ್ಪ ಸ್ವತಂತ್ರರಲ್ಲ ॥ (28)

ಮಾಡಿದವ ಮಾಡಿಸಿದ ನೋಡಿದವ ಪೇಳ್ದರ್ ।
ಕೊಡುಂಬರೆಂದು ಧರ್ಮದಿ ಪೇಳ್ವರೀ ನಾಲ್ಕ ।
ನೋಡಲಧಿಕಾರಮೆಳ್ಳನಿತಿಲ್ಲದಂಗನೆಗೆ ಪೇಳದಂತಿರ್ದು ಕೊಟ್ಟು ॥
ದೂಡಿ ಮಗುಳುತ್ತರವ ನೀವ್ರೊಡಧಿಕಾರಮುಂ ।
ಮಾಡದವರಿಂ ಪಾಪಭಾಗಿಯೆನಿಸಳಿನುತ್ತ ।
ಲಾಶಲಾ ಶಬರಪತಿ ಸಂಕಟದಿ ತನಯನೊಡನಿಂತೆಂದ ಕ್ಲೇಶದಿಂದ ॥ (29)

ಪಾತಕಸಹಸ್ರಂಗಳುಪಪಾತಕಾಯುತಗ ।
ಳಾತುರದಿ ಮಾಡಿಮುದನೆಣಿಸುವರಸಾಧ್ಯಮೀ ।
ಜಾತಿಕೃತ್ಯಗಳೊಳಗ್ಗಳನಾಗಿ ನಿಮ್ಮನುಂ ಪೊರೆದೆ ನಾನಿನಿಸುದಿನವು ॥
ಸೋತುದೆನ್ನಯ ಮನಂ ಸ್ಮರಿಸಿ ಪಂಕಮಗರ್ವ ।
ಬೀತು ಭಯಮುದಯಿಸಿದುದರಿಂದ ನೀಂ ಕೆಲವ ।
ನೋತುಕೊಳವೇಳ್ಕನೆ ನಸುನಗುತ ತಾತನೊಡನೆಂದ ನಿಷ್ಕರ್ಷೆಯಿಂದ ॥ (30)

ಕೇಳ ಕಿವುಡಾದವಾಡಲಮ್ಮದು ಜಿಹ್ವೆ ।
ತಾಳದುದು ಕಂಪನವ ಮನವೆನ್ನದೆಲೆ ತಾತ ।
ಜಾಳನುಡಿಯಿಂದದೇಂ ಫಲ ನಿನ್ನಪಾತಕದೊಳೆಳ್ಳನಿತ ಕೊಂಬುದಿಲ್ಲ ॥
ಆಳು ನಾಂ ದೊರೆ ನೀನು ಸ್ವಾಮಿಭೃತ್ಯನ್ಯಾಯ ।
ಕೇಳು ಪೋಷಕ ನೀನು ಪೋಷ್ಯ ನಾಂ ಪಿತ ನೀಂ ಕೃ ।
ಪಾಳು ಸುತನಾಂ ಶಾಸ್ತ್ರವಿಧಿಯಿಂದ ಸ್ತ್ರೀಸುತರ್ಗಿಲ್ಲವೆಳ್ಳನಿತು ಪಾಪ ॥ (31)

ಪರಿಜನದ ಭರಣಗಳಗರಿಯದೆಸಗಿದ ಪಾಪ ।
ದುರಿ ಪರರ ದಹಿಸುವದೆ ಪಲುಬಿಲೇಂ ಫಲಮಿದ ।
ನರಿತು ಧೀಮಂತರುಂ ಸತಿಸುತಾದ್ಯೃತ್ತವಮಾಂಗೆ? ಸಗರಲೆ ಪಾತಕಗಳ ॥
ಸರಸಿಜದ ಪತ್ರದೊಳಗಿರುವ ಜಲಕಣದಂತೆ ।
ನಿರುಗೆಗೊಳುತಿರುತಿಲ್ಲದಂತೆ ಕಾಲವ ಕಳೆವ ।
ರೆರೆಯು ನೀ ನೆಸಗಿದುವ ನೀನುಣ್ಣದುಳಿದಪುದೆ ಪರರಿಂದಲುಂ ತೀರ್ವುದೇ ॥ (32)

ತನಯನಾಡಿದ ಮಾತ ಕೇಳ್ದು ಶಬರಾಧೀಶ ।
ಮನದೊಳಗೆ ಕಂದಿ ಕುಂದುತ ಚಿಂತೆಯೊಳ್ ನೊಂದು ।
ನೆನೆನೆನೆದು ಪೂರ್ವಕೃತದುಷ್ಕೃತಗಳಂ ನಿಲುಕದಾಳೋಚನೆಯ ಚಿತ್ತಕೆ ॥
ಜನಕಮಾದುದು ವ್ಯರ್ಥ ಬಯಲಾಸೆಯಿಂದ ಪರಿ ।
ಜನರಿಗೋಸುಗ ಶಮನಿಗಾಳಾದೆನೆನ್ನುತಾ ।
ಮುನಿಗಳರ್ದಿಡಿಗೈದಿದಂ ಶಬರ ನಿಂಗಳವ ತುಳದ ಮಾರ್ಜಾಲದಂತೆ ॥ (33)

ಮರೆದು ಧರ್ಮವ ವಿಷಯಪರಮೆಂದು ಹಿಂಮುಮುಂ ।
ದರಿಯದಂದದಿ ಮನೋವಶನಾದನೆನ್ನಂತೆ ।
ನರಕಭಾಜನನಪ್ಪನಲ್ಲದುಳಿಯನೆನುತ್ತಲಾ ಪುಳಿಂದರ ನಾಯಕಂ ॥
ಕೊರಗುತಲಿ ತನ್ನೊಳಗೆ ಮುಂದೇನು ಗತಿ ಯೆನುತ ।
ತ್ವರಿತದಿಂದಂ ಬಂದನತಿಭಯಾತುರದಿಂದ ।
ಪರಮಪುರುಷರ ದರ್ಶನದ ಮಹಿಮೆಯಿಂದಲುದುವವಮಾದ ಜ್ಞಾನದಿಂದ । (34)

ಎಂದು ಚಿಂತಿಸುತ ಬಿರುಗಾಳಿಯಿಂದದಿ ಬಹ ಪ್ರ।
ಳಂದನಂ ಕಾಣುತ್ತ ತಲ್ಲಣಿಸಿ ಭೀತಿಯಿಂ।
ಬಂಧುರಕ್ಲೇಶದಿಂದೊರ್ವರೊರ್ವರಂ ನೋಡುತಾಲೋಚನಂಗೈಯುತೆ॥
ಇಂದಾದುದರಿಯುಮನೆಯುಮಮುಖದ ಬಾಧೆಯಿಂ।
ಕುಂದುಗೈದಪರಾರೆನುತ್ತ ಚಿಂತಿಸಿ ವಿಷದ।
ಬಂದೆಡೆಯು ರಘುವರನ ಮರೆಯೊಗಲ್ವೇಳ್ಕೆನುತ ನುತಿಸಿದಂ ಮಾರೀಚನು। (35)

ನಿಚ್ಚಮೆಂದರಿತು ವಿಷಯಾನುಭೋಗಂಗಳನು।
ಮೆಚ್ಚಿ ಗುರುತರಪಾತಕಗಳೆಸಗಿ ನಿರಯಕ್ಕೆ॥
ಬೆಚ್ಚದನುದಿನ ಹರ್ಷಗೊಳುತಿರುವೆ ಯುಗ್ರಕರ ಶಮನಕಿಂಕರರ ಬರವು॥
ಬಚ್ಚಿಡುವೆನೆಂತು ಮೂರ್ತಿಯು ಮೂಢ ಬುದ್ಧಿಯಿಂ।
ಚುಚ್ಚಿ ಗುರುಪದವಿಡಿದು ಸಕಲಶೋಕಾಪಹರ।
ದೆಚ್ಚರಿಂ ನೆನೆ ಮನವೆ ರಘುವರನ ನೃಪವರನ ವಿಪುಳಕೋದಂಡಧರನ॥ (36)

ಬಲುವಿಧದ ಕರ್ಮದೊಳ್ ತೊಳಲಿ ನಾನಾಯೋನಿ।
ನಿಲಯಗಳನುಳದಮಿತ ಪುಣ್ಯದಿಂಸದ್ವಿಪ್ರ।
ಕುಲಪುರುಷಜನ್ಮ ಸುವಿವೇಕವಂ ಗಳಿಸಿರ್ದು ಪರವನುಂ ಮರೆಮ ಬರಿದೆ॥
ಕೊಲುವರೆಳಸುವೆ ನಿನ್ನ ನೀನೆ ಪಶುಕಬಳವಂ।
ನಿಲುಕದೆಡೆಯೊಳಗೆ ರೋಮಾಂಚಗೈವಂದಕಂ।
ಸಿಲುಕದಲೆ ಮನವೆ ನೆನೆ ರಘುವರನ ನೃಪವರನ ವಿಪುಳಕೋದಂಡಧರನ। (37)

ಸತಿಪುತ್ರ ಮಿತ್ರಬಾಂಧವರೆಲ್ಲ ಸಂತತದಿ।
ನುತಿಸುವರದಕೇಳ ವೈಮನಸ್ಯಮೈಶ್ವರ್ಯದಿ।
ವಿತ್ತತದುರ್ಗಪರ್ವಪರ್ವತಮಸ್ತಕಾಗ್ರಮನ್ನಡರಿ ಮೋದದಲಿ ತೊಡರಿ॥
ಕತಿಪಯಮನೋರಥಗಳಿಂದ ಚರಿಸುವೆ ಕ್ರೂರ।
ಮತಿ ನಿರಯಗತಿಯಪ್ಪುದದರಿಂದ ಮೌಢ್ಯಸಂ।
ಗತಿಯುಳಿದು ನೆನೆ ಮನವೆ ರಘುವರನ ನೃಪವರನ ವಿಪುಳಕೋದಂಡಧರನ॥ (38)

ಜಾನಕೀಪತಿಯ ಸತ್ಕಥೆಯನನುದಿನ ಕೇಳ।
ಜಾನಿಸುತ ಮಾನಸದಿ ಮಂಗಳಸುಮೂರ್ತಿಯಂ।
ನೂನಂಗಳಿಂದಲೆಡೆವಿಡದೆ ಪೂಜಿಸಿಗೈದು ನತಿಸಿ ಮಗುಳೆರಗಿ ನುತಿಸಿ॥
ಸಾನಂದಗೊಳುತಿರದೆ ಸತತಚಿಂತಾಸಕ್ತ।
ಮಾನಸದಲೇಂ ಫಲಂ ಮತ್ತೆ ಸಂಸಾರಸುಖ।
ಹೀನಮೆಂದರಿತುರಿತು ನೆನೆ ಮನವೆ ರಘುವರನ ಕೋದಂಡಧರನ॥ (39)

ಜರಿದಹಿತ ಷಡ್ವರ್ಗ ವೆಸನ ಸಪ್ತಕಗಳಂ।
ತರಿಬಿಟ್ಟು ಕ್ರೋಧಲೋಭಾದ್ಯಹಂಕೃತಿಗಳನು।
ಪರವನಿತೆ ಪರವಿತ್ತ ವಂಚನೆಗಳಂ ಕಳೆದು ದುರ್ಮಾರ್ಗಸಂಗತಿಗಳ॥
ಪರಿದು ಸಜ್ಜನಸೇವೆಗಳಪಟ್ಟು ಭಕ್ತಿಯಿಂ।
ಧರಣಿಜಾವರನಂಘ್ರಿಕಮಲಗಳ ಹೃದಯದೊಳು।
ಸ್ಮರಿಸುತಿರು ಮನವೆ ಶ್ರೀರಘುವರನ ನೃಪವರನ ವಿಪುಳಕೋದಂಡಧರನ॥ (40)

ಪರರ ದೂಷಿಪ್ಪುದಘವು ಖರ್ಯ್ಯವಚನವನುಡಿಯು ।
ದುರುಮರ್ಮಭೇದಗಳನುಳಿದು ಸಂಕೀರ್ತನೆಯ ।
ಪರಕೆಂದು ತಿಳಿದು ಹರಿಗೋವಿಂದ ಶ್ರೀ ವಿಷ್ಣು ಮಾಧವ ಮುಕುಂದ ಎನುತ ॥
ಸ್ಮರಿಸಿ ಸುಖದಿಂದಿರುವ ದಂದುಗವ ಬಳಸಿ ನೀ ।
ಕೊರಗುತಿರಲಿಳ್ಳನಿತು ಸುಖ ಜನಿಸದೆಲೆ ಮರುಳೆ ।
ಸುರವರಾರ್ಚಿತಚರಣನಂ ಬಿಡದೆ ಸ್ಮರಿಸು ರಘುವರನ ಕೋದಂಡಧರನ ॥ (41)

ಜಗತಿಯೊಳು ಪರಿಪೂರ್ಣ ಜಗದಾಕರಯಂ ಸತ್ಯ ।
ಜಗಕನೀದೃಕ ಜಗದ್ರೂಪ ಜಗದಾಧಾರ ।
ನಿಗಮವಾಚಾಮಗೋಚರ ನಿರುಪಮಾನಂದ ಚಿನ್ಮಾತ್ರನೆಂದು ತಿಳಿದು ॥
ಬಗೆಯೊಳನುದಿನ ಭಾವಿಸುತ್ತಿರಲು ಕರ್ಮಗಳ ।
ಸೊಗಡಳಿದು ನಿತ್ಯಸುಖ ಸಂಭವಿಪ್ಪುದದರಿಂದೆ ।
ಜಗಧೀಶನಂ ಬಿಡದೆ ನೆನೆ ಮರವೆ ರಘುವರನ ವಿಪುಳಕೋದಂಡಧರನ ॥ (42)

ಇಂತು ನಿಗಮಾಗಮೋದಿತಸಂಸ್ತವಂಗೈವು ।
ತಂತ್ರರಂಗದಿ ಶುಭೋದಯಮಿಾವ ಮೂರ್ತಿಯಂ ।
ಚಿಂತಿಸಲ್ಕಾಋಷಿಗಳಾರ್ತಿಯಂ ಪರಿಹರಿಸಲೆಂದು ಕರುಣಾವನಧಿಯು ॥
ಸಂತಸದೊಳಾ ವನದೊಳತ್ತಾಳಶಶಿರವಿಕಾಂತಿ ।
ಯಶಾಂತದಿವ್ಯಾಕಾರದಿಂದ ಕಂಗೊಳಿಸಿದ ಮ ।
ಹಾಂತರಾಸಂವರೊಳಲಾ ಭಕ್ತವಶತೆಯುಂ ಪೇಳ್ವರೆಂತಳವಪ್ಪುದು ॥ (43)

ಹರಿಯುಜಭವಾದಿಗಳ್ ಪರಿಪರಿಯ ಭೇದಗಳ ।
ಪರಮ ವಾಕ್ಯಂಗಳಂದನವರತ ಪೂಜಿಸಲ್ ।
ಸಿರಿಸರಸ್ವತಿ ಗೌರಿಯರು ಮಾಳ್ಪ ಜಪಕಂ ಸಿಲ್ಕದಿಹ ಪರಬೊಮ್ಮನು ॥
ಕರೆದಮಾತ್ರದಿ ಬಂದೊದಗಿ ಕಾನನದೊಳಗೆ ।
ಪರಿಪಾಲನಂಗೈವ ಪರಿಯನೇಂ ವರ್ಣಿಸುವೆ ।
ಸಿರಿಯರೆಯ ರಾಮಪುರವರನ ಭಕ್ತಾಧೀನನೆಂಬ ಬಿರುದುದ್ಧರಿಪೊಡೆ ॥ (44)

(ಸಂಧಿ 19, ಪದ 828.)

ಇಪ್ಪತ್ತನೆಯ ಸಂಧಿ-

ಸೂಚನೆ ॥ ವರ್ಣಪಲ್ಲಟವಾಗಿ ಜಪಿಸಿದ ಕಿರಾತದ್ವಿಜ ।
ವರ್ಣವರ್ಣಿತನಾದ ಕಥೆಯ ವಿಸ್ತರಿಸಿದನು ।
ಪರ್ಣಾಧಿನಾಥ ಸುರಮುನಿಗಣ ಸಂತಸದಿ ಕೇಳ ಭಾಲ್ಲೈಸುವಂತೆ ॥

ಗಿರಿರಾಜಸುತೆ ಕೇಳ್ ದ್ವಿಜೋತ್ತಮರು ನುತಿಗೈಯೆ ।
ಶರಣಜನಮಂದಾರ ಶ್ರೀರಾಮ ದಯದಿಂದ ।
ಪೊರೆವೊಡಿಟ್ಟೈಸಿ ಮುಂಗಡೆಯ ತೇಜೋರೂಪಮೆನಿಸಿ ಕಂಗೊಳಸಲಲ್ಲಿ ॥
ಶರಚಾಪಗಳ ಧರಿಸಿ ಸುಸ್ಮಿತಮುಖೇಂದುವಿನೊ ।
ಳೆಸೆವ ಕಸ್ತೂರಿತಿಲಕ ಕೌಸ್ತುಭಾಲಂಕಾರ ।
ಪರಿಷ್ಕೃ ಸೀತಾಸುಮಿತ್ರಾತ್ಮಜರು ಸೇವಿಸಲ್ ರಾಜಿಸಿದ ರಘುವೀರನು ॥ (1)

ಆಪದುದ್ಧರಣ ಗೈವೊಡೆ ರಾಮಚಂದ್ರಮಂ ।
ತಾಪಸರಿಗಿಕ್ಕಡೆಯುಲಿಸೆಯ ಕಂಡಾಮನ ।
ಸ್ವಾಪ ಜಗುಳಲ್ ಹಿಗ್ಗಿ ಸಂತೋಷದಿಂ ದಿವ್ಯ ಮೂರ್ತಿಯಂ ನೋಡುತಿರಲು ॥
ಕೋಪ ಕುಡಿವರಿಯೆ ಕೂಗುತೆ ಚೋರರಾಜ ಬಂ ।
ದಾಪರಮಪುರುಷರಿಗೆ ಸಾಷ್ಟಾಂಗದಿಂದೆರಗು ।
ತಾಪರಿಯ ಬಿನ್ನಪಂಗೈದ ನಿಜಭಕ್ತಿಯಿಂ ನರಾವಿನಯ ನುಡಿಗಳಂದ ॥ (2)
ದೇವರಪ್ಪಣೆವಿಡಿದು ಪೋಗಿ ಗೃಹಮಂ ಸಾರು ।
ತಾವಧೂಸುತ ಭ್ರಾತೃಬಾಂಧವಾದಿಗಳ ಸಂ ।
ಭಾವಿಸುತ ಕೇಳದೆ ಮದೀಯಪಾಪವ ಪಂಚಿಕೊಳ್ಳವೇಳ್ಕೆನುತ್ತ ನರಾಧಿಪ ।
ಭಾವಮಂ ತಿಳಿದೆಂದರೆನ್ನೊಳೆಲ್ಲರ್ ತಮ್ಮ ।
ಕಾವರೀಶ್ವರ ನಿಮ್ಮ ಸೃಜಿಸಿರ್ಪರೆಲ್ಲರುಂ ।
ನೀವರಿಪಿದಂತಿರ್ದವೆವರಿಂದ ಪಾತಕಂ ನಮಗಿಲ್ಲ ಪೋಗೆಂದರು ॥ (3)
ಇಂತವರ ವಚನಗಳ ಕೇಳ್ದನು ಭೀತಿಯು ।
ನ್ನಾಂತು ಬಹುಕಂಪನದೊಳಾಮನೆಯನುಳಪುತೀ ।
ರಂತೆ ಚಿಂತಾಕ್ರಾಂತನಾಗಿ ನೋಡಿದರಘವ ಪರಿವ ಪುಣ್ಯಾತ್ಮರೆನುತ ॥
ಶಾಂತರೆಡೆಗೈತಂದೆನ್ನೈಸೆ ಪರುಷಾವ್ಯದುಳ ।
ವಾಂತಪುದು ಘನವೆ ವಿಧುಹಸ್ತಸಂಸ್ಪರ್ಶಕಾ ।
ಕಾಂತಮತಿವ್ಯದುಳವಪ್ಪುದು ಸಾಧುಸಂಸರ್ಗ ವ್ಯದಿವಾಕಾರಣವುದಲ್ತೆ ॥ (4)
ಅತಿನೀಚಜನ್ಮಂಗತ್ರೀವ ಪಾತಕವೆನಗೆ ।
ಧೃತಿಗಳರ ಭವದೀಯಚರಣಸಂಸರ್ಗ ಬಂ ।
ತತುಲಪ್ರಾಕೃತಪುಣ್ಯಫಲದಿಂದವಾಂ ಗೈದ ಪಾಪರಾಶಿಗಳ ಕಳಿಸಿ ॥
ಗತಿಯು ಕಲ್ಪಿಸಿ ಪೊರೆವುದೆಂದು ಬಲಕಂದು ಮುಂ ।
ದತಿಶಯದೊಳೆರಗಿ ಕೆಡೆದಿಹ ಕಿರಾತನ ನೋಡಿ ।
ಯತಿಗಳೆಲ್ಲರು ಭಯದೊಳಿರಲಾ ವಸಿಷ್ಠರಂ ನೋಡಿ ಕಬರಂ ನುಡಿವನು ॥ (5)
ಇರಲೆಲ್ಲ ಮುನಿಗಳುಪದೇಶವಮಂ ನೀಂ ಗೈದು ।
ಪೊರೆವುದೆನಲಾ ವಸಿಷ್ಠಂ ಪುಳಿಂದನೊಳೆಂದ ।
ನಿರಯುಗತಿವಿಡಿವ ಕೈರಾತಭವ ಚೋರವರ ಕ್ರೂರದುರ್ಮತಿ ಕಠಿಣನು ॥
ನಿರತಮಾಂಸಾಹಾರಿ ಮಧುಪಾಯಿ ಶೂದ್ರ ನಿನ ।
ಗೊರೆವುದೆಂದತಿಶಯಿತವಾಗಿರಲ್ಕರಿಯ ಬಂ ।
ಧುರದ ಗೋಗಣ ಗೈವೊಡಕ್ಕುಮೆ ದುರಾಚಾರ ಕೊಡದೈದೆಂದ ಕನಲಿ ॥ (6)
ಜ್ಞಾನಿಯ ವಿನೀತ ಶುದ್ಧಾತ್ಮ ಕ ದ್ವಾಪರನಿ ।
ಧಾನಿ ದೃಢಕರ್ಮಭಿರತ ಸದಾಸ್ತಿಕ ನೆನಿಪ ।
ನಾ ನರಂ ದ್ವಿಜನಾದೊಡುಪದೇಶ ಯೋಗ್ಯನಹ ದುಶ್ಶೀಲನಾಗೆ ದ್ವಿಜನು ॥
ಜ್ಞಾನಾರ್ಹನು ಜಿತೇಂದ್ರಿಯ ಶೂದ್ರನಾದೊಡಂ ।
ತಾನೆರಹನಾದುರಾಚಾರ ಗವಿಯಾದವಂ ।
ತಾನಿಪ್ಪುದು ... ... (7)

ಮುನಿತಿಲಕ ನಾಂ ಭವಚ್ಛಿಷ್ಯ ದೃಢಚಿತ್ತದೊಳ್ ।
ಕಿನಿಸುಳಿದು ಮರೆಯೊಕ್ಕರೆನ್ನನುದ್ಧರಗೈವು ।
ದನುಚಿತಂ ತಾನಲ್ಲ ಸಾಧುಗಳು ಸರ್ವಜನ ಸಮದೃಷ್ಟಿವಿಹಿತರಲ್ತೆ ॥
ಎನಗೊಂದು ಕಾರಣೋದ್ಯೋಗಮಂ ತೋರುವೀ ।
ಮುನಿಗಳೆಲ್ಲರ್ ನಿಮ್ಮ ವಶರಾದ ಕತದಿಂದ ।
ಸಲುಮತಿಸಿ ತತ್ಪದವ ತೋರುತಿಹರದರಿಂದೆ ಕೃಪೆವೆತ್ತು ಕಾಯ್ವುದೆನುತ ॥ (8)

ಕ್ರತುಲಿಹಸಮಾನ ಕೃತವಿದ್ಯಾಗಮಿಗಳಾಗ ।
ಳತಿಶಯಿತಮೆನಿಸುವ ವಿಪತ್ತಡಸಿದಾಗ ತ ।
ನ್ನತ್ರಿಕಯುವ ಪರರ ನೀಚಕ್ರಿಯು ಕೃತ್ಯಾಕೃತ್ಯಗಳನೆಣಿಸಬಾರದಲ್ತೆ
ವಿತತ ಗಹ್ವರ ಘೋರಕ್ರೂರಾತ ಹಸ್ತದೊಳ್ ।
ಜತೆಯಾಯ್ತುಸಿಮ್ಮಾಯು ಮಾನುಳಿಸಲಾಳದಪುದು ।
ಕ್ಷಿತಿಯಮರ ಮೂರ್ತಿಲಾಭಕ್ಕಧಿಕಮೇನುಂಟು ತಿಳದೆನ್ನ ಪೊರೆವುದುಚಿತಂ ॥ (9)

ಎಂದಮಿತಕಾರತರವಿನಯ ಮಿಶ್ರಿತನುಡಿಗ ।
ಳಂದಾಪ್ಪಳಂದ ಮೇಳ್ವದ ಕೇಳುತೀ ಋಷಿಗ ।
ಳೆಂದರು ವಸಿಷ್ಠನೊಡನೆಲೆ ಮಹಾಪುರುಷ ಕೇಳ ಸಮಯಮಂ ತಿಳಿವೊಡೆ ॥
ಹಿಂದು ಮುಂದೊಂದರಿಯ ಬಾರದಾಲೋಚನೆಯು ।
ತಂದು ನಿಶ್ಚಯ ಮನದೊಳೆಲ್ಲರಂ ರಕ್ಷಿಸುವ ।
ಬಂಧು ನೀನಲ್ಲದಿನ್ನಿಲ್ಲ ಕೋವಿದರನ್ಯರಾರೆನಲ್ ಮುನಿನುಡಿದನು ॥ (10)

ಚೋರರಾಜಿಗಳ್ ವ್ಯಾಘ್ರಬಾಧೆಗಳ್ ವಿಪುಳತರ ।
ಘೋರವನನಿರ್ಜನತ್ರಾಣರಹಿತಸ್ಥಳದೊ ।
ಳಾರು ರಕ್ಷಿಸುವರಾಪತ್ಕಾಲಬಂದೆಡೆಯೊಲತಿಕರುಣದಿಂ ಪೊರೆವೊಡೆ ॥
ನೀರದನಿಭಾಂಗನಾ ಶಬರಬೃಂದ ಭಂಗ ನಾ ।
ಚಾರುವಸ್ತ್ರಾಪಹರಣ ಸುರನುತಚರಣ ।
ವೀರರಾಘವನಲ್ಲದನ್ಯರಾರುಂಟಾತನಂ ಸ್ಮರಿಪೆನೆನುತ ತಿಳದು ॥ (11)

ಆಪದುದ್ಧಾರಕನನಖಿಲಭೂಧಾರಕನ ।
ಶ್ರೀಪದಸ್ಥಾಲಿಕನ ಶ್ರಿತಜನವ್ಯಾಪಕನ ।
ಪಾಪಸಂಭವಮಾದ ವ್ಯಾಧಿಭಯಸಂಹಾರ ಹರವಿರಂಚಿಪ್ರಮುಖರ ॥
ರೂಪಿನಿಂಮುದ್ಧರಿಸಿ ಸಂಹರಿಪ ನೆನೆವ ರಘು ।
ತಾಪೋಪಹರಣ ನಿಜಶರಣ ಶರಣಾಗಾರ ।
ದೀಪ ದೀಪ್ತಾಂಗ ರಘುಪುಂಗವನ ಭಜಿಸುವೆ ಚಟುಲ ಕೋದಂಡಧರನ ॥ (12)

ಎನುತಾತ್ಮರಕ್ಷಣಂ ಗೈಯುತೋಸುಗ ಮುನಿಪ ।
ಮನದೊಳಗೆ ಶ್ರೀರಾಮಚಂದ್ರಮನ ಜಾನಿಸ ।
ಲ್ಕನುವಾಗಿ ಬಾಹ್ಯವೃತ್ತಿಗಳಳಿದು ಮೌನದಿಂ ದಿಟ್ಟಿಸಲ್ಕೆನಿಮಿಷದಿ ॥
ಸನಕಾದಿಸೇವ್ಯ ಸಜ್ಜನವಿನುತನಾಕಾರ ।
ಮಿನುಗಿದುದು ಸರ್ವಾತ್ಮ ತತ್ವದೊಳ್ ತಿಳಿಯಲ್ಲ [illegible]
ಮೆನುವಂತೆ [illegible] ॥ (13)

ನೋಡುತಿರಲನ್ನೆಗಂ ಪರಮಮಂಗಳನಾಗಿ ।
ಮೂಡಿದುದು ಮರನೆಂಬ ಶಬ್ದವಾ ಮೂರ್ತಿಯಿಂ ।
ದಾಡಲೇನಾ ಭಕ್ತವತ್ಸಲತೆಯನಿತರರೊಳಗೆಚ್ಚತ್ತು ಮುನಿ ವೇಗದಿ ॥
ನೋಡಿದಂ ನಸುನಗುತ ವಿಪ್ರರಂ ಸಂತಸದ ।
ಲೂಡಿಸುವ ಮನವನವರೊಡನೆಂದನೀ ವೃತ್ತಿ ।
ರೂಢಿಗಚ್ಚರಿ ರಘೂತ್ತಮನ ಕರುಣೋತ್ತಮನ ಕಂಡುದಾಂ ಪೇಳ್ವೆನೆನುತ ॥ (14)
ನೆನಪಿಡಿಯೊಳೊಂದು ಮಂಗಲ ಮೂರ್ತಿಯಂ ಕಂಡೆ ।
ಘನರವೋಪಮವಾದ ನಿಸ್ವನದಿ ಮರನೆಂಬ ।
ಧ್ವನಿಯೊಂದು ಕೇಳ್ಪಟ್ಟುದಾಮೂರ್ತಿ ಸರ್ವಾತ್ಮಕತ್ವದಿಂ ಕಂಗೊಳಿಸಿತು ॥
ಮುನಿಗಳಿರ ಮತ್ತಿದೇಂ ಕಾರಣವು ಕಾಣ್ಬುದೆದೊ ।
ಲೆನಗೊರೆವುದೆನಲಾಗ ವಿಪ್ರರುಂ ಸಂತಸದಿ ।
ವನಜಪೀಠನತನಯಗೆಂದರಾ ಪ್ರತ್ಯಯದ ಪರಿಯ ವಿಸ್ತರವಾಗುತೆ ॥ (15)
ಮುನಿರಾಯ ಕೇಳ್ ಶಬರಗುಪದೇಶಗೈದಪುದು ।
ಘನನರಕವೆಂದರಿತು ಪ್ರಾಣಭಯದಿಂ ನಿನ್ನ ।
ಮನದಿ ವ್ಯಾಪಿಸಿ ನಿಖಿಲಭೂತಸ್ವರೂಪನಂ ಜಗದಭಿನ್ನತೆಯ ತೋರಿ ॥
ಬನದೊಳೀ ವ್ಯಾಧಗುಪದೇಶ ಗೈಯಲ್ಕೆಂದು ।
ವಿನಯದಿಂ ನೇಮಿಸಿದುದಲ್ಲದಿದು ಪೆರತಲ್ಲ ।
ಸನುಮತಿಸಿ ಮರನೆಂದು ಶಬರಗಂ ಪೇಳ್ದಮ್ಮನುಳಿಸುವುದೆ ಲೇಸೆಂದರು ॥ (16)
ಪರಮ ಮಂಗಳಮೂರ್ತಿಯೊರೆದುದದರಿಂ ನೀಚ ।
ಗೊರೆಯೆ ಪಾಪಾನ್ಮುಕ್ತನಪ್ಪುದಿದು ತಪ್ಪದೆಂ ।
ದೊರೆಯಲಾ ವಿಪ್ರರಾ ನುಡಿಯನಂಗೀಕರಿಸಿ ನಿರ್ಭರಾನಂದದಿಂದ ॥
ಮರೆಯೊಕ್ಕರಂ ಕಾಯ್ವುದಿದು ಧರ್ಮವೆಂದರಿತು ।
ಕರದಾ ಕಿರಾತನಂ ಪೇಳ್ದ ವಸಿಷ್ಠನೀಂ ।
ಹರುಷದಿಂ ಕೇಳ್ದ ಮಂತ್ರವನೀವೆ ಕೊಳ್ಳಲಿದರಿಂದಪ್ಪುದಖಿಲವೆನುತ ॥ (17)
ದ್ವಿಜನೊರೆದ ವಾಣಿಯಂ ಕೇಳ ಸಂತಸದಾಳ ।
ಗಜರುವದನುಳಿದು ಪದಪದ್ಮಕಾನತನಾಗಿ ।
ಭಜಿಸಿ ಮತ್ತೆರಗಿ ಕೈಮುಗಿದು ನಿಂದೆಡೆವಿಡದೆ ನುತಿಗೈದನತಿಮೋದದಿ ॥
ಸುಜನಚಿತ್ತಂ ವೈರಹಿತ ಮುಳಿದುದಲ್ತೆ ನಿಜ ।
ಭಜಕರಂ ಕೃತಕೃತ್ಯರೆನಿಸಿ ಭೂಮಂಡಲ ।
ಕ್ಕೆಜಪದವಿಯಂ ಕೊಡುವುದಲ್ತೆ ರವಿಶಶಿಕರಗಳಂತೆ ಪೂತಂಗೈವುದು ॥ (18)
ಅತಿನೀಚ ಪಾಪಿ ದುಷ್ಟಾಚಾರ ಗೋಭಕ್ಷ ।
ಕ್ಷಿತಿಯಮರಘಾತಕಂ ಮರೆಯೊಕ್ಕನೆಂದರಿವು ।
ದತಿಶಯಭವಾಂಬುಧಿಯದಾಂಟುವರುಪಾಯವಂ ದಯೆಗೈಯಲಿಹಪರಗಳ ॥
ಹಿತಮಕಾರಣದಿಂದಲೆಸಗಿ ನಿಜಕರುಣದಿಂ
ಕಿತವನಂ ಪಾಲಿಪನದಾರು ಸರ್ವಪ್ರಾಣಿ ।
ಹಿತರಲ್ಲದುಳಿದರಿಂ ಪಡೆದೆ ಕಡೆಗೊಳಿಸುವೆಂ ಪಾಪನಾಗರ ಜಾಲವು ॥ (19)

ಭವದೀಯದಿಟ್ಟಿಮಾತ್ರದಿಂದ ಕೃತಕೃತ್ಯ ।
ಭವಮಹಾಂಭೋನಿಧಿಯ ದಾಂಟ ದುಷ್ಕೃತ ಪ್ರಸ ।
ಭರವಿಲ್ಲದತಿಶಯಿತಶುದ್ಧನಾದೆಂ ಜೀವಧನ್ಯತನುಮನಂಗಳೆಲ್ಲ ॥
ಯುವತಿಸುತರೆಲ್ಲರಂ ಚರಣಕರ್ಪಿತಗೈದೆ ।
ತವಕದಿಂ ಶುಶ್ರೂಷಣಂಗೈವ ಪ್ರೌಢಾನಿರ್ವ ।
ನವಕವೆನಿಸುವ ವಸ್ತುನಿಚಯಂಗಳವೆ ಬೇಡಿದುದನೆಲ್ಲ ವರ್ಪಿಸುವೆನು ॥ (20)

ಗುರುಪಾದವಂದನಂ ತತ್ಸೇವೆ ತದ್ವಾಕ್ಯ ।
ಭರಣಮಿಹಪರಮೆರಡನರೆನಿಮಿಷದೊಳಗಿತ್ತು ।
ಪೊರೆದಪವು ಕೈಯೊಡನೆ ಪರಬೊಮ್ಮನೆಂದರಿಯಲೊದಗುವುದು ಸಂಪದಗಳು ॥
ಚರಣೋದಕವಕೊಂಡರಖಿಲಪಾತಕರಾಶಿ ।
ಜರಿದಮಂಗಲ ಸುಮಂಗಲಮಪ್ಪುದದರಿಂದ ।
ದೊರಕಿದುದು ಪೂರ್ವಕೃತಸುಕೃತದಿಂದೆನಗೆ ಗುರುಸಾನ್ನಿಧ್ಯಪದಮಾವ್ರೊಡೆ ॥ (21)

ಪರಮ ಪುರುಷನೆ ಗುರುತತ್ತ್ವಮು ರೂಪಿನಿಂ ಸುಳಿದು ।
ಕರುಣಿಸಿದರಾಕ್ಷಣಂ ಕೈವಲ್ಯ ನಿತ್ಯಸುಖ ।
ಕರತಲಾಮಲಕವೆಂದೆನಿಪುದಿದು ಸಿದ್ಧಾಂತಮದರಿಂದ ಗುರುಪದಗಳ ॥
ನಿರತಪೂಜಿಸವೇಳ್ಕು ಕರುಣಾಪಾತ್ರರದಿಂದು ।
ಸ್ತರವೆನಿಪ ಪಾತಕಾಂಬುಧಿಯು ಗೋಷ್ಪದಿಯೆನಲ್ ।
ತರಿಪೆ ಮಾರುತಿಯಂತೆ ಯೆನುತ ನುತಿಗೈವುತಂ ಮುಗುಳೆರಗಿದಂ ವ್ಯಾಧನು ॥ (22)

ಎಂದೊರೆದ ಶಬರನುಡಿಗಳ ಕೇಳುತಚ್ಚರಿಯ ।
ಪೊಂದಿ ಮುನಿಪುಂಗವಂ ಋಷಿಗಳೊಡನಿಂತೆಂದ ।
ನಿಂದಿದೇನತಿಶಯಂ ಚೋರಂ ಗವಾಶನಂಗೀ ತತ್ತ್ವಬೋಧೆಯಲ್ಲಿ ॥
ಬಂದೊದಗಿತಕಟ ಶಾಸ್ತ್ರೀಯವಿಧಿಯಂಮೀರ ।
ದಂದದ ವಿರಾಗವಾಂತಿಹೆ ಹೃದಯ ಮನಸಿನೊಳ್ ।
ಗೊಂದಿರುವ ನುಡಿಯು ದಾಟಪ್ಪುವು ನಾಲಗೆಯುತ್ತ ಸಂಭವಿಸಿದುದ ನುಡಿದರೆ ॥ (23)

ಜನನಮಾತ್ರಗೆ ಶರಾತರೊಳಾಗಲೀತತ್ತ್ವ ।
ಜನನಮಪ್ಪುದೆ ವಿಪ್ರಜಾತ ದುಸ್ಸಂಗಮವ ।
ನನುಕರಣೆಗೈದು ಪಾತಿತ್ಯಮಾಡಿದನಲ್ಲದಿವ ಶೂದ್ರಜನ್ಮನಲ್ಲ ॥
ಘನತರದ ಪುಣ್ಯಪೂರ್ವಾರ್ಜಿತಪ್ರಬಲದಿಂ ।
ಜನಿಸಿ ಸುಜ್ಞಾನ ಮಜ್ಞಾನಬಾಧೆಯು ಬಿಡಿಸಿ ।
ಕೊನೆಗಾಣಿಸುವವಲ್ಲದುಳಿದರಿಗೆ ವೈರಾಗ್ಯಕಲಿತವಾಗುವುದೆ ಮನಕೆ ॥ 24)

ಬದ್ಧ ವಸ್ತುವಿಗೆಂವಿಗಾದರು ಜ್ಞಾನಸಂ ।
ಬದ್ಧವಾಗದು ಕೃಷ್ಣ ಶುಕ್ಲವಾಗದ ತೆರದೆ ।
ಶುದ್ಧತಾಚಾರದಿಂ ಪತಿತನೆನಿಸಿರ್ದವನ ಪೊರೆದು ಕಳುಪುವುದುಚಿತವು ॥
ಸಿದ್ಧಂ ಶ್ರುತಾಕ್ಷರದ್ವಯವನುಪದೇಶಗೈ ।
ದುದ್ಧರಿಸವೇಳ್ಕೆಂದು ನಿಶ್ಚಯಿಸಿ ಸನ್ನಿಧಿಯ ।
[illegible] ಪದೇಶಗೈದ [illegible] ಪುಳಿಂದಗೊಲಿದು ॥ 25

ಪರಮಂತ್ರ ಕರ್ಣಪ್ರವೇಶವಾಗಲ್ ಪಾಪ ।
ಪರಿದು ನಿರ್ಮಲಿತಾಂತರಂಗವಾಗಲ್ಕಾಗ ।
ಚರಣಕಭಿನಮಿಸಿ ಸಂತಸಗೊಂಡು ಗೋಧನಂ ರತ್ನ ಮುಕ್ತಾಫಲಗಳ ॥
ಪರಭಕ್ತಿಯೊಳ್ ಯಥೇಷ್ಟಂತಂದು ಮುಂದಿಟ್ಟು ।
ಮೆಗೆವ ಶ್ವೇತದುಕೂಲ ರುದ್ರಾಕ್ಷಮಾಲೆಗಳ ।
ಗುರುಚರಣಕರ್ಪಿತಂಗೈದು ಕೃತಿಯೆನಿಸಿದನದೇನೆಂಬೆನೆರೆನಿಮಿಷದಿ ॥ (26)
ಧನಕನಕವಸ್ತುವಾಹನಗಳನೊಪ್ಪಗಿಸಿ ।
ವಿಸಮಿತಾನನದಿಂದ ವಿವಿಧತರಪಾಪಗಳ ।
ವನಧಿಯಂ ದಾಂಟಿ ಪೂರ್ಣಾನಂದಮಯನಾದೆನೆನುತ ಪೇಳಲ್ ಶಬರನು ॥
ಮುನಿಗಳಚ್ಚರಿಗೊಂಡು ಸಲ್ಲಾಪಗೈದರಿವ ।
ಗಿನಿತೊಮ್ಮೆ ವೈರಾಗ್ಯ ಬಂದೊದಗಿ ಹರಿಭಕ್ತಿ ।
ಜನಿಸಿದುದು ಪೂರ್ವಸುಕೃತದ ಪಾಕಮಲ್ಲದಿದು ಚಿರಕಾಲಕಂ ಸಾಧ್ಯವೆ ॥ (27)
ಎಂದು ತಮ್ಮೊಳು ತಾವೆ ಮಾತನಾಡುತ ಹರುಷ ।
ದಿಂದಲವನಿತ್ತ ವಸ್ತುಗಳೆಲ್ಲಮಂ ಕೊಂಡು ।
ಮುಂದಗೈದಲ್ ಹಿಮಾಚಲದತ್ತ ಸಾರಲವರಿತ್ತ ವ್ಯಾಧಾಗ್ರೇಶನು ॥
ಎಂದಿರ್ದ ವೇಷಮಂ ತ್ಯಜಿಸಿ ಶರಚಾಪಗಳ ।
ಪಿಂದಕಂ ಬಿಸುಟು ನದಿಯೊಳ್ ಮಿಂದು ವೈರಾಗ್ಯ ।
ದಿಂದ ವಲ್ಕಲಧಾರಿಯಾಗಿ ಕರದೊಳ್ ಪಿಡಿದ ರುದ್ರಾಕ್ಷಮಾಲೆಯನ್ನು ॥ (28)
ಸುರುಚಿರಸ್ಥಾನಮಂ ಕಂಡಲ್ಲಿ ಕುಳಿತು ಬಂ ।
ಧುರಶಪಥಮಂಗೈದ ಮಂತ್ರಾಧಿದೇವತೆಯು ।
ಕರದಲ್ಲದೀತಾಣಪಿಂದೇಳದೊಮ್ಮನದೊಳಾವಿರ್ದನೆಂದೆನುತ್ತ ॥
ಧರಿಸಿ ಧೃತಿಯಂ ತದೇಕಾಯತ್ತಚಿತ್ತದೊಳ್ ।
ಸಿರಿಯುರಸನಂಘ್ರಿಯಂ ಪಿಡಿದು ಮುನಿವರನಿತ್ತ ।
ಪರಮಮಂತ್ರವ ಜಪಿಸುತಿರ್ದ ಬೆರತಂ ಪೊರ್ದ್ದದಾನಂದನಿಧಿಯ ಸಾರ್ದ ॥ (29)
ಧರಿಸಿ ಮಾರುತನ ಹೃದ್ದೇಶದೊಳ್ ಬಾಹ್ಯಮಂ ।
ಸ್ಮರಿಸದಲೆ ಚಿತ್ತನುಗ್ರಹಗೈದುಮಿಂದ್ರಿಯ ಗ ।
ಳೆರಕವಿಲ್ಲದೆ ಜಪಿಸಿದಂ ಮಹಾಮಂತ್ರಮನನ್ನಾದಿಮಿನಿತಿಲ್ಲದೆ ॥
ಹರಣಸುಖಮಂ ನೋಡ ಫಲಮೂಲ ಪರ್ಣಜಲ ।
ಮರುತನಾಹಾರದಿಂ ಕೆಲಕಾಲಮಿಾ ಪರಿಯ ।
ಲಿರುತಿರುತ ಹಲಕಾಲ ನಿತ್ಯೋಪವಾಸಮಂ ಕೈಕೊಂಡನಾ ಲುಬ್ಧನು ॥ (30)
ಇಂತು ತಪದಿಂದಾತನಿರುತಿರಲ್ ಸತಿಸುತರ್ ।
ಕಾಂತನಾಗಮನಮಂ ನೋಡಿ ಬರೆ ಕಡೆಯಲ ।
ತ್ಯಂತಸಂಕಟದಿಂದ ಪ್ರಿಯಬಂಧುಗಳ್ ಕೂಡಿ ವಿಪಿನದೊಳ್ ತೊಳಲುತರಸಿ ॥
ಚಿಂತಿಸುತ ಕಾಣದಾವೆಡೆಯೊಳಂ ದುಮ್ಮಾನ ।
ಪೊಂತು ಮಿಡುಕುತ ಬರಲ್ ಕೃಶವಲಿನಿಯರುತಕೆದಿ ।
ಪೊಂತೆ ಕಂಗಳ ಮುಗಿದು ಪುಳಕದಿಂ ಕುಳ್ಳಿರ್ದ ವಿಗ್ರಹವನೊಂ ಕಂಡರು ॥ (31)

ಕುರುಪಿಡಿವ ಸಾಧನಹುದೆನುತ ಪೊರೆಗೈತಂದು ।
ಕರೆವರತಿವಿನಯದಿಂ ನುತಿಗೈದು ನುಡಿಯದಿರ ।
ಲರಸ ಸುತ ಮಿತ್ರಾದಿಗಳ್ ಕೆಲದಿ ಕುಳ್ಳಿರ್ದು ಮೊದಲಿಸಿ ಮಾತಾಡಿಸಿ ॥

ಅರೆಗೊರಡಿನಂತಲುಗದುಲಿಯದಲೆ ಕಂಗಳಂ ।
ತೆರೆಯದಿರಲಹುದಲ್ಲವೆನುತ ತಮ್ಮೊಳ್ ತಾವೆ ।
ಪರಿಪರಿಯ ಯುಕ್ತಿಗಳೊಳೆಚ್ಚರಂಗೊಳಿಸುವೊಡುಪಾಯಗಳ ಮಾಳ್ಪರೊಲಿದು ॥ [(32)

ತರವಮನಾಚರಿಸುವುದು ಭೂದಿವಿಜಕ್ಷತ್ರಿಯರ್ ।
ತಪಿಸುವವದಯೋಗ್ಯಜಾತಿಕ ನಿನಗದೆಲ್ಲಿಯದು ।
ವಿಪರೀತಕರಬುದ್ಧಿ ಕರಗತಸುಭೋಗಂಗಳಾಳದು ಕೃಪಣನ ತೆರದೊಳು ॥

ತಪಿಸುತಿಹೆ ದಾರಿದ್ರ್ಯವ ಡಸಿದವಗಂ ಪುಣ್ಯ ।
ವಿಪ್ರಳ ತೀರ್ಥಂಗಳ ನಿಷೇವಣಂ ಸುಖಕಾಗ ।
ವಿಪ್ರಳಶ್ರೀಕನಿಗಾತ ವಿದ್ವಲ್ಲಿ ಘಟಿಸುವವನೇಕಸುಕೃತಂಗಳೊಲಿದು ॥ (33)

ಚೋರಕರ್ಮಂ ಬೇಂಟೆಯಿಂದೆಮ್ಮ ಜೀವನಂ ।
ತೋರದೀ ಪರಿ ಶಬರಕುಲದೊಳೆಲ್ಲಿಯು ದಯೆ ।
ದೂರ ಕೈರಾತರೊಳ್ ಸನ್ಯಸಮೌನಂಗಳನುಚಿತಂ ಪುಲ್ಕಸರೊಳು ॥

ಆರ್ಗೆ ಯಾರನರೊಳಂ ಸ್ನೇಹಕದರಿಗಳು ।
ನಾರಭೋಗಂಗಂಡುದಿಲ್ಲ ಮಿದು ಪೊಸತೆನುತ ।
ವೀರರಾಗಳೆಡಬಲದೊಳೀ ಪರಿಯ ಮೂದಲೆಗಳಂದ ಮಾತಾಡಿಸಿದರು ॥ (34)

ಸುರರು ಮುನಿಗಳು ಬ್ರಹ್ಮಚಾರಿಗಳು ಪಿತೃದೇವ ।
ರರಸುವರು ಗಾರ್ಹಸ್ಥ್ಯವಂ ಬಯಸುತಿಪನುಳಿಯೆ ।
ನಿರವಲಂಬನದಿಂದ ಧರ್ಮ ಘಟಿಸದು ಪರಂ ಕೈಸಾರದೇವೆನುತಲಿ ॥

ಅರಿದು ದುರ್ಬುದ್ಧಿಯಂ ಕೇಹತರು ಬೋಧಿಸುವ ।
ಪರಿಮಿತದು ಸತಿಪುತ್ರ ಪೌತ್ರ ಬಾಂಧವಜನರ ।
ಹರುಷಗೊಳಿಸಾತ್ಮಸುಖಭೋಗಂಗಳಂ ತ್ಯಜಿಸಲಿದು ಸಮಯಮಲ್ಲೆಂದರು ॥ (35)

ಆವವಿಧದಿಂದರಿಪಲಾ ಚಿತ್ರ ಪರತರಕೆ ।
ಪಾವನಿತವೊಳಗಂಟೆ ಮುಗುಳ್ ಪೊರಸೂಸದಿರೆ ।
ಜೀವನಿತಕೆಂದರಿದು ಬಂಧುಜನರತಿಕ್ಲೇಶಗೊಳ್ಳ ಮತ್ತಿಂತೆಂದರು ॥

ಆವನೀಪರಿಗೈದ ನಾಶಿಂದ ವಂಚನೆಗೆ ।
ತಾವಾರೆ ಭ್ರಮೆಯೌಷಧಿಗಳತ್ತು ಕೆಡಿಸಿದನ ।
ದಾವ ಪುಣ್ಯಾತ್ಮನೋ ಚೋರಬಾಧಾಹರಣಗೈಯಲೀ ಪರಿಯೊರೆದನು ॥ (36)

ಕುತ್ರಕವಂತೌಷಧಿಗಳತ್ತು ಬರದೊಳ್ ಮರನ ।
ಜತ್ತೈಸು ಕುಲವಪೋಗಾಡಿ ಪರಸುಖವೆನ್ನು ।
ವತ್ಸಳುವ ತೋರಿ ಭೋಗವ ತೂರಿ ಭ್ರಷ್ಟನಹ ತೆರಗೈದ ನಿಂದಾವನೊ ॥

ಜತೆಯಾದ ಮೃಷ್ಟಾನ್ನವಂ ಬಿಟ್ಟು ತಿರಿವುದರ ।
ಯತ್ನಗೈದಂತಾಯ್ತು ನಿಜಕುಲೋತ್ತಮನುಳಿಯೆ ।
ಗತಿಯಹುದೆ ಮೂರ್ಖತೆಯನುಳಿದು ಸುಖದಿಂ ಬಾಳ್ವುದೆಸು ಬಯಸು ಮತಿವಿಡಿದು ॥ [(37)

ನಿರುತ ದುಷ್ಕರ್ಮಿಗೆ ದುರಾಚಾರರತನೆನಿಪ ।
ಗುರು ನೀಚಕುಪಿತ ನಿಜ ಕುಲಧರ್ಮಮುಳಿದಾತ ।
ಗೆರಗುವವೆ ಶುಭಗಳವನೇಂಗೈದೊಡವು ತಪ್ತಲೋಹಸ್ಥ ಬೀಜವಂತೆ ॥
ನೆರೆ ಪೊಳೆಯುಲಮ್ಮ ವೀ ಮೂರ್ಖಗಂ ಸಗ್ಗಮೇಂ ।
ದೊರವುದೆ ನಿರರ್ಥವಾದೊಡಾಗಿ ಫಲವೇನರಸ ।
ಕರಕರಂ ನೋಡು ಸುಖ ಮಾಡೆನುತ ಬಹುವಿಧದಿ ಪೇಳ್ದರೆಡಬಲದೊಳೊಡನೆ ॥
[(38)

ರಾಮನಾಮಾಕ್ಷರದಲೆರಕವಾಗಿಹ ಚಿತ್ತ ।
ಭ್ರಾಮಕದ ನುಡಿಯು ಮೆಚ್ಚುವುದೆ ಪರಮಾನಂದ ।
ಭೂಮಿಯುಂ ವಶಗೈದು ಸುಖದೊಳಹ ನಿರ್ಮಲಿತಕರಣ ವಿಷಯಕ್ಕೆರಗುವೆ ॥
ಈ ಮಹಾ ಮಹಾಮಹಿಮ ನೀ ದುಷ್ಟಜನ ಸಂಸರ್ಗ ।
ಭ್ರಾಮಕಕ್ಕಲುಗುವನೆ ಬಂದೆ ಸಂಕಟಗೊಂಡ ।
ರೇಮ್ಮನೆಗೆ ಪೋಗುವೆವೆನುತ್ತಲವರೊಳಗೊರ್ವ ವೃದ್ಧಶಬರಂ ನುಡಿವನು ॥ (39)

ಪರದೊಳೆರಗಿಹ ಚಿತ್ತ ತಿರುಗಲಮ್ಮದು ದೋಷ ।
ವಿರುವದೆಮಗಿನ್ನಿಂದಲತ್ತ ಸುಖದಿಂದಾತ ।
ನಿರಲಿತ್ತಲಾವು ಪೋದಪೆವೆಂದು ವೃದ್ಧರ್ ನಡೆಯಲವನ ಸತಿಸುತರೆಲ್ಲರು ॥
ತಿರುಗಿದರ್ ನಿಜಕುಲವ ಬೈವುತ್ತಲಿವನಿತ್ತ ।
ನಿರತಿಶಯ ತಪದಿಂದಲಿರೆ ಸರ್ವಭೂತಗಳ್ ।
ಪರಿಪರಿಯ ಶ್ಯಾಲೆಯನ್ನೆಸಗುತ್ತೈದಿದ ಪರಿಯನೇಂ ಪೇಳ್ವೆ ತಪದ ಸಿರಿಯ ॥ (40)

ಧರಣಿ ಜಲ ಮರುತಹುತಭುಗ್ನಭಗಳುಂ ತಪದ ।
ಭರಕಂಜಿ ನಿಜವೃತ್ತಿಗಳನುಳಿದು ಪೂರ್ವದಂ ।
ತುರುತರನಿಜಸ್ಮೃತಿಯ ನನುಕರಿಸಿ ಸೇರಿಸಲ್ಲದುದಾ ಬನ ನಿಮಿಷದಿ ।
ವರಚೈತ್ರರಥ ನಂದನವನಾಧಿಕ್ಯತೆಗೈದು ।
ಪರಿಮಳತಕುಸುಮ ಷಡೃತುಗಳೊಂದೇಬಾರಿ ।
ಎರಕವಾದಂತೆ ಅದುದತಿಶಯವನೇಂ ಪೇಳ್ವೆನುರುತರತಪೋಮಹಿಮೆಯ ॥ (41)

ಮರನೆಲ್ಲ ಕಲ್ಪತರುಗಳತೆರದಿ ಫಲಪುಷ್ಪ ।
ಭರಿತದಿಂ ಪರಿಮಳಸುತಾರಾರು ಬೇಡಿದುದ ।
ಕರೆದೀವುತಿರೆ ಸೂರ್ಯಕ್ರತುಭುಜನಿರ್ಜತಾಪಗಳನುಳಿದು ಜೀವತತಿಯು ॥
ಪೊರೆವುತ್ತಬರಲುದಕ ದೋಷಮಂ ಬಿಟ್ಟುವೃತ ।
ಪರಿಯಾಗಲರಿತು ಮಾರುತ ಮೃದುಲತರಮೆನಿಸು ।
ತಿರೆ ಮಧುರತರ ವಾಕ್ಸೃಜನೆಗೈದಲಾಮಹದಚ್ಚರಿಯೆನಲ್ ಭೂತಳಕ್ಕೆ ॥ (42)

ಒಲಿದು ಪದ್ಮಾಸನವ ಚಲಿಸದಂತಿರೆ ಪಕ್ಷಿ ।
ಕುಲವೆಲ್ಲ ಮಸ್ತಕದಿ ಮನೆಗಟ್ಟಿ ಕ್ರಿಮಿಕೀಟ ।
ಕುಲಜಂತುಗಳು ಶರೀರಾಶ್ರಯದಿ ಮಾಂಸಮಂ ತಿನುತಲಿರೆ ಪರದೊಳಿಟ್ಟು ॥
ಚಲುವ ದಿಟ್ಟಿಯು ಮುಗುಳದಿರೆ ಸ್ಥಾಣುವೆಂಬಂತೆ ।
ಜಲಜಾಕ್ಷರಾಮಪುರದಧಿನಾಥಗಂ ಭಜಸು ।
ವಲಘಾತಪದಿರವ ಸಭಿವರ್ಣಿಸುವರಾರ್ಗಳವು ವ್ಯಾಳಾಧ್ಯಗಂ ಸಾಧ್ಯವೇ ॥ (43)

(ಸಂಧಿ 20, ಪದ 871.)

ಇಪ್ಪತ್ತೊಂದನೆಯ ಸಂಧಿ.

ಸೂಚನೆ ॥ ಬ್ರಹ್ಮಾದ್ಯನೇಕ ಋಷಿಗಣನೈದಿ ಮೌನದಿಂ ।
ಬ್ರಹ್ಮನಿಷ್ಠೆಯೊಳಿರ್ದ ತಾಪಸಕುಲೋತ್ತಮಗೆ ।
ಬ್ರಹ್ಮವಿದ್ಯಾಧಿಗತವರಗಳಂ ಪಾಲಿಸುತ ಪೆಸರಿಟ್ಟರತಿಮೋದದಿಂ ॥

ಗಿರಿಜೆ ಕೇಳೇಕಾಂತವಾಗಿ ತರುಮೂಲದೊಳ್ ।
ಧರಿಸಿ ವಲ್ಕಲಮಜಿನವಸ್ತ್ರಂ ಕುಶಾಸನದಿ ।
ಗುರು ಪೇಳ್ದ ರೀತಿಯೊಳ್ ತಾರಕವ ಜಪಿಸುತಂ ರಾಘವಾರ್ಪಿತಚಿತ್ತದಿ ॥
ಧರಿಸಿ ತಾಣಂಗಳಂ ಪಂಚೇಂದ್ರಿಯಂಗಳುರು ।
ತರತಾಪವಂ ನೀಗಿ ತಪಿಸುತಿಹ ತಾಪಸನೆ ।
ವರುಷಗಳ್ ದಿವ್ಯಸಾಸಿರವೊಂದು ನಿಮಿಷದಂತಾದುದೇನೆಂಬೆ ಪರಿಯ ॥ (1)

ಅನ್ನೋದಕಂಗಳಂ ತ್ಯಜಿಸಿರುವ ನತಿತಪಿಪ ।
ಬನ್ನಮಂ ಕಂಡಖಿಲದೇವತೆಗಳಗೆ ಭೀತಿ ।
ಚೆನ್ನಾಗಿ ಪುಟ್ಟದುದು ಸ್ವಸ್ಥಾನಕೇನಹುದೊ ವಿಪರೀತಮೆಂದೆನುತ್ತ ॥
ಖಿನ್ನಮಾನಸದಿಂದ ನೆರೆದೆಲ್ಲರುಂ ಮಘವ ।
ಸನ್ನಿಧಿಯನೈದಿ ಸಂಕಟದಿಂದ ಮುನಿವೃತ್ತ ।
ವನ್ನು ವಿಜ್ಞಾಪಿಸಲ್ ಸುರಪ ಚಿಂತಿಸಿ ಮನದೊಳಾಲೋಚನಂಗೈದನು ॥ (2)

ಆವ ಪರಿಯಿಂದಾದರೀ ತಪವ ಕೆಡಿಸದಿರೆ ।
ದೇವಾಧಿಗಾರವಂ ಪೋಪುದೆನುತಂ ಗಾನ ।
ಕೋವಿದರ ಗಾಂಧರ್ವರೆಂಬಾದ್ಯನೇಕಸುರನಾಯಕೀನಿಚಯವನ್ನು ॥
ಕಾಮಂ ಬಸಂತ ತಂಗಾಳಿ ಸಹಿತರ್ ನಿಖಿಲ ।
ದೇವರ್ಕಳೆಲ್ಲರಂ ಕರೆದೊರೆದ ಘೋರಪ್ರ ।
ಭಾವವಗ್ಗಳಿಕೆಯಂ ಲಾಳಿತಗೊಳಿಸು ಪ್ರೌಢುಪಾಯಗಳಂ ವಿನಯದಿಂದ ॥ (3)

ನೆಲದೊಳಗೆ ವಿಜಯನಾಮಕ ಘೋರ ತಪದಿಂದ ।
ಗೆಲಲಖಿಲಲೋಕಗಳ ಧೃತಿಯಿಂದೆ ಕುಳ್ಳಿರ್ದ ।
ಬಲುತಪದ ಕಾಕೆನಿಂ ಪದಿನಾಲ್ಕು ಲೋಕಗಳ್ ನಡುಗುತಿವೆ ಭೀತಿಗೊಂಡು ॥
ಪಲವುಪಾಯಂಗಳಿಂದಲಾ ತಪೋವಿಘ್ನಮಂ ।
ಸುಲಭದಿಂಗೈದು ಕಲ್ಯಾಣಮಪ್ಪಂದದಿಂ ।
ಕೆಲಸಗೈವೇಳ್ಕೆನುತ ಸುರನಾಥ ನೇಮಿಸಲ್ ದೇವತೆಗಳೈತಂದರು ॥ (4)

ಮೇನಕೆ ತಿಲೋತ್ತಮೆ ಸುಕೇಶಿಯೂರ್ವಶಿರಂಭೆ ।
ಮಾನಿನೀಮಣಿಚಂದ್ರರೇಖೆಯು ಮದಾಲಸೆಯು ।
ಮಾನಸವುಂಜರಿಯನಿಧಿಚಂದ್ರವದನಾಪ್ರಮುಖ ವಪ್ಸರಸ್ತ್ರೀಯರೆಲ್ಲ ॥
ಗಾನಕೋವಿದಕಲಾಕುಶಲಗಾಂಧರ್ವತತಿ ।
ಸೂನಾಸ್ತ್ರ ಮರುತಮಾಧವರೊಳೊಡವೆರದಾಗ ।
ಸಾನಂದದಿಂ ಧರಾತಳಕಿಳಿದರೇನೆಂಬೆ ಮೂಲೋಕ ಮೋಹಿಪಂತೆ ॥ (5)

ಸುರಪನಪ್ಪಣೆಯಿಂದ ಧರೆಗಿಳಿದು ದೇವತೆಗ ।
ಳಾರುತರದ ಮೋಹನಾಕೃತಿಗೈದು ಕಲ್ಕರಗ ।
ಳೆರಳುವಂದದಿ ಜಗನ್ಮೋಹನಂಗಳ ರಚಿಸುತಾ ಬನದ ಕೆಲಕೆ ಸಾರ್ದು ॥
ಪರಮಪಾವನಮೌನಿ ಯತಿಘೋರತಪದೊಳಹ ।
ನಿರಿಗೆಯಂ ಕಂಡು ಭಯಗೊಂಡು ಪ್ರತ್ಯೂಹಗಳ ।
ವಿರಚಿಸಲ್ಕೊರ್ವರೊರ್ವರ ಮುಖವ ನೋಡುತ್ತಲಾಲೋಚನಂಗೈದರು ॥ (6)

ನೋಡಿದಾಕ್ಷಣ ಮರುಳ್ಗೊಳ್ಳುವಂದದಾಕಾರ ।
ಗೂಡಿ ಪಾಡುತ ನೃತ್ಯಗೈವುತ್ತ ಬನದಿ ಸುಳ ।
ವಾಡುತ್ತಲಾ ಬನದ ವೈಭವವ ನೋಡುತ್ತಲಾಶ್ಚರ್ಯಗೊಳುತ ಮನದಿ ॥
ಊಡುತಮೃತೋಪಮಿತಫಲಗಳಂ ಕುಸುಮಗಳ ।
ಸೂಡಿ ಮಧುಪಾನದಿಂ ನಲವೇರಿ ಮೈಮರೆದ ।
ರಾಡಲೇನಂಜಿಸಲ್ಪೋಗಿ ತಾನಂಜಿದಂತಾದ ವೈಭವದೇಳ್ಗೆಯು ॥ (7)

ಇನಿತು ಮಾಯೋಪಮಾನಗಳೆಸಗಿ ತಪದಿಂದ ।
ಮುನಿಯುವಂಚಿಸಲೆಂದು ಬಂದ ದೇವಾದಿಗಳ ।
ಮನದಿರವ ನೋಡಿ ರಾಘವ ಭಕ್ತವತ್ಸಲಂ ನಿಜಮಾಯೆಯನ್ನು ನೆಗಳ ॥
ವನಜಭವಹರ ವಿಷ್ಣುಗಳ ಪಿಡಿವ ಗುಣಮಾರ ।
ನನುಕರಿಸಿ ಬಹುಯೋಗಿ ಸಂಭೂತರೆಂದೆನಿಸಿ ।
ಬಿನದದಿಂ ನಟನೆಗೈಸುವಮಾಯೆಗೇಂ ಗಣನೆ ಮೋಹಿಪುದು ದೇವತತಿಯ ॥ (8)

ಆ ಘನಂ ರಾಘವಾತ್ಮತೆಯಾಗಿ ಕಂಗೊಳಿಸಿ ।
ತೇವೇಳ್ವಿ ತರು ತರುಗಳೆಡೆಯಲ್ಲಿ ರಾಘವನ ।
ಪಾವನಾಕೃತಿ ಜಗನ್ಮೋಹನಾಕೃತಿಯೆನಿಸಿ ತೋರಲಪ್ಸರಸಿಯರಿಂಗೆ ॥
ಭಾವಭವನಾಟದೊಳ್ ಮುಗಿದರು ಮೂರ್ತಿಯಲ ।
ತೀವಾನುರಾಗಮುಂ ಬರುದುಬರೆ ನಿರ್ಲಜ್ಜೆ ।
ಯಾ ವಧುಗಳಂಗುದಿಸಲಾದುದು ಪರಸ್ಪರ ಭ್ರಾಂತಿ ಮಗುಳೇನೆಂಬೆನು ॥ (9)

ಜಿತಮದನಸ್ಮಿತವದನ ಶುಭರದನ ಸೌವರ್ಣ ।
ವಿತ್ರತಕೋದಂಡಸತ್ಕಾಂಡದೋರ್ದಂಡ ಸಂ ।
ಭೃತದಿವ್ಯ ಚೇಲವನಮಾಲಾ ವಿರಾಜಿತ ಸುವಕ್ಷಸ್ಥಳಂ ರಾತ್ರ್ಯು ॥
ಪತಿ ಯುಷಾಪತಿ ರತಿಪತಿಯರಂ ಧಿಕ್ಕರಿಸಿ ।
ಸತಿಯರತಿಮೋಹ ದುಸ್ಸ್ಪೃಹನೇಹದಿಂದೈದಿ ।
ಕ್ಷಿತಿಜಾಪತಿಯನಪ್ಪಲನುಗೈದು ತರುತರುನಿಕುಂಜಪುಂಜಗಳರಸಲು ॥ (10)

ಇದೆ ರಾಮನೆನುತ ಬಯಲನ್ನಪ್ಪಲೊರ್ಮೆ ದ೯ ।
ರಡೆ ರಾಮನೆಂದಪ್ಪಲೆಳಸಿ ಪಾರಲ್ಕೊರ್ವೆ ।
ಬದಿಯೊಳಹನೆಂದರಸಿ ತಕ್ಕೈಸಲೊರ್ವೆ ಯಾಗಸವನಚಿಯಿಂದಲಿ ॥
ಇದಿರಾಗಿ ಪಾರ್ಶ್ವದಲಿ ಪಿಂದೆಡೆಯ ದೂರದೊಳ್ ।
ಚದುರಿಂದ ಮೋಹನಾಕೃತಿ ವಿಶ್ವರೂಪಾಂತು ।
ಸುದತಿಯರ ಕಂಗಳಗೆ ತೋರಲೆಡೆಯಾಡಿದರದೇನೆಂಬೆ ಕೌತುಕವನು ॥ (11)

ಕೈಗೆ ಸಿಕ್ಕದತೆರದಿ ಕಾಣ್ಬಡೆದ ರೀತಿಯೊಳು ।
ಮೈಗೆ ಮೈಯಂಟದಂತನುರಾಗದಿಂ ತಮ್ಮ ।
ಕೈಗೆ ಕೈಗಳ ಪಿಡಿವುತ್ತೊರ್ವರೊರ್ವರನಪ್ಪಿ ಬನದಿ ಧಾವತಿಗೊಳ್ಳುತೆ ॥
ಸುಯ್ಗಂಪ ಬೀರುತ್ತೆಡೆಯಾಡುತೆ ಸುರುಸುರೆನುತೆ ।
ಸ್ವೈಗವಂತಪ್ರಚಾರಣವಿಡಿಯದವ್ವಳಿಸಿ ।
ಭೋಗೇಚ್ಛೆಗೈವ ಮುಕ್ತಿಯುರಿರವನೇಂ ಪೇಳ್ವೆ ಭೂಮಿಗಳುಪವಿತ್ರೆಯಾದುದು ॥
[(12)

ಅರಸಿಕೊಳ್ಳಲುಪವನದೊಳಾವೆಡೆಯೊಳಂ ಕಾಣ ।
ದಾರುತರದ ಸಂಕಟದಿ ಕುಳ್ಳಿರ್ದ ಕಂಗಳಾಗ ।
ಳರೆಮುಗಿದು ನೋಡುತಿರಲೊಳಗೆ ಪಾವನಮೂರ್ತಿ ತೋರೆ ಮನಸಿಂದಲಪ್ಪಿ ।
ಪರ್ವೋತ್ಸವದಿ ತಮ್ಮ ಬಯಕೆಗಳ ಕಳೆವರ ।
ಚ್ಚರಿಚರಿಯ ಸನಕಾದಿಮೌನಿಗಳ ಜಾನಕಂ ।
ನಿರುಗೆಗೊಳದೀಚರಣ ಸಾರಿಯುರಿಗಳವಟ್ಟುದೇಂ ಸುಕೃತಫಲಮದಲ್ತೆ ॥ (13)

ಬಲುತರೋಪಾಯಗಳನೆಸಗಿ ಕೊನೆಗಾಣಿಪೆರೆ ।
ಲಲಿತಾಂತರಂಗದಿಂದಖಿಲದೇವರ್ಕಳುಂ ।
ಗೆಲಲಸಾಧ್ಯವೆನುತ್ತ ತಮ್ಮೊಳಾಲೋಚಿಸುತ ಮುನಿಶಾಪ ಬಪ್ಪುದೆನುತ ॥
ತೊಲತೊಲಗ ಬನದಿಂದ ಸುರಪನೆಡೆಗೈದಿ ನಿಜ ।
ಪೊಲಬ ಬಿನ್ನಪಗೈಯಲತಿ ಭೀತಿಯಿಂದಿಂದ್ರ ।
ನೆಲಘಮತಿ ಗೀಷ್ಪತಿಗೆ ತಿಳುಪಲರಿತಿಂತೆಂದ ಮುಂತಪ್ಪ ಕಷ್ಟಗಳನು ॥ (14)

ಈತ್ರಸುರಾತಪದಿಂದ ದೇವರ್ಕಳಗೆ ಭೀತಿ ।
ಜಾತವಾದಪುದೆಂಬ ಭಯವನುಳ ಶಚಿಯರಸ ।
ನೀತ ರಾಮಾಯಣ ಮಹಾಕಾವ್ಯಕರ್ತನಹ ವಾಲ್ಮೀಕಿ ಶುಭನಾಮದಿ ॥
ಈತ ಬ್ರಹ್ಮರ್ಷಿಯುಹ ಸರ್ವಜನರಂ ಪೊರೆಯೆ ।
ದಾತನಹ ನಿದಕೆ ಸಂದೆಗಮಿಲ್ಲಮೆನುತೊರೆದ ।
ಮಾತಿನಿಂದಿದ್ರ ಚಿಂತೆಯನುಳದು ಸುಖಮಿರ್ದನಿತ್ತಲಾದುದ ಪೇಳ್ವೆನು ॥ (15)

ಅಂತರಾಯವನೆಸಗಲೈತಂದ ದಿವಿಷದರ ।
ಸಂತೆಯಂ ಭ್ರಮೆಗೊಳಿಸಿ ಕಳಪಿ ರಘುನಾಯಕಂ ।
ಚಿಂತಿತಾರ್ಥಪ್ರದನೆನಿಪ್ಪ ಬಿರುದಂ ಮೆರೆಯಲೆಂದನುಗ್ರಹದಿಂದಲಿ ॥
ಕುಂತಿರ್ದ ಮುನಿಗೆ ಮಕ್ಷಿಕಮಶಕಕೀಟಾದಿ ।
ಸಂತೆ ಯುಪಟಳಮಿಲ್ಲದಿರ್ಪಂತೆ ವಲ್ಮೀಕ ।
ಮಂ ತಾನು ನಿರ್ಮಿಸಿದನೇನೆಂಬೆ ಶರಣಜನರಕ್ಷ ಶರಣಾಕೃತಿಯನು ॥ (16)

ಬಿಸಿಲುಗಾಳಿಯು ಮಳೆಗಳೆಸಗ ಕ್ರಿಮಿಕೀಟಗಳ ।
ಕಸರಿಲ್ಲದಾ ಪುತ್ತದೊಳಗೆ ಮುನಿಪತಿ ತಪವ ।
ನೆಸಗಿದಂ ಬಲುಯುಗಂ ಮನ್ವಂತರಸಹಸ್ರಮೇನೊಂದಸರಿಯದಂತೆ ॥
ಪೊಸಬಗೆಯ ವರ್ಣಿಸುವರಾರ್ಗಳವು ಗೌರಿಮಾ[illegible] ।
ಶಶಿರವಿಗಳೇಕತಾಣದೊಳಟ್ಟು ಮಾರುತನ ।
ಮಿಸುಕಲೀಯದೆ ದಿವ್ಯಮಂತ್ರಾಮೃತವನುಂಡು ಸುಖದಿಂದಲಿರುತಿರ್ದನು ॥ (17)

ಹಿಮಶೈಲಕೈದಿದ ವಸಿಷ್ಠಾದಿ ಮುನಿಗಳುಂ ।
ವಿಮಲ ಶಿಷ್ಯರುಗಳೊಡವೆರದೊಂದು ದಿನ ಬರುತ ।
ಸುಮನಸೋದ್ಯಾನಕೆಮ್ಮಡಿ ಯೆನಿಪ ನಂದನವ ಕಂಡು ವಿಸ್ಮಯದಿಂದಲಿ ॥
ತಮತಮಗೆ ಸಂತಸಂಗೊಳುತ ಬನವಂ ಪೊಕ್ಕು ।
ಶ್ರಮನಿವಾರಣಗೈದು ಕುಳ್ಳಿರ್ದರತಿಮುದದಿ ।
ಕ್ರಮದೊಳೊಂದೊಂದು ಮರದೆಡೆಯು ನಿಜನಿಲಯಕಂ ಹರುಷಮಿಮ್ಮಡಿ [ಯೆಂಬೊಲು ॥ (18)

ಅನಿತರೊಳು ಶ್ರೀರಾಮಭಕ್ತವಾತ್ಸಲ್ಯಮಂ ।
ಜನರಿಂಗೆ ಕಾಣ್ಬಡಿಸಲೆಂದು ಮನದೊಳ್ತಂದು ।
ಮುನಿಗಳಹ ತಾಣಮಂ ದಿವ್ಯಭವನೋಪಮಿತಗೈದಖಿಳವಸ್ತುಗಳನು ॥
ಕನಕಪಾತ್ರೆಗಳು ಕದಳೀಪರ್ಣ ಸಂತೋಷ ।
ಜನಕ ಮಧುಮೂಲಫಲಶಾಖಾದಿಗಳನೆಲ್ಲ ।
ಬನದೊಳಗೆ ನಿಮಿಷದೊಳು ಯತಿಗಳದಿರೊಳ್ ತೋರುವಂತೆಸಗಿದಂ ಕೃಪೆಯೊಳು ॥ (19)

ಗುಡಜೀರಕಾದಿನಾನಾ ವಸ್ತುಸಂಚಯಂಗ ।
ಳೊಡನಂಗರಾಗದಿಂ ಸುಸ್ವಾದುತೈಲಂಗ ।
ಳೆಡೆಗೆಡೆಗೆ ತಾಂಬೂಲಮೇಲಾಲವಂಗಾದಿಸಾಮಗ್ರಿಗಳನು ನೋಡಿ ।
ಕಡುವಿಸ್ಮಯಂಬಟ್ಟು ಸ್ನಾನಸಂಧ್ಯಾದಿಗಳ ।
ತಡೆಯದೆಸಗುತ ಪಾಕವಂ ಮಾಡಿ ದೇವತತಿ ।
ಗೊಡನಿತ್ತು ಭೋಜನಂಗೈದು ಕರಪಾದಗಳ ತೊಳೆದರಾನಂದದಿಂದ ॥ (20)

ಶುದ್ಧಾಚಮನಗಳಂ ಮಾಡಿಕುಳ್ಳಿರ್ದು ನಿಜ ।
ಬುದ್ಧಿಯಿಂದೂಹಿಸುತಮಾತಾಣ ಮಿನಿತರ ಪ್ರ ।
ಸಿದ್ಧಮಾದುದಿದೇನು ಚಿತ್ರಮೆಂದೊರೊರ್ವರೊಡನೆ ಮಾತಾಡುತಿರಲು ॥
ಮುದ್ದಿಡಲ್ಕೈದಲಿನ ವಾರುಣಿಯು ಋಷಿನಿವಹ ।
ಪೊದ್ದುಸಾಯಾಹ್ನಕಾರ್ಯೆಗಳಂ ರಚಿಸಿ ಹರು ।
ಬೋದ್ಧತಿಮುರೆಲ್ಲರಲ್ಲಲ್ಲಿ ನಿದ್ರಾವಶತೆಯಾದರದನೇನೆಂಬೆನು ॥ (21)

ಮರೆದೊರಗಲಾಕ್ಷಣಮಗಾಧನಿದ್ರೆಯು ತೊಡರ ।
ಲರಿಯದೊಂದನು ಸುಖದೊಳಿರುವನಿತರೊಳ್ ಸ್ವಪ್ನ ।
ಕರಚಿತ್ರವಾಗಿ ತೋರಿದುದದೇನೆರಡನೆಯ ಪ್ರತ್ಯಕ್ಷಮೆಂಬಂದದಿ ॥
ತ್ರಿದೀಷಣಂಗಳಂ ನಿರ್ಮಮತೆಯಿಂ ತಪವ ।
ವಿರಚಿಸುವ ಪುರುಷನೊರ್ವಂ ಚಂದ್ರಬಿಂಬದಂ ।
ತಿರಲಸ್ಥಿಚರ್ಮಾವಶಿಷ್ಟದಿಂದಾತನಂ ಕಂಡರಾನಂದದಿಂದ ॥ (22)

ಪುಟಪಾಕವಿಡಿದ ಪೊಂಬಣ್ಣದಂದದ ಕಾಂತಿ ।
ಘಟಿಸಿರ್ಪ ದೇಹದಿಂ ಪದ್ಮಾಸನದಿ ಕುಳಿತು ।
ಕುಟಿಲಮುಳಿದನವರತಮೇಕಾಗ್ರಚಿತ್ತದೊಳ್ ಸೀತಾಸಹಿತ ಮೂರ್ತಿಯ ॥
ಪುಟಗೊಳಿಸುತನ್ನಾಮಗಳ ಜಪಿಸುತನವರತ ।
ತ್ರುಟಿತಗೈದಿತರಭಾವಂಗಳಂ ಕರಣಂಗ ।
ಳುಟಣೆಯಿಲ್ಲದೆ ಬೆಳಗ ಖಂಡದಿಂದಿರೆ ತೋರ್ದುದಾ ಮಹಾಮುನಿಗಳಂಗೆ ॥ (23)

ಸರಸಿಜದ ಪೀಠದೊಳ್ ವಿರಾಜಿಪ ಸಿಂಹಾಸನದಿ ।
ಧರಣಿಸುತೆ ಯೆಡವಂಕದೊಡೆಯೊಳೊಪ್ಪಿರೆ ನಗೆಯು ।
ಬೆರೆದಿಂದುಮುಖದಿಂದುದಾರಾಂಗನೊಪ್ಪಿರಲ್ ವಿರಾಸನವನು ಬಲಿದು ॥
ಮಾರುತಸುತ ಪಾದವಿಡಿದಿರೆ ಧನುರ್ಧರನಾಗಿ ।
ಸುರುಚಿರವ್ಯಜನದಿಂ ಸೌಮಿತ್ರಿ ಸೇವಿಸಿರೆ ।
ಭರತ ಮುತ್ತಿನ ಕೊಡೆಯ ಪಿಡಿದಿರಲ್ ಶತ್ರುಘ್ನ ಚಾಮರವನಾಂತೆಸೆದಿರೆ ॥ (24
ಪ್ಲವಗೇಶದಾನವಾಧಿರಿರ್ವರ್ ತರದಿ ।
ನವವೇತ್ರಗಳ ಪಿಡಿದು ಬಿರುದನುಘ್ಘಡಿಸುತ್ತಿರೆ ।
ಕುವಲಯದಳಶ್ಯಾಮರಾಮನಖಿಳಾಭರಣ ಭೂತಾಂಗನೆನಿಸಿ ಮುದದಿ ॥
ಅವಿರಳಸ್ತವಗೈವ ಸನಕಾದಿಯೋಗಿಗಳ ।
ನಿವಹದೊಳ್ ರಾಜಿಸುವ ಶ್ರೀರಾಮಮೂರ್ತಿಯಂ ।
ಸುವಿವೇಕದಿಂ ಕಂಡರಖಿಳಾರ್ತಿಹರ ಸದಾನಂದ ತೇಜೋನಿಧಿಯನು ॥ (25)
ಆನಂದನಿಧಿಯ ನೋಡುತಲಮಂದಾನಂದ ।
ಸಾನುರಾಗದಲಿರಲು ನಿಮಿಷಮೆನೆ ಜಾರಲಾ ।
ಭಾನು ಪುಷ್ಟಲ್ಕೆಚ್ಚರಾತು ಮುನಿವರರೆಲ್ಲ ಸ್ನಾನಾಹ್ನಿಕಗಳ ರಚಿಸಿ ॥
ನಾನಾವಿಚಿತ್ರತರ ಕನಸ ನೆನೆವುತಲಿ ಸು ।
ಧ್ಯಾನದಿಂ ಕುಳ್ಳಿರಲ್ಕಾ ಸಭೆಗೆ ಸಡಗರಿಸಿ ।
ಜ್ಞಾನನಿಧಿ ನಾರದಮಹಾಮೌನಿ ಯೈತಂದನುದ್ಧರಿಪರೊಲವಿನಿಂದ ॥ (26)
ಬರಲಾಮುನೀಶಗಿದಿರೆದ್ದಖಿಲತಾಪಸರ್ ।
ಹರುಷದಭಿವಾದನಂಗೈದು ಕುಳ್ಳಿರಿಸುತ್ತ ।
ಪರಮಸತ್ಕಾರದಿಂ ಸಾದರದೊಳೊಡವೆರೆದ ಮೃದುನುಡಿಗಳಿಂದ ನುತಿಸಿ ॥
ಬರವ ಬೆಸಗೊಂಡು ಮತ್ತೆಂದರೆಲೆ ಮುನಿರಾಯ ।
ಬೆರಗಿದೇನೀ ವನ ವಿದಾರದೆಸೆಯಿಂದಾದು ।
ದರಿಯಬಾರದ ಕನಸ ಕಂಡೆವಾವೀವೃತ್ತದಚ್ಚರಿಯ ನಾಲಿಸೆನುತ ॥ (27)
ಜ್ವಲಿತಾಗ್ನಿನಿಭಮೂರ್ತಿಯೊಂದಿಹುದು ಶ್ರೀರಾಮ ।
ನಲಘುನಾಮಂಗಳಂ ಜಪಿಸುತ್ತಲಾ ಮುನಿಪ
ಗೊಲಿದು ಮುಂದೆಡೆಯವರದಾನಹಸ್ತವ ನೀಡಿ ರಘುವೀರ ರಾಜಿಸುವನು ॥
ನೆಲಮರಾದಿಗಳೆಲ್ಲ ರಾಮಾಕೃತಿಯಲೆಸೆವ ।
ಚೆಲುವ ಕಂಡೆವಿದೇನು ಚಿತ್ರವಾರಿಂದಾದು ।
ದೊಲಿದು ಪೇಳ್ವುದೆನುತ್ತ ಬೆಸಗೊಂಡರಜತನಯ ನಸುನಗುತಲಿಂತೆಂದನು ॥ (28)
ಪಿಂತೊಂದು ದಿನ ಮಹಾದೇವನ ದಿದೃಕ್ಷೆಯಿಂ ।
ದಾಂ ತಳುವದತಿಶಯದಿ ಕೈಲಾಸಕೈದಿರಲ್ ।
ಸ್ವಾಂತಹರುಷದೊಳಖಿಳದೇವೇಶ ಪೇಳರ್ದನಾ ಕಥೆಯ ನೊರೆವೆ ಮುದದಿ ॥
ಮುಂತೆ ರಾವಣನೆನಿಪನೊರ್ವನುದಿಸಲ್ ಬಾಧೆ ।
ಯಂ ತಡೆಯದಮರರುಂ ಹರಿಯ ಪ್ರಾರ್ಥಿಸೆ ಪೊರೆಯೆ ।
ನಾಂ ತಳೆದು ಮುಂಮೂರ್ತಿಗಳ ಸತ್ವಮನೊರ್ವ ಪರಮಾತ್ಮನವತರಿಸುವ ॥ (29)

ರವಿವಂಶಸಂಭೂತ ದಶರಥನೊಳವತರಿಸಿ ।
ತವಕದಿಂ ತಾಟಕೆ ಸುಬಾಹುಗಳ ಸಂಹರಿಸಿ ।
ನವಯುವತಿಯಂಗೈದು ಶಿಲೆಯ ಹರಚಾಪವಂ ಮುರಿದು ವೈದೇಹಿವೆರೆದು ॥
ಲವಲವಿಕೆಯಿಂದೈದಿ ದಂಡಕಾಗಹನದೊಳು ।
ತವಕದಿಂದ ವಿರಾಧಮೊದಲಾದ ರಕ್ಕಸರ ।
ಸವರಿ ಮಾರೀಚನಂ ತರಿದು ರವಿಜಂಗೊಲಿದು ವಾಲಿಯಸುಗಳನು ಕಳೆದು ॥ (30)

ಮರುತಜನ ಕರವಿಡಿದು ಶರನಿಧಿಯ ಕಟ್ಟುವುಂ ।
ಬರಿದು ದಶಕಂಧರನ ಕುಲವ ತರಿದವನನುಜ ।
ಗಿರದೆ ಶಾಶ್ವತಪಟ್ಟವಂಕಟ್ಟಿ ಪುಷ್ಪಕವನಡರಿ ಜವದಿಂದ ಬಂದು ॥
ಭರತನಿಷ್ಟವನಿತ್ತು ಬಳಕಯೋಧ್ಯಾಪುರದಿ ।
ದೊರೆಯೆನಿಸಿ ಬಹುಕಾಲ ಧರಣಿಯಂ ಪಾಲಿಸಿದ ।
ಪರಮಮಂಗಳ ಚರಿತ್ರೆಯು ಲೋಕದೊಳ್ಬರಿಸಲೆಂದು ಮನದೊಳಗೆ ತಂದು ॥ (31)

ದುರುಳವ್ಯಾಧಂಗೊಂದು ಪರಿಯುಪದೇಶವಂ ।
ಸರಸಿಜೋದ್ಭವತನಯನೆಸಗಲದರಿಂದವನು ।
ಪರತಪೋನಿಧಿಯೆನಿಸಿ ಬ್ರಾಹ್ಮಣೋತ್ತಮನಾಗಿ ದಿವ್ಯಮಂಗಳಚರಿತ್ರೆಯಂ ॥
ವಿರಚಿಸುವನಾದಿಕವಿ ವಾಲ್ಮೀಕಿಯೆಂದೆನಿಪ ।
ಪರಮಪುರುಷನೆನುತ್ತ ಹರ ನಿರೂಪಿಸಿದರ್ಥ ।
ವರಿವಾಮದೆನಗೆನುತ ದೇವಋಷಿ ನಾರದಂ ಪೇಳ್ದ ಮುನಿಪೋತ್ತಮರಿಗೆ ॥ (32)

ಮೊದಲಾನು ಕೇಳ್ದುದಂ ನೆನದು ಪೇಳದೆನೆನುತ ।
ಮುದವೆತ್ತು ನಾರದಂ ಮುನಿಗಳೊಳು ಪೇಳುತಿರ ।
ಉದಿತವಾಯಿತಶರೀರವಾಣಿ ಭೂದೇವ ಸಭೆಯಲ್ಲಿ ಸಂತಸಗೊಳ್ವೊಲು ॥
ಇದು ಸತ್ಯ ವಲ್ಮೀಕಮಧ್ಯದೇಶದೊಳರ್ಪ ।
ಪದುಮಾಪ್ತನಿಭ ಮೌನಿಯನ್ನುಪಾಯಾಂತರದ ।
ಉದಯಿಪಂದವ ಮಾಡ್ದರಹುದಖಿಲ ಶುಭವಿಭವ ಮೆನುತಂತರಿಕ್ಷದಿಂದ ॥ (33)

ವಿದಿತವಾಗಲ್ ವಶಿಷ್ಟಮುನಿಗಳ್ ಮನದೊ ।
ಳದುಭುತಮಿದೆಂದರಿದುಪಾಯದಿಂ ಪುತ್ತಮಂ ।
ಕದಲಿಸುತ ನಾಲ್ದೆಸೆಯ ಖನನಗೈಯಲ್ಕಿದರಮಧ್ಯಪ್ರದೇಶದೊಳಗೆ ॥
ಉದಿಯಿಸುವ ಭಾಸ್ಕರನೊ ಪುಟಪಾಕಕನಕಮಿದೊ ।
ಸದಮಲ ಮಹಾತೇಜ ನಾಂಗಮೊಂದೆನಿಸಿರ್ಪ ।
ಇದನೋಳ್ಪರಾರೆನುತಲಚ್ಚರಿಯುಲಿಟ್ಟಸಿದರಂದು ಶುಭಮೂರ್ತಿಯನ್ನು ॥ (34)

ತೆಗೆದು ವಿಷಯಂಗಳಂ ಮನವ ರಘುವರನಂಘ್ರಿ ।
ಯುಗಕಿಟ್ಟು ಗುರುಪದಾರ್ಪಿತವಿಚಿಟ್ಟ್ರೆಯಂ ಬಿಡದೆ ।
ಪಗಲಿರುಳು ನಾಮಮಂ ಜಪಿಸುತ ಹೃದಾಕಾಶಮಧ್ಯದೊಳ್ ರಘುವೀರನ ॥
ಬಗೆಬಗೆಯ ಪೂಜೆಗಳನರ್ಪಿಸುತ ಮೇಲೊಂದ ।
ಬಗೆಯದಮಲಬ್ರಹ್ಮಮೂರ್ತಿಯನೋಡಿ ನಸು ।
ನಗುತ ಮುನಿವರರೆಚ್ಚರಂಗೈಯುತೆಳಸಿದರ್ಪಾದಪವನೆಚ್ಚರಿಪೊಲು ॥ (35)

ವಿವಿಧಶೀತೋಪಚಾರಗಳಂದುಪಾಯುಗಳ ।
ನವನವಕವೆನಲೆಸಗಲಾತಗೆಚ್ಚರುತೋರ ।
ಡವಿರಳಾನಂದಾನುಭೂತಿಯಿಂ ಪಿಂತಿರುಗದುಪಲೋಪವಾಸವೆನಿಸೆ ॥
ತವಕದಿಂ ಮುನಿಗಳಸ್ಯೋಪಾಯುಗಳ ಕಾಣಾ ।
ದವನಿಯಿಂ ನೋಡುತಿರಲನಿತರೊಳ್ ಶಿವವಿಷ್ಣು ।
ಕುವಲಯಾಪ್ತನು ಚತುರ್ಮುಖ ಮುಖ್ಯದೇವತೆಗಳೈತಂದರಾ ಸಮಯಕೆ ॥ (36)

ಎನಿತೆನಿತು ಮುಖ್ಯ ದೇವತೆಗಳುಂಟವರೆಲ್ಲ ।
ಘನತಪೋಧನಸಿದ್ಧರೊಡವೆರೆದು ಬಂದು ಸ ।
ನ್ಮುನಿಯು ನಿಟ್ಟಿಸುತಲಚ್ಚರಿಯಿಂದ ಬೆರಗಾಗಿ ನೋಡುತಲ್ಲಲ್ಲಿರುತಿರೆ ॥
ವನಜಪೀಠನ ಸುತಂ ಬಹುವಿಧೋಪಾಯುಗಳ ।
ನೆನಿತೆಸಗಲೆಚ್ಚರಿಕೆಯಾಗದಿರಲನಿತರೊಳ್ ।
ನೆನೆದು ಯುಕ್ತಿಯು ತಾಪಸರೊಳೆಂದನಾ ಪರಿಯು ಬಿತ್ತರಿಸಿ ನಂದುವಿನೆಯದಿ ॥ (37)

ದುರುಳತನದಿಂ ವಿಪಿನಸಂಚಾರಿಯೆನಿಪಾಗ ।
ಗುರುಭಕ್ತಿಯಧಿಕಮುಂಟೀತನಿಗದೆಲ್ಲಿಪೋ ।
ಗಿರದು ಮತ್ತಾನೆಂಬೆಬಂದಿರ್ಪ ಭವದೀಯದೇಶಕಂ ನೋಡಿಸುತಲಿ ॥
ಒರೆವೆನಾತನ ಕಿವಿಯೊಳಂ ಭಕ್ತಿಯುಂಟಾಗೆ ।
ಬರುವುದೆಚ್ಚರೆನುತ್ತ ಪೇಳ್ದ ನುಡಿಯಂ ಕೇಳ್ದು ।
ಸುರರೆಲ್ಲ ಸಂತಸಂಗೊಳುತಲಂತಾಗಲೆಂದಪ್ಪಣೆಯು ನಿತ್ತರೊಲಿದು ॥ (38)

ರಾಮನಾಮವ ಪೇಳ್ದು ಗುರುವನೆಪ್ಪಿಂ ಬಂದ ।
ಪ್ರೇಮದಿಂದೆರಗಿ ಪೂಜಿಪುದುಚಿತ ಮೆಂದುಮುನಿ ।
ಸೋಮನಾತಪಸಿಯು ಕರ್ಣದೊಳುಸುರಲ್ಕೆ ಕಂಗಳಂ ತೆರದು ಬೇಗ ॥
ಕ್ರಮದಿಂದಲೆದ್ದು ಗುರುವಂದನಂಗೈದು ತಪ ।
ದಮಲ ಸೌಭಾಗ್ಯಲಕ್ಷ್ಮಿಯಕಂಡೆ ಕೃತಿಯಾದೆ ।
ವಿಮಲಪದಪಂಕಜವ ನಿಟ್ಟಿಸಿದೆ ನಾನೇಸುಧನ್ಯನೋಯೆನುತೆರಗಿದಂ ॥ (39)

ಪೋದುದೆನ್ನಘರಾಸಿ ಗುರುಪದಾಬ್ಜವ ಕಂಡೆ ।
ಭೇದವಾಯ್ತೆನ್ನಿಂದವಿದ್ಯೆ ವಿದ್ಯಾರೂಪ ।
ಮಾದುದೆಂದೆನುತ ಬಲವಂದು ಮತ್ತೆರಗುತಂ ಕರಗಳಂ ಮುಗಿದುನುತಿಸಿ ॥
ಶ್ರೀದಭವದೀಯ ಕಿಂಕರನಾನು ಬೇಡಿದುದ ।
ಸಾಧನಂಗೈದೀವೆ ದಯೆಗೈಯಪೇಳ್ಕೆಮೆಂ ।
ದಾದರದಿ ವಿಜ್ಞಾಪನಂಗೈದನನಿತರೊಳ್ ಮೊಳಗಿದುದು ಸುರಭೇರಿಯು ॥ (40)

ಮೊಳಗುತಿರೆ ದೇವದುಂದುಭಿಗಳುಂ ಬಾಸೆಡೆಯು ।
ಕಳೆಯುರಿದಗಾಂಧರ್ವ ಗಾಯಕರದೊಂದೆಡೆಯು ।
ಲಲಿಮಿಂಚಿನಂದದಿಂದಪ್ಸರಿಯರಾಡುತಿರೆ ನರ್ತನದ ಮಧುರನುಡಿಯು ॥
ಪೊಳೆಪಿಂದ ದೇವರ್ಕಳುಂ ಕುಸುಮವೃಷ್ಟಿಯುಂ ।
ಸುಳಸಲ್ ದಿಶಾಚಕ್ರ ನಿಸ್ತಿಮಿರವಾಗೆಸುರ
ಭಿಳತಪವಮಾನ ಸಂಚರಿಸಿದಂ ಶಿರವಿಗಳಂತರತಿ ಕಳೆಯುಕೆಳೆಯುಂ ॥ (41)

ನೆರೆದ ಸುರಮುನಿವೃಂದ ಮಧ್ಯಪ್ರದೇಶದೊಳ್ ।
ಹರವಿರಿಂಚಾದಿಗಳ್ ಸಂತಸಂ ಗೊಳುತಿರಲ್ ।
ಸಿರಿಯುರಸನಖಿಲ ದೇವರ್ಕಳುಂ ಕೇಳುತಿರೆ ನುಡಿದನಾನಂದದಿಂದ ॥
ಪರಮ ತಪದಿಂದ ಪದಿನಾಲ್ಕುಲೋಕಂ ಭೀತಿ ।
ಕರವಡಗೆ ದಿಕ್ಪಾಲರೆಲ್ಲರು ನಡುಗುವ್ವೋಲ್ ।
ವಿರಚಿಸಿದ ಬ್ರಹ್ಮಾಂಡಮಂ ಸೃಜಿಸಲೀತನೇ ಶಕ್ತನಹ ಮಗುಳೊಂದನು ॥ (42)
ಪುತ್ತದಿಂದೆರಡನೆಯ ಜನ್ಮಮಾಯ್ತೊತ್ತಗೆನು ।
ತುತ್ತಮದ ಬ್ರಹ್ಮಋಷಿಪದವಾಗಿ ಭೂಸುರರ ।
ಮೊತ್ತದೊಳಗಧಿಕತರಮೆನಿಸಿ ವಾಲ್ಮೀಕಿಮುನಿಯೆಂದೆಂಬ ಪೆಸರಿಂದಲಿ ॥
ಬಿತ್ತರಿಪನೀತ ರಾಮಾಯಣವ ದುರ್ಜನರ ।
ನೊತ್ತಲೋಸುಗಲಾನುಜನಿಪ ವೇದಗಳೆಲ್ಲ ।
ಮತ್ತೆ ಕಾವ್ಯಾತ್ಮತೆಯನಾಂತಿವನ ಮುಖದಿಂದ ಪೊರಮಟ್ಟು ಪೊಳೆವವೆನುತ ॥ (43)
ಈತನಿಂದುದಿತ ರಾಮಾಯಣವ ನೆಲದೊಳಾ ।
ವಾತನೊಂದಕ್ಷರವ ಬರದೋದಿಕೇಳದೊಡೆ ।
ಪಾತಕಂಗಳು ಪೋಗಿ ಪರಮಪಾವನ ನೆನಿಸಿ ಮುಲ್ಲೋಕವಾಸಿಯೆನಿಪ ॥
ಜಾತುಜಿತ್ತುಲಾಲಿಸಿದೊಡಂ ಬಹ್ಮಹತ್ಯಾದಿ ।
ಪಾತಕಗಳು ತೊಲವೆನೆ ಪಠಿಸಿ ಪೋದಪವ ।
ತೀತವರ್ಣಾಚಾರ ದುರ್ನೀತನಾದೊಡಂ ಮುಕ್ತನಹನಿದುನನ್ನಿಯು ॥ (44)
ಪರಪೀಡನೋದ್ಭೂತ ದುಸ್ಸತೀಸಂಗಮಂ ।
ಮರುಳರೊಡನಾಟ ದುರ್ಭೋಜನದುರಾಲಾಪ ।
ದುರುಳಸೇವಾದಿಗಳಲುದಿತ ಪಾತಕಗಳುಂ ಪರಮಮಂಗಳಕಾವ್ಯದಿ ॥
ಅರೆಪದವ ನೆರೆಪದವ ನರಿತು ಮರದೋದಿದೊಡೆ ।
ಪರಿದೋಡಿಪಾವನಕೆ ಪಾವನನೆನಿಪ್ಪನಿದ ।
ನರಿತಿದಂ ಭಕ್ತಿಯಿಂ ಭೋಜನಾಂತ್ಯದೊಳೊಲಿದು ಪಾಡಿದವ ಮುಕ್ತನಹನು ॥ (45)
ಎಂದತಿಶಯದ ವರವನೀಯಲದ ನೋಡುತಾ ।
ನಂದದಿಂ ಹರನುಡಿದ ನೀಕಟ್ಟುದಕ್ಕರಗ ।
ಳೊಂದೆರಡನಾವನುಚ್ಚರಿಸಿದೊಡೆ ಕೈಲಾಸ ಕರತಳಾಮಳಕಮೆನಲು ॥
ಬಂದೊದಗಲೆಂದೊರೆಯಲದನೋಡುತಜ ನುಡಿದ ।
ನಿಂದೀಮಹಾಮುನಿಯು ಜಿಹ್ವಾಗ್ರದೊಳ್ವಾಣಿ ।
ಪೊಂದಿರಲಿ ಮಧುರತರ ಕಾವ್ಯರಚನಾಶಕ್ತಿ ಲೀಲೆಯಿಂದೊದಗಲೆನುತ ॥ (46)
ಕವಿತಾರಚನೆಗೀತ ಕರ್ತನೆಂದೆನಿಸುತೀ ।
ಭುವಿಯೊಳಾದಿಮಹಾಕಾವ್ಯದಧಿಪಕವಿಕುಲರನ್ನ ।
ನವಿರಳಾನಂದದಿಂದಿರಲೀಮಹಾಕಾವ್ಯಮೆಂದೆನುತ್ತೆಲ್ಲರೊಲಿದು ॥
ಸುವಿವೇಕದಿಂದೋದಿ ಸುಖಪನನುಭವಗೈದು ।
ಭವಗಳಂ ಪರಿದಿಟ್ಟು ಬರುವರೆಮ್ಮಾಲೋಕ ।
ಭವನಕೀತನು ಜನಿಸ್ಸನೆತಿಮೋದಕರಮೆನಿಪ [illegible]ಳಂ ಕರುಣದಿಂದ ॥ (47)

ಇಂತುಮುಮ್ಮೂರ್ತಿಗಳ ವರನಾಂತು ಹರ್ಷದಿಂ ।
ಮುಂತೆಸೆವ ಹರಿಯ ನುತಿಗೈದನತಿಭಕ್ತಿಯಿಂ ।
ಚಿಂತಿತಾರ್ಥಪ್ರದ ಮಹೇಶವಾಗೀಶನುತ ವೇದಮಸ್ತಕಭೂಷಣ ॥
ಸಂತತಕೃಪಾನಿಲಯಮೇಕಾಂತಭಾಜನ ಚಿತ್ತ ।
ಕಾಂತಕರುಣಾಸ್ವಾಂತ ಕಮನೀಯ ಸದ್ಗುಣನಿ ।
ಶಾಂತ ಶ್ರೀರಾಮಪುರದಧಿನಾಥ ಸಲಹೆನುತಲೆರಗಿ ನುತಿಗೈದನೊಲಿದು ॥ (48)

(ಸಂಧಿ 21, ಪದ 919.)

ಇಪ್ಪತ್ತೆರಡನೆಯ ಸಂಧಿ

ಸೂಚನೆ ॥ ಪರಮಮುನಿವಾಲ್ಮೀಕಿಯುಪಚಾರದಿಂ ರಾಮ ।
ಪರಿತುಷ್ಟಿವಡೆದೈದೆ ಚಿತ್ರಕೂಟಾದ್ರಿಯೊಳ್ ।
ವಿರಚಿಸಲೆವನೆಯ ಸೌಮಿತ್ರಿ ಜಾನಕಿ ಸಹಿತಲಾನಂದದಿಂದಿರ್ದನು ॥

ಸಕಲ ದೇವತೆಗಳಿಂದಖಿಲ ವರಗಳಪಡೆದು ।
ಮಕಳಂಕ ಬ್ರಹ್ಮಋಷಿಪದವಾಂತ ವಾಲ್ಮೀಕಿ ।
ಭಕುತಿಯಿಂ ಕರಗಳಂ ಮುಗಿದಂತರಂಗದೊಳ್ ಸರ್ವದೇವಾತ್ಮಹರಿಯ ॥
ಶುಕವಾಮದೇವಸನ್ನುತ ದಿವ್ಯಚರಣನಂ ।
ಭಕುತಿಯಿಂ ನುತಿಗೈದು ಸಂತೋಷಗೊಳಿಸಿದಂ ।
ವಿಕಚಕಮಲಾಕ್ಷಿ ಕೇಳ್ ಚಿತ್ತರಿಸೆ ನಾಮಹಿಮಸಧಿಕಜ್ಞಾನೋತ್ಕೃಷ್ಟತೆಯನು ॥ (1)
ಅರಿಶಂಖಪದ್ಮಕರಹರ ವಿರಿಂಚಾದಿಸುರ ।
ವರವಂದಿತಾಂಘ್ರಿಯುಗ ಕ್ಷೀರೋದಧಿನಿವಾಸ ।
ಪರಮಮಂಗಳ ಸರ್ವಭೂತಾಂತರಾತ್ಮ ನಿಖಿಲಾಗಮ ಪುರಾಣವೇದ್ಯ ॥
ಭರತಶತ್ರುಘ್ನ ಲಕ್ಷ್ಮಣಸೇವ್ಯ ಕೌಸಲ್ಯೆ ।
ಯುರುಗರ್ಭಜಲಧಿಚಂದ್ರಮ ತಾಟಕಾಹರಣ ।
ಶರಣ ವಿಶ್ವಾಮಿತ್ರಯಾಗರಕ್ಷಣ ನಮೋನಮೋಯೆನುತ ನುತಿಗೈದನು ॥ (2)
ಮುನಿಯರಸಿಯಂ ಪೊರೆದ ಶಿವನ ಧನುವಂ ಮುರಿದ ।
ಜನಕಜೆಯ ಕರವಿಡಿದ ಜಾಮದಗ್ನ್ಯನ ಗರ್ವ ॥
ವನು ಪರಿದ ಗುಹನ ಪೋಷಿಸಿದ ಕಲಶೋದ್ಭವನ ಪೊರೆದ ರಕ್ಕಸನ ತರಿದ ॥
ಬನದೊಳಾಶೂರ್ಪನಖಿಯಂಗಭಂಗಂಗೈದ ।
ಕೆನಿಸಿಂದ ಖರದೂಷಣ ತ್ರಿಶಿರರಂ ಕೊಂದ ।
ನಿನಸುತರ ಹನುಮದಾದಿಗಳ ರಕ್ಷಣೆಗೈದ ದೇವಗಾಂ ವಂದಿಸುವೆನು ॥ (3)
ಶರನಿಧಿಯ ಕಟ್ಟಿದಗೆ ಶರಣನಂ ಪೊರೆದಂಗೆ ।
ದುರುಳರಾವಣ ಕುಂಭಕರ್ಣರಂ ತರಿದವಗೆ ।
ಧರಣಿಜೆಸಮೇತ ಪುಷ್ಪಕವೇರಿ ಭರತನಂ ಪೊರೆದು ಸಾಕೇತಪುರದಿ ॥
ನಿರತಿಶಯಸಾಮ್ರಾಜ್ಯ ಭೋಗಯುತ ನೆನಿದಂಗೆ ।
ಹರಿಯಜಭವಾದಿಗಳ್ ಮರೆಯುದರುದಿಸೆ ನೆಸೆವ ।
ಪರಮಪಾವನ ನಾಮ ರಾಮಗಾ ವಂದಿಸುವೆನತಿಶಯಿತ ಭಕ್ತಿಯಿಂದ ॥ (4)

ಇಂತನಂತಾನಂತ ನುತಿಗೈವವಮುನಿವರನ ।
ಸಾಂತರಂಗವನರಿದು ಹರಿ ಯಖಿಲವೇದಗಳಂ ।
ಶಾಂತಳುವವಿತ್ತು ನಲವೆತ್ತು ಸುರರೊಡವೆರದು ನಿಜನಿಲಯಕಂ ಗಮಿಸಲು ।
ಸಂತಸದಲೀಮುನಿ ನಾರದಂ ಪೇಳ್ದನುದಿ ।
ಯಾಂತು ರಾಮಾಯಣವ ರಚಿಸಿ ಕವಿಸಂತತೀ ।
ಕಾಂತನೆನಿಸುತ ಜಪಿಸುತೇಕಾಂತಭಕ್ತಿಯೊಳಗಿರ್ದನಾನಂದದಿಂದ ॥ (5)

ಹರಿಯಖಿಲ ನಾಮರಾಶಿಗಳೊಳಗೆ ಶ್ರೀರಾಮ ।
ಪರಮಮಂಗಳನಾಮಮುಖಮೆನುತ ಶ್ರುತಿತತಿಗ ।
ಳೊರೆವವದರಿಂದಖಿಳಪಾತಕಂಗಳತರಿದು ಮೋಕ್ಷಾದಿಪುರುಷಾರ್ಥವು ।
ಕರತಳಾಮಳಕದಂದದಿ ತೋರ್ಪುದಕ್ಷರವ ।
ನೆರಡನುಂ ಕ್ರಮದಲಕ್ರಮದಲೆಡೆ ಬಿಡದಾವ ।
ಸ್ಮರಿಸುವನು ಧನ್ಯ ಸುರಮೂರ್ಧನ್ಯ ಮುನಿಲೋಕಮಾನ್ಯ ರಾಜನ್ಯನಗಜೆ ॥ (6)

ಭುವಿಯೊಳುಳ್ಳಖಿಳ ಶಬ್ದಗಳೆಲ್ಲ ಕ್ರಮದಿಂದ ।
ವಿವರಿಸಲ್ಫಲವೀವವಲ್ಲದೊಡೆ ವ್ಯರ್ಥವಹ ।
ವವನುಳದು ರಾಮನೆಂಬಕ್ಷರದ್ವಯವನುಂ ಕ್ರಮದಲಕ್ರಮದಿ ಜಪಿಸಿ ॥
ವಿವಿಧ ಪಾಪಗಳ ರಾಸಿಯಕಳೆದು ನಿರ್ಮಮತೆ ।
ಯವಿರಳಾನಂದಮಯವೆನಿಪುದಿದರಿಂದದಕೆ ।
ಸವನಿಲ್ಲಮುಲ್ಲೋಕದಲ್ಲಗಜೆ ಶ್ರೀರಾಮನಾಮ ಸರ್ವೋತ್ಕೃಷ್ಟವು ॥ (7)

ಚಾಂಡಾಲ ಪತಿತಂ ಕಿರಾತಯಾವನ ವಿಪ್ರ ।
ಭಂಡನಂ ಪರಜಾತಿವರ್ಣಾಶ್ರಮವಿಹೀನ ।
ರಂಡಾದಿಮರ್ವಂಗನಾಗಮನಿಯತಿ ಪಾಪಿಯಾದೊಡಂ ಬಿಡದೆ ನೆನೆಯೆ ॥
ಪುಂಡರೀಕಾಯತೇಕ್ಷಣ ನಾಮಮಂ ದುರಿತ ।
ತಂಡಂಗಳಂ ನವರಿ ಸಿದ್ಧರಸಲೋಹಮಂ ।
ಕೊಂಡು ಸೌವರ್ಣಗೈವಂತಾವನಾದೊಡಂ ಪೂತರೆಂದೆನಿಪುದಗಜೆ ॥ (8)

ಜಪತಪೋಯಜ್ಞ ವ ಸ್ನಾನದಾನಂಗಳಂ ।
ವಿಪರೀತ ಫಲಮಲ್ಲದವು ಸಫಲವಾಗಲೀ ।
ಲಪನೆಯಲ್ಲದೆ ಶುದ್ಧವಾಗಲರಿಯದು ಮೋಕ್ಷವೀಯವೀಕರ್ಮಂಗಳು ॥
ಶ್ವಪಚನಾದೊಡು ರಾಮನಾಮವನ್ನೆಡೆಬಿಡದೆ ।
ಜಪಿಸಿದೊಡೆ ಯೋಗಿಜನಗಮ್ಯನೆಲೆ ದೊರೆವುದಿದ ।
ವಿಪರೀತದುಚ್ಚಾರಣೆಗೈದೊಡಂ ಪುರುಷಾರ್ಥ ಸಿದ್ಧಿಸುವುದಿದು ಸತ್ಯವು ॥ (9)

ಕರಣಮೂರೊಂದಗೊಳಸುವ ಕಷ್ಟವಿಲ್ಲ ಬಂ ।
ಧುರದ ತತ್ವಂಗಳಂ ಶೋಧಿಸುವ ಪೊಲಬಿಲ್ಲ ।
ಸ್ವರಲೋಪ ದೇಶಕಾಲಾದಿ ಭೇದಂಗಳುಂ ಕುಂದು ಹೆಚ್ಚುಗಳ ಬಗೆಯು ॥
ಆರಿಯದಾರಾದೊಡಂ ಶ್ರೀರಾಮನಾಮಮಂ ।
ಸ್ಮರಿಸೆ ಜೀವನ್ಮುಕ್ತ ನಪ್ಪನೀ ಮಹಿಮೆಗಳ ।
ಪೊರೆಯಲಾಗಳಿವನಾಯಾಸ ಬಂಧನಾವನುಂ ಮುಕ್ತಿಸೋಪಾನದ ಮಹಿಮೆ ॥ (10)

ಇಂದಿರೇಶನ ನಾಮ ಮಹಿಮೆಗಳ ಮಾಳ್ಪಕೃಪೆಯು।
ದಂದಮಂ ಮುಂದೊರೆವೆನೆನುತ ಹರ ಕೃಪೆಯಿಂದ।
ಇಂದೀವರಾಕ್ಷಿಗಂ ಪೇಳ್ದನವಚಿತ್ತಾಗು ಶ್ರುತವಾವಚರಿತೆಗಳನು ॥
ಬಂಧುರಸ್ನೇಹದಿಂ ವಾಲ್ಮೀಕಿ ರಾಘವನ।
ಪೊಂದಿ ಪೂಜಿಸಿ ಕೃತಾರ್ಥತೆಪಡೆದು ಪರ್ವತದೊ।
ಳೊಂದು ತಾಣವನು ಸೂಚಿಸಿದಂ ನಿವಾಸಕೆಂದಾನಂದವಮಯ ಮೂರ್ತಿಗೆ ॥ (11)

ಮುನಿಪನೆಂ ಬೀಳ್ಕೊಂಡು ಚಿತ್ರಕೂಟಾದ್ರಿಗಂ।
ಜನನಾಥನೈದಿ ಸುಸ್ಥಳವ ನಿಟ್ಟಿಸುತ ಲೆ ।
ಪನೆಗೈವುದೆಂದು ಲಕ್ಷ್ಮಣಗೆ ಸೇಮಿಸಲಾತನತಿಹರ್ಷದಿಂದಲೈದಿ ॥
ಘನತರವ ದ್ರುಮಗಳಂ ತರಿದು ಸುಮನೋಯೋಗ್ಯ।
ಮೆನಿಪ ಋಷಿಮಂದಿರವ ಸಿಂಗರಿಸಿ ಬಿನ್ನವಿಸೆ।
ವನಜಾಕ್ಷ ಪೇಳ್ದನಾಗೃಹವಾಸ್ತುಪುರುಷನಂ ಪೂಜಿಸಲ್ವೇಳ್ಕುಮೆನುತ ॥ (12)

ಧವಪೇಳ್ದ ವಾಳ್ಕೆಯೊಳ್ ಕೃಷ್ಣಮೃಗವಂ ಪಿಡಿದು।
ತವಕದಿಂ ಬಿನ್ನಪಂಗೈಯೆ ಶಾಸ್ತ್ರೋಕ್ತಸಂ।
ಭವವಿಧಿಯನನುಕರಿಸಿ ಸ್ನಾನಸಂಧ್ಯಾದಿಗಳ ರಚಿಸಿ ಶುಚಿಯಿಂದಲೈದಿ ॥
ವಿವಿಧಫಲ ಮೂಲ ಜಲ ಪಕ್ವಮಾಂಸಂಗಳಂ।
ನವಜಲಂಮೇಲಹಸಮಿತ್ಕುಶಗಳಂ ತಂದು ।
ಸವನಿಸಲ್ವಾಸ್ತು ಸಂತರ್ಪಣಂಗೈಯಲೆಂದಿಚ್ಛೈಸಿದಂ ರಾಘವಂ ॥ (13)

ವೇದೋಕ್ತವಿಧಿಯಿಂದ ವೈಶ್ವದೇವದ ಬಲಿಯ।
ನಾದರದಿ ರೌದ್ರವೈಷ್ಣವವಾಸ್ತುಬಲಿಗಳಂ।
ಮೋದದಿಂದಿತ್ತು ತತ್ತಜ್ಜಪಗಳಂ ಮಾಡಿ ಮಂಗಳಾಧಿಕ್ಯಗೂಡಿ ॥
ಸಾಧುಜನಸಂಸೇವ್ಯನೆಂದೆನಿಸಿ ಸತಿಸಹಿತ।
ಲಾದರಯಾಪರ ಪರ್ಣಮಂದಿರದೊಳಿರಲಿತ್ತ।
ಹಾದಿವಿಡಿದೈತಹ ಸುಮಂತ ದುಃಖಸ್ವಾಂತ ನೈದಿದಂ ನಿಜನಗರಿಗೆ ॥ (14)

ಜೀವವಿಲ್ಲದ ಕಾಯದಂತೆ ನಿಶ್ಶಬ್ದದಿಂ।
ದಾವಗುಥೆ ರಾಜಿಸಲ್ಕತುಲ ಸಂಕ್ಲೇಶದಿಂ।
ಸಾವಧಾನಂಗೈಯದತಿವೇಗದಿಂ ಪೊಕ್ಕನಾ ನಗರಿಯಂ ಸೂತನು ॥
ದೇವನಾವೆಡೆಯಲಿಹ ನೆಂದುಕೇಳುವ ಜನರಿ।
ಗೀವಿಧವ ನರುಪುತ್ತ ಬಿನ್ನವಾನನನಾಗು।
ತೀವಜವದಿಂ ಪೊಕ್ಕನರಮನೆಯಬಾಗಿಲಂ ರಥವಿಳಿದು ತಕ್ಕರನೊಲು ॥ (15)

ಧೊರೆಯ ಗಂಗಾತೀರದಲ್ಲಿಳಿಸಿ ತಾಂ ಬಂದ।
ದುರುಳನೆಂದಲ್ಲಲ್ಲಿ ಜನರಾರ್ತಿಯೊಳ್ಬಿರೆವ।
ರರಿಯದಂದದಿ ನೃಪಾಲಯವ ಬೇಗಪೊಕ್ಕು ದಶರಥವಾಯೀಪಾಲನ ॥
ಚರಣಂಗಳಗೆ ನಮಿಸಿ ಕೈಮುಗಿದು ಕೌಸಲ್ಯೆ।
ಗೆರಗಿ ದೂರದಿನಿಂದು ಖಿನ್ನನಾಗಿಹ ಸೂತ।
ನಿಧಪ ಕಾಣುತ್ತಲತಿ ಶೋಕದೊಳ ಕವಿಷ್ಟತಿ ಶೆಲ್ಲ ಶೋಕದೆ ಗೈದಿದು ॥ (16)

ಅತಿಶಯದಿ ರಾಮನಂ ಕರದೊಯ್ದರಣ್ಯಕಂ ।
ಗತ್ತಸೆಸಗಿ ತಾನೋರ್ವನೈತಂದು ಗೃಹದಿ ನಿಜ ।
ಪತಿಗೇನನೊರೆವನೀ ದುರ್ಜೀವಿಯಂ ಕಾಣಲಾದಿತ್ತವಮಾಯ್ತತ್ತಿ ಶೋಕಪ್ರ ॥
ಹಿತ್ರಕಾರಿಯೆಂದೆನಿಸಿ ಬಪ್ಪುದೇಯೆನುತ ಸ್ತ್ರೀ ।
ತತಿಪಲುಬುತಿರೆ ಕೇಳ್ದು ಮೂರ್ಛೆಗತನುಮಾದ ದಶ ।
ರಥಮುಹೀಪಾಲ ನಾಗಾರ್ತರವ ಮೊ.ಗಿದುದು ನಾಲ್ದೆಸೆಯೊಳದುಭುತದೊಳು ॥ (17)
ಧರಣಿಯೊಳ್ಕೆಡೆದರಸನಂ ನೋಡುತಳಲುತಿಹ ।
ಪರಿಯತಾಣಾತ್ತ್ಯಂ ಸುಮಂತ ಪಿಡಿದೆತ್ತಿ ಕು ।
ಳ್ಳಿರಿಸಿದಂ ನಿಡವಚ್ಚ ದುಃಖದಾವ ಗೈವುತ್ತಿರಲಿತ್ತರೊಳ್ಕೌಸಲ್ಯೆಯು ॥
ಕರಗಳೆರಡಂ ಪಿಡಿದು ಕಮಲನೇತ್ರಂಗಳಂ ।
ನೊರಸಿ ಸೆರಗಿಂ ಬೀಸಿಪಾದಗಳ ನೊತ್ತುತಿರ ।
ಲರಿಯದೊಂದನು ವಿಚೇತನದಂತೆ ಬೆರಗಾಗಿ ಕುಳ್ಳಿರ್ದನರನಾಥನು ॥ (18)
ನುಡಿಯುದಿರಲರಸನಾರ್ತತೆಯಿಂದ ಸ್ತ್ರೀಜನ ಗ ।
ಳಡಿಗಡಿಗೆ ರೋದಿಸುವುವಂ ಕಂಡು ಕೌಸಲ್ಯೆ ।
ಪೊಡವಿಪತಿಯಂ ಮೃದೂಕ್ತಿಗಳಂದ ಮದೂಲಿಸಲನುಗೈಯೆ ಕರವಪಿಡಿದು ॥
ನಡುಕವೇಸೈರಾಯ್ತು ಮತ್ತಾರ ಭಯದಿಂದ ।
ನುಡಿಸದಿಹೆ ಸಾರಥಿಯ ದೌರ್ವಾಗ್ನಿಕೈಕೆಯು ।
ತ್ತೃಡಿಯಲಿಲ್ಲವೆನುತ್ತ ಗದ್ಗದಂ ಬೆರಸುತ್ತ ಮರುಗಿದಳೊಳಲಿ ಬಳಲಿ ॥ (19)
ಬಲಿದ ಮೋಹಾಂಧಕಾರಂ ಮೆಲ್ಲ ಮೆಲ್ಲನೆಯು ।
ತೊಲಗಲರೆನಿಮಿಷ ಕೆಚ್ಚರುತೋರಲರಸ ನಿಜ ।
ಲಲನೆಯಂ ನೋಡಿ ಪಿಂದಿರುಗಿ ಸೂತನ ಕರದು ಮೊದಲಿಸಿದಂ ಮೃದುಳದಿ ॥
ಜಲಜಾಕ್ಷರಾಮ ನಾವೆಡೆಯೊಳಹ ಮತ್ತಾವ ।
ಪೊಲಬನಂಟಿಸಿ ಬಂದೆ ಮುಂದಾವವಸ್ಥೆಯುಂ ।
ನಿಲುಕಲಿಚ್ಛೈಸಿರ್ಪ ನಾನುಪೂರ್ವಕದಿಂದ ಒರೆಸುವೃತ್ತವನು ಬಿಡದೆ ॥ (20)
ಮೃದುಳ ಶೈಯೋಚಿತ ಪದಂಗಳಟವಿಯೊಳೆಂತು ।
ಪದವಿವಿಡಿದೈದುವರ ನಾಥರೊಲ್ನಡೆವುತಿರ ।
ಲದುಭುತವ ರಥಗಜಾಶ್ವಗಳಲ ದೋರ್ವನವನೆಂತು ಸಂಚರಿಪ ಬನದಿ ॥
ಮುದದಿಂದ ಚಂದ್ರಶಾಲೋಚಿತನಿವಾಸ ಸಂ ।
ಪದ ದುಷ್ಟಮೃಗಕೀಟ ಕಂಟ ಕಾಡೊಳಗೆಂತು ।
ಪದಚಲನೆಗೈವಪಕುಮಾರ ಸುಕುಮಾರ ಚಿತ್ರಮಾರ ಮುಲ್ಲೋಕಶೂರ ॥ (21)
ಇಲ್ಲಿಂದ ಪೊರಟಾವ ನಗರವಂ ಸಾರಿರ್ದ ।
ರಲ್ಲಿಂದದೆಲ್ಲಿಗೈದಿದರೇನ ನುಡಿದರವ ।
ರೆಲ್ಲಿರ್ದರೇನ ಮಾಡಿದರಾವಪರಿಯೊಳಹ ರಾವಿಧವ ಬಿತ್ತರದಲಿ ॥
ಬಲ್ಲವಿಕೆಯಿಂದರುಪಲೆನಲರಸ ಗಭಸಮಿಸಿ ।
ಪೊಲ್ಲನಾ ವಾರ್ತೆಯಂ ಬಿತ್ತರಿಸಿ ತಾಂ ಒಂದು ।
ಬೆಲ್ಲಮಂ ಸೂಚಿಸಿದನತಿಭಕ್ತಿಯಿಂ ಸೂತನಾಮಹೀಪಾಲನೊಡನೆ । (22)

ಸುತನೀನೈದಿ ನಗರದೊಳೆಲ್ಲರಂ ಪ್ರಿಯ ।
ಪಾತ್ರರಂ ಮಾಳ್ಪರಂ ಕೇಳ ಕ್ಷೇಮಾರೋಗ್ಯ ।
ಮಾತೆಯರಿಗಭಿನಮಿಸಿ ಕರಗಳಂ ಮುಗಿವಳೆಂದುಸುರು ಸುರನಾಥಸಖನ ॥
ತಾತನಡಿದಾವರೆಗೆ ಮಣಿದುವಂದಿಸಿದೆ ಸಹ ।
ಜಾತಹರ್ಷದೊಳೆಂದು ಬಿನ್ನವಿಸಯೋಧ್ಯಾಧಿ ।
ನಾಥ ಭರತಂಗೆಮ್ಮ ಕೌಶಲವ ವಿಸ್ತರಿಸು ಮತ್ತಖಿಲ ಸೇಹಿತರಿಗೆ ॥ (23)

ದೊರೆತನದೊಳರ್ಧಖಿಳವಂ ಪೊರೆದು ಮಾತೆಯರ ।
ಚರಣದೊಲವಂ ಪಿಡಿದು ಪಿತನನುಜ್ಞೆಯ ವೀರ ।
ದಿರುತ ಸತ್ಯಾಭಿ ವರ್ಧನೆಗೈದು ರವಿಕುಲೋತ್ಪನ್ನ ಮಾದರಸುಗಳಗೆ ॥
ವರಶಿಖಾಮಣಿ ಯೆನಿಪುದೆಂದು ಭರತಂಗೊರೆದು ।
ಕರಣಾವಲಂಬಿಗಳ ಕುಶಲಗಳಂ ಕೇಳು ।
ನರನಾಥನೆಡೆಗೆ ನಡೆಯೆನುತ ರಾಮಂ ಪೇಳ್ದನಿನಿತರೊಳ್ ಸೌಮಿತ್ರಿಯು ॥ (24)

ಮೊರೆವುತುರಗನ ತೆರದೊಳಂತೆಂಪ ಲೋಭದಿಂ ।
ದರಿಯದಪರಾಧಮಂ ಕೈಕಾವ ಸಂಪದಕೆ ।
ವೆರಮ ರಘುವೀರನಂ ಬನಕಟ್ಟಿದಂ ನೃಪತಿ ಮುಲ್ಲೋಕಸಮ್ಮತನನು ॥
ದೊರೆಮಾತೆಪಿತ ಬಂಧು ಪ್ರಿಯಸಖಂ ಶ್ರೀರಾಮ ।
ಚರಣಂಗಳೆನಗೆಂದು ಬಂದಿರ್ಪೆ ಸೊಡನೆ ನೃಪ ।
ವರನೆನಗೆ ಪಿತನಲ್ಲವೆನುತ ವಿಜ್ಞಾಪಿಸುವುದೆಂದನತಿ ಕ್ರೋಧದಿಂದ ॥ (25)

ರಾಮಲಕ್ಷ್ಮಣರೀರ್ವರೊರೆದುದಂ ಕೇಳುತ್ತ ।
ಸೋಮನಿಭ ವದನಮಂ ಬಾಗಿ ಕಂಬನಿಯಿಡುತ ।
ಭಾಮಿನೀಮಣಿ ಸೀತೆ ಯೇನೊಂದನುಸುರುವರಶಕ್ಯ ಶೋಕಾತುರದೊಳು ॥
ತಾಮುಸವನಾಂತಿರಲ್ಕಾಸು ಪ್ರಗೈದವರೆ ।
ರಾಮಲಕ್ಷ್ಮಣರಿಂಗೆ ನಮಿಸಿ ನೇಮಕಕೊಳ್ಳು ।
ತಾಮುಹಾದುಃಖಮಂ ಪೊರಸೂಸದೊಲ್ ನಿಲಿಸಿ ರಥವನಡರಿಂದೆ ತವಕದಿ ॥ (26)

ಕೆಲವು ದೂರಂಬಂದು ನಿಷದಾಧಿಪತಿಗೂಡಿ ।
ವಲವು ಪಂಬಲಿಕೆಯಿಂದೊಂದುತಾಣಮನಲ್ಲಿ ।
ನೆಲೆಗೈದು ನಾಲ್ಕಾರು ದಿನಮಿರ್ದ ರಾಘವಂ ಮಗುಳೆನ್ನ ನೆಸವನೆನುತ ॥
ಉಲುಹಿಲ್ಲದಾಮದು ಧ್ಯಾನತಾಮಸದಿನಂ ।
ಕಲಿತವಾದುದು ದಿಶಾಚಕ್ರ ಮದರಿಂದಾನು ।
ನಿಲಲಮ್ಮ ದೈದೀದೇಂ ಸುರತರಂಗಿಣಿ ಯುಳದು ನಗರ ಪಂಥಾನವಿಡಿದು ॥ (27)

ಪರಿಮಳವಿಹೀನ ಕುಸುಮಗಳಾಂತು ಕಂಗೊಳಪ ।
ತರುಗಳಂ ನಿಷ್ಫಲದಿ ರಾಜಿಸುವ ತರುಗಳಂ ।
ಮೊರೆವತುಂಬಿಗಳಲ್ಲ ದರೆಮುಗಿದ ಕಾಣ್ಬುಡುವ ಕಮಲಯುತ ಸರಸಿಗಳನು ॥
ಪರಮದೈನ್ಯಾಲಾಪದಿಂ ಕೊರಗುತಿಹ ಜನರ ।
ಪರಿಗಳಂ ನೋಡುತ್ತನಾಣ್ಚಿ ಮುಖಮಂ ಮುಚ್ಚಿ ।
ಬರುತಿರ್ದನಖಿಳ ದೇಶಗಳ ಕಳಕಳದಾನು ಪಿಂದಿರುಗಿ ನೋಡುತ್ತಲಿ ॥ (28)

ಕಲುಶಿತಬಾಷ್ಪ್ಯಜಲದಿಂ ಪಲ್ಪಲುಗಳ್ಗಂ ।
ಪಲಬಗೆಯ ಕೂಪ ಪ್ರವಾಹಂಗಳೊಪ್ಪಿರಲ್ ।
ಕಲಿತಯುವ್ವನ ದೊಳಖಿಳಾ ಸತ್ವಸಂಸ್ರಪಗಳೊಂದು ಸಂಚರಿಸದಿರಲು ॥
ಉಲಿವ ಕೋಕಿಲ ತಾಮ್ರ ತುಂಡಂಗಳೊಂದಲ್ಲಿ ।
ಚಲಿಸದೆಲೆ ರಾಮ ಶೋಕಾಭಿತಪ್ತತೆ ಯೆನಿಸಿ ।
ಮಲಿನವಾದುದ್ಯಾನವಂ ನೋಡುತಾಂ ಸಾರ್ಚಿತ್ತೈತಂದೆ ನಗರದೆಡೆಗೆ ॥ (29)

ಪೊಂದೇರಕಾಣುತ್ತ ಜನರೆಲ್ಲ ಶ್ರೀರಾಮ ।
ಬಂದನೆಂಬಾಸೆಯಿಂ ನೋಡಲೈತಂದಿಲ್ಲಿ ।
ಇಂದೀವರಾಭನಂ ಕಾಣದೆಲ್ಲರ್ಕೇಳಲೆಳಸಿದ ಕ್ಲೇಶದಿಂದ ॥
ಕುಂದನಾದೊಡೆನೆರುಪಲೆಂದಾನು ವೇಗದಿಂ ।
ದೊಂದನುಡಿಯದೆ ಪೊಕ್ಕು ನಗರದೊಳ್ನಾಲ್ದೆಸೆಗ ।
ಳಂದುನೋಡಲ್ ಶೂನ್ಯಜನ ಮಾಗಿ ಕಂಗೊಳಸಲರಮನೆಗೆ ನಡೆತಂದೆನು ॥ (30)

ಬರುವಲ್ಲಿ ವೀದಿಯೊಳ್ಕಿರುವಾಡ ದೊಳ್ನೋಡು ।
ತಿರುವ ನಾರೀಜನಂ ಬಾಲವೃದ್ಧಾದಿಗಳ್ ।
ಬರಿಯ ರಥವಂ ಕಂಡು ಮುಂಕೊಂಡುಬರೆ ಶೋಕಶರಧಿಯೊಳ್ಬೋರ್ಮೊರೆಯಲು ॥
ಅರಿಗಳಂ ನೋಡುವಂತೈತಾದೆನೆಲ್ಲರಂ ।
ಪರಿಹರಿಸುತಾಂ ಮಿತ್ರ ಬಾಂಧವರ ಮೊದಲಿಸ ।
ದುರುಶೋಕದಿಂದ ಪುಟಭೇದನವ ನಿಟ್ಟಿಸುವರಳವಲ್ಲದಾನು ಜೀಯ ॥ (31)

ಎನುತ ಸೂತಂ ಪೇಳೆ ಸಂತಾಪವೆರ್ಚುತಾ ।
ಜನನಾಥನೆಂದ ಕೇಳ್ಸೂತ ಮುಂದಪ್ಪ ।
ವನುಕಾಣಲಾರ್ಗಳವು ಪ್ರಾರಬ್ಧಫಲದಿಂದ ಸ್ತ್ರೀವಚನ ಮೋಹವುದರೀ ॥
ಮನೆಯೊಳೋರ್ವರು ಕಾಣದಂತವೋತ್ಯಾದಿಪರಿ ।
ಜನರರಿಯದಂತೆನ್ನ ಬುದ್ಧಿಯಿಂದಂ ಮಾಡಿ ।
ದಿನಿಸು ಕೃತ್ಯವನುಣಲ್ಕಸವಳಂ ಪರಿಹರಿಸದಳವಲ್ಲದಂತಾವುದು ॥ (32)

ಕೇಡುಬಂದೊದಗುವವಸರದಿ ಬುದ್ಧಿಗಳೊಂದು ।
ಗೂಡುವಾಗಾರ್ದೊಡಂ ಕುಲನಾಶಕೃತ್ಯಬಂ ।
ತಾಡಿಫಲವೇನಿನ್ನು ಪೂರ್ವಕೃತ ಸುಕೃತಮೊಳ್ಳಿತಾ ದೊಡೀರ್ವರೆನ್ನ ।
ಕೂಡಿಸೊೖದೆನ್ನ ರಘುವರ ನೆನಿತುದೂರವಾಹ ।
ನಾಡೊಳರ್ವಲ್ಲಿಗಲ್ಲ ದೊಡೆಯಸುಗಳಾವ್ರತೇರ್ ।
ಪೊಡೆನುತ ಪಲುಬದಂ ತನಯನ ಗುಣಂಗಳಂ ಜಾನಿಸುತ ಚಿತ್ತದಲ್ಲಿ ॥ (33)

ನೀರಜದಳಾಕ್ಷನಂ ಸಾರಸುಕಟಾಕ್ಷನಂ ।
ನೀರದಸುಗಾತ್ರನಂ ನಿರುಪಮಸ್ತೋತ್ರನಂ ।
ಚಾರುಮಣಿ ಭೂಷನಂ ಕರುಣಾಜನ ಪೋಷನಂ ಕ್ಷತ್ರಿಯೋತ್ತಮವೇಷನಂ ॥
ತೋರದಿರಲಸುವೆನ್ನ ಜಾರದಿರದೈಮುನ್ನ ।
ತೀರಸೊಂದರಿಸೆನ್ನ ಸಾಪೋಹಿಸಲ್ಕನ್ನ ।
ಕ್ರೂರತರ ಶೋಕಪರಿಹರಿಸುಪ್ಪ ದಿದುರನ್ನವೆನುತೆಸಗು ಮಂತ್ರಿರನ್ನ ॥ (34)

ಹಾರಾಮ ! ಪಾಪಿಷ್ಟನೆಂದೆನ್ನನುಳಿದೆಯೊ ।
ಹಾರಾಮ ! ಕ್ಷೇಮಕರ ಸೌಮಿತ್ರಿ ತೊರೆದೆಯಾ ।
ಹಾರಾಮ ! ಭಾಯಣಾಸುಕಾರಿ ಸತ್ಯಾತ್ಮೆ ವೈದೇಹಿ ಯೆನ್ನಂ ನೋಡೆಯಾ ॥
ಘೋರತರಕೈಕಾಗ್ನಿ ವಿಟ್ಟೆನ್ನ ಸುಖದಿಂದ ।
ಚಾರುನದನದಿಗಳಂ ನೋಡುತ್ತ ಬನದೊಳ್ವ ।
ಹಾತಗೈದಪುದುಚಿತವೇಯೆನುತ ನೆನನೆನೆದು ಮರುಗಿದಂ ಪಂಕ್ತಿರಥನು ॥ (35)

ಇಂತರಸ ಶೋಕದಿಂ ಪೊರಳುತಿರೆ ಕೌಸಲ್ಯೆ ।
ಸಂತಾಪದಿಂದ ಸೂತನ ಕರೆದು ಪೇಳ್ದ ।
ಭ್ರಾಂತಿಗೊಂಡಿರೆ ಶೋಕಸಾಗರದಿ ತೊಳಲುತಿರೆ ಪ್ರಾಣಂಗಳುಳಿಯುವೆನೆ ॥
ಚಿಂತಿತಾರ್ಥದ ರಾಮ ಸೌಮಿತ್ರಿ ವೈದೇಹಿ ।
ಯಿಂತಿವರಲ್ಲಿ ಗೊಯ್ದೆನ್ನಿಷ್ಟ ರಕ್ಷಿಪುದು ।
ಪಿಂತು ಮುಂತಾಲೋಚನಂಗೈಯಬೇಡೆನುತ ಬಳಲಿದಳ್ನೆನೆದು ಮರುಗಿ ॥ (36)

ಈ ತೆರದೊಳೆಲ್ಲರಂತಃಪುರಾಂಗನೆಯರುಂ ।
ಅತಿ ಶೋಕ ದುಃಖೋನ್ನತಿಯೊಳಳುವರವ ದಿಕ್ಚಕ್ರ ।
ಜಾತವಾಗಲ್ ಜನಾಕುಳದ ಗದ್ಗದವ ಕಂಡಾ ಸುಮಂತ್ರಂ ಭಯದೊಳು ॥
ಮಾತುಗಳೊಳುಪಚರಿಸಿ ಮಗುಳೆ ವಿನಯವರಚಿಸಿ ।
ಪ್ರೀತಿಕರ ನುಡಿಗಳಂ ಬೀರಿ ಜಾರಿಸಿದನ ।
ಹ್ಯಾತುರದದುಃಖಮಂ ಹರ ತ್ರಿಪುರವಂ ಜಯಿಸಿದಂತೇ ಪೇಳ್ವಮತಿಯು ॥ (37)

ವಿನಯವುಂ ಬೀರಿದನನೇಕ ವಿಧದಿಂ ದುಃಖ ।
ವನು ಕೆಡಿಸಲೆಂದಾ ಸುಮಂತ್ರ ಧೀಮಂತ ನೀ ।
ವಿನಿತು ಶೋಕವ ತಾಳಲೇನು ಕಾರಣ ಮಿಷ್ಟಜನರು ಸಂಕಟಗೊಳುತ್ತಿರೆ ॥
ನೆನೆವಳುವುದುಚಿತವೇ ನಗರಕತಿ ಶಯವಾಗಿ ।
ಬನದೊಳ್ ರಘೂದ್ವಹಂ ಸುಖದೊಳಹ ತತ್ಪಾದ ।
ವನದಗಳ ಸೇವಿಸುತ ಸೌಮಿತ್ರಿ ಯಾನಂದವಾಯ್ತೆನಿಸಿ ರಾಜಿಸುವನು ॥ (38)

ನಗರ ಬಾಹ್ಯೋಪವನದೊಳ್ಕ್ರೀಡೆಗೈವಂತೆ ।
ನಗೆಯು ಬೀರುತ ಜನಕಜಾತೆ ಸುಖದಿಂದಿರ್ಪ ।
ಳೊಗುಮಿಗೆಯು ಸತ್ಯವಂ ಪೊರೆದು ಪರಮಂಗಳಸಲೆಂದು ರಘುನಾಥನಿರ್ಪಂ ॥
ಮುಗುಧತೆಯೊಳುಂ ಬರಿದೆ ತೊಳಲಲೇಂ ಪುರುಷಾರ್ಥ ।
ಮಗಣಿತ ಸುಖಂಗಳೊಪ್ಪುವವಾತನಂ ನೆನೆದ ।
ರಘಹರಮೆನುತ್ತಲರಿದಾತ ಗೆಲ್ಗಿಯದುಃಖವೇಶ ಸಂಬಂಧ ಬಳಿಕ ॥ (39)

ಆ ಮಹಾ ಪುರುಷನಂ ಸ್ಮರಿಸಿ ಕಾಯಕ್ಲೇಶ ।
ಭೀಮಶೋಕಾರ್ತಿಯುಂ ಕಳೆದು ಸೌಖ್ಯಾಸ್ಪದಾ ।
ರಾಮ ನೆನಿಸಿದನಖಿಲ ಮನು ಮುನಿಗಳೆಲ್ಲರುಂ ನೀನಿವಂತಿಳಿದು ಪ್ರಿಯದಿ ॥
ಭೂಮಿಭಾರಾಪನೋದನಗೈಯಲವತರಿಸಿ ।
ತಾಮಸಿಗಳಂ ತರಿದು ನಿಜ ಶರಣರಂ ಪೊರೆದು ।
ರಾಮ ಪುರದಧಿನಾಥರೆಂದರಿತು ಸುಖಮಿರ್ಪುದೆನುತ ಸೂತಂ ಪೇಳ್ದನು ॥ (40)

ಸಂಧಿ 22 ಕ್ಕೆ ಪದ 959.

ಸೂಚನೆ ॥ ಶಬ್ದವೇಧಪ್ರಭಾವದಿ ವೈಶ್ಯಜಾತಂಗೆ ।
ಲಬ್ಧಾಮರಸ್ಥಾನದಿರವ ಚಿತ್ರಿಸುತಂ ।
ಕುದ್ಧಮಾನಸನಾಗಿ ದಶರಥಮಹೀಪಾಲ ಕಳೆದ ನಾ ಯಾಮಿಯನು ॥

ಅಂತಃಪುರಾಂಗನಾಜನರ ಸಾಮದೊಳಂ ಸು ।
ಮಂತನಾಶ್ವಾಸನಂ ಗೈವುತ್ತಿರಲ್ಕಿತ್ತ ।
ಕಾಂತನಂ ನೋಡಿ ಕೌಸಲ್ಯೆ ನಿಜತನಯಂ ನೆನೆದು ನೆನೆದುಮ್ಮಳಿಸುತೆ ॥
ಅಂತರಂಗದ ಕೋಪಮಂ ವಮನಗೈದಂತೆ ।
ಮುಂತಿರುವ ಪಂಕ್ತಿರಥನಂ ನಿಷ್ಠುರಂಗಳಂ ।
ಕಾಂತೆ ಪೇಳ್ದುದನೇನ ಚಿತ್ರಿಸಲಪ್ಪುದಾಂದೆಲೆಗೆ ಶೈಲತನುಜೆ ॥ (1)

ಪರಮಕಾರುಣಿಕ ಶಾಂತಂದಾಂತ ಸಾಧುಜನ ।
ರೆರೆಯನೆನುತಂ ವಂದಿಮಾಗಧರ್ ಪೊಗಳುವಂ ।
ತುರುತರದ ಸತ್ಕೀರ್ತಿಯನ್ನಾಂತ ಧೀಮಂತ ನಿಷ್ಕಾರಣದಿ ಪುತ್ರರ ॥
ಪೊರಡಿಸಿದುದೇಂ ದುಷ್ಟಮೃಗಗಣಾಕೀರ್ಣ ಸಂ ।
ಭರಿತ ಬನದೊಳಗೆಂತು ಜೀವನಂ ಗೈವರೆಂ ।
ತಿರುವರೇನೂಡುವರಿದಂ ನೋಡದಲೆ ಬರಿದೆ ಭವದೀಯ ಕಠಿಣಮನವು ॥ (2)

ಚಿತ್ರಜಾತೋಪಮಿತ ಸುಕುಮಾರ ಶರೀರ ।
ವೃತ್ತದಂಷ್ಟ್ರಂ ಪಲಾಶಾಯ ತೀಕ್ಷ್ಣ ಸಾಧು ।
ಚಿತ್ರಾನುಕಾರಿ ಸಚ್ಛಾಸ್ತ್ರವೇದಿತ ನಖಿಲವಿಮಲಸದ್ಗುಣನಿಲಯನು ॥
ಬಿತ್ತರದ ಗಹನದೊಳಗೆಂತಿರ್ಪ ಶತಕೋಟಿ ।
ಯೊತ್ತಿಸಾರಿಹುದೆನ್ನ ಹೃದಯಮದರಿಂದಲಾ ।
ನುತ್ತರಿಸಹೆನದೇನೆಂಬೆ ಕಲುಷಿತದಿರವ ಪ್ರಬಲಪ್ರಾರಬ್ಧದಿರವ ॥ (3)

ಪದಿನಾಲ್ಕುವರುಷ ಕೈಕಾತನಯನೀರಾಜ್ಯ ।
ಪದವಿಯನ್ನನುಭವಿಸಿ ಬಿಡಲುಳ್ಳದ ಭಾಗ್ಯಸಂ ।
ಪದವ ರಾಘವನುಣಿವನೇನ ಮೃಗಧೂರ್ತಕಗಳುಂಡುಳದ ಫಲಭಾಗಮಂ ॥
ಕದನ ಕರ್ಕಶಮೃಗಾದನ ಕೊಂಬನೆಂತುದುಃ ।
ಖದ ಕೀಕಟಾರಣ್ಯದೊಳ್ಬದುಕಿ ಬಹನೆಂತು ।
ಪದುಮಾಕ್ಷರಾಮಗಿನಿತಡಸಿತು ಮಹತ್ತರದ ಸಂಬಾಧೆಪೂರ್ವಕೃತವು ॥ (4)

ಸಕಲ ವಿದ್ಯಾವಿಚಕ್ಷಣಯುತಂ ರಾಮದು ।
ಯರ್ಕಾತಿಗಳ ರಚಿಸಿದರೊಡಂಬಡುವನೇ ಚಿತ್ರ ।
ವಿಕಲಮಾದೊಡೆ ಮೂರುಲೋಕಮಂ ಸುಟ್ಟಿಡುವನೊಂದೆ ಬಾಣಾಗ್ರದಿಂದೆ ॥
ಅಕಲಂಕ ಸತ್ಯಾನುಸರಣೆಯಾಂ ಪೇಳ್ವ ಶ್ರುತಿ ।
ನಿಕರದನುಸರಣೆಯಂ ನನುಕರಿಸಿ ಬನದಲಿ ।
ಪ್ಪರೆಕರಾಮ ? ಮೃಗಂಗಳೊಡನಿರ್ಪುದಿದು ಭವತ್ಕೃತ ಮದೀಯಾತ್ಮಭವಗೆ ॥ (5)

ಪೂರ್ವಪಂಕ್ತಿಗೆ ಸ್ವಬಂಧುಗಳ ಪ್ರಾರ್ಥನೆಗೈದು ।
ದುರ್ವಿಷಯಕೆಸ್ವಬಂಧುಗಳೆಡೆಯ ಚುಂಬಿಸ ।
ಲ್ಪೂರ್ವರೊಡಬಡರಖಿಲ ಶಾಸ್ತ್ರಾಗಮ ಶ್ರೇಷ್ಠನಿಷ್ಠಾಗರಿಷ್ಠರಂತೆ ॥
ಪರ್ವದ ಪುರೋಡಾಶಹವಿಯೂಪದರ್ಭೆಗಳ್ ।
ಪೂರ್ವಾನುಭೂತ ಮಧ್ವರದಲ್ಲಿಮತ್ತದಂ ।
ಗೀರ್ವಾಣರೊಪ್ಪುವರೆ ಗಡ ಯುವರಾಜ್ಯಮಂ ರಾಘವಂ ಕೈಕೊಳುವನೆ ॥ (6)
ನಾರಿಯುಭರ್ಜಿಸಿದ ಬಳಕುಣಾವರೇ ಪತಿಗ ।
ಳೋರಂತೆ ನೀಚರ್ಕನೀಯ ಸಾಧಮಾನುಸಕಲ ।
ಸಾರಮಂ ಕೊಂಡುಳಿದ ಭೂಮಿಯುಂ ಗತಸಾರಸೀಮೆಯುಂ ಮಗುಳೆ ತರದೆ ॥
ಶೂರಂಕೃತಾಗಮಿಯುದಾರಂ ಜ್ಯೇಷ್ಠಶ್ರೇಷ್ಠ ।
ಧೀರಾಗ್ರಗಣ್ಯ ರಘುವೀರ ನೀಪದವಿಯುಂ ।
ಸಾರುವನೆರೂತ ಸಾರಮೆಂದುತು ಭವದೀಯ ಕೃಪೆಯಿಂದಾತ್ಮಜಗಾದುದು ॥ (7)
ಪತಿಯೊರ್ವ ಮುಖ್ಯಪ್ರಾಣಂ ಮಗುಳೆ ಸುಂದರಿಗೆ ।
ಸುತನೆರಡನೆಯ ನಿಲಯ ಮತ್ತೆ ಮೂರನೆಯನಿಪ ।
ಪಿತನಮಂದಿರ ಲೋಕದೊಳು ಖ್ಯಾತಿ ಮತ್ತೊರ್ವಸತಿಯ ಸಂಪ್ರೇಮದಿಂದ ॥
ಸುತನಡವಿಗಟ್ಟಿ ಬಾಯ್ಬಿಡುತಾಕೆಯೊತ್ತಿರಲಿ ।
ಪತಿಕುಮಾರರ ನೆನಸಿ ನೀವಿರ್ದರಿನ್ನಾರು ।
ಗತಿಯೆನಗೆ ಪೇಳ್ವುದೆಂದತಿ ನಿಷ್ಠುರದಿ ಪತಿಯ ನುಡಿಸಿದಳ್ಕೈಕೆಯ್ಯೆಯು ॥ (8)
ಕಾಸಿದುರುಸಬಳಮಂ ಕರ್ಣದೊಳಗಿಟ್ಟಂತು ।
ದಾಸೀನವಾಕ್ಯಗಳ್ ಶ್ರವಣತಾಡಿತಮಾಗೆ ।
ವಾಸಿಗೆಟ್ಟುರಸ ಸಂತಾಪದಿಂ ತಪಿಸುತ್ತ ತನಯನಂ ನೆನೆದಳಲುತ ॥
ಬೇಸರಂಗೊಳುತ ಮೋಹದಿ ಮುಳುಗಿ ಶೋಕಿಸುತ ।
ನಾಸೀರಮುಳಿದ ಖಿಲದಂತಳ್ಕಿ ಬಳ್ಕುತ ಸು ।
ರೇಶನೇಹಿತ ಕರಗಳಂ ಮುಗಿದು ಕೌಸಲ್ಯೆಯನ್ನು ಪ್ರಾರ್ಥನೆಗೈದನು ॥ (9)
ಸತಿಗೊಲಿದು ಸುತನ ಕಾನನಕೆ ಕಳುಪಿದೆನೆನ್ನು ।
ವತಿಶಯದ ದುಷ್ಕೀರ್ತಿಯಡಸಿ ಹಂಬಲಿಸುತಿರೆ ।
ಪತಿರುಚಿಯನಿಟ್ಟಂತೆ ಪಗಲೆಲ್ಲ ನೋಯಿಪುದ ಸತ್ಯಮೆಂದೆನಿಪುದಬಲೆ ॥
ಹಿತಕಾರಿಯಾಗಲಹಿತಂಗಳಾಚರಿತದಲಿ ।
ಸತತಂ ನೃಶಂಸ ಕೃಪಣಾಧಮಾಧಮನಾಗೆ ।
ಪತಿಯೆ ದೇವತೆಯೆಂದು ಸಾಧ್ವಿಯಭಾವಿಸುಪರದನುಳಿದೆ ಕಾಲಬಲದೆ ॥ (10)
ನಸೊರೆದ ವಾಣಿಯಂ ಕೇಳ ಪಾತಿವ್ರತೆಯ ।
ರನು ನೆನೆದು ಕಂಪಿಸುತ ಕೌಸಲ್ಯೆ ಜನನಾಥ ।
ಗನುನಯದೊಳಡಿಗೆರಗಿ ಬಿನ್ನಪಂಗೈದಳತಿ ನಿಜಭಾವಭಕ್ತಿಯಿಂದೆ ॥
ತನಯನಂ ನೆನೆದು ಶೋಕಾಗ್ನಿ ಸಂಭವಿಸಲ್ಕೆ ।
ಮನವಿಲ್ಲದಪರಾಧಮೆಸಗಿದುದ ಪಾಲಿಪುದು ।
ಮನುವಂಶಕರುಣಾನಿಧಿ ಕಲುಷಜನರಂ ಪೊರೆವುದದು ಭವದ್ಧರ್ಮವಲ್ತೆ ॥ (11)

ಚರಣಸೇವನೆಯ ಬಲದಿಂದಾವುದಾನೊಂದ ।
ನರಿಯದೆಸಗಿದೊಡದಂ ಮನ್ನಿಪುದು ಶೋಕಸಂ ।
ಭರಿತಮಾನಸರಿಂಗೆ ಮತಿಜನಿಸದೆಂದೆನಗೆ ವಿಜ್ಞಾಪಿಸಿದೆ ವಿನಯದಿ ॥
ಧರಣಿಯೊಳ್ಕೆಡೆದೊಂದನಱಿಯದುನ್ಮತ್ತತೆಯೊಂ ।
ದಿರುತಿರಲ್ದಿನ ಪೋಗಿನಿಶಿಯುರಸಲಾಸಮಯ ।
ಕಗಸ ಸಂತಾಪದಿಂ ನಿಟ್ಟುಸಿರ್ಗಳ ಬಿಡುತಪೊರಳುತೆರಳೆಯೊಳಿರ್ದನು ॥ (12)

ಅರೆನಿಮಿಷಕೊಮ್ಮೆ ಸುತರಂ ನೆನೆದು ಹಮ್ಮೈಪ ।
ನೆರೆ ಮುಚ್ಚಿ ಕಂಗಳಂ ಕೃತಮೊನಿಸಿ ಕಳವಳಿಪ ।
ನರೆನಿಮಿಷದೊಳ್ಮೂರ್ಛೆಯಾಂತು ಮಗುಳೆಚ್ಚೆತ್ತು ತಲ್ಲಣಿಪ ನರನಾಥನ ॥
ಒರೆಯಲಳವಲ್ಲ ವ್ಯಾಮೋಹಾಂಧಕಾರಮಂ ।
ಪರಿಪರಿಯಲಳಲಿ ಬಳಲುತಲರ್ಧರಾತ್ರಿಯೊ ।
ಳ್ಸ್ಮರಿಸಿದಂ ಪೂರ್ವಕೃತ ದುಷ್ಕೃತವ ಮತ್ತದಂ ಪೇಳಲನುಗೈದ ಸತಿಗೆ ॥ (13)

ಅಂಗಣದೊಳಿರ್ದ ಮಂದಾರತರುವಂ ತರಿದು ।
ಮುಂಗಡೆಯ ಕಿಂಶುಕದ ಪಿಚುಪಿಯನ್ನಟ್ಟ ಫಲ।
ಸಂಗಡಿಸುವನ್ನೆಗಂ ಪೊತ್ತು ನೀರೆರೆದರ ಪಣ್ಗಳಂ ಕಂಡಳಲುತ್ತೆ ॥
ಭಂಗಪಡುವನ ತೆರದಿ ಹಲಕಾಲವಲಿ ಮನುಜ ।
ಪುಂಗವನ ಪೇರಡವಿಗಟ್ಟ ಮತ್ತದ ನೆನೆದು ।
ಸಂಗಜಂಗೊಳುವ ದುರ್ಮೇಧನೆನ್ನಂ ನೋಡಿ ಬಳಲುವದು ನಿನಗಾದುದು ॥
[(14)

ಅರಿತುಕಾರ್ಯಾಕಾರ್ಯಗಳ ನೆಸಗದಾತನಂ ।
ತರಳ ದುರ್ಮತಿಯೆನುತ ನುಡಿವ ಪರಿಯರಗಾದೆ ।
ಗೆರೆಯನಾಂ ಪೂರ್ವದೊಳಗೆಸಗಿದತಿಪಾತಕದ ಫಲಮನುಭವಕೆ ಬಂದುದು ॥
ಶರಿರಬಲಯುವ್ವನೋದ್ಧತಿಯಿಂದ ರಾತ್ರಿಯೊಳ್ ।
ಶರಹತಿಯೊಳಿರಿದೆ ಮುನಿದಾರಕನನಾ ಕಥೆಯ ।
ನೊರವೆ ಕೇಳಜ್ಞಾನಕೃತದುಷ್ಕೃತಂ ಬಂದ ಪರಿಯ ಸುಖರೂಪದರಿಯ ॥ (15)

ಚಾತಕಂಗಳ ಜೀವನೌಷಧಂ ಬರುಹಿಜೀ ।
ವಾತುವುಂ ವೀರುಧಗಳಿಂಗಮೃತಘುಟಿಕೆಯುಂ ।
ತಾತಪ್ಯಮಾನ ಮಾನಸಕದಂಬಕ ತತಿಗಳುನ್ಮೇಷಕರ ಬೀಜವು ॥
ಜಾತವೈರಾಗ್ಯಕಾದಂಬ ಕುಲಕಂಪಥಿಕ ।
ರಾತುರಶ್ರೀವೃದ್ಧಿಕರಮೆನಲ್ ಮಳೆಗಾಲ ।
ಜಾತುಜತು ತೋರಿದುದನೇನೆಂಬೆ ಜವ್ವನಿಗಮದದಾನೆಯೆಂಬಂದದಿ ॥ (16)

ಆಸಮಯದೊಳಗಾನು ಜವ್ವನಮದಂಗಳವಿ ।
ಲಾಸದಿಂ ಬೇಂಟೆಗೈದಿದೆನೇಕರಥದಿಂದ ।
ಬೇಸರದೆ ಸರದೆ ಸರಿಯೂತ್ತರಟೋದ್ಯಾನ ದೇಶದೊಳ್ಸುತ್ತಳಿದೆಂ ದಿವಸದಲ್ಲಿ ॥
ವೋಸದಿಂದಲೆ ಗಜವು ಶ್ವಾಪದಂಗಳ.........? ।
ಭ್ಯಾಸಕೃತಹವೆನುತಲರಿತಿರುಳು ತತ್ತಟಿನಿ ।
ವಾಸಮಂಗೈದು ಕೋವಿಟ್ಟು ನಿಟ್ಟಿಸುತಿರ್ದೆನಂದಿನಿರುಳೆಚ್ಚರದೊಳು ॥ (17)

ಮೃಡಕಂಠಹಾಲಾಹಲವ ಧಿಕ್ಕರಿಸು ।
ತೊಡನೆ ಕಗ್ಗತ್ತಲೆಯು ಕವಿದು ಬರೆ ನಟ್ಟಿರುಳೊ ।
ಳೊಡನೊಂದು ಶಬ್ದ ಕೇಳ್ಪಟ್ಟುದೇನೆಂಬೆನಾ ಸಮಯದೊಳಗೆನ್ನ ಕಿವಿಗೆ ॥
ಬುಡುಬುಡೆನುತುಲಿ ಪುದಿದು ಗಜಘೋಷವೆಂದರಿತು ।
ತುಡುಕಿದೆಂ ಶಬ್ದವೇಧಿಯು ಶರೋತ್ತಮವ ನೀ ।
ರಡಿಕೆಗೊಂಬುವ ಮದೇಭಧ್ವನಿಯ ಗುರಿಯಿಟ್ಟು ಪೊಡೆದೆನಾ ಕ್ಷಣದಲಾನು ॥ (18)

ಧ್ವನಿವಿಡಿದು ಪೋಗಿ ಶರ ತಾಗಿದುದು ಮರ್ಮಗಳ ।
ಖನನಗೈವುತ ಮಹಾವೇದನೆಗೆ ತರಹರಿಸ ।
ದನಘಮೇಘಶ್ಯಾಮ ರಾಮ ಹಾ ! ಹತನಾದೆ ನೆಂದು ಕೂಗಿಟ್ಟು ಮಗುಳ್ ॥
ವನದೊಳು ಜಲಾಹಾರ ಗೊಂಡಿರ್ದು ಜೀವಿಸುವ ।
ಮನುಜರಂ ಮರ್ದಿಸುವೊಡಾವ ಶಾಸ್ತ್ರವ ಪೇಳ್ದು ।
ದಿವಸನಿಟ್ಟಿಸ ಲಾರದಾವವಿಧಿತಂದಿಟ್ಟುದೀ ದುರಾವಸ್ಥೆಯನ್ನು ॥ (19)

ಚೀರವಸನಂಗಳ್ ಜಟಾಭಾರ ವನ್ಯದಾ ।
ಹಾರ ನಿರ್ಜೀವಿಗಳ್ದಾರಿಗೇನಪಕೃತಿಯು ।
ಕೋರಾಯುದಿಂ ಗೈವರನಘರಂ ಕೋಲಿಂದಲಿಟ್ಟು ಕೆಡಪುವುದಿದೇನು ॥
ಕಾರಣವು ದುಷ್ಕಾರ್ಯದಿಚ್ಛೆಯಿಂ ಬಂದಿರ್ಪ ।
ವೀರನಾವನೊ ಪುರಾಕೃತಮಡಗಿತೊ ವಿತತ ।
ಕ್ರೂರಗುರುತಲ್ಪಘನದಾವನೆಸಗಿದನೆಂದು ಮರುಗಿದಂ ಶರದುರುಬೆಗೆ ॥ (20)

ಜರೆಯಿಂದ ಜೀರ್ಣಮಾದಂಗಗಳ್ ಕುಳ್ಳಿರ್ದ ।
ಧರೆಯಿಂ ಸ್ವತಂತ್ರದಿಂದೇಳಲಮ್ಮದ ವೃದ್ಧ ।
ರರೆಜೀವಿಗಳ್ ನಿಜಾಂಧರ್ ತಂದೆ ತಾಯಿಗಳದೆಂತು ಬದುಕುವರೆನ್ನುವ ॥
ಪರಿಯಚಿಂತಿಸುತಳುವದಲ್ಲದೆನ್ನಯದೇಹ ।
ಪರಿತಾಪಕೋಸುಗಂ ಚಿಂತಿಸನು ದೈವಬಲ ।
ದುರದಸಂಕಟವ ಮುಂದಿರದೆಳೆಸಿತೀಂಗೈವೆ ಶಿವಮಹಾದೇವದೇವ ॥ (21)

ಎಂದು ದೈನ್ಯೋತ್ಕಲಿತದಾಲಾಪಗಳನೆಸಗು ।
ತಂದು ಮುನಿದಾರಕಂ ಕೆಡೆದು ಮರುಗುವ ನಾದ ।
ಬಂದೆನ್ನ ಕಿವಿಗಂಟಲಾಕ್ಷಣಂ ಶರಚಾಪ ಕೈಗಳಂ ಜಗುಳೆನೆಲಕೆ ॥
ಕಂದಿತಾನನಮೆದೆಯೊಳಂ ಪುಟ್ಟಿದನುತಾಪ ।
ದಿಂದಾನು ಮೆಲ್ಲನೈತಂದು ನೋಡಿದೆ ಜಟಾ ।
ವೃಂದವಂ ಪರಪಿ ಕೆಡೆದಿಹ ತಾಪಸೋತ್ತಮನ ಕಲಿತಶಾರೀರಕರನ ॥ (22)

ಉರದೊಳಗೆ ನಟ್ಟ ಶರ ಪೊರಳುತಿರುವುಭಯ ।
ಕರ ಸ್ಫುರಿಸುತಲಿ ತನ್ನವರ ಪಾಂಸುದಿಗ್ಧಶರೀರ ।
ಸುರಿವಶ್ರುಧಾರಾನುಕಾರ ಶೋಣಿತಪೂರವೆರೆದ ಮುನಿದಾರಕನನು ॥
ಕರಕಲಿತಕಲಶವಂ ಕಂಡು ಭಯವಂ ಕೊಂಡು ।
ಬರಲು ನಡುಗುತ ಮೆಲ್ಲನೊತ್ತನೈದಲ್ ಮುನಿಪ ।
ಕರಕಷ್ಟದಿಂದ ಕಂಗಳ ತೆರೆದು ನೋಡಿದಂ ಕಲ್ಕರಂದಹಿಸುವಂತೆ ॥ (23)

ವಸದಿ ಪರ್ಣಾಹಾರಗೈವನಾಥರ ತರಿವು ।
ದೆನುತಾವಪಂಡಿತಂ ಬೋಧಿಸಿಹನಲ್ಲದೊಡೆ ॥
ನಿನಗದೇನಪರಾಧವೆಸಗಿದೆಂ ಕೋಲೊಂದರಿಂದೆನ್ನ ನೆಚ್ಚುಕಡೆವೆ ।
ಜನನಿಜನಕರ್ ಮುಪ್ಪಿನವರಂಧರಿ ನೆನ್ನೊರ್ವ ।
ತನಯರಿಲ್ಲದನಾಥರೆನ್ನ ಬರವಂ ನೋಡು ।
ತನುದಿನ ನೆನೆನೆನೆದು ಕ್ಷುತ್ಪಿಪಾಸೆಯೊಳರ್ಪರವರಿಗೇಂ ಗತಿಯುಮರಸ ॥ (24)

ಭುವನಗಳ ನಿರ್ಮಿಸಲ್ ಮಗುಳ್ ತರಿಯಲ್ ಶಕ್ತ ।
ರವರಿರ್ಪನೆಲೆಯಿಲ್ಲಗೊಂದಱ ಪೋಗಿಮು ।
ತ್ತವರಿಗೀವೃತ್ತಮಂ ತಿಳಪಿ ಸಂತೈಸಲ್ಲದಿರ್ಪರರೆನಿಮಿಷದೊಳಗೆ ॥
ಲವಲಪಿಕೆಯಾಗೆ ಚಾತರದ ಬಂಧನಕೋಪ ।
ಮುಪ್ರಕಿ ಶಪಿಸದೆ ಮಾಣಾರದರಿಂದ ನೀಂ ಪೋಗಿ ।
ಸುವಿವೇಕದಿಂದಲುಪಚರಿಸು ಬೇಗದೊಳೆನ್ನ ಶರಬಾಧೆಯುನ್ನು ಬಿಡಿಸು ॥ (25)

ಅಸುಗಳಂ ಹೀರುತಿದೆ ಯೆನ್ನ ವೈಕಲತೆಯು ।
ನ್ನೆಸಗುತಿದೆ ಪೊಸಮಸೆಯು ಕಣೆ ಯೆನ್ನ ಹೃದಯಮಂ ।
ವಸತಿಗೈದಿದೆ ಬೇಗಲುದ್ಧರಿಸವೇಳ್ಕೆನುತ ಮುನಿಪುತ್ರ ದೈನ್ಯದಿಂದೆ ॥
ಉಸಿರಲಾ ವಾಣಿಯಂ ಕೇಳುತತಿಭೀತಿಯಿಂ ।
ದುಸಿರ ಬಿಡದಮ್ಮುದರೆಗೊರದಂತೆ ಕಾಣುತಿರು ।
ವೆಸಕಮಂ ಕಂಡಾತ ಕೃಪೆಯಿಂದ ಮಗುಳೊರೆದ ಭಯನಿವಾರಣದ ನುಡಿಯ ॥ [(26)

ಶರವ ತೆಗೆಯಲ್ ಪ್ರಾಣಮಿರದೆ ಪೋಪುದೆನುತ್ತ ।
ಲರಿದು ಚಿಂತಿಪೆಯೆರಗಿ ಭೂಸುರಂ ತಾನಲ್ಲ ।
ಪರಿದು ದೋಷಂಬಪ್ಪುದಿಲ್ಲವೆಂದು ದಯಮಂ ತಿಳ ಪೇಳ್ವೆನೊಂದುಸೊಲ್ಲ ॥
ಪರತಪೋರಾಶಿ ವೈಶ್ಯೋತ್ತಮನ ದೆಸೆಯಿಂದ ।
ಧರಿಸಿ ಗರ್ಭವ ಪಡೆದಳೆನ್ನ ಶೂದ್ರಾಂಗನೆಯು ।
ನಿರುತ ತಥ್ಯಮೆನುತ್ತಲರಿದು ಶರಮುಪಹತಿಯ ಪರಿಹರಿಸು ನರವರೇಣ್ಯ ॥ (27)

ಎನುತ ನಿಟ್ಟುಸಿರ್ವಿಡುತಲತಿಕಷ್ಟವಚನಗಳ ।
ಮುನಿತನಯ ಪೇಳಲಾನತಿಭೀತಿಯಿಂದ ಮೆ ।
ಲ್ಲನೆ ಶರವ ತೆಗೆಯಲಸುಚಾರಿತಾಕ್ಷಣಕೆನ್ನ ಮನಸು ಖೇದವನಾಳ್ದುದು ॥
ನೆನೆದಂಗವೈಕಲ್ಯದಿಂದೆಸೆವ ದಾರಕನ ।
ಘನಸತ್ವದಿಂದೆತ್ತಿ ತಡಿಯೊಳಟ್ಟನುತಾಪ ।
ವನುಭವಂಗೈದನರೆನಿಮಿಷ ಮತ್ತೇನೊಂದನರಿಯುಬಾರದ ದುಃಖದೆ ॥ (28)

ಸುದತಿ ಮಾಡಿದ ಪಾಪರಾಸಿ ಬೆಂಬಿಡೆ ದೀಗ ।
ಳೊದಗಿತಿನ್ನೇಂಗೈವೆನೆಂದು ಚಿಂತಿಸಿ ನೌಖ್ಯ ।
ಪದ ಕಾಣದತಿವೇಗ ಪೋಗಿ ವೃದ್ಧರ ತುಷ್ಟಿಗೊಳಸವೇಳ್ಕೆಂದು ತಿಳದು ॥
ಸದಮಲಕವಟುಕ ನರಪಿದ ಮಾರ್ಗಮಂ ಪಿಡಿದು ।
ಪದವಿಡಲ್ ಪಜ್ಜೆಗಳ್ ಸಾಗದಿರಲತಿಕಷ್ಟ ।
ಹೃದಯದಿಂ ಮೆಲ್ಲ ನಾಳೋಚಿಸಿದೆ ಮತ್ತೇನುಪಾಯಮಂ ಗೈವೆನೆನುತ ॥ (29)

ಪಸಿವು ನೀರಡಿಕೆಯಿಂದತಿವೃದ್ಧರೀಮಾರ್ಗ ।
ದೆಸೆಕಮ ನೋಡುತಿಹರಾಂ ಪೋದರವರಿಗೇ ।
ನುಸಿರುವೆನೆನುತ್ತ ಚಿಂತಿಸಲನ್ನೆಗಂ ತೋರ್ದುದೊಂದು ಮತಿ ಯೆನ್ನ ಮನಕೆ ॥
ಪೊಸಕಲಶಮಾಯತಿಯ ಕರದಲಿರಲದಕೊಂಡು ।
ರಸಭರಣೆಗೈದು ಪಿದಿದೈದಿದೆಂ ಮತ್ತಿದಂ ।
ದುಗಿರಲಮ್ಮದೆ ಪಾದದಲುಹ ತೋರಲಲ್ಲಲ್ಲಿ ನಿಲುತ ನಿಲುತ ॥ (30)

ಅತಿವೃದ್ಧರನ ವೃಕ್ಷಬಲ ? ರನಾಥರು ಬಂದು ।
ಜೊತೆಯಲ್ಲಿದೊಂದು ಪಾದಪಮೂಲದೊಳ್ ಕುಳಿತು ।
ವಿತ್ರತ್ರಕ್ಷುತ್ತೃಟ್ಪದದ ಬಾಧೆಯಿಂದಂತೊಳಲಿ ಬಳಲುತೊರಗಿರಲು ಕಂಡು ॥
ಅತಿಭಯಂಗೊಂಡು ಮೆಲ್ಲನೆ ಸೊಪ್ಪಳಾಗದೊಳ್ ।
ಯತಿಪನಿಪ್ಪೆಡೆಗೈದುತಿರಲನ್ನೆಗಂ ಪಾದ ।
ಗತಿಯ ತಿಳಿವಿರ್ಪರುಂ ಸುತನೆನ್ನುವಾಸೆಯಿಂದೆನ್ನ ಮಾತಾಡಿಸಿದರು ॥ (31)

ತಾತ ನೀರಡಿಕೆಗೆಂದುದಕಮಂ ತರೆ ಪೋಗಿ ।
ಯಾತ್ರಕಾಲಸಗೈದೆ ತೃಷೆಯಿಂದಲುಂ ಭವ ।
ನ್ಮಾತೆ ಸುತ ಬರೆ ತಡೆದನೆಂದು ಬಾಯ್ಬಿಡುತಿರ್ಪಳಡಿಗಡಿಗೆ ನೆನೆದು ನೆನೆದು ॥
ಯಾತರಿಂದೊಂದು ದಿನಪಲ್ಲಾದಲುಭಯರುಂ ।
ಮಾತಿನಿಂ ನಿಟ್ಟುರಿಸಲವಮಾನದೊಳಡದೆ ನಿಜ ।
ಪ್ರೀತಿಯಿಂ ಕಾಪಿಡಲ್ವೇಳ್ಕುಮಲ್ಲದೆ ತೊರೆದು ನೀರಾಟದೊಳ್ನಿಲ್ವರೆ ॥ (32)

ಗತಿಹೀನರಂಧಕರನಾಥರೆಮಗಂ ನೀನೆ ।
ಗತಿಯನೀವೃಗ್ಬಲ ಮೆನುತ್ತನೆಚ್ಚಿ ಹದಲ್ಲ ।
ದತಿಶಿರೋಮಣಿಯನ್ಯರಂತೆ ನೀಂ ಕೈವಿಟ್ಟರಾರೆಮ್ಮ ಪೋಷಿಸುವರು ॥
ಮತಿಯುತರೊಳಗ್ಗಳಂ ಮಾತಿಗುತ್ತರವೀಯ ।
ದತಿಮೌನಗೊಂಡಿರ್ದರೆಂತು ಬದುಕುವೆವೆನುತ ।
ಜೊತೆಯಿಂದಲಿರ್ಪರೀಪರಿಯ ಮೂದಲಿಸಲ್ಕೆ ನಡುಕ ಪೆಗ್ಗಳಮಾದುದು ॥ (33)

ಎನಿತುಕೋಪಿಸಲೆಮ್ಮ ಕಿನಿಸಿಂದ ನೋಡೆ ಮ ।
ತ್ತನಿತ್ರಹಿತಗೈದರುಂ ವಿನಯವಂ ತೋರ್ಪಟಿಸು ।
ತಿನಿಸ ಬೈಚಿಡದನಿಸುದಿನ ನಿಜಪ್ರಾಣಕೆಂದತಿಶಯಮೆನುತ್ತ ಪೊರೆದು ॥
ತನಯನಟ್ಟಡವಿಯೊಳು ಬಿಟ್ಟರಾರ್ಗತಿ ಯೆಮಗೆ ।
ಮುನಿಸೇಕೆ ಮಾತಾಡು ಬಾ ಕಂದ ಮುದದಿಂದ ।
ವೆನುತವರ್ ಬೆಸಗೊಂಡರತಿಭಯದೊಳಾಂ ಮೆಲ್ಲನುಸುರಿದೆಂ ಶಾಪ ಭಯದಿ ॥ [(34)

ದಿಟ್ಟತನದಿಂದುಲಿಯೆ ಕೋಪಬಹುದೆಂಬ ಭಯ ।
ಮೆಟ್ಟತ್ತಿಗೆ ಮನವಸಳುಕುತೆ ಬಳ್ಕುತಡಿಗಡಿಗೆ ।
ನಿಟ್ಟುಸುತ ಕೇಳ್ ಮಹಾ ತು(ತ್ಮ)ಮ ನಾನು ಸುತನಲ್ಲ ಕ್ಷತ್ರಿಯಂ ಪಂಕ್ತಿರಥನು ॥
ಪೆಟ್ಟಿರಲು ಕೆಲವುಶ್ವಾಪದಗಳುಂ ನದಿಯೊಳಂ ।
ನಟ್ಟಿರುಳು ಸಂಚರಿಸುತಿರಲೆನ್ನ ಕರ್ಮದಿಂ ।
ಮುಟ್ಟಿದುದಮೋಘಪಾತಕಮೆನ್ನ ದೆಸೆಯಿಂದಲಡೆ ನೊರೆವೆನೆನುತೆಂದನು ॥ (35)

ಕರಿಗಳುಂ ನೀರ್ಗುಡಿಯಲ್ಕೈತರ್ಪವೆಂದು ಬಂ ।
ಧುರದ ಕೋವಿಟ್ಟಾನು ನೋಡುತಿರಲನ್ನೆಗಂ ।
ಭರಣಿಗೈಯುವ ಕಲಶದತಿರವಂ ಕೇಳ್ವಡಲ್ ಕರಿಯೆಂಬ ಭ್ರಾಂತಿಯಿಂದೆ ॥
ವರಶಬ್ದವೇಧಿಕೂರ್ಗಣೆಯು ಬಿಡಲದು ಪೊಕ್ಕು ।
ಡುರದಿ ಮಾನುಷ್ಯರವಮಾದುದಾಕ್ಷಣದಲ್ಲಿ ।
ನಿರದೈದಿ ನಿಟ್ಟುಸಲ್ಕೆದರಿದ ಜಟಾನಿಚಯದಿಂದೊರ್ವನೊರಗಿರ್ದನು ॥ (36)

ನೋಡಿ ವಿಸ್ಮಿತನಾಗಲಾಮುನಿಕುಮಾರ ಮಾ ।
ತಾಡಿಗಿದ ನರನಾಥ ಭಯಗೊಂಬೆಯಾತಕದ ।
ನಾಡಲೇಂ ಪೂರ್ವಕೃತಮಜ್ಞಾನದಿಂದಡಸಿತಾರಿಂದ ತೀರದಲ್ತೆ ॥
ಮೂಡಿರ್ಪ ಶರವ ತೆಗೆಜವದಿಂದ ಪೋಗಿಹಿತ ।
ಗೂಡೆಂದು ವೃದ್ಧರಿಗೆ ತಥ್ಯವಾರ್ತೆಯನರುಪು ।
ಕೂಡಿಪುದು ಜಲಮನೆನೆ ಶರವನುದ್ಧರಿಸಿದೆನು ದಾರಕನ ವಚನದಿಂದ ॥ (37)

ಶರವ ತೆಗೆಯಲ್ಕಾತ ಸುರನಗರಿಗಂಸರಿದ ।
ನರೆನಿಮಿಷಮಾಲಕ್ಷ್ಯಗೈಯದಾಂ ಬಂದು ನಿಜ ।
ಚರಣಕರಿಪಿದೆ ಜೀಯ ಅಪರಾಧಮಂಗೈದೆ ಮಾಜೆನೆಳ್ಳನಿತ್ತನೈದೆ ॥
ಕರುಣದಿಂ ಪಾಲಿಸಲ್ವೇಳ್ಕೆನುತಲಾನೊರೆವ ।
ಖರತರದ ವಾಣಿಯುಂ ಕೇಳುತ್ತ ಹಮ್ಮೈಸು
ತೊರಗಿ ಮಗುಳೆಚ್ಚತ್ತು ಕೋಪದಿಂ ಧಿಕ್ಕರಿಸುತೆನ್ನೊಳಂತೆಂದರೊಲಿದು ॥ (38)

ಕುಲಗೆಡುಕ ಪಾಪಿಷ್ಠ ಕ್ರೂರಕರ್ಮಾಚಾರ ।
ಕಲಿತ ನೀಂ ಪೇಳದೀ ದುರ್ನುಡಿಗದೇನೆಂಬೆ ।
ನೆಲದೀವಾನಪ್ರಸ್ಥ ಮುನಿಯುಕೊಲಲಪ್ಪುದೇ ಬ್ರಹ್ಮೈಕ ನಿಷ್ಠಕನನು ॥
ಫಲುಬಲೇನಜ್ಞಾನಕೃತಮಾಯಿತ್ತದರಿಂದೆ ।
ತಲೆಯುಳಿದುದಿದು ಜ್ಞಾನಕೃತಮಾದೊಡಾಕ್ಷಣದಿ ।
ನೆಲಮಿಲ್ಲದಲೆ ಪೋಪುದಾವರ್ಜಯಾದೊಡಂ ಪೇಳ್ದೀನು ಫಲನಿನ್ನೊಳು ॥ (39)

ಆದುದಂ ಪೇಳ್ದೀನು ವೇಗದಿಂದೆಮ್ಮ ಕೂಂ ।
ಡೊದಯ್ದುಣಾಗನಲ್ಲಿಡುವುದೆನಲೆತ್ತಿ ಕಾವಡಿಯ ।
ನಾದರಿಸುತೈದಿ ಬಿಟ್ಟರ್ದಾತನೊತ್ತಿನಲ್ಲಿಟ್ಟರವರತಿಶೋಕದಿ ॥
ಮೇದಿನಿಯೊಳೊರಗಿರ್ದ ತನಯನಂ ತಡವರಿಸ ।
ಲಾದಿಸಂಭವವಾಗಿ ವೃದ್ಧದಂಪತಿಗಳುಂ ।
ಭೇದವಿಲ್ಲದೆ ಶವದ ಮೇಲೆ ಬಿದ್ದಳಲಿದರದೇನೆಂಬೆ ಖೇದದಿರವ ॥ (40)

ಹಾ ! ಪುತ್ರ ಎಮ್ಮನುಳದೆಲ್ಲಿಗೈದಿದೆ ಬೇಗ ।
ಬಾ ! ಪುತ್ರ ಕಣ್ದೆರೆದು ನೋಡದಿರ್ಪೆಯದ್ಯಾತ ।
ಕೈಪುತ್ರ ಮತ್ತೇನು ತಾಪಸಂಭವಮಾದುದೇಂಕತ್ತದಿ ವಂದಿಸದಿಹೆ ।
ಕೋಪದಿಂ ನೋಡದಿರಲಾರೆಮ್ಮ ಪಾಲಿಸುವ ।
ರೀಪಾಪಿಯಿಂದೆಮ್ಮ ನಗಲುವರೆ ಮಾತೆ ಸಂ ।
ತಾಪ ಗೊಳುತಿಹಳೆದ್ದು ಮಾತಾಡು ಮೊಗನೋಡು ನಿಷ್ಕರುಣಗೈಯದನಘ ॥ (41)

ಅರೆ ನಿಮಿಷವೆಡೆಬಿಡದೆಯಿನಿತು ದಿನ ಪರಿಯಂತ ।
ಸ್ಮರಿಸಿದುದನೊಲಿದಿತ್ತು ಮನದಂತೆ ನಡೆಸುತ್ತಂ ।
ಪೊರೆದು ನುಡಿಯಂ ಮೀರದತಿಭಕ್ತನೆಂದೆನಿಸಿ ಜನಪನುಂ ಗಳಿಸಿ ಬಳಿಕ ॥
ಪೊರೆವುದುಚಿತವೆ ? ಲೂನಪಕ್ಷದ್ವಿಜರಂತಿಲ್ಲಿ ।
ಮರುಗುತಿರುವೆವು ಕಂದ ನುಡಿಯದಿರೆ ಮುಳಿಸಿಂದ ।
ಕರುಣದಿಂದಪ್ಪು ಬಾರೆಂದು ಪಲುಬಿದರಾಗ ದಂಪತಿಗಳೀವೆಳ್ವನು ॥ (42)
ನೆಲವದಿರಿತಾಗ ತಾಪಸಪ್ರಲಾಪಂಗೈಯು ।
ಉಲಿವರಾರಿದಿನಲಿ ಕೋಪ ಬರೆ ಮೇಲ್ಕೈಯ್ಯ ।
ಲಲವ್ರೊ ಶಮನಿಷ್ಠಾಪಕರ ಧರ್ಮರೂಪನಂ ನಿಷ್ಟುಸುವೆನೆಂತೊ ಮರುಳೆ ॥
ಕೊಲೆಗಡುಗ ನೀಪರಿಯ ಖೇದಮಂ ತಂದಿಟ್ಟೆ ।
ಬಲುಹಿನೆಂದೆನುತ ಪಂಬಲಿಸಿ ತರಳನ ನೋಡು ।
ತಲಘುಮತಿ ಕರುಣದಿಂದಿಂತೆಂದನೀವೇಳ್ವೆನಚ್ಚರಿಯ ನಚ್ಚರಿಯನು ॥ (43)
ಮನಮುತ್ಸವದಿ ಪೋಗಿ ಸವು ಸಪ್ತಕಮುಜನ್ಯ ।
ತನುವಿಂದಲೆಚ್ಚೆಡಿ ಬೇಗಮುದ ಪೋಗಾಡು ।
ತಿನಬಿಂಬಮುಚ್ಚಳಿಸಿ ಪೋಗುವರದಾವಗತಿ ಗಾಗತಿಯು ನಿನಗಡಸಲಿ ॥
ಮನವ ಸಂಚಲಗೈಯದನುದಿನಂ ಮಸ್ತಕದ ।
ವನಜಮುಸಿಟ್ಟಪ ಪವಿಮ್ರಜರಿಂಗೇನು ।
ಘನಸುಗತಿಯುಹುದು ಮತ್ತಾಸುಖಸ್ಥಾನಮಂ ನೀನೊಲ್ವುದೆಲೆ ಪುತ್ರಕ ॥ (44)
ಸಗರಶೈಬ್ಯಂದಿಲೀಪಂ ದುಂದುಮಾರನಂ ।
ಯುಗಶೂರಮಾಂಧಾತ ನಳನಹುಷಮುಖ್ಯರಿಂ ।
ಗೊಗುಮಿಗೆಯ ಸದ್ಗತಿಯದಾವದಾವ ಮೊನಿನಗದಬ್ಬುಲೆಡೆವಿಡದೆ ಮಗನೆ ॥
ನಿಗಮ ಪಾರಾಯಣಂಗತಿಶಯದ ಶ್ರೌತಗಳ ।
ಸೊಗಸಿರುವ ಕರ್ಮಠರಿಗಂಭೂಹಿರಣ್ಯಾದಿ ।
ಬಗೆಬಗೆಯದಾನಿಗಳಗಾವಗತಿಯು ಹುದದುವೆ ನಿನಗೆ ವಶವಾಗಲನಘ ॥ (45)
ವರಮಂತ್ರಗಳನೇಮಪಿಂಡಲನುದಿನಬಿಡದೆ ।
ಪರಿಪಾಲನಂಗೈದ ಸತ್ಪುರುಷರಿಂಗಪ್ಪ ।
ಪರಮಸದ್ಗತಿಯುಪ್ಪುದಲ್ಲದೆನ್ನಯ ಕುಲಜರರಿಯರಾರ್ತಿಯ ಪದಗಳ ॥
ತರಳ ನೀನದರಿಂದ ಸುರ್ಗನೆಡೆಗೈದೆನುತ ।
ಪರಿಪರಿಯಪಂಬಲಿಕೆಗಳಲಳಲುತುದಕಮಂ ।
ವಿರಚಿಸಿದರನಿತರೊಳ ಗಾದುದಚ್ಚರಿಯಭ್ರದೊಳಗದೇಂ ವರ್ಣಿಸುವೆನು ॥ (46)
ತಂದೆತಾಯಿಗಳ ಸೇವೆಯ ಸಾಧುಜನರೊಳು ।
ಸಂಗಬಂಧುರದ ತಪದಿಂದಲಾರ್ಜಿಸಿದ ಸುಕೃತದಿಂ ।
ಬಂದೊದಗೆ ದಿವ್ಯರಥಮಾಲ್ಯವಸ್ತ್ರಾಭರಣಗಳನಿಟ್ಟು ಸುರಪನೊಡನೆ ॥
ಪೊಂದೇರೊಳೈತಂದು ಪಿತಮಾತೆಯಂ ನೋಡು ।
ತೆಂದ ಭವತ್ಸೇವೆಯಿಂದೆನಗೆ ಸುರಲೋಕ ।
ಬಂದುದು ಭರಂ ಬೇಗ ಬಹುದೆನುತ ಮುನಿತನಯ ಪೇಳ್ದು ಬಾನೆಡೆಗೈದಿದಂ ॥ (47)

ನೋಡಿ ವಿಸ್ಮಿತನಾಗಿ ಭಯದೊಳಾಂ ನಿಂದಿರ್ದೆ ।
ನಾಡಲಮ್ಮದೆ ಮುನಿಪನನಿತರೊಳ್ಕರೆದು ಮಾ ।
ತಾಡಿಸಿದನರಸ ಮರಣದ ಭೀತಿಯೆಮಗಿಲ್ಲ ಪೊಡವಿಡನುವಮಾನಗೊಳದೆ ॥
ಜೋಡಿಲ್ಲದೆಮ್ಮ ಪುತ್ರನ ಶರದಲೆಚ್ಚು ನೀ ।
ಮಾಡಿದೆ ಯಪತ್ಯಬಾಹಿರನ ಮತ್ತದರಿಂದ ।
ನೀಡುಕೆನು ಸದೃಶಫಲವಿಾವ ಶಾಪವನೆನುತ ಕನಲಿ ಮುನಿಪತಿ ನುಡಿದನು ॥ (48)

ಮಗನ ಕಾಣದಲಾವದೆಂತು ಸಂಕಟಗೊಳುತ ।
ಪೊಗುವೆವಗ್ನಿಯನಂತೆ ನೀಂ ನಿನ್ನ ತನಯರಂ ।
ಮಿಗೆ ನೆನೆವುತಸುಗಳವೆ ಯಿದು ತಪ್ಪಲರಿದೆಂದು ಶಾಪಮನ್ನಿತ್ತು ಭರದಿ ॥
ಅಘಹರಹರಂ ಸತೀವೆರದು ಚಿತೆಯನ್ನಡರಿ ।
ಪೊಗುತ ಪ್ರಾಕೃತದೇಹಮಂ ಕಳೆದು ದೇವತತಿ ।
ಸೊಗಯಿಸುವ ತನುವಿಡಿದು ಸಗ್ಗಕ್ಕೈದಿದ ನಿಮಿಷಮಾತ್ರದೊಳಗೇನೆಂಬೆನು ॥ (49)

ಉದಮದದ ಜವ್ವನದಲುಬ್ಬಿಮಾಡಿದ ಕರ್ಮ ।
ಮಿದು ತಪ್ಪದಡಸಿತಾ ಮೌನಿಯುತ್ತಮಶಾಪ ।
ಸದೆಯದುಳಿವಪ್ಪುದೆ ಕರಗತವಾದ ರತ್ನಮಂ ಬುದ್ಧಿಪೂರ್ವಕದಿ ನೀಗಿ ॥
ಹದಗೆನಿಸಿ ಚಿಂತಿಪ್ಪುದು ಶೋಕಿಪುದು ಬಳಲಿಪುದು ।
ವಿಧಿಕೃತಮಿದೆಲ್ಲಮಿಾರಲ್ ಬಾರದಾದುದಲೆ ।
ಸುದತಿ ಸಂಭವಿಸದೆ ವಿಪತ್ಪ್ರೀಗಕಾರಣಂ ಕಾಣ್ಬುಟ್ಟುದೀಗಲೆಮಗೆ ॥ (50)

ನಿಲ್ಲದೀತನು ಬಳಕ ಶ್ರೀರಾಮಚಂದ್ರಮನ ।
ಫುಲ್ಲಾರವಿಂದಸುಂದರಮುಖವನುಂ ಕಾಂಬು ।
ದಿಲ್ಲಾವು ಭ್ರುಮೆಗೊಂಡ ತೆರದೊಳೆಳ್ಕಳಲುತ್ತ ತೊಳಲುತ್ತಲೆ ॥
ಸೊಲ್ಲ ತೋರುತಲಿರ್ದೆವಿನಿತುಪತ್ತದ ಶಕ್ತಿ ।
ಯಿಲ್ಲದುಸಿರುಸಿರಿಂದ ಬಳಲುತಿದೆ ಬೇಗ ಕೌ ।
ಸಲ್ಯೆ ಬಂದೆನ್ನಂಗಮಂ ಸ್ಪೃಶಿಸು ಕರಗಳಂದಿನಿತಾನಿನಗಂ ದೊರೆಯದು ॥ (51)

ಎಂದೆನುತ ಕೌಸಲ್ಯೆಯೊಡನೊರೆದು ಪಂಕ್ತಿರಥ ।
ಬಂಧುರಸ್ನೇಹದಿಂ ರಾಮನಂಗೋಪಾಂಗ ।
ದಂದಾಯತಂಗಳಂ ಮಂವಿಸುತಲೆಡೆವಿಡದೆ ತತ್ಕೀರ್ತನಂಗೈವುತೆ ॥
ಇಂದಿರಾಪತಿ ರಾಮಪುರವರಸನಂ ತನಯ ।
ನೆಂದು ಚಿಂತಿಸುತೆರಕವೆರೆದಂತೆ ಮಾನಸವ ।
ಪೊಂದಿಸಿದನಾತನೊಳದೇಸು ಧನ್ಯನೋ ಗಿರಿಜೆ ಮತ್ಪ್ರಾರಿಗಳವಡದಿದು ॥ (52)

॥ ಸಂಧಿ 23 ಪದ 1011 ॥

ಸೂಚನೆ ॥ ಸರಸಿಜಾಸನತನಯಶಾಸನವ ಮಸ್ತಕದಿ ।
ಧರಿಸಿ ಮಾತುಳನ ಬೀಳ್ಕೊಂಡು ಜವದಿಂ ಬಂದು ।
ಭರತ ನಿಜಪಟ್ಟಣದಿ ಮಾತೆಯರ ಪದಗಳಂ ಕಂಡು ಪೊಡಮಟ್ಟನೊಲಿದು ॥

ಗಿರಿಜೆ ಕೇಳೀಪರಿಯು ಕೌಸಲ್ಯೆಸೌಮಿತ್ರಿಯರ್ಗೊ ।
ಳ್ಳೊರೆದ ನಿಜವೃತ್ತಮಂ ನೆನೆದು ದುಷ್ಕೃತ್ಯಮಂ ।
ಮರೆದೊರಗಲರ್ಧರಾತ್ರಿಯೊಳು ಪಂಬಲಿಸುತ್ತಲೀಸತಿಯರುಂ ನಿಟ್ಟಿಸೆ ॥
ಅರಿಯದಂತಾನಿಶೆಯು ಜರುಗೆ ಪ್ರತ್ಯೂಷದೊಳು ।
ಸರವೆತ್ತಿ ಮಂಗಲನುಗ್ಗೈದರಲ್ಲಲ್ಲಿ ಬಂ ।
ಧುರವ ತಂತ್ರೀಸ್ವನಂ ಶ್ರುತಿಮಧುರತರಮೆನಲ್ ಕಲ್ಪಿತಾಮಂದಿರದೊಳು ॥ (1)

ಕೆಲರು ಪಾಡುತ್ತ ಕೆಲರಾಮಹಾರಾಜನಂ ।
ನೊಲಿದು ನುತಿಸುತ್ತ ಕೀರ್ತಿಗಾಯಕದಿ ವೀಣೆಗಳ್ ।
ನಲವಿಂದ ಬಾಜಿಸುತಲಲ್ಲಲ್ಲಿ ಪೂರ್ವದಂತೆಚ್ಚರುಂಗೊಳಿಸುತಿರಲು ॥
ಕಲಿತ ಮಾಧುರ್ಯಗುಂಭಿತ ಸ್ವರಗಳಂ ಕೇಳು ।
ತುಳಿ ಮಸಗಿತಮಿತ ಶುಕಪಿಕ ಕೇಕಿಹಂಸೆಗಳ ।
ಕಲಕಲಾರವಮಂಜುತರಮಾಗಲಿಟ್ಟಿಸುವ ಕುತುಕೆ ಭಾಸ್ಕರಂ ಮೂಡಿದಂ ॥ (2)

ಹುಚಂದನೋತ್ಕಲಿತ ಪರಿಮಳತ್ರದುದಕಮಂ ।
ಕರಚೆಲುವನಾರಿಯರ್ ಕಾಂಚನ ಘಟಂಗಳೊಳ್ ।
ಪರಿಪರಿಯಮಂಗಳಾಲಂಬನಯುಘಾಸ್ಯಾಯು ವಿಹಾರಣನುಗೈಯಲಾಗ ॥
ಪರಮಮಂಗಳ ಮಹೋತ್ಸವಮಾದುದೆಂದಿನಂ ।
ತರಮಣಿಯು ನೃಪತಿಗೆಚ್ಚರು ದೋರದಿರಲನ್ನೆ ।
ಗರಸಿ ಕೌಸಲ್ಯೆಯೆಚ್ಚತ್ತು ಮೆಲ್ಲನೆ ಪಜ್ಜೆಯಿಡುತಲ್ಲೈತಂದವಳೊಲಿದು ॥ (3)

ಪತಿಯನೆಚ್ಚರುಗೈಯಲೈದೆ ಕೌಸಲ್ಯೆ ಸಂ ।
ಗತಿಸೆಂದು ಮಾಗಧಿಯು ಮಿಕ್ಕ ಸ್ತ್ರೀಜನಮೆಲ್ಲ ।
ರತಿಶಯ್ಯದಿ ಪರ್ಯಂಕದೆಡೆ ಬಲದೊಳಲ್ಲಲ್ಲಿ ನಿಂದು ಸಪ್ಪಳಮೊಸಗಲು ॥
ಕ್ಷಿತಿಪನೆಚ್ಚರುಗೊಳ್ಳದಿರಲು ಕೌಸಲ್ಯೆ ಬಂ ।
ದತಿಮೃದುಳಕರಗಳಂ ಪಾದಕಮಲಂಗಳಂ ।
ನತಿಸುವಂದದಿ ಪಿಡಿದಲುರಿಕ ಸಂಚನಿಸದಿರಲತಿಶಂಕೆಯಾತಾಳ್ದಳು ॥ (4)

ಪದಗಳಂ ನೇವರಿಸಿ ಹಸ್ತಂಗಳನೊತ್ತಿ ।
ವದನದೆತ್ತಂ ನಾಸಿ ದಿಟ್ಟಿಸಿವರಾಮುಖದ ।
ಲುದಿತ ಪರಿಮಳ ಪೂತಿಗಂಧಾನುಕರಣೆಯಿಂ ತೋರಲತಿಭಯದಿಂದಲಿ ॥
ಸುದತಿ ಕಂಪಿಸಲುಳಿದ ನಾರಿಯರ್ಗೀಪರಿಯು ।
ವಿದಿತವಾದುದನರ್ಥಕರನೊಂದುಬೇಗ ಬಂ
ದೊದಗಿ ನಾಲ್ದೆಸೆಯಲ್ಲಿ ನೋಡಿದರ್ ಕ್ಷಿತಿಯರಸನಂಗ ಶೈಥಿಲ್ಯದಿರವ ॥ (5)

ಕಂದಿದಾನನವ ಜವಗುಂದಿರುವ ದಿಟ್ಟಿಗಳ ।
ನೊಂದಿರುವ ಕಳೆಯು ಶರದಂಬುದವಾಂತಿಕದೇಹ ।
ಮಂದು ಕಂಗೆಸೆಯೆ ಕೌಸಲ್ಯೆ ಹಾಹಾ ! ನಾಥನೆಂದು ಭೂತಳಕೆ ಕೆಡೆಯೆ ॥
ಪಿಂದಿರ್ದ ನಾರಿಯರ್ ಕೋಯೆನ್ನುತಾರ್ತಿಯಿಂ ।
ಬಂಧುರದಶೋಕದಿಂದಳುವವರರವ ಮನೆಯು ।
ಪೊಂಪಿತೆಣ್ದೆಸೆ ಪ್ರತಿಧ್ವನಿಗೊಡುವ್ರೊಲಾದುದರೆನಿಮಿಷದೊಳಗೇವೇಳ್ವೆನು ॥ (6)

ನಾರಿಯರನೇಕವಿಧದಿಂ ಪ್ರಳಾಪಂಗೈಯೆ ।
ಲಾರುಕಂಪಿಸುವರು ಶಕ್ಯವಲ್ಲವಲಿರಲು ।
ಓರಂತೆ ಕೌಸಲ್ಯೆ ಕಂಬನಿಗಳಂ ಒಡುತ ಕೈಕೆಯುಂ ನೋಡಿ ಜರದು ॥
ಕ್ರೂರೆ ಕುಬ್ಜೆಯುವಾತಿನಿಂದ ಪತಿಯುನ್ನೀಗಿ ।
ಕೋರಾಯಸಂಪವವನ ಪಿಥವಿಸಲಿಚ್ಛೈಗೈ ।
ದೀ ರಾಜಕುಲವನೀರೊಳಗೆ ಕೆಡಹಿದೆ ಮಹಾಕಾಳರಾತ್ರಿಯು ತೆರದೊಳು ॥ (7)

ತನಯನಂ ವನಕಟ್ಟಿ ನೆನೆನೆನೆದು ಸಂಕಟದೊ ।
ಳನ ಪ್ರೌಢವಾರ್ತೆಯುಂ ಕೇಳೆ ಕುವರರ್ ಚಿತ್ತ ।
ದನುತಾಪದಿಂದಸುಗಳಂ ಬಿಡುವರದ ಕಂಡು ಬಂಧುಜನರೆಲ್ಲ ನೊಂದು ॥
ಹನನವಪ್ಪುದು ರಾಜಕುಲವೆಲ್ಲ ಸಂಹಾರ ।
ದನುವಾಂತುನೆರೆ ಪಾಪಿ ನಿನ್ನೊರ್ವಳಿಂದಮೀ ।
ವನಜಬಾಂಧವವಂಶ ಪೋದುದಕಟಕಟೆನುತ ಮರುಗಿದಳ್ ಕೌಸಲ್ಯೆಯು ॥ (8)

ಕುಲವ ನುಂಗಿದ ಕಾಳರಕ್ಕಸಿಯು ನೋಡುತ್ತ ।
ಕೆಲದಲಿರಗಲ್ಲನಾವೆಲ್ಲ ಪುಣ್ಯಶ್ಲೋಕ ।
ನಲಘುವಿಕ್ರಮನರಸನಂಗವಂ ತಳ್ಕೈಸಿ ಪೊಗುವನಗ್ನಿಯನೆನುತಲಿ ॥
ಪಲಬಗೆಯ ಮಂಗಳಾಚಾರವನ್ನೆಸಗುತ್ತ ।
ಲಲನಾಸಮೂಹಮಿರ್ಪುದ ವೇಳಲಾರ್ಗಳವು ।
ನೆಲದೊಳುಳ್ಳಖಿಳ ಪ್ರಾಣಿಗಳನುಂ ಸುಖದುಃಖ ಬೆನ್ನಪತ್ತಿರ್ಪುದಲ್ತೆ ॥ (9)

ಬಿತ್ತರವ ದುಃಖಪರ್ಬಿದುದೂರನಾಕ್ಷಣದೊ ।
ಳೆತ್ತೆತ್ತ ನೋಡಲುಂ ತನ್ಮಯಾವಸ್ಥೆಯಿಾ ।
ಗುತ್ತಂ ಬರಲನಿತರೊಳ್ ಜಾಬಾಲಿಕಾಶ್ಯಪಂ ಕಣ್ವಮೌದ್ಗಲ್ಯಮುನಿಗಳ್ ॥
ಉತ್ತಮವಸಿಷ್ಠ್ಯಾದ್ಯರೈತಂದು ಕಂಡಾನೃ ।
ಪೋತ್ತಮನವಸ್ಥೆಯುಂ ತಮ್ಮೊಳಾಳೋಚಿಸಿದ ।
ರೆತ್ತಲುಂ ತಿಳಿಯಬಾರದ ಕಾರ್ಯ ಬಂದುದಿದಕೇನೆನುತ ಮುಂದರಿಯದೆ ॥ (10)

ಅರಸಾದನಿಕ್ಷ್ವಾಕು ಕುಲದ ಮತ್ತೀನೆಲದ ।
ಪರಿಪಾಲನಂಗೈದು ಪೂರ್ವಧರ್ಮಸ್ಥಿತಿಯ ।
ಪರಿವಿಡಿದಖಂಡಜನಮಂ ಗಳಪಮೋಧಾವಿ ಪಂಕ್ತಿರಥ ಪೋದ ಬಳಿಕ ॥
ವರಧನುರ್ಧರರಾಮನುದ್ಧರಿಸೆ ಶಕ್ತನಾ ।
ಪರಿಯುಲಕ್ಷ್ಮಣನೊಡನೆ ಚಿತ್ರಕೂಟದೊಳಿರ್ಪ ।
ಭರತಶತ್ರುಘ್ನರುಂ ಕೇಕಯಾಧಿಪನೆಡೆಯು ದೂರದೇಶದೊಳಿರ್ಪರು ॥ (11)

ಸಿಡಿಲು ವರ್ಷೋಪಲಗಳತಿ ಘೋರತರವೃಷ್ಟಿ ।
ಪೊಡೆದಪುದು ಸ್ವಾಮಿಭೃತ್ಯನ್ಯಾಯ ಗುರುಶಿಷ್ಯ ।
ರಡೆಯುಮರ್ಯಾದೆಗಳ್ ಸುತಜನಕರೆಂದೆಂಬ ಧರ್ಮಮಾರ್ಗಸ್ಥಿತಿಗಳ್ ॥
ನಡೆಯಲಮ್ಮವು ನಿರರ್ಥಕ ಕಲಹ ಸ್ವಾತಂತ್ರ್ಯ ।
ಮಡಿಗಡಿಗೆ ಪೆರ್ಚೆ ಬಹುದೆಲ್ಲರಿಗೆ ಸತಿ ಪತಿಯ ।
ನುಡಿಸದಿರ್ಪರ್ ನಿಜೋತ್ಕರ್ಷೆಯಿಂದೊಡೆಯ ನಿರದಾರಾಜ್ಯಮತಿ ಪೂಜ್ಯವು ॥

ಬಲಿ ದುರ್ಬಲರ ಬಾಧೆಗೊಳಪಸತ್ಯಾಹಿತಂ । [(12)
ಕಲಿತವಾದಪುದು ರಮ್ಯೋದ್ಯಾನ ದೇಶದೊಳ್ ।
ಚೆಲುವ ನರನಾರಿಯರ್ ಚರ್ಚಿಸಲಮ್ಮರು ಬುದ್ಧಿಯುತವಾದ ಸಭೆಯೊಳ್ಳವು ॥
ನಲವಿಂದಯಾಗಶೀಲ ಬ್ರಾಹ್ಮಣೋತ್ತಮರು ।
ಪಲಬಗೆಯ ಯಜ್ಞದೊಳಗಾತ್ತದಕ್ಷಿಣೆಗಳಂ ।
ಸೊಲವಿಂವಲೀಯರತಿಶಕ್ತರೆಂದಿವಿಸಿರ್ಪರೊಡೆಯರಿಲ್ಲದರಾಜ್ಯದಿ ॥ (13)

ನೀತಿಜ್ಞರತಿನಿಪುಣರಖಿಳ ಪೌರಾಣಸಂ ।
ಜಾತಸುರತಾಪ್ರೀತರೆನಿಪ ತತ್ವಜ್ಞರತಿ ।
ಪ್ರೀತಿಯಿಂ ಪೌರಾಣಗಳ ಕೇಳಲನುದಿನಂ ಸರ್ವಭೂಷಣ ಭೂಷಿತ ॥
ಕಾತುರಾಂಗಿಯರಾಟ ಕೆಳಸಿಬರರುದ್ಯಾನ ।
ವಾತಾಯನಂಗಳಗೆ ಕಾಮುಕಪ್ರಿಯದಿಂದ ।
ಖಾತರಾಸಾಯಸಾಹ್ನದು ದ್ಯಾನವಂಬಿಡುವರರಸಿಲ್ಲದಿಹ ರಾಷ್ಟ್ರದಿ ॥ (14)

ಪರರ ದೇಶಂಗಳಂ ನಿಜನಿಜವ್ಯಾಪಾರ ।
ಕಿರದ್ಯೈದೆ ಬಹ ವಣಿಗ್ಜನಮಿದಂ ನಿಚ್ಚಸರು ।
ಪರಿಪರಿಯರತ್ನಧನ ಕನಕಪೌಷ್ಕಲತ್ರೆಯಿಂದಿರ್ಪರುಂ ಭಯಗೊಂಬರು ॥
ತಿರುಗವು ವಿಷಾಣಾಯುತ ಷಾಷ್ಟಿಹಾಯನತುಂಗ ।
ಕರಿಗಳೀವೀಥಿಯೊಳು ನಟಗಾಯಕಾದಿಗಳ್ ।
ಚರಿಸಲಮ್ಮರು ಮನೋತ್ಸವದಿಂದ ಲರೆನಿವಿಷಕರಸಿಲ್ಲದಿಹರಾಷ್ಟ್ರದಿ ॥ (15)

ಜಾತಿವರ್ಣಾಶ್ರಮಾಚಾರ ಧರ್ಮಂಗಳುಂ ।
ಜಾತಮಾಗವು ನಿಖಿಲದೇವತಾರಾಧನೆಯು ।
ಖ್ಯಾತಿಲ್ಲದಂತಿಹುದು ನಿಖಿಲ ಧರ್ಮಗಳಳಿದ ಪರಿಯಲತಿಘೋರತರದಿ ॥
ಭೀತಿ ಸಂಭವಮಕ್ಕುಮಮಿತ ವಿಕ್ರಮಭಟ ।
ವ್ರಾತ ತಮ್ಮೊಳ್ತಾವೆ ಪಗೆಗೊಂಬರರಿಭಯದಿ ।
ನೀತ ಮಪ್ಪಪ್ರಜೆಗಳತಿಖೇದ ಮುದ್ಭವಿಪುವರಸಿಲ್ಲದಿಹರಾಷ್ಟ್ರದಿ ॥ (16)

ಉದಕವಿಲ್ಲದ ನದಿಯು ತೃಣವಿಲ್ಲದಿಹ ಬನಂ ।
ಪದುಳಗೈದಪನಿಲ್ಲದಿಹ ಗೋವ್ರಜಂ ಮನೋ ।
ಭ್ಯುದಯಮಂ ತಿಳಿದು ಪಾಲಿಸುವಪತಿಯಿಲ್ಲದಿಹ ನಾರಿಯರ ಸಂದೋಹಮಂ ॥
ಅದುಭುತಮಿಥಃ ಕಲಹದಿಂದ ಮಾತ್ಸ್ಯಂ ನ್ಯಾಯ ।
ಪೊದಳಿ ಮತ್ತೇನುಳಿಯದಂತಪ್ಪುದದರಿಂದ ।
ಅಧಿಕಪ್ರತಾಪಿಯರಸಾಗಬೇಕ್ಕೈರಾಷ್ಟ್ರ ಸುಖವರ್ಧಿಸಲ್ಕೆಯ್ದೊಡೆ । (17)

ಬಲಪುಷ್ಟಿಯುತದೇಹಕಣ್ದಿಟ್ಟಿಗಳ ತೆರಂ ।
ನೆಲದಾರ್ಣ್ಯಸತ್ಯ ಧರ್ಮಪ್ರವರದಿಂ ರಾಷ್ಟ್ರ ।
ಪೊಲಿದು ಪೆರ್ಚುವಡರಿಗಳಂ ತರಿದುಲೋಕಮಂ ಪರಿಪಾಲನಂಗೈವೊಡೆ ॥
ನಲಿನಾಕ್ಷಭೂತಿಯುನ್ನಾಂತು ಪಿತಮಾತೆಯರ ।
ನಲಪಿಂದಲವರವ ವಿಧವರಿತು ಪೋಷಿಸುವ ।
ಬಲಿಯೊರ್ವನಾಗವೇಳ್ಕುದಗದೊಡೆನಾಯಕಂ ರಾಷ್ಟ್ರವಿರ ಸಲ್ಲಪೊಲ್ಲ ॥ (18)

* ಸರಸಿಜಾಸನ ತನಯನೆಂದವಾಣಿಯು ಕೇಳ ।
ಹರುಷದಿಂದಾವಿಪ್ರರೆಲ್ಲ ಸಂತಸಗೊಂಡು ।
ಭರತನಂ ಬರಿಸೆನುತ ಸನ್ಮತದೊಳೊರೆಯಲ್ ವಸಿಷ್ಠಮಂತ್ರಿಗಳೆಲ್ಲರು ॥
ಕರೆದು ನೇಮಿಸಿದ ದಿನಮೂರರೊಳಗೈದಿ ಬಂ ।
ಧುರದ ಜವದಿಂ ನೃಪಕುಮಾರಕರ ಮಾತ್ಪುರಿಗೆ ।
ಕರತರುವುದೆನಲವಗ ಮಾತಿನಿಂದಂ ಗಮನಕಾಂಡರಂ ಕರದವರೊಲಿದು ॥ (25)

ಬರಲು ಪೋಗುವ ಚರರ ಕಂಡರುಂಧತಿಯರಸ ।
ನೊರೆದನವರೊಡನೆ ಮುಂದಪ್ಪ ಕಜ್ಜಸ್ಥಿತಿಯ ।
ತ್ವರಿತದಿಂ ನೀವೈದಿ ಕಟ್ಟದೀ ವಸ್ತ್ರಗಳನವರಿಗಂದೊಪ್ಪಿಸಿ ॥
ದೊರೆಯು ತತ್ತನಯರಂ ಕುಶಲವಾರ್ತೆಯು ಕೇಳ ।
ದರು ವಸಿಷ್ಠರೆನುತ ಮೊದಲಿಸಿ ಭರತನೊಳ್ ।
ಪೊರೆವುದವಸರದಿಂದ ಬರಹೇಳವಂ ಮೌನಿಯೆನುತ ಸೂಚಿಪುದು ನಯದಿ ॥ (26)

ಅಡು ಜವವದ್ಘೋಟಕಗಳ ವಾರಣಾನಗರ ।
ದೆಡೆಯು ಗಂಗೆಯು ದಾಂಟಿ ಪ್ರಾಜ್ಮುಖದಿ ಪಾಂಚಾಲ ।
ಮೊಡನೆ ಕುರುಜಾಂಗಲವ ನಖಿಲದೇಶಂಗಳಂ ನದನದಿಗಳಂ ನೋಡುತ್ತೆ ॥
ಕಡುಜವದಿ ಶರದಂಡಮಂ ಕಳೆದು ನೈಕೂಲ ।
ಪೋಡವಿಧರವಿಭವಿಟಪಿಯುಂ ಪೊಂದಿ ಗಮನದಿಂ ।
ನಡೆದರು ಕುಳಿಂಗಾದಿ ದೇಶಂಗಳಂ ಕಳೆದಿಕ್ಷುಮತಿಯುತ್ತಟವ ॥ (27)

ನೋಡುತಲಿ ಬಾಹ್ಲೀಕ ವಿಷ್ಣುಪದಶಾಲ್ಮಲಿಯು ।
ನೋಡುತಂಜಲಿ ಪಾನಯುತ ಬ್ರಾಹ್ಮಣೋತ್ತಮರ ।
ನೋಡುತಂ ದಿವ್ಯ ಪದ್ಮಾಕರ ಸರಸ್ಸುಗಳ ವಿವಿಧಪಲ್ವಲನದಿಗಳ ॥
ನೋಡುತಂ ಪಂಚಾಸ್ಯಶಾರ್ದೂಲ ಮೃಗಗಳಂ ।
ಕೂಡೆ ಜವದಿಂ ಬಂದು ಕಂಡರತಿಮೋದದಿಂ ।
ರೂಢಿಗಚ್ಚರಿಗಿರಿವ್ರಜ ಮಹತ್ಪಟ್ಟಣವನಾಚರರ್ ಶ್ರಾಂತರೆನಿಸಿ ॥ (28)

ದೊರೆಯು ಹಿತ ಕುಲರಂಜನಾರ್ಹನಿಜಗೋತ್ರಕಂ ।
ದೊರೆಯುಲತಿಜಸವೊಂದು ಶಾರೀರಕಷ್ಟಮಂ ।
ಮರೆದಿರುಳುಪಗಲೆನ್ನದತಿವೇಗದಿಂ ಬಂದು ಕಂಡು ಪುಟಭೇದನವನು ॥
ತರಣಿಯುದಿಸಲ್ ಪೋಗಿ ಕಂಡಪೆವು ಕಣ್ಗೆಟ್ಟ ।
ತುರಗಂಗಳಗೆ ಜಲಾಹಾರಮಂಗೈದಿಲ್ಲಿ ।
ಇರುಳಿರ್ಪೆವೆಂದು ಚರರಲ್ಲಲ್ಲಿ ತಾಂಗೈದಿಳಯುಲುಂ ಭರತನಿತ್ತ ॥ (29)

* ಇಲ್ಲಿಂದ ಮುಂದೆ 7 ಪದ್ಯಗಳ ಗ್ರಂಥಪಾತವು ಕಂಡು ಬರುತ್ತದೆ,

ಪುತ್ರಯ್ಯಮಾತುಳರ ಲಾಲನಾಹರ್ಷದಿಂ ।
ಮತ್ತೆ ಷಡ್ರಸಮೂಡಿ ಸುಖದಿ ಪವಡಿಸಲಾದು ।
ದತ್ಯಾಹಿತಮುಮೆನಿಪ ಸ್ವಪ್ನಸಂದರ್ಶನಮದೇನೆಂಬೆನದ್ಭುತವನು ॥
ಮತ್ತೆ ಭಯದೊಳ್ ನಿದ್ರೆಯಿಲ್ಲದತಿದುಃಖದಿಂ ।
ಹೃತ್ತಾಪ ಮಿಗೆ ಗೊಳ್ಳದೆಚ್ಚತ್ತು ಮೂಡಿಗಡ ।
ಲೊತ್ತಿಗಂ ದಿನನಾಥ ಬರ್ಪನ್ನ ನಿಜಸಭೆಯಸ್ಸೈದಿವಂ ಸಂತಃಪವೆ ॥ (30)

ಒಂದೆಡೆಯು ಪಾಡುವರ ಒಂದೆಡೆಯು ನೋಡುವರ ।
ದೊಂದೆಡೆಯಲಾಡುವರ ಸುಖಗೋಷ್ಠಿಯಿಂ ಮನಕೆ ।
ತಂದುಕೊಳ್ಳದಾರೊಡನೆ ಮಾತಾಡದತಿಖೇದಮೌನದಿಂ ಭರತನಿರಲು ॥
ಬಂದು ನೇಹಿತರೆಲ್ಲ ಬಗೆಬಗೆಯೊಳುಪಚರಿಸು ।
ತಿಂದಿದೇನೈ ತಾತ ದೀನಮಾನಸನಾಗಿ ।
ಕುಂದಿರ್ಪೆಯೆನಲವರೊಳೊರೆದ ನಿಜಸ್ವಪ್ನದೊಳ್ ಕಂಡವೃತ್ತಾಂತಗಳನು ॥ (31)

ತಲೆಗೆದರು ಶೈಲಾಗ್ರಮಡು ಕರದೊಳ್ ಪಿಡಿದು ।
ತಿಲಪಿಷ್ಟಮಂ ಮೆಲುತ ತೈಲಪಾನದಿ ತಾಪ ।
ನಿಲದೆಂದು ಧುಮ್ಮಿಕ್ಕಿಪಂ ಗೋಮಯಹ್ರದಕ್ಕಂದು ಕಂಡಿದಾನನದಿ ಪಿತನು ॥
ಕಲುಸೆಲಂ ಕಾಣ್ಬುಡುವ್ರೊಲೊಣಗಿದುವಧಿಯು ಕಳೆದು ।
ನೆಲಕೆ ಬೀಳುವ ಶಶಿಯು ಕಳ್ತಲೆಯೊಳಂ ಮುಳುಗೆ ।
ನೆಲಗಾದಿಹ ಘೋರತರವಾವಕನನೊಂದಕಂಡು ಭಯಗೊಂಡೆ ಮನದಿ ॥ (32)

ಒಡೆದಿರುವ ಭೂಮಿಯಿಂ ವಿವಿಧವೃಕ್ಷಂಗಳುಂ ।
ಸಿಡಿದು ಧರೆಗೊರಗುವವ ಪಟ್ಟದಾನೆಯ ದಂತ ।
ಮುರಿದುಪೋಪ್ಪುದ ನೋಡಿ ತಲೆಗೆದರಿ ಕೋಪದಿಂ ಕಾಷ್ಣಾರ್ಯಸದ ಪೀಠದಿ ॥
ಪೊಡಮಿಪತಿಯರೆ ಕೃಷ್ಣರಕ್ತವರ್ಣಗಳಾಂತು ।
ಕಡುಗೋಪಿಗಳ್ ಕರೆಯುತಿರೆ ಖರಾನುಗತೇರ ।
ನಡರಿ ದಕ್ಷಿಣಕೆ ಗಮಿಸುವ ತಾತನಂ ಕಂಡೆ ಭಯಗೊಂಡೆನೆನ್ನ ಮನದಿ ॥ (33)

ಕೆದರಿರುವ ಕೆಂಗಣ್ಣ ಕೆಂಗೋರೆಮೊಸೆಗಳ ।
ಮದರಕ್ತಪಟಗಳಂ ಪೊದೆದು ಖಡ್ಗಮಪಿಡಿದು ।
ಬೆದರಿಸುತ ನಾಲ್ದೆಸೆಯ ಘೋರರಕ್ಕಸನಿವಹ ಮುತ್ತಿರಲ್ ಕಂಡು ಭಯದಿ ॥
ಹದನರಿಯದತಿಚಿಂತೆಯಾಂತಿರ್ಪ ಪಿತನಿಗ ।
ಭ್ಯುದಯಮಂ ತಿಹದೊ ರಾಮನಿಗೆ ಸುಕ್ಷೇಮಪದ ।
ವೊದಗುವುದೊಡಂತೆನುತ ನಡುಗುತಿಹನೆನಲಾಗ ನೇಹಿತರ್ ಕೇಳಿ ಭಯದೆ ॥ (34)

ತಮ್ಮೊಳಾಲೋಚಿಸುತ್ತಿರಲಿತ್ತ ದೂತರತಿ ।
ಗಮ್ಮನೈತಂದು ನಗರವ ಪೊಕ್ಕು ಸಲಿಗೆಯಿಂ ।
ದೊಮ್ಮನದಿ ಬಂದು ಚರಣಂಗಳಂಗಭಿನಮಿಸಿ ಕರಗಳಂ ಮುಗಿದು ನಿಂದು ॥
ನಿಮ್ಮ ಕುಶಲಂಗಳಂ ಬೆಸಗೊಂಡು ಮುನಿರಾಯ ।
ಸುಮಿತ್ರಾನದಿಂದ ಮಾವಂದಿರಪ್ಪಣೆಯಿಂದ ।
ಲೆಮ್ಮ ಪತ್ರಿಕೆ ಜವದಿಂ ಬಪ್ಪೊಲರಿಕೆಗೈವೇಳ್ಕೆಂದು ನೇಮಿಸಿದರು ॥ (35)

ಇವೆ ಭೂಷಣಂಗಳಿಂತಿವು ವಸ್ತ್ರಸಂದೋಹ ।
ವಿವೆ ಸುವರ್ಣಾದಿನಾನಾವಸ್ತುಸಂಚಯಗ ।
ಳವನೊಪ್ಪುಗೊಂಡು ಮಾತುಳರಿಗೊಪ್ಪಿಸಬೇಳ್ಕುಮೆಂದು ಬಿನ್ನವಿಸಲಾಗ ॥
ಅವರ ಮೃದುವಚನಗಳ ಕೇಳುತ್ತ ಭರತ ತ ।
ನ್ನವರ ಕುಶಲಾಮೋದಗಳ ಬೆಸಗೊಂಬೆನೆನು ।
ತವಿರಳದ ಹರ್ಷದಿಂ ದೂತರನ್ನುಪಚರಿಸಿ ಕೇಳದಂ ಪ್ರೀತಿಯಿಂದೆ ॥ (36)

ಕುಶಲವೆ ಮಹಾರಾಜ ಶ್ರೀರಾಮಸಂತೋಷ ।
ವಿಶದವಾಗಿರ್ಪನೇ ಲಕ್ಷ್ಮಣ ಮಹಾವೀರ ।
ನೆಸೆವನೇ ಸುಕ್ಷೇಮದಿಂದ ಸ್ತ್ರೀಕುಲರನ್ನೆ ಕೌಸಲ್ಯೆಯುಂ ಹರ್ಷಳೆ ॥
ಶಶಿಮುಖಿಸುಮಿತ್ರೆ ಸಂತೋಷಿಯೇ ದುಶ್ಶಾಸ್ತ್ರ ।
ವಶತೆಯಿಂ ಪ್ರಾಜ್ಞಮಾನಿನಿ ಕ್ರೂರೆ ಯಾಂದ ।
ವಶವಾಗದಿಹ ಚಂಡಿ ಮನ್ಮಾತೆ ಸುಖಿಯೆ ಮತ್ತೇನನುಂ ಬೇಳ್ದಳೆಮಗೆ ॥ (37)

ಎಂದು ಮೊದಲೆಸೆ ನೃಪನಂದನಗೆ ಹರ್ಷದಿಂ ।
ದೆಂದರಾದೂತರ್ ನಿಮ್ಮಯ ಕೃಪಾರಸದಿಂದ ।
ಬಂಧುಗಳ್ ಸುಕ್ಷೇಮದಿಂದಿಹರು ಕುಂದಿಲ್ಲದಖಿಲ ಸಾಮ್ರಾಜ್ಯಸುಖವು ॥
ಬಂದಿರ್ಪರ ನೋಡುತಿದೆ ಬೇಗದಿಂ ಗಮಿಸವೇ ।
ಳ್ಕೆಂದು ಚರರರಿಪೆ ಜವದಿಂದೆದ್ದು ಭರತ ।
ನೈತಂದು ಮುತ್ತಯ್ಯನಿಗೆ ಮೂಜದೆಳ್ಳನಿತನುಂ ಬಿತ್ತರಿಸಿದಂ ನಯದೊಳು ॥ (38)

ಪಿತನ ಚರಣಂಗಳಂ ನೋಳ್ಪ ಕೌತುಕವೆನ್ನ ।
ಮತಿಯನಂಟಿರ್ಪುದನಿತರೊಳಾ ಮಹಾರಾಜ ।
ನತಿಶಯಪ್ರೇಮದಿಂ ದೂತರಂ ಕಳುಹಿರ್ಪ ದರುದಿಂದ ಬರಿಸಲೆನ್ನಂ ॥
ಪ್ರತಿದಿನಂ ಸ್ಮರಿಸಿದಂತೈತಂದು ಚರಣಾಸಂ ।
ಗತನೆನಿಪೆನೆಂದು ವಿಜ್ಞಾಪಿಸಿದ ಕಾಶಲದ ।
ಗತಿಯ ನಿಷ್ಟಸುತ ಪರಮಾನಂದದಿಂ ಮೊಮ್ಮನಪ್ಪಿದಂ ಪ್ರಿಯದಿಂದಲಿ ॥ (39)

ಭರತನೀಪ್ಸಿಯ ಬಿನ್ನವಿಸೆ ಕೈ(ಮಾ) ? ತಾಮಹಂ ।
ಪರಮಸಂಭ್ರಮದಿಂದ ತಾತನೆಡೆಗೈದಿ ಸಂ ।
ಭರಿತಸಂತಸದೊಳೈತಪ್ಪುದೆಂದೆನುತಲುಂ ಪರಸಿ ಬೀಳ್ಕೊಟ್ಟ ಬಳಿಕ ॥
ದೊರೆಯರಘುವೀರ ಲಕ್ಷ್ಮಣನ ಕೌಸಲ್ಯೆಯುಂ ।
ತರುಣಿಮಣಿ ಸೌಮಿತ್ರೆ ಕೈಕಾಮುಖಾದ್ಯರಂ ।
ಪರಮಹರ್ಷಂಗಳಂ ಕೇಳ್ದರೆಂದವರವರೊಳರಿಪು ಸೌಖ್ಯದೊಳೆಂದವನು ॥ (40)

ಎನುತೊರೆದು ಭದ್ರಗಜದಿವ್ಯಾಶ್ವಮುಷ್ಟ್ರಖರ ।
ಘನರಥೋತ್ತಮ ಚಿತ್ರಕಂಬಳಾ ಜಿನಗಳಂ ।
ಬಿನದಮೆನೆ ಕನಕಧನ ಭೂಷಣಾಂಶುಕಗಳಂ ಮನಮೊಲಿದೊಲಿತ್ತು ಬಳಿಕ ॥
ಮನೆಯೊತ್ತಿಲನುದಿನಂ ಕಾಯ್ದಿರ್ದ್ದ ಸಿಂಹಬಲ ।
ದನುಕರಣೆಯೊಂತ ಸಿತದಾಂಷ್ಟ್ರ ಸಂಕಲಿತವಹ ।
ಶುನಿಗಳಂ ಕೊಟ್ಟುಪಾಯನಿಧಿ ಸಂಭ್ರಮದಿಂದ ಬೀಳ್ಕೊಟ್ಟಹಯಸಾಥನು ॥ (41)

ಪುತ್ರಯ್ಯ ನಪ್ಪಣೆಯನಾಂತು ಶಾದ್ಮಾಂತಕಂ ।
ಮತ್ತರಿಪಿ ಮಾತೆಯಾಂ ಪೆತ್ತಾಕೆಗಭಿನಮಿಸು ।
ತುತ್ತಮಾಶಿಷಮಾಂತು ಬೀಳ್ಕೊಂಡು ಮಾತುಳಯುಧಾಜಿತಂಗಭಿನಮಿಸುತೆ ॥
ಮತ್ತರಮನೆಯೊಳುಳದ ಪ್ರಿಯಬಂಧುಗಳನುಮತ್ತಿ ।
ಸುತ್ತ ವಾಣಿಯನು ಬೆಸಗೊಳುತಲುಂ ಬೇಗದಿ ರ ।
ಪುತ್ತಮಂ ಪೊರಮಟ್ಟು ಪೊಂದೇರನಡರಿದಂ ಶತ್ರುಘ್ನಸಹಿತಪ್ರೀಯಾದಿ ॥ (42)

ಭರತನಿಜರಥವೇರೆ ಪ್ರೈಗಾಹಿಗಂದಿತ್ತ ।
ಕರಿತುರಗಶಾಲಾಳು ಮುಖ್ಯಚತುರಂಗ ಬಂ ।
ಧುರದಲೆಡೆಬಲದಲ್ಲಿ ಕಾಯ್ದು ಬರ್ಪಂದದಿ ಬಲಾಧ್ಯಕ್ಷಮಂತ್ರಿ ಜನರು ॥
ಸರಭಸದೊಳ್ ಊರೆವೃತ್ತೈತರೆ ಪಟ್ಟಣವನುಳಿದು ।
ತ್ವರಿತದಿಂ ಪ್ರಾಙ್ಮುಖಕ್ಕೈದಿ ಸಂತಸದಿಂದ ।
ತರಿಸಿದ ಸುದಾಮಹ್ಲಾದಿನಿದೂರಪಾರಮಂ ಮಗುಳೆ ಪ್ರತ್ಯಕ್ಸ್ರೋತಮಂ ॥ (43)

ಕಳೆದಂ ಶತದ್ರುವೇಳಾದಾನ ಪರ್ಪಟಗ ।
ಳುಳಯಾದಂದದಿ ಶಿಲಾನದಿಮುಖ್ಯಗಳ ದಾಂಟಿ ।
ಗೆಲವಿಂ ಮಹಾಶೈಲ ಚೈತ್ರರಥವಸ್ನುಳಿದು ಗಂಗಾಸರಸ್ವತಿಗಳ ॥
ಪೊಲಬಂಟುತ್ತರದ ವೀರಮತ್ಸ್ಯಾದಿಗಳ ।
ಚೆಲುವಭಾರುಂಡವನ ಮೆನಿಸಿಯೆ ಕುಳಿಂಗಾಖ್ಯ ।
ಕಲಿತಹ್ಲಾದಿನೀ ಶೈಲಯುತಮಾದ ಕಾಳಿಂದಿಯೆಡೆಗೈತಂದನು ॥ (44)

ಬಳಲಿದಶ್ವಂಗಳಂ ಪ್ರೈದೊಳದು ನೀರ್ಗುಡಿಸಿ ।
ಕೊಳದುದಕಮಂ ಸಕಲರಾಸಮಯದೊಳ್ ಮಹಾ ।
ಬಲ ಭರತ ಸ್ನಾನಾಹ್ನಿಕಂಗಳಂ ತಾಂ ಗೈದು ದುಷ್ಪ್ರತರನದಿಯ ದಾಂಟಿ ॥
ಕಳೆವೆತ್ರದೇಶಂಗಳಖಿಳ ನದನದಿಗಳಂ ।
ಕಳೆದು ಶರಣಿಗಜತುರಗಂಗಳಾ ಮಹಾ ।
ಜಲಗಳನ್ನತಿವೇಗವಿಳಸಿ ಗೋಮತಿಯೆಡೆಯ ಸಾಲವನಕ್ಕೈತಂದನು ॥ (45)

ತ್ವರಿತದಿಂ ದೇಳುದಿನವಿಷಾಪರಿಯಲರೆನಿಮಿಷ ।
ಮಿರದಯೋಧ್ಯಾದೇಶಕ್ಕೈತಂದು ಭರತನತ್ತಿ ।
ಕರುಣದಿಂ ನಿಜಬಲವ ನಿಟ್ಟಿಸುತ ಬಳಲಿತೆಂದರಿತು ಮನದಲ್ಲಿ ನಂದಿ ॥
ಪರಿಪರಿಯ ಸಾಂತ್ವಸಂಗೈದು ಸಾರಥಿಯೊಡನೆ ।
ಕರುಣದಿಂದಿಂತೆಂದ ಮತ್ಪುರಿಯ ಕಂಗಳಿಗೆ ।
ಪರಮಸಂಭ್ರಮದಿಂದ ಕಾಣ್ಬುಡುತಲಿದೆ ನೋಡು ಮಾಡು ವಂದನೆಯನೆನುತ ॥

ಬನದಿ ಸಂಕ್ರೀಡಿಸುವ ಜನರಾಜಪಾಟಗಳ । (46)
ಜಿನದಮುಂ ತೋರುತಿಹ ರವಿತವೇದಾಧ್ಯಯನ ।
ಮುನಿಗಳುಂ ಪಿರಿಯರುಂ ಸಂದಣಿಸುತೆಂದಿಗುಂ ತೋರ್ಪರೀನಗರದೆಡೆಯು ॥
ಇನಿಸುಜನಸಂಬಾಧಮೆಲ್ಲಿ ಪೋದುದೊ ನೋಡೆ ।
ಕನಸಾಯಿತಿದು ಚಿತ್ರತರವೆಂದು ಸೂತನಂ ।
ಜನನಾಥತನಯು ಕೇಳುತ ಕಂಧಿಧಾನನದಿ ಕನಲಿದಂ ಬಿಸುಸುಯ್ಯುತ ॥ (47)

ನೀರಾಟಕೆಳಸಿ ಜವ್ವನಿಗರುಂ ಪೊಚ್ಚ ಪೊಸ।
ನಾರಿಯರೊಡವೆರೆದು ನಡೆತಂದು ನಗುವ ಕಾ।
ಸಾರತೀರವನಲಂಕೃತಗೈವರೆಂದಿಗುಂ ತೂರ್ಯಮಂಗಲಕರವವು॥
ಹೇರಾಳದಿಂದ ಪತ್ತನದಿ ಕೇಳ್ವಡುತಿರ್ಪು।
ದೋರಂತೆ ದೂರದೊಳ್ ಬರುವ ಮದಮಾತಂಗ।
ವಾರುವಗಳಾಟ ಕಣ್ಗೆಸೆವುದಿಲ್ಲೆಲೆ ಸೂತ ತೋರುತಿದೆ ಭೀತಿ ಮನಕೆ॥ (48)

ತರುಗಳಾವಾವೆಡೆಯು ಪೂತುಕಾತುಂಪಕ್ಕೆ।
ನೆರವಿಗಳ ಸಂತೃಪವೀಸಮಯದೊಳ್ ನಿರಾ।
ವರಣ ನಿಷ್ಪತ್ರ ನಿಷ್ಕೂಜಿತ ಪತತ್ರಿಗಣವಾಗಿ ತೋರುತಲಿರ್ದುವು॥
ಪರಿಮಳವಬೀರ್ವ ಕಂಬೆಲರಾಟ ಶುಕಪಿಕಂ।
ಬರುಹಿಗಳ್ ಕಾದಂಬಸಂಚಾರ ತೋರದಿಹ।
ಪರಿಯದೇನದ್ಭುತಮೆನುತ್ತ ಚಿಂತಿಸುತಾಗ ಸೂತನಂ ಕೇಳ್ದನೊಲಿದು॥ (49)

ಎನುತ ಚಿಂತಾಕ್ರಾಂತನಾಗಿ ಭರತಂ ತನ್ನ।
ಮನದೊಳಂ ಶಂಕಿಸುತ ಸೂತನಂ ಕೇಳುತ್ತ।
ಕನಲುತಂ ಮೆಲ್ಲನೈತಂದು ನಗರದ್ವಾರಗಳ ಕಳೆದು ಕಳೆದು ಬಳಿಕ॥
ವಿನಮಿತಾನನದಿಂದಲೆರಗುವರ ಮನ್ನಿಸುತ।
ಅನುವಿಂದ ಸಾಲ್ದೆಸೆಯು ನಿಟ್ಟಿಸಲ್ ನಗರ ನಿ।
ರ್ಜನವೆನಿಸಿ ತೋರುತಿರಲತುಳಸಂಕಟಗೊಳುತಲೈತಂದ ನೃಪಗೇಹಕೆ॥ (50)

ಕಮನೀಯವಾಗಿ ಕಂಗೊಳಿಸದಿರಲರಮನೆಯು।
ವಿಮನಸ್ಕನಾಗಿ ಭರತಂ ಪೊಕ್ಕು ನೋಡುತ್ತ।
ಕ್ರಮದಿಂದಲೊಳಪೊಕ್ಕು ಪಿತನಿರ್ದ ತಾಣವಂ ನೋಡಿ ಕಾಣದೆ ಮರುಗುತ॥
ಭ್ರಮೆಗೊಂಡನಂತೆ ನಿಜಮಾತೆಯಂ ನಿಟ್ಟಿಸುತ।
ಮಮತೆಗೈಯಲ್ ತನಯನಂ ಕಂಡು ಹಿಗ್ಗುತ್ತ।
ಅಮರ್ದಪ್ಪಿ ಶಿರವನಾಘ್ರಾಣಿಸಿದಳತ್ಯಂತಪುತ್ರವಾತ್ಸಲ್ಯದಿಂದೆ॥ (51)

ಪಿಡಿದೆತ್ತಿ ತನಯನಂ ಪ್ರೇಮದಿಂದಂ ತನ್ನ।
ತೊಡೆಯಲ್ಲಿ ಕುಳ್ಳಿರಿಸಿ ಕ್ಷೇಮವಾರ್ತೆಯ ಕೇಳ।
ನಡೆಯಿಂದ ಧಾವಂತವಾಯಿತು ಪೊರಟೀಸುದಿನವಲ್ಲಿರ್ಪ ಬಂಧುಜನವು॥
ಪೊಡವೀಶಮುಖ್ಯರತಿ ಕುಶಲರೇ ಪೇಳೆನ್ನ।
ತಡಿಗಡಿಗೆ ಬೆಸಗೊಂಬ ಮಾತೆಯನ್ನೋಡಿ ತ।
ನ್ನೊಡೆಯ ಶ್ರೀರಾಮ ಪುರದರಸನಂ ಧ್ಯಾನಿಸುತ ಮಾತಿಗುತ್ತರವಿತ್ತನು॥ (52)

(ಸಂಧಿ 24 ಪದ 1063)

ಇಪ್ಪತ್ತೈದನೆಯ ಸಂಧಿ.

ಸೂಚನೆ ॥ ಮಾತೆಯಂ ಧಿಕ್ಕರಿಸಿ ಮಗುಳ್ ಬಳಲುವ ಭರತ ।
ಭ್ರಾತೃಪ್ರೀತಿಯ ಕಂಡು ಬಂದಾವಸಿಷ್ಠನೈದು ।
ಖ್ಯಾತಿಕರವಾಣಿಯಿಂ ಸಂತೈಸಿ ರಾಮನಂ ಕಾಣ್ಬುದುಜ್ಜುಗಗೈದನು ॥

ನಗೆನುಡಿಗಳಂ ಮಾತೆ ಕುಶಲಪ್ರಶ್ನೆಗಳೆಸಗ ।
ಲಗಣಿತ ಮನೋಹರ್ಷಮಂ ಕಂಡು ಭರತ ನಿಜ ।
ಬಗೆಯೆಲ್ಲಮಂ ಸವಿಸ್ತರವಾಗಿ ಕೇಳುತಂ ಮತ್ತೆ ಬೆಸಗೊಂಡನೊಲಿದು ॥
ಜಗದರಸನಾವಾಗ ಭವದೀಯ ಮಂದಿರವ ।
ನಗಲದನುದಿನಮಿರ್ಪನಿಂದಿದೇನಚ್ಚರಿಯು ।
ಮಗುಳಾರ ಗೃಹದೊಳಿಹನೊರೆಯಲಭಿವಂದಿಪೆನಂಘ್ರಿಯಂ ಬಹೆನತಿಮೋದದಿ ॥ (1)

ಎನುತಮೀ ಪರಿಯ ಬೆಸಗೊಂಡ ಕುವರನ ನೋಡು ।
ತನುವಿಂದ ನೇಹಪಾತ್ರೆಯನೊರೆದು ಸಂತೈಸ ।
ಲನುಗೈದಳೀನೆಂಬೆ ನಪ್ರಿಯಮಹಿತಮೆನುತ ಭಾವಿಸಿದ ದುರುಳಪರಿಯ ॥
ಇನವಂಶಭೂಷಣ ಮಹಾರಾಜ ಯಜನಾಂತ ।
ಮೆನಿಪಕ್ರತ್ವಧಿನಾಥ ಯಾಯಜೂಕ ಮಹಾತ್ಮ ।
ಜನಕನೈದಿದ ರಾಜ್ಯಲೋಭದಿಂದಮರೇಶನರ್ಧಾಸನವ ಬಯಸಿ ॥ (2)

ಎಂದ ಪ್ರೀತಿಯ ನುಡಿಯ ನಾಲಿಸುತ ಭರತ ಹಾ ।
ಯೆಂದು ವಿಸ್ಮಿತನಾಗಿ ನಡುಗಿ ಭುವಿಯೊಳ್ ಕೆಡೆದು ।
ಕಂದಿದಾನನದಿಂದೆ ಬಹುಪ್ರಲಾಪಂಗೈದ ಕಲ್ಮರಂ ಕರಗುವಂತೆ ॥
ಚಂದಿರನ ಬಿಟ್ಟ ಬಾನೆಡೆ ಬಹೂವಕರಭಸ ।
ದಿಂದ ಕಂಗೊಳಿಸದಿಹ ಶರಧಿ ನೃಪನುಳಿದಿರ್ಪ ।
ಮಂದಿರಂ ಗೋರವಮಂದಿರವಾಗಿ ತೋರ್ಪುದೆನುತ್ತ ಪಲುಬಿದನು ಮರುಗಿ ॥ (3)

ಸುರಿ ದಶ್ರುಧಾರೆಯಿಂ ಧರಣಿ ಪಂಕಿಲಮಾಗ ।
ಲುರುತರದ ದುಃಖದಿಂದೊರಲಿ ಪೊರಳುತ್ತಲಿಹ ।
ಭರತನಂದದಿ ಸುಮಿತ್ರಾನಂದನಂ ಘೋರತರದುಃಖಮಾಂತಿರಲ್ಕೆ ॥
ಅರಿಯದವರೀಪರಿಯೊಳಳಲುವಂದದಿ ದೀನ ।
ತರವಾಗಿ ಶೋಕಿಸಲದೇಂ ಫಲಂ ಪುತ್ರಮಂ ।
ದರಿದು ಕುಳ್ಳಿರ್ದೆನ್ನನಿಟ್ಟಪುದೆನಲ್ ಮಾತೆಯೊಡನಾತನಿಂತೆಂದನು ॥ (4)

ಯುವರಾಜಪಟ್ಟಮಂ ರಾಮಚಂದ್ರಂಗಿತ್ತು ।
ವಿವಿಧಭೋಗಂಗಳಂದರಸನಿಹನೆಂದರಿತು ।
ಭುವಿಯೊರೆಯ ನಪ್ಪಣೆಯೊಳಾನು ಮಾತುಳನಗರಕೈದಿದೆಂ ಮೋದದಿಂದ ॥
ಅವಿರಳದ ಗಮನದಿಂ ಚಾರರೆನ್ನಂ ಕರೆದ ।
ವಿವಿಧೋಪಚಾರನುಡಿಯಿಂದೆನ್ನ ಮಾನಸಂ ।
ನವಮಕ್ಲೇಶಮನಾಂತು ದಿಗಿಲಾಂತು ಚಿಂತಿಸುತಲೈತಂದೆ ತವಕದಿಂದ ॥ (5)

ಪಿತನಡಿಗಳಂ ಕಾಣದತುಳಕ್ಲೇಶವನ್ನಾಂತೆ ।
ಗತಿಯದಾರೆನಗೆಂದು ಪೇಳ್ವೈದಿದಂತಾತ ।
ಕ್ಷಿತಿಯರಸಮಕುಟ ಮಣಿಗಣರಾಜಿತಾಂಘ್ರಿಯುಗದೇವ ಸಚ್ಛ್ನತಸಂಯುಗ ॥
ಪಿತಮಾತೆಯೊಡೆಯ ಬಾಂಧವಮರ್ತ್ಯಲೋಕ ದು ।
ರ್ಗತಿಯನಪಹರಿಪನಣ್ಣಂ ರಾಮ ಗುಣಧಾಮ ।
ಗತಿಯದೆನಗೆಲ್ಲಿರ್ಪನಾತನಂ ತೋರಿದೊಡೆ ಬೀಳ್ವೆ ಚರಣಂಗಳೆಡೆಯ ॥ (6)

ಮೃದುದಾಂತ ಶಾಂತಸತ್ಯವ್ರತದಯಾಶೀಲ ।
ಹೃದಯನೆನ್ನಂ ಪಿಡಿದು ದುಃಖವಂ ಪರಿಹರಿಸಿ ।
ಮೊದಲಂತೆ ಹರುಷಗೊಳಿಸುವನಣ್ಣನಾತನಂ ತೋರದಿಹುದೇಂ ಕಾರಣಂ ।
ಸದಯಪಿತ ಪಶ್ಚಿಮಾವಸ್ಥೆಯನ್ನಾಳ್ವಡೆಯ ।
ಲೆದೆಯೊಳಿರ್ದುದವದೇನ ಪೇಳ್ದುದೆನುತಳುತಿರಲ್ ।
ಸುದತಿ ಕೈಗಾವಿತಂಬಿಸಿ ಕುವರನೊಡಬಡಿಸಲಿಂತೆಂದಳನುವಿನಯದಿ ॥ (7)

ರೋಗರುಜೆಯಡಸಿ ನಿನ್ನಯ ತಂದೆ ದೇಹವಂ ।
ನೀಗಲಿಲ್ಲ ರಾಮಲಕ್ಷ್ಮಣಧರಾಜಾತೆ ರಾಘವ ।
ರಘೂತ್ತಮ ಎನುತ್ತ ಹಂಬಲಿಸುತಂ ಹಮ್ಮೈಸಿ ಗಳಿವನಸುವ ॥
ಮೇಗೊಂಡಕೊರೆದ ನರನಾಥ ಶ್ರೀರಾಘವನ ।
ಶ್ರೀ ಗೌರಮುಖದಲಕ್ಷ್ಮಣಾವ ಸಲ್ಲಕ್ಷಣನ ।
ಪೂಗಕಂಠಿಯ ಸೀತೆಯುಂ ಕಾಣ್ಬರುಳ್ಳದರ್ ಧನ್ಯರಗ್ಗಳರೆನ್ನುತ ॥ (8)

ಮೊದಲೊರೆವ ಮಾತಿಗಿಂವತಿಶಯದಿ ರಾಘವನ ।
ಹೃದಯವಂ ಭೇದಿಸಲ್ ಭಯಗೊಂಡು ತಾಯ ಸಿರಿ ।
ವದನವಂ ನಿಟ್ಟಿಸುತಲತಿದೈನ್ಯದಿಂ ಭರತ ಬೆಸಗೊಂಡ ವೇಗದಿಂದ ॥
ಪದುಮಾಕ್ಷ ರಾಮನೆಲ್ಲಿರ್ಪ ಲಕ್ಷ್ಮಣನೆಲ್ಲಿ ।
ಸುದತಿಜಾನಕಿ ಯಾವ ತಾಣದೊಳಗಿರ್ಪಳದ ।
ಮುದದಿಂದ ಪೇಳ್ದುಳದ ಪೇಳ್ಕೆನಲಾವಮಾತಿಗುತ್ತರವನಿತ್ತಳೊಲಿದು ॥ (9)

ಕೆಲಕಾಲ ವಿಪಿನದೊಳಗಿರ್ದು ಬರಲಿಚ್ಛೈಸಿ ।
ಕಲಿಸುಮಿತ್ರಾತ್ರನಯ ವೈದೇಹಿಸಹಿತಲುಂ ।
ಗೆಲಪಿಂದ ದಂಡಕಾವನಕೆ ಗಮಿಸಿದರಾಮನೆನೆ ಕೇಳ್ದು ಸಂತಾಪದಿ ॥
ಕುಲಪತಿಯದೇನು ಬ್ರಹ್ಮಸ್ವಮಂ ಸೆಳಕೊಂಡು ।
ಕಲಿತವೀನರ ಹಿಂಸೆಗೊಳಿಸಿ ಪರಸತಿಯರ ।
ನೆಮ್ಮಲಿಸಲೆಳಸಿದನೇನು ಕಾರಣಕೆ ಪುರಮುಳವನೆನಲಾಕೆ ನಗುತೆಂದಳು । (10)

ಪೊರದರ ಧನಧಾನ್ಯ ಪರರಸತಿಯರ ಬಯಕೆ ।
ಭೂರಿಹಿಂಸಾಕೃತ್ಯ ರಾಮನೊಳದೆಂದಿಗುಂ ।
ತೋರಬಲ್ಲದೆ ತನಯ ಗಮನಕಾರಣಮಾದುದೆನ್ನ ಯಾಚನೆಯೊ ಬಳಿಕ ॥
ಧಾರುಣೀಶ್ವರ ಯೌವರಾಜ್ಯಪಟ್ಟವ ಕಟ್ಟಿ ।
ಲೋರಂತೆ ಯೋಚಿಸಲ್ ತಾಂ ಕೇಳ್ದುಕೋಪದಿಂ ।
ಪೂರ್ವದ ವರವೆರಡ ನೆನೆದು ಧರಣೀಶನಂ ಬೇಡಿಮುದನುಂ ಪೇಳ್ವೆನು ॥ (11)

ರಾಮನಂ ಬನಕಟ್ಟಿ ರಾಜ್ಯಮಂ ಭರತಂಗೆ।
ನೇಮಿಸುವುದೆನಲರಸ ಧರ್ಮಮಂ ಮೀರಿದರೆ।
ಕೋಮಲತೆಯಿಂದಲಾಪರಿಗೈದ ಬಳಕ ನಿಜತನಯನಂ ನೆನದು ನೆನದು॥
ತಾಮಸದಿ ಪಂಚತ್ವ ಪೊಂದಿದಂ ನೆಲಕೆ ಸು।
ತ್ರಾಮನಂದದ ರಾಜ ಧರ್ಮಮನ್ನನುಕರಿಸು।
ಪ್ರೇಮದಿಂ ನಿನಗೋಸುಗಂ ಗೈದೆನೀಪರಿಯು ತಿಳಿದು ಹರ್ಷಿಸುವುದೆನುತ॥ (12)
ಅಮಿತಯಾಗಾದಿಗಳನೆಸಗಿದ ದಿಲೀಪಾದಿ।
ವಿಮಲ ರಾಜರ್ಷಿಗಳದಾವ ಗತಿಗೈದಿದನು।
ಕ್ರಮದಿಂಗಲರಸ ಸದ್ಗತಿಯು ಪೊಂದಿದನಾತಗಪ್ಪ ಕೃತ್ಯಗಳ ರಚಿಸಿ॥
ಸುಮನಸರ್ ಸಂತಸಂಗೊಳ್ಳುವಂತೆ ದೊರೆಯಾಗಿ।
ಪ್ರಮುದಗೊಳಗೆನ್ನ ಸಂಪಾದಿತಸ್ವರಾಜ್ಯಸಂ।
ಭ್ರಮವನನುಭವಿಸೆಂದು ಪೇಳ್ದ ಮಾತೆಯು ನೋಡಿ ನುಡಿದ ಕೆನಿಸಿಂದ ಬಳಕ॥ (13)
ಖರತರವ್ರಣಕೆ ಕಟುಕ್ಷಾರಮಂ ಲೇಪಿಸಿದ।
ತೆರನಂತೆ ದುಃಖಕತಿಶಯದುಃಖ ಸಂಪ್ರಾಪ್ತಿ।
ಭರಣಿಯಾಯಿತಣ್ಣ ನಿಲ್ಲದ ಬಳಕ ಮಾರಾಜ್ಯದತಿಶಯದ ಭೋಗಂಗಳು॥
ಬರುವುದೆಂತೆನಗನಾಥಗೆ ವಂಶಸಂಹಾರ।
ಕರಕೃತ್ಯವನ್ನೆನಹೆ ಪಾಪಿ ಮೃತ್ಯುವೆನುತ್ತ।
ಲರಿಯುವಯ್ಯಂ ನಚ್ಚಿ ಕೆಚ್ಚಿಗೀಡಾಪ ಕುಲಗೆಡುಕೆದುಬೋಧೆಯಿಂದ॥ (14)
ಕುಲವ ನುಂಗುವ ಕಾಳರಾತ್ರಿಯುಂ ಸತಿಯೆನ್ನು।
ತೊಲಿದೆನ್ನ ಪಿತ ಸುರಪಲೋಕಸಂಗತನಾದ।
ಪಲವು ಶೋಕಾಸ್ಪದಮದಾಯಿತು ಸತ್ಯವ್ರತಗೆ ಪಿತಗೆ ದುರ್ಯಶವಾಡಗಿತ್ತು॥
ಲಲನೆ ಕೌಸಲ್ಯೆ ಲಕ್ಷ್ಮಣಮಾತೆಯಾನೆನ್ನೀಡಿ।
ನಿಲಿಪರೆಂತಸುಗಳಂ ದುರ್ವೃತ್ತೆ ಪಾಪಕೃತೆ।
ಯುಲಿವೆ ನಾಲ್ವರೊಳಿಂತು ರಾಮನಂ ಕಾನನಕೆ ಕಳಪೆಂದು ನಿಷ್ಕರುಣದೆ॥ (15)
ನೆನೆದನರ್ಥವ ರಾಜ್ಯಮಂ ಬಯಸಿ ದುರ್ವೃತ್ತಿ।
ಯನುಕರಣೆಗೈದೆ ಮತ್ತೀ ನೆಲದೊಳರೆ ಕಾಯ್ವ।
ರೆನಗಾರು ಬಲಗಳುಂ ಬೆಂಬಲವನುಳದಾನು ಧರಿಸಬಲ್ಲೆನೆ ಭರವನು॥
ಇನತಾತ ಪೂಜ್ಯಬಲಿ ಸತ್ಯಧರ್ಮಾಚಾರ।
ವೆನೆಪರಿಯನಣ್ಣನಾತನೆ ರಾಜ್ಯಲಕ್ಷ್ಮಿಯುಂ।
ಮನವೊಲಿದು ಪಾಲಿಸೆ ಸಮರ್ಥನಲ್ಲದೆ ಮಿಕ್ಕ ಜನರಿಂದಲುಂ ತೀರ್ವುದೆ॥ (16)
ಪಿರಿಯರುಂ ಸತ್ಪರಂಪರೆಯರಸುಗಳ್ ತಮ್ಮ।
ಚರಿತೆಯುಂ ಮೀರದಣ್ಣಂದಿರೊಳಗಗೈದು।
ವರಧರ್ಮಕೀರ್ತಿಗಳ ಗಳಿಸಿ ಧರ್ಮಾತ್ಮವರಕುಲದಲುದ್ಭವಿಸಿ ಕ್ರೂರಾ॥
ನರಕಭಾಜನನಹೆನೆ ಕುಲಗೆಡುಕೆ ನಿನ್ನಿಂದ।
ವಿರಚಿತವಹ ಕೃತ್ಯ ಕಾಂ ಪೋಗಿ ರಾಘವನಂಘ್ರಿ।
ಗೆರಗಿ ರಾಜ್ಯವನೊಪ್ಪಗೊಳಿಸಿ ಚರನಾಗಿರ್ಪೆನೆನುತ ಕಿನಿಸಿಂದೊರೆದನು॥ (17)

ನೆನೆನೆನೆದು ಕೋಪಶಿಖಿ ಪೆರ್ಚುತ್ತಿರಲಾಗ ।
ಜನನಿಯಂ ನಿಟ್ಟಿಸುತಲುಚ್ಚಾವಚಂಗಳಂ ।
ಘನತರದ ರೋಷದಿಂದಾಡುತವಿತಂಗಳಂ ಮಗುಳ್ ಮೂದಲಿಕೆಗೈದು ॥
ಜನನಾಥನಂ ಕೊಲ್ಲಲೇಂಗೈದನಾಗಸವ ।
ನಿನಗೆ ರಘುನಂದನನದೇನಪಕೃತಂಗೈದ ।
ಬನಕಟ್ಟಲಿನಿತು ಪಾತಕಿ ನರಕಕೇಡಾದೆ ಪತಿಯ ಲೋಕವ ನೀಗಿದೆ ॥ (18)

ಪೇೞಲಳವಲ್ಲದೀ ಪಾತಕಕ್ಕೆಳಸಿ ಬಹು ।
ಖೂಳರೊಡವೆರದೆನ್ನನಪಯಶಃಪುರುಷನಿಂ ।
ಗಾಳಪ್ಪ ತೆರನನೆಸಗಿದೆ ಸರ್ವಲೋಕಹಿತಕಾರ್ಯಮಂ ನೋಡದಾದೆ ॥
ಆಳ್ದೊಡೆಯನಕೊಲ್ಲು ತರಸನಡವಿಗೆ ಕಳಪಿ ।
ಕೀಳುಜನರೊಡವೆರದು ಪತ್ತಣದೊಳರಸಾಗಿ ।
ಬಾಳಬಲ್ಲೆನೆ ರಾಜ್ಯಕಾಮುಕರು ವಱಮಿತ್ರವೃತ್ಯರೂಪಿಸ ಮಾತೃಕೆ ॥ (19)

ಕುಲವಿನಾಶನಕೆಂದು ಪತಿಯ ಪೋಗಾಡಿ ನೀ ।
ನೆಲಕದೀಶಯೆನಿಪ್ಪ ಪಾಪಿ ಕುಲಗೆಡುಕಿ ನಿ ।
ನ್ನಲಿ ಜನಿಸಿದಾಂ ನರಕಕಧಿನಾಥನಾದೆ ದುರ್ಮೇಧೆ ನಿನ್ನತ್ತಣಿಂದಂ ॥
ಅಲಘುಮತಿ ಕೌಸಲ್ಯೆ ಸುಮಿತ್ರೆ ಮೊದಲಾದಖಿಲ ।
ಲಲನಾಶಿರೋಮಣಿಯರಿಂಗಿತ್ತೆ ಯತಿಶೋಕ ।
ಕಲನೆಯನ್ನಶ್ವಪತಿ ಸುತೆಯಲ್ಲ ದಂಡಧರನುದ್ದಂಡತನುಜೆಯಲ್ತೆ ॥ (20)

ಕಾಳರಕ್ಕಸಿ ಯಶ್ವಪತಿ ಯಃಾಗಿ ಯೆನಿಸಿ ಪಿತ ।
ನಾಳ್ವಂತಪಯಶವ ನೆಸಗಿ ಕುಲಮಂ ಕೆಡಿಸಿ ।
ಬಾಳ್ಗೆಸಗಿದೆ ಕ್ರೂರಕರ್ಮಿ ನಿನ್ನೊಳ್ ನುಡಿದೊಡೆಹುದು ಪಾತಕದ ರಾಶಿ ॥
ಪೇಳ ಫಲವೇನೆನುತಲಮಿತಗರ್ಹಿತದ ವಚ ।
ನಾಳಗಳ ಬೀರಿ ಬಲುದುಃಖದಿಂ ಧರೆಗೊರಗಿ ।
ತಾಳ್ದಂ ಮೂರ್ಛೆಯನ್ನರೆನಿಮಿಷಕೆಚ್ಚತ್ತು ನೋಡಿ ಬಿಸುಸುಯ್ದನಳಲಿ ॥ (21)

ಬಿಡುತ ನಿಟ್ಟುಸಿರ್ಗಳಂ ನಾಲ್ದೆಸೆಗಳಂ ನೋಡು ।
ತೆಡಬಲದ ಪರಿಯರೊಳಗೆಂದ ರಾಜ್ಯವ ಬೇಡ ।
ತೊಡನೀಕೆಗಂ ಪೇಳ್ದನಲ್ಲ ರಘುವರಗಪ್ಪ ಪಟ್ಟಮಂ ಕೇಳ್ದರಿಯೆನು ॥
ಕಡೆಗರಸ ಸಗ್ಗಕ್ಕೈದಿದ ನಣ್ಣ ಕ್ರೂರತರ ।
ದಡವಿಗಂ ತೆರಳ್ದುದನೊಂದಕಾಣದೆ ಮೂವ ।
ನೆಡೆಯೊಳರ್ದನಗಡಸಿತತಿಭೀತಿ ಪಾತಕಿಯ ದೆಸೆಯಿಂದೆನುತ ಬೈದನು ॥ (22)

ಚಂಡಾತಪೋದ್ರಿಕ್ತ ದಿಕ್ತಟಗಳೆಂಬ ಮಾ ।
ರ್ತಂಡ ಮಧ್ಯಾಂಬರಾಧ್ಯಾಸೀನನೆನಿಸಲ್ಕೆ ।
ಕುಂಡಲಿತ ರಶ್ಮಿಗಳನಳ್ದು ಹಲಕಂಕಟ್ಟು ಪಿಡಿದೆಳ್ದು ಪುಂಗವಗಳ ॥
ಅಂಡಲೆದು ಬಂಧಿಸುತ ಹಲಿಕನುಳ್ತಿರಲದಂ ।
ಕಂಡು ಕಂಬನಿವಿಡಲ್ ಸುರಭಿ ಕಣ್ಬನಿಗಳಿಂ ।
ತಂಡತಂಡದೆ ಮಳಬಂದಿತಮಾಗುತಾಸುರಪನಂಗದೊಳ್ ಬೀಳ್ ಜವದಿ ॥ (23)

ಕಂಬನಿಯು ಬಿಸಿಯಿಂದ ಪಾಕಶಾಸನ ಬೆದರಿ ।
ಬೆಂಬಿಡದೆ ನೋಡಿಯಳುತಿಹ ಕಾಮಧೇನುವಂ ।
ಸಂಭ್ರಮಿತಚಿತ್ತ ಮೇಂಕಕದೊಳಾದುದೆನುತ್ತ ಬೆಸಗೊಳ್ಳಲಾತನೊಡನೆ ॥
ತುಂಬಿತುಳುಕುವ ಶೋಕದಿಂದ ನುಡಿವಳ್ ಸುರಭಿ ।
ಯೆಂಬೆನೇನಣುಗರೀ ಮಧ್ಯಾಹ್ನದಾತಪದಿ ।
ಕೊಂಬಶ್ರಮಮಂ ನೋಡಿ ಕುಡಿವರಿದುದಾದುದಕಮೆನೆ ವಜ್ರಿ ಬಳಕೆಂದನು ॥ (24)

ಧರೆಯೊಳ್ ಬಲೀವರ್ದಮಖಿಲಗೋಗಣಮಮಿತ ।
ನೆರೆದಿರ್ಪವೆಲ್ಲ ಭವದೀಯಸಂತತಿಯೆನುತ ।
ಮರುಕದಿಂ ತೊಳಲಿವರದೆಂದಿಗಾದರು ದುಃಖ ಕೊನೆಗಾಣ್ಬುದುಂಟೆ ಮರುಳೆ ॥
ತಿರೆಯೊಳೆಲ್ಲರ ಜೀವನಾಧಾರವೆಂದೆನುತ ।
ಸರಸಿಜಾಸನ ಗೈವ ಕೃತ್ಯಮಂ ನೋಡುತ್ತ ।
ಮರುಗಲೇಂ ಫಲಮೆನುತ ಸುರತರೆಯು ಸಂತಸಂಗೊಳಿಸಿದಂ ಮೃದುನುಡಿಯೊಳು ॥ (25)

ಕುಲಪರಂಪರೆಯೊಳವತರಿಸಿದ ವೃಷಂಗಳ್ ।
ನೆಲದಲಿಟ್ಟಸಿ ಸುರಭಿ ಸಂಕಟಂಗೊಂಡುದೀ ।
ಲಲನೆಯರ ಕುಲದೇವತಾರೂಪಿ ಕೌಸಲ್ಯೆ ದಿವ್ಯಪೂರುಷನ ಸುತನ ॥
ಸುಲಲಿತೋದಾರಲಾವಣ್ಯಖನಿಯಿಂ ಒನಕೆ ।
ತೊಲಗಿಸಿದ ಸಂತಾಪಮನಿತೆಂದು ಸ್ಮರಿಪಳು ।
ಕುಲಗೆಡುಕಿ ಯಮರೂಪಿ ಸೂರವಂಶವ ನೀರೊಳಾಳಿಸಿದೆ ದುರ್ವಾರರಕೆ ॥ (26)

ಪಾತಕಿಯು ಜಠರದೊಳ್ ಜನಿಸಿದುದರಿಂ ಮಹ ।
ತ್ಪಾತಕನೆನಿಪ್ಪುದೆನಗಾಮದೀಕ್ಷಣ ನಿನ್ನ ।
ಘಾತಿಸುವೆ ದುಷ್ಟನಿಗ್ರಹ ದೋಷಕರವಲ್ಲವೆನುತ ನಾನಾವಿಧದಲಿ ॥
ತಾತನಂ ನೆನೆನೆನೆದು ಶೋಕಬಡುವದ ರಾಮ ।
ಮಾತೆ ಕೇಳ್ವಾಗ ಭರತಂ ಬಂದನೆಂದರಿದು ।
ತಾತ್ರಸ್ಯಮಾನಸದೊಳಳಲಿ ಕರದೊಳ್ ಕುವರ ಬಾರೆಂದು ದೈನ್ಯವಿಡಿದು ॥ (27)

ಅದೆ ಬಂದ ಭರತನೆಂದಾ ಸುಮಿತ್ರೆಯೊಳೊರೆದು ।
ಕದಳಿಯಂದದಿ ಬಳುಕುತ್ತೈತಪ್ಪುದಂ ಕಾಣು ।
ತಿದಿರೆದ್ದು ಶತ್ರುಘ್ನಸಹಿತ ಚರಣಂಗಳ್ಗೆರಗಿ ಕೆಡೆದಂ ಧರೆಯೊಳು ॥
ಅಡಸಿ ಬಹ ದುಃಖದಿಂದಳಲುತಿಹ ಭರತನಂ ।
ಸುದತಿ ಪಿಡಿದೆತ್ತಿ ಮಸ್ತಕವನಾಘ್ರಾಣಿಸುತ ।
ಉದುಭೂತದ ಶೋಕದಿಂದೆಂವಳಾ ಭರತನೊಳ್ ತರಹರಿಸಲಳವಲ್ಲದೆ ॥ (28)

ಪತಿಯು ಧರ್ಮಸ್ಥಿತಿಯು ನೋಡದೆ ಭವನ್ಮಾತೆ ।
ಯತಿಶಯದ ಸಿರಿಯನುಂ ಬಯಸಿ ಪುರುಷೋತ್ತಮನ ।
ಸುತನ ವೈದೇಹಿ ಲಕ್ಷ್ಮಣನ ಸಹ ಕಾನನಕೆ ಕಳಪಿ ದೊರೆತನವ ಗಳಸಿ ॥
ಸತತಸಂಪ್ರೀತಿಯಿಂದನುಭವಿಸಲೆಂದು ಸಂ ।
ಪ್ರತಿಹರ್ಷದಿಂದಿರ್ಪಳೆದರಿಂ ಮನೋರಥಂ ।
ಜತೆಯಾದುದತಿಸುಖದಿ ಧರಣಿಯಂ ಪಾಲಿಪುದು ತನಯ ನಿಶ್ಚಿಂತೆಯಿಂದೆ ॥ (29)

ಅಮರ ಸನ್ನಿಭತನಯರಿಲ್ಲದಾನಿರ್ಪುದಿದು ।
ಕ್ರಮವಲ್ಲ ವಧಿಸಿಡುವುದೆಂದು ಮಾತೆಗೆ ಪೇಳ್ದು ।
ಮಮತೆಯುಂಟಾದರೆನ್ನೊಯ್ದು ಧಾರ್ಮಿಕನೆಡೆಗೆ ಸೇರಿಸಲ್ಕಿರ್ದ ಸುಖದಿ ॥
ವಿಮಲಮತಿ ಯೆನ್ನಲ್ಲಿ ಸುಪ್ರೇಮದಿಂ ವೇಗ ।
ಸಮನಿಸಲ್ ಪೇಳ್ಕು ಮೆಸುತಾ ಸಾಧ್ವಿ ನುಡಿದುದಂ ।
ಸುಮನಸೋತ್ತಮ ಭರತ ಕೇಳಿ ಪರಿತಾಪದಿಂದಿಂತೆಂದ ಮಾತೆಯೊಡನೆ ॥ (30)
ಬಾಧಿಸುವ ವ್ರಣಮಂ ಶಲಾಕದಿಂ ತೀವಿದಂ ।
ತಾದುದೀ ವಾಣಿಯಂ ಕೇಳ್ದಾಗ ಭರತಗು ।
ದ್ಭೋದವಾದುದು ಶೋಕ ಪಾರವಿಲ್ಲದೆ ಪಲುಬಿ ಬಗೆಬಗೆಯನು ಪಲುಬುತೆ ॥
ಪಾದಂಗಳ್ಗೆರಗಿ ಪಟುತರಕ್ಲೇಶದಿಂ ।
ರೋದಿಸುತೆ ಕೌಸಲ್ಯೆಯೊಡನೆಂದ ಕಿಲ್ಬಿಷದ ।
ಹಾದಿಯಂ ತಿಳಿಯದ ನಿರಾಗಸನ ನೀಂ ಪರಿಯಿಸಾಡಲಿಂತಾಯಿತ್ತು ಮಾತೆ ॥ (31)
ಕರುಣಾತನದಿಂದಾನು ಶ್ರೀರಾಮ ಚಂದ್ರಮನ ।
ಚರಣಭಕುತಿಯೊಳಿರ್ದು ಸೇವಿಸುವ ವೃತ್ತಿಯು ।
ನ್ನರಿತರಿಯದಂದದಲಿ ನುಡಿದರೇಂ ಲಾಲಿಸುವುದೀ ಪ್ರತಿಜ್ಞೆಯ ಪರಿಯನು ॥
ಧರಣಿಯುಂ ಜನನಿಗೈದರ್ಥವಂ ಪೆರರಿಂದ ।
ಲರಿದರುಂ ಕೇಳ್ದರುಂ ತಾಯಿ ನಾಂ ಪರಕೆ ಬಾ ।
ಹಿರನಪ್ಪೆನೆನುತವಿತ್ತಶಪಥಗಳನಾಡಿದನು ಪೇಳಲೇನದ್ಭುತವನು ॥ (32)
ಹರಕೇಶವದ್ವೇಷ ಮೆರವ ಕಾರಣ ದೋಷ ।
ಗುರುನಿರಾಕರಣ ಗೋವಿಪ್ರತಾಡಿತ ಚರಣ ।
ಮರದೊರಗಿದರ ಹರಣಮಂ ಕೊಳುವ ಧೂರ್ತನಿಂಗಖಿಲಪ್ರಾಣಾಪಹರಗೆ ॥
ಪರವಿತ್ತವಂಚಕಗೆ ಪರವಧೂಕಾಮುಕಗೆ ।
ಮರೆಯೊಕ್ಕರಂ ಪೆರರ್ಗೀವ ಪಾಪಾಚಾರ ।
ನಿರತರಿಂಗಪ್ಪ ಗತಿ ತಪ್ಪದಾಗಲಿ ರಾಮನಂಘ್ರಿಗೆರಡೆಣಿಸಲೆನಗೆ ॥ (33)
ಹಿತದೊಳೇಕಾಂತದೊಂದೊರೆದ ನೇಹಿತ ನುಡಿಯ ।
ಪ್ರತಿಜನರ ಮುಂದೊರೆವನಾವ ಮೋಹಿಸುತಲಭಿ ।
ಮತವನರಸುವ ಪರೀವಾದವಂ ನೆಗಳುತಿಹ ನನ್ಯಮನವಂ ನೋಯಿಪ ॥
ಅತಿಶಯದ ಮಂತ್ರಮಂ ಕಲಿತು ಮರೆದವ ಶಾಸ್ತ್ರ ।
ತತಿಯ ಮೀರಿದ ದುರಾಚಾರಿಗಹ ಗತಿ ಯೆನ ।
ಗೆ ತಪ್ಪದಪ್ಪುದು ರಾಮಚಂದ್ರನ ಚರಣಕೆರಡೆಣಿಸಲೆನಗೆ ॥ (34)
ನಂಬಿಸುತ ಗರವಿತ್ತು ನಗುತಲಗ್ನಿಯನಿಕ್ಕಿ ।
ಡೊಂಬಿಯಿಂ ಕ್ಷೇತ್ರದಾರಾಪಹರಣಂ ಗೈದು ।
ಕೊಂಬನೆಲ್ಲರವಿತ್ತವಮಂ ಮಹತ್ಪಾಪಗತಗಾವಗತಿ ಸಮನಿಸುವುದು ॥
ಇಂಬಿಲ್ಲದಗ್ನಿಯೊಳು ನೀರೊಳಗಿದತನುವಿ ।
ಗುಂಬಲಿಯನಿತ್ತು ಕ್ಷಾಮದಿಪೊರೆದು ಮನದಿಪ್ರತಿ ।
ಬಿಂಬಿಸಿದರಂ ಮರದರಿಂಗಪ್ಪ ಗತಿ ತಪ್ಪದೆನಗೆ ರಾಮನ ಮರೆದೊಡೆ ॥ (35)

ಸತಿತನಯಸಂಬಂಧಿಗಳ ಕೂಡಿ ಪಾಯಸಂ ।
ವಿತತಭಾಗಾಂಗಭದ ಪಲಕೃಸರಮುಂತಾದ ।
ಹಿತಕರಸುಭೋಜನವನುಂಡತಿಥಿಗಳ ಕೊಡದಿರುವ ಪಾತಕಿಗೆ ಬಪ್ಪ ।
ರತಿಗೊಂಡು ಪಾನಪರದಾರಾವಮರ್ಶನದ ।
ಜೊತೆಗೊಂಡ ಕಾಮಕ್ರೋಧಂಗಳನ್ನಾತಪನ ।
ಗತಿ ತಪ್ಪದೆನಗಪ್ಪುದಿದು ನನ್ನಿ ರಾಮಗಂ ತಾನೆರಡನು ನೆನೆದರೆ ॥ (36)
ಬಲಹೀನವಾದ ಮಾತಾಪಿತೃಗಳಂ ಮನವ ।
ತೊಲಗಿಸಿ ಋತುಸ್ನಾತೆಯಾದ ಪೆಂಡತಿಯುಳದು ।
ಖಲತನದೊಳಧಿಕರಾಜದ್ರೋಹಗಳ ನೆಸಗಿ ಭೃತ್ಯರ ತಿರಸ್ಕರಿಸುತ ॥
ಫಲಲೋಹಲಾಕ್ಷಾದಿ ವ್ಯಾಪಾರಗಳನೆಸಗಿ ।
ಕುಲವಸಂರಕ್ಷಿಸುವ ಸೂರ್ಯಾಭಿಮುಖವಾಗಿ ।
ಜಲಶಂಕೆಗೈವಾತಗಪ್ಪಪಾತಕ ತಪ್ಪದೆನ ಗಹುದುಬಿಡಲಣ್ಣನಾ ॥ (37)
ಜನಿಸಿದಾಶೆಯೊಳೂರ್ಧ್ವಮುಖದಿಂದ ಪ್ರಾರ್ಥಿಸುತ ।
ಅನವರತಬೇಡುವಾರ್ತಿಯು ತಿರಸ್ಕೃತಿಗೈವ ।
ಘನಪಾತಕಿಗೆ ತನ್ನ ಪೊಗಳ ಪೆರರಂ ಬೈವ ನಾರಿಗೆ ಕುಡಿವ ಜಲಮುಂ ॥
ಕಿಸಿಸಿಂದ ಕೆಡಿಸಿ ನಿಜಧರ್ಮಮಂ ಮೀರಿ ದು ।
ರ್ಜನವಾಂತ ವಿಪ್ರನಿಂಗಾವ ಗತಿ ಯಪ್ಪುದದು ।
ಯೆನಗಂಟಲಾರ್ಯಗೇನಾದೊಡಂ ಪಾತಕವ ಮನದೊಳಂ ನೆನೆದಿರ್ದೊಡೆ ॥ (38)
ಪ್ರತಿಬಟಿಸಿ ಯುಗ್ಗಡದ ರಣದೊಳಸುಮಂ ಸಲಹೆ ।
ರತಿಯಿಂ ಪಲಾಯನಂಗೈದವಂಗಾಯುದ್ಧ ।
ಕ್ಷಿತಿಭೀತಿಯಿಂದ ಶರಣೆಂದವನ ಪೊಡೆದವನಿಗಪ್ಪ ಪಾತಕಮಡಸಲಿ ॥
ಕ್ಷಿತಿಯಾರಸಗಾನಘವ ನೆನದರಾದರೆನುತ್ತ ।
ಅತಿದುಃಖದಿಂದಳಲಿ ಕ್ರೂರಶಪಥಂಗೈದು ।
ಮತಿಗುಂದಿ ಕೆಡೆದ ಸುತನಂ ನೋಡಿ ತಳ್ಕೈಸಿ ಕೌಸಲ್ಯೆ ಯಿಂತೆಂದಳು ॥ (39)
ಮರೆದೆಂದಿಗಾದೊಡಂ ಧರ್ಮದಿಂದಲಿ ಚಲಿಸಿ ।
ಪೆರಸಾರುವದೆ ನಿನ್ನ ಮನ ಬಾಲ ನಾಂ ಬಲ್ಲೆ ।
ಮರುಗಿ ಮಾಡುವುದೇನು ವಿಧಿಕೃತವ ಮೀರುವರದಾರ್ಗಪ್ಪುದೀ ಭುವನದಿ ॥
ಪರಮಧಾರ್ಮಿಕಮೂರ್ತಿ ಬರಿದೆ ಶೋಕಿಸಿದರೇಂ ।
ಗುರುತರ ಪ್ರೇಮದಿಂದಂಕದೊಳ್ ಕುಳ್ಳಿರಿಸಿ ।
ಭರತನಂ ಸಂತೈಸುತಿರಲನ್ನೆಗಂ ರಾತ್ರಿಯಾಯಿತು ಸಂವತ್ಸರದೊಲು ॥ (40)
ಮೂಡಿತಿನಬಿಂಬ ಮುನಿಕರೊಳಾ ದ್ವಿಜೋತ್ತಮರ ।
ಕೂಡಿ ಮೈತ್ರಾವರುಣಿ ನಡೆತಂದು ಭರತನಂ ।
ನೋಡಿ ಸಂಕಟಗೊಳ್ಳುವದ ನಿಲಿಸು ಮುಂದಪ್ಪ ಕಜ್ಜಮಂ ನೆಗಳಸುವೊಡೆ ॥
ಮಾಡಿ ಯೋಚನೆಯು ಮನ ದೊಳ್ ಪ್ರೀತಿಯಿಂ ವಿನಯ ।
ಗೂಡಿ ಬಾಲಕ ವತ್ಸ ನೀನಿದೇಂಕಾರಣಕೆ ।
ಮಾಡುವೆ ಪ್ರಳಾಪಮಂ ಮರ್ತ್ಯಾವಳಿಗೆ ಸಲ್ಪುದುಂ ನಿಲ್ಪುದೇ ಜಗದೊಳು ॥ (41)

ಭೋಗಂಗಳೆಲ್ಲಮಂ ಕೊಂಡು ಶ್ರೌತಾಚಾರ ।
ಯಾಗಂಗಳನ್ನೆಸಗಿ ಷೋಡಶಮಹಾದಾನ ।
ಪ್ರೊಗಂಗಳಿಂದಱೆದೇವಮನುಜಾದಿಗಳ ಸಂತುಷ್ಟಿಗೊಳಿಸಿ ಬಳಿಕ ॥
ಯೋಗೀಶರಾಮನಂ ಪಡೆದು ಮಘವಲ್ಲೋಕ ।
ಭೋಗೇಚ್ಛೆಯಿಂದೈದಿದಗಣಿತಯಶೋರಾಶಿ ।
ಯಾಗಾರನಂ ನೆರೆದು ಹಂಬಲಿಸುತಳುವುದಿದು ವ್ಯರ್ಥಪ್ರಳಾಪವಲ್ತೆ ॥ (42)

ಜನನ ಮರಣಗಳೆಲ್ಲ ದಕ್ಷಯುವಿಶುದ್ಧಾತ್ಮ ।
ಗೆವಿತುದೇಹಗಳಿರಲನಿತ್ಯ ಸಶ್ವರಮಶುಚಿ ।
ಜನಿಪುದಿದ ಬಲ್ಲರ್ ನೋಡುತಲೆ ತಿಳಿಯದವಿತ್ರದುಃಖಗಳ ತೊಡರಿ ॥
ನೆನೆನೆನೆದು ಮರುಗಿ ಕೊರಗುವ ಮೂಢಜನರಿಗಿ ।
ಸ್ನಾನುಮೋನ ದೇಳಲಪ್ಪುದು ಶೋಕಗೈವುದಿದು ।
ಬಿನದ ಮಾಗಿದೆ ಪೋದ ತನುವ ನಿಟ್ಟಿಸಿ ಬಳಲಲದು ನಿರರ್ಥಕವಲ್ತೆ ॥ (43)

ಪುಟ್ಟಿದೊಡೆ ಸಗ್ಗ ನರಕಗಳ ಪಂಥಾನವಂ ।
ಮೆಟ್ಟದಲ್ಲದೆ ತೀರದಲ್ಲಿಂದ ಮರಳ ಬಂ ।
ದಿಟ್ಟಸಲ್ಬೇಕು ಪುನರಪಿ ದೇಹಿ ಯೆನಿಸುವರಿಗಿದು ನನ್ನಿಯಾದ ಬಳಿಕ ॥
ಕುಟ್ಟಿಕೊಂಡಳುವದನ್ಯಾಯು ಸಂತತಚರಿವ ।
ಬಟ್ಟೆಯುಂ ನೋಡುವದಕೇಂ ದುಃಖವೆನುತ ಮನ ।
ಮುಟ್ಟಿ ಪೋದ ಶರೀರಗಳನು ಲೆಕ್ಕಿಸರ್ನೈಸೆ ಪಂಡಿತರ್ ಜಗತಿಯೊಳಗೆ ॥ (44)

ಮೊದಲು ಮಾಡಿದ ಸುಕೃತದುಷ್ಕೃತದಫಲದಿಂದ ।
ಲೊದಗುವದು ತನು ಶರೀರವ ಕೊಂಡನಾತುರದೊ ।
ಳದುಭುತದ ಸುಖದುಃಖಗಳನುಂಬನಾ ದೇಹ ಜೀರ್ಣವಾಗಲ್ ಬಿಡುವನು ॥
ಬದಲೊಂದು ಪೊಸಮೂರ್ತಿಯುಂ ಕೊಂಬನೀ ಪರಿಯು ।
ಲುದು ಭವಂ ನಷ್ಟವೆರಡುಂತಥ್ಯವಾಗಿರ ।
ಲೊಕ್ಕದಗುವದದೆಂತು ನೆನೆದಾಗಿಃರಳಲುವವರದೇನು ಸಂಬಂಧ ತಿಳಿಯೆ ॥ (45)

ಶಾರೀರಸಂಗವಾಗಲ್ ಬಾಲ್ಯಯೌವನಂ ।
ತೋರೆ ಜರೆಯಡಸುವುದು ಮಗುಳೊಂದುತನುವಿಡಿವ ।
ನೋರಂತೆ ತಥ್ಯಮದರಿಂ ಪೋದ ದೇಹಮಂ ನೆನೆದು ತೊಳಲುವದನುಚಿತಂ ॥
ಧೀರ ಕೇಳಾತ್ಮಗೆಂದಿಗು ಸಾವು ಹುಟ್ಟುಗಳ್ ।
ತೋರುವುದು ಷಡ್ಭಾವಕಲನೆಯಾನಂದಮಯು ।
ಸಾರಬುದ್ಧ್ಯಾದಿ ಸಾಕ್ಷಿಗೆ ಲೇಪವರ್ಜಿತನಿಗಹುದೆ ಜನನಗಳು ಮರುಳೆ ॥ (46)

ನಿರತಿಶಯದಾನಂದಮಯನಾತ್ಮನೆಂದಱಿದು ।
ತಱಿದಹಂಕೃತಿಯು ನಿತ್ಯದ ದೇಹದಭಿಮಾನ ।
ವೆರೆಯದನುದಿನನಿತ್ಯ ಸುಖದಲಿರ್ಪ್ಪದನುಳಿದು ಕಲ್ಪಿತಭ್ರಾಂತಿವಿಡಿದು ॥
ಮರುಗಲೇಂ ಪ್ರಾರಬ್ಧವಶವಾದ ಬಳಿಕ ಬಂ ।
ಧುರಶೋಕಮೋಹಗಳ ನೋಡುತಂಟದಲಿರ್ಪ್ಪ ।
ನಿರುವಿನ್ನುರುಳಿಯನಿಷ್ಟನೊಂದ ಭ್ರಾಂತಿಗಳಷ್ಟು ತಿಳಿದು ಪೋಲ್ದಿದನೆ ಬೊಪ್ಪ ॥ (47)

ಜನನಮರಣದ ಬಾಧೆಗಳುಕದಿಹೊಡನುಬಂಧ ।
ಚಿನುಮಯಾನಂದ ತಾನೆಂದರಿದು ತನ್ನೊಳಗೆ ।
ದಿನದಿನಂ ನೋಡುತಿರೆ ಲಭಿಸುವುದು ಪರಮಸುಖಮೆನುತ ಗುರುವರನುಸಿರಿದ ॥
ಘನರಸಾಯನವಾಣಿ ಘಮ್ಮನೆ ಮಹಾಶೋಕ ।
ದನುವಾಂತ ರುಜೆಯನಪಹರಿಸಲಾಭರತ ತ ।
ನ್ನನುವ ತಾನೇ ತಿಳಿದು ಸುಖಿಯಾದನೇನೆಂಬೆ ಮಹದನುಗ್ರಹದ ಬಗೆಯ ॥ (48)

ತೊಡರಿದವು ತಾಪತ್ರಪ್ಪನೆ ತೊಲಗಲಾಭರತ ।
ಗೊಡನೆ ನಿರ್ಮಲವಾಮದಂತರಂಗಂ ಬಳಿಕ ।
ಪೊಡೆಯು ಬಡಿದಳುವದೆತ್ತಲ್ ಪೋದುದೋ ಪುಟ್ಟಿದುದೇ ಪುಸಿ ಯಂಬಾವದಿ ॥
ನುಡಿಗಳ ಮಹಾಮಹಿಮೆಯಿಂದ ನಿರ್ಮಲನಾಗು ।
ತಡಿಗೆರಗಿ ಮುಂದಪ್ಪ ಕಜ್ಜಮಂ ಬೆಸಸೆಂದು ।
ವೃಡನಿಕಾಶ ಮುನೀಶಗರು ಪೇಡದಕುತ್ತರವನಿತ್ತ ನಾ ಯಮಿರಾಯನು ॥ (49)

ಮಾಗಿದಕೊ ತೈಲದ ಕಟಾಹ ತನ್ಮಧ್ಯದೊಳ್ ।
ಪೊಡವಿಪತಿಯ ಶರೀರ ಮದ [illegible]ಗ ಸೌಖ್ಯದಿಂ ।
ಕಡೆಗೊಳಿಸಿ ಬೇಗ ಶಾಸ್ತ್ರೋಕ್ತವಿಧಿಯಂ ವಿಚಾರದೆಸಗು ಸಂಯೋಗವನ್ನು ॥
ಕಡೆಗೈಯಲವಸರಮಿದಲ್ಲೆನುತ ಮುನಿತಿಲಕ ।
ನುಡಿದರಾಕ್ಷಣ ಭರತ ತತ್ಕಾರ್ಯಧುರ್ಯದಿಂ ।
ದೊಡನೆ ನೇಮಿಸಲಾಗಲರಸನಂ ಕಡೆದೆಗೆದರೆಣ್ಣೆಗೊಪ್ಪರಿಗೆಯಿಂದೆ ॥ (50)

ರನ್ನಮಯ ಪಾಸಿಗೆಯಲಾ ಮಹೀಪತಿಯನ
ತ್ಯುನ್ನತಿಕೆಯಿಂದ ಕುಳ್ಳಿರಿಸಲಂಕರಿಸಿರ್ಪ ।
ಬನ್ನವಂ ಕಂಡು ಭರತಂ ಶೋಕಸಂತಪ್ತನಾಗಿ ಮರುಗಿದನು ಮಗುಳ್ ॥
ಎನ್ನ ಮಾತುಳನೆಡೆಗೆ ಕಳಪಿ ರಘುವೀರನಂ ।
ಖಿನ್ನಮಾನಸಗೈದು ಪೇರಡವಿಗಟ್ಟಿಯಾ ।
ರೆನ್ನುವರ ಕಾಣದೀಪರಿಯ ಚರಮಾವಸ್ಥೆಗೈದ ಭೂಪಾಲತಿಲಕ ॥ (51)

ಎಂದಮಿತ್ರಗುಣಕರ್ಮಗಳ ನೆನೆನೆನೆದಳುವ ।
ಕಂದನಂ ನೋಡಿ ಮೈತ್ರಾವರುಣಿ ಪ್ರಿಯದಿಂದ ।
ಲೆಂದನೆಲೆಪುತ್ರ ಬಿಡು ಶೋಕಮಂ ಪಿತನಿಂಗೆ ಪ್ರೇತಕಾರ್ಯಗಳ ರಚಿಸು ॥
ಎಂದೊರೆಯಲಾಚಾರ್ಯ ಋತ್ವಿಕ್ಪುರೋಹಿತರ ।
ಸಂದೋಹಮಂ ಕರೆಸಿ ವೈಶ್ವಾನರನ ಬೇಗ ।
ತಂದಿರಿಸಿ ಪೆರಗೆಂದು ನೇಮಿಸಲ್ ಋತ್ವಿಜರ್ ನೃಪತಿ ಪೇಳದ ತೆರದೊಳು ॥ (52)

ಕ್ರತುಭುಜನಪೊರಗಿಟ್ಟು ಪ್ರತಿಕರ್ಮಕಳವಟ್ಟು ।
ಕ್ಷಿತಿಪತಿಯ ಸಿಬಿಕಾಧಿರೋಹಣಂಗೈಸಿ ಮುಂ ।
ದತುಳತಂಬಟ ಭೇರಿಬಹುವಿಧದವಾದ್ಯಂಗಳು ಘೋಷಣೆಗೈವುತೈದಿ ॥
ಚತುರತೆಯ ಸೌವರ್ಣರಜತಕುಸುಮಂಗಳ ।
ಸ್ನತಿಶಯದ ವೀಥಿಯೊಳ್ ಪರಪ್ರತ್ತೈತಂದು ।
ಚಿತೆಗೈದರಗರುಚಂದನ ದೇವದಾರುಮಯಮಾಧಿಷ್ಟ್ರಗಂಧಂಗಳಲಿ ॥ (53)

ವಿಧಿಯಿಂದ ಹುತಹುತಾಶನತೋಷಣಂಗೈದು ।
ಚದುರಿಂದ ಜಪವೆಸಗಿ ಸಾಮಗಾನದಿ ಪಾಡಿ ।
ಪದುಳದಿಂದಗ್ನಿಸಂಸ್ಕಾರಗೈದರ್ ಬೇಗ ಶ್ರೌತವಿಧಿಯಂ ಮೀರದೆ ॥
ಅದನೋಡಿ ಯಾರಾಜಯೋಷಿತರ್ ತಮುತ್ತಮ್ಮ ।
ಹೃದಯಸ್ಥ ದುಃಖಮಂ ಪೋರಪರಪಲನ್ನೆಗಂ ।
ಸವಯಂ ವಸಿಷ್ಠಮುನಿ ಯೈತಂದು ಮತ್ತವರಮುಪಚರಿಸಿದಂ ವಿನಯದಿ ॥ (54)

ಕರದೊಯ್ದು ಸರಿಯೊಳವಗಾಹನಂಗೈಸಿ ಪ್ರಿಯು ।
ಕರದುದಕಮಂ ಕೊಡಿ ನಗರಪ್ರವೇಶಮಂ ।
ತ್ವರಿತದಿಂ ಮಾಡಿಸಿದನಾ ವಿಪ್ರಕುಲತಿಲಕ ಬಳಿ ದಶಾಹಂಪ್ರಿಯದೊಳು ॥
ಪರಮಭಕ್ತಿಯೊಳು ಶ್ರಾದ್ಧಂಗಳಂ ರಚಿಸಿ ಪರಿ ।
ಪರಿಯಭೂಷಣ ಭೂರಿಧನಧಾನ್ಯಗೋವ್ರಜಂ ।
ಧರಣಿ ಮುಂತಾದ ದಾನಂಗಳಂ ಮಾಡಿಸಿವ ಭೂಸುರರ್ ನಲಿವಂದದಿ ॥ (55)

ಗುರುವಿನನುಮತದಿಂದ ಪಿತೃಕಾರ್ಯಮೆಲ್ಲಮಂ ।
ಪರಮಭಕ್ತಿಯೊಳು ಸಾಂಗೋಪಾಂಗದಿಂ ರಚಿಸಿ ।
ಭರತಶತ್ರುಘ್ನರೊಡವೆರದು ಸಂಕ್ಲೇಶದೊಳು ಮತ್ತೊಂದನೆಸೆಯದಾಗ ॥
ಸ್ಮರಿಸಿ ಗುಣವಿಕ್ರಮಗಳಂ ಮನೋವ್ಯಾಕುಲತೆ ।
ವೆರದು ಸಿರಿರಾಮಪುರದರಸ ಸಂಭ್ರಮದಿಂ ।
ನಿರುಗೆಗೊಳಸಿದ ಕಾಣ್ಬೆನೆಂಬೆಗೆಂ ದಂದಿನಿರುಳಂ ಕಳೆದ ಕಷ್ಟದಿಂದ ॥ (56)

॥ ಸಂಧಿ 25 ಪದ 1119 ॥

ಇಪ್ಪತ್ತೇಳನೆಯ ಸಂಧಿ

ಸೂಚನೆ ॥ ನೆರೆದ ಭೂಮಿಪದ್ವಿಜೋತ್ತಮರೆಲ್ಲ ಭರತಗಂ ।
ದೊರೆತನವ ಕಟ್ಟಲಿಚ್ಛೈಸಲವ ಮನ್ನಿಸದೆ ।
ಪರಮಭಕ್ತಿಯೊಳು ರಘುವೀರನಂಘ್ರಿಯ ಕಾಣ್ಬೊಡೈದಿದಂ ವಿಪಿನದೆಡೆಗೆ ॥

ಪಿತಗೌರ್ಧ್ವದೈಹಿಕಾದ್ಯಖಿಲಕರ್ಮಂಗಳಂ ।
ಯತಿ ನಿರೂಪಿಸಿದಂತೆ ಪರಿಸಮಾಪ್ತಂಗೈದು ।
ಹಿತಬಂಧುಗಳ್ ಬೆರಸಿ ಕುಳ್ಳಿರಲ್ಕಾನದಿಂ ಶತ್ರುಘ್ನನತಿದುಃಖದಿ ॥
ಕ್ಷಿತಿಯೊಳಗೆ ಪೊರಳುತಂ ತಾತನ ಚರಿತ್ರಗಳ ।
ನತಿಶಯದಿ ಪೊಗಳುತಂ ಯೆಣಿಸುತಂಗಾಂಗಗಳ ।
ನತಿಶೋಕಗೈದನೇನೆಂಬೆ ಮೋಹಕಮಖಿಳ ಪ್ರಾಣಿಗಳ ಬಿಟ್ಟಗಲ್ಪುದೇ ॥ (1)

ನಿಮಿಷ ಕಂಗೊಳಸವಿರೆ ನಿಖಿಳಜನರಂ ಕೇಳ ।
ಪ್ರಮುದದಿ ಕರೆತಂದು ಪ್ರಾಂಗಣದೊಳಾಲಿಸುತ ।
ಸುಮನೋಹರಮೆನಿಪ್ಪಲಂಕೃತಿಗಳಂ ಮಾಡಿ ಹೆರೆಹಿಂಗದನುವಿನದೊಳು ॥
ಮಮತೆಗೈದಯ್ಯನೈದಿದರಣ್ಣನಿಂದಾನು ।
ಕ್ರಮದೊಳುಪಚಿತಿಯವೈನೆನಲಾತ ಬಸಕ್ಕೈದ ।
ಲಿಮಗಾರು ಗತಿ ನಿರಾವರಣದೊಳಗೆಂತಿರುವೆನೆಂದಳಲಿದಂ ಬಳಲುತ ॥ (2)

ಅಪರಿಮಿತಶೋಕದಿಂ ಶತ್ರುಘ್ನನಳಲುತಿರ ।
ಲುಪಚರಿಸಲೈದಿ ಭರತಂ ತದಾಕೃತಿಯಾಗ ।
ಲುಪಮಿಸಲ್ ಕೊಡೆದಾದುದು ಶೋಕದುರು ತಾಪದಿರವ ಕಂಡಾ ಮೌನಿಯು ॥
ಕೃಪೆಯಿಂದ ಭರತನಂ ತಳ್ಕೈಸುತೆತ್ತಿ ಸ ।
ದುಪಚಾರಗೈದು ಮೊದಲಿಸಿದ ವಿವೇಕಕೇ ।
ನಪರಿಮಿತ ಮೋಹಮಂಪಿದುದನಘ ನಿಜತತ್ವ ತಲೆದೋರದಂತಾದುದು ॥ (3)

ಎನಿತಾದೊಡಂ ದುಃಖಮೂರನುತ್ತರಿಸುವೊಡೆ ।
ಜನರಿಂದೆ ತೀರುವುದೆ ಪರಿಹರಿಸಲಳವಲ್ಲ ।
ದನುವ ಚಿಂತಿಸುತ್ತೈದೆ ತೊಳಲಲೇಂ ಬರಿದೆ ಮೂರ್ಖ ಸ್ವಭಾವಮೆಂದು ॥
ಮನುಮುನಿಗಳೆಲ್ಲ ದುಸ್ಸಹದುಃಖಮಂ ಸಹಿಸು ।
ತನುಭವಸುತಿರ್ಪರದರಿಂದ ಕಲ್ಪಿತಭ್ರಾಂತಿ ।
ಯನುಮರಿತು ಪರಿದಿಟ್ಟುಮಂತಪ್ಪ ಕಜ್ಜಮಂ ನೆನವುದತಿಲೇಸು ತನಯ ॥ (4)

ಗುರು ನಿರೂಪಿಸಿದರ್ಥಮಂ ಕೇಳ ಸಂತಸದಿ ।
ಪರಿದು ವ್ಯಾಮೋಹಮಂ ಶತ್ರುಘ್ನನಂ ನೋಡಿ ।
ಪರಿಪರಿಯುಲುಪಚರಿಸುತಿಂತೆಂದ ಬೊಪ್ಪನಂ ನೆನದೇನು ಸಗ್ಗಗನನು ॥
ದೊರೆದನಕ ಪರದೈವವೆಮಗೆ ರಘುವೀರನಹ ।
ನರನಾಥನೆಡೆಗೈದಿ ನಡೆದ ವೃತ್ತಾಂತಮು ।
ನ್ನೊರೆಯೆ ಪರಿಪಾಲಿಸುವ ಸರ್ವಭೂತಾವಾ ಸನಿರಲೇನು ಭೀತಿ ನಮಗೆ ॥ (5)

ಎಂದು ಶತ್ರುಘ್ನನಂ ಸಂತೈಸಲತಿಕಷ್ಟ ।
ದಿಂದಾತನಳುವದುಳಿದಿಟ್ಟಿಸುತಿರಲ್ ಪುರಕೆ ।
ಪೊಂದಿರ್ಪ ಬಾಗಿಲೊಳು ಕುಬ್ಜ ಕಂಗೊಳಿಸಿದಳ್ ಸಕಲಶೃಂಗಾರವೆರೆದು ॥
ಮಂಥರೆಯು ಕಂಡು ಕಡುಕೋಪದಿಂ ಭರತನೀ ।
ದಂದುಗಕ್ಕಾಧಾರಿ ಯಿವಳೆನುತ ಸೂಚಿಸಲ್ ।
ಬಂದು ಮುಂದಲೆವಿಡಿದು ಶತ್ರುಘ್ನನೊಂದೆರಡ ನೊದೆದ ನತಿಕೋಪದಿಂದ ॥ (6)

ತಾಡನೆಯು ಕಾಣುತಂತಃಪುರಾಂಗಣದೊಳೆಡೆ ।
ಯಾಡುವರ್ ಭಯಗೊಂಡು ನಾಲ್ದೆಸೆಯನೈದಲ್ಕೆ ।
ರೂಢಿಯೊಳೆರಗಿ ಗೋಳಿಟ್ಟುಕೂಗಿದಳಳುತ ಕುಬ್ಜೆ ಭೋಯೆಂದೊರಲುತ ।
ನೋಡಿ ಕೇಕಯತನುಜೆಯೈತಂದು ಬಿಡಿಸುವೊಡೆ ।
ಮಾಡಲತಿಯತ್ನಮಂ ಶತ್ರುಘ್ನ ಕೋಪದಿಂ ।
ಖೋಡಿ ಕುಲಗೆಡುಕಿ ತರಿದಿಡುವೆ ನಿನ್ನೀಕ್ಷಣದೆ ಯೆನಲಂಜಿ ಕಂಪಿಸಿದಳು ॥ (7)

ಕ್ರೋಧಮೂರ್ಛಿತನಾದ ಶತ್ರುಘ್ನನಂ ಕಂಡು ।
ಬಾಧೆ ಬಂತೆಂದಂಜಿ ಭರತನಂ ಮರೆಯೊಕ್ಕ ।
ರಾದುರಾತ್ಮೆಯು ಪೊಡೆಯಲ್ಕೈತಂದ ಶತ್ರುಘ್ನಗಿಂತೆಂದ ಭರತ ನಯದಿ ॥
ಈ ದುಷ್ಟೆಯಂ ತರಿವುದುಚಿತಮಬಲಾಜನರ ।
ಬಾಧೆಗೊಳಿಸಲ್ಕಣ್ಣಗತಿಕೋಪಮಡಗಿಸು ದು ।
ರ್ಮೇಧರೆನ್ನುತ ತಿರಸ್ಕೃತಿಗೈವ ನದರಿಂದ ಕೈಗಾವುದೆಂದೊರೆದನು ॥ (8)

ಕೊಲುವುದನುಚಿತಮಬಲೆಯರನೆಂದು ಕ್ಲೇಶಸಂ ।
ಕಲಿತಮನದಿಂ ಭರತ ಮೆಲ್ಲನರಿಪಲ್ ಕೇಳ ।
ತೊಲಗಿಸುತ ಕೋಪಮಂ ಶತ್ರುಘ್ನ ಕೈಸಾರಲನ್ನೆಗಂ ಕೈಕೆ ಜವದಿ ॥
ನೆಲದೊಳೊರಗಿದ ಕುಬ್ಜೆಯನ್ನೆತ್ತಿ ಪರಪಿರುವ ।
ಚೆಲುವ ಭೂಷಣಗಳಂ ನಿಟ್ಟಿಸದೆ ಶುದ್ಧಾಂತ ।
ಕಳುಗಲತ್ತಲ್ ಭರತಶತ್ರುಘ್ನರಿರ್ವರುಂ ಗುರುಬಸಿಡಿಯೊಳಗೊಪ್ಪಿರೆ ॥ (9)

ಪದಿನಾಲ್ಕನೆಯ ದಿವಸವಾಯ್ತು ಧೊರೆಯಹುದಿನ್ನು ।
ಸಮಯ ಸರ್ವರ ಪೊರೆವುದೆಂದು ಪೇಳಲ್ಕಂದು ।
ಉದಿಸಿದಂ ರವಿ ತನ್ನ ಕುಲದೇಳ್ಗೆಯಂ ನೆನೆದು ಸಂತಸವ ಪೇಳ್ವಂವದಿ ॥
ಚದುರಿನೈತಂದರಖಿಳಾಗಮಜ್ಞರು ವಿಬುಧ ।
ರಥಿಕ ಧೀಮಂತ ಸಾಮಾಜಿಕಾದ್ಯರು ರಾಜ ।
ಸದನದೊಳಗಿರ್ಪ ಹಿತಕರರೊಂದುಗೂಡಿದರ್ ನಿಮಿಷದೊಳಗಚ್ಚರಿಯೆನೆ ॥ (10)

ನೆರೆದಖಿಲಧೀಮಂತರಾಲೋಚನಂಗೈದು ।
ವಿರಚಿಸಲ್ ಪಟ್ಟಾಭಿಷೇಕಮಂ ಬೇಕಾದ ।
ಕರಿಹಯ ಸುರಥರತ್ನಮಾಲ್ಯಾದಿಗಳನೆಲ್ಲ ತರಿಸಿ ಸಂತೋಷವೆರಸಿ ॥
ಭರತನಂ ಕರೆದು ಪೇಳ್ದರಯ್ಯ ಸುರನಾಥ ।
ಪೊರೆಯ ಸೇರಿದನಣ್ಣ ಚಿತ್ರಕೂಟದೊಳಿರ್ಪ ।
ಧೊರೆಯಿಲ್ಲದಿರೆ ರಾಷ್ಟ್ರಕುತ್ಪಾತ ಸಂಜನಿಪುದದರಿಂದ ನೃಪನಪ್ಪುದು ॥ (11)

ಕುಲಪರಂಪರೆಯೊಳುದಿಸಿದ ರಾಜಧರ್ಮವಂ ।
ತೊಲಗಲೀಯದೆ ಪಟ್ಟದರಸೆನಿಸಿ ಲೋಕವಂ ।
ನಲವಿಂದ ಪಾಲಿಸುವುದು ತಾಮಸಂಗೈಸಲ್ಲವೆಂದೆಲ್ಲರೊರೆಯೆ ಕೇಳ ॥
ಕುಲವೃದ್ಧಮೊದಲಾದ ಬಂಧುಗಳ್ಗಂತೆಂದ ।
ನಲಘುಮತಿ ಪಿರಿಯ ರಾಘವನನುಸುತನದೇಳ್ಗೆ ।
ಗೊಲವೀಯ ಬೇಕಲ್ಲದನ್ಯರಿಂಗಳವಡದು ವಿಭವ ಕೊಡೆದತಿಕೀರ್ತಿಯಂ ॥ (12)

ಅರಸುತನ ಪಿರಿಯನಿಗೆ ಯಾಸೇವೆಯನುಜನಿಗೆ ।
ದೊರೆಮಬಂದಿಹುದೆಮ್ಮ ಗೋತ್ರಪಾರಂಪರೆಯ ।
ಚರಿತೆಯಂ ಕೇಳರ್ದು ಸನ್ಮಾರ್ಗಗತಿಯುಳಿದು ಪಟ್ಟವಂ ಕಟ್ಟಲೆಂದು ॥
ಪರಮಪ್ರೀತಿಯೊಳೊರೆದ ಚೆಲುವಿಗೇನೆಂಬೆ ದಿನ ।
ಕರವಂಶಸಚ್ಚರಿತೆಯಂ ಮೀರಿ ನಡೆದರಿಂ ।
ಗುರುತರದ ಸುಖಮಹುದೆ ಬಗೆಯ ನೀವರಿಯದುದೆ ಕೌಶಲ್ಯನಿಲಯರತ್ನೆ ॥ (13)

ಇಂದಾನು ಪೋಗಿ ರಘುನಂದನನ ಚರಣವಂ ।
ಪೊಂದಿ ಮಾತೆಯ ದೆಸೆಯೊಳುದಿಸಿದಪರಾಧಶತಕ ।
ದಂದುಗವ ಪರಿಹರಿಸಿ ರಾಜ್ಯಮನೊಪ್ಪಗಿಸಿ ಸುಖದೊಳಹೆ ಸೇವೆವೆರಸಿ ॥
ಮುಂದೈದಲಖಿಳವನ ಗೋಚರಾದಿಗಳೆಲ್ಲ ।
ರೊಂದೊರೆಯೆ ಕೇಳ್ ನೆರೆದಿರ್ಪರೆಲ್ಲರು ಸುಖಾ ।
ನಂದಾಶ್ರುಗಳ ತುಳುಕಲೆಳಸಿದರ್ ಕಂಗಳೊಳಗಚ್ಚರಿಯದೇನೆಂಬೆನು ॥ (14)

ಬಳಲಿರುವ ಸಸ್ಯಾಳಿಗಮೃತಾಭಿಷೇಚನಂ ।
ಗೊಳಿಸಿ ಕಳಕಳಿಪಂತೆ ಭರತನಾಡಿದ ನುಡಿಗೆ ।
ತುಳುಕುವಾನಂದದಿಂದಖಿಳಗ್ರಜೆಪರಿವಾರಮೆಲ್ಲ ಹರ್ಷದಿ ನುಡಿದರು ॥
ನಳನಾಕ್ಷರಾಘವನನೀಪರಿಯು ಭಕ್ತಿ ನಿ ।
ನ್ನೊಳಗೆ ಸಂಭವಮಾದಕತದಿಂದ ಸಿರಿಲಕುಮಿ ।
ನಿಳಯುಗೈದಿರಲಿ ನಿನ್ನರಮನೆಯೊಳನುದಿನಮುಮೆಂದು ಪರಸಿದರು ನಮುದಿ ॥ (15)
ಜನರ ಕಲಕಲಗಳಂ ನೋಡುತ್ತ ಭರತ ತಾಂ ।
ಬನಕೈದಲಭಿಲಾಷೆಯಿಂದಮಾರ್ಗವ ಬೇಗ ।
ಲನುಗೈಯುವೇಳ್ಕೆನುತ ನೇಮಿಸಲ್ ಮಂತ್ರಿ, ಜನರತಿವೇಗದಿಂದಲ್ಕೈದಿ ॥
ವನಗೋಚರರ ನಿಪುಣಕಾರ್ಯನುಕಾರಿಗಳ ।
ದಿನಿಪಿನುದ್ಯೋಗಗಳ ಮಾಳ್ಪರಿಗೆ ನೇಮಿಸಿದ ।
ರಿನ ವೇಳ್ದ ತೆರದೊಳಾರಾಮಮಾರ್ಗಾಂತರವ ಸಿಂಗರಿಪ್ಪದೆನುತ ಮಾದದಿ ॥ (16)
ಪಿಡಿದು ಸೂತ್ರವ ನೆಲನನೊಂದಮಾದಿರಿಯಂಗೈದು ।
ಕಡಿದುತರುಗುಲ್ಮಗಳ ಕಂಟಕೋದ್ವೃತ್ತಗಳ ।
ನೊಡನೆ ಪರಿಹರಿಸಿ ನಿಮ್ನೋನ್ನತಗಳಂ ಸಮತೆಗೆಯ್ದು ನೆಳಲಿಲ್ಲದೆಡೆಯು ॥
ಸಡೆಗರದ ತರುಗಳಂ ನಿರ್ಮಿಸಿ ಲತಾವಿಗಳ ।
ಕಡಿದಲ್ಲಿ ಕಾಸಾರಪದ್ಮಾಕರಂಗಳಂ ।
ತಡೆಯದನುಗೈದುಭಯಪಾರ್ಶ್ವದೊಳ್ ತೋರಣಗಳಂ ರಚನೆಗೈದರಾಗ ॥ (17)
ಪನ್ನೀರ್ಗಳಂ ತಳಿದು ಧ್ವಜ ಪತಾಕೆಗಳೆತ್ತಿ ।
ಕನ್ನಡಿಯತೋರಣಗಳಂ ರಚಿಸಿ ಸುರ ಮಾರ್ಗ ।
ವೆನ್ನುವಂದದಿ ಸೊಗಸ ಬೀರಲಾಮಾರ್ಗಮಂ ಸಮತೆಗೈವುತ್ತಲಿರಲು ॥
ಚೆನ್ನಾಗಿನೆರೆದ ಸಭೆಯಂಕಳುಪಿ ಮನೆಗಳಗೆ ।
ತನ್ನನಿಳಯುವನಾರಿ ಶತ್ರುಘ್ನ ಸಹಿತಗಮು ।
ನೋನ್ನತೆಯು ನೆನವುತಂ ಪವಡಿಸಿದ ಭರತ ಸುಖ ನಿದ್ರಿಮಿಂದಾಲಯದೊಳು ॥ (18)
ಅರುಣೋದಯದ ಸಮಯದಲ್ಲಿ ಶ್ರುತಿಪಾರಕರ್ ।
ವರಶಂಖದುಂದುಭಿಮೃದಂಗಾದಿವಾದ್ಯಗಳ ।
ಪರಿಪರಿಯು ಗಾಯನಾಪಿಗಳ ನೆಸಗಲ್ ಧ್ವನಿಯು ಭರಿತಮಾಗಲ್ ಗೃಹದೊಳು ॥
ಭರತ ಕೇಳ್ದಿಚ್ಚರಂಗೊಂಡು ಗಾನಾದಿಗಳ ।
ಪರಿಹರಿಸುತರಸಲ್ಲ ತಾನೆನ್ನು ತಲ್ಲರೊಡನೊರೆದು ।
ಪೊರಟೈತಂದು ಶತ್ರುಘ್ನನೊಡನೆಂದ ನಿಜಮನೋವೃತ್ತಿಯನ್ನು ॥ (19)
ನೆಲಪಿರ್ದ ಪರ್ಯಂತಮಪಕೀರ್ತಿ ಯಡಸುವಂ ।
ತಲಘುಪ್ರಯತ್ನಮಂಗೈದು ನಿರ್ಲಜ್ಜೆಯಿಂ ।
ಲಲನೆಯೊಳರ್ಪಳಾಕೈಕೆ ಪೊಲಗೆಲಸಕೆನ್ನೇನೆಂಬೆನೇಂಗೈದಪೆಂ ॥
ಕುಲವಿನಾಶನಕೃತ್ಯಮಡಸಿತೆಂದಳುತಿರಲ್ ।
ಕೆಲಬಲದ ಶುದ್ಧಾಂತಜನರೆಲ್ಲ ಶೋಕಸಂ ।
ಕಲಿತಮಾನಸರಾಗಿ ಪಲುಬಿದರ್ ಮಾತ್ರಾತನೊಡನೇನ ವೇಳ್ವ ಪರಿಯು ॥ (20)

ಅನಿತರೊಳ್ ಭೂಸುರರ ಬಾಹುಜವಣಿಗ್ಜನರ ।
ಘನರಾಜ ಪುತ್ರರೊಳ್ ಬೆರದಾವಸಿಷ್ಠಬಂ ।
ದನುನಯದಿ ಚಿತ್ರಚಾವಡಿಯಲ್ಲಿ ಮಂಡಿಸಿದ ಪಟ್ಟಾಭಿಷೇಕಗೈವೆ ॥
ನೆರುತಖಿಳವಸ್ತುಗಳ ನೆರಹಿ ಸಂಭ್ರಮದಿಂದ ।
ಜನನಾಥ ಮಂತ್ರಿಗಳ ಕರೆಸಿ ಪೇಳದ ಮುನಿಯು ।
ಮನದಿರವ ಕಂಡು ಕಡುಗೊಪದಿಂ ಭರತನೆಂದಳಲಿದನದೇವೇಳ್ವೆನು ॥ (21)

ಮರುಗುತಿಹ ಭರತನಂ ನೋಡಿ ಮುನಿಯಿಂತೆಂದ ।
ದೊರೆತನವ ನಿನಗಿತ್ತು ಗಮಿಸಿದಂ ದಶರಥಂ ।
ಸುರನಗರದತ್ತ; ಶ್ರೀರಾಮ ಪಿತೃವಾಕ್ಯವಿಡಿದೈದಿದಂ ವಿಪಿನದೆಡೆಗೆ ॥
ಸುರರಾಜನಾಧಿಪತ್ಯಕೆ ಮಿಗಲ್ ನೋಡೆ ಸಭೆ ।
ವರಸುಧರ್ಮಾಧಿಕ್ಯಕೆದಕೊಡೆಯನಾಗಿ ನೀಂ ।
ಪೊರೆವುದೆಲ್ಲರನೆನುತ ಗುರು ನಿರೂಪಿಸೆ ಭರತ ಕೋಪದಿಂದಿಂತೆಂದನು ॥ (22)

ಎಲ್ಲ ಧರ್ಮವ ತಿಳಿದ ಸರ್ವಜ್ಞರೀಪರಿಯ ।
ಸೊಲ್ಲಿಸಿದರಿದಕುತ್ತರವ ನೀವರೆನಗಳವೆ ।
ಬಲ್ಲವಿಕೆಯೇನಾಯ್ತು ಸಗರರಘುವಜಮಹಾರಾಜರಿಂವಧಿಕತರದ ॥
ಬಲ್ಲಿದನೆ ಜೇಷ್ಠಧರ್ಮಿಷ್ಠರಗ್ಗಳಪಟ್ಟ ।
ದಲ್ಲಿರ್ದನರುಹನಲ್ಲದೆ ನಾಂ ಸಮರ್ಥನೇ ।
ಸೊಲ್ಲಾಡಲಾಂ ಪತಿತ ಕುಲಘಾಂಸನನೆನಿಪ್ಪೆನಲ್ಲದಾಂ ಸುಖಿಯಪ್ಪೆನೇ ॥ (23)

ಪಿರಿಯರ್ ಸ್ವತಂತ್ರರೇನೆಸಗಿದೊಡವೃತ್ತಮಂ ।
ಕಿರಿದಾದೊಡಂ ಧರ್ಮಮಾರ್ಗಮಂ ಬಿಟ್ಟರವ ।
ರುರುತರದಪಾತಕಿಗಳಲ್ಲದಾರುಂ ಮೆಚ್ಚರದರಿಂದಲಾನೆ ಪೋಗಿ ॥
ಚರಣಕಾನತನಾಗಿ ಪಿತನಿತ್ತ ರಾಜ್ಯ ಮಂ ।
ಹರುಷದಿಂದೊಪ್ಪಿಗಿಸಿ ಪಾದುಕದ ಚಾಕರಿಯ ।
ಲಿರುವೆ ರಾಮನ ಪಾರ್ಶ್ವದಲ್ಲಾನು ಧೊರೆತನಕೆ ಯೋಗ್ಯನಲ್ಲೆಂದು ನುಡಿವಂ ॥ [24)

ಮಾತೆಯೆಸಗಿದ ಪಾಪಮೆನಗಿಲ್ಲ ಶ್ರೀರಾಮ ।
ತಾತನಿಂದಗ್ಗಳನೆನುತ್ತ ತಿಳಿದುಂ ಪೋಪ ।
ಮಾತ ನಿಶ್ಚಯಗೈದು ಮಾರ್ಗಮಂ ಸಮಗೈಯುಕಳ್ಳುಪಿರ್ದ ಧೀಮಂತರಾ ॥
ಯಾತ್ರೆಪರುರವಣೆ ಯೆನಗೆ ಕಸವಂಪೊರುವ ।
ಜಾತಿಗೆಂದಿಗು ಮಹೋನ್ನತಿಕೆ ದೊರೆವುದೆ ಬರಿದೆ ।
ಯಾತಕೆನ್ನಂ ಬನ್ನಗೊಳಪಿರಿದನುಳದಿರ್ಪುದುಚಿತವೆಂದೊರೆದು ಬಳಿಕ ॥ (25)

ಕರೆದು ಚರರೊಳ್ ಪೇಳ್ದ ಚತುರಂಗಬಲಸಹಿತ ।
ಬರಲಿ ಸೇನಾನಿಗಳೆನುತ್ತ ನೇಮಿಸಿ ಸೂತ ।
ಗೊರದ ಭರತಂ ತನ್ನ ರಥವ ಬೇಗದಿ ತಂಸವೇಳ್ಕನಲ್ ಜವದಿಪೋಗಿ ॥
ತುರಗಂಗಳಂ ಪೂಡಿ ತ್ವರಿತದಿಂ ಸಿಂಗರಿಸಿ ।
ಧೊರೆಯುಮುಂಗಡೆಯ ನಿಲಿಸಲ್ ನೋಡಿ ಸಂತಸದಿ ।
ಪರಮಋಷಿಗಳ್ ನೆರೆದ ಜನರೆಲ್ಲ ತಮ್ಮೊಳಗೆ ತಾವೆ ವಿಸ್ಮಿತರಾದರು ॥ (26)

ಕರಕಲಿತರಾಜ್ಯಾಧಿಪತ್ಯಭೋಗವನುಳಿದು ।
ಪರವ ಚಿಂತಿಸಿ ರಾಮನಂ ಕಂಡು ರಾಜ್ಯಮಂ ।
ಚರಣಕರ್ಪಿಸಿ ದಾಸ್ಯದಿಂದಿರ್ಪೆನೆಂದೆಳಸಿದೀ ಬುದ್ಧಿಯತಿಶಯವನು ॥
ಬೆರರಿಂದ ಪೊಗಳ ತೀರುವುದೆ ನಿರ್ಮಲವಾದ ।
ಕರಣವೈರಾಗ್ಯನಿಧಿಯೊ ಭರತನೆಂದಾಗ ।
ಪರಮಋಷಿಗಳ್ ಸುಮನ ಸಂತೋಷದಿಂದ ನಿಜನಿಳಯಂಗಳ್ಗೈದಲಿತ್ತ ॥ (27)

ರಾಮಚಂದ್ರನ ಕರೆಯಲ್ಕೈದುವಂ ಭರತನೆಂ ।
ದಾ ಮಹಾಪಟ್ಟಣದ ನಿಖಿಲಪ್ರಜಾಪರಿವಾರ ।
ಸೌಮಂತ್ರಮುಖ್ಯರೀವಾರ್ತೆಯಂ ಕೇಳುತ್ತ ಹರುಷರಸಮಂ ತುಳುಕುತ ॥
ಸಾಮಜಂ ಘೋಟಕಂ ಶಕಟ ಶಿಬಿಕಾದಿಸ್ವ ।
ಪ್ರೇಮವಾಹನಗಳನಲಂಕರಿಸಿ ಸಂತಸದ ।
ಲಾ ಮಹೋತ್ಸಾಹಮಂ ನಿಟ್ಟಿಪಫಲಾಪೇಕ್ಷೆಯಿಂ ಪೊರಪಾಳೆಯಂಗೈದರು ॥ (28)

ಪ್ರೀತಿಯಿಂದಣ್ಣನಂ ಕರೆತರು ಪೋದ್ಯೈತಹ ಮ ।
ಹಾತಿಶಯವಿಭವಮಂ ಕೌಸಲ್ಯೆ ಲಕ್ಷ್ಮಣನ ।
ಮಾತೆ ಮುಂತಾದವರ್ ಕೇಳಿ ಸಂತಸದಿಂದಲೊಸನ್ಯೆದಲಿಚ್ಛೆಗೈದ ॥
ಮಾತ ಕೇಳುತ ಕೈಕೆ ಮನದ ಹರ್ಷದಿ ಪೋಗಿ ।
ಪಾತಕವನೀಗಲೆಂದಖಿಲಸನ್ನಾಹಸಂ ।
ಪ್ರೀತಳೆನಿಸಲ್ಕಮಿತನಾರೀಕದಂಬಕಂ ಪೊರಮಟ್ಟುದೇನೇಳ್ವೆನು ॥ (29)

ಅಂತಃಪುರಾಂಗನೆಯರಮಿತಪ್ರಜಾಪರಿವಾರ ।
ಸಂತರು ಯಾಯಜೂಕಾದಿಗಳ್ ಪರಮಪ್ರಿಯು ।
ಪಾಂತು ಮುಂದೈದಲೆಂದತಿಹರುಷಗೊಳುತ್ತೈದಲಾಗ ಭರತಂ ನಲಿವುತ ॥
ಮುಂತೆ ಮಾತೆಯರನೊಡಗೊಂಡು ಶತ್ರುಘ್ನಸಹ ।
ಚಿಂತಿತಮನೋರಥಂ ಫಲವಾದುದೆಂದರಿತು ।
ಸ್ವಾಂತಾನುರಾಗದಿಂ ಚತುರಂಗ ಲವೆರಸಿ ನಡೆದನಣ್ಣನ ನೋಳ್ಪೊಡೆ ॥ (30)

ಪೊಡವಿ ಬೆಸಲಾದಂತೆ ಪಡೆನಡೆಯಲುಂ ಮುಂತೆ ।
ತುಡುಕಲಭ್ರವ ರಜೋಭರ ದೇವಗಂಗೆ ಕಾ ।
ಲ್ನಡೆಯೆನಿಸಲಮರತತಿತಲ್ಲಣಂ ಗೊಳುತಿರಲ್ ಧ್ವಜಪಟದ ಬಿರುಗಾಳಿಯು ॥
ಪೊಡೆಯೆ ಸಗ್ಗದೊಳುಳ್ಳ ನಾರೀಜನಂ ಪತಿಗ ।
ಳೆಡೆವಿಡದೆ ತಳ್ಕೈಸಲದು ಪ್ರಳಯಕಾಲಮಂ ।
ತುಡುಕುವ ಮಹಾನಿಲನೊ ಎನು ತೊರ್ವರೊರ್ವರುಂ ಕಂಗೆಟ್ಟು ಚಿಂತಿಸಿದರು ॥ (31)

ಕರಿಗಳೊಂಭತ್ತುಸಾಸಿರ ತೇರ್ಗಳರವತ್ತು ।
ತುರಗ ಲಕ್ಕಂ ಲೆಕ್ಕವಿಲ್ಲ ಭಟಸಂದೋಹ ।
ಕರರೆ ಮುಗುಳುಳದ ಜನಮಿನ್ನೆಂತೊ ಪದಹತಿಗೆ ಭೂಕಂಪನಂಗೊಳುತಿರೆ ॥
ಅರಸನೆಡಬಲದೊಳಗೆ ಮಂತ್ರಿಗಳ್ ಋಷಿನಿವಹ ।
ಪರಿವೇಷ್ಟನಂಗೈದು ಶ್ರೀರಾಮನಂ ಕಾಣ್ಬ ।
ಹರುಷದಿಂದಾತನ ಗುಣಂಗಳಂ ನೆನೆನೆನೆದು ಸಲ್ಲಾಪಗೈದಿರ್ದರು ॥ (32)

ಗತಿವಿಡಿದು ಜವದಿಂದ ಬೇಗ ರಾಮನ ನೋಳ್ಪ ।
ರತಿಶಯದ ಜನರಹಂಪೂರ್ವಮೆನುತ್ತೈದಿ ಬರೆ ।
ಚತುರಂಗಬಲಮವರನನುಸರಿಸಿ ಹರ್ಷದಿಂ ನಡೆಯಲಾ ಮುಂಗಡೆಯೊಳು ॥
ಕತಿಪಯದಿನಂಗಳೊಳ್ ಬಂದು ಗಂಗಾತಟ ।
ಕ್ಷಿತ್ರಿಯಪಾರಲ್ ಕಂಡು ಭರತ ಮಂತ್ರಿಗಳೊಡನೆ ।
ಹಿತದಿಂದಲೊರೆದನಿಂದಿನದಿನಂ ಬಲಮಿಲ್ಲಿ ನಿಂದು ವಿಶ್ರಮಿಸಲೆನುತ ॥ (33)

ವೇಳೆ ಸುರನದಿಯೊಳವಗಾಹನಂಗೈದು ತ ।
ನ್ನಾಳಪೊಡೆಯನ ನೆನೆದು ಪಿತೃತರ್ಪಣಾದಿಗಳ ।
ತಾಳದಿತ್ತಖಿಲಭೂಸುರರ ತೋಷಣೆಗೈದು ಭರತ ಕುಳ್ಳಿರಲಿತ್ತಲು ॥
ಕೋಳಾಹಳಧ್ವನಿಯ ಕೇಳಿ ಗುಹ ಚಿಂತೆಯಿಂ ।
ತಾಳಿ ನಿಜಬಲಮೆಲ್ಲಮಂ ಮೊತ್ತಗೈದು ಮಗು ।
ಳಾಳೋಚನಂಗೈವನೀ ಮಹಾಸೇನೆ ಯೇಂಕಾರಣದೊಳೈದಿತೆನುತ ॥ (34)

ತೋರಾಯಬಲಮಿಲ್ಲಿಗೈತಪ್ಪುದಿಂದಿದೇಂ ।
ಕಾರಣಮೊ ಮತ್ತಾರ ದೊರೆಯಿದಾರ್ಬಲಮೆಂದು ।
ಹೇರಾಳಚಿಂತೆಯಿಂ ನಿಷಾದಾಧಿಪತಿ ತನ್ನ ಜನ ಪೆರದು ನೋಡುತಿರಲು ॥
ತೋರಲಾಕ್ಷಣ ಕೋವಿದಾರಕೇತನ ರಿಪ್ರವಿ ।
ದಾರಣೋದ್ಧತಸತ್ವದಿಂದ ಕಾಣುತ ಗುಹನು ।
ದಾರಶಕ್ತಿಯೊಳಖಿಲಬಾಂಧವರನೆಲ್ಲರಂ ಕರೆದು ಸೂಚಿಸಿದನೊಂದು ॥ (35)

ದುರುಳತನದಿಂ ರಾಮನಂ ವಿಪಿನದೆಡೆಗಟ್ಟಿ ।
ದೊರೆತನವನಾಕ್ರಮಿಸಿ ನಿಷ್ಕಂಟಕಂ ಗೈವ ।
ಪರಿಯ ತನ್ನೊಳ್ ತಿಳಿದು ನೆರಹಿ ಬಲಮಂ ಜವದೊಳೈದಿ ರಘುನಂದನನನು ॥
ಸೆರೆವಿಡಿಯಕೊಂಡೊಯ್ವ ದುರ್ಬುದ್ಧಿಯಿಂ ಬಂದ ।
ಪರಿಯಾಗಿ ತೋರುತಿದೆ ರಾಮನೆ ಸಹಾಯಮೆಂ ।
ದರಿತೆಮ್ಮ ತಂದಿಡುವನೀ ಭರತನತಿಕ್ರೂರ ಕೃಪಣ ಕುಲಘಾತಕನಲೆ ॥ (36)

ಅರಸುತನವಂ ಬಿಟ್ಟು ಮುನಿವೃತ್ತಿಗಳವಟ್ಟು ।
ವರವಿಪಿನದೊಳಗಿರ್ಪರಿದ ನೋಡಿ ತಾಳದಲೆ ।
ಹುರಿಗೊಂಡು ಬಂದಿರ್ಪ ಭರತ ನಿಜಬಲಗೂಡಿ ನದಿಯನುತ್ತರಿಸದಂತೆ ॥
ಶರಚಾಪಗಳ ಪಿಡಿದು ಶರದೊತ್ತನಾಶ್ರೈಸಿ ।
ಪರಿಪರಿಯುಪಾಯಗಳನೆಸಗಿ ಬಲಮಂ ಮುಂದು ।
ಸೆರೆವಿಡಿಯವೇಳ್ಕು ಭರತನನೆಂದು ನಿಜಬಲಕೆ ಸೇಮಿಸುತ ಮಗುಳೆಂದನು ॥ (37)

ಇನಮಿತ್ರಬಾಂಧವಂ ಪಿರಿಯಗುರುದೇವತಾ ।
ತ್ಮನುರಾಮನೆಮಗೆ ಮತ್ತಾತಗೋಸುಗಮೆಮ್ಮ ।
ತನುಧನಪ್ರಾಣಂಗಳೊಪ್ಪಗಿಸು ನಿಷ್ಠೆಯಿಂದಿರ್ಪುದೇ ನನ್ನಿ ಯೆನುತ ॥
ಮನವೊಲಿದು ಬಾಂಧವರೊಳೊರೆದು ಮತ್ತಾತನೆಡೆ ।
ಗನುವಿಂದ ತೋರ್ಪನಾಗೈದಿ ತದ್ವೃತ್ತಾಂತ ।
ವನು ತಿಳಿದು ಬಹೆನೆನುತ ಮಧುಮಜ್ಜಮಾಂಸಗಳಗಳಸಿದಂ ಕಪ್ಪಕೆನುತ ॥ (38)

ಕಪ್ಪಮಂ ಪಿಡಿದು ನೂರ್ವರ್ ವೆರೆದು ಸಮ್ಮುಖಕ್ಕೆ ।
ತಪ್ಪ ಗುಹನಂ ದೂರದೊಳ್ ಕಂಡು ಭರತ ಹಿತ ।
ಮಪ್ಪ ಮಂತ್ರಿಗಳೊಡನೆ ಸೂಚಿಸಿದ ನಿವನಣ್ಣಗಾಪ್ತನೈತರುವನೆನುತ ॥
ಕಪ್ಪದಾವೃತ್ತಾಂತಮೆಲ್ಲಮಂ ಪೇಳ್ವೆನೆನು ।
ತಿಪ್ಪನ್ನ ಕರವಿಡಿದು ಬಂದು ಕಾಣಿಕೆಗೊಟ್ಟ ।
ರಪ್ಪಿನಿಂ ಪ್ರೀತಿಯಿಂ ಕುಳ್ಳಿರಿಸಿ ಕುಶಲಮಂ ಕೇಳ್ದಮಂ ಭರತ ನೊಲಿದು ॥ (39)

ಕರವಿಡಿದು ಕುಳ್ಳಿರಿಸಿ ಯುಪಚರಿಸುತಿಹ ಭರತ ।
ನಿರವ ನಿಟ್ಟಿಸಿ ಸುಮಂತ್ರಂ ನುಡಿದ ದೇವನಿವ ।
ಪರಮಪ್ರೀತಂ ರಾಮಚಂದ್ರಮನಿಗಿವ ಸುಮಿತ್ರಾತ್ರತನಯಗಧಿಕಮಿತ್ರ ॥
ವರಧನುಷ್ಪಾಣಿಗಳನೇಕಮಿಹರೀ ವಿಪಿನ ।
ಚರರೆಲ್ಲ ದಾಸರೆನಿಸಿರ್ಪರೀಗುಹನಿಗೆಂ ।
ದೊರೆವನಿತರೊಳಗೆದ್ದು ಕರಗಳಂ ಮುಗಿದು ನಿಜಭಕ್ತಿಯಿಂ ಶಬರ ನುಡಿವಂ ॥

ದೇವ ದಯದಿಂದೆಮ್ಮ ನಿಲಯಕ್ಕೈತಂದುದಿದು । [(40)
ಪಾವನಿತ್ರಮಾದುದಖಿಲಾವನಿ ಮದೀಯಕುಲ ।
ಪಾವನಕೆ ಪಾವನಮೆನಿಪ್ಪಂತೆ ಕೃತಪುಣ್ಯಫಲಮಿಂದು ಫಲಿಸಿದಂತೆ ॥
ಭಾವನೆಯನಾಂತುದೆನ್ನಯ ಚಿತ್ತದಧಿಪನಂ ।
ಭಾವನೆಯಕೈಕೊಂಡು ಪೊರೆವುದೆಂದೆರಗುತಂ ।
ಕೋವಿದಂ ಬಿನ್ನವಿಸೆ ನಸುನಗುತಲಿಂತೆಂದ ಭರತನತಿವಿನಯದಿಂದ ॥ (41)

ಬಲಸಹಿತಲೆಮಗೆ ಭೋಜನಗೈಸಲಿಚ್ಛೈಪೆ ।
ಯಲಘುಮತಿ ರಾಮ ನಿನ್ನಿಂ ಪೂಜೆಗೊಂಡೈದಿ ।
ಲಲಿತದಿಂ ಚಿತ್ರಕೂಟಕೆ ನಡೆದನೆನ್ನುವೀ ವೃತ್ತಂ ಸುಮಂತ್ರನಿಂದೆ ॥
ಪಲಬಗೆಯೊಳಂ ಕೇಳ ತುಷ್ಟರಾದೆವು ವಿಪಿನ ।
ದೊಲವರಿತು ಸೇನೆಯಂ ಭಾಗೀರಥಿಯ ಕಳೆವ ।
ಪೊಲಬ ತೋರುವುದೆನಲ್ ನಸುನಗುತ ಕೈಮುಗಿವುತಿಂತೆಂದ ಶಬರ ಮಣಿದು ॥
[(42)

ನೆರೆದಿದೆಕೊಸೇನೆ ಗಣಿಸಲ್ ಬಾರದಂದದಿಂ ।
ಕರಿಹಯರಥಂಗಳಿಂದಮಿತಭೀಷಣಮೆನಿಸಿ ।
ಪರಿಪರಿಯಸನ್ನಾಹದಿಂ ದೇವರೈತಂದ ಬಗೆಯೆನ್ನ ಮನಕೆ ಭಯಮಂ ॥
ಕರೆವುತಿದೆ ಮತ್ತೀಸುಪಾಯ ಭವದೀಯ ಸುಖ ।
ಕರಚಿತ್ರ ನೆನದಿಹುದೊ ನಾಂ ತಿಳಿಯೆನೆಂದು ಗುಹ ।
ನೊರೆಯೆ ಭರತಂ ಕೇಳ ಮೃದುಮಧುರವಾಣಿಯಿಂ ಮತ್ತಾತಗಿಂತೆಂದನು ॥ (43)

ಕಲುಷಹೃದಯರ ನೋಡಿ ಶಂಕಿಸುವ ಮೌಳ್ಯಯಿಂ ।
ದುಳಿವ ಬೆಸನೆನ್ನಮನ ಕಂಡಿಹುದು ಸತ್ಯಸಂ ।
ಕಲಿತಭಾಷೆಯನುಸಿರ್ಪ ನಿಷಾದಾಧಿಪತಿ ಕೇಳ್ ಬೊಪ್ಪನಿಂದಧಿಕಮೆನುತ ॥
ಕುಲಪರಂಪರೆಯ ಸಚ್ಚರಿತಗಳ ನೆಸೆದು ರಘು ।
ತಿಲಕನಂ ಕರೆತರಲ್ಕೈದುವೆಂ ಸತ್ಯದಿಂ ।
ಚಲಿಸದೆನ್ನಯ ಮನಂ ಗುರುವಿನಂಘ್ರಿಗಳಾಣೆ ಧರ್ಮಮಂ ಮಾಣೆನನಘ॥ (44)

ಎನುತನಿರ್ಮತ್ಸರದೊಳೊರೆದ ಭರತನ ಚಿತ್ತ ।
ದನುವ ನಿಶ್ಚೈಸಿ ಗುಹಂ ಸಂತೋಷಮಯನೆನಿಸಿ ।
ಜನನಾಥ ನೀಂ ಧನ್ಯ ಮಾನ್ಯನೀ ಜಗತಿಯೊಳು ಪಾಸಟಿಯನಿಡಲಪ್ಪುದೆ ॥
ತನಗೆ ತಾನೈತಂದ ರಾಜ್ಯಮಂ ಬಿಟ್ಟು ಕಾ ।
ನನಕೈದಿದಣ್ಣನಂ ಕರೆತರುವರೈ ತಂದೆ ।
ವನಜಸಖ ಶಶಿಯಿರ್ಪತನಕ ನಿನ್ನಯ ಕೀರ್ತಿ ಬೆಳಗಿತಲೆ ಮೂಲೋಕದಿ ॥ (45)
ಚಿತ್ತನಿರ್ಮಲತೆ ಸಾಧುತ್ವ ಶಮ ದಮ ಕ್ಷಾಂತಿ ।
ಯುತ್ತಮದ ಮತಿಗೆ ನೀನೇ ನಿಲಯಮಲ್ತೆ ಮಗು ।
ಳುತ್ತಮರು ನಿನ್ನಿಂದಲಾರುಂಟು ಮೂಜಗದೊಳರಸ ನೃಪಕುಲರತ್ನವೆ ॥
ಬಿತ್ತರಿಸಲೆನಗಳವೆ ಭವದೀಯಗುಣವ ಶರ ।
ಣೋತ್ತಮನಚರಣದರ್ಶನದಿಂದಲಾಂ ಸುಕೃತ ।
ವೆತ್ತೆನೆನುತಾಗಲಾನಂದಮಯನಾಗುತ್ತ ನುತಿಸಿದಂ ಪರಿಪರಿಯೊಳು ॥ (46)
ನಾವಿಕೋತ್ತಮಭರತರೀ ಪರಿಯ ಸಲ್ಲಾಪ ।
ಭಾವನೆಯೊಳರುವ ವಾರ್ತೆಯನು ತ್ವರಕೈದಿ ।
ಠೀವಿಯಿಂದುಸಿರಿ ಬಹೆನೆನುತ ರವಿ ಪಡುಗಡಲೊಳಿಳಿಯೆ ಸಂಧ್ಯಾದಿಗಳನು ॥
ಸಾವಧಾನದಿ ವಿರಚಿಸಿ ಶತ್ರುಘ್ನ ಸಹಿತ ನಿಜ ।
ದೇವತಾರಾಧನಂಗೈದು ಪವಡಿಸಲೈದಿ ।
ಶ್ರೀವಧೂರಮಣ ಶ್ರೀರಾಮಪುರದೆರೆಯನಂ ಧ್ಯಾನಿಸಿದ ಭರತ ಮುದದಿ ॥ (47)

॥ ಸಂಧಿ 26 ಪದ 1166 ॥

ಇಪ್ಪತ್ತೇಳನೆಯ ಸಂಧಿ

ಸೂಚನೆ ॥ ಶೃಂಗಿವೇರಪುರಾಧಿನಾಥನುಪಚರಣೆಗಳ ।
ಭಂಗುರ ಸ್ನೇಹದಿಂದಿರುಳಿರ್ದು ಬ್ರಹ್ಮಋಷಿ ।
ಪುಂಗವಭರದ್ವಾಜರಾಶ್ರಮಕ್ಕೈತಂದ ನಿಜಸೇನೆಸಹಿತ ಭರತಂ ॥

ಕೇಳದ್ವಿಜಾತಿ ರಘುವೀರನಂಘ್ರಿಯ ನೆನೆದು ।
ತಾಳದುರುಚಿಂತೆಯಿಂ ತನು ಬೆಮರಿ ಬೆಂಡಾಗು ।
ತಾಳೋಚನಂಗೈದನುತ್ತಮೋತ್ತಮಗುಣಕದಂಬಕಗಳಂ ನೆನೆವುತೆ ॥
ಖೂಳಮಾತಾಕೃತ್ಯ ಕುಲದ ಸಚ್ಚರಿತೆಯಂ ।
ಜಾಳುಗೊಳಿಸಿದುದೇನ ಪೇಳ್ವುದೇನಳಲುತಿರೆ ।
ಕೇಳು ಮೃದುತರನುಡಿಗಳಂ ಗುಹನುಪಚರಿಸುತಿಂತೆಂದ ವಿನಯದಿಂದ ॥ (1)
ಸೂತನೊಡವೆರೆದು ಸೀತಾತೃತೀಯಂ ರಾಮ ।
ನೀತಾಣಕ್ಕೈತಂದರಾಂ ಬಂದು ವಂದಿಸುತ ।
ಪೂತವಮಾಂಸಾದಿಗಳ ಕರವಿಡಿದು ಧನಧಾನ್ಯಸಿರಿರಾಜ್ಯತನುಗಳನ್ನು ॥
ಪ್ರೀತಿಯಿಂದೊಪ್ಪಗಿಸೆ ಪಿತುರಾಜ್ಞೆಯಿಂದ ವನ ।
ವ್ರಾತಂಗಳೊಳ್ಚರಿಸ ವೇಳ್ಕುವಿಪ್ರ ನಮ್ಮಟವೆ ।
ನೀತಮೆನಿಸಲ್ ನಿಸಿಯ ನೊಂದುನೆಲೆಯಂ ತೋರ್ಪುದೆನುತಲಾಜ್ಞಾಪಿಸಿದರು ॥ (2)

ಗುರು ದೈವ ಪ್ರಾಣ ಸಖ ದೊರೆ ಯೆನಗೆ ರಘುವೀರ ।
ಚರಣಂಗಳಿಗೆ ಶರೀರವನಿತ್ತು ಸತ್ಕೀರ್ತಿ ।
ವೆರೆದವನೆನುತ್ತಾವ ಪರಿಯಿಂದಲುಪಚರಿಸೆ ತೃಣಕೊಡೆಂಬಡದೆ ಬಲವಾ ॥
ಕರದಿಂದ ಪ್ರಾಶನಂಗೈದ್ಯೈದುದಿಂಗುಡಿಯು ।
ತರುನೆಳಲೊಳೆಳೆದಲರ ಪಾಸಿಕೆಯ ಮಧ್ಯದೊಳು ।
ಧರಣಿಜಾತೆಸಮೇತ ಮಂಡಿಸಿದರೇನೆಂಬೆನಚ್ಚರಿಯ ಬಿನ್ನಣವನು ॥ (3)

ದೂರದೊಳ್ ಲಕ್ಷ್ಮಣಂ ಶರಚಾಪಗಳ ಪಿಡಿದು ।
ದಾರಭಕ್ತಿಯೊಳು ಜಾಗ್ರತೆಯಿಂದಲಿರೆ ಕಂಡ ।
ಪಾರಚಿಂತೆಯೊಳಾನು ಪೊರೆಗೈದಿ ಪ್ರೀತಿಯಿಂ ಮಗಜಸುತಿಂತೆಂದನು ॥
ವೀರಧರಣೀಧರೋಚಿತ ದಿವ್ಯಶಯ್ಯೆಗಳ ।
ತೋರಭೂಷಣ ಪಕ್ವಫಲಗಳಂಗೀಕರಿಸ ।
ದಾರಣ್ಯವಾಸಿಗಳ ಪರಿಯನನುಕರಿಸಿದಂ ರಘುನಾಥನೇನೆಂಬೆನು ॥ (4)

ಪ್ರೀತಿಯಿಂದಾಂ ತಂದ ವಸ್ತುಗಳನಿನಿತಾಗೆ ।
ಜಾತುಚಿತು ಸುಕೃತಕರಮಲ್ಲ ಮಾದುದು ಪ್ರಿಯದಿ ।
ತಾತ ಮತ್ತಿವನೆಲ್ಲ ಕೈಕೊಂಡು ಮೃದುತಲ್ಪದೊಳು ಸುಖದಿ ನಿದ್ರಿಸುವುದು ॥
ಜ್ಞಾತಿಜನರೊಡವೆರೆದು ಜಾಗ್ರತೆಯೊಳಹೆ ನಾನು ।
ಈತಾಣದಿರವೆನಗೆ ತಿಳಿದಪುದು ಭಯಮಿಲ್ಲ ।
ದೇತಕಾಲಸ್ಯಗೈದಪೆಯೆನುತಲಾನೊರೆಯೆ ಸೌಮಿತ್ರಿ ನಗುತೆಂದನು ॥ (5)

ನೆಲದೊಳಗೆ ಪಾಮರರು ಕೇಳುತಿಹಗಾದೆಯಂ ।
ತಲೆಯುಳಿದು ಮೊಳಕಾಲ ಪೂಜಿಸುವರೆಂತೆಂಬ ।
ಪೊಲಬ ನೀನನುಕರಿಸಿ ರಘುವೀರ ಕಷ್ಟದೊಳಗಿಹನೀನು ಸುಖಪುದೆನುತ ॥
ಉಳಿವೆ ಯಚ್ಚರಿಯಲ್ತೆ ಜೀವಮುಳ್ಳೊಡೆ ದೇಹ ।
ಲಲಿತರಮ್ಯದಿ ತೋರ್ಪುದಲ್ಲದಿರೆ ಲೋಕಂಗೆ ।
ಚೆಲುವೆನಿಸಿ ತೋರ್ದಪುದೆ ಪೂರ್ವಜನ ಸುಖವೆಮಗೆ ಸುಖಮಲ್ಲದಿತ್ತರವುಂಟೆ ॥

ಧರಣಿಜಾತೆ ಸಮೇತ ತ್ರೈಲೋಕ್ಯನಾಯಕಂ । [(6)
ಧರೆಯ ಪಾಲಿಕೆಯೊಳಿರಲದ ನೋಡುತಾನೆಂತು ।
ಪರಿಯಂಕಶಯನಮಂ ಗೈದು ನಿದ್ರಿಪೆ ನಾವವಸ್ತುಗಳ ನೋಡಿ ನಲಿವೆ ॥
ಇರವೀತಕೆನ್ನ ಶಾರೀರದೊಳಗೆಂದು ಸಂ ।
ಭರಿತಭಕ್ತಿಯೊಳು ಸಂಕಟಗೊಳುವುದಾಂ ಕಂಡು ।
ಬೆರೆಸಿ ಜ್ಞಾತಿಗಳ್ಸಹ ರಾತ್ರಿ ಜಾಗ್ರತೆಯಲಿದ್ದು ಚಿಂತಿಸುತ ಮನದಿ ॥ (7)

ಅರುವತ್ತುಸಾಸಿರಬ್ದಂಗಳೊಳ್ ತಪವಿದ್ರ್ಗ ।
ತರಳನೆನುತಲಿ ಪರಮಪುರುಷನಂ ಪೆತ್ತು ಸಂ ।
ಭ್ರಂತಹರ್ಷವನುಂಬ ಸಮಯದಿ ದುರವಸ್ಥೆ ಘಟಿಸಲರಸೆಂತಿರುವನು ॥
ಅರಸನಾಯಾಸಮಂ ಕಂಡು ಕೌಸಲ್ಯೆಯುಂ ।
ತಿರುವಳು ಸುಮಿತ್ರೆ ದುರ್ದೆಸೆ ಕಾಲಕೆ ಬಂದಡಸಿ ।
ತರರೆ ವಿಧಿಕೃತವೆಂದು ತಲ್ಲಣಿಸಿ ಮರುಗಿದಂ ನೆನೆನೆನೆದು ಕಾರ್ಯದಿರವ ॥ (8)

ಅಂದಿನಿರುಳಿನ ಬಗೆಯದೆಂತೊರೆಯಲಳವಪ್ಪು ।
ದಂದು ಗುಹ ನುಡಿಯಲಾವಣಾತನಾಲಿಸಿ ಭರತ ।
ಕಂದಿದಾನನದಿಂದಲಿಂತೆಂದ ನೆಲೆಸಿಸುನೆ ಶ್ರೀರಾಮನಾ ನಿಶೆಯೊಳು ॥
ಬಂದು ಮಲಗಿದುದೆಲ್ಲಿ ಭೋಜನಮದೇಂಗೈದ ।
ನಿಂದುಮುಖಿ ಸೀತೆ ಮತ್ತಾವವಸ್ಥೆಯೊಳಿರ್ದ ।
ಳೊಂದನುಳಿಯದೆ ಪೇಳ್ವುದೆನೆ ದಾಶರಥಿಗಾತ ಬಿತ್ತರದೊಳಂ ಪೇಳ್ದನು ॥ (೯)
ಪರಿಪಕ್ವಫಲಪಕ್ವಫಲಗಳಂ ತಂದಿಟ್ಟು ।
ಕರೆಯ ನಿಟ್ಟಿಸದದಂ ಜಲಪಾನದಿಂದ ಬಂ ।
ಧುರದ ಸುಚ್ಛಾಯೆಯಿಂ ಕಂಗೊಳಿಸುವಿಂಗುದೀಭೂರುಹದ ಭೂಮಿಯಲ್ಲಿ ॥
ಪರಪಿ ತೃಣವಂ ಸೀತೆವೆರಸಿ ಪವಡಿಸಿದ ಮ ।
ತ್ತುರುಚಾಪಕೃತನೆನಿಸಿ ಸೌಮಿತ್ರಿಯಂತಿರ್ದ ।
ರರಿತಾನು ವಿಪಿನಚರರೊಡವೆರೆದು ಕಾಯ್ದಿರ್ದ ಮತ್ತೊಂದುತಾಣದಲ್ಲಿ ॥ (10)
ಎನುತ ಗುಹನೀಪರಿಯ ಬಿತ್ತರಿಸೆ ಕೇಳುತ್ತ ।
ಜನನಾಥತನಯ ಹಾ ಎಂದಳಲಿ ಧಗೆಗೊರಗಿ ।
ಘನರವದೊಳಳುತಿರಲ್ ಶತ್ರುಘ್ನಬಂದಪ್ಪಿ ನೆನೆಮಂ ಪ್ರಲಾಪಿಸುತಿರೆ ॥
ತನಯನುರವಂ ಕಂಡು ಕೌಸಲ್ಯೆ ಬಂದು ಮ ।
ತ್ತನುವ ಚಿಂತಿಸುತಪ್ಪಿ ಕಂಬನಿಗಳಿಡುತಿರಲ್ ।
ಅನಿತರೊಳ್ ಸೌಮಿತ್ರಿಜನನಿಮುಖ್ಯಸ್ತ್ರೀಜನರಳಲಿದುದನೇನೆಂಬೆನು ॥ (11)
ಆದುದವ್ಪುತಮಂದಿನಿರುಳು ನೋಳ್ಪುದಕಂಜಿ ।
ಪೋದನತಿದೂರಕಂದಾ ಗುಹಂ ಭರತಮುಂ ।
ತಾಪವರ್ ತಮತಮ್ಮ ಚಿತ್ತಾನುತಾಪಮಂ ತಂಪಿಸುವರಂ ಕಾಣದೆ ॥
ಬಾಧೆಗೊಂಡುದ ಪೇಳ್ವರಳವಲ್ಲಮನಿತರೊಳ್ ।
ಕ್ಷೋದೀಮ್ಯತಾಮಸಂ ಪಂಜುಮುಖಂಪೋಗೆ ।
ಮಾಧೇವಮಯ ಮೂಡವೆಟ್ಟದುದಿಯುನ್ನಡು ನೋಡಿದಂ ಪ್ರೀತಿಯಿಂದೆ ॥ (12)
ಅಳುತಳಲಿ ಬಳಲಿ ಭೂಮಿಸಾತಳದೊಳೊರಗಿರಲ್ ।
ಬೆಳಗನಿಟ್ಟಿಸಿ ಭರತನೆಚ್ಚತ್ತು ಕಜ್ಜಮಂ ।
ತಿಳಿದು ಶತ್ರುಘ್ನನಂ ಎಚ್ಚರಿಕೆಗೊಳಿಸಿದಂ ಪಯಣಸನ್ನಾಹಕೆನುತ ॥
ಕೆಳೆಯರಂ ನೋಡುವ್ರೊಡೆ ಗುಹ ನನಿತರೊಳ್ ಬರುತ ।
ಲೊಳಪೊಕ್ಕು ಕರಗಳಂ ಮುಗಿದು ವಂದಿಸಿ ಭರತ ।
ನೆಳದಳರಕರಗಳಂದೆತ್ತಿ ಗುಹನೊಡನೆಂದನತುಲಾನುಮೋದದಿಂದ ॥ (13)
ನಿಸೆಯೊಂದು ಯುಗಮಾದುದಯ್ಯ ನಿನ್ನಿಂದಾವು ।
ಪೊಸತಾದ ಸುಖದ ಸುಗ್ಗಿಯನುಂಡೆವಾದುದಾ ।
ವಶದಿಂದಲೀನದಿಯ ದಾಂಟಿಸಲ್ವೇಳ್ಕೆನುತಲಾಜ್ಞಾಪಿಸಲ್ಕೆ ಗುಹನು ॥
ಸಸಿನ್ಗೈದಿ ನಿಜಬಂಧುವರ್ಗಮಂ ನೆರಹಿ ಘನ ।
ದೆಸಕದಿಂ ಪಂಚಶತನಾವೆಗಳ ಸಂಗ್ರಹಿಸಿ ।
ಪೊಸಕರೀರಗಳಲಂಕೃತಮಾದ ಸ್ವಸ್ತಿಕವ ತಾಂ ಪಿಡಿದು ಬಂದನೊಲಿದು ॥ (14)

ತ್ವರಿತದಿಂದೈತಂದು ಬಿನ್ನವಿಸೆ ಶತ್ರುಘ್ನ ।
ವೆರಸಿ ಭರತಂ ಸ್ವಸ್ತಿಕಾರೋಹಣಂಗೆಯ್ಯೆ ।
ಹರುಷದಿಂದಂತಃಪುರಾಂಗನೆಯರೆಲ್ಲರುಂ ನಾವೆಂಗಳೊಳ್ ಕುಳ್ಳಿರೆ ॥
ತರಣಿಯುಂ ಯಾಯಜೂಕಾದಿಗಳ್ ಕ್ರತುವಿಹನ ।
ಪೊಗೆಯೊಳ್ದಾರ್ಗೋಹಣಂ ಗೈಯುತುಳಿದಿರ್ದ ।
ದೊರೆದೊರೆಗಳಂತಂತೆ ತಟಿನೀತರಣಿಗತಿಯು ನೆನೆದು ತೆರಳುತ್ತಲಿರಲು ॥ (15)

ಕೆಲರು ಕರಿಗಳನೇರಿ ಕೆಲರಶ್ವಗಳನೇರಿ ।
ಕೆಲರು ತೆಪ್ಪಗಳಡರಿ ಕೆಲರು ಘಟಿಗಳ ತೊಡರಿ ।
ಪಲಬಗೆಯುಪಾಯಗಳ ಲಾತರಂಗಿಣಿಯನುತ್ತರಿಸೆ ಮನಬಂದತೆರದಿ ॥
ಕೆಲರು ಬಾಹುಗಳಿಂದೆ ಕೆಲರು ನಾವೆಗಳಿಂದೆ ।
ತೊಲಗುವುವನಿಟ್ಟಿಸುತೆ ಭರತನಾಗಂಗೆಯುಂ ।
ಸುಲಭದಿಂ ದಾಂಟಿ ತಟವಂ ಸಾರ್ದು ಕುಳ್ಳಿರ್ದನಚ್ಚರಿಯ ನಿಟ್ಟಿಸುತಲಿ ॥ (16)

ಎಲ್ಲರು ಸುಖೇಚ್ಛೆಯಿಂ ದಾಂಟಿ ಬಂದು ಪ್ರಯಾಗ ।
ದಲ್ಲುತ್ತಮಸ್ಥಾನದೆಡೆಯೆಡೆಯುಳಿಸಲವ ।
ಕೆಲ್ಲರಂ ಸಂತೈಸುತನಿಮಿಷವಿಲ್ಲಿರ್ಪುದೆಂದೊರೆದು ಭರತ ಮುದದಿ ॥
ಬಲ್ಲಹರ ಪಣೆಪಣಿ ವಶಿಷ್ಠರಂದೊಡಗೊಂಡು ।
ಚೆಲ್ವಿಂ ಭರದ್ವಾಜರಾಶ್ರಮವ ಸಾರಲ್ಕೆ ।
ಮೆಲ್ಲನಾಮುನಿವರನ ಛಾತ್ರರೈತಂದರುಪಲಾಗ ಮನದಿರವನರಿದು ॥ (17)

ಭರತನೊಡನೈತಪ್ಪ ಸರಸಿಜಾಸನತನಯು ।
ನಿರವ ನೋಡುತ್ತ ಭರದ್ವಾಜ ನಿದಿರೆದ್ದು ।
ಚರಿಸುತಿರಲನಿಕರೊಳಗೊಳಗೈದಲಾ ಮುನಿಯು ನೋಡಿ ಭರತಂ ಪ್ರಿಯದೊಳು ॥
ಚರಣಂಗಳಗೆ ನಮಿಸಲರಿತು ದಶರಥ ತನಯು ।
ರಿರವರಿತು ಪರಸಿ ಪರಮಾರ್ಘ್ಯಪಚಾರಗಳ ।
ವಿರಚಿಸಿ ವಸಿಷ್ಠರಂ ಸಂತಸದೊಳಾಲಿಂಗನಂಗೈದ ಮುನಿ ವಿನಯದಿ ॥ (18)

ಕರದೊಯ್ದು ಕುಳ್ಳಿರಿಸಿ ವಿನಯದಿಂದುಪಚರಿಸಿ ।
ಪುರದುರ್ಗಪುತ್ರಮಿತ್ರಾದಿಕುಶಲಂಗಳಂ ।
ಹರುಷದಿಂ ಕೇಳಲಾ ಮುನಿವರಗೆ ಭರತನಿಂತೆಂದ ಕರಗಳನು ಮುಗಿದು ॥
ಚರಣಬಲದಿಂದಖಿಲರಾರೋಗ್ಯ ಭಾಗ್ಯದಿಂ ।
ದಿರುವರೈಸಲೆ ಭವದ್ವನವೃಕ್ಷ ಶಿಷ್ಯರುಂ ॥
ವರತಪೋಗ್ನಿಗಳೆಲ್ಲ ಕುಶಲವೆ ನಿರೂಪಿಸುವುದೆನುತ ವಿಜ್ಞಾಪಿಸಿದನು ॥ (19)

ನುಡಿಯನಾಲಿಸಿ ಭರದ್ವಾಜ ಸಂಪ್ರಿಯದಿಂದ ।
ಲೊಡವೆರೆದು ಪೇಳುವ ಮಹಾರಾಜ ಭವದೀಯ ।
ದೃಢಪರಾಕ್ರಮದಿಂದಲಖಿಲಲೋಕಂ ಸೌಖ್ಯದಿಂದಿರ್ಪುದೈಸೆ ಮುದದಿ ॥
ಪೊಡವಿಪತಿಯೊಲಿದಿತ್ತ ರಾಜ್ಯಮಂ ಬಿಟ್ಟು ಬೇ ।
ರಡವಿಗೈತಂದುದೇಂ ಕಾರಣಂ ರಾಘವನ ।
ತುಡುಕಿ ನಿಷ್ಕಂಟಕದ ಭೋಗಾಭಿಲಾಷೆಗೇಂ ಮನವೊಡಂಬಟ್ಟಿರ್ಪುದೊ ॥ (20)

ಎನುತ ವಿಪ್ರೇಂದ್ರ ಮೊದಲಿಸಲಾಗಲ್ ಭರತ ।
ಜನಿತಾನುತಾಪದಿಂ ಕಂಬನಿಗಳಡಱುತ ಪದ ।
ವನಜಂಗಳ್ಗೆ ನಮಿಸುತಾರ್ತಿಯಿಂ ಬಿನ್ನಪಂಗೈದನತಿಭಕ್ತಿಯಿಂದೆ ॥
ಜನನಿಯೆಸಗಿದಕಾರ್ಯವೆಳ್ಳನಿತನಾದೊಡಂ ।
ಎನಗಱಿಕೆಯುಂಟಾಗೆ ನಿರಯಭಾಜನನಪ್ಪೆ ।
ನೆನೆವುದಂ ಭವದೀಯಚಿತ್ತಮೇನಱಿಯದುದೆ ಬಿನ್ನವಿಸಲಾಂ ಶಕ್ತನೆ ॥ (21)

ಪಿತನಿಂದ ಸಂಪ್ರಾಪ್ತಿಯಾದ ರಾಜ್ಯದ ಸಿರಿಯ ।
ವಿತತಭಕ್ತಿಯೊಳು ರಾಮನ ಪಾದಪದ್ಮಕಂ ।
ಜೊತೆಗೈದುಬಿನ್ನವಿಸಿ ಕರೆತಂದು ಗದ್ದುಗೆಯ ಮೇಲೆ ಕುಳ್ಳಿರಿಸಿ ಬಳಿಕ ॥
ಕೃತಕೃತ್ಯನಹೆನೆಂದು ಕುಶಲಬುದ್ಧಿಯ ತಂದು ।
ಯತಿಪತಿಯನೊಡಗೊಂಡು ವೇಗದಿಂ ಬರೆ ಕಂಡು ।
ರತಿಯಿಂದಲಖಿಳ ಪ್ರಜೆ ಪರಿವಾರಮಂ ಕೊಂಡು ಬರಲಾಯ್ತುದೊಂದು ದಂಡು ॥ (22)

ಇದು ಸತ್ಯಮಿಥ್ಯವೆಂಬುದನುಂ ಭವತ್ಸರ್ವ ।
ಹೃದಯಮೇನಱಿಯದುದೆ ತಪಿಸಲೇತಕೆ ಜೀಯ ।
ಮುದದಿ ಪ್ರತ್ಯಯದೃಷ್ಟಿಯಿಂತಱಿತು ಕಲುಷಿಯಾದೆನ್ನ ಧಿಕ್ಕಾರಗೈದು ॥
ಸದಯಮೇಳ್ಕೊಂದು ಗದ್ಗದವಾಣಿಯಿಂ ನುಡಿಯ ।
ಉದುರುತಿರಲಶ್ರುಜಲ ಮತಿದುಃಖದಿಂದಳ್ಕ ।
ಕುದಿವುತಿರಲಾ ಭರತನಿರವ ನಿಟ್ಟಿಸಿ ಮೌನಿ ಜನನಾಥನಿಂತೆಂದನು ॥ (23)

ತಿಳಿದಿರ್ದವಾವು ಜ್ಞಾನದೃಷ್ಟಿಯಿಂ ಪರಹೃದಯ ।
ದೊಳವೆಲ್ಲಮಾದೊಡಂ ಲೋಕಕೀ ನಿರ್ಮಲತೆ ।
ತಿಳಿಯಲೆಂದಖಿಳವೃತ್ತಾಂತಮಂ ಬೆಸಗೊಂಡುದಲ್ಲದಘಮಂ ಶಂಕಿಸಿ ॥
ಪೊಳಪುದೋರಿದುದಿಲ್ಲ ಶ್ರೀರಾಮನಂಘ್ರಿಯುಗ ।
ನಳಿನಭಕ್ತನೆನುತ್ತಲಿಂದಿರ್ದ ತಿಳಿಯಲೀ ।
ಜಲಧಿಮೇಖಲೆಯಲಾರುಂಟು ಪಾಸಟಿ ನಿನಗೆ ಸಜ್ಜನರ ಮಕುಟಮಣಿಯೆ ॥ (24)

ಪರತರಾನಂದಮಯ ಭೂಭಾರವನ್ನಿಳುಹೆ ।
ಧರೆಯೊಳುದ್ಭವಿಸೆ ತತ್ಪರಿಚರರು ನೀವೆಲ್ಲ ।
ನರರೂಪವಾಂತು ಬಂದಿರ್ಪಿರಲ್ಲದೆ ಮಿಕ್ಕಮಾನವರಿಗೀಬುದ್ಧಿಯು ॥
ದೊರೆದಪ್ಪುದೆ ದೊರೆದೊಡೆಯು ಧರ್ಮಮಂ ಮೀರದಲೆ ।
ನಿರುಗೆಯಪ್ಪುದೆ ಪರಮಪಾವನ ಪರಾತ್ಪರದ ।
ಪರಮಧಾಮದೊಳೇಕಮಪ್ಪುದೇ ಭೂಪಾಲ ಕುಲತಿಲಕ ತಿಳಿಯದಿಹುದೆ ॥ (25)

ಬಲ್ಲೆನೆಲ್ಲವಕ್ಲೇಶ ಗೊಳಲೇತ ಕೆಲ್ಲಮಂ ।
ಬಲ್ಲಹರೊಳಗ್ಗಳನೆ ಸಂತಾಪಮಂ ತ್ಯಜಿಸು ।
ತಿಲ್ಲಿರುಳು ಸುಖಮಿರ್ದ ಭಾಸ್ಕರೋದಯಮಾಗಲೈದವೇಳ್ಕೊಂದು ಮುನಿಪ ॥
ಸೊಲ್ಲಿಸಲ್ ಭರತ ಮಣಿದೆಂದ ರಘುವರನಿರ್ಪ ।
ದಿಲ್ಲಿಗಾವೆಡೆಯೆನಿತುದೂರಮೆಂಬುದ ಮನಕ ।
ಮೆಲ್ಲನಱಿ ಪಲ್ ಜವದಿ ಪೋಗಿ ವಂದನೆಗೈವ ಕಾತುರ ಮನಕ್ಕೆಂದನು ॥ (26)

ಚಿಂತಿಸಲದೇಕೆ ಭಕ್ತಾಗ್ರಣಿ ಮಹಾಶೈಲ ।
ಮುಂತೆ ಕಂಗೊಳಿಸುತ್ತಿದೆ ಚಿತ್ರಕೂಟಾದ್ರಿಯು ವ ।
ಸಂತಸಾಲಯದಂತೆ ರಘುವೀರನಲ್ಲಿರ್ದ ಸಂತೋಷದಿಂದ ತನ್ನ ॥
ಕಾಂತೆ ಲಕ್ಷ್ಮಣಸಹಿತಮಾಶೈಲಸನಿಹ ಪಿಂ ।
ದಾಂತು ಸಂತಸದಿನಾವಿತ್ತ ವನ್ಯಾಹಾರ ।
ಮಂ ತಳೆದು ಪ್ರೀತಿಯಿಂ ಬಳಿಗೆ ಗಮಿಸಲ್ವೇಳ್ಕುಮೆನೆ ಭರತನಿಂತೆಂದನು ॥ (27)
ಕಂಡೆ ಚರಣಗಳ ಸದ್ಯೋಪಚಾರದಿ ಹರ್ಷ ।
ಗೊಂಡೆ ಸಲ್ಲಾಪದಿಂದಪರಿಮಿತಸುಖವ ಕೈ ।
ಕೊಂಡೆ ಮುನಿತಿಲಕನಾಶ್ರಮಕೆ ಕ್ರೋಶದ್ವಯಮೊಳಹುದೆನ್ನ ಸೇನೆ ಬಳಿಕ ॥
ಶುಂಡಾಲಹಯರಥಪದಾತಿಗಳ ಬೇಗಲೆಡೆ ।
ಗೊಂಡು ಬರಲಾಶ್ರಮದ ತರುಲತಾದಿಗಳಿಗು ।
ದ್ದಂಡವೆಥೆಯೆನಿಪ್ಪುದೆಂದರಿತು ಚರಣಾಭಯಕಳ್ಕ ನಾಂ ಬಂದೆ ಜೀಯ ॥ (28)
ಸೇನೆಯೊಂದೆಡೆಯಲಾನೊಂದೆಡೆಯಲಿರ್ದಪನು ।
ಮಾನಂ ಸಮಾನೀಕರಿಂಗಪ್ಪುದೆಂಬುದಂ ।
ಮೇಣರಿಯದಿಹುದೆ ದಯದಿಂದಪ್ಪಣೆಯ ಕೊಟ್ಟಿರಾಳ್ದರ್ಗೊಲಸಹಿತ್ರಲಿ ॥
ಸಾಸುಮಂತನ ಪೊರೆಗೆ ಪೋಪೆನೆನೆ ಮುನಿಪ ನಾ ।
ವ್ರಾನು ಹರ್ಷದಿನುಡಿದ ಸಬಲಕಾತಿಥ್ಯವ ಸು ।
ಮಾನದಿಂ ಗೈಸಲಿಚ್ಛೈಸಿ ಬರ್ಪೆಲ್ಲವಂ ಕರೆಸು ತವಕದೊಳೀ ದಿನಂ ॥ (29)
ಪರಮಸತ್ಕರಮಂ ಕೈಕೊಂಡು ಸಂತಸಂ ।
ಬೆರದು ಗಮಿಸಲ್ವೇಳ್ಕುಮೆಂದು ಮುನಿಪತಿ ನುಡಿಯ ।
ಲರಸ ಜೀಯ ಹಸಾದಮೆಂದೊಡಂಬಟ್ಟು ನಿಜಬಲವನೆಲ್ಲವ ಕರೆಸಲು ॥
ಶರಧಿ ಮೇಲ್ವಂದಂತೆ ಬರಲಿತ್ತ ತಾಪಸಂ ।
ಕರಚರಣಗಳ ತೊಳವುತಾಚಮನಂಗೈದು ।
ನಿರುತಾಗ್ನಿಹೋತ್ರಮಂದಿರಕೈದಿ ಹುತವಹನ ಬಲವಂದು ನಮಿಸಿ ಮುದದಿ ॥ (30)
ಬೃಸಿಯಲ್ಲಿ ಮಂಡಿಸಿದ ಕುಶಪಾಣಿಯೆಂದೆನಿಸಿ ।
ಕುಶಲದಿಂ ಪದ್ಮಾಸನವ ಬಲಿದು ಮುದ್ರೆಯಿಂ ।
ಶ್ವಸನನಂ ರೇಚಿಸುತ ತರಣಿಯಿಂದಗ್ನಿಯೊಳು ಕುಂಭಿಸಿದನರೆನಿಮಿಷದಿ ॥
ಪ್ರಶಮಸಂಗೈದು ಸಂಪೂರ್ಣಕುಂಭಕದಿ ಮನ ।
ಮಿಸುಕದಂತದನೋಜೆಗೈದು ಕರಣಗಳಾಟ ।
ದೆಸಕಮಿನಿತಿಲ್ಲದೂಹಾಪೋಹನೆನಿಸಿರ್ದ ನಿಶ್ಚಲತೆವಿಡಿದು ॥ (31)
ನಡುನೆತ್ತಿಯೊಳು ಪೊಳೆವಖಂಡತೇಜೋರಾಶಿ ।
ಯೊಡವೆರೆದು ನಿದ್ರೆಯೆಚ್ಚರದೆರಡು ಪಂಗಿಲ್ಲ ।
ದೊಡನೆತ್ತನೆಯ ಸರಲಿಡಿದು ನಿಶ್ಚಲದೀಪಕಳಿಕಾನುಕಾರಿಯೆನಿಸಿ ॥
ಮೃಡವಿಷ್ಣುವೈಧಾತ್ರರಂ ನೆಟ್ಟನಾನಂದ ।
ಪೊಡವಿರಾಮಪುರೀಶನೆನಿಸಿ ಭಂಗಗಳಳವ ।
ಕಡಲಂತೆ ಪರಿಪೂರ್ಣನಾಗಿರ್ದ ಜಲಮಗ್ನಕಲಶದಂತೇವೇಳ್ವೆನು ॥ (32)

(ಸಂಧಿ 27, ಪ 1199)

ಇಪ್ಪತ್ತೆಂಟನೆಯ ಸಂಧಿ

ಸೂಚನೆ ॥ ಬ್ರಹ್ಮಋಷಿಯೆಸಗಿದೌತಣದಿಂದಲಖಿಲಬಲ ।
ಬ್ರಹ್ಮಸುತ ಭರತ ಶತ್ರುಘ್ನರುಂ ಸಂತಸದಿ ।
ಬ್ರಹ್ಮಲೋಕಾನುಭವಗೈದಂತೆ ರಾತ್ರಿಯಂ ಕಳೆದು ಬೀಳ್ಕೊಂಡರೊಲಿದು ॥

ಆಗ ವಿತ್ತಾಧಿಪತಿ ಕರ್ಮಚಿತ್ರಾದಿ ಮುಖಾ ।
ಯೋಗೀಶನರೆನಿಮಿಷ ಚಿತ್ತಸಮಾಧಿಯ ಸುಖೋ ।
ದ್ಯೋಗದಿಂದಿರಲಾದವಸ್ಥೆಯಂ ಬಿತ್ತರಿಸಿ ಪೇಳ್ವ ನಗರಾಪ್ತಸೂಚಿ ॥
ಯೋಗಬಲದಿಂ ಚರಾಚರಕರತಲಾಮಲಕ ।
ಮಾಗಿ ಕಂಗೊಳಿಸಲಾ ಮೌನಿವರ ಕರೆದೊಂದ ।
ನಾಗ ನೇಮಿಸಿದ ನಚ್ಚರಿಯು ನಿನ್ನೇನೆಂಬೆನೆಂತುಟೋ ತಪೋಮಹಿಮೆಯು ॥ (1)

ಬಲಗೊಂಡೆ ತ್ವಷ್ಟಾರ ವಿಶ್ವಕರ್ಮನಂ ನಿನ್ನ ।
ಬಲಸಹಿತ ಭರತನಿರಲಾವಾಸತಾಣಮಂ ।
ನಲವಿಂದ ಗೈದೀವುದೆನುತೊರೆದು ದಿಕ್ಪಾಲಮುಖ್ಯರೊಡನಿಂತೆಂದನು ॥
ನೆಲದಾಣ್ಮಗಾತಿಥ್ಯಗೈಯಲಿಚ್ಛೈಸಿರುವೆ ।
ನೆಲಕೆಲ್ಲರೈತಂದು ಸಾಹಾಯ್ಯಮೆಸಗವೇ ।
ಳೊಕ್ಕಲಿದೆನುತ ಸಾಲ್ವೆಸೆಯ ನದಿಗಳಗೆ ನೇಮಿಸಿದ ಸೇವೇಳ್ವನಚ್ಚರಿಯನು ॥ (2)

ನಳಿನಾಕ್ಷ ಭರತಗಾಂ ಭೋಜನಂಗೈಸ ಮನ ।
ವೆಳಸಿಹುದು ನೀವೆಲ್ಲರೈತಂದು ಕುಟೀಗಳ ।
ಕಳೆದು ಸಮತೆಯೊಳಖಿಳಪ್ರಾಣಿಗಳ ಸತ್ಕರಿಸಲೋಸುಗಂ ಸುಲಭಮೆನಿಸಿ ॥
ಸುಳಿದಪುದು ಮೈರೇಯಮದ್ಯಪಾಯಸರೂಪ ।
ದಳದೆಂದು ಸೂಚಿಸುತಲಪ್ಸರೀಗಣದೇವ ।
ಕಳೆಯಾಂತ ಗಾಂಧರ್ವ ಮೇನಕಾದಿಗಳ ಕಂಡರಿಪಿದಂ ಮುನಿತಿಲಕನು ॥ (3)

ಹರುಷದಿಂ ಪ್ರೀತಿ ಮೋಹಕರೂಪಮಾಂತ ಜನ ।
ರಿರವ ಸಂತಸಗೊಳಿಪುದೆಂದು ನಂದನ . . . . ।
. . . ಬನಂಗಳಗೆಲ್ಲ ನೇಮಿಸಿದ ಮಕುಟಾದ್ಯಲಂಕಾರವಸ್ತ್ರತತಿಯ ॥
ವರವಿಲಾಸಿನಿಯರಾದ್ಯಖಿಲರುಂ ಫಲಪತ್ರ ।
ನೆರವಿಗೈತಂದು ಮಾನುಷರ ಕರತುಷ್ಟಿಗೈ ।
ದೊರಿಸೆಂದು ಪೇಳ ಚಂದ್ರನ ನೋಡುತಿಂತೆಂದನಾಮುನಿಪ ಸಂತಸದೊಳು ॥ (4)

ಸೋಮ ಷಡ್ರಸಗಳಂ ಸೃಜಿಸೆಲ್ಲ ಜೀವರಂ ।
ಪ್ರೇಮಗೊಳುವಂದದಲಿ ಪರಿಪರಿಯಲೆಂದು ಸು ।
ತ್ರಾಮಾದಿಗಳಗೆಲ್ಲ ನೇಮಿಸಿದನರೆನಿಮಿಷ ಧ್ಯಾನಯೋಗದಲಿ ಕುಳಿತು ॥
ಆಮಹಾಪುರುಷನಾನಾವಿಧದಿಂ ನೆನೆದು ।
ಕಾಮಿಸಿದನಂತಾದುದಾಕ್ಷಣದೊಳಂ ತಪೋ ।
ದ್ದಾಮತೆಯನೇಂ ಪೇಳ್ವೆ ಸಗ್ಗಕಿಮ್ಮಡಿಯಾದುದಾಶ್ರಮಂ ರಮ್ಯಕದೊಳು ॥ (5)

ರತುನಮಯಭೂಮಿಯಾಯ್ತೈದುಯೋಜನದಗಲ ।
ಮಿತವಿಲ್ಲದಮಿತವಿಭವಾಸ್ಪದಗಳೆಯುವಾ ।
ಯತನಂಗಳಾದುವಲ್ಲಲ್ಲಿ ತನ್ಮಧ್ಯದೊಳು ನೃಪನ ಮಂದಿರಮೊಸೆದುದು ॥
ಸಿತಕಿರಣ ಬಿಂಬ ಚುಂಬಿತ ಗೋಪುರಂಗಳ ।
ಲ್ಲತುಳಕರುಮಾಡಂಗಳಗಣಿತ ವಿನೋದಗಳ ।
ಜೊತೆಗೊಳಪ ಕಾಸಾರಂಗಳು ತೋರ್ದುವಾಕ್ಷಣಕದೆಂತೊ ಮಹಿಮಾತಿಶಯವು ॥
ರನ್ನದರಳೆಲೆಗಳಂ ನೋಡಿ ಪಿಕತತಿಯುಲಿವ್ರು । [(6)
ವನ್ನೆಗಂ ಸುರನೀಲಕರುಮಾಡವಂ ಕಂಡು ।
ಚೆನ್ನಾಗಿ ನಟಿಸೆಯುಂ ಮೊಳ್ಪಮಾಯೂರಕುಲ ಮುಕ್ತಾಪ್ರಭೆಯು ಕಾಣುತಾ ॥
ನನ್ನಿಯಿಂದಾಡುವ ಮರಾಳಗಳ ಪಙ್ಕ್ತಿಯಿಂ ।
ದುನ್ನಮಿತಕಳಿ ಜಲಗೊನುತ್ತ ಹರ್ಷಿಪ ಕೋಕ ।
ವನ್ನು ನಿಟ್ಟಿಸಿ ಬೆರಗ ಬೀರುತಿಹ ಕನಕಪ್ರತ್ಥಳಿಕೆಗಳು ತೋರ್ಪವಲ್ಲಿ ॥ (7)
ಸುರಪನರಮನೆಯೊ ವೈಶ್ರವಣನಾಗಾರಮೋ ।
ಹರಗೃಹಮೊ ಸರಸಿಜಾಸನನ ಮಂದಿರಮೊ ಯಿದು ।
ಹರಿಯ ನಿಲಯಮೊ ಸಿರಿಯ ಜನನಭೂಮಿಯೊ ಯೆನಲ್ ತೋರುತತಿಶಯಮಪೀರೆ ॥
ಪರಿಪರಿಯ ಚಿತ್ರರಚನಾಕ್ರಮಗಳಂ ಸಿಲ್ಪಿ ।
ಗಂಗಸಾಧ್ಯಮೆನಲ್ಕೆ ನಿಜಶಕ್ತಿಯುಳ್ಳನಿತ ।
ಪರಮಋಷಿ ಮೆಚ್ಚುವಂತಾ ವಿಶ್ವಕರ್ಮ ತಾಂ ರಚಿಸಿದಂ ನಿಮಿಷದೊಳಗೆ ॥ (8)
ಕೆಲವು ಪಾಯಸ ಮಯದಿ ಕೆಲವು ಮೈರೇಯಮಯ ।
ಕೆಲವಾಸವೋಪಪಿತ ಕೆಲವಿಕ್ಷುರಸಭರಿತ ।
ಕೆಲವು ಪಾನಕ್ಷೀರ ಸ್ವಾದೋದಕದ ಮಯದಿನಖಿಳಸುಲಭೋಪಮಿತದಿ ॥
ಪಲವುನದಿಗಳ್ ಪ್ರಸನ್ನತೆವೆತ್ತು ಭೂಮಿಯೊಳ್ ।
ಚಲಿಸುತಿರಲಾಗಸದಿ ಮೇಘಸಂದೋಹ ಬಂ ।
ದೊಲಿದು ಸುವೃಷ್ಟಿಯಂ ಸೂಸುತಿರಲೆಡೆಗೆಡೆಗೆ ಲೋಕರ್ಗಚ್ಚರಿಯೆನೆ ॥ (9)
ನಂದನಂ ಚೈತ್ರರಥ ಕುರುರಮ್ಯಕದ ವೃಕ್ಷ ।
ಗೊಂದಣಗಳೈತಂದು ಗುಜ್ಜನಿಸುತಾ ನೆಲದಿ ।
ಪೊಂದಿ ಮಾನಸಸುಲಭವಾಗಿ ಶಾಖಾಂತಗಳನು ಬಾರಿ ? ತಾಳ್ದು ಬಳಕ ॥
ಸುಂದರಾಂಗನೆಯರಂ ಸುಲಲಿತದ ವಸ್ತ್ರಗಳ ।
ಚಂದನಾದ್ಯಖಿಳಹಾರಂಗಳಂ ಪರಿಮಳಗ ।
ಳಂದ ಕಂಗೊಳಪ ಕುಸುಮಂಗಳಂದಲ್ಲಲ್ಲಿ ತೋರ್ದುವಚ್ಚರಿಯ ಬಿಡದೆ ॥ (10)
ದೇವತಾಂಗನೆಯರೈತಂದರೈ ಪದಿನಾರು ।
ಸಾವಿರ ಕುಬೇರನರಮನೆಯಿಂದ ನಡೆತಂದ ।
ರಾ ವಿಮಲನೇತ್ರಿಯರ್ ಪಲ ಬಗೆಯ ಭೂಷಣಗಳಂದಲಂಕಾರವೆತ್ತು ॥
ಠೀವಿಯಿಂ ನಾರದರ್ ತುಂಬುರರ್ ಗಾಂಧರ್ವ ।
ಕೋವಿದರ್ ಗುಂಪುಗೂಡಿ ಮುನಿಯೆಡೆಗೆ ಬರಲಾಗ ।
ದೇವದುಂದುಭಿಗಳ ವಾವೆಡೆಯೊಳೊಡರಿದವು ಶ್ರುತಿಹಿತಮೆನಲ್ ವಿಭವದಿ ॥ (11)

ಒಂದೆಡೆಯು ವಲ್ಲಕಿಯ ತಂಬೆಸೆಯೆ ಗಾನ ಮ।
ತೊಂದೆಡೆಯು ಮುರಜಾನುಕಾರಿ ಪಿಡುವತಾನ।
ವೊಂದೆಡೆಯು ಶ್ರುತಿ ಮಧುರ ಯತಿಲಯಾನ್ವಿತಮಪ್ಪ ಗಾಂಧರ್ವಜನರ ಗಾನ॥
ಒಂದೆಡೆಯು ಸುಷಿರಕಾಂಸ್ಯಾದಿ ಧ್ವನಿಗುಂಭನ ಮ।
ದೊಂದೆಡೆಯು ಲಾಸ್ಯ ನರ್ತನ ನೃತ್ಯ ವೈಭವದಿ।
ವೃಂದಾರಕರ ಲೋಕಕಿಂಮಡಿಸಿ ತೋರಿದುದು ನಿಟ್ಟಿಸಲ್ ಬೆರಗಪ್ಪೊಲು॥ (12)
ಸಂತಸವ ನೀಡುವ ವಸಂತ ಕೂಬರ ಜ।
ಯಂತ ಕ್ಷಣದಾಕಾಂತ ಕಂತು ಮಂದಾನಿಲರ।
ಮುಂತೆ ಶುಕಪಿಕ ವಂಚೆಕೊಂಚೆಗಳ ಸಂದಣಿಗಳೊಡವೆರೆದು ನೋಡಕರರು॥
ಕೊಂತಿ ಚಿಂತಾಹರಣಗೈಯುತಿರಲಾನಂದ
ಸಂತೆ ಮುಂಬರಿವುತಿರಲಖಿಲರು ನಿಳಿಂಪತ್ರೆಯು।
ನಾಂತು ತೋರಿದರಚ್ಚರಿಯನೇನ ಬಿತ್ತರಿಟೆ ಮತ್ತೇಭಮೃದುಗತಿಂರುಳ್॥ (13)
ಅನಿತರೊಳು ಭರತ ನಿಜಬಲವ ನಿಲಿಸುವೆನೆಂದು।
ಮನಬಂದು ನಿಟ್ಟಿಸುತ ಬೆರಗಾಗಿ ದೇವತೆಗ।
ಳನು ಧರೆಗೆ ತಂದ ಮುನಿಯಂದಮಂ ನೆನೆನೆನೆದು ವಿಸ್ಮಯಾಗಿ ಪರಿವಾರವಂ॥
ಮನೆಮನೆಗಳಲಿ ತಣಿಗೈದು ವಿಶ್ರಮಿಸೆಂದು।
ವಿನಯದಿಂ ಪೇಳ ಪಿಂದಿರುಗೆ ಕಾಣ್ಬುಟ್ಟದರ।
ಮನೆ ಯಿಂದ್ರಲೋಕದಂತಾನಂದ ಕರವಾಗಲೊಳಪೊಕ್ಕು ಸಚಿವನೊಡನೆ॥ (14)
ಮುಂದೆಸೆದುದವರೇಂದ್ರ ನೋಲಗದ ಶಾಲೆಯಂ।
ತೊಂದು ಚೆಲ್ವ ಹಜಾರಮದರ ಮಧ್ಯದಿ ದಿವ್ಯ।
ಮೆಂದೆನಿಪ ಪಟ್ಟವಣೆ ಬೆಳ್ಗೊಡೆಯು ಚಾಮರಂ ಕಂಗೆಸೆಯಲಾಗ ಭರತಂ॥
ಚಂದದೀ ಗದ್ದುಗೆಯು ರಘುವರಗೆ ಯೋಗ್ಯಮಹು।
ದೆಂದು ವಂದಿಸಿ ಪಿಡಿದು ಚಾಮರವ ಭಕ್ತಿಯಿಂ।
ದೊಂಡೆಡೆಯು ಕುಳ್ಳಿರಲ್ ಮಂತ್ರಿ ಸೇನಾನಿಗಳ್ ಕುಳಿತರೆಡಬಲದೊಳೊಲಿದು॥ (15)
ಮಾಡಿಸಲ್ ಭರತನರೆನಿಮಿಷದೊಳ್ ಪುಷ್ಪ ಕೋ।
ದಂಡಮದವಾರಣಗಳೆನೆ ದೇವತಾ ಸ್ತ್ರೀಯರ।
ತಂಡಮುದ್ದಂಡದಿಂದೈತಂದು ನಟನಾನುಗಾನಗಳ್ ಪರಪಲಾಗ।
ಖಂಡಶರ್ಕರೆಯು ರಸ ತುಳ್ಳುವಂದದಿ ಗಾನ।
ತಾಂಡವಂ ಪಸರಿಸಲು ಗಾಂಧರ್ವರಾಗಮುಂ।
ಕೊಂಡು ತುಂಬುರ ನಾರದಾದಿಗಳ್ ವೀಣೆಗಳ ಬಾಜಿಸಿದರಾನಂದದಿ॥ (16)
ಕೊಳಲು ನಾಸಿಕ ವೀಣೆ ಡಮರು ಡಿಂಡಿಮ ಡಕ್ಕೆ।
ತೊಳಪ ಮದ್ದಳೆ ಶಂಖ ತಾಳ ನಾದಿಪ ಗೆಜ್ಜೆ।
ಪೊಳಪಿನಂತ ನಾಗಸರ ಮೊ . . . . ಗಳು ಮಸಗೆ ದಿಕ್ತಟಗಳ॥
ಕೊಳತೊಂದೆ ನಿಮಿಷಕಂ ಲೋಕ ಶಬ್ದನಂದ।
ದೊಳು ಲೀನ ಮಾಯ್ತೆಂಬು ರೀತಿಯಿಂ ಸಭೆಯಲ್ಲಿ।
ಹಳಚದಿವೆ ಯೂಥಗಳ ಚಿತ್ರಪುತ್ಥಳಿಗಳಂತಿರ್ದರದನೇನೆಂಬೆನು॥ (17)

ಪರಮಾನ್ನಕರ್ದಮಿತ ಮೈರೇಯ ಸಂಭರಿತ ।
ವೆರೆದ ನದಿಗಳ್ ಮುಂದೆ ಪರಿವೃತಿರಲವರಿಂದೆ ।
ಪರಿಪರಿಯ ಪಕ್ವಫಲ ರಸಷಂಡ ಭಂಗದಿಂ ಮುಂದೆಸೆವ ಗಿರಿನಿವಹದಿ ॥
ವರದುಕೂಲಂಗಳಾಭರಣಾವಳಿಲೇಪನಂ ।
ಪರಿಮಳ ಪ್ರಮುಖಸಾಸಾವಸ್ತುಸಂದೋಹ ।
ಬರೆ ಕಂಡು ಬೆರಗಾದ ಭರತನಾ ಸಂಯಮಿಯ ಯೋಗದುತ್ಸವವ ಪೊಗಳ ॥ (18)

ಎನಿತು ಮಾಲ್ಯಂಗಳಂಬರಗಳಾಭರಣಂಗ ।
ಳೆನಿತು ಮಾಗಧವಂದಿನಟಗಾಯಕಾಷ್ಯರಿಂ ।
ಗೆನಿತು ವೈಚಿತ್ರ್ಯತರ ಬನತಟಾಕಾದಿಗಳ ಕ್ರೀಡೋಪಯೋಗಕರತ್ವ ॥
ಜನರಾಡಿಕೊಂಬರಾ ಸುರಲೋಕದೊಳೆಗೆನುತ ।
ಮನಿತೊಂದೆ ನಿಮಿಷದೊಳ್ ಭರತನಿದಿರಲಿ ಮನಪಿ ।
ನೆನೆದರಿಗೆ ನೆನೆದುದೆಡೆಯಲ್ಲಿ ಸಂಘಟಿಸುತಿಹುದೇನೆಂಬೆನಚ್ಚರಿಯನು ॥ (19)

ನೋಡಿದರೆ ಮೋಹಿಸುವಲಂಕಾರ ರಸಕಲಿತ ।
ಗಾಡಿಕಾತಿಯರಮಿತರಲ್ಲಲ್ಲಿ ಜನರುಗಳ ।
ನೋಡಿ ಮಜ್ಜನಭೋಜನಾದಿಗಳ ಮಾಡಿಸಿ ಪೊದಿಸಿ ದಿವ್ಯಾಂಬರಗಳ ॥
ಜೋಡಿಲ್ಲದಾಭರಣಗಳನಿಟ್ಟು ಕರವಿಡಿದು ।
ಕೂಡೆ ಬೀದಿಯಲಿ ಸಂಚರಣೆಗೈಸುವರಲ್ಲಿ ।
ನೋಡೆನುತಲತಿವಿಚಿತ್ರವಾದುಪಚಾರಗಳ ಪೇಳ್ವುದೇನತಿಶಯವನು ॥ (20)

ಕರಿಗಳುಪಯೋಗ ಭೋಜನ ಪಶ್ವಸಂತತಿಗ ।
ಳುರುಕಬಳಭಕ್ಷಣಮನಡ್ವಾದಿಗಳಿಗೂಟ ।
ಖರಮುಷ್ಟ್ರಕುನ್ನ್ಯಾದಿ ಸಕಲಪ್ರಾಣಿಗಳಿಷ್ಟಮೆನಿಪ ವಸ್ತುಗಳೆಲ್ಲವ ॥
ಪರರ ಯಾಚಿಸದೆ ನಿಂದಲ್ಲಿ ಬೇಕಾದುದಂ ।
ಸರಭಸದಿ ತೆಗೆದು ಸಂತುಷ್ಟಿಗೊಳಿಸಿದರೇನ ।
ನೊರೆವೆನಚ್ಚರಿಯ ತಾಪಸನ ಸಚ್ಚರಿತಸಂ ಸಂಯಮಸಮಾಯುತೆಯನು ॥ (21)

ಎಲಿ ನೋಡಿದರನ್ನಪಾನಾದಿಗಳ ಸುಲಭ ।
ಮೆಲಿ ನೋಡಿದರಖಿಲಭೂಷಣಾಂಬರಯುಗಳ ।
ಎಲ್ಲಿ ನೋಡಿದರಿಷ್ಟಫಲ ಮಾವ ಶೃಂಗಾರನಾಯಿಕಾಗುಣಸಮುದಯಂ ॥
ಇಲ್ಲ ಮೆಂದೊಂದೊಂದ ಬೇಡುವರ ಕಾಣೆಮುಂ ।
ದಲ್ಲಲ್ಲಿ ಜನರ ಮೂದಲಿಸುತ್ತೈತಹ ಸುರರ ।
ಬಲ್ಲಹರ ಸಂತೆಯೆಸದುದು ಚಿತ್ರಕರಮೆನಲದೇನೆಂಬೆನಚ್ಚರಿಯನು ॥ (22)

ಬಿದಿಯ ಪಟ್ಟಣ ಪರ್ದುದೇರನೊಪ್ಪಿಹ ತಾಣ ।
ಕುಧರೇಶನೆಲೆ ಕುಬೇರನ ನಗರ ಪೆಲರುಣಗ ।
ರೆದೆಯ? ನಾಸ್ಥಾನ ಪಾಶಿಯ ಪುರಂ ಸಗ್ಗಿಗರ ಪುಟಭೇದನಮದೆಂಬೊಲು ॥
ಮದನನಾಡುಂಬೊಲ ಬಸಂತನಾಲಯ ಜಗ ।
ನ್ಮುದವಿಹಾವ ಗಾಂಧರ್ವರಾಲಯಕ್ಕಧಿಕ ಮೆನೆ ।
ಚೆದುರ ಬೆರಿದುದಾಶ್ರಮಸ್ಥಾನವಾ ಮುನಿಯನುಜ್ಞೆಯಿಂದಾಕ್ಷಣದೊಳು ॥ (23)

ತರುಲತಾದಿಗಳೆಲ್ಲ ರಾಮಾಕೃತಿಯನಾಂತು ।
ಕರೆಕರೆದು ಮನದಿಷ್ಟಗಳನೀವುತೆಲ್ಲರುಂ ।
ಪರಿಪರಿಯ ಮೃದುಸ್ವಾದಿಯಲನ್ನಪಾನಾದಿಗಳು ವಸ್ತ್ರಮಾಲ್ಯಾದಿಗಳಲಿ ॥
ಹರುಷಗೊಳಿಸುತಲಿರ್ದರೇನೆಂಬೆವಾ ದಿನದಿ ।
ನೆರೆದಖಿಳಪ್ರಾಣಿಗಳ್ ಸ್ವರ್ಗಭೋಗವನುಂಡು ।
ಬೆರಗಾದರೇನೊಂದ ನೆನೆಯದಾ ತಾಪಸನ ಶಕ್ತಿಯೆಂತಾಟೊ ಜಗದೊಳು ॥ (24)
ಅಕಲಂಕಸುಖದ ಸುಗ್ಗಿಯು ಸೂರೆಯಲಿ ಜನ ।
ಪ್ರಕರಮಿರುತಿರಲೊಂದು ನಿಮಿಷಮಾಗಲ್ ನಿಶೆಯು ।
ಪ್ರಕಟವಾಯಿತ್ತಿನಬಿಂಬ ಮೂಡವೆಟ್ಟದ ತುದಿಯೊಳಿಟ್ಟ ಮಣಿಮುಕುರದಂತೆ ॥
ಸುಕುಮಾರಭರತನಾ ಸಮಯ ದೊಳಗೆಚ್ಚತ್ತು ।
ಭಕುತಿಯಿಂ ಕುಲದೇವತಗೆ ನಮಿಸಿ ಶತ್ರುಘ್ನ ।
ಸಕಲಮಂತ್ರಿಗಳು ಮೈತ್ರಾವರುಣಿಯೊಡವೆರದು ಮುನಿಪನೆಡಗೈತಂದನು ॥ (25)
ಭೂಸುರಾಗ್ರಣಿ ಭರದ್ವಾಜ ಪೂರ್ವಾಹ್ನಿಕಾ ।
ಭ್ಯಾಸಕ್ರಿಯೆಗಳ ರಚಿಸಿ ಕ್ರತುಲಿಹನ ಪೂಜಿಸುತ ।
ಭಾಸುರಶ್ರೀನಿಧಿಯನಿಪ್ಪಂತೆ ಕ್ರತುಭಜಾಗಾರದೊಳು ಮಂಡಿಸಿರಲು ॥
ಕೋಸಲಾಧಿಪನೈದಿ ಚರಣಂಗಳಿಗೆ ನಮಿಸಿ ।
ವಾಸುದೇವಾತ್ಮಕ ಭವತ್ಕೃಪೆಯಲಿರುಳಲ್ಲಿ ।
ವಾಸಮಂ ಗೈದಿರ್ದೆನತಿಸುಖದಿ ಒಲವೆರಸಿ ಸ್ವರ್ಗೋಪಮಾನಮೆನಿಸಿ ॥ (26)
ಅರಸನಂ ಕಾಣ್ಬ ಕೌತುಕದಿಂದಾಗಿದೆ ಚಿತ್ತ ।
ಕರುಣಾಕಟಾಕ್ಷದಿಂ ನೋಡಿ ಬೀಳ್ಕೊಡೆ ಪೋಗಿ ।
ಚರಣಂಗಳಿಗೆ ನಮಿಸಿ ಬರುವೆನಗ್ರಜವೆರಸಿ ಪ್ರಸದಾಕಲಂಕನೆನಿಸಿ ॥
ಪರಿಪೂರ್ಣದಯೆಯಿಂದ ಪಾಲಿಸುವುದೆನುತಲೀ ।
ಪರಿಯ ವಿಜ್ಞಾಪಿಸಿದ ಭಾತೃಹಿತಕರ ಭರತ ।
ನಿರವನಿಟ್ಟಸಿ ಭರದ್ವಾಜಮುನಿಯಿಂತೆಂದ ನಸುನಗುತವಿನಯದಿಂದ ॥ (27)
ಸಲ್ಲಲಿತಮೆನಿಪ ಮಂದಾಕಿನಿಯ ಬಡಗ ದೆಸೆ ।
ಯಲ್ಲಿ ಮಾಲಿಕೆಯಂತೆ ಕಂಗೊಳಿಸಲದ್ಭುತಸುರ ।
ವಲ್ಲಿಪಾದಗಳಿಂದತಿಮನೋಹರಮೆನಿಸಿ ಚಿತ್ರಕೂಟಾಖ್ಯಗಿರಿಯು ।
ಚೆಲ್ವ ಬೀರುವದೈಸೆ ಭರತ ಕೇಳಾಶೈಲ ।
ವಿಲ್ಲಿಗಿಹುದೈದುಯೋಜನ ತೆಂಕಮುಖವಾಗಿ ।
ಮೆಲ್ಲನೈದಲು ರಾಮಚಂದ್ರನಿರುವೆಲೆವನೆಯ ತೋರ್ಪುದಚ್ಚರಿಯೊಳಲ್ಲಿ ॥ (28)
ಹಾದಿವಿಡಿದೈದಲತಿಸುಖದಿಂದ ರಘುವರನ ।
ಪಾದದರ್ಶನಮಹುದೆನುತ್ತಲಪ್ಪಣೆಗೊಡಲು ।
ಮೋದದಿಂದಡಿಗೆರಗಿ ಬೀಳ್ಕೊಂಡು ಕೆಲಸಾರಲನ್ನೆಗಂ ಕೌಸಲ್ಯೆಯು ॥
ಸಾದರದಲಾ ಮುನಿಯ ಪದಕಮಲಕಭಿನಮಿಸ ।
ಲಾ ದಯಾಂಬುಧಿ ಪ್ರಿಯದೊಳುಪಚರಿಸುವನಿತರೊಳು ।
ಮೋದುರದ ನಿರ್ಲಜ್ಜೆವೆರೆದಶ್ವಪತಿಯಣುಗಿ ಬಂದು ವಂದನೆಗೈದಳು ॥ (29)

ಭರದಿಂ ಸುಮಿತ್ರೆ ಮೊದಲಾದ ರಾಜಸ್ತ್ರೀಯು ।
ಕೆರಗಿ ಭರತನ ಕೆಲದಿ ನಿಂದಿರಲ್ ನೋಡಿ ಮುನಿ ।
ವರನೆಂದ ರಘುಜ ನಿನ್ನಯ ಮಾತೆಯಿಂದಾದುದತಿಶಯಮೆನುತ್ತರಿವೆನು ॥
ಧರೆಗಧಿಕಮೆಂದಾ ಯತೀಶನಾಜ್ಞಾಪಿಸಲ್ ।
ಕರಗಳಂ ಮುಗಿದು ಕಂಬನಿವಿಡುತ ಖಿನ್ನತೆಯೊ ।
ಳಿರಕವಾಗಿಹ ಚಿತ್ತದಿಂದ ವಿಜ್ಞಾಪಿಸಿದ ಭರತ ಬಿರುನುಡಿಗಳಿಂದೆ ॥ (30)
ಮಾತಿನಿಂ ಪತಿಯ ಪೋಗಾಡಿ ದೌರ್ಜನ್ಯಕರ ।
ಪ್ರೀತಿಯಿಂ ರಾಮಲಕ್ಷ್ಮಣರ ಕಾನನಕಟ್ಟಿ ।
ಘಾತಕವ ಗಳಸಿ ಕುಲಮಂ ನೀರೊಳಾಳಿಸಿದ ದುರ್ವಾರರಕೆಯ ಬಸಿರೊಳು ॥
ಜಾತವಾದುದಕಾನು ಲೋಕನಿಂದಕನಾದೆ ।
ಖ್ಯಾತಿಯಾರಸಿದುದಖಿಲರಾಜ ಸಭೆಯೊಳಗೆಂದು ।
ಮಾತನಾಡಲಾರದಪಯಶಮ ದೇನೆಂಬೆ ಪೂರ್ವಕೃತದುಷ್ಕೃತವನು ॥ (31)
ಕಡಿಮ ಪರಪ್ರವೆನೆಂದು ತುಡುಕಲಸ್ತ್ರವ ನೋಡು ।
ತೊಡನೆನ್ನ ಕರವಿಡಿದು ಕೌಸಲ್ಯೆ ಪರಿಹರಿಸೆ ।
ನುಡಿಯಲಮ್ಮದೆ ಸುಮ್ಮನಾಗಿ ಗಮ್ಮನೆ ಚರಣದೆಡೆಗೆ ನಡೆತಂದೆ ಜೀಯ ॥
ಕಡುಪಾಪಿ ಯೆನ್ನನೆಡೆವಿಡದೊಡನೆ ಬಂದಡಿ ।
ಕ್ಕಡಿಗೈವೆನೆಂದು ಬಿರುನುಡಿಗಳಂ ಘರ್ಜಿಸುವ ।
ನೊಡವಿಪತಿಯನ್ನೋಡಿ ಮೃದುಮಧುರವಾಣಿಯಿಂದುಪಚರಿಸಿ ಮುನಿನುಡಿದನು ॥
ಸುಮನಸರ ಪೊರೆದು ಗೋದ್ವಿಜರಕ್ಷಣೆಗೈದು । [(32)
ಕ್ರಮದಿಂದ ದಿತಿಜನಿಧನಂಗೈದು ಧರ್ಮಗಂ ।
ಭ್ರಮವ ನೆಲೆಗೊಳಸಲೀ ಕಾನನಕೆ ರಘುವೀರನೈತಂದ ಕರುಣದಿಂದ ॥
ರಮಣೀಯಕರಚರಿತೆ ಯಾಯಿತು ಕೈಕಾಸತಿಯ ।
ಮಮತೆವಚನಗಳಿಂದ ಲೋಕೋಪಕಾರ ನಿ ।
ರ್ಮಮತೆಯುಳ್ಳರ ಶ್ರಮನಿವಾರಣೆಗೈದುದತಿಲೇಸನ್ನೊತೆಣಿಸವೇಳ್ಕು ॥ (33)
ಮಿತರಹಿತ ಹಿತಗೈದುದೀಕೆಯ ಸುವಾಣಿಯಿಂ ।
ದತಿಶಯದಿ ತಿಳಿಯೆನುತಲೊರೆಯೆ ಸಂಯಮಿ ಭರತ ।
ನತಿಭಕ್ತಿಯಿಂದೆರಗಿ ಬೀಳ್ಕೊಂಡು ಪೊರಮಟ್ಟು ನಿಜಬಲವನೆಲ್ಲ ಕರೆಸಿ ॥
ಗತಿವಿಡಿದು ಪದದಲರುಹಲ್ನೇಮವಿತ್ತು ನೃಪ ।
ಸತಿಯರನ್ನಂದಣದಿ ಕುಳ್ಳಿರಿಸಿ ಕನಕಮಯ ।
ರತುನವಿರ್ಮಿತಮೆನಿಪ ಶಿಬಿಕಾಧಿರೋಹಣಂಗೈದ ಮುಂದೈದಲೆನುತ ॥ (34)
ಚತುರಂಗಬಲ ನಡೆದು ದೆಸೆಪಥಗಳಂ ಪಿಡಿದು ।
ವಿತತಸಾಗರವು ಮೇಲ್ವರಿದು ಧರಣೀತಳವ ।
ರತಿಯೊಳಾಲಿಂಗಿಸಿದ ಮಾಳ್ಕೆಯೊಳ್ ತರುಗುಲ್ಮಗಿರಿನಿಕರಗಳ ಬಲದೊಳು ॥
ಜೊತೆಗೊಂಡು ಮರೆಯಾಗಲುಳಿದ ಖಗಶರಭಸಂ ।
ತತಿಗಳಾವೆಡೆಯ ಪೊಂದಿರ್ದ ವಾಹಯದ ಪದ ।
ಹತಿಯಿಂದ ಧರಣಿ ತಲ್ಲಣಗೊಂಡುದಾಕ್ಷಣದೊಳಾಸೇನೆಯುರುಭರದಲಿ ॥ (35)

ಕಳೆಕಳೆದು ಸಕಲನದಿನದಬನಂಗಳನೆಲ್ಲ ।
ಪೊಳೆ ಪ್ರಾಂತ ನಗರ ಖರ್ವಾಟ ಖೇಟಂಗಳಂ ।
ಕಳೆದೈದಿ ಬರೆ ಮುಂದೆ ಕಂಗೊಳಸಲಾಶ್ಯಲ ಮುನಿವೇಳ್ದ ಕುರುಪನರಿತು ॥
ಜಲಜಪೀಠನ ಸುತ ಸುಮಂತಾದಿಗಳ ಕರೆದು ।
ಬೆಳಗುತಿದೆ ನಡಿಯಂತದೊಳು ದಿವ್ಯಸಿರಿಯೆನುತ ।
ತಿಳಿಪಿಯುಧಿವಾದನಂ ಗೈದಂ ಮಹೇಂದ್ರವರ ಪರದೈವವೆಂದು ಭರತ ॥ (36)

ನವಘನಾಘನಗಳಾಚ್ಛಾದ್ಯವೈದಿಹ ವಚ್ಛಿ ।
ನಿವಹಮೇಂ ಪರಿವೇಷ್ಟಿಸಿಹವ್ರೊ ಮೇಣಂಬರಂ ।
ನವಕವೆನೆ ಭರಿತವಾಗಿಹುದೊ ಕರಚಿತ್ರವೆನೆ ವಿವಿಧವರ್ಣಗಳನಾಂತು ॥
ನವರಸೋನ್ಮೇಷಪೋಷಣಾ ಬೀಜವಾಗಿ ಬನ ।
ಮವಿರಳದಿ ಕಂಗೊಳಸುತಿದೆ ಪ್ರಾಣಿಗಳ ಗಮನ ।
ಸವನಿಸುವುದತಿಕಷ್ಟವೆನುತ ಶತ್ರುಘ್ನ ನೋಡಚ್ಚರಿಯನೆಂದನೊಲಿದು ॥ (37)

ತರಣಿಕಿರಣಗಳಲ್ಲಿ ಚರಿಸುವರಸಾಧ್ಯ ಬಂ ।
ಧುರದಮಾರುತ ಚಲನೆಗೈಯಲಸವಳ ಮುಳದ ।
ನರರೆಲ್ಲ ಸಂಚರಿಸಲಳವಹುದೆ ನಿಬಿಡತರ ಕಳ್ತಲೆಯು ಕವಿದುರ್ಪುದು ॥
ಶರಭ ಶಾರ್ದೂಲ ಹರಿಕರಿಗಳಾರ್ಭಟಿ ಘೋರ ।
ತರ ಭೀಕರವನೀವುತದೆ ಮನುಜರಕಣ್ಣೆ ಮುಂ ।
ದರಿಯಬಾರದಭೀಲ ಕಾನನವ ಪರಿಯನುಂ ಶತ್ರುಘ್ನ ನೋಡೆಂದನು ॥ (38)

ಬಿಡುಗಣ್ಣ ಜಂಗುಳಯು ತಾಣ ವೇರಳವಿ ಮುಂ ।
ದಡಿಯಿಟ್ಟಡಾವಾವ ನೆಲದಿನೆಲೆಗೈದು ತಪ ।
ದೊಡರಿರ್ಪರೋ ವಿಪ್ರರೀ ನಿಬಿಡತರತಮದಿ ದಿಟ್ಟಿಗೋಚರವಾಗದು ॥
ಕಡೆಗೆ ವಿಪರೀತ ಬಂದಡೆಸಲವನನುಭವಿಸಿ ।
ಬಿಡಿಸಲಸದಳ ಚಮೂನಾಥರಿಂಗೆಚ್ಚರಿಸಿ ।
ತಡೆಸು ಬಲಮಂ ಗಹನ ಗೋಚರರಮುಖದಿಂದಲರಿದೈದವೇಳ್ಪುದೆನುತ ॥ (39)

ಎನುತಲಾಳೋಚಿಸುತ ವಿಪಿನಚರರಂ ಕರೆದು ।
ವನದೊಳಾವೆಡೆಯೊಳಹನರಸನೆಂದರಿತು ಬಹು ।
ದೆನುತ ನೇಮಿಸಲೈದಿ ಕಾನನವನೆಲ್ಲಮಂ ಸುತ್ತಿ ಪಂಥಾನವಿಡಿದು ॥
ಮುನಿಮುನಿಗಳಹ ನೆಲೆಯನನುವರಿತು ನೋಡುತ್ತ ।
ಜನಕಜಾರಮಣನಿಹ ಪರ್ಣಶಾಲಾಂತರದ ।
ಸನಿಹಕೈದುತ ನೋಡಿ ತಿಳದು ಕುರುಹಗಳಂದ ಬೇಗದಿಂದೈತಂದರು ॥ (40)

ಬಂದು ವಂದಿಸಿ ಭರತಗೊರೆವರೆಲೆ ದೇವ ಕೇಳ್ ।
ಮಂದಾಕಿನೀತಟದಲತಿರಮ್ಯತರ ಪರ್ಣ ।
ಮಂದಿರದಿ ಸೀತೆಸಹ ರಘುವೀರನೊಪ್ಪಿರುವ ಪೊರವಳಯದೊಳ್ ದೂರದಿ ॥
ನಿಂದಿರ್ಪ ನಾ ಸುಮಿತ್ರಾತನಯ ಜಾಗ್ರತೆಯೊ ।
ಳೊಂದಿ ನಾಲ್ದೆಸೆಯ ನಿಟ್ಟಿಸುತಲಾ ನೆಲ ಸುರಪ ।
ನಿಂದಗವ್ಯಮೆನುತ್ತ ಬಿತ್ತರಿಪ ನುಡಿಗಳಂ ಕೇಳ ಮುದವಾಂತ ಮನದಿ ॥ (41)

ಸೇನೆಯುಂ ಸಂತೈಸುತ್ತೆಂದೆಡೆಯೊಳಟ್ಟು ನೃಪ ।
ಸೂನು ಕುರುಪರಿತ್ರಧೀಮಂತವನಚರರೊಡನೆ ।
ಸಾನಂದದಿಂದಣ್ಣನಂ ಕಾಣ್ಬ ಹರ್ಷದಿಂ ವಿಪನದೊಳಪೊಕ್ಕನಡೆದು ॥
ನಾನಾಪರಿಯ ಗುಲ್ಮಲತೆಪಲ್ಲವಂಗಳಂ ।
ಸಾನುರಾಗದಿ ಪರಧ್ಯಾನದಿಂ ಕುಳ್ಳಿರ್ಪ ।
ಮೌನಿಜನರಂ ನೋಡುತಲ್ಲಲ್ಲಿ ಪಥಗಳಂ ನೋಡುತಂ ನಡೆತಂದರು ॥ (42)
ಸೂರಿಯನ ಬೆಳಕರಿಯದಾಬನದೊಳಹ ಸಕಲ ।
ಚಾರುಖಗಮೃಗನಿಚಯ ಯುವನಚರ ಪುಳಿಂದಿನಿಯ ।
ಮೋರೆ ಗಡೆಗಣ್ಣಿನಕಟಾಕ್ಷ ಬೆಳ್ದಿಂಗಳೊಂದಲ್ಲದ ನ್ಯತ್ರ ಬಳಕ ॥
ಮಾರಮಂದಾನಿಲ ವಸಂತರಾಡುಂಬೊಲಂ ।
ಕೈರವಾಪ್ತನ ರಶ್ಮಿಯೊಂದದೊಲ್ತುಡೆಯರಾಗಿ ।
ವೀರಟವಿ ಶಿವನಂತೆ ತಾಳ್ದು ಘೋರಾಕೃತಿಯ ಕಾಣ್ಬುಡಿಸಿತಿಪಿರಿನಲ್ಲಿ ॥ (43)
ವನಷಂಡಗಳ ನೋಡುತಲ್ಲಲ್ಲಿ ತಾಪಸೀ ।
ಜನರ ನಿಟ್ಟಿಸಿ ಮೃಗಗಣಾಕೀರ್ಣ ರುಲ್ಲಿಕಾ ।
ಘನರವಂಗಳ ಕೇಳ್ ಝಿಲ್ಲಿರ್ಕೈದುವ ಮಾರ್ಗದನುಸರಣೆಯಿಂದೇರುತ ॥
ಜನನಾಥಸಂಘ್ರಿಗಳ ಕೋಮಲುಜ್ಜುಗಗೊಂಬ ।
ಮನದತಿವಕದಿ ಭರತ ಬರುತಿರ್ಪ ನಿತ್ತರಘು ॥
ವನಧಿಚಂದ್ರಮ ನೋಡಿ ಧರಣೀ ತನೂಭವೆಯ ನಸುನಗೆಯೊಳಿಂತೆಂದನು ॥ (44)
ಗಿರಿಯ ವೈಭವವ ನಿಟ್ಟಿಪರೆನ್ನ ಮಾನಸಂ ।
ಹರುಷಗೊಳುತಿದೆ ನದೀತಟ ವೃಕ್ಷತಂಡಗಳ ।
ಪರಿಪರಿಯ ಮೃಗಪಕ್ಷಿನಿಕರಂಗಳಟ್ಯಪಫಲಾಪ್ತಿ ತಪೆದೋರುತಿದೆಕೊ ॥
ಅರಸಿ ನೋಡೆಂದು ಶ್ರೀರಾಮಪುರಿನಾಯಕಂ ।
ನರಲೀಲೆಯಿಂದ ನಾನಾಜನರ ಮೋಹಕದಿ ।
ಬೆರಸಿ ಕೃತಕೃತ್ಯರಂ ಮಾಳ್ಪನಜ್ಞಾನ ದಿಂದಂಟದುರುಪರುಷದಂತೆ ॥ (45)

(ಸಂಧಿ 28 ಪದ 1243)

ಇಪ್ಪಂತೊಂಬತ್ತನೆಯ ಸಂಧಿ-

ಸೂಚನೆ ॥ ಮಿತ್ರವಂಶೋದ್ಭವಂ ಶ್ರೀರಾಮಚಂದ್ರಮಂ ಸು ।
ಮಿತ್ರಾತ್ಮಸಂಭವನ ನೊಡಗೊಂಡುಬಂದು ಭೂ ।
ಮಿತ್ರಜನಕನ ತನುಜೆ ಸಹಿತಮಾನಂದದಿಂ ಚಿತ್ರಕೂಟದೊಳಿರ್ದನು ॥
ಅರಸಿನೋಡೀಚಿತ್ರಕೂಟಾದ್ರಿ ಸಾಕೇತ ।
ಪುರದ ನೆನಹಂ ಮರಸುತಿದೆ ಬಂಧುವರ್ಗದೊಲ್ ।
ವರಮುನಿಸಂಕುಲಂ ಮೃಗಪಕ್ಷಿಗಣವೈದೆ ತೋರುತಿದೆ ಚಿತ್ತಕೆಂದು ॥
ಧರಣಿಜೆಯ ಕೈವಿಡಿದು ಶ್ರೀರಾಮ ಚಂದ್ರನತಿ ।
ಹರುಷದಿಂ ತದ್ಗಿರಿಯ ಸಂಭ್ರಮವ ನೀಕ್ಷಿಸುತೆ ।
ಬರಬರಲ್ ಮುಂದೆ ಕಂಗೊಳಸಿತ್ತುದೇವೇಳ್ಪ ನಗರಾಜತನುಸಂಭವೆ ॥ (1)

ಪಾತಾಳಗತನಾಗಕುಲ ಮಿತ್ರಘರ್ಷಣೆಯೋ ।
ದ್ಭೂತ ಮಣಿಗಣಕಿರಣಪುಂಜಗಳ್ತಚ್ಛ್ಯಾವಸ ।
ವಾತದಿಂ ಮೇಲೆದ್ದು ಬರಲಂಬುಜೋದ್ಭವಂ ಕಂಡಧಿಕಹರುಷದಿಂದ ॥
ಭೂತಳಕೆ ಚಿತ್ರಮೆನಲತಿಚಿತ್ರತರವಾಗಿ ।
ಶಾತಕುಂಭಾಚಲಕೆ ಮಿಗಿಲಾಗಿ ತೋರ್ಪಂತೆ ।
ಸಾತಿಶಯದಿಂ ಮುದ್ದುಗೈಯಿಟ್ಟನೆನೆ ಚಿತ್ರಕೂಟಾದ್ರಿ ರಂಜಿಸಿದುದು ॥ (2)

ರವಿಯಂತೆ ಗೋನಿಕರಸಂಶೋಭಿತಂ ರಮಾ ।
ಧವನಂತೆ ರುಚಿರವನಮಾಲಾನ್ವಿತಂ ಪದ್ಮ ।
ಭವನಂತೆ ನಿಕಟಭ್ರಮದ್ರಾಜಿ ಹಂಸನುರು ಧರಣೀಶ ಸೈನ್ಯದಂತೆ ॥
ನವಖಡ್ಗಸಮುದಯೋದ್ಭಾಸಿತಂ ಶಮಧನರ ।
ಭವನಂಗಳಂತೆ ಶಿಖಿಸಂದೋಹರಾಜಿತಂ ।
ಕುವಲಯಪ್ರಿಯನಂತೆ ದ್ವಿಜಸೇವಿತನುಮೆಂದು ಶೈಲೇಂದ್ರನೆಸೆದಿರ್ದನು ॥ (3)

ರಾಮಣೀಯಕಶಿವಾಲಾಪ ಸಂರಾಜಿತಂ ।
ಕ್ಷೇಮಕರ ನಾಗಕಟಕೋಜ್ವಲಂ ರಮ್ಯತರ ।
ಸೋಮಾರ್ಕ ಶಿಖಿನೇತ್ರ ಸಂಯುತಂ ಕಮನೀಯ ನೀಲಕಂಠಸುಶೋಭಿಯು ॥
ಶ್ರೀಮನ್ಮಹಾದುರ್ಗನಚ್ಛಾಯಾನ್ವಿತಂ ದ್ವಿಜ ।
ಸ್ತೋಮಸೇವಿತಪಾದಮುನಿಶಾಂತಮುಂ ಪರಮ ।
ಗೋಮಂತನಾಗಿ ಶಿವನಂತೆ ರಾರಾಜಿಸಿದನಚಲೇಂದ್ರನತಿಶಯದೊಳು ॥ (4)

ನಿರತ ಮೃಕ್ಷಾವೃತನುಮಾಗಿ ಚಂದ್ರಮನಲ್ಲ ।
ಶರಧರಂತಾನಾಗಿ ಘನರಾಜನಲ್ಲ ಭೂ ।
ಸುರ ವಿದ್ರುಮಾನ್ವಿತನುಮಾಗಿ ವಾರಿಧಿಯಲ್ಲ ತಾರೆಯಿಂ ಶೋಭಿಯಾಗಿ ।
ಗುರುವಲ್ಲ ಶೃಂಗಯುತನಾಗಿ ಶಾಂತಾಮನೋ ।
ಹರನಲ್ಲ ಕದಳೀವಿಲಾಸಕರವಾಗಿ ನೃಪ ।
ವರ ಕೇದಳವಲ್ಲಮೆಂದೆಸೆವನಾಜೀಮೂತಸಾಥನತಿ ವಿಭವದಿಂದ ॥ (5)

ಹರಿಮಯಂ ಮದಕಲಿತಕರಿಮಯಂ ಫಲಭರಿತ ।
ತರುಮಯಂ ನಿರ್ಮಲಸುಶರಮಯಂ ಚಾರುಸ್ವ ।
ದ್ಯರಮಯಂ ಕರಮೆಸೆವದರ ಮಯಂ ಹರಿಣಮಯ ಮುಗ್ರತರ ಶಾಭಮಯವು ॥
ಉರಗಮಯಮುಳಮಯಂ ತುರುಮಯಂ ಪರಿವ ನಿ ।
ರ್ಝರಮಯಂ ಭಯದ ಕಾಸಾರಮಯಮಿರುವಿವಾ ।
ನರಮಯಂ ಚರಿಪ ಖೇಚರಮಯಂ ದಿವ್ಯಸುಮಸುರಭಿಮಯಮಾಗಿರ್ದುದು ॥ (6)

ಉರುತರ ಕರಾಳ ಕಾಸರಗಳಂ ಸರಗಳಂ ।
ಪಿರುವತ್ಪ್ರಮತ್ತ ಕಾಕೋಲದಿಂ ಕೋಲದಿಂ ।
ನಿರುಪಮೋತ್ಫುಲ್ಲಕಿಂಶುಕಗಳಂ ರತ್ನಕೂಟಂಗಳಂದ ॥
ಹರಿರಾಜವಾನಕಂದರಗಳಂ ದರಗಳಂ ।
ಸ್ಫುರದತಿಕ್ರೂರ ಪನ್ನಗಗಳಂ ನಗಗಳಂ ।
ಪರಮ ಪುಷ್ಪಾಚ್ಛಟಾಸುರಭಿಯಿಂ ಸುರಭಿಯಿಂದೆಸೆದನಾಕ್ಷಿತಿಧರೇಂದ್ರಂ ॥ (7)

ಸಂತತಂ ಸತ್ಕುಲ ಭ್ರಾಜಿತನುಮಾಗಿದ್ವಿಜ ।
ಸಂತತಿಯನನುದಿನಂ ಪೋಷಣಂ ಗೈವುತಂ ।
ಸ್ವಾಂತದೊಳ್ ಹರಿಯಸಂ ನೆಲೆಗೈದು ವಂಶಾಭಿವೃದ್ಧಿಕರನೆಂದೆನಿಸುತಂ ॥
ಸಂತುಷ್ಟಿಗೊಳಿಸುತಂ ಗೋಪಾಲರಂ ಪರಮ ।
ಶಾಂತಃವಿಶೇಷೋಪಚಾರಗಳ್ಗೆಡೆಯಾಗಿ ।
ಸಂತೋಷದಿಂದಿರ್ಪ ವಿಪ್ರವರನಂತೆಸೆದನಾಧರಾಧರವರೇಣ್ಯಂ ॥ (8)

ಮುನ್ನಸುರನಾಯಕನ ಶತಕೋಟಿ ಹತಿಯಿಂದೆ ।
ಬನ್ನಬಟ್ಟುರುತಪಂಗೈಯಲ್ಕೆ ಶಿರಿಯಮನ ।
ದನ್ನಸೈತಂದಿರ್ಪನೆನಗಿನ್ನು ಭಯಮಿಲ್ಲಮೆಂದಧಿಕ ಗರ್ವದಿಂದ ॥
ಉನ್ನತೋನ್ನತಮಾಗಿ ಬೆಳೆ ಬೆಳೆವುತಿರೆ ಕಂಡು ।
ಜನ್ನಗೊಳರ್ಕಳಿರೆಯಂ ಮಹಾಭೀತಿಯಿಂ ।
ರನ್ನಮಂ ಕೊಟ್ಟು ಸಂತೈಸಿದನೊಯೆನೆ ರತ್ನಶೃಂಗಂಗಳೆಸೆದಿರ್ದವು ॥ (9)

ಕನಕರಾಜಿತ ನೀಲವರ್ಣಂಗಳಿಂದ ಮಂ ।
ಜನಶೈಲ ಕೈಲಾಸ ಮೇರುಪರ್ವತಗಳತಿ ।
ಘನಗರ್ವಮಂ ತಾಳದಿಪ್ಪವಿನಿತಕ್ಕೆ ನವಧಾತು ನವರತ್ನಂಗಳು ॥
ಮಿನುಗುತಿಹ ನವಲೋಹಮೆನ್ನೊಳಿರೆ ಗರ್ವಿಸದೆ ।
ಮುನಿಮೃಗಾವಳಿ ಪಕ್ಷಿಗಾಸ್ಪದಂ ತಾನೆನಿಸು ।
ತನುದಿನಂ ಪೋಷಿಪೇಂ ಸಕಲ ಜೀವರನೆಂದು ಶೋಭಿಸಿದನಚಲೇಂದ್ರನು ॥ (10)

ಮಿರುಗುವ ಲತಾಪುಂಜಕುಂಜದೊಳ್ ಶೋಭಿಸುವ ।
ಸುರಯಕ್ಷಗಾಂಧರ್ವ ಕಿನ್ನರಾಂಗನೆಯರುರು ।
ತರಗಾನಮಂ ಕೇಳುತಂಬಂದು ಮರಳದಿಹವತ್ಸಯುತ ಧೇನುಗಳನು ॥
ಕರದು ಪಾಲ್ಗರೆದುಂಬ ಶಬರಿಯರ ತನುಕಾಂತಿ ।
ಪರಪುತಿರಲಂಜನಾ ಚಲಮಿದೆಂಬಂದದಿಂ ।
ಕರಮೊಪ್ಪುತಿರ್ದುದಾಶ್ಚರ್ಯಮಂ ಬೀರುತಂ ಭೂಧರಂ ನೋಳ್ಪಜನಕೆ ॥ (11)

ಶಿಖರಾಗ್ರದಿಂ ಪರಿವ ನಿರ್ಝರೋದಕಕಣಂ ।
ಸುಕರಮುಕ್ತಾಫಲಗಳೆಂದು ಕೈರಾತಿನೀ ।
ನಿಕರಮಭಿಲಾಷೆಯಿಂ ಮೇಲುವಂ ತೆಗೆದೊಡ್ಡೆ ಗುಂಜದಂಡೆಯಕಾಂತಿಯು ॥
ಪ್ರಕಟಿಸಲ್ಕದ್ವನದ ಪಸುರ್ಗಾಯಕೆಂಪಾಗೆ ।
ಶುಕಕುಲಂ ಬಂದು ಕದುರ್ಕಂಕುತ್ತಮಿರೆ ಮಧುಪ ।
ನಿಕುರುಂಬ ಮಾತರುಣಿಯರ ಕುಚಂ ಕಮಲ ಮೆಂದೆರಗುತಿಹ ಪೇಪೆಂಬಿನು ॥ (12)

ಪದುಳದಿಂ ತಪ್ಪಲಂ ಮೇವರೈತಂದಿರ್ಪ ।
ಕದನಿಚಯಮಂ ಕಂಡು ನಿಜಜಾತಿಯೆಂದೈದಿ ।
ಮದವೆತ್ತು ಮಾತಂಗ ಮುಗ್ರತರ ಕೋಪದಿಂ ತಿವಿಯಲುರುಶಿಲೆಗೆತಾಗಿ ॥
ರದನಗಳ್ ಮುರಿದು ಕನ್ನೀರೊಸರೆ ವೇಗದಿಂ ।
ಬೆದರಿ ಬರುತಿರೆ ನೋಡಿ ಪೆಜ್ಜಾನೆ ಮರುಕದೊಳು ।
ರುಧಿರಮಂ ತೊಳೆತೊಳೆದು ಮದ್ದನಿಕ್ಕುತ್ತಿರ್ದುದೇನೆಂಬೆ ನಚ್ಚರಿಯನು ॥ (13)

ಸುರವಧುಗಳಕ್ಷಿ ರುಚಿ ದರಹಾಸರೋಚಿಯಿಂ ।
ಪುರಹರನ ಶೈಲದಂತೆಸೆದಿರ್ದುದೊಮ್ಮೆ ತ ।
ನ್ನಿರುಪಮಾಂಗದ ಕಾಂತಿಯಿಂದೊಮ್ಮೆ ಕನಕಾದ್ರಿಯೆಂಬಂತೆ ಶೋಭಿಸಿದುದು ॥
ಮಿರುಪ ತತ್ಕಂಠಗಳದ್ಯುತಿಯಿಂದಮೊಮ್ಮೆ ತೃಣ ।
ಚರಗಿರಿಯು ಮೆಂಬಂತೆ ರಾರಾಜಿಸುತಮಿರ್ದು ।
ದಿರವನುಂ ನಿಶ್ಚಯಿಪ ರಾರೆನುತಮಲ್ಲಲ್ಲಿ ಬೆರಗಾಗಿ ನೋಡುತಿಹರು ॥ (14)

ವೃತ್ತಕುಚೆಯರ್ ಪೇಳ್ವ ಬಿತ್ತರದ ಗಾನಕ್ಕೆ ।
ಪುತ್ತದಿಂ ಪೊರಟು ತಲೆಯೆತ್ತಿ ನೋಡುವ ಫಣಿಯ ।
ನೆತ್ತಿಯೊಳಗಿರ್ಪ ಮಣಿಯುತ್ತಮದ್ಯುತಿಯಿಂದೆ ರತ್ನಮಯಸಾನುವಾಗೆ ॥
ವಿತ್ತೇಶ ಸುರಪಸುರಸತ್ತಮರ್ ಸಂತಸಂ ।
ಬಿತ್ತು ತಮಗಾಲಯಂ ಮತ್ತೊಂದುಮಾಯಿತೆಂದು ।
ಮತ್ತೇಭಗಮನೆಯರ ಮೊತ್ತಸಹಿತಂ ಬಂದುಮಿತ್ತಲುಂ ಕ್ರೀಡಿಸುವರು ॥ (15)

ಹಾರಿದ್ರ ಸಂಮಿಶ್ರ ತಾಳೀದಳಾಬದ್ಧ ।
ಚಾರುತಾಟಂಕಗಳನುರೆ ಧರಿಸಿ ವಲ್ಕಲದ ।
ಸೀರೆಗಳನುಟ್ಟು ಕತ್ತೂರಿ ಬೊಟ್ಟನಿಟ್ಟು ಮೆರೆನೊಸಲೊಳುರುಸೌಖ್ಯದಿಂದ ॥
ಭೂರುಹದ ನೆಳಲೊಳಾಶ್ರಮಗೈದು ಪತಿಯ ಪದ ।
ಸಾರಸವನರ್ಚಿಸುತಮನುದಿನಂ ಮುನಿವರರ ।
ನಾರಿಯರ ತಂಡಮತಿ ಶೋಭಿಸಿದುದಾ ಗಿರಿಯ ಸಾನುಪ್ರದೇಶದಲ್ಲಿ ॥ (16)

ಉರಗ ನಕುಲದೊಳೊಂದುಗೂಡಿ ಶೋಭಿಸುತಿಹವು ।
ಹರಿಣ ಶಿಶುವಿಗೆ ಮೊಲೆಯ ನೂಡುವದು ಶಾರ್ದೂಲಿ ।
ಕರಿಕಲಭಮಂ ಮುಟ್ಟುವುದು ಸಿಂಹ ಶಾಬಕಂ ಪಶುಪುಲಿಗಳೊಂದೆಡೆಯೊಳು ॥
ಮರನಡಿಯೊಳೊರಗಿರ್ಪವತಿಮೋದದಿಂದೆ ಮಂ ।
ಜರಪುಲಿಗಳುರು ಮೋಹವಾಂತಾಡುತಿರ್ಪ ವನ ।
ವರತವಧಿಕಸ್ನೇಹಭಾವದಿಂದಿರ್ಪೊಡಿದು ಗಿರಿವರನ ಮಹಿಮೆಯಲ್ತೆ ॥ (17)

ಮುನಿವಟುಗಳೊಂದಾಗಿ ವ್ಯಾಘ್ರಮಂ ಪಿಡಿತಂದು ।
ತನುವ ನೇವರಿಸುತಂ ರಜ್ಜುಬಂಧನಗೈದು ।
ತಿನಲಿತ್ತು ಹವಿಯ ಶೇಷವನೈದೆ ವಿಪಿನದೆಡೆಗೆಳದೊಯ್ದು ಮುದ್ದುಗೈದು ॥
ಅನುವಿನಿಂದಂ ಸಮಿತ್ಕುಶಕಂದ ಮೂಲಂಗ ।
ಳನಿತನುಂ ಪೊರೆಗಟ್ಟಿ ಪೊರಿಸಿ ಸಿರಿಮಧ್ಯದೊಳ್ ।
ಮಿನುಗುತಿಹ ಮನಿಗಳ್ಗೆ ಕೊಂಡೊಯ್ವರನುದಿನಂ ಪೇಳಲೇನಚ್ಚರಿಯನು ॥ (18)

ಗೊರವಂಗೆ ಪಾಂಗೆನಿಪ ಕಿತ್ತಡಿಗಳನುದಿನಂ ।
ವಿರಚಿಸುತಮಿರ್ಪಗ್ನಿಹೋತ್ರಧೂಮಂ ಮನೋ ।
ಹರವಾಗಿ ದಂಡದೋಲಂಬರಾಂಗಣಕಡರಲಮರೇಂದ್ರ ಪುರದೊಳರ್ಪ ॥
ತರುಣಿಯರ್ ತದ್ಗಿರಿಯ ಸಾನುಪ್ರದೇಶಕಂ ।
ನಿರತಮೈತರ್ಪರಿದು ಕರ್ಬೊನ್ನದಿಂದೆಸಗಿ ।
ದುರುತರದ ಸೋಪಾನ ಮೆಂಬಂತೆ ಕಂಗೊಳಪುದೇನೆಂಬೆ ನತಿಶಯವನು ॥ (19)

ನೀರದಗಳೈತಂದು ಶಿಖರಮಂ ಕವಿಯಲಾ ।
ಹಾರಮಿದ ಪಿಡಿದು ಮಾಂಸಂಗೈಯುವೇಳ್ಕೆಂದು ।
ತೋರಮೊಲೆಗಳ ಕೊಂಡು ಗುರುಳೋರೆದುರುಬಿನೆಳೆದಳರುಡಿಗೆ ಎಣ್ಣೆಮೈಯು ॥
ಕೈರಾತ ನಾರಿಯರ್ ತಮತಮಗೆ ಚರ್ಚರದೊ ।
ಳಾರೈದು ಭೋಜನಂಗಳನಿಟ್ಟು ಕಾದಿರಲ್ ।
ಚಾರುತರಶತಶೃಂಗಪರ್ವತಮೊ ಯೆಂಬಂತೆ ಭೂಧರಂ ಕಣ್ಗೆಸೆದುದು ॥ (20)
ತರಣಿ ಯುದಯದ ಮುನ್ನ ಶಬರಸತಿಯೊರ್ವ ಪ್ರ ।
ಸ್ತರತಳದೊಳಂ ಶೋಭಿಸುವ ಮೀನ್ಗಳಂ ಮಲ್ಲಿ ।
ಯರಳೆಂದು ಪುಷ್ಪಾಪಚಯಕೆ ಶಿಖರವನೇರ್ದು ನೆಱೆಯಾಸ್ಯವಡಿಸಿಕೊಂಡು ॥
ಕರಗಳಂ ನೆಗೆನೆಗಪಿ ಚರಿಸಿ ಕಂಗೊಳಿಸಿದಳ್ ।
ಸರಸಿಜಪ್ರಿಯರಶ್ಮಿದಾಮಮಂ ಪಿಡಿಪಿಡಿವು ।
ತುರೆಕೋಡಕಲ್ಲಗಳೆಯಂ ಪತ್ತಿಯಾಡುತಿಹ ಕೊಲ್ಲಡಿಗರಬಲೆಯಂತೆ ॥ (21)
ಮಿಸುಪ ದರ್ಭಾಸನದ ಬನಜೋಗ ಪಟ್ಟೆಗೆಯ ।
ಶಶಿಕಾಂತರುಚಿಭಸಿತಲೇಪನದ ರುದ್ರಾಕ್ಷಿ ।
ವಿಸರಾಕ್ಷಮಾಲಿಕೆಯ ಜಿತಪವನಪಂಚಕದ ನಿಶ್ಚಲತ್ವದ ಮೌನದ ॥
ಪಸಿವುತೃಷೆನಿದ್ರೆಗಳ ಪಂಗಿನಿತುಮಿಲ್ಲದಿಹ ।
ಬಿಸಿಲು ಛಳಿಮಳೆಗಳಂಟದ ದಿವ್ಯ ವಿಗ್ರಹದ ।
ಕುಸುಮಾಸ್ತ್ರನರುಚಿಯಂ ಗೆಲ್ದಯೋಗಿಯು ತೆರದೊಳೆಸೆವಸವನೀಧರೇಶಂ ॥
ವಿತತ ಮೃಗನಾಭಿಯಂ ಗಳಕೆ ಲೇಪಿಸಿ ಜವಾ । [(22)
ತ್ಕೃತಿಯಿಂದೆ ಕುಂಕುಮದ ಬೊಟ್ಟನಿಟ್ಟಂ ನೊಸಲೊ ।
ಳತಿಶಯದಿ ಜಡೆಗಟ್ಟಿ ಸುತ್ತಿ ಪವಿರಚಿತ ಶಿಖಿಭೂಷಣಂದಾಳ ತನ್ನ ॥
ಪತಿಯೊಡನೆ ಸುರರಮಣಿ ಸುಖಮಿರಲ್ ಪೊದರಿನೊಳ್ ।
ರತಿನಾಥ ನೈತರಲ್ಕಂಜಿ ಪಿಂದಿರುಗಲ್ಕೆ ।
ಯತಿಕುಲಂ ತಪಕೆ ನಿರ್ವಿಘ್ನಮಾಯ್ತೆಂದಿರ್ದುದಾಗಿರಿನಿತಂಬದಲ್ಲಿ ॥ (23)
ಮೇಲಣಿಂದಿಳಿವಸಲಮೆರಡು ಕವಲಾಗಿ ನವ ।
ನೀಲೋಪಮದ ಶಿಲೆಯು ಮೇಲೊಂದು ಮತ್ತೊಂದು ।
ಶೀಳು ಚಂದ್ರೋಪಲದ ಮೇಲೆ ಪರಿದೆರಡೊಂದುಗೂಡಿ ತನ್ಮೂಲದಲ್ಲಿ ॥
ಲೀಲೆಯಿಂದಮರಧುನಿ ಯಮುನೆಯರ ಸಂಗಮದ ।
ಕೂಲಮೆಂಬಂತೆಸೆಯಲಲ್ಲಿರ್ಪ ಸನ್ಮುನಿ ।
ಜಾಲಮನಿಶಂ ಸ್ನಾನಪಾನಂಗಳಂ ಮಾಳ್ಪುದೇನೆಂಬೆನತಿಶಯವನು ॥ (24)
ಮಾರ್ತಾಂಡ ಮಂಡಲವ ನಂಡಲೆವ ಶೃಂಗಗಳ ।
ಕಾರ್ತಸ್ವರದ್ಯುತಿಯನಾಂತೈದೆ ಪರಿವೃತಿಹ ।
ನೀರ್ತಡಿಯೊಳುರೆ ಬೆಳೆದ ತನ್ಮಯದ ಶರವಣದ ಪೊದರಿನೊಳ್ ಹರಗಿರಿಶರಾ ॥
ಮೂರ್ತಿಗಳನಿಟ್ಟರ್ಚಿಸುತ್ತ ತನ್ಮಹಿಮೆಯಂ ।
ಕೀರ್ತನಂಗೈವುತ್ತಮಾನಂದರಸದಿಂದ ।
ನರ್ತಿಸುವ ತದ್ಭಜಕರೆಸದಿರ್ದರಾಗಿರಿಯ ಕಟಕಪ್ರದೇಶದಲ್ಲಿ ॥ (25)

ಗೋಮಯಂ ತಾನಾಗಿ ಗೋನಿಕರ ವಿರಹಿತಂ ।
ಸೋಮಕಾಶ್ರಯನಾಗಿ ಸೋಮನಾತಿಲಂಘನಂ ।
ಪ್ರೇಮದಿಂದೆ ಪಲಾಶಯುತನುಮಾಗಿ ಪಲಾಶಸಂಹಾರಿ ತೋಷಕಾರಿ ॥
ಆಮೋದಿಸುಮಮಯನುಮಾಗಿ ಸುಮನೋಹರಂ ।
ಕಾಮಗಾಸ್ಪದನಾಗಿ ಕಾಮಾರಿಪೋಷಕಂ ।
ವಾಮನಾನ್ವಿತನುಮಾಗಿ ವಾಮನನದುಗ್ರಮನನೆಂದೆಸೆದ ನಾಗಿರೀಂದ್ರ । (26)

ವೇಣು ರಂಧ್ರಾವಳಿಗತಾಗಮನಪವಮಾನ ।
ಮಾಣವಕ ? ಸಂಭೂತ ಗಾನಮಂ ಕೇಳುತಿರ ।
ಲೇಣಿಶಾ ಸಂಕುಲಂ ಬನ್ಮೌಲವಲ್ಮೀಕಕುಹರದಿಂದಹಿಗಳೆದ್ದು ॥
ಮಾಣಿಕ್ಯಮಂಡಿತದ ಹೆಡೆಗಳಂ ಮೇಲೆತ್ತಿ ।
ಕಾಣುತಂ ಬಳಸಿ ಪರಿದೋಡಲಕ್ಷಿದ್ಯುತಿ ।
ಶ್ರೇಣಿಯೀಂ ಚೆಲ್ವ್ಪಡುದದ್ರಿ ತಾಂ ತಾಳಿರ್ದ ನೀಲಮಣಿಮಾಲೆಯಂತೆ ॥ (27)

ಕಮಲನೇತ್ರಂ ಭಾಸ್ಕರಾನ್ವಯದೊಳವತರಿಸಿ ।
ರಮಣಿಸಹಜಾತಸಹಿತಿಲ್ಲಿಗೈತಂದಿಹಂ ।
ನಿಮಗಿನ್ನು ದಾನವರ ಭಯವಿಲ್ಲ ಸ್ವಸ್ಥಾನದಲ್ಲಿರ್ದುಚಿತಮೆಂದು ॥
ಭ್ರಮರ ಝೇಂಕಾರ ವಚನಗಳಂ ಮಾರುಚ್ಚಲಿತ ।
ಕಮನೀಯ ಕಿಸಲಯ ಸುಹಸ್ತಂಗಳಿಂದೆ ಸಂ ।
ಯಮಿನಿಕರಮಂ ಕರೆವುತಿರ್ಪವೆನೆ ತನ್ಮಹೀಧರನಾಥ ನೊಪ್ಪಿರ್ದನು ॥ (28)

ಸುರರಾಜನಿನವಂಶಸಂಭೂತರಾಘವನ ।
ದರುಶನಂಗೈವೆನೆಂದೈರಾವತವನೇರ್ದು ।
ಭರದಿಂದ ಬಂದೀಕ್ಷಿಸುತಮಿರ್ಪನೆನೆ ಚಂದ್ರಕಾಂತರುಚಿಯಿಂ ಶೋಭಿಪ ॥
ಗಿರಿಯಗ್ರದಲ್ಲಿ ಮಕರಂದ ಪಾನಾಸಕ್ತ ।
ತರುಷಾಳಿಯೊಂದೊಂದನಾಂತೆಸೆವ ಫುಲ್ಲಸುಮ ।
ಭರಿತೋರುಮಲ್ಲಿಕಾ ವೀರುಧಂ ರಾರಾಜಿಸುತಮಿರ್ಪುದತಿಶಯದೊಳು ॥ (29)

ಜಲಪಾನವಭಿಲಾಷೆಯಿಂದಲೈತಂದ ಕರಿ ।
ಕಲಭಗಳ್ ಕಾಸಾರಮಂ ಪೊಕ್ಕು ಕರಗಳಿಂ ।
ನಳಿನಂಗಳಂ ಕೀಳಲೊಡನೆ ತನ್ಮಧ್ಯಗತದಳಿಕುಲಂ ಪಾರಲಾಗಾ ॥
ಸಲಿಲಧರದಂತಾಗೆ ತಳರೆಲರ ಸೋಂಕಿನಿಂ ।
ಪೊಳೆವ ಸೌದಾಮಿನಿಯು ಪೋಗೆ ಪಾರಾವತದ ।
ಗಳರವಂಗುಡುಗಾಗೆ ವರ್ಷಾದಿಯೆಂದುಬ್ಬಿ ಕೇಕಿಗಳ್ ಕುಣಿವುತಿಹವು ॥ (30)

ಮರನೇರಿ ಮಧ್ಯಮಂ ಕುಡಿದು ಪುತ್ತವನಗೆದು ।
ಸುರಿದು ಮಧುವಂ ಸೊಕ್ಕುದಳಿದು ಪರಿದಾಡುತಿಹ ।
ಕರಡಿಯಂ ಕಂಡು ಭಯಗೊಂಡೊರ್ವಸುರತ ಮಣಿಪರ್ವತವನೇರಲವಳ ॥
ಪರಿಮಳಕೆ ಕರತಳಕೆ ತಾರುಬಿಗಘರಕೆ ।
ಪರಮ ಕೋಗಿಲೆ ನವಿಲ್ ಗಿಳಿಪಂಸೆಗೊಂದಣಂ ।
ಬರೆತೋರ್ದುದದ ನದ್ರಿಚೆಲ್ವಿಕಗೆ ಮೆಚ್ಚಿತ್ತು ಚಿತ್ರತರ ಚೇಲಜಂತೆ ॥ (31)

ಈಗಿರಿಯ ಶಿಖರಮಂ ನೋಡುವಭಿಲಾಷೆಯಿಂ ।
ಪೋಗದುತ್ತಾಳ ಕಮಸಾರಿಕೇಳಾಳಿಂಗ ? ।
ಆಗಸಕೆ ಬೆಳೆದೈದೆ ಕಾಣವಿರಲಾಶ್ಚರ್ಯಮಂಬಟ್ಟು ಬಳಿಕ ತಲೆಯ ॥
ತೂಗುವಂದದೊಳೆಲರ ಸೋಂಕಿನಿಂದೊಲಿವಾಡ ।
ಲಾಗಳಂಬುಜಭವಂ ನಿಜಸೃಷ್ಟಿ ಶೈಥಿಲ್ಯ ।
ಮಾಗದೊಲ್ ಪಾಶಬಂಧನಗೈದನೆಂಬಂತೆ ನಾಗವಲ್ಲಿಗಳೆಸದವು ॥ (32)

ಶೃಂಗ ಸೌಧಂಗಳಂ ಸನ್ಮಾರ್ಗವೀಥಿಯಿಂ ।
ರಂಗದುಗ್ರಹಾವರೋಧಂಗಳಂ ಚಾರುಲತೆ ।
ಕಾಂಗನಾನಿಚಯದಿಂ ಪುನ್ನಾಗಪುರುಷರಿಂ ಗಂಡಶಿಲೆ ಗಜಗಳಿಂದ ॥
ಕಂಗೊಳಪಮೃಗತೃಷ್ಣೆಹಯಗಳಂ ಶುಕಪಿಕೋ ।
ತ್ತುಂಗ ಪಾರಕರಿಂದ ಷಟ್ಪದಮಯೂರಕುಲ ।
ಸಂಗೀತನರ್ತನಗಳಿಂ ಸಿಂಹರಾಜನಿಂ ನಗರದಂತೆಸೆದುದದ್ರಿ ॥ (33)

ತಳಿರಡಿಯ ನುಣ್ದೊಡೆಯ ಗಿಳಿನುಡಿಯ ಬಟ್ಮೊಲೆಯ ।
ನಳಿತೋಳ ತೆಳ್ವಸಿರ ಸೆಳೆನಡುವಿನೆಳೆನಗೆಯ ।
ಪೊಳಪಾಂತ ಪೆರೆನೊಸಲ ತಿಲಕದುರುಕಾಂತಿಗಳನಳಿನನಿಭನೇತ್ರಯುಗದ ।
ಅಳಿಗುರುಳನಬಲೆಯರ್ ಜಲಕೇಳಿಗೈತಂದು ।
ಜಲಜಪತ್ರಂಗಳಂ ಸಲಿಲಮಂ ಚಿಮ್ಮೆ ಭೂ ।
ಲಲನೆ ತನ್ನಂ ಧರಿಸಿದಾತಗಭಿಷೇಕಮಂ ಮಾಳ್ಪಳೆಸಲೆ ಸದಿರ್ದನು ॥ (34)

ಹರಿಯಕ್ಷಿ ವಿಧಿಯ ಗದ್ದುಗೆ ಲಕುಮಿಗಿಕ್ಕೆ ಭಾ ।
ಸ್ಕರನ ಮಿತ್ರತೆ ಮನಸ್ಸಂಭವನತೋಮರಂ ।
ಪರಮೊಗಳ ಭೋಜನದ ಶಾಲೆ ಸೌರಭ್ಯದಾಗಾರಮಾಗಿರಲು ಮುಗುಳ್ ॥
ತರುಣಿಯರ ಮುಖಶರ್ವರೀನಾಥನಿಂದೆ ತಾ ।
ಮರೆಯಾದವೆಂದು ಮರುಗುತ್ತಮಿರಲದ್ರಿಮಣಿ ।
ತರಣಿಯಿಂ ವಿಕಸನಂಗೈಸಿದುದೊ ಯೆನಲಬ್ಜ ಸಂಕುಲಂ ಶೋಭಿಸಿದುದು ॥ (35)

ತರಣಿಸಂಯುತನಾಗಿ ವಿದ್ರುಮಾನ್ವಿತನಾಗಿ ।
ಹರಿನಿಕ್ಕಯಾಗಿ ಸಾರಂಗಶೋಭಿತನಾಗಿ ।
ಪರಮಹಂಸಾಶ್ರಯನುಮಾಗಿ ಚಕ್ರಾವೃತನುಮಾಗಿ ಶಿರಯುತನುಮಾಗಿ ॥
ಉರು ಪುಂಡರೀಕ ವಿಭ್ರಾಜಿತನುಮಾಗಿ ಭೂ ।
ಸುರಮಹಾದ್ವಿಜರಾಜ ಸಂತೋಷಕರನಾಗಿ ।
ಶರಭಂಗ ವಿಲಸಿತನುಮಾಗಿ ವಾರಿಧಿಯಂತೆ ರಂಜಿಸಿದನಚಲೇಂದ್ರನು ॥ (36)

ಎಳೆಲೆಯ ಬಾಳೆಯೊಳ್ ಪುಟ್ಟಿಪರ್ಣ ದಿವ್ಯಹಿಮ ।
ವಾಲುಕದ ಕಂಪಿಗಳಕುಲಮೆರಗೆ ಜಂಬೂ ।
ಫಲಾಳಿಯೊಂದೆನುತ ಗಿಳಿವಿಂಡು ಬರೆ ಕಂಡು ತತ್ತುಂಡಗಳ್ ತಳರುವೊಂದು ॥
ಲೀಲೆಯಿಂ ಪಿಕನಿಕರಮೈತರಲ್ ತನುಕಾಂತಿ ।
ಜಾಲಮುರೆ ಕಳ್ತಲೆಯೊಳಾಗೆ ಶಬರಾಂಗನೆಯ ।
ರೋಳಿ ಮನ್ಮಥಕೇಳಿಯೊಳಗಿರ್ದುದಾಗಿರಿಯ ಮೂಲಪ್ರದೇಶದಲ್ಲಿ ॥ (37)

ಚಾರುತರಶೃಂಗಾಗ್ರಮಂ ಕವಿದ ಶುಭ್ರಮಯ ।
ನೀರಧರದೊಳ್ ಪೊಳೆವ ಮಿಂಚು ಕರಮೊಪ್ಪಿದುದು ।
ಮಾರನುರುಕೇಳಗನುಕೂಲೆಯಾಗಿ ದುಕೂಲಮಂ ಧರಿಸಿ ಮುಸುಕನಿಟ್ಟು ॥
ಧಾರಿಣೀಧರನಾಥನೆಂಬ ಪ್ರಿಯನಂ ಸುತನು ।
ತೋರಲತಿಕಾಬಾಹುಗಳಿಂ ಬಿಗಿದಪ್ಪಿ ಸುರ ।
ನಾರಿಯೊರ್ವಳು ಮುಸರಿಸುರತಾನುಮೋದದಿಂದಿರ್ಪಳೆಂಬಂದದಿಂದ ॥ (38)

ಸರಸಿಜಪ್ರಿಯಶಕಟಚಕ್ರಶಾಣೋಲ್ಲೀಢ ।
ಮರಕತ ಮಹಾಪದ್ಮರಾಗ ವೈಡೂರ್ಯತೃಣ ।
ಚರಪುಷ್ಯರಾಗ ವಿದ್ರುಮವಜ್ರಗೋಮೇಧಿಕೋಜ್ವಲಿತ ಶೃಂಗಾಗ್ರದ ॥
ಉರುಕಾಂತಿಯಿಂದದ್ರಿ ರಮ್ಯತರಮಾಗಿ ಸುರ ।
ವರನ ಮಣಿಶೈಲಮೊ ವೈಶ್ರವಣನಾಲಯದ ।
ಕರುಮಾಡಮೊ ಸೂರ್ಯಶಶಿಗಳಿಕ್ಕೆಯೋ ನೋಡೆಗಿರಿಯಲ್ಲಮೆಸಲೆಸೆದುದು ॥ (39)

ನೀಲಕುಟ್ಟಿಮದಿಂದ ರನ್ನಪಸೆವಣೆಯಿಂದ ।
ಬಾಳೆಗಂಬಗಳಿಂದ ತಳಿರಮೇಲ್ಗಟ್ಟಿಂದ ।
ಸ್ಥೂಲವಂಶಜ ಮೌಕ್ತಿಕದ ರಂಗವಲ್ಲಿಯಿಂ ಶುಕವಚನಮಂತ್ರದಿಂದ ॥
ರೋಲಂಬ ಗೀತದಿಂ ಕೋಗಿಲೆಯ ಪಾಠಿನಿಂ ।
ವ್ಯಾಳಭುಜನ್ನಾಟ್ಯದಿಂದೆಸೆವುತಿಹ ಮಂಟಪಂ ।
ಶೈಲೇಶಮಾಧವಂ ವನರಮೆಯ ಕೈವಿಡಿವ ಲೀಲೆಯೆನೆ ಶೋಭಿಸಿದುದು ॥ (40)

ಧೊರೆಗಾಪ್ತನಾವ ನಂಬುಜಕೆ ಶಶಿಯೇನಹಂ ।
ಸರಸತಿಗೆ ಪ್ರಿಯಮಾದ ಚೇಲಮಾವುದು ರಾಮ ।
ಚರಣಸೇವಕನಾಸ್ಯ ಕಾಂತಿತಾನಾವುದೀ ಪ್ರಶ್ನೆಗಳಿಗುತ್ತರವನು ॥
ಮಿರುಗುತಿಹ ಮೂರಕ್ಕರದೆ ನಾಲ್ಕು ಪಂಕ್ತಿಯಂ ।
ಬರೆದು ಮಧ್ಯಾಕ್ಷರವ ನೈದೆ ಸಾಲ್ವಿಡಿದೋದೆ ।
ಪರಿಶೋಭಿಸುವ ಪೆಸರ್ ತನಗಿರ್ಪುದೆಂದದ್ರಿ ಪೆಂಪಿನಿಂದೆಸೆದಿರ್ದುದು ॥ (41)

ಉದಯಪರ್ವತದಂತೆ ಹಂಸಸಿತರುಚಿಯುತಂ ।
ಮದನಾರಿಯೊಲ್ಸರ್ವಮಂಗಳಾಸ್ಪದನಿಂದ್ರ ।
ಸದನದೊಲ್ ವಿಬುಧಗುರುಶೋಭಿತಂ ನೃಪತಿಯೋಲಗದಂತೆ ಕವಿಭಾಸುರಂ ॥
ತ್ರಿದಶರುಪವನದಂತೆ ಮಂದಾರರಂಜಿತಂ ।
ಕದನದೊಲ್ನಾಗಕೇತುವಿರಾಜಿತನುಮೆಂದು ।
ಮುದದಿಂ ನವಗ್ರಹರನಾಮಮಂ ತೋರ್ಪಿಸುತದ್ರೀಂದ್ರನೊಪ್ಪಿದ್ದನು ॥ (42)

ಸುರಪನೊಲ್ ರಂಭಾವಿಲಾಸಿ ವೈಶ್ವಾನರನ ।
ಪರಿಯೊಲುರು ಪುಂಡರೀಕಾನ್ವಿತಂ ಯಮನಂತೆ ।
ಕರದಂಡಶೋಭಿ ನೈರುತಿಯಂತೆ ಪುಣ್ಯಜನಪೋಷಕಂ ಪಾಶಿಯಂತೆ ॥
ಶರಮಯಂ ಪಾವನನೊಲ್ ಸಾರಂಗ ಸಂಯುತಂ ।
ನರವಾಹನನತೆರದೆ ಕಂಗೊಳಿಕಳೆಯಾಗಿ ।
ಶ್ವರನೊಲ್ ದಿಗಂಬರೋಜ್ವಲನೆಂದು ಗಿರಿವರಂ ದಿಕ್ಪಾಲರಂತೆಸೆದನು ॥ (43)

ರಾವಣನ ಸಖಿಯಂತೆ ವ್ಯಾಗಮಂದಿರದಂತೆ ।
ಕೋವಿದ ಶುಕಾಲಾಪಕಂಸರೋವರದಂತೆ ।
ಭಾವಸಂಭವಜನಕನಂತೆ ಕಮಲಾನ್ವಿತಂ ಪಾರ್ವತೀರಮಣನಂತೆ ॥
ದೇವಪತಿಯಂತೆ ಗೋಧರನಬ್ಜವನದಂತೆ
ಭೂಪರಾಲಯದಂತೆ ಕಲಕಂಠಶೋಭಿತಂ ।
ಸೌವರ್ಣಗಿರಿಯಂತೆ ರಣವಂತೆ ಖಗಯುತಮುಮಾಗಿ ವರ್ಪನದ್ರೀಂದ್ರನು ॥ (44)

ತರುಣಿಯೊರ್ವಳ್ ಪುರುಷನೆಡೆಗೈದುತಿರಲಾಗ ।
ಬಿರುಗಾಳಿಯಿಂದ ಮೇಲುದು ಜಾರೆ ಕುಚಗಳಂ ।
ಸರಸಿಜಗಳೆಂದು ತುಟಿಯಾಲವಣ್ಗೆಂದಳಿಶುಕಂಗಳೆರಗಲ್ ಕದುರ್ಕಲು ॥
ಬರುವ ಪಥದೊಳಗವಂ ಚೆಲ್ವಮುತ್ತುಕದರಲ್ ।
ಮಿರುಪ ನೇರಿಲ ಪಣ್ಣನುತ್ತು ಪೋರಲ್ ನಗುತೆ ।
ತರುಣಿನಿಟ್ಟಿಗೆ ಮುಟ್ಟದೈದಿದವು ಭ್ರಾಂತಿ ಪರಿದಾಗಿರಿಯ ಶೃಂಗಾಗ್ರಕೆ ॥ (45)

ಸುರಪನೊಲ್ವಜ್ರವಜ್ರಿಯು ತೆರದೆ ಗೋವಿಭಾ ।
ಸುರನೈದೆ ಗೋವಿಭಾಸುರನೊಲ್ಪೈರಾವತಸ್ಫುರಿತ ।
ಸ್ಫುರಿತನೈರಾವತ ಸ್ಫುರಿತನೊಲ್ ಭೂರಿ ನೇತ್ರಂ ಭೂರಿನೇತ್ರನಂತೆ ॥
ಪರಿಪೋಷಿತೇಂದ್ರಾಣಿ ಪೋಷಿತೇಂದ್ರಾಣಿಯೊಲ್ ।
ಸುರಭಿರಮ್ಯಂ ಸುರಭಿರಮ್ಯನಂತಾವಗಂ ।
ಧರಣೀಧರಾಧಿಪಂ ಸುರಪನೆಂದೆನಿಸಿ ತಾಂ ರಾಜಿಸಿದನೇಂ ಪೊಗಳ್ವೆನು ॥ (46)

ಒಂದೆಸೆಯೊಳಂ ರಜತಸನ್ನಿಭಂ ನೋಡೆ ಮ ।
ತ್ತೊಂದೆಸೆಯೊಳಂ ಪುಷ್ಪರಾಗಾಭಮರ್ಕನಿಭ ।
ಮೊಂದೆಸೆಯೊಳಂ ಕ್ಷತಜ ಪೀಡಸಂಕಾಶಂಗಳೊಂದೆಸೆಯ ನೀಲಕಾಂತಿ ॥
ಒಂದೆಸೆಯ ಮಾಂಜಿಷ್ಠ ಕೇತಕೀವರ್ಣಂಗ ।
ಳೊಂದೆಸೆಯ ಪಾರದಜ್ಯೋತಿರ್ಲತಾಚ್ಛಾಯ ।
ಮೊಂದಿ ಶೋಭಿಪ ಗಿರಿಯನೀಕ್ಷಿಸೆಂದವನಿಜೆಗೆ ತೋರಿದಂ ರಘುವೀರನು ॥ (47)

ಪನಸ ಖದಿರಾಂಕೋಲ ತಕ್ಕೋಲ ವೇತ್ರಧ ।
ನ್ವನತಿಲಕತಿಂದುಕಾಮಳಕ ವರುಣ ಮಧೂಕ ।
ಕನಕಾಮ್ರವೇಣಿ ಕಾಶ್ಮೆರ್ಯ ದಾಡಿಮ ಬಿಲ್ವಪಿಚುಮಂದ ತಿಖಿಶ ಬದರಿ ॥
ನನೆಯಗಾಂತ ನೀಪಕುರುವಕ ಲೋಧ್ರ ಚವ್ಯಚಂ ।
ದನ ಜಂಬು ಜಂಬೀರ ಲಿಕುಚಪ್ರಿಯಾಳಕಾ ।
ಸನ ತಾಳ ಹಿಂತಾಳ ನಾಳಿಕೇರಾದಿ ತರುಷಂಡಗಳನೀಕ್ಷಿಸಬಲೆ ॥ (48)

ಚಾರು ಶುಕಕೋಕಿಲೋಲೂಕ ಚಾತಕ ಹಂಸ ।
ಸಾರಸ ಭರದ್ವಾಜ ಕಲವಿಂಕ ಗೃಧ್ರ ಮಾ ।
ಯೂರ ಖಂಜನ ಚಂಚರೀಕ ಟಿಟ್ಟಿಭ ಚಕ್ರ ಚಾಷಕ ಕ್ರೌಂಚ ಕುರರಿ ॥
ಪಾರಾವತ ಶ್ಯೇನ ಲೋಹ ಪೃಷ್ಟಕಳಿಂಗ ।
ಚೀರು ಕಾಕಾ ಕೋಲ ಕಾರಂಡ ತಿತ್ತಿರಿ ಚ ।
ಕೋರ ಮುಖ್ಯ ಸುಪಕ್ಷಿ ಸಂಕುಲದ ಸಂಭ್ರಮವನೀಕ್ಷಿಪುದು ಧರಣಿಜಾತೆ ॥ (49)

ಹರಿಣ ಹರಿ ಕರಿ ಖಡ್ಗ ಭಲ್ಲೂಕ ವೃಷಭ ಕಾ ।
ಸರ ಕೋಲ ಕಂಪಳೀ ಚೀನ ಶಾರ್ದೂಲ ವಾ ।
ನರ ಚಮರ ವಾತಪ್ರಮೀ ಕಲಲಿಗೋಕರ್ಣ ಗಂಡ ಶಿವ ಕೃಷ್ಣಸಾರ ॥
ಶರಭ ನಕುಲ ಚಮೂರು ಶುಭ್ರಾದಿ ಬೈಡಾಲ ।
ರುರುಮುಖ್ಯ ಮೃಗನಿಕರಮೈದೆ ನಿರ್ವೈರದಿಂ ।
ಗಿರಿಕಟಕದೇಶದೊಳ್ ಸಂಚರಿಸುತಿರ್ಪುದಂ ನೋಡಬ್ಜಪತ್ರನೇತ್ರೆ ॥ (50)

ಇತ್ತ ನೋಡಬಲೆ ಫಲಪುಷ್ಪಸಂಭರಿತಮಾ ।
ದುತ್ತಮದ್ರುಮದ ಸುಚ್ಛಾಯೆಯೊಳ್ ಸಮ್ಮುದಂ ।
ಬೆತ್ತು ವಿದ್ಯಾಧರರ್ ಕಿನ್ನರರ್ ಕಿಂಪುರುಷರಲ್ಲಲ್ಲಿ ಬಿನದದಿಂದೆ ॥
ಮತ್ತಕಾಶಿನಿಯರ್ ಗೊಡಮೈದೆ ಕ್ರೀಡಿಸುತಿರ್ಪ ।
ರೆತ್ತಲುಂ ಮಾರುತಂ ಗುಹೆಗಳೊಳ್ ಪರಿಮಳದ ।
ಮೊತ್ತಮಂ ಬೀರುತಿಹ ನಿದಕಾವನುಂ ಸಂತಸಂಬಡೆನು ಕುವಲಯಾಕ್ಷಿ ॥ (51)

ಫಲಪುಷ್ಪ ಸಂಭರಿತವನದಿಂದೆ ಪಕ್ಷಿಗಂ ।
ಕುಲದಿಂದೆ ಮೆರೆವ ಶಿಖರದೊಳನೇಕಾಬ್ದಮಾಂ ।
ನೆಲಸುವೆಂ ನಿನ್ನನೊಡಗೊಂಡನುಜ ಸಹಿತೆನ್ನ ಶೋಕಮಾದರಿಂ ದಹಿಸದು ॥
ಫಲಮೆರಡುಮಾಯ್ತು ಪಿತೃಋಣವಿಮೋಚನಮೊಂದು ।
ಬಳಿಕ ಭರತಗೆ ರಾಜ್ಯಸಂಪದಂ ಸೇರ್ದುದೊಂ ।
ದಿಳೆಯೊಳೀವನವಾಸಮೆನಗಾದ ಕಾರಣಂ ವ್ರತಿಯಾದೆ ನಮಲಗಾತ್ರೆ ॥ (52)

ವನನಿವಾಸಂಗೈಯೆ ಸ್ವರ್ಗಮೋಕ್ಷಾದಿಗಳ್ ।
ಜನಿಯಿಸುಗು ಮೆಂದೆನಾತ ಮಿಕ್ಷ್ವಾಕು ನೃಪಮುಖ್ಯ ।
ರನುಮೋದದಿಂದೆ ವಾನಪ್ರಸ್ಥರಾಗಿರ್ದರಾವಂಶಜಾತನಾಗೆ ॥
ಎನಗಿದಪ್ಪುದು ಚೋದ್ಯಮಲ್ಲಮೀಗಿರಿಯೊಳನು ।
ದಿನಮೈದೆ ಸುಖಮಿಹೆಂ ನೀಂ ಬೇಸರಂಗೊಳದೆ ।
ಮನಕೆ ಸಂತೋಷಮಂ ಮಾಡುತಿರ್ದೆ ವಿಶುದ್ಧ ಭಾವದಿಂದೆನ್ನೊಳ್ ಪ್ರಿ ॥ (53)

ನೀಲಪೀತಸಿತಾರುಣಚ್ಛಾಯೆಯಿಂದಂ ಪಿ ।
ಶಾಲಮಾದುನ್ನತದ ಶಿಲೆಗಳಿಪೆ ಪರ್ವತದ ।
ಮೂಲದೊಳಗಿರ್ಪ ವನಮುದ್ಯಾನದಂತಿದೆ ಲತಾಕುಂಜ ಪುಂಜಂಗಳು ॥
ಲೀಲಾಸದನದೊಲಿವೆ ಭೂರ್ಜಪತ್ರಸ್ಥಗರ ।
ನಾಳೀಕ ಪುನ್ನಾಗಕುಮುದಾತಿ ಸುಮಪರ್ನ ।
ಜಾಲತಲ್ಪಂಗಳಂದೊಪ್ಪುತಿದೆ ಕಾಮಿಗಳ ಸಂಕುಲಂ ನೋಡು ನೀರೆ ॥ (54)

ಮಿರುಪವ ಶ್ಯಾಕಸಾರಾವಳಿಗಳನೈದೆ ।
ಜರೆದು ತತ್ಫಲಪುಷ್ಪ ನಿರ್ಮಲೋದಕಗಳಂ ।
ಕರಮೊಪ್ಪುದಿರ್ದುದೀ ಪರ್ವತಂ ನಿನ್ನಿಂದೆ ಸೌಮಿತ್ರಿಯಿಂದೆ ಸಹಿತಂ ॥
ಎರಡೇಳುವತ್ಸರಂ ಸುಖಮಿರ್ದೆನಿಂತು ಸ ।
ತ್ಪುರುಷನಂದದೆ ರಾಜಋಷಿಗಳಂದದೆ ಸತ್ಯ ।
ಪರಿಪಾಲನಾಸಕ್ತನಾಗಿ ಕುಲಧರ್ಮಮಂ ಬೆರ್ಚಿಸುವೆನಬ್ಜಗಂಧಿ ॥ (55)

ಲಲನೆ ನೀನೀಗಿರಿಯನಿಕಟದೊಳ್ ಶುಭ್ರಮಯ ।
ಜಲದಿಂದೆ ಹಂಸಸಾರಸಪಕ್ಷಿಚಯದಿಂದೆ ।
ಪುಳಿನಂಗಳಿಂದೆ ಫಲಪುಷ್ಪಸಂಭರಿತಮಾಗಿರ್ಪ ತರುಲತೆಗಳಿಂದೆ ॥
ಬಳಲಿಬಾಯಾರಿ ನೀರ್ಗುಡಿಪರೈತಪ್ಪ ಮೃಗ ।
ಕುಲದಿಂದ ಮಿತ್ತಡಿಯೊಳುರುತಪಂ ಗೈವುತಿಹ ।
ನಳನಾಪ್ತನಿಭಸಿದ್ಧರಿಂದೆಸೆವ ಗಂಗೆಯಂ ನೋಡು ಗಾಂಗೇಯಗಾತ್ರಿ ॥ (56)

ಉರುಜಟಾಜಿನವಲ್ಕಲೋಪವೀತಂಗಳಂ ।
ಧರಿಸಿರ್ಪ ಋಷಿಗಳಂ ಸ್ನಾನಮಂ ಮಾಡುತಿಹ ।
ತರಣಿಮಂಡಲವನೀಕ್ಷಿಸುತ್ತೂರ್ಧ್ವ ಬಾಹುಗಳಗಿತ್ತಡಿಯೊಳು ಗ್ರತಪವ ॥
ವಿರಚಿಸುತ್ತಮಿರೆ ಮೌನಿಕುಲದೊಳಂ ಜಲದೊಳಂ ।
ಮಾರುತವಶದಿಂದೆ ಸೂಸಿದ ಸುಮಗಳಂಪತ್ತಿ ।
ಚರಿಸುತಿದೆ ಚಕ್ರಚಯ ಮಲ್ಲಲ್ಲಿ ಮಣಿನಿಭದ ಜಲಮಿದಕೊನೋಳ್ಪುದಬಲೆ ॥ (57)

ಈ ತರಂಗಿಣಿಯ ಸೊಬಗಂ ನೋಡಿ ಭೂಮಿಧರ ।
ನಾಥನತಿ ಸಂತಸದೆ ನರ್ತಿಪನೊ ಎಂಬಂತೆ ।
ವಾತವಶದಿಂ ಪುಷ್ಪ ಪತ್ರಗಳ್ ಚಲಿಸುತಿವೆ ಕೋಕಲುತಿ ತೀವಿತಿದಕೊ ॥
ಸಾತಿಶಯದಿ ಕುಬೇರ ನಳಿನಿಯಂತೊಪ್ಪುವ ನ ।
ದೀತಟದೊಳಿಹರದೇಂ ಕೃತಕೃತ್ಯರೋಮುಹೀ ।
ಜಾತಕೇಳ್ ಸ್ನಾನಮಂ ಮಾಳ್ಪನೆನ್ನೊಡನೆನೀಂ ಮಜ್ಜನಂಗೈವುದಬಲೆ ॥ (58)

ಜಲಜಂತು ಭಯಮಿಲ್ಲವೀ ನದಿಯೊಳಂ ಕುಮುದ ।
ನಳಿನಂಗಳಂ ಮುಳುಗಿಸುತ ಮೈದೊಳೆದು ನಲಿ ।
ನಲಿದಾಡು ಗಿರಿಯನುರೆ ಸಾಕೇತ ಪುರವೆಂದು ವ್ಯಾಳಾದಿಪಶುಕುಲವನು ॥
ಪೊಳಲೊಳಿಹ ಜನವೆಂದು ನಿರ್ಜರಾಪಗೆಯನಂ ।
ಲಲಿತಸರಯೂ ನದಿಯುಮೆಂದು ತಿಳಸೌಪುತ್ರಿ ।
ಯಲಸದೆನ್ನನು ಮತಿಯೊಳಿರ್ಪನೆನಗಂ ಪ್ರೀತಿಯಂ ಮಾಡುತಿರ್ಪೆ ದೇವೀ ॥ (59)

ಕರಮೆಸೆವ ಮಧುಮೂಲಫಲಗಳಾಹಾರದಿಂ ।
ಸುರನದೀಸ್ನಾನದಿಂ ಸತ್ಪುರುಷ ಸಂಗದಿಂ ।
ಹರುಷಗೊಳವೆನಯೋಧ್ಯಾನಗರಮಂ ಬಯಸದಿದೆ ಮಚ್ಚಿತ್ತಮೆಂದು ಬಳಿಕ ॥
ಧರಣಿಸುತೆ ಲಕ್ಷ್ಮಣರ್ ಸಹಿತ ಸಂತೋಷದಿಂ ।
ಗಿರಿನದೀ ವೈಭವವನೀಕ್ಷಿಸುತೆ ಶ್ರೀ ರಾಮ ।
ಪುರದಧೀಶ್ವರನೈದೆ ಚರಿಸುತಿರ್ದಂ ಚಾರುಚಂತೆ ಶೈಲೇಂದ್ರ ಜಾತೆ ॥ (60)

(ಸಂಧಿ 29 ಪದ 1303)

ಮೂವತ್ತನೆಯ ಸಂಧಿ.

ಸೂಚನೆ ॥ ಸೀರಧ್ವಜಾತ್ಮಭವೆಯಿಂದ ಮಂದಾಕಿನೀ ।
ತೀರದ ವಿನೋದವಂ ನಿಟ್ಟಿಸಿ ಮಹಾಶೈಲ ।
ವೇರಿಕುಳ್ಳಿರ್ದ ರಘುವರನಂಘ್ರಿಯಂ ಕಂಡ ಭರತ ಶತ್ರುಘ್ನ ಸಹಿತ ॥

ಕ್ರಮದಿಂದಲಾವನವಿಹಾರವಂ ಕಳೆದುಬಳಿಂ ।
ದಮಿತ ಹರ್ಷೋತ್ಸವಧಿ ಪರ್ಣಮಂದಿರದಲ್ಲಿ ।
ಸುಮನಸಾನಂದಕರಮೆನೆ ಸೀತೆ ಸಹಿತಲ್ಲಿ ಮಂಡಿಸಿರೆ ಸೌಮಿತ್ರಿಯು ॥
ಸಮದೇಶದಂತೆ ಸಂಚರಿಸುತಿರೆ ಮುಂಗಡೆಯೊ ।
ಳಮಿತ ಭೀತಿಯೊಳೋಡಿಬರ್ಪ ಮೃಗಯೂಥಗಳ ।
ವಿಮಲತರವಕ್ಕಿಗಳ ನೋಡಿ ತಮ್ಮಂಗೆಂದ ರಘುವರಂ ಗಿರಿತನೂಜೆ ॥ (1)

ತುಂಡಗಳ ನೆಗಪುತಾಗಸಕೆ ಭೀಂಕರಿಪವೇ ।
ತಂಡ ತಂಡಗಳೋಡಿ ಬರುತ್ತಿವೆಕೊ ಭೀತಿಯುಂ ।
ಕೊಂಡು ಪಿಂದಿರುಗಿನೋಡುತಬರ್ಪ ಹರಿಣಗಳನಾಲ್ಗಳಿಡೆ ಯೂಥದಿಂದ ॥
ಮಿಂಡೆದ್ದುಬಹ ಘೃಷ್ಣಿಗಳ ನೋಡಿ ಪಡಿಗಸಾ ।
ಗ್ಗೊಂಡು ಪಾರುತಲಿವೆಕೊ ಖಗಮೃಗಾಳೀಕಂಗ ।
ಳಂಡಲೆಯಿದೇಂಕತದೊಳಾಯ್ತು ಮತ್ತಾರ್ಗೈಡುನೋಡು ಸೌಮಿತ್ರಿ ಮುದದಿ ॥
[(2)

ಮನೆಸಾಲದುದಿಗಡರಿ ನಾಲ್ದೆಸೆಯನಿಟ್ಟಿಸಲ್ ।
ವನರಾಶಿ ಮೇಲ್ವರಿದು ಬರ್ಪಂತೆ ಪೆರ್ಬಲವ ।
ಘನರವವ ನಾಲಿಸುತಲಣ್ಣನೊಡನಿಂತೆಂದ ದೇವನೆಲಬೆಸಲಾದೊಲು ॥
ಘನಮಾದ ಸೇನೆಬರುತಿದೆಕೊ ಧರಣಿಜೆಯನಲೆ ।
ಮನೆಯಿಂದಲಾಚೆಯೊಳ್ ತೋರ್ಪ ಗುಹೆಯೊಳಗಿಟ್ಟು ।
ಧನುವ ಪಿಡಿಯಲ್ವೇಳ್ಕೆನುತ್ತ ಲಕ್ಷ್ಮಣನುಸುರೆ ನಸುನಗುತಲಿಂತೆಂದನು ॥ (3)

ಕಾತುರದಿ ನುಡಿವೆಯಾತಕೆ ವೈರಿಬಲಮಿತ್ತ ।
ಜಾತು ಸಂಚರಗೈಯಲಮ್ಮರಾವರುಧರಾ ।
ನೇತರೇಂ ಬಂದಿಹರೊ ಮೃಗಯಾವ್ಯಸನಕೆಂದು ಸಂತಸದಿಸಂಚರಿಪಡೆ ॥
ಭೂತಸುಳಿಯಲ್ಕಮ್ಮದೀ ತಾಣದೊಳುಮನುಜ ।
ರೇತಕೈತಪ್ಪರಿದ ಪದುಳದಿಂ ನಿಟ್ಟಿಸೆನೆ ।
ಲಾತ ನಾಲ್ದೆಸೆಯನಾರೈದು ಕಂಡು ರಥದ ಗೊಂದಣದ ಸಂದಣಿಯನು ॥ (4)

ಕೋವಿದಾರಧ್ವಜದ ಕೊನಬ ನಿಟ್ಟಿಸಿ ಭರತ
ನೀವಸುಧೆಗೈತಂದ ನತ್ಯಾಸೆಯಿಂದೆಮ್ಮ ।
ಜೀವದಿಂದುಳುಹಬಾರದುಮೆನುತ ದುರ್ಜನರ ಬೋಧೆನೆಲೆಗೊಂಡುಮನದಿ ॥
ತಾವನರಸುತಬಂದತಡೆಯದೀತನಬಲವ ।
ನೋವಿಖಡಿಖಂಡಗೈದಿಟ್ಟು ಕಾಕೆನಿಯರಿಗೆ ।
ಸಾವಧಾನದಿ ಭೋಜನಂಗೈವೆನೆನುತತಾಲರೋಷದಿಂ ಬಿಲ್ಪಿಡಿದನು ॥ (5)

ದುರುಳನುಡಿಗಳೊಳೆಮ್ಮ ಕಾನನಕೆ ಕಳುಪುತ್ತ ।
ಅರಸನಂ ಮರುಳೆನಿಸಿ ಧರೆಯನುಂ ವಶಗೈದು ।
ಪರಿಪೂರ್ಣಕಾಮಳೆನ್ನಿಸದಾದುರಾರಾಧ್ಯೈಕೈಕೆ ಸುತನಂ ಬೇಳಯು ॥
ನೆರಹಿ ಬಲವನು ಮಹಾರಣ್ಯದೊಳಗಿರ್ದೆಮ್ಮ ।
ನರಸಿ ಪಿಡಿಯಲ್ಪೇಳ್ಕುಮೆನುತ ಬಂದಿಹಕಜ್ಜ ।
ಭರತನಾತನ ಮಾತೆಯುಪಜನರ ನೀಕ್ಷಣದೆ ಹತಗೈವೆನೆನುತಮನದಿ ॥ (6)

ಮೊರವುತಲಿ ಮರನಿಂದಲಿಳಿದು ಶರಚಾಪಮಂ ।
ಧರಿಸಿ ಘುಡುಘುಡಿಸುತ್ತೈತಂದು ಸೇನಾಗಮದ ।
ಪರಿಯುಬಿತ್ತರಿಸಲೀತನ ರೌದ್ರಮಂ ನೋಡಿ ರಾಮನಯಗೂಡಿದಯದಿ ॥
ಪರಮಧಾರ್ಮಿಕಶಿರೋರತ್ನ ಸಾಧುಗಳರಸ ।
ಪರಿಹೀನರಾಗಲೋಭಾದಿವರ್ಜಿತಚಿತ್ತ ।
ತರಳನಾದರು ಭರತನೆಣಿಪನೆ ಕನಸಿನೊಳಗಪಕಾರಲೇಶಗಳನು ॥ (7)

ಮಾತೆಯುಂ ಧಿಕ್ಕರಿಸಿ ಮಗುಳುಪಚರಣೆಯಿಂದ ।
ತಾತನಂ ಸಂತೈಸಿ ತನಗಾದ ಸಂಪದ ।
ಪಾತ್ರಮಂ ತನಗೊಪ್ಪುಗೈದು ಚರನಂತಿರ್ಪುದೇರಿಸಿ ನಿಜಚಿತ್ತದೊಳಗೆ ॥
ಮಾತೆಯರ ನೊಡಗೊಂಡು ಬಂದಿರ್ಪ ನೀಂ ಬೇಳ್ವ ।
ಮಾತಿದುದುರಾಗ್ರಹಮಿದಂ ಸಹಿಸಿನೋಡುಕ್ಷಣ ।
ಮಾತುರದಿ ಕಂಗೆಸೆವುದೆನುತೊರೆಯೆ ಸೌಮಿತ್ರಿಯುಪಶಾಂತನಾಗಿರ್ದನು ॥ (8)

ಕೇಳು ಲಕ್ಷ್ಮಣ ಭರತ ಮಾತೃಕೃತಘುಷ್ಕರವ ।
ತಾಳಮನದೊಳು ಮರುಗುತೆಲ್ಲರಂ ವಡೆಗೊಂಡು ।
ಜಾಳೆನಿಸಿ ಸಿರಿಯು ಗಹನದೊಳಾವು ಕಷ್ಟವಂಬಡುತಿಹುದ ನೆನೆದು ನೆನೆದು ॥
ಬೇಳಸಂತಸಗೊಳಿಸಿ ಕರೆದೊಯ್ವೆನೆಂದು ವಿ ।
ಪ್ರಾಳಯನ್ನೊಳಗೊಂಡು ಬಂದಿರ್ಪ ನೀಂ ಖತಿಯೊ ।
ಳಾಳಲೇಂಫಲ ಭೋಗದಿಚ್ಛೆಯಿಂ ಸಹಜಾತರೆಸುಗಳಂಕೊಳೆ ಮುನಿವರೆ ॥ (9)

ಎನಿತುಪಾತಕಿಯಾದಡತಿ ಕ್ರೂರಮಾನಸಿಕ ।
ನೆನಿಸಿಕೊಂಡರು ತನಯ ಜನಕನಂ ಕೊಂದಪನೆ ।
ನಿನಗಿದೇಂ ಗುಣಮೆ ಬಾಲಕನ ತರಿಯಲ್ಕೆಳಸಿ ಕೋಪಿಸುವೆ ರಾಗವಿಡಿದು ॥
ಎನುತರಾಘವನುಡಿಯೆ ಸೌಮಿತ್ರಿಲಜ್ಜೆಯಿಂ ।
ಘನತರಾಮರ್ಷಮಂ ನೀಗಿ ತಲೆವಾಗಿ ಬಂ ।
ದಿನಕುಲೇಶನ ಕೆಲದೊಳಿರುತಿರ್ದ ನಿತ್ತಬಲವೊತ್ತರಿಸಿಬರೆ ಭರತನು ॥ (10)

ಗುಮಿಗೂಡಿಪೊಕ್ಕರಾತರುಲತಾಗುಲ್ಮಗಳು ।
ಯಮಿಜನರಿಗಪ್ಪುದಾಯಾಸ ಬಲಮಿಲ್ಲಿರಲಿ ।
ಕ್ರಮದಿಂದ ಕರೆಸಿಕೊಳಲಪ್ಪುದೆಂದಾಭರತನಾಜ್ಞಾಪಿಸಲ್ಕೆ ದಯದಿ ॥
ಸಮದಗಜರಥ ಹಯಪದಾತಿಗಳನೊಂದೆಡೆಯ ।
ಸಮನೆಲದೊಳಿಳಿಸಿ ಸೇನಾನಿಗಳ್ಬಂದೊರೆಯೆ ।
ಪ್ರಮುದಿತಾಂತಃಕರಣದಿಂದ ಶತ್ರುಘ್ನನಂ ನೋಡುತೆಂದಂ ವಿನಯದಿ ॥ (11)

ಪರಪಿದರಪಾಂಗಲೇಶವ ಬ್ರಹ್ಮರುದ್ರೇಂದ್ರ ।
ರುರುತರೈಶ್ವರ್ಯಸಂಗತದ ಕಮಲಾವಸದ ।
ಸಿರಿರೇಖೆಯಾಂತ ಚರಣವ ಕಾಣುವನ್ನೆಗಂ ವರಮಂತ್ರಿಗುರುಗಳೊಡನೆ ॥
ಬೆರೆದು ವಾಹನವುಳಿದು ಪದಚರಣೆಯಿಂದೈದು ।
ತಿರವೇಳ್ಕುಮುಂದೆ ಗುಹಪೋಗಿ ಮಾರ್ಗಂಗಳಂ ।
ಸರಿಸಗೈಯಲೆನುತ್ತ ಪೇಳಲರುಗಲ್ ಶಬರ ಭರತ ಮಗುಳಂತೆಂದನು ॥ (12)

ಸುಳಿಯುರಲೆಯಶ್ಮಾತಮಾಪ್ರಕೃತಿಯ ಚೆಲ್ವ ।
ತಳೆದು ಮುನಿಗಾತಿಥ್ಯವೆಸಗುವಂದದಿ ಮಾಳ್ದ ।
ತೊಳಪ ಪಾರ್ಥಿವ ಲಕ್ಷಣಾನ್ವಿತ ಮಹೋನ್ನತ ಮೆನಿಪ್ಪ ಶುಭಚರಣಂಗಳು ॥
ಪೊಳೆಯುತೆನ್ನಯ ಕಂಗಳದಿರಿನಲಿ ಸಂತಸವ ।
ತಳೆದಾನು ಶಾಂತಯುತ ಮನನಪ್ಪಿನಭಿಷೇಕ ।
ಜಲದಿಂದಮಸ್ತಕಂ ನೆನೆದರಾಂ ಕೃತಿಯಪ್ಪೆನೆನುತ ಮತ್ತಿಂತೆಂದನು ॥ (13)

ನೋಡುಮನುಕೂಲ ಪರಂಪರೆಯರಸುಗಳಲಿ ಭವ ।
ಗೂಡಿಪಟ್ಟವಣೆಯಲಿ ಮಂಡಿಸಿರಲೋಲಗವ ।
ನೋಡಿಪದಸೇವೆಯವಸರದಿಂದಲಾಂಧನ್ಯನಪ್ಪೆ ಮಣಿಮಕುಟಕಾಂತಿ ॥
ಮೂಡುತಿಹ ಶಶಿಪೂರ್ಣಬಿಂಬಕಂ ಸುಧೆಯಶನ ।
ಮೂಡಿಸುವ ಮುಖವನಾಂ ಕಂಡು ಕೃತಿಯಾಹೆನು ಕೈ ।
ಗೂಡುವುದಿದೆಂದೆನುತಲಾನಂದ ಕಂಬನಿಗಳಡುತೆ ಮತ್ತಿಂತೆಂದನು ॥ (14)

ಸರಸಿಜಭವಾದಿಮುನಿವರರೆಲ್ಲ ನಿಜಯೋಗ ।
ವೆರದು ನಿಟ್ಟಿಸಿ ನಿಲುಕದಿಹಪಾವನಿತಚರಣ ।
ನಿರುತದೊಳಗವು ಕೈಗೂಡಿತು ಮಹಾಬಲ ಪರಾಕ್ರಮಿಗೆ ಸೌಮಿತ್ರಿಗೆ ॥
ಧರೆಯೊಳನ್ನೇಸು ಕೃತಕೃತ್ಯನೋ ಸಿರಿಪದವ ।
ಧರಿಸಿರ್ಪ ಸಿರಿಯೆನಿತು ಸುಕೃತಿಯೋ ತತ್ತಟದ ।
ಲಿರುವತರುಗುಲ್ಮ ವೀರುಧಗಳೇಂ ಪರಿಪಾಕತಪದ ಬೆಳಸಡಸಿರ್ಪವೋ ॥ (15)

ನೀಲಜೀಮೂತ ನಿಭಮೂರ್ತಿಯ ಸುಕೀರ್ತಿಯ ವಿ ।
ಶಾಲಸಾರಸನೇತ್ರನುರುತರಪವಿತ್ರನ ನಿ ।
ರಾಲಸ್ಯನುತಿಗಂ ವಶಂವದನ ಸಂಪದವನೀವ ಕರುಣಾವಸದನ ॥
ಬಾಲೇಂದು ಮೌಳಿಯ ಹೃದಾಲಯಮು ದಾಲಯನ ।
ಶೀಲಸದ್ಗುಣ ರತ್ನರತ್ನಾಕರೋಪಮಿತ ।
ಲೀಲಾಮನುಜವೇಷಧರನ ಕಂಡಾಂಧನ್ಯನೆನಿಪೆನಾವಾಗಲೆನುತ ॥ (16)

ಎಂದಮಿತಭಕ್ತಿರಸದಿಂದ ಭರತಂ ತನ್ನ ।
ಬಂಧುಗಳನೊಡಗೊಂಡು ಪೊಕ್ಕನಾಕಾನನವ ।
ಮುಂದೆ ಗುಹ ಮಾರ್ಗಪ್ರದರ್ಶನಂಗೈವುತಿರೆ ಪಾದವಿನ್ಯಾಸದಿಂದ ॥
ಬಂಧುರದಬಲಗಳಂ ಋಷಿಗಳಾಶ್ರಮಗಳಂ ।
ಪೊಂದಿನಿಲದಲ್ಲಲ್ಲಿ ತ್ವರಿತದಿಂ ನಡೆಯುತಿರೆ ।
ಲಂದುರಾಮಾಶ್ರಮದಲಿಹ ಕ್ರತುಭುಜದ್ವಜಂ ತೋರೆ ಸನ್ನಿಹಿತಮಾಗಿ ॥ (17)

ನೋಡಿ ಹರ್ಷದೊಳೊರೆದ ನಿಜಬಂಧುಗಳನೊಂದು ।
ಗೂಡಿ ಗುರುಗಳ ಬೇಗ ಕರೆತರುವುದೆನುತ ನೃಪ ।
ನಾಡಿಚರರಂ ಕಳುಪಿ ರಘುನಾಯಕನ ಕಾಣ್ಬಲವಲವಿಕೆಯಿಂದ ನಡೆದು ॥
ಕಾಡಾನೆಖಗಮೃಗಗಳಾಡುತಿಹನೆಲಗಳಂ ।
ನೋಡಿಕೊಳುದಲ್ಲಲ್ಲಿ ಪುಷ್ಪಾಪಚಯಗಳಂ ।
ಮೂಡಿರ್ಪತಾಣಗಳ ಕುರುಪಿಡಿದು ಗಮಿಸಿದಂ ಚಿತ್ತದನುರಾಗದಿಂದ ॥ (18)
ಮದಕರಿಕರೀಷಕಷಣಂಗೈದ ತಾಣವು ।
ತ್ತಿದುವೆ ಕಾಳ್ಗೋಣ ರೋಷಾಹತವಿಷಾಣ ವಿಂ ।
ತಿದುವೆ ಕೇಸರಿಯ ನಿಷ್ಠುರತರಕ್ಷಿಪ್ತಕರೀಕುಂಭ ಮುತ್ತುಗಳನೊನ್ನಾ ॥
ಇದುವೆ ಕಾರೀಷೋಗ್ನಿ ಸೀತಾಪನೋದನ ।
ಕ್ಕಿದೆ ತೃಷಾಜನ ಪಾತ್ರಪಕ್ಕೆ ಶೇರಿದೆನೋಳ್ಪು ।
ದಿದೆ ಭರದ್ವಾಜಮುನಿಪೇಳ್ದ ಭೂಮಿಯೆನುತ್ತ ಸಂತಸವಕ್ಕೋರುತಿದೆ ಕೋ ॥ (19)
ಘುಮುಘುಮಿತ ಮಾಧುರ್ಯಕರ ನಾದಕೇಳುತಿದೆ ।
ವಿಮಲಧಾರೇಯುನೀಯೆಡೆಗಾವು ಬಂದುದ ।
ಕ್ಕಮಿತ ಸಂತಸಗೊಳ್ಳುತಿದೆ ಚಿತ್ತಮೆಲೆವನೆಗಳೊತ್ತ ಸೇರಲ್ಕದೆಂತು ॥
ಪ್ರಮುದ ಸಂಭವಮಹುದೊ ಎನುತ ಪುಳನಂಗಳೊಳು ।
ಕಮಲ ವಜ್ರಾಂಕುಶ ಸುರೇಖೆಗಳ ತೋರುತಿಹ ।
ಸುಮನಸಾನಂದಕರ ಹೆಜ್ಜೆಗಳ ನೋಡುತ್ತ ಭರತ ವಂದನೆಗೈದನು ॥ (20)
ನಿಗಮಶಾಖೆಗೆ ಶಿಖಾಮಣಿಯಾತ್ಮವೇತ್ತೃಜನ ।
ಬಗೆಯ ಪರುಷದಕಣಿಯು ತಾಣಚಿಂತಾಮಣಿಯು ।
ಮಿಗೆಶಾಸ್ತ್ರನಿಕರ ಕಾದರವಚನರಚನೆಗಳ ಪೋಷಿಸುವ ಸನ್ಮಣಿಯಿದೊ ॥
ಅಗಜಾರಮಣಬೊಮ್ಮರಾಮಾಗ ಭಾವಿಸುವ ।
ಬಗೆಗಚೋರವಾಗದೀ ಸಿರಿಪದಂಗಳಿನ ।
ಗೊಗುಮಿಗೆಯು ಹರ್ಷಮಂ ಕುಳ್ಕಸಲ್ಕಂಗೆಸೆದವೇನೆಂಬೆನತಿಶಯಗಳ ॥ (21)
ಇದು ಜಗದ್ಬೀಜಮತ್ತಿದು ನಿಗಮಗಳನ್ವೈಜ ।
ಮಿದುಮಂತ್ರತಂತ್ರಪೊಲಮಿದು ಸತ್ಯಸುಖದನೆಲ ।
ಮಿದುಶೈಲಜಾಚಿತ್ತ ಪಾಡುವಾಡುಂ ಬೊಲಂ ಹಂಸಹೃದಯಾಬ್ಜಹಂಸಂ ॥
ಇದು ಬೆಳಗಿನೋಳ್ಬೆಳಗೆನುತ್ತವಂದನಗೈದು ।
ಸದಮಳಾನಂದಸಾಗರ ದೊಳೋಲಾಡುತ್ತ ।
ಲದಿರಿ ಶಿಪ್ಪಾಶ್ರಿಮರನೋಡಿ ಹಿಗ್ಗುತ ನಡದಭರತ ನತಿಭಕ್ತಿಯಿಂದೆ ॥ (22)
ಸತ್ರತಗೈವಭ್ಯಾಸ ಬಲದಿಂದ ಕಳ್ತಲೆಯು ।
ಗತವಾಗಿ ಚಿತ್ತದೋಳ್ ಚಿಜ್ಜ್ಯೋತಿ ಬೆಳಗುವಂ ।
ತತಿಶಯದ ನೀರಂಧ್ರವನವಕಳದೈದಲ್ಕೆ ಪರ್ಣಶಾಲಾ ಮಧ್ಯದಿ ॥
ವಿತತವೆನಿಪ ಕಪರ್ದಭಾರವೊಡದೊಳ್ಳುಸಿರ್ದ ।
ಸತಿಯು ಬೆಳ್ನಗೆಯಿಂದ ಗೌರವೆನಿಪ ಶರೀರ ।
ದತಿಮೋಹನಾಕಾರವೆತ್ತ ರಘುವೀರನಂ ಕಂಡನಾಭರತ ಮುದದಿ ॥ (23)

ರಸೆಯೊಳಗೆ ಮಂಡಿಸಿರೆ ಕಂಡುಭಯಕಂಗಳೊಳ ।
ಗೊಸರುವನಿಗಳ ತಡೆಯಲಳವಲ್ಲದಲೆಪೂರ್ಣ ।
ಶಶಿಯನಿಟ್ಟಿಸಿದ ಮಣಿಕರಗುವಂದದಿ ಮರುಗಿ ಶತ್ರುಘ್ನನೊಡನೆಂದನು ॥
ಪೊಸತೆನಿಪ ಸೌಧಾಗ್ರದೆಡೆಯ ಮೃದುತಳ್ಪದಲಿ ।
ಕುಸುಮ ಪರಿಮಳದಿಂದ ರಾಜೀವಿಯೊಳಿರ್ಪ ।
ಬಿಸಜನೇತ್ರಂಗೆನ್ನ ದೆಸೆಯಿಂದಲೆಲೆವನೆಯುಂದೊರದುದಕಟಕಟೆಂದನು ॥ (24)
ಅಡಸಿತು ಗುರುದ್ರೋಹಮಿದಕೆ ನಿಷ್ಕೃತಿಯು ಸಂ ।
ಘಡಿಸದಾವಾವ ಶಾಸ್ತ್ರಂಗಳಲಿ ನಿಟ್ಟಿಸಿದ ।
ರೊಡನಾಡಿದಂಗೆ ಪ್ರಾಯಶ್ಚಿತ್ತ ಸಂಜನಿಸದಂ ತಾದುದನುಜ ತನುವ ।
ಮಡಗಿ ಫಲವೇನು ಮಾತೆಯಗರ್ಭದಿ ಜನಿಸಿ ।
ಕಡುಪಾಪಿಯೆನಿಸುತಪಕೀರ್ತಿಭಾಜನನಾದೆ ।
ನುಡಿವುದೇನಸುಗಳಿವುದತಿ ಲೇಸೆನುತ್ತಳಲಿಬಳಲಿ ಸಂಕಟ ಗೊಂಡನು ॥ (25)
ಬಿಟ್ಟರಸುಗಳನಾತ್ಮಘಾತಕೆಯೆನುತ್ತ ಖತಿ ।
ಪುಟ್ಟುವುದು ರಘುವರಗೆ ಕಾಣೆಲಕ್ಷ್ಮಣಮರುಳೆ ।
ಗುಟ್ಟದಿರಸೆಂದೆಂಬ ಭಯಮೆನ್ನ ಮಾನಸವನತಿ ತಳವೆಳಗೊಂಬುದು ॥
ಇಟ್ಟಣಿಸುತಿರಪೋಗಲಳವಲ್ಲದೀಚಿಂತೆ ।
ಪುಟ್ಟತಿನ್ನೇಂಗೈವೆನೆಂದಳಲುತಿರೆ ಪದಗಳಂ ।
ಮುಟ್ಟಿ ಶತ್ರುಘ್ನನುಪಚರಿಸಿ ಕುಸ್ತರಿಸುತ್ತನುಡಿದ ನವಸರದನುಡಿಯ ॥ (26)
ಜಗದಖಿಲ ಪ್ರಾಣಿಗಳ ಬುದ್ಧಿ ಸಾಕ್ಷಿಕನಮಿತ ।
ಜಗದುದರಜೀವ ಚೇಷ್ಟಾಧಾರ ಸೂತ್ರಧರ ।
ನೊಗುಮಿಗೆಯ ಸುಕೃತಿ ಪಾಪಿಷ್ಟರೆಂಬುದಬಲ್ಲ ಸರ್ವಜ್ಞ ರಘುನಾಥನು ॥
ಸುಗುಣಂದಯಾಪರನನಾಥರಕ್ಷಣಶೀಲ ।
ಬಗೆಯೊಳರಿದೆಮ್ಮ ವೃತ್ತವತಾನೆ ಕೃಪೆಯಿಂದ ।
ಮಿಗೆ ಪೊರೆವನಿದಕೆ ಚಿಂತಿಸಲೇತಕೈದುವುದು ತರಲೇಸು ಚರಣದೆಡೆಗೆ ॥ (27)
ಎನುತ ಶತ್ರುಘ್ನ ಬಿತ್ತರಿಪಯುಕ್ತಿಯ ಕೇಳ ।
ಮನದ ಹರ್ಷೋತ್ಕರ್ಷೆಯಿಂದ ಭರತಂ ಪಥವ ।
ನನುಸರಿಸುತಲ್ಲಲ್ಲಿ ರಘುನಾಥ ಜಾನಕಿಯರಂಘ್ರಿಸಾರಸಗಳನ್ನು ॥
ನನೆಗಳಿಂದರ್ಚಿಸುತಲಡಿಗಡಿಗೆ ನಮಿಸುತ್ತ ।
ವಿನಮಿತಾನನದಿಂದಲರೆಮುಗಿದ ಕಂಗಳಂ ।
ಘನನೀಲನೀಲನಂ ಪೊರಗೊಳಗೆನೋಡುತ್ತ ನಡದನತ್ಯಾನಂದದಿ ॥ (28)
ಅಂಬುಜದಳಾಕ್ಷನಜಭವಸುರಾಧ್ಯಕ್ಷನಂ ।
ಜಂಭಾರಿಹಿತವಿ ಪಕ್ಷಜನವನಘಸೇಕ್ಷನಂ ।
ದಂಬಾದ್ಯಹಂಕಾರ ಕರ್ಬುರಕುಲೋತ್ತುಂಗ ಪಕ್ಷವಿಚ್ಛೇದಕರನಂ ॥
ಕುಂಭೀನಸಾರ್ತಿಹರ ಹರಕೃದ್ವಿಹಾರನಂ ।
ಗಂಭೀರಜನ್ಯ ಮೂರ್ಧನ್ಯನಂ . ? ।
ಕಂಬುಗಳನಿಖಿಲ ಜನತಾಪಹರವೀರನಂ ಕಂಡನಾ ಭರತಮುದದಿ ॥ (29)

ಸುರುಚಿರದ ಮಕುಟಭೂಷಣ ಸಟಾಮಂಡಲದಿ ।
ಮೆರೆವ ಪಟ್ಟವಣಿ ಫಾಲಕರೂಪಮಿರೆ ಮುದದಿ ।
ಮಿರುಪಪೀತಾಂಬರ ಕುಶಾಜನಾಕಾರದಿಂ ಸೊಬಗಾಂತು ರಾಜಿಸುತಿರೆ ॥
ಕರಗಳಂ ಮುಗಿದು ಸೌಮಿತ್ರಿ ಸಮ್ಮುಖದಿ ಬಂ ।
ಧುರ ಭಕ್ತಿಯಿಂದ ಸೇವಿಸುತಲಿರೆ ಚಿದ್ರೂಪ ।
ಮರೆಗೊಳಿಸಿ ಮಾನುಷಾಕಾರದಿಂ ರಾಜಿಸುವ ಪರಬೊಮ್ಮನಂ ಕಂಡನು ॥ (30)

ಭಾನುಶಶಿಸರ್ವಾರ್ಚಿ ಯುರುತಚಿತ್ತೇಜಂಗ ।
ಳೇನೊಂದನುಪಮಿಸಲ್ಬಾರದ ಚಿದಾನಂದ ।
ಮಾನುಷಾಕಾರದಿಂ ಕಂಗೆಸೆಯೆ ಭರತನತಿ ತ್ವರಿತದಿಂದೈದೆ ಬಂದು ॥
ಜ್ಞಾನಸ್ವರೂಪ ಚಿದ್ದೀಪ ಶರಣರತಾಪ ।
ಕೂನತರ ಸುಕರ ಕರುಣಾಕರಾರ್ತತ್ರಾಣ ।
ಭಾನುವಂಶಪವಿತ್ರ ಸಲಹೆನುತ್ತೆ ಡೆಗೆಡೆದ ಮುಂಗಡೆಯೊಳತಿ ಭಕ್ತಿಯಿಂದ ॥ (31)

ತನ್ನಿಂದ ಘಟಿಸಿತಪರಾಧಮೆನಿಸಲ್ಪಾರ ।
ದಿನ್ನೇವೆನೆಂಬ ಭಯದಿಂದುಲಿತ ಶೋಕಭರ ।
ಚೆನ್ನಾಗಿ ಕಂಗಳಂ ಬಳಿದು ಕಂಪಸ್ವರವಪೊರಡಲೀಯದೆ ತಡೆದಿರೆ ॥
ಇನ್ನೇನನುಸುರಲಳವಲ್ಲ ದೀಪರಬೊಮ್ಮ ।
ನನ್ನು ನಿಟ್ಟಿಸಿದ ಸಂತೋಷಮೊಳದೊಯ್ದಲ್ಲಿ ।
ತನ್ನೊಳಂತರ್ಭಾವಗೈದುನಮಸೋನ್ನತೆಯಃಸೆಸಗಿದುದು ನಿಜಬಲದೊಳು ॥ (32)

ಅಂಬುಜ ದಳಾಕ್ಷನಡಿದಾವರೆಗಳಂ ಕಂಡು ।
ಡಂಬಮುದಮಾನವರ್ಜಿತನಾಗಿ ಧರಣಿಯೊಳ್ ।
ಬಿಂಬಿಸಿದ ನೆಳಲಂತದೇನೊಂದನೆನೆವರಂ ನಿಟ್ಟಿಸುವರಳವಲ್ಲದ ॥
ಸಂಭ್ರಮಾಂಭೋರಾಶಿಯುಲಿ ಮುಳುಗಲೊಳಹೊರಗೆ ।
ತುಂಬಿದಾನಂದದಿಂ ರಾಮಪುರ ನಾಥತಾ ।
ನೆಂಬ ಭಾವಾತೀತ ನೆನಿಸಿ ಪುಗುಳೇನೊಂವ ಚಿಂತಿಸದೆ ಕೆಡೆದಿರ್ದನು ॥ (33)

(ಸಂಧಿ 30 ಪದ 1336)

ಮೂವತ್ತೊಂದನೆಯ ಸಂಧಿ-

ಸೂಚನೆ ॥ ಕರುಣದಿಂ ತರುಣನೆಂದರಿತು ರಾಜ್ಯದಸಿರಿಯು ।
ಪರಿಕರಂಗಳ ವಿಶದಮೆನಲು ಬೋಧಿಸಿ ಭರತ ।
ನಿರವ ಬೆಸಗೊಂಡು ಗುರು ಕೌಸಲ್ಯೆ ಮೊದಲಾದವರ ಕಂಡ ರಘುಜನೊಲಿದು ॥

ನೆಲೆಗಾಣದತಿ ಖೇದದಿಂದ ಮುಂದರಿಯದಲೆ ।
ನೆಲದೊಳೊರಗಿದ ಭರತನಂತೆ ಶತ್ರುಘ್ನ ಪದ ।
ಜಲಜಂಗಳೆಡೆಯು ಕೆಡೆದಿರೆ ನೋಡಿ ಕರುಣದಿಂ ಪಿಡಿದೆತ್ತಿ ತೊಡೆಯೊಳಿಟ್ಟು ॥
ತಲೆಯನೇವರಿಸಿ ಕಂಗಳನೊರಸಿ ಕುಸ್ತುರಿಸು ।
ತಲೆತಾತ ಸುಖದಿಂದಿರಲು ದುಷ್ಟಮೃಗ ।
ಚಲಿಸುವಟವಿಗೆ ಬಂದುದೇಂಕಾರಣಮಾದೆಂದು ಬೆಸಗೊಂಡ ಪ್ರಿಯದೊಳಗೆಜೆ ॥ (1)

ತರುಣಸುಕುಮಾರ ದೊರೆಯುಣಾಗ ಬಲುಕಷ್ಟದಿಂ ।
ಬೆರೆದ ದುರ್ಗಮಪಥವ ಪಿಡಿದು ಕಾನನದೆಡೆಗೆ ।
ಬರುವದೇ ನೈ ವ್ಯಾಳಮೃಗಗಣಾಕೀರ್ಣ ಘೋರಟವಿಯೊಳ್ ತೊಳಲಿ ಬಳಲಿ ॥
ದೊರೆ ಸತ್ವ ವಿಕ್ರಮ ಸುಧಾರ್ಮಿಕ ಶಿರೋರನ್ನ ।
ತುರಗಮೇಧಾದಿಗಳನೆಸಗಿದ ಮಹಾಪುರುಷ ।
ಚರಣಸೇವನೆ ಪರತರೋನ್ನತದ ಗತಿಯೆನುತ ಸೇವಿಪೆಯು ತರಳ ॥ (2)
ಕುಲಗುರು ವಸಿಷ್ಠ ತತ್ಪುತ್ರರುಂ ಕುಶಲಿಗಳ್ ।
ಜಲಜಾಯತಾಕ್ಷಿ ಕೌಸಲ್ಯೆ ಮೊದಲಾದವರ್ ।
ಸುಲಲಿತಾಂತಃಕರಣ ದಿಂದಿರ್ಪರೇ ಭವಸ್ಮಾತೆ ಶಿವಕರದಲಿಹಳ್ ॥
ಜಲಜ ಬಾಂಧವ ವಂಶದನುಸರಣೆಯಿಂ ಬಂದ ।
ಕುಲವೃದ್ಧರಾಪ್ತಮಂತ್ರಿಗಳು ಪ್ರಜೆಪರಿವಾರ ।
ಮಲಘೋಹರ್ಷೋನ್ನತರೆ ನಗರಿ ಸುಕ್ಷೇಮದಿಂದಿಹುದೆ ಪೇಳ್ ತಾತ ಮುದದಿ ॥ (3)
ವಿಧಿಬಲದಿ ಹುತಹೋಮ್ಯಮಾನಾಗ್ನಿ ಹೋತೃಗಳ ।
ಪದುಳದಿಂ ಕಾಲಪಿಚ್ಛೆನ್ನವೆಸಗದೆ ಮಾಳ್ಪ ।
ಸದಯರಾ ಪಟ್ಟಣದಿ ಕುಶಲದಿಂದಿರ್ಪರೇ ತ್ರೃಣ ಕಾಸ್ತ್ರ ಶಸ್ತ್ರ ? ಕವಿತಾ ॥
ವಿದಿತಾಗಮಜ್ಞ ವಿವಿಧಾಸ್ತ್ರ ಬಲಸಂಪನ್ನ ।
ಕದನ ವಿಜಯೋದ್ಧತ ಸುಧನ್ವಮುಖ್ಯರಿಗೆ ಮುದ ।
ಮುದಯಿಪುದೆ ತಾತ ಸಂತತ ನಿನ್ನದೆಸೆಯಿಂದಲೆನುತ ಮಗುಳಂತೆಂದನು ॥ (4)
ನೀತಿಜ್ಞರತಿನಿಪುಣರಖಿಲಾಗಮಸುಶಾಸ್ತ್ರ ।
ಚಾತುರ್ಯಪತಿಶೌರ್ಯಧೈರ್ಯರತಿಶಯ ಜನರ ।
ಮಾತುಗಳ ಬಲ್ಲರನಸೂಯರತ್ಯಂತಾಪ್ತ ಮಂತ್ರಿಕೋವಿದರುತ್ತಮ ॥
ಜಾತಿಯುತ ಮಂತ್ರಿಗಳ ಪಿಡಿದು ಸಾಮ್ರಾಜ್ಯ ಶುಭ ।
ಜಾತವಂ ಗೈದಪುದು ನೃಪನೀತಿ ನಿನ್ನೊಳೇಂ ।
ತಾತ ಸದ್ವಂಶಪ್ರಸೂತ ಮಂತ್ರಿಗಳಹರೆ ಭೋಗಾದಿ ವೃದ್ಧಿಕರಮಾ ॥ (5)
ಬಲು ಜನರ ಕರೆಯದೊರ್ವನೆ ಪ್ರಯತ್ನಂ ಗೈಯ ।
ದೊಲಿದು ನಿದ್ರೆಯೊಳಾಳದೆಚ್ಚರಿತು ಕಾಲದೊಳು ।
ಪಲವು ಕಾರ್ಯಂಗಳನ್ನಪರರಾತ್ರಿಯೊಳರಿತು ಮತ್ತೊರ್ವರರಿಯದಂತೆ ॥
ಅಲೆಗೊಳಸದತಿವೇಗಮಾಲಸ್ಯದಿಂದೆಸಗ ।
ಲೆಲೆ ರಾಜ ಕಾರ್ಯಗಳ ಸಾಧಿಸಲ್ವೇಳ್ಕು ನೃಪ ।
ತಿಲಕರಿಂಗಿದು ನಿನ್ನೊಳಹುದೆ ಸತ್ಕುಲಜಾತ ತಾತ ಪೇಳ್ನೆನ್ನೊಳೊಲಿದು ॥ (6)
ಪಿಂತೆ ಯೋಚಿತವಾದ ಕಾರ್ಯ ಸವ್ಯತಿಕ್ರುತಂ ।
ಮುಂತೆಸೆವತಿಶಯದ ಕಷ್ಟಂಗಳರಿತು ಧೀ ।
ಮಂತರಿಂದೇಕಾಂತದಾಳೋಚನಂಗೈದು ಮೂರ್ಖಶತಶತ್ರಗಳುಳದು ॥
ಸ್ವಾಂತಾನುರಾಗವನುಸರಿಪ ಪಂಡಿತನಿರಲ್ ।
ತಾಂ ತಳುವದೈಶ್ವರ್ಯವೃದ್ಧಿಯುಂ ಗೈದಪನಿ ।
ದಂ ತಿಳಿದು ನಡವೇಳ್ಕರಸುಗಳು ನೀತಿಯುಂ ಕಂಡು ನಡವೈ ಬಾಲಕ । (7)

ಕುಮತಿಗಳ್ ಮೂರ್ಖರಯುತಾಯುತರ್ ಕಾರ್ಯಸಂ ।
ಕ್ರಮಗೈದು ನೃಪತಿಗಪಕೀರ್ತಿಯಂ ಗಳಿಸುವರ್ ।
ಸುಮತಿ ತಾನೊರ್ವಕಾರ್ಯಾರ್ಥಕೃತ್ಸನಾಗುತಂ ಸಿರಿಯ ಕೈಸಾರಿಸುವನು ॥
ಭ್ರಮೆಯಿಂದ ಪೂಜ್ಯರ ನಿರಾಕರಿಸಿ ನೀಚರಂ ।
ಸಮಾತ್ರಿಯಿಂ ಬೆರ್ಚಿಸಲು ದುರ್ಭಿಕ್ಷಭಯ ಮರಣ ।
ಸಮನಿಪ್ಪವು ರಾಜಧರ್ಮಸ್ಥಿತಿಯ ನೀಂ ತಿಳಿದು ನಡಸುವೆಯ ನೃಪಪುತ್ರಕ ॥ (8)

ತಿಳಿದುತ್ತಮಂ ಮಧ್ಯಮಾಧಮವ ಕಾರ್ಯಗಳ ।
ಪಳಯದುತ್ತಮಮಧ್ಯಮಾಧಮರ ನೇಮಿಸುತ ।
ಕೊಳವೇಳ್ಕ ಕಜ್ಜಮಂ ವಿಪರೀತಗೈದೊಡಂ ಬರ್ಪುದಾಮನರ್ಥಮೆನುತ ॥
ಒಳಗರಿಯದಾವನಿಂದಾವ ಕಾರ್ಯವಗಳಿಸಿ ।
ಕೊಳಲೆನುತ ಚಿಂತಿಸುವ ಮಂತ್ರಿಯಿಂ ರಾಜ್ಯಸಿರಿ ।
ಬೆಳವುದಂತೊರ್ವನಂ ಸನ್ಮಾನಿಸುತ್ತಿಹೆಯ ನೃಪತನಯ ನೀತಿವಿಡಿದು ॥ (9)

ಕೌಶಲೋಪಾಯ ವೈದ್ಯನ ಸತತದೂಷಿಪಾ ।
ಪೇಶಚರನಂ ಸಿರಿಯ ಬಯಸುತಿಹ ಶೂರನಂ ।
ನಾಶಗೊಳಿಸದೆ ಮರೆದರಪ್ಪುದರಸಿಗೆ ಹಾನಿ ಎಂಬುದಂ ತಿಳಿದಿರ್ಪೆಯ ॥
ಪೇಶಲತ್ವವನುಳಿದು ತೀಕ್ಷ್ಣದಂಡದಿ ಪ್ರಜಾ ।
ಕ್ಲೇಶಹಿಂಸಾ ಗತಿಯ ನನುಸರಿಸೆ ಭೂತಳದಿ ।
ನಾಶವಹುದಿದನರಿದು ಕಾರ್ಯಕಾಲೋಚಿತಗಳೆಸಗುವೆಯ ನೃಪಪುತ್ರಕ ॥ (10)

ಮತಿವಂತ ಧೃತಿಯುತಂ ಶುಚಿ ಶೂರ ಬಹುಮಾನಿ ।
ಹಿತಕರಂ ಸತ್ಕುಲಜ ಪಿತೃಪಿತಾಮಹರಿಂದ ।
ಕ್ಷಿತಿಪತಿಗಳನುಸರಣೆಗೈದ ಕುಶಲನ ತಿಳಿದು ನಿಜಬಲಾಧ್ಯಕ್ಷತೆಯನು ॥
ಪತಿಕರಿಸಿ ಕೊಟ್ಟಿಹೆಯ ಯುದ್ಧವೈಶಾರದರ ।
ಕೃತಕರ್ಮಧಾರ್ಷ್ಟ್ಯರಂ ತಿಳಿದು ಸೇನಾಪತಿಯ ।
ಜತೆಯಲಿಟ್ಟಿಹುದುಚಿತ ನರನಾಥರಿಂಗೀಪರಿಯರಿತು ನಡವುತಿಹೆಯ ॥ (11)

ಪಲವು ಭೃತ್ಯಾಮಾತ್ಯರಿಗೆ ಭತ್ತ ಜೀತಂಗ ।
ಳೊಲಿದು ತತ್ಕಾಲಕಾಲದೊಳಿತ್ತು ಸತ್ಕರಿಸ ।
ದಲಿ ಯಿರಲವರು ಪಿಂದೆ ದೂಷಿಸುತನರ್ಥಮಂ ನೆನೆದಪರು ತೃಣಮೆನುತ್ತ ॥
ಬಲುಹಿಂದುಪೇಕ್ಷಿಸಲು ಚಿರಕಾಲವನುಷಂಗ ।
ನೆಲದ ಮೇಣಗಳಳಿದು ಕೃತಪಾಕವೇದನೆಯೊ ।
ಳೊಲಿದು ಕಾರ್ತಸ್ವರೋಪಮನಪ್ಪನರಸಿದಂ ತಿಳಿದಿದಂ ವರ್ತಿಸುವೆಯ ॥ (12)

ತಿಳಿದು ಮದ್ವಂಶರಪದಾನಂಗಳೆಲ್ಲಮಂ ।
ಪಳದನ್ಯದಾಪಾದಗಳ ದುಃಖಸುಖದಿ ಸಂ ।
ವಲಿತ ನಾಮಂತರಂ ಮಾನದಾನಂಗಳಿಂ ಪೂರ್ವಾನುಮತದೊಳೆಂದು ॥
ಸುಳಿಸದನುಮಾನಮಂ ರಾಜಕಾರ್ಯಗಳೆಸುಗ ।
ಳಳುಪದಿಚ್ಛೈಸಿರ್ಪರೇಂ ಪೇಳದುದ ಗೈವ ।
ತೊಳಪ ಚರರಿರ್ಪ ನೃಪ ಸುಖಯಪ್ಪ ನೀಪರಿಯ ನರಿತಿರ್ಪೆಯಾ ಬಾಲಕ ॥ (13)

ಸಿರಿಯುನೆಲ್ಲವ ಸೆಳೆದು ಪುರದಿಂದ ಪೊರವಡಿಸಿ ।
ದರಿಗಳುಂ ಕೆಲಕಾಲಕೈತಂದರಾಪ್ತರೆಂ ।
ದರಿತುಪೇಕ್ಷೆಯೊಳಿರಲ್ ಕಕ್ಷದೊಳಗಗ್ನಿಯನ್ನಿಟ್ಟು ಪೊದೆಯನ್ನು ಸಾರಿ ॥
ಮರುತನಿದಿರೊಳಗೊಪ್ಪುವನ ರೀತಿಯಿಂತಂತು ।
ಮರೆಯದೆಚ್ಚರೊಳಿಹುದು ನೃಪನೀತಿ ನೀನಿದಂ ।
ಪರಿಕಿಸುತೆ ಸತತ ಪರಿಪಾಲಿಪೆಯ ನೃಪತನಯ ಬಿಟ್ಟು ರಾಜಸದ ಭ್ರಮೆಯ ॥ (14)
ನಟವಿಟಾಕೃತಿವೆತ್ತು ನ್ಯಾಯದಲಿ ಮನವಿತ್ತು ।
ಪಟುತರೋಚ್ಚಾರದುಚ್ಚರಣೆಯಲಿ ಧರ್ಮಗಳ ।
ನಟವಿಯಂ ಸೇರಿಸುತ ದುರ್ಬೋಧಖಂಡಿತ ಮನ್ಯಲೋಕಾಯತಿಕರ ॥
ಕುಟಿಲಬುದ್ಧಿಯನನರ್ಥಾಚರಣೆಗೈವ ಸಂ ।
ಕಟಬಾಡಬೋಪಸೇವನೆಯಿಂದ ಹಾನಿಸಂ ।
ಘಟನೆಯಹುದಿದನರಿತು ನಡವೆಯ ಮಹಾರಾಜಧರ್ಮಪದ್ಧತಿಯೊಳೊಲಿದು ॥ (15)
ಧನಧಾನ್ಯ ಜಲರಾಷ್ಟ್ರ ತೃಣಯಂತ್ರ ಸಾಮಗ್ರಿ ।
ಯನು ಪೂರ್ಣವಾಗಿಟ್ಟು ಪ್ರಾಜ್ಞಾಪ್ತ ಕೃತಕಾರ್ಯ ।
ಮೆನಿಪ ಭಟರಿಂ ಗುಪ್ತಮೆನಿಸೆ ಪುರದುರ್ಗಾಭಿವೃದ್ಧಿ ಸಂಭವಮಪ್ಪುದು ॥
ಜನಪನಿದನರಿತೊರ್ವರಂ ನಿಷ್ಠುರಂಗೈಯ ।
ದನುಪದಂ ಪ್ರಿಯನುಡಿಯಲುಪಚರಿಸುತಿರೆ ರಾಷ್ಟ್ರ ।
ವನರಾಶಿಪರಿಯಂತ ವಶವರ್ತಿಯಹುದಿದಂ ತಿಳಿದು ವರ್ತಿಪೆಯ ತನಯ ॥ (16)
ದೇವತಾ ಪಿತೃ ವಿಪ್ರರಭ್ಯಾಗತರ್ ಯುದ್ಧ ।
ಕೋವಿದರ್ ಮಿತ್ರ ವರ್ಗಾದಿಗಳನೆಲ್ಲರ ।
ನ್ನಾವಾವಕಾಲದೊಳ್ ಸತ್ಕರಿಸವೇಳ್ಕೆಂದು ತಿಳಿದರ್ಥಮನ್ನೀವ್ರತ ॥
ಸಾವಧಾನದಿ ಧನಾರ್ಜನೆಗೈದು ಕುಜನರಿಂ ।
ಗೀವುದುಳಿದಲ್ಪವೆಚ್ಚಂಗೈವ ನೃಪತಿಲಕ ।
ನೀವಸುಧೆಯೊಳ್ ಚಿರಾಯುಷನಪ್ಪನಿದ ತಿಳಿದು ವರ್ತಿಪೆಯ ನೀತಿಪ್ರಿಯದು ॥ (17)
ವಿತ್ತದಾಶೆಯೊಳು ಪರಗೇಹಂಗಳೊಳ್ ಚೋರ ।
ವೃತ್ತಿಯಿಂ ಸೆಳೆತಂದು ಕೋಶವರ್ಧನೆಗೈದು ।
ಮತ್ತರಿಷ್ಟಗಳಧಿಕರೊಳಗಿಟ್ಟು ಜೀವನವ ಸೆಳೆದು ನಿಷ್ಕಾರಣದಲಿ ॥
ಮುತ್ತಿದತಿಲೋಭಮೋಹಾದ್ಯಂಧನಾಗಮಿತ ।
ವಿತ್ತಾಶೆಯಿಂ ಧರ್ಮಮುಳಿದ ನೃಪಜವದಿಂದ ।
ಮಿತ್ತು ಸಾರುವನಿದಂ ವರ್ಜಿಸುತ ಸಜ್ಜನರನಡತೆಯೊಳಂತಿಹೆಯ ತನಯ ॥ (18)
ಗುರುವಿನಲಿ ಪಿರಿಯರಲಿ ದೇವತಾತಿಥಿಗಳಲಿ ।
ತರುಣರಲಿ ವೃದ್ಧರಲಿ ವೈದ್ಯರಲಿ ನಿಜಮೋಹ ।
ವೆರದತರುಣಿಯೊಳೆಲ್ಲಕಾಲವಲಿ ಸಮಚಿತ್ತನೆನುತಸೂಯವನೆಸಗದೆ ॥
ಸರಸಮೃದು ವಚನದಿಂ ದಾನಮಾನಂಗಳಲಿ ।
ಪರಿತೋಷಣಂ ಗೈವ ಭೂಭೃಚ್ಛಿರೋರತ್ನ ।
ಚಿರಕಾಲ ಸುಖದೀರ್ಘನರಸುಗಳ ರೀತಿಯಿಂ ತಿಳಿದು ನಡವೆಯ ಪುತ್ರಕ ॥ (19)

ತಿಳದು ವಿಪುಳಾಯುಮಂ ಪಳದು ಪಾತ್ರವ್ಯಯವ ।
ತೊಳಪ ಧರ್ಮದಲರ್ಥಸಾಧನಂಗೈವುತ್ತ ।
ಉಳದರ್ಥದಿಂ ಧರ್ಮವಂ ಗಳಸುತುಭಯವುಮಂ ಸಮದೃಷ್ಟಿಯಿಂ ನೋಡುತ ॥
ಬೆಳವಳಗೆಗೈವರಸು ಬಾಳ್ವನಲ್ಲದೆ ಕಾದು ।
ಕಳವಳದೊಳಾಳ್ವರಸುಳಯನೆಂಬುವ ಧರ್ಮ ।
ದೊಳವರಿತು ವರ್ತಿಪೆಯ ಮತ್ಕುಲಪರಂಪರೆಯ ದೊರೆಗಳಾಚಾರವಿಡಿದು (20)
ಪುಸಿ ನುಗುಳು ಲೋಭ ಪ್ರಮಾದ ದೀರ್ಘದ್ವೇಷ ।
ಪೊಸಪೊಸಪ್ರೀತಿ ಕೋಪಾಲಸ್ಯ ಚಾಪಲ್ಯ ।
ನಸಿನೇಕಚಿಂತೆ ವಿಪರೀತದಾಳೋಚನಂ ಸೈಪಿಟ್ಟದನ್ನುಳವುದು ॥
ವ್ಯಸನ ಮಂತ್ರಾಗೋಪ್ಯ ಮೇಕಾಂತವಾಸಂಗ ।
ಳಸಕವರಸಂ ಕೆಡಿಪ ವವನುಳದು ವೇದಾರ್ಥ ।
ವೆಸನಕೋವಿದ ವಿಪ್ರಪೌರಜನ ಪೊಗಳುವಂತೊಪ್ಪಿರ್ಪೆಯಾ ಬಾಲಕ ॥ (21)
ಅರಿತು ನಾಲ್ವರೊಳೊಮ್ಮೆ ಮಂತ್ರಮಂ ಮಗುಳೊರ್ವ ।
ರರಿಯದಂತೊರ್ವರೊರ್ವರ ತಿಳದು ಸಮುಗೈದು ।
ಪರಿಯುತಾನೇ ತನ್ನೊಳಾಳೋಚನಂಗೈದು ಪೆರತೊರ್ವರರಿಯದಂತೆ ॥
ದೊರೆತನದ ಕಜ್ಜಮಂ ಕಾಣ್ಬೆಯ ಮಹಾಪ್ರಾಜ್ಞ ।
ತರಣಿವಂಶೋತ್ತಮ ನೃಪೋತ್ತಮರ ರೀತಿಯಂ ।
ಪರಿವಿಡಿದು ನಡಪವೆಯ ಸತ್ಯ ಶೌಚಾಚಾರಧರ್ಮನಿಷ್ಠೆಗಳ ಬಿಡದೆ ॥ (22)
ತಂದೆತಾಯಿಗಳಂವ ಬಂಧ್ವಿಷ್ಟ ಜನರೆಲ್ಲ ।
ಕುಂದಿಲ್ಲದುತ್ಸಾಹವೆರೆದಿರ್ಪರೇ ವರ್ಣ ।
ವೊಂದೊಂದನನುಸರಣೆಗೈದು ಧರ್ಮವ ಬಿಡದೆ ನಡೆವುದೆ ಯಥಾಕ್ರಮದೊಳು ॥
ಹೊಂದಿಬಹುದೆ ಸುವರ್ಷ ಪ್ರಜೆಗಳೆಲ್ಲಾರೋಗ್ಯ ।
ದಿಂದಿರ್ಪರೇ ಕ್ರೂರ ಶಾಪಾಪದಾದಿಗಳು ।
ಪೊಂದದಿಹರೇ ನೆಲನ ತಾತ ನೃಪನೀತಿಯಂ ಪಾಲಿಪೆಯ ಸುಮತಿವಿಡಿದು ॥ (23
ಉಸುರದೊಳವಂ ಪ್ರಿಯವ ಪ್ರಕಟಿಸುತ ಚಾಪಲ್ಯ ।
ದೆಸಕ ಪೆರ್ಚದ ತೆರದಿ ನಿಷ್ಠುರದ ಭಾಷೆಗಳೆ ।
ಮಿಸುಕಲೀಯದೆ ಪ್ರೀತಿಗೊಳಪೆಯಾ ಶುದ್ಧಾಂತದಂಗನಾಜನರ ತನಯ ॥
ಪೊಸಭೃತ್ಯರೊಪ್ಪದೆ ಪುರಾತನರ ವರ್ಜಿಸದೆ ।
ಪಶುವಾನೆ ಕುದುರೆಗಳನಾರೈದು ಭೂತರಂ ।
ಹಸದಿ ಸಂತೋಷಿಪೊಲು ಸಕಲಾಭರಣವಿಟ್ಟು ವೋಲಗ ದೊಳೆಸೆದಿರ್ಪೆಯ
ಅತುಲಸ್ವಾದ್ವನ್ನವ ನ್ನೊರ್ವನೇ ಭುಂಜಿಸದೆ । (24)
ಹಿತಬಂಧುಸಂದೋಹವೆರೆಸಿ ಭೋಜನಗೈದು ।
ಸತತಸಂಪ್ರೀತಿಯಿಂ ಮೂರ್ತಿಸಂಬಂಧಿಗಳ ಪ್ರಿಯದಿಂದ ದಿಟ್ಟಿಸುವೆಯ ॥
ಶ್ರೋತ್ರಿಯರಸನೀತನೇ ಚಿರಕಾಲ ಶಾಶ್ವತದೊ ।
ಳತುಲಭೋಗದೊಳಿರಲ್ವೇಳ್ಕೆಂದು ಸರ್ವಜನ ।
ಹಿತದಿ ಪ್ರಾರ್ಥನೆಗೈಯಲಾಲೋಚಿಸಿರ್ಪೆಯಾ ಮುದದಿ ಭೂಪಾಲತನಯ ॥ (25)

ಮಾಸನಾಲ್ಕೆಡೆವಿಡದೆ ಮಳೆಗರೆದು ಪುಷ್ಪಫಲ ।
ರಾಶಿಗಳ ಬೆಳೆಸುತ ಲೋಕಸಂತಸಗೊಳಿ ವಿ ।
ಳಾಸದಿಂ ಭೋಗಗಳನುಂಬ ಮಘವನ ತೆರದಲತಿ ಹರುಷಗೊಳಿಸಿ ಧರೆಯ ॥
ಬೇಸರಿಲ್ಲದೆ ತನ್ನ ತನಯರಂದದಿ ಪೊರೆವ ।
ವಾಸಿಯುಂಟದರಿಂದಲಿಂದ್ರನೈಶ್ವರ್ಯ ಸಂ ।
ವಾಸನೆನಿಸುವನರಸು ಲೋಕಕಾಂಕ್ಷಿತನಪ್ಪನಿದು ಸಿದ್ಧ ನೃಪಕುಮಾರ ॥ (26)

ಕಂದಿಸದೆ ಕುಂದಿಸದೆ ಕರೆಕರೆಯೊಳೊಂದಿಸದೆ ।
ಚಂದದಿಂ ನಿಜಕರದಲೆಂಟುತಿಂಗಳು ಭೂಮಿ ।
ಯೊಂದಿರುವ ಜಲವ ಗ್ರಹಿಸುವ ದ್ವಾದಶಾತ್ಮನೆಂತಂತೆ ಪ್ರಜೆಪರಿವಾರಮಂ ॥
ನಂದನೋಪಮಗೈದು ನಾನಾವಿಧದ ಕರಗ ।
ಳಂದ ವಸುವನ್ನಯದಿ ಸೆಳೆವನವರಿಂ ಲೋಕ ।
ಬಂಧು ವಹ ನೃಪ ಕಾಂಕ್ಷಿಗರಿಗವಶ್ಯಂ ಕೇಳು ನರನಾಥತನಯ ಮುದದಿ ॥ (27)

ಸರ್ವಭೂತಂಗಳೊಳಪೊಕ್ಕು ಶರೀರದೊಳ್ ।
ತೋರ್ವ ವೃತ್ತಂಗಳಂ ತಿಳಿದು ಸುಖಗೊಳಿಸುವಸು ।
ಪರ್ವರಗ್ರಣಿಯಂತೆ ನೃಪನೀತಿಯಂ ಗುಪ್ತಚರರ ಸಂತೈಸಿ ಕಳಿಪಿ ॥
ಸರ್ವಸಹೋದಂತಗಳನರಿತು ಮರೆತು ಬಲು ।
ಗರ್ವಿಷ್ಠರೆನಿಪ ದುರ್ಮಾರ್ಗಿಗಳ ನಿಗ್ರಹಿಸ ।
ಖರ್ವಮೆನೆ ಧರ್ಮಾಭಿವೃದ್ಧಿಗೈದಪ ನೃಪತಿಯದರಿಂದ ಧನ್ಯತನಯ ॥ (28)

ತಿಳಿದು ಕೃತ್ಯಾಕೃತ್ಯಗಳ ಪೊತ್ತು ಬರುವನ್ನ ।
ಕಳವಳಸದಿರ್ದು ಧರ್ಮವ ಮೀರದವರನ್ನು ।
ಕೊಳುವ ವೈವಸ್ವತ ಧರಾನಾಥನಂತೆ ಜನರೆಸಗುವ ಹಿತಾಹಿತಗಳ ॥
ತಿಳಿಯದರನಂತಿರ್ದು ಸಮಯಮೆಸಗಲು ಧರ್ಮ ।
ಗಳಲಿ ಬೇಳ್ದಂತೆ ದಂಡನೆಗೈದು ಪಾತಕವ ।
ಬೆಳೆಯದೆ ಜಗದ್ರಕ್ಷಣಂಗೈದಪನು ನೃಪವರಗಿದವಶ್ಯಕ ನರೇಂದ್ರ ॥ (29)

ಬಯಸದಲೆ ಸಕಲನದಿಗಳು ನೀರಧಿಯ ಬಯಸಿ ।
ಪ್ರಿಯನೆನ್ನು ತೊಲಿವಂತೆ ಮಾಡಿರುವ ವರುಣ ದೊರೆ ।
ನಯದಿಂದರೆಲ್ಲರಂ ಸ್ವವಶಮಾಗಿರ್ಪಂತೆ ಮಾಡುತಿಹ ಶಾಸನದಲಿ ॥
ರಯದಿಂದಲುದಿಸಲೋಷಧಿಯರಸ ಜನ ಮನಃ ।
ಪ್ರಿಯದಿಂದಲಾನಂದಗೊಳುವಂತೆ ಸಂತತಂ ।
ದಯದೊಳೆಲ್ಲರ ಹರ್ಷಗೊಳಿಸಿ ಪಾಲನೆಗೈವ ನೃಪ ಮುಖ್ಯಮೀ ಜಗತಿಗೆ ॥ (30)

ಸುರವ ರವಿ ಪವಮಾನ ತರಣಿಸುತ ನಪ್ಪೆರೆಯ ।
ಇರುಳೆರೆಯರಂಶಮಂ ಧರಿಸಿ ಸಜ್ಜನಲೋಕ ।
ದಿರವ ಪಾಲಿಸಲು ಪರದೇವತೆಯ ಪ್ರತ್ಯಕ್ಷರೂಪಿನಿಂ ಭೂಪನೆನಿಸಿ ॥
ಮೆರೆದಪನು ಧರಣಿಪನು ಹರಿಗಭಿನ್ನ ಮೆನುತ್ತ ।
ತೊರೆವಖಿಲಶಾಸ್ತ್ರ ಸಾರ್ಥಕ ಮಪ್ಪೊಲುಂ ದಯದಿ ।
ದೊರೆತನವ ಕೈಕೊಂಡು ಪರಿಪಾಲನಂಗೈವುದೆರಸ ಕುಲಧರ್ಮವಿಡಿದು ॥ (31)

ಇಂತಪ್ಪಮಿತ ಸೌಖ್ಯಮಾಂತ ಶುಭವಚನಗಳ ।
ಸಂತಸದಿ ರಘುವೀರನುಪದೇಶಿಸಲ್ಕೆ ತ ।
ನ್ನಂತರಂಗದೊಳರ್ದು ಪರಿಯು ಬಿತ್ತರಿಸಿದಂ ಭರತನತಿಭಕ್ತಿಯಿಂದೆ ॥
ಚಿಂತಿಸಲ್ಕಾನಾರು ದಶರಥಮಹೀರಮಣ ।
ನೆಂತರಂಗಪ್ರೀತ ಪಿರಿಯು ಮತ್ತಾನೆಗರ ।
ಕಾಂತನಹನಲ್ಲದೆ ಕನೀಯಸಂ ದೊರೆಯಹನೆ ಧರ್ಮಪಂಥಾನಮುಳದು ॥ (32)
ತರಣಿವಂಶವ ಪೊರೆದು ತಾರೆಶಶಿಯುಳ್ಳನ್ನ ।
ಪರಮಮಂಗಳಚರಿತೆ ಪಾವನೀಕೃತಮೆನಿಸಿ ।
ಸುರನರರ ರಕ್ಷಿಪೊಲು ಮಾಳ್ಪನಂತಸುತಲ್ಪ ರಘುಕುಲೋತ್ತಂಸ ನೀನೆ ॥
ಕರುಣಾರಸದಿ ಬೆರೆದು ಪುರದಧೀಶತೆಯಾಂತು ।
ಸಿರಿಯು ಪಾಲಿಪ್ಪುದೆನುತ ಚರಣಂಗಳಂಗೆರಗಿ ।
ಭರತ ಸಂಪ್ರಾರ್ಥಿಸಿದ ಶ್ರೀರಾಮಪುರದೆರೆಯು ರಘುವೀರನಂ ನುತಿಸುತ ॥ (33)

॥ ಸಂಧಿ 31, ಪದ 1369 ॥

ಮೂವತ್ತೆರಡನೆಯ ಸಂಧಿ.

ಸೂಚನೆ ॥ ಗುರು ವಸಿಷ್ಠಾದಿ ಮತವಿಡಿದು ದಶರಥಮಹೀ ।
ವರಗೆ ಸಗ್ಗದ ಪದವಿಯಿತ್ತು ಮೂಲೋಕಮಂ ।
ಪರಿಪಾಲಿಸಿದ ರಾಮಚಂದ್ರ ವಿಮಲಾನಂದವೆರೆದ ಸಚ್ಚರಿತೆಯಿಂದ ॥

ನಗಜಾತೆ ಕೇಳ್ ಭರತ ಶ್ರೀರಾಮಪದಪದ್ಮ ।
ಯುಗಳಕಭಿನತಿಗೈದು ನಗರವೃತ್ತಾಂತಮಂ ।
ಬಗೆಗಗೋಚರಮಪ್ಪತೆರದಿ ವಿಸ್ತರಿಸಿದುದನಾಲಿಸಚ್ಚರಿವೆರದುದ ॥
ಜಗದೇಕವೀರ ಕೇಳಾನು ಮಾತಾಮಹನ ।
ಮಗನೊಡನೆ ಪೋಗಲತ್ತಲು ಗಹನದೆಡೆಗೆಂದು ।
ಬಗೆದು ಮನದೊಳಗೆ ಕೈಕಾವಚನ ಸತ್ಯಮೆನುತರಿದು ನಡೆತಂದಾದುದು ॥ (1)
ಧರಣಿಜೆಯು ಲಕ್ಷ್ಮಣನ ಭವದೀಯಚರಿತೆಗಳ ।
ಸ್ಮರಿಸುತಂ ತಾತ ಸುರರಾಜನರ್ಧಾಸನದ ।
ಸರಸಮಂ ಬಯಸಿ ಸಂತಸದಲೈದಿದರನಿತರೊಳಗೆನ್ನ ಗುರು ವಸಿಷ್ಠಂ ॥
ಕರುಣದಿಂ ಬರಿಸಿ ಪಿತೃಕಾರ್ಯಗಳ ಶಾಸ್ತ್ರೀಯ ।
ವೆರೆದಾಚರಣೆಗೈಸಿ ದೊರೆತನವನಾಳೆನ್ನು ।
ತೊರೆದರಾಂ ಖತಿಯಿಂದ ಚೀರವಸನವ ಧರಿಸಿ ಬಂದೆ ಮುನಿವೇಷವೆರಸಿ ॥ (2)
ಬಿತ್ತರಂಗೈವೆನಂದಿಂದಾವನೃಪಕಾರ್ಯ ।
ವೃತ್ತಂಗಳೆಲ್ಲಮಂ ಸರ್ವಜ್ಞ ಬೇಗ ಪಿತ ।
ಗಿತ್ತು ಜಲಮಂ ರಾಜ್ಯಪರಿಪಾಲನಾವಸರಮಂ ತಿಳದು ನಡಪುದೆನುತ ॥
ಉತ್ತಮಶಿಖಾರತ್ನ ಭರತನಾಡಿದ ವಾಕ್ಯ ।
ಮೊತ್ತಗಳ್ ಪಿತೃನಿಧನಸೂಚಕಗಳಾಗಲ್ ರ ।
ಘೂತ್ತಮಂ ಕೇಳ ಹಮ್ಮೈಸಿ ಹಳವಳಸುತ್ತ ಧರೆಗೊರಗಿ ಮೂರ್ಛೆಯಿಂದ ॥ (3)

ಪಿತನಳಿದ ವಾರ್ತೆಯಂ ಕೇಳ ನಿಸ್ಸಂಜ್ಞೆಯಿಂ ।
ಕ್ಷಿತಿಯೊರಗಿದುದ ಕಂಡು ಸೌಮಿತ್ರಿ ಚಿತ್ತದನು ।
ರತಿಯಿಂದಲಣ್ಣನಂಘ್ರಿಗಳ ಪಿಡಿದಳಲುತಿರಲ್ ನೋಡಿ ಕಂಬನಿಗರೆವುತೆ ॥
ಅತಿಮಾತ್ರಖೇದದಿಂ ಧಗಣಿಜೆ ಪ್ರಲಾಪಿಸುವ ।
ಗತಿವಿಡಿದು ಭರತಶತ್ರುಘ್ನರಿರ್ವರು ತಮ್ಮ ।
ಮತಿಗೆ ತೋರ್ದಂತೆ ಪಂಬಲಿಸಿದರದೇನೆಂಬೆ ನಾಕ್ಷಣದವಸ್ಥೆಗಳನು ॥ (4)

ಅನಿತರೊಳಗೆಚ್ಚೆತ್ತು ರಘುನಾಥ ನಾಲ್ದೆಸೆಗ ॥
ಳನು ನೋಡಿ ಶೋ (ಕದೊಳ್) ಭರತನೊಡನಿಂತೆಂದ ।
ನೆನೆದೆನ್ನ ಸಗ್ಗಕ್ಕೈದಿದ ತಾತ ಧರ್ಮಜ್ಞನೆಂಬ ವಾರ್ತೆಯು ಕೇಳುತ ॥
ಜನಪದಂ ರಾಜ್ಯಸಿರಿ ಪಟ್ಟನದ ಭೋಗಂಗ ।
ಳೆನಗದೇತಕೆ ಬನದಿ ಮುನಿವೇಷದಿಂದ ಬಲು ।
ದಿನಗಳಂ ಕಳೆವೆನೆಂದಾಡಿದ ಕಠೋರತರನಿಂದೆಗಳನೇಂ ಪೇಳ್ವೆನು ॥ (5)

ಗಿರಿಪ್ರತಿಧ್ವನಿ ಗೊಡುವ ತೆರದಿಂದಲೈವರುಂ ।
ಪರಿಪರಿಯ ಗುಣಗಳಂ ನೆನೆನೆನೆದು ಪಲುಬುತಿರ ।
ಲುರುತರದ ವಾರ್ತೆಯನ್ನಾಲಿಸುತ ಸನ್ನಿಹಿತಮಾದ ಭರತನ ಸೇನೆಯು ॥
ದೊರೆಗಳೆಲ್ಲರ್ ತಿಳಿದು ಭರತನುಂ ರಘುವರನ ।
ಬೆರೆತನೆನುತರಿತಖಿಲಜನರೆಲ್ಲ ವೇಗದಿಂ ।
ಕರಿಹಯರಥಂಗಳಾದ್ಯಖಿತ ವಾಹನದಿಂದಲೈತಂದರಿಚ್ಛೆಯಿಂದ ॥ (6)

ಸ್ಥಂಡಿಲದೊಳುರುಜಟಾಮಕುಟದಿಂದೆಡಬಲದಿ ।
ಮಂಡಿಸಿಹ ಭರತಶತ್ರುಘ್ನಲಕ್ಷ್ಮಣರಿಂದೆ ।
ಖಂಡೇಂದುಮೌಳಿಯಂ ತೆಡದೊಳಹ ಜಾನಕಿಯ ನೋಡಿ ಪುರಜನರೆಲ್ಲರು ॥
ತಂಡತಂಡದಿ ಬಂದು ಕಂಡೆರಗೆ ಕೆಲರು ಮುಂ ।
ಕೊಂಡಪ್ಪಿ ಕೆಲರು ದೂರದಲಿ ನಮಿಸುತೀಪರಿಯ ।
ಖಂಡದಂತಃಕರಣದಿಂದ ಮಾತೆಯರೆಲ್ಲ ತೊಳಲುತ್ತಲಿರಲಿತ್ತಲು ॥ (7)

ಗುರುವಸಿಷ್ಠರ ಮುಂತೆ ಗೈದು ಮಾತೆಯರೆಲ್ಲ ।
ಧರಧರದಿ ಬಂದು ಸುತನಂ ಕಂಡು ಶೋಕರವ ।
ಭರದಿಂದಲಾರ್ತರಂ ಕಾಡುತಿರೆ ರಘುವೀರನಿದಿರೆದ್ದು ಭಕ್ತಿಯಿಂದ ॥
ಗುರುವಿನಡಿಗೆರಗಿ ಮಾತೆಯರಿಗಭಿವಂದಿಸಲು ।
ತರುಣನಂ ನೋಡಿ ಕೌಸಲ್ಯೆ ಕರುಣದೊಳಪ್ಪಿ ।
ಕರೆಯೆ ಕಂಬನಿಗಳಂ ಉಳಿದಮಾತೆಯರೆಲ್ಲಗಂ ತೆಸಗಿದರ್ ಕೃಪೆಯೊಳು ॥ (8)

ಅನಿತರೊಳು ಸೌಮಿತ್ರಿಯುಭಿವಾದನಂಗೈಯೆ ।
ಜನನಿಯರ್ ನೋಡಿ ಕರಗುತ ನಿಜೋನ್ನತ ಹಸ್ತ ।
ವನಜಂಗಳಂದ ತನುಪರಿಮೃಜನೆಗೈವುತಂ ಮರುಗುತಲ್ಲಲ್ಲಿ ಕುಳಿತು ॥
ವಿನಮಿತಾನನರಾಗುತೊರ್ವರೊರ್ವರ ನೋಡಿ ।
ತನಯರಂ ಸೆಳೆದಪ್ಪಿ ಸೈಪಿಡುತ ಸುಕ್ಷೇಮ ।
ವನುಗೈಯುವನಿತರೊಳ್ ಮುನಿತಿಲಕನಿಂತೆಂದ ಪಿರಿದ ಕಾಲೋಚಿತವನು ॥ (9)

ಸಕಲಭೋಗಂಗಳನ್ನುಂಡು ಭೂಸುರರ ಸು ।
ಪ್ರಕರ ನಲಿವಂತಖಿಲಯಾಗಂಗಳಂ ಗೈದು ।
ರಕುತಿಯಿಂ ಕೀರ್ತಿಯನ್ನೆಡಬಲದೊಳುಘ್ಘಡಿಸುತಿರೆ ನಿಲಿಂಪಾಪ್ತಜನರು ॥
ಸಕಲಸನ್ಮಾನದಿಂ ಸುರಪನಾಸ್ಥಾನದೊಲು ।
ಚಕಚಕಿಪ ಸಂತೋಷ ಕೌತುಕಿತಚಿತ್ತದಿಂ ।
ಸುಕರವಾಗಿಹ ಪಿತನ ನೆನೆದಳುವು ದೇಸೆಸಗು ಪುತ್ರಕೃತ್ಯವನು ಬಿಡದೆ ॥ (10)
ಎಂದೊರೆಯೆ ಬಂದು ಮಂದಾಕಿನಿಯೊಳಿಳಿದು ನಲ ।
ವಿಂದ ಸ್ನಾನಂಗೈದು ಜನಕನಿಗೆ ಜಲವಿತ್ತು ।
ಪೊಂದೆತಟವಂ ಸುಮಿತ್ರಾತನಯನೈತಂದು ಮಿಂದರ್ಘ್ಯಗಳನುಕೊಡಲು ॥
ಇಂದುಮುಖಿ ವೈದೇಹಿವೇಗ ಗೋದಾವರಿಯ ।
ಲಂದು ಸ್ನಾನಂಗೈದು ತಟವ ಸಾಗಲ್‌ಲೋಕ ।
ಬಂಧುವಿನ ಕುಲತಿಲಕ ರಾಮನೊಳು ವಿಸ್ತರಿಸಿ ಪೇಳ್ದಂ ಮುನಿತಿಲಕನು ॥ (11)
ತರಣಿ ವಂಶೋದ್ಭೂತರಾದರಸುಗಳ ಕುಲವ ।
ನೊರೆಯೆ ಹಯಮೇಧಾದಿಗಳ ರಚಿಸಿ ಸತ್ಕೀರ್ತಿ ।
ಭರಿತಮುಲ್ಲೋಕನೆನಿಸಿದ ಪಂಕ್ತಿರಥನಿಂಗೆ ಸಂತುಷ್ಟಿಕರವೆನಿಸುವ ॥
ಚರಮಕೃತ್ಯಗಳ ರಚಿಪುದು ಲೇಸು ಮತ್ತಿಲ್ಲಿ ।
ಗಿರುವದತಿದೂರದೊಳ್ ಪಿತೃದೇವತಾತುಷ್ಟಿ ।
ಕರವೆನಿಪ ಪರಮಪಾವನವೆನಿಪ ಸ್ಥಳವೊಂದನೊರೆದಪೆನು ಲಾಲಿಸುವುದು ॥ (12)
ದೇವನಿರ್ಮಿತತಾಣ ಗಯೆಯೆನಿಪನಾದುದತಿ ।
ಪಾವನೀಕೃತಪತ್ತ್ರ ನ್ಯಗ್ರೋಧಸುಚ್ಛಾಯೆ ।
ಯುರ್ವರೆಯೊಳಗೊಂದು ಪುಣ್ಯಶಿಲೆ ಇಹುದಲ್ಲಿ ಫಲ್ಗುನೀನಾಮ ನದಿಯು ॥
ಭಾವಿಸುತ ತತ್ತಟಿನಿಯೊಳ್ ಮಿಂದು ಪಿತೃಗಳಂ ।
ಗೀವುದಾಮಳಕಪ್ರಮಾಣದನ್ನವ ನಕ್ಷ ।
ಸಾವಧಾನದಿ ತುಷ್ಟಿಗೊಳ್ಪುದೈ ಮೂವೇಳುಕುಲಸಪ್ತಗೋತ್ರಗಳನು ॥ (13)
ಸೀತೆ ಲಕ್ಷ್ಮಣ ಭರತ ಶತ್ರುಘ್ನರೊಡವೆರೆದು ।
ಪ್ರೀತಿಯಿಂದಾಮಹಾ ಸ್ಥಳಕೈದಿ ಪಿತೃಗಳಂ ।
ಪ್ರೀತಿಗೊಳಿಸಲ್ವೇಳ್ಕುಮೆನುತೊರೆದು ತತ್ಕಾಲಕಲಿತಕರ್ಮಗಳ ರಚಿಸಿ ॥
ಸಾತಿಶಯದಿಂಗುದಿಪಿಣ್ಯಾಕವಂ ತಂದು ।
ಸೀತೆ ಮೃದುಕರದಿಂದ ಗುಳಿಕೆಗಳಗೈದು ನಿಜ ।
ನೇತ್ರಾಗ್ರಹಸ್ತದಲ್ಲಿಡೆ ಮಂತ್ರಪೂತಗೈದಿತ್ತು ಪಿತೃಗಳನು ಸ್ಮರಿಸಿ ॥ (14)
ಕಾಲೋಚಿತದ ಕರ್ಮಗಳ ರಚಿಸಿ ಸೇನೆಯಂ ।
ಶೈಲದೆಡೆಯಲ್ಲಿರಿಸಿ ಗುರುಸಹಿತ ಗಯಕಂ ನಿ ।
ರಾಲಸ್ಯದಿಂದೈದಿ ಫಲ್ಗುನೀತೀರದೊಳು ಸ್ನಾನಾಹ್ನಿಕಗಳ ರಚಿಸಿ ॥
ಮೇಲೆ ಪಿತೃದೇವತಾರಾಧನಂಗೈಯೆ ದು ।
ಶ್ಶೀಲ ಬಾಡಬದಲ್ಲಿ ಕ್ರೂರಬುದ್ಧಿಯುಲಮಿತ ।
ವಾಲಸ್ಯವೆಸಗೆ ವಿಪ್ರಾವಲೇಪವ ತಿಳಿದು ತನ್ನೊಳಾಳೋಚಿಸಿದನು ॥ (15)

ಕಿನಿಸಿಂದ ದಂಡಿಸಲಯೋಗ್ಯತೆಯು ವಿಪ್ರಕುಲ ।
ಧನವುದಾಂಧತೆಯಿಂದ ಗಣಿಸರಾರಾದೊಡಂ ।
ಸನುಮತಿಸರಾವಾವ ಪರಿಯು ನುಡಿಗಳಿವರಿಗೇಂಗೈವೆವೆನುತ ಮನದಿ ॥
ನೆನೆದೊಂದು ಪರಿಯನೆಂತಾದೊಡಿಂದೀವಿಪ್ರ ।
ಜನದುಷ್ಟಕೃತ್ಯಗಳನಪಹರಿಸವೇಳ್ಕೆನುತ ।
ನೆನೆದಂ ಗಯಾಸುರನ ಪಿತೃತುಷ್ಟಿಕರನತುಲಸಾಘುಜನಸೇವ್ಯವರನ (16)
ದೃಢಮತಿಯು ಕೇಳು ನಾನಿತ್ತ ಪಿಂಡವಪ್ರಿಯದಿ ।
ಪಿಡಿದು ಜಿಹ್ವಾಗ್ರದಲಿ ಪಿತೃಗಳಿಗೆ ಹರ್ಷವಂ ।
ಕೊಡುವುದೆನೆ ಜಗದೀಶನನುಮತಿಯೊಳಂ ಗಯಾಶಿರವು ಸಂತುಷ್ಟಿವಡೆದು ॥
ಕೊಡುವ ಪಿಂಡಂಗಳಂರಸನಾಗ್ರಕಂ ಪೋಗಿ ।
ತುಡುಕಲಾಕ್ಷಣ ನಿಖಿಲಪಿತೃಗಳೆಲ್ಲರ್ ಪ್ರಿಯದಿ ।
ನುಡಿದರಾವ್ ಮುಕ್ತರಾದೆವೆನುತ್ತ ಪ್ರತ್ಯಕ್ಷವಲ್ಲದಿಹ ನುಡಿಗಳಿಂದ ॥ (17)
ಅಶರೀರವಾಣಿಯುಂ ಕೇಳುತತ್ಯಾಶ್ಚರ್ಯ ।
ವಶನಾಗಿ ರಘುವರಂ ಫಲ್ಗುನಿಯು ಬೆಸಗೊಂಡ ।
ರಸನಾವತಿಯಿದೇನು ಬೀಜವಲ್ಲದೆ ಮುಕ್ತಿಯಾದುದಸ್ಮತ್ಪಿತೃಕುಲಂ ॥
ಉಸಿರವೇಳ್ಕೆಂದೆನಲು ಸೈವಲಿನಿ ಸಂತೋಷ ।
ದೆಸಕದಿಂ ದೊರೆದಳೀ ವೈದೇಹಿ ಯಾಚಮನ ।
ವೆಸಗಿ ಬಿಟ್ಟುದಕವಿಂ ಮುಕ್ತರಾದರೆನುತ್ತ ಪೇಳಲಾವಗೆ ನಗುತಲಿ ॥ (18)
ಸತಿಯು ಮುಖಮಂ ನೋಡಿ ಸಂತಸವಿ ನಗೆವೆರಸಿ ।
ಕ್ಷಿತಿಸುತೆಯು ಸಾಕ್ಷಿ ತನ್ನಂಗುಟವ ನೋಡುತ್ತ ।
ಖತಿಯಿಂದ ಫಲ್ಗುನಿಯು ಕರೆದು ನಿಷ್ಠುರಭಾಷಿಯಿಂದ ಕೋಪದೊಳಿಂದಳು ॥
ಸತಿಯಾಕೃತಿಯನಾಂತು ಮತ್ತವರ ಚರಿತೆಗಳ ।
ಪತಿಗೊರೆವೆ ದುಷ್ಟಾತ್ಮೆ ನೀ ಗುಪ್ತವಾಗಿ ಸಂ ।
ಗತಿಗೈ ವುದದಿಯನೆನುತ್ತ ಶಾಪವನೀಯೆ ನದಿ ತಿರೋಹಿತಳಾದಳು ॥ (19)
ಆವುಸದ ಬಾಡಬವು ನಿಜಜೀವನೋದ್ವಿಗ್ನ ।
ರಾಮ ಗಯಮಂ ನೋಡಿ ಪಿತೃಗಳಂಗಡಸುವ ನಿ ।
ರಾಮಯಾನಂದಮಂ ಕಂಡು ಕಳವಳ ಗೊಂಡು ಕರುಣಾವರಣನಿಲಯನು ॥
ತಾಮಸಧ್ವಾಂತರದಿ ರವಿಕುಲಾರಾಮ ನಿ ।
ಸ್ಸೀಮ ಹರಿಚಂದನಿತ ವಿನಮಿತಾನನಜನ ।
ಸ್ತೋಮಪಾಲನಶೀಲನಂ ಘಟೀಯಂತ್ರಗಳಗಗ್ರಭವರೆನಿಪಂವದೆ ॥ (20)
ಗುರುಪುಣ್ಯ ತೀರ್ಥ ದೇವತೆ ಪಿತೃಗಳಂ ಧರ್ಮ ।
ಕರವರ್ಗ ವೃದ್ಧ್ಯರ್ಥ . . . . . . ನಾವಾಣಿ ಸಂ ।
ಚರಿಸದರ್ಥಾಕಾಂಕ್ಷೆ ವಿಡಿದ ದೌರ್ಜನ್ಯಜನಕ ಘಟಿತಮರವಸ್ಥೆಯು ॥
ಸರಿಸದಲಿ ಮಾರ್ದದಿತದಂತೆ ಸವುದ್ರೈ ಸ್ವಾಂತ ।
ವರೆನಿಮಿಷ ವೀತಿಹೋತ್ರಾಂತರದ ಲೋಹದಂ ।
ತರರೆ ಜೀವನದಾಸೆಯಿಂ ವಿಪ್ರರೈತಂದು ಬಿನ್ನಪಂಗೈದರೊಲಿದು ॥ (21)

ದೇವ ನಿಖಿಲಾಧಾರ ನಿರುಪಮ ದಯಾಕರ ಸು।
ಜೀವನಾಧಾರ ಸಾರ್ಥತ್ರಾಣ ಶುಭಚರಣ।
ಪಾವನ ಪವಿತ್ರ ಪರಬೊಮ್ಮ ಮುಮ್ಮೂರ್ತಿಗಳ ಚಿತ್ತಾಂತ ಬಿಡಿಯ ತಾತ ॥
ಶ್ರೀವಧೂ ರಮಣ ಸಚ್ಚಿದ್ರೂಪ ಸೌಂದರಿಯ।
ದೀವಸುಧೆ ಯರಸನೆಂದವಲೇಪಗರ್ವದಿಂ।
ಭಾವನಾಂತಃಕರಣರಾದೆಮ್ಮ ನುದ್ಧರಿಸಿ ಪೊರೆ ಚರಣಶರಣರೆಂದು ॥ (22)

ಸಂಗವಿರಹಿತ ಚರಾಚರಜೀವರೊಳಹೊರಗೆ।
ಭಂಗುರದಲಿರ್ಪಾತ್ರ ಸ್ಥಿತಿಲಯಂಗಳ ಕರ್ತೃ।
ಮಂಗಳಾತ್ಮಕ ಪ್ರಮಾಣಾವೇದ್ಯ ಜಗದಾದಿಯೆನಿಪ ನಿನ್ನಯ ಮಹಿಮೆಯ ॥
ಹಿಂಗದನುದಿನ ಮಾಳ್ಪ ಯೋಗಿಗಳು ತಿಳಿಯೆ ನಿಗ।
ಮಂಗಳಮ್ಮವು ಮನುಜರಾವೆಂತು ಕಂಡಪೆವಿ।
ದಂ ಗಣಿಸಲೆಮ್ಮಳವೆ ಭವದಿಂದ್ರಿಯಾದಿಗಳಗಳವಡದ ಸನ್ಮಹಿಮೆಯ ॥ (23)

ಮರೆದೆಮ್ಮ ಕೃತ್ಯಗಳ ಸ್ಮರಣೆಗೈಯದೆ ಜೀವ।
ಪರಮಾವೃತ್ತಿಯಂ ತೋರಿ ಪಾಲನೆಗೈಯ।
ದಿರಲಾವದೆಂತು ಬದುಕುವೆ ವಖಿಲಹಿಂಸಕರ ಪಿಸುಣ ಕ್ರೋಧಾವ್ಯಾಪಿತರು ॥
ದುರುಳರತಿಕಾಮನಿರ್ದಯನಿಪುಣರೆಮ್ಮ ನೀ।
ತಿರೆಯೊಳಾಗ್ಯೆ ನೋಳ್ಪಿಂದು ನೀಂ ಕೃತಗಯಯೆ।
ಧರೆಯೊಳಗನಾಯಾಸದಿಂದ ಪಿತೃ ಮುಕ್ತಿಗಳಪಡೆವರ್ಕೆ ಸಜ್ಜನರುಗಳು ॥ (24)

ಈ ಮಹಾಸ್ಥಾನದೊಳ್ ಬಂದು ದ್ವಿಜಕುಲರೆಲ್ಲ।
ಪ್ರೇಮದಿಂ ಮನದಿಷ್ಟಗಳ ಪಡವುತ್ತೈದುತಿರ।
ಲಾಮಹಾಗಯಮೆನುತಲೊರ್ವರು ನಿಷ್ಟ್ರಸರು ನೆನದೆಮ್ಮ ದೌರ್ಜನ್ಯವ ॥
ನೇಮಗೆಟ್ಟುದು ಗಯಾವಿಪ್ರಜೀವನ ಕಷ್ಟ।
ಸಾಮಂಜಸಮದಾಯ್ತು ದೇವ ನೀಂ ಕೃಪೆಯಿಂದ।
ಲೀಮಹೀಸುರರ ಪಾಲಿಸದಿರ್ದರನ್ಯಥಾಗತಿ ಜನಿಸ ವಂಬುಜಾಕ್ಷ ॥ (25)

ಇಂತವಂತಾರ್ತ್ರ (ಯುತ) ದ್ವಿಜವಾಣಿಯಂ ಕೇಳ।
ಸ್ವಾಂತಾನುರಾಗದಿಂ ಕೃಪೆವೆತ್ತು ದ್ವಿಜರಿಗೋ।
ರಂತಭಯಮಿತ್ತು ಕರುಣಾಳುಗಳ ದೇವನೆಂದೆನಿಪ ಬಿರುದಂ ಮೆರೆವ್ರೊಡೆ ॥
ಮುಂತೆ ಪಿತೃಕಾರ್ಯಗಳನೆಸಗಲೈತಹ ವಿಪ್ರ।
ನಂತೆ ಪೂರ್ವಶ್ರದ್ಧೆಯಿಂ ಗಯಾಶಿರದಲ್ಲಿ।
ಸಂತಸದಿ ಪಿತೃಗಳಂಗೀಯಲನ್ನವಂ......ಪೂರ್ವಾಚರಣೆಯನು ಬಿಡದೆ ॥ (26)

ಎಂದಿಸೆಂದದಿ ಗಯಾದಿ ವಿಧಿಯ ಮೀರದೆ ವಿಪ್ರ।
ವೃಂದದನುಮತಿವಿಡಿದು ಪಿತೃಕಾರ್ಯಗಳ ರಚಿಸಿ।
ಬಂದಾಪ್ರುಗೈದ ಗಯೆಯೊಳ್ ಬ್ರಾಹ್ಮಣೋತ್ತಮರ ಸಂತುಷ್ಟಿಗೊಳಿಸಲೆಸುತ ॥
ಚಂದದಿಂ ವರವಿತ್ತು ರಘುನಾಥನಾ ವಿಪ್ರ।
ಗೊಂದಣವ ನೋಡಿ ಕೃಪೆಯಿಂದ ಮಗುಳಂತೆಂದ।
ಮುಂದೆ ಕಲಿಯುಗ ಬರ್ಪುದದರಲ್ಲಿ ಧರ್ಮವೆಂದೆಂಬ ವಾರ್ತೆಯು ಪುಟ್ಟದು ॥ (27)

ಗುರು ವಂಚಕೆಗಳರ್ಥ ಸಂಚನೆಗಳುದ್ಧತದ ।
ನೆರಗೆನಿಪನುಡಿ ನಿಜಾಚಾರ ವಿರಹಿತವೆ ನಡೆ ।
ವರಧರ್ಮಲೋಪ ಪಾಪಾಚಾರ ಸಂಭರಿತ ವಿಪ್ರರುದಿಸುವರು ಮುಂದೆ ॥
ಕರೆದನ್ನ ವಿಶಾವರಿಲ್ಲದರಿಂದ ನಿಮಗೆ ಸುಖ ।
ದೊರಕುವಂದದಿ ಕಯೋಷ್ಣಾನ್ನಪರ್ವತ ಕ್ಷೀರ ।
ಭರಿತ ಕೊಳ ಘೃತವಾಪಿ ದಧಿಯ ಕುಲ್ಯಂಗಳೀ ನೆಲದಿ ಕಂಗೊಳಿಸಲೆನುತ ॥ (28)
ಹರುಷದಿಂ ವರವಿತ್ತು ಗುರುವಸಿಷ್ಠರ ಬೆರೆದು ।
ಹರನಿರ್ಪ ನೆಲೆಯೆನುತಲಿತು ಕಾಶೀಪುರವ ।
ನಿರುತ ಕೈಲಾಸನಿಭವೆಂದು ಸಂತಸದಂದು ನಡೆತಂದ ನಲವಿನಿಂದ ॥
ಸುರತರಂಗಿಣಿಯೊಳವಗಾಹನಸ್ನಾನವಂ ।
ವಿರಚಿಸುತ ಪಿತೃಗಳಂ ಸ್ಮರಿಸಿ ತರ್ಪಣಮಿತ್ತು ।
ನಿರುಪಮಾನಂದದಿಂ ತತ್ತಟದಿ ಕುಳ್ಳಿರ್ದ ಗುರುವ ಬೆಸಗೊಂಡನೊಲಿದು ॥ (29)
ದೇವ ಪೇಳೀ ಲೋಕವಿನಾಶರೀರದಿ ಬಂದು ।
ಜೀವನೋಪಮಿತವೆಂದಂತು ಪೋಷಣೆಗೈದು ।
ನೋವನೀಯದೆ ಚತುರತೆಯಲಿ ಸಂತಸಗೊಂಡು ಮಡಗಿರ್ಪ ನಿಜವಸ್ತುವಂ ॥
ಈ ವಸುಧೆಯಲಿ ತೃಣೋಪಮವಾಗಿ ಬಿಡಲೆಂದು ।
ಭಾವಿಪರದೇಂ ಕತದಿ ದೇಹಿಗಳಿಗೆಲ್ಲ ಮೃತಿ ।
ತೀವಿದ ಭಯಂಕರದೊಳ್ ಮತ್ತದನೆ ಬಯಸುತಿಹರೀ ನೆಲದೊಳಖಿಳಜನರು ॥
ಮೃತಿಯು ಬಯಸುವರುಂಟೆ ಲೋಕವೇಂ ಕಾರಣದೊ । (30)
ಳತಿಶಯಿತ ಪ್ರೀತಿಯಿಂ ಕಾಂಕ್ಷಿಪಚ್ಚರಿಯ ಸಂ ।
ಗತಿಯ ಬಯಸುವದೆನುತ ಶ್ರೀರಾಮ ಬೆಸಗೊಂಡರಾಮುನಿಪ ನಸುನಗುತಲಿ ॥
ಕ್ಷಿತಿಯಮರ ಸಂದೋಹ ದೊಳ್ ಕುಳಿತು ಕಲಶಜನ ।
ಸುತುಸುತೀಕ್ಷ್ಣಗೆ ಪೂರ್ವದಿ ಪೇಳ್ದವೃತ್ತಾಂತವಂ ।
ಪತಿಕರಿಸಿ ಚಿತ್ತರಂಗೈದ ಭೂಸುರರಮರನಿಕರ ಸಂತೋಷಿಪಂತೆ ॥ (31)
ಕೇಳು ರಘುವರ ಮಹಾದೇವನೀ ಧರಣಿಯೊಳು ।
ತಾಳ ಸಂತಸವನುರೆ ನಿಜಪ್ರಮಥರೊಡವೆರೆದು ।
ಕೋಲಾಹಲಾನಂದದಿಂದಿರಲ್ ಕಂಡಖಿಲ ಭೂಸುರರ ನೆರವಿ ನೆರೆದು ॥
ಭಾಳನೇತ್ರನ ಭಜಿಸಲನುಗೈದು ದೀಕ್ಷೆಯಂ ।
ತಾಳ ಶತಸಾಹಸ್ರವತ್ಸರಗಳಂ ನೀರು ॥
ಕೊಳು ವರ್ಜನೆಗೈದು ಕೃಚ್ಛ್ರಚಾಂದ್ರಾಯಣಗಳಂದುಪಾಸನೆಗೈದರು ॥ (32)
ನಿರತಿಶಯಮುಕುತಿಯಂ ಬಯಸಿ ನಿದ್ರಾಹಾರ ।
ವರೆಯದನುದಿನ ಹರಸ್ಮರಣೆಯಿಂ ಬಹುಕಾಲ ।
ಹರಣಗೈವುತಲಿರ್ದ ಬ್ರಾಹ್ಮಣೋತ್ತಮರುಗಳ ಕಷ್ಟವಂ ನೋಡಿ ಮೃಡನು ॥
ಕರುಣದಿಂ ಬಂದಿದೇಂ ಕಾರಣದಿ ತಪವನಾ ।
ಚರಿಸುವಿರೆನುತ್ತ ಬೆಸಗೊಂಡರೆ ಮಹಾದೇವ ।
ಗೆರಗಿ ಬಿನ್ನಪಗೈದರೈಸೆ ತಮ್ಮಯ ಮನೋಭೀಷ್ಟಗಳನರ್ಥಿಯಿಂದ ॥ (33)

ಜಗದಖಿಲ ಜೀವಗಳು ಪಾತಕದ ಬಲೆಯೊಳಗೆ ।
ತಗುಲಿ ನರಕಾದ್ಯುಪದ್ರವದಿಂದ ಧರಣಿಯೊಳ್ ।
ಗೊಗೆದಪರನೇಕವಿಧ ಸಂಕಟಂಗೊಂಬರಾಯಾಸವಿಲ್ಲದ ತೆರದೊಳು ॥
ಸೊಗಯಿಸುವಮುಕ್ತಿಯಂ ಕೊಟ್ಟುಳುಹಬೇಕೆಂದು ।
ಬಗೆಬಗೆಯುತ್ರುತಿಗಳಂ ಬೇಡಿಕೊಳಲತಿಚಿಂತೆ ।
ಯೊಗೆದುದಾಕ್ಷಣ ಚಂದ್ರಶೇಖರನಿಗೇನೆಂಬೆ ಹಿಂದುಮುಂದರಿಯದಂತೆ ॥ (34)

ಕೃತ ಸುಕೃತಫಲಗಳಂದವರವರಕರ್ಮಾನು ।
ಮತವಿಡಿದು ಗತಿಗಳೈದುವ ಜೀವಸಂದೋಹ ।
ಕತುಲ ಮುಕ್ತಿಯು ಶರೀರತ್ಯಾಗಮಾತ್ರದೊಳಹುದೆಂತೊ ಭೂತಳದೊಳು ॥
ಯತಿಗಳೀಪರಿಯ ದಯೆವೆರಸಿ ಮುಲ್ಲೋಕದುಪ ।
ಕೃತಿಗೆನ್ನ ಪಿಡಿದಿರ್ಪರೇಂಗೈವೆನೆನುತ ಹರ ।
ಮತಿಯೊಳಾಳೋಚಿಸುತಲಿರಲನ್ನೆಗಂ ಬಂದ ಪೊಂಬೊಡೆಯ ನಲವಿನಿಂದ ॥ (35)

ಸಗ್ಗಿಗರ ಪಿರಿಯನೈತರೆ ನೋಡಿ ಹರ್ಷದಿಂ ।
ಬಗ್ಗನಿದಿರೆದ್ದು ಸೆಳೆದಪ್ಪಿ ಕ್ಷೇಮಾರೋಗ್ಯ ।
ಮುಗ್ಗಡಿಸೆ ಕಂದುಗೊರಲನ ನೋಡಿ ನಾಲ್ಮೊಗಂ ಚತುರತೆಯೊಳಿಂತೆಂದನು ॥
ಅಗ್ಗಳಕೃಪಾಸಿಂಧು ಕಂಗೊಳಿಪ ವೀರರಸ ।
ಸುಗ್ಗಿಯಾನನ ಕಂದಿತೇಂ ಕತದಿ ಪ್ರಿಯದಿಂದ ।
ಬಗ್ಗದೊಪಲುಡಿಯನೀಂ ಬೆಸಸೆಂದು ಬಿದಿನುಡಿಯೆ ಪರಮೇಶನಿಂತೆಂದನು ॥ (36)

ಧಾರುಣಿಯೊಳಗಖಿಳಪ್ರಾಣಿಗಳಿಗಾಯಾಸ ।
ತೋರದಂದದ ಮುಕ್ತಿಯಂ ಕೊಡುವುದೆಂದು ಬಂ ।
ದಾರಾಧನಂಗೈವರೀ ಮುನೀಶ್ವರರಿದಕುಪಾಯಮೇನೊಂದು ಮನಕೆ ॥
ತೋರದಿದೆ ಚಿತ್ತಚಿಂತಾಂಬುರಾಶಿಯನೊಮ್ಮೆ ।
ಪಾರಮಂ ಕಾಣಲಳವಲ್ಲದಿದೆಯದರಿಂದ ।
ಸಾರಸಾಸನ ನಿನ್ನಬರವು ಸಂತಸವಾಗಿ ಬೆಳಗಿತೆನಲಿಂತೆಂದನು ॥ (37)

ಭೂಸುರರು ಬೆಸಗೊಂಡ ಪ್ರಶ್ನೆ ದುರ್ಘಟಮಿದನಿ ।
ರಾಸಗೈಯಲ್ಕೊಡದೀಯುಲ್ದರಾಸದಸ ।
ಭಾಸದರು ಕೃಪೆಯೊಂದೆ ಮುಖ್ಯ ಜೀವನ ಮನಲ್ಕಾರಾಧನಂ ಗೈವರು ॥
ಲೇಸೆನಿಪ್ಪುಪಾಯ ಮುಂದೋರದಾದರು ದಯಾ ।
ರಾಸಿಯ ಮಹಾಮಂತ್ರಮಿಲ್ಲದಖಿಳ ಪ್ರಾಣಿ ।
ರಾಸಿಗಳಗೊಪಗದೈಸಲಿ ಮೋಕ್ಷಮಿದನಾನು ಪೂರ್ವದಲಿ ಕ್ರೂರತಪದಿ ॥ (38)

ಪಲಕಾಲಮತಿಕ್ರೂರ ಮಾದ ತಪದಿಂ ಮೆಚ್ಚಿ ।
ಸಲುಕಷ್ಟ ಬಡಲೊಂದುದಿನ ಕೃಪಾಸಿಂಧು ಬಂ ।
ದೊಲಿದು ನಿಜಮಂತ್ರ ರಾಜಮನೊರೆಯಲಾನದಂ ಭೂಸುರರ್ಗೋರದೆನಯದಿ ॥
ಸುಲಭದಿಂದಾ ಮಹಾಮಂತ್ರಂ ಷಡಕ್ಷರಂ ।
ಲಲನಾದಿಗಳಿಗನಾಯಾಸ ಮೋಕ್ಷವನಿತ್ತು ।
ದಲಘು ಮತಿ ರಾಮಮಂತ್ರವನುಳಿದು ಪಾಯಮಿದ ಕೇನೊಂದು ತೋರದೆನಗೆ ॥ (39)

ಸಕಲೋಪಕಾರಮೀರಾಮಮಂತ್ರಮಿದೊಂದು ।
ಯುಕುತಿಯಿದೆ ಮತ್ತೊಂದುಪಾಯಾಂತರಗಳಿಂ ।
ಪ್ರಕಟಿಸವೆನಲ್ಕಿ ಹರ ಸಂತೋಷಗೊಳುತೊಡನೆ ಬೊಮ್ಮನೊಡನಿಂತೆಂದನು ॥
ಸಕಲಾಗಮಜ್ಞ ಮೋಕ್ಷೋಪಾಯವಿದ್ಯಮಂ ।
ರಕುತಿಯಿಂದೊರೆಯುಲಿದರಿಂದಖಿಲ ಪ್ರಾಣಿಗಳ ।
ಸುಕರಗೈದಪೆನೆನಲ್ ಪೊಂಬೊಡೆಯು ಸಂತಸದಿ ಪೇಳಲೆಳಸಿದನು ಮನದಿ॥ (40)

ಸುರತರಂಗಿಣಿಯೆಡೆಯು ಸೂರ್ಯೋಪರಾಗದಲಿ ।
ವರಮಂತ್ರರಾಜಂ ಷಡಕ್ಷರವ ಪ್ರೀತಿಯಿಂ ।
ಹರನ ಕರ್ಣದೊಳೊರೆದು ಸತ್ಕಾರಮಂ ಕೊಂಡು ಸರಸಿಜಾಸನ ಗಮಿಸಲು ॥
ಪರಮಭಕ್ತಿಯೊಳು ಮನ್ವಂತರ ಸಹಸ್ರದೋಳ್ ।
ನಿರುತ ಜಪಹೋಮಾರ್ಚನಾದಿಗಳಲುಪಚರಿಸೆ ।
ಕರುಣದಿಂ ಶ್ರೀರಾಮ ಮುಂಗಡೆಯೆ ಕಂಗೊಳಿಸದಂ ಮಹಾದೇವನಿಂಗೆ ॥ (41)

ತೇಜೋಮಯಾನಂದವಿಗ್ರಹವ ನೋಡುತ ಸ
ಮಾಜಸಹಿತೀಶ್ವರಂ ಮಣಿಯೆ ಕರದಿಂದೆತ್ತಿ ।
ರಾಜಶೇಖರ ಬೇಡಿದಿಷ್ಟಮನ್ನೊಲಿದೀವೆಯಾಚನಂಗೈವುದೆನಲು ॥
ಆಜಗತ್ಪತಿಗೆರಗಿ ದೇವತಾಪಸವಿಪ್ರ ।
ರಾಜಿಗಂ ನಿಜಪದವನಿತ್ತುಪ್ರಿಯಗೈವೇಳ್ಕು ।
ಮೀಜಗತಿಯೊಳಗೆಂದು ಹರಬಿನ್ನಪಂಗೈಯಲಂಗೀಕರಿಸಲಾಕ್ಷಣ ॥ (42)

ಸೋಮಶೇಖರನಿಂದಲಾಮುನಿಗಳುಂ ಪರಮ ।
ಧಾಮದೊಳ್ ಬೆರೆಯಲಾಕ್ಷಣದಿ ಹರನಂನೋಡಿ ।
ಸೋಮ ಮನದಿಷ್ಟಮೇನುಂಟದಂಬೇಡಿದುದನೀವೆನೆಂದೊರೆಯೆ ಮುದದಿ ॥
ಸ್ವಾಮಿ ಭವದೀಯ ಸನ್ಮೂರ್ತಿಯಂ ನಿಟ್ಟಿಸುವ ।
ಪ್ರೇಮವೊಂದಲ್ಲದನ್ಯತ್ರ ಯಾಚಿಪಕಾರ್ಯ ।
ಸೇಮಮಿನಿತಿಲ್ಲನೀ ನೊಲಿದು ಕೃಪೆಯಿಂದಾವುದಿತ್ತಡದ ಪತಿಕರಿಪೆನು ॥ (43)

ಆದಡಾಲಿಸು ದೇವದೇವೇಶ ಕೃಪಿಕೇಟ ।
ಕಾದಿದೇಹಿಗಳಲ್ಲಿ ಮೂರ್ತಿಯಂ ಬಿಡೆ ನಿರಾ ।
ಸೇದ ಕೈವಲ್ಯ ಸಂಭವಿಸಲಿದು ರವಿಶಶಿಗಳಿರ್ಪನ್ನ ತಪ್ಪದೆನುತ ॥
ಮೋದದಿಂ ವರವಿತ್ತು ಮಗುಳ್ ಪೇಳದ ಹರನೆ ।
ಸಾದರದೊಳೀ ಮಹಾಮಂತ್ರವನು ಬಿಡದೆನೀ ।
ಬೋಧಿಸು ಮುಮುಕ್ಷುಗಳ್ ಬಲಗಿವಿಯಲದರಿಂದ ಮುಕ್ತರಪ್ಪರು ನಿಮಿಷದಿ ॥ (44)

ಅನಿಮಿಷಸುಸೇವ್ಯಮಾದೀಕುರುಕ್ಷೇತ್ರದಲಿ ॥
ಬಿನದಮೆನಲಾನಿರ್ಜನು ಪಲಾದಿ ಪ್ರತಿಮೆಗಳ ।
ಸನಿಹದೊಳಗಾರಾದರೆನ್ನ ಪೂಜಿಸೆ ಭಕ್ತಿಯಿಂದವರ ಪಾಪಂಗಳ ॥
ಕೊನೆಗಾಣಿಸುವೆ ನಿಲ್ಲಿ ತನುವ ಕಳದರ್ಪುನ ।
ಜನನ ವಿರಹಿತಮಾದ ಪದವಿತ್ತು ರಕ್ಷಿಸುವೆ ।
ನೆನುತಭಯಮನ್ನಿತ್ತನಾ ಮಹಾಸಭೆಯುಜನವರಿತು ಸಂತಸಗೊಂಬೊಲು ॥ (45)

ಚತುರಮುಖನಿಂದಾಗೆ ನಿನ್ನಿಂದಲಾದರತಿ ।
ಹಿತ್ತಮೆನಿಪ ತಾರಕಸುಮಂತ್ರವನಪ್ಪವಸು ।
ಮತಿಯೊಳಿರಿದಪನಾವ ದೇಹವುಳ್ಳನಿತುದಿನ ನಿಖಿಳಭೋಗಗಳನುಂಡು ॥
ಅತಿಶಯದ ಕೈವಲ್ಯ ಪದವನಾಳುವನೆಂದು ।
ಯತಿನಿವಹ ಸಂತಸಂ ಗೊಳುವಂತೆ ಪೇಳಸ ।
ಸ್ಮೃತಿಗೊಳಸುತಾಕ್ಷಣ ತಿರೋಧಾನನಾದ ಶ್ರೀರಾಮಚಂದ್ರಮನು ಬಳಕ ॥ (46)

ಅಂದಿನಿಂದಖಿಲಮುನಿಸಂದೋಹವೊಡಗೂಡಿ ।
ಮಂದಿರಂಗೈದಿಂದುಶೇಖರಂ ಪ್ರಮಥಗಣ ।
ವೃಂದಾರಕಾಧಿಗಳನೊಡಗೊಂಡು ಕ್ಷಣಮಾತ್ರಮಗಲವಂತಿರ್ಪನಿಲ್ಲಿ ॥
ಚಂದಚಂದದಿ ಹರಿಹರಕ್ಷೇತ್ರ ಪೆಸರಾಂತ ।
ಮಂದಿಗಳರ್ಪವಗಣಿತಧರಾವಳಿಯದೊಳ್ ।
ಒಂದಾದಡೀ ಶಿವಕ್ಷೇತ್ರ ಸಮನೆನಿಸದೈ ತಿಳವುದ ವಿಮುಕ್ತಮೆನುತ ॥ (47)

ಹರ ತಪೋನುಷ್ಠಾನದಿಂದಲಾರ್ಚನೆ ಗೈದ ।
ಪರಮಪುಣ್ಯಕ್ಷೇತ್ರವತಿ ಪವಿತ್ರಂ ಪಾಪ ।
ಹರ ಶರೀರತ್ಯಾಗಮಾತ್ರದಿಂ ಕ್ರಿಮಿಕೀಟ ಮನುಜಾದಿಗಳ್ಗೆ ಮುಕ್ತಿ ॥
ಕರಗತ ಪದಾರ್ಥಮಿನಿತಾಯಾಸವಿಲ್ಲದಂ ।
ತೊರೆವ ತಾರಕ ಮಂತ್ರಮಹಿಮೆಯಂ ತಿಳಮಬುಧ ।
ನೆರವಿಯುವಿಮುಕ್ತ ಮಂದಿರವೆನುತ ತಿಳದಗಲವನುದಿನದೊಳರ್ಪರನಘ ॥ (48)

ಈ ಮಹಾ ಕ್ಷೇತ್ರದುರು ಮಹಿಮೆಯಂ ವರ್ಣಿಸಲು ।
ಸೋಮಶೇಖರನಲ್ಲದುಳದರಿಂದಳವಹುದೆ ।
ಶ್ರೀ ಮಹಾದೇವಗತಿಪ್ರೀತಿಯಾನಂದ ನೆಲೆಯಾದುದು ಭವಕ್ಕೃಪೆಯೊಳು ॥
ರಾಮಮಂಗಳನಾಮ ಮುಮುಕ್ಷುರ್ಗಳಧಾಮ ।
ನೀಮನುಜವೇಷದಿಂದೀ ಕಥೆಯ ತಿಳಯದಂ ।
ತೀಮಹೀಜನರಿಗಚ್ಚರಿಯ ತೋರುವ ಲೋಕಹಿತಕೆಂದು ಕರುಣದಿಂದೆ ॥ (49)

ಎಂದು ಮೈತ್ರಾವರುಣಿ ತಿಳುಹಲಮರೇಂದ್ರಾದಿ ।
ವೃಂದಮುನಿಜನರೆಲ್ಲ ಜಯಜಯನಿನಾದದಿಂ ।
ಪೊಂದಿಪೊಗಳುತ್ತಲಿರಲ ವರವರ ಮನದಿಷ್ಟಗಳನಿತ್ತು ಕರುಣದಿಂದ ॥
ಇಂದುಧರ ನಾಲಯವನುಳದು ಸುಪ್ರೇಮದಿಂ ।
ಬಂದು ಬಂಧುಗಳೆಲ್ಲರಂ ಕಂಡು ಸುಖದಿಂದ ।
ಇಂದೀವರಾಕ್ಷನೆಸೆದಂ ಚಿತ್ರಕೂಟದೊಳು ಸಕಲರಾನಂದ ಗೊಳಲು ॥ (50)

ಆದುದುತ್ಸವವಖಿಲ ಜನರಿಂಗೆ ಖಗಗಳಗೆ ।
ಮೋದಸಂಭವಮಾಯ್ತು ಪೋದಮಳೆ ಬರೆಜಗತಿ ।
ಗಾದ ಹರುಷೋತ್ಸ ಕತೆಯಪ್ಪಂತೆ ನಲಿವುತಿರಲತಿಶಯಪ್ರೇಮದಿಂದ ॥
ಶ್ರೀದಯಾನಿಧಿ ರಾಮನವರಿಗವರಂದದಿಂ ।
ಸಾದರಪ್ರಿಯಗೈವುತಿರೆ ಭರತ ಪ್ರೇಮದಿಂ ।
ಪಾದಪದ್ಮಂಗಳಂಗೆರಗಿ ಬಿನ್ನಪಗೈದ ಪೆಂತಪ್ಪ ಕಜ್ಜಗಳನು ॥ (51)

ಜನನಾಥನಿಲ್ಲದೆ ಮದೀಯ ರಾಷ್ಟ್ರಂಮೇಘ ।
ದನುವ ಸಂಪ್ರಾಪ್ತಿಸುವ ಚಾತಕಗಳಂತೆ ಪದ ।
ವನಜಂಗಳಂ ಬಯಸಿಕಾರೈಸುತಿಹರಖಿಲ ಲೋಕಸಂತುಷ್ಟಿಗೊಳ್ಳಲು ॥
ಮನಮೊಲಿದು ರಾಮಪುರ ನಾಥ ನೀನರಸೆನಿಸಿ ।
ವಿನಯದಿಂ ಮುಲ್ಲೋಕವಾನಂದ ಸಾಮ್ರಾಜ್ಯ ।
ದನುಭವಂಗೈದಂತೆ ಕೃಪೆಗೈಯುವೇಳ್ಕೆನುತ ಭರತಬಿನ್ನಪಗೈದನು ॥ (52)

[ಸಂಧಿ 32 ಪದ 1422.]

ಮೂವತ್ತ ಮೂರನೆಯ ಸಂಧಿ

ಸೂಚನೆ ॥ ಸಕಲ ಜನರಾನಂದಗೊಳ್ಳುವಂತೆ ಸದ್ಧರ್ಮ ।
ಯುಕುತಿಯಿಂ ಭರತನನುಮತಿಗೈದು ನೆರೆದಬುಧ ।
ನಿಕರ ಸಂತಸಗೊಳ್ಳುವೊಲೆಸಗಿದಂ ರಘುನಾಥ ಜಾತಾನುರಾಗದಿಂದ ॥

ಹಿಮಗಿರಿತನೂಜೆಕೇಳ್ ಗುರುವತ್ಸಲತೆವೆರದು ।
ಕ್ರಮದಿಂದ ಪ್ರಾರ್ಥಿಸುವ ಭರತನಂ ನೋಡಿ ಸಂ ।
ಭ್ರಮದಿಂದಲಿಂತೆಂದ ತಾತದಯದಿಂದಿತ್ತ ರಾಜ್ಯಸಂಪದವನುಳಿದು ॥
ಶಮಧನರ ರೀತಿಯಿಂ ಪಿಡಿದು ಕಾನನಕೆ ಬಂ ।
ದಮಲಮತಿಗೇನೆಂಬೆ ನಗರಯೊಳ್ ಧೊರೆಯೆನಿಸಿ ।
ಕ್ರಮದಿಂದಲಖಿಳರಂ ಪಾಲಿಸಲ್ಕೈದೆನಲ್ ಭರತ ಮಗುಳಂತೆಂದನು ॥ (1)
ಉತ್ತಮಾಂಗವನುಳಿದು ಮೊಳಕಾಲಗಂಕಾಶೆ ।
ಯಿತ್ತಪರದಾರರಸ ಮುಲ್ಲೋಕನಾಯಕಂ ।
ಉತ್ತಮಪ್ರಿಯ ನೀನೆಧೊರೆಯೆನಿಸುತಖಿಲರಂ ಪೊರೆದು ಕೃಪೆವೆರೆದು ಸಲಹು ॥
ಮಿತ್ತ್ರಪಿನತೆರದಿ ಮನ್ಮಾತೆ ವಚನದೊಳಂ ನೃ ।
ಪೋತ್ತಮನ ಪೋಗಾಡಿ ದುರ್ಯಶಕೆಮೂರ್ತಿಯಂ ।
ನಿತ್ತಳಾರರಿಯರಿದ ಮನದೊಳೆಣಿಸದೆ ಪ್ರಿಯಾದಿಪತಿಕರಿಪ್ರದೆನ್ನನುಡಿಯ ॥ (2)
ಈ ಪ್ರಕೃತಿಜನರ ಮತ್ತೀಪ್ರಜಾಹಿತಕರರ ।
ತಾಪಹತ ಮಾತೆಯರ ತಪಿಸುತಿಹ ಭೂಸುರರ ।
ಕೋಪಿಸುವ ಚರರ ಹಿತಕರವೆನಿಸುತಿಹ ನರರನಾನಂದಗೊಳಿಸಲೆಂದು ॥
ಶ್ರೀಪತಿಯೊಲರಸನಾಗು ಸಾಕೇತನಗರ ಸಂ ।
ತಾಪಹರವೆನಿಸು ಭಕ್ತ ಶಿಷ್ಯದಾಸನೆ ।
ನ್ನೋಪದಯದಿಂ ನೋಳ್ಪುದೆನುತಾರ್ತಿಯಿಂ ಪಿಡಿದ ಪದಗಳಂ ರಘುನಾಥನ ॥ (3)
ಎನುತಾರ್ತತೆಯ ವೆರಸಿ ಚರಣದೊಳ್ತಲೆಯಿರಿಸಿ ।
ಘನತರದೊಳಳಲುತಿಹ ಭರತನಂ ನೋಡಿರಘು ।
ಜನಪ ಸೆಳೆದಪ್ಪಿ ತೊಡೆಯೊಳಗಿಟ್ಟು ಕಂಬನಿಯನೊರಸಿ ಗಲ್ಲವ ನಲುಗುತ ॥
ತನಯ ಸಚ್ಚರಿತ ಸತ್ಕುಲ ಜಾತ ತೇಜಸ್ವಿ ।
ವಿನಯಪರನತಿಶೂರ ಧರ್ಮಶೀಲಂ ರಾಜ್ಯ ।
ವನುಬಯಸಿ ಪಾತಕವ ಬೆರಸುವರೆ ಸಾಧುಜನಪಂಥಾನ ದೂರನೆನಿಸಿ । (4)

ಎನಿತಾದೊಡಂ ನಿನ್ನೊಳವಗುಣವ ಕುರುಪಿಡಲ್ ।
ಜನಿಸುವದೆ ಪರದೇವತಾರೂಪಮಾಂತಿರ್ಪ ।
ಜನನಿಯುಂ ಧಿಕ್ಕರಿಸಬಹುದೆ ಪೆತ್ತಾತನಂ ಕಂಡಂತೆ ಕಾಣ್ಬುದೆನುತ ॥
ಮನುಮುನಿಗಳೊರೆದಪರು ಮಾತಾಪಿತೃಗಳೆಮಗೆ ।
ಸನುಮಾನಗೈದೊಡಂ ಮಗುಳ್ ನಿಂದಿಸಿದೊಡಂ ।
ಮನಮೊಡಂಬಟ್ಟಾಚರಿಪುದೆ ಧರ್ಮಮಲ್ಲದದ ಬಿಡಲೊಪ್ಪುವರೆ ಸುಜನರು ॥ (5)

ಸರಿಧೊರೆಗಳಾಪ್ತರುಗಳಮಿತ ಪ್ರಜೆಪರಿವಾರ ।
ನೆರದ ವಿದ್ವಜ್ಜನರ ಮುಂಗಡೆಯೊಳೆನಗೊರದ ।
ಭರತಗೀರಾಜ್ಯಮಂ ಕೊಟ್ಟಿರ್ಪೆ ನೀಂ ಪೋಗಿ ಪದಿನಾಲ್ಕುವರುಷ ಬನದಿ ॥
ಚರಿಸವೇಳ್ಕೆಂದು ಜನನಿಯು ಜನಕರೀರ್ವರುಂ ।
ಹರುಷದಿಂ ನೇಮಿಸಿದ ಗುರುವಾಕ್ಯಮಂ ಮೀರಿ ।
ಶರಿರವಿಡಿದೇನುಫಲಮನೃತಮ ಸ್ನಾಳೆಕುಲಕೆಡುಗು ಜೀವನ ನಿಷ್ಫಲ ॥ (6)

ತಂದೆತಾಯ್ಗಳು ದಯದಿ ಸಕಲ ಬಂಧುಗಳೆಡೆಯು ।
ಚಂದದಿ ವಿಭಾಗಗೈದಿತ್ತಾಶೆಗಳ ನಾವು ।
ಕುಂದದನುಭವಗೈದು ಪಿತೃವಾಕ್ಯ ಸತ್ಯಮೆಂದೆನಿಸಿ ಧರೆಯೊಳು ಕೀರ್ತಿಯು ॥
ಪೊಂದುವದೆಲೇಸು ತಿಳಿಯದೆ ಪೇಳ್ವಗೆಂದಲ್ಲಿ ।
ಕುಂದೆಣಿಸಿ ಜರೆವುದನ್ಯಾಯು ಮೂರ್ತಿಯು ನವರು ।
ಬಂಧುರಪ್ರೇಮದಿಂ ಪೊರೆಯಲಾರ್ಗೀಯಲುಂ ಸರ್ವಸ್ವತಂತ್ರರಲ್ತೆ ॥ (7)

ಸತಿಸುತರದಾಸಭ್ರಾತ್ರಾದಿಗಳಗೊರವೆಡೆಯು ।
ಪತಿ ನಿಜಮನೋರಥಂ ಬಂದೊಲಾಜ್ಞಾಪಿಸುವ ।
ಹಿತಮೆಂದರಿಯುವೇಳ್ಕುಮಲ್ಲದದ ದೋಷಮೆಂದರಿಯಲಡಸುವದು ದೋಷಂ ॥
ಮತಿವಂತಕೇಳ್ ಬೊಪ್ಪರಾಜ್ಯಬಸಗಳ ಪಂಚೆ ।
ಮಿತಿಗೈದು ಸಗ್ಗಕೈದಿದಸದಂ ಮನ್ನಿಸದೆ ।
ಕ್ಷಿತಿಯರಸುತನ ಕೆಳಸಿ ಪಾತಕವ ಬಯಸುವದು ರವಿಕುಲದ ಜಸಕೆಡುವದು ॥ (8)

ತಾತನೇಮಿಸಿದಂತೆ ಧರೆಯುಪಾಲಿಸು ಬುಧ ।
ವ್ರಾತಮೆಚ್ಚುವ್ರೊಲೀನು ಪದಿನಾಲ್ಕುವರುಷಗಳ ।
ನೀತಗೈದೈತಪ್ಪೆ ವಾಜ್ಞಾತುರದೊಳಹುದು ದೆವಸಗಳ್ ನಿಮಿಷದಂತೆ ॥
ತಾತ ಬಳಲದೆಬರಿದೆ ನಗುಗೈದೊಂದೊರೆದ ।
ಮಾತಕೇಳ್ದಾಕ್ಷಣದಿ ಮಗುಳ್ ಶೋಕಾತುರದಿ ।
ಭ್ರಾತಾಂಘ್ರಿಕಮಲಗಳ ಪಿಡಿದು ಭರತಂ ನುಡಿದ ನಾಸಭಾಸದರೆಡೆಯೊಳು ॥ (9)

ಜನನಿಜನಕರನುಡಿಯ ಪತಿಕರಿಸಿನಡೆವುದೇ ।
ಜನಮನೋಹರ ಧರ್ಮಮಾದೊಡಪ್ರಿಯದಿಂದ ।
ಲೆನಗಿತ್ತ ಭಾಗಮಂ ದಾನಧರ್ಮಂಗೈಯಲಾರ್ಗಿತ್ತರುಂ ಸಲುವುದು ॥
ಜನಸಮ್ಮತಂ ಸತ್ಯಮತ ಧರೆಯು ನಿನ್ನಪದ ।
ವನಜಕರ್ಪಿತಗೈವೆನಂಗೀಕರಿಸಿ ಪ್ರಕೃತಿ ।
ಜನರ ಸಂತಸಗೊಳಸು ಶರಣರಲಿ ದಯವೆರಸು ಶಾಶ್ವತದಜಸವಗಳಸು ॥ (10)

ಸಗರಂದಿಳೀಪ ರಘುನಾಥನೀರಥನಾಳ್ದ ।
ನಗರಿಗಧಿಪತಿ ಯೆನಿಸಲವರಿಗೈವಡಿ ನೀನೆ ।
ಮಿಗೆ ಸತ್ವಸಂಪನ್ನ ನಿನ್ನುಳಿದು ಮತ್ತಾವ ನಗರಿಗಧಿಪತಿಯೆನಿಪನು ॥
ಬಗೆದಪ ಪ್ರಭುತ್ವಮಂ ಹಾಸಕರವೆಂದೆನಿತು ।
ಖಗರಾಜಗತಿಗೆ ಖಗತತಿ ಜಾತಿಗಾಂಧರ್ವ ।
ದೊಗುಮಿಗೆಯುಗಮನಮಂ ರಾಸಭಂಬಯಸಿದಂತಪ್ಪುದಿದು ತಪ್ಪದರಸ ॥ (11)

ಬಾನೆಡೆಯೊಳಹ ಶಾಖೆಯಗ್ರದೊಳಹಫಲಂ ।
ತಾನುಕೈಸಾರುವದೆ ಖರ್ವಮಾನಸಗೆಂತು ।
ಭಾನುಕುಲದರಸುಗಳ ಪಟ್ಟವಣೆಯಧಿಕಾರ ನಿನ್ನುಳಿದು ಪೆರರಿಗಹುದೆ ॥
ಜಾನಪದ ಜನನಿಯರ್ನಲಿವಂತೆ ನುಡಿಯ ಸ ।
ನ್ಮಾನಿಸುತಲರಸೆನಿಸಿ ಶರಣನಂ ಪೊರೆಯೆನುತ ।
ದೀನತೆಯೊಳೊರೆವ ಭರತನ ನೋಡಿ ಸಂತೈಸುತಾಗಮುಗುಳಂತೆಂದನು ॥ (12)

ಜೀವರುಗಳಾಸೆಯುಂ ಸುಖ ಪರಂಪರೆಯಪ್ಪ ।
ತಾವನರಸುವರೆಂದಿಗಿಚ್ಛೈಸುರತರಸಂ ।
ಭಾವನಾಮಾತ್ರ ಕಷ್ಟವನೆನೆಯರಿದು ಸಿದ್ಧಮಪ್ಪವತಂ ಸ್ಮರಿಸಿದಂತೆ ॥
ಅವುದೊದಗದು ಪರಾಧೀನ ಫಲ ನಿಷ್ಫಲಗ ।
ಳೀವಿಧಗಳರಿಯದಲಿ ಬರಿದೆಯತ್ನಂಗೈವ ।
ಕೋವಿದರಿಗೇವೇಳ್ವೆ ಮಾಯಾವಿಲಾಸವಿನ್ನೆಂತೊ ತಿಳಿವುದು ಪುತ್ರಕ ॥ (13)

ಅತಿಶಯಶುಭವಾಸಿಗೆನುತ ಯತ್ನಂಗೈಯೆ ।
ವಿತತ ಕಷ್ಟಂದೊರೆಗು ಕಷ್ಟಕಾರ್ಯವನೆಸಗೆ ।
ಹಿತಕರದ ಸೌಖ್ಯಕೈಸಾರಿಬಹುದಮಂದೆ ಸುಫಲ ದುಷ್ಫಲಗಳಿರಡು ॥
ರತಿಪತೀಪಿತನಿತ್ತಡಲ್ಲದೀ ಮಾನಸರ ।
ಯತ್ನದಿಂದೇನಹುದು ನರಗುರಿಗಳಂತೆಸಂ ।
ಗತರೆನಿಸಿ ತೊಳಲುವರು ಪುರುಳಿಲ್ಲದಾಸೆಯಿಂದೇನೆಂಬೆನಚ್ಚರಿಯನು ॥ (14)

ಅಂಬರಪಟುಚ್ಚರಗಳಾದೊಡಂ ಮುಗುಳೊಂದ ।
ಕೊಂಬಂತೆ ಮೂರ್ತಿಗಳ ಕೊಳುತ ಸಂಭ್ರಮಗೊಳುತ ।
ತಿಂಬುದೊರಗುವದೆ ಪುರುಷಾರ್ಥತಾನೀಶ್ವರಂಭೋಗಿಯುಸುಸಿದ್ಧಧನಿಕ ॥
ಎಂಬ ಹಂಕೃತಿದಳೆದು ನಿಧನ ವಾರ್ತೆಯ ಮರೆದು ।
ಚೆಂಬುಲೋಹವಬೆರದ ತೆರದೋಳೀನೊಂದರಿಯ ।
ದಿಂಬಾದಥಂಭದಿಂ ಜೆರಿಪಡಿಂಭಕರಿಂಗದೇನನುಸುರಲ್ಬಪ್ಪುದು ॥ (15)

ದಿನಕರೋದಯವಾಯ್ತು ಮಜ್ಜನಂ ಭೋಜನಗ ।
ಳನುಗೈವ ಸಂತಸಂ ಭಾನುವಸ್ತಮಿಸಿದಂ ।
ವನಿತಾದಿಭೋಗ ಪರಿಕರಗಳರಸುವಹರ್ಷದೊಳಗಿರ್ಪ ಸಾನಂದದಿ ॥
ತನಗೆ ಪೋಪಾಯುಷ್ಯದನುವ ನೆನೆಯಂ ಶಮನ ।
ಘನತೆಯುಂ ಕೇಳ್ದರಿಯ ನರೆಜರೆಗಳಡೆಸುತ್ತ ।
ತನುವ ಜೀರ್ಣಿಸುವದಂ ತಿಳಿಯ ಮಾಯಾಮಹಿಮೆಯೆಂತಿಹುದೊ ಪರಮಾತ್ಮನ ॥ (16)

ಬಂದಪುದ್ಯುಗಾದಿ ದೀವಳಿಗೆ ಸಂಕ್ರಮಣಂಗ ।
ಳೆಂದು ಪಬ್ಬವನೆಸಗಿ ಮಿಂದುಂಡು ಸುಖಿಯಪ್ಪೆ ।
ನೆಂದು ಬಯಸುವನಲ್ಲದಾಯುಷ್ಯಪೋದಪುದೆನುತ್ತ ತಿಳಿಯಂ ಮಾನವಂ ॥
ಸಂಧಿಸಿದಥನ ಪೋಗುವನ್ನೆಗಂ ಮಿತ್ರಡಸು ।
ವಂದು ಪರಿಯಂತ್ರ ಜೀವನ ವಿಯೋಗಂಗಳಿಂ ।
ಬಂದೊದಗುವನಕ ಸತಿಸುತ ಬಂಧು ಸಂಗಮಗಳಿಂವರಿಯನೇಂಪೇಳ್ವುದು ॥ (17)

ಶರನಿಧಿಯೊಳೊಡವೆರೆದ ನೀರು ಪಿಂದಿರುಗ ದೊಲು ।
ತರುಣಾತ್ರೆಯು ಜವ್ವನಂ ಪೋಗಿಮಗುಳ್ಕೆತಹವೆ ।
ನೆರದು ಪಾನೀಯಶಾಲೆಯೊಳು ನೀರಡಿಕೆಯಂ ಕಳದ ಜನರೆಲ್ಲ ತಿರುಗಿ ॥
ಬೆರೆದಪರೆ ಸತಿಸುತಾದಿಗಳೆಲ್ಲ ನಿಜಕರ್ಮ ।
ದಿರವನನುಭವಿಸಿ ಪೊಗಳುವರಾರಿಗಾರಿಲ್ಲ ।
ನರರೀಯವಸ್ಥೆಯಂ ತಿಳದು ಹಿತಕರಮೆಂದು ತೊಳಲುವರುಮರುಕ ವಿಡಿದು॥ (18)

ಮಿತ್ರುಬೆಂಬಡದೆ ಬೆನ್ನೊತ್ತಿಲಿಹುದೆಂದರಿಯು ।
ದುತ್ತಮಂ ಪೋದನೆಂದೆನುತ ಬೆಣನಿಟ್ಟಳುವ ।
ರುತ್ತರೋತ್ತರ ಬಪ್ಪವಸ್ಥೆಯಂ ಮರೆದರಿಯದಳಲುತಿಹ ನರಪಶುಗಳ ॥
ವೊತ್ತದೊಳ್ಬರದು ನೀನೇತಕಳಲುವೆ ಜನಪ ।
ನುತ್ತಮಚರಿತ್ರಯಿಂದಾರ್ಜಿಸಿದ ಫಲಪಮೆಲ ।
ಲುತ್ತಮೋತ್ತಮಗತಿಯು ಸಾರಿದಂ ನೆನೆನೆನೆದು ಬಳಲಲೇನಿಹುದುತ್ತನಯ ॥ (19)

ತಾತ ತಂದೆಯು ತಂದೆ ಕುಲ ಪರಂಪರೆಯು ಸಂ ।
ಜಾತನೃಪತಿಗಳೆಲ್ಲ ತಿಳದಖಿಳತತ್ವಮಂ ।
ನೀತನುವನಿತ್ಯಮೆನುತರಿದು ಹಯಮೇಧಾದಿಗಳನೆಸಗಿ ಸುರರದ್ವಿಜರ ॥
ಪ್ರೀತಿ ಗೊಳಿಸೀಲೋಕಮಂ ಪೊರೆದು ಗಳಿಸಿ ಪ್ರ ।
ಖ್ಯಾತಿಯಂ ದೀರ್ಘಾಯುವಂ ಪಡೆದು ಸತ್ಸುಖ ।
ವ್ರಾತಂಗಳನುಭವಂಗೈದು ಕ್ರಮದಿಂದೈದಿ ಪಡೆದರುತ್ತಮಗತಿಗಳ ॥ (20)

ಕುಲವೃತ್ತಮಂ ತಿಳದು ಕುಶಲಧರ್ಮವಪಳದು ।
ನೆಲದಾಸೆಯಂತಳೆದು ನೇಮಂಗಳಂಕಳೆದು ।
ಪಲುಬಲೇಂಫಲ ಗುರುಮತಾನುಸರಣೆಯೆ ಸಫಲಮೆಂದರಿಯ ಪಿರಿಯರಿಂದ ।
ಕಲಿತಮಾದೀರಾಜ್ಯಸುಖದಿಂ ಭವದ್ಭೋಜ್ಯ ।
ನೆಲೆಯೆಂದು ಪಿತೃವಚನದಿರವ ಮನಕಂತಂದು ।
ಲಲನಾಸಮಾಜಸಹಗಮಿಸಯೋಧ್ಯಾನಗರಿಗಹುದುಸುಕ್ಷೇಮಂಕರ ॥ (21)

ಮೂರುದಿವಸದಬಾಳ್ಕೆಯೆಂದರಿತು ಸತ್ಯಮಂ ।
ಮೀರಿ ದೊರಿಗೆಬಂದು ಬಾಳ್ದರೇಂಫಲ ಸದಾ ।
ಚಾರರತ ಪಿತೃ ಸತ್ಯಶೀಲಧರಣೀ ಪಾಲನಾಜ್ಞಾಪಿಸಿದ ಮಾಳ್ಕೆಯೊಳ್ ॥
ಧಾರುಣೀಪಾಲನಂಗೈವುತಿರು ವನದಿ ಸಂ ।
ಚಾರಗೈವುತ್ತಲಾನಿಜನೇಮ ತೀರ್ವನ್ನ ।
ಧೀರಶೋಕಸದೆ ಪಟ್ಟಣಕ್ಕೈದು ಬೇಗನೆನಲಾಭರತನಿಂತೆಂದನು ॥ (22)

ಹಿಂದುಮುಂದರಿಯದವೆ ಹಿತವಮಾತ್ಗೇಳಿಸದಲೆ ।
ಸುಂದರಿಯಮೋಹದಿಂದಿರುತ ಮೃಡನಂದದಿಂ ।
ಕುಂದನೆಸಗಿದ ಪಿತನಮತವ ನನುಸರಿಪುದಿದು ಬಲ್ಗವಿಕೆಗೊಣೆಯಹುದು ॥
ಛಂದದಿಂದಖಿಲ ಶಾಸ್ತ್ರಾರ್ಥಗಳ ತಿಳಿದು ಚಿ ।
ದ್ವೃಂದದಾರಕನೆನಿಸಿ ಗುರುಕೃತಾಗಸವನೀ ।
ನಿಂದು ಪ್ರಕಟಿಸುವುದಿದು ಸಮ್ಮತವೆ ಜನಹಿತವೆ ತಿಳಿ ದಯಾಕಲ್ಪತರುವೆ ॥ (23)

ಪೆತ್ತಾಕೆಯಮಿತ ದುಷ್ಕೃತ್ಯ ಗೈದಳೆಂದು ಪಿಡಿ ।
ಪುತ್ತ್ರಳದುಜರಿವುದನ್ಯಾಯಮದರಿಂ ಜನಕ ।
ಸುತ್ರಮನೆಸುತ್ರರಿವೆನೆಂಬನೇ ಚರಮದಲಿ ಮೋಹಾಬ್ಧಿಯಲ್ಲಿ ಮುಳುಗಿ ॥
ಮಿತ್ತುಬಪ್ಪವಸರದೊಳೆಲ್ಲ ಜೀವರು ಮೋಹ ।
ದತ್ತಸಾರುವರೆಂಬ ಶ್ರುತಿಯಮಾತ್ರಂ ಧರೆಗೆ ।
ಖ್ಯಾತ್ರಯಗೈದು ತೋರಿದ ಬೇಳ್ವಿದೆರಡರೊಳಗಾವುದುತ್ತಮ ಮೆನುತಲಿ ॥ (24)

ಪಾಪಂಗಳೆನಿಸಿರ್ದರೋರ್ವರರಿಯದ ತೆರದಿ ।
ಗೋಪನಂಗೈದು ಪರಿಹೃತಗೈದು ಸದ್ಗುಣಾ ।
ಖ್ಯಾಪನಂಗೈಯ್ಯಲೋಸುಗ ಬಯಸಿ ಪುತ್ರರಂ ಪಡೆದಪರೆಲ್ಲ ಪಿತೃಗಳು ।
ಕೋಪಿಸುತ ದೋಷಗಳನೆನದೆಲ್ಲರೊಳ್ಪೇಳ ।
ರಾಪಿಗಿಕ್ಕುವುದುಚಿತಮೆನಿಪುದೇ ತರಣಿಕುಲ ।
ದೀಪನೀನರಿಯದುದೆ ಬಾಲನಾನಿದನೊಮ್ಮೆ ಬಿನ್ನಪಂ ಗೈಯಲಹುದೆ ॥ (25)

“ನಡೆವರೆಡಹುವರೆಂಬ” ಗಾದೆ ದೋಷವನಂಟು ।
ದೊಡನೆ ದೇವಸಿಕಾಶ ನೀವಿರಲ್ಪುತ್ರೇಶ ।
ಕಡೆಗೊಳಸು ಬೊಪ್ಪನಿಂದಾದತಪ್ಪಂಪೋಮದೆಣಿಸಲೇಂ ಫಲಮಪ್ಪುದು ॥
ಸಡಗರವ ನೋಡಲ್ಕೆತಂದ ಮಾತೆಯರುಗಳ ।
ನಡಿಗಡಿಗೆ ತುತಿಗೈವ ಋತ್ವಿಜರ ಭೂಸುರರ ।
ನೊಡನೆ ಬಂದಿಹ ಜಾನಪದರನಗರೀಜನರ ಸಂತಸಂಗೊಳಿಸು ಜೀಯ ॥ (26)

ಕುಲಪರಂಪರೆಯರಸುಗಳ ರೀತಿಯಂ ಪಿಡಿದು ।
ನೆಲದಾಣ್ಮನೆನಿಸಿ ಕಿರಿಯರನುಚಿತಸೇವೆಯೊಳು ।
ನಿಲಿಸಿ ಧರ್ಮಾಚರಣೆಯಿಂದ ಚಾತುರ್ವರ್ಣ್ಯಮಂ ಪೊರೆದು ಸುಕೃತವೆರೆದು ॥
ಜಲಜಾಪ್ತಗೋತ್ರವರ್ಧನೆಗೈದು ಕೀರ್ತಿಯಂ ।
ಜಲಧಿಮೇಖಲೆಗೆ ವಿಶದಿಮವಸ್ತ್ರಮಂಗೈದು ।
ನಲವಿಂದ ಸಕಲಭೋಗಗಳಂಬಡಿದು ಕ್ಷತ್ರಧರ್ಮ ಧರ್ಮಸ್ವರೂಪ ॥ (27)

ಮೊದಲು ದೊರೆತನವಿಡಿದು ಕದನಕರ್ಕಶನೆನಿಸಿ ।
ಸದೆದಹಿತ ಮಂಡಲವ ಸದಯದಿಂ ಮನ್ಯುಗಳ ।
ವಿಧಿತಪ್ಪದೆಸಗಿ ಷೋಡಶಮಹಾದಾನಗಳಮಾಡಿ ಭೂಸುರರತಣಿಸಿ ॥
ಉದಧಿಪರಿಯಂತಖಿಲ ರಾಜ್ಯಪಾಲನೆಗೈದು ।
ಮುದದಿಂದಖಿಲಾಗಮ ಶ್ರೇಷ್ಠಗಾರ್ಹಸ್ಥ್ಯ ।
ದುದಯಗೈವುದೆ ಕ್ಷತ್ರಧರ್ಮವಿೀಮಾರ್ಗಗಳ ನೀನರಿಯದಿಹುದೆ ಜೀಯ ॥ (28)

ಅರಸುತನವೆಲ್ಲಿ ಕಾನನನಿವಾಸತೆಯೆಲ್ಲಿ ।
ಮೆರೆವ ಶರಚಾಪಧಾರಣೆಯೆಲ್ಲಿ ಜಟೆಗಳಂ ।
ಪೊರೆದಪುದದೆಲ್ಲಿ ಮೃದುತಲ್ಪಗಳನುಳಿದತುಲಸ್ಥಂಡಿಲದ ಶಯನವೆಲ್ಲಿ ॥
ಪರಮ ಷಡ್ರುಚಿಯನ್ನವೆಲ್ಲಿ ವನ್ಯಾಹಾರ ।
ವೆರದ ವಿಷಮಾಚಾರ ಕ್ಷತ್ರಧರ್ಮವಿದೂರ ।
ಹರಿಭಕುತಿ ಶತ್ರುನಿಗ್ರಹಧರ್ಮರಕ್ಷಣಂ ನೃಪತಿಗಳ ಶೀಲಮಲ್ತೆ ॥ (29)

ಮೊದಲು ಪಟ್ಟವನಾಂತು ಮಹಿತಧರ್ಮದಿನಿಂತು ।
ಸದಯಕುಲಮಂ ಪೊರೆದು ಸತ್ಪುತ್ರರೊಡವೆರದು ।
ಮುದದಿಂದ ನಿಖಿಲಕ್ರತುಯಾಗಂಗಳಂಮಾಡಿ ತನಯರಿಂಗಿತ್ತು ಪದವ ॥
ತುದಿಗೆ ಕಾನನಕೈದಿ ತಪವನಾಚರಿಪುದಿದು ।
ಮೊದಲಿಗೈತಂದ ವಿಕ್ರಮಕಾಮಪೇಳ್ವುದೇ ।
ನಧಿಕ ಧರ್ಮಾಂತರಂಗಂ ಭವಚ್ಚಿತ್ತಮೇನರಿಯದುದೆ ಸಾಧುತಿಲಕ ॥ (30)

ಆನರಿಯದಂತೆನ್ನಜನನಿಗೈವಘವನುಂ ।
ಸಾನುರಾಗದಮೋಹದಿಂದರಸಗೈದುದಂ ।
ಹೀನಗತಿಮಾಮರೆಯು ದುರ್ಬೋಧೆಯುತಿಬೋಧೆಯೆಂಬುದೊಂದೆಣಿಸದುಳಿದು ॥
ಈನಗರದಧಿನಾಥನೆನಿಸಿ ನೆನದೀಪ್ರಜೆಯು ।
ಸಾನಂದಗೊಳಿಸು ಮಾತೆಯರನು ಮಹೀಸುರರ ।
ಭಾನುಕುಲದರಸುಗಳಜಸಕೊಪ್ಪಮನ್ನಿತ್ತು ಬೆಳಗಿಪುದು ಪ್ರೀತಿವೆತ್ತು ॥ (31)

ಕನಕಲೋಷ್ಟಂಗಳಂ ಕಲಿತ ಸುಖದುಃಖಗಳ ।
ನೆನೆವುತತಿನಿಂದೆಗಳನೆಗಳುಮಹಿತಾಹಿತಗ ।
ಳನಿತನೊಂದೇಸಮದಿ ಕಾಣ್ಬುಪರದೊಡವೆರದ ಸರ್ವಜ್ಞ ಚಿತ್ತತಾನು ॥
ಇನಿತ ವಿಜ್ಞಾಪಿಸುವದೇನುಂಟು ಮೋಹವುಂ ।
ಮನವೊಡಂಬಡುವದೇಂ ಮತ್ತಿದನುಸುರ್ವದೇಂ ।
ನಿನಗೆ ನೀನೇ ತಿಳಿದು ಪಾಲಿಪುದು ಕೃಪೆವೆರದು ಮರೆದವಗುಣಂಗಳರವ ॥ (32)

ಅವರೋಧದಂಗನಾ ಜನರಮಾನಸಕೆನು ।
ತ್ತವರೋಧ ಜನಿಸದಂದದಲಿ ಸಂತಸವೀವು ।
ದವರೋಧಕರವಿರಾಗತೆಯಂ ನಿರೋಧಿಸುತಲಿಂದೆ ಮತ್ತೀ ಶೈಲದಿ ॥
ಅವನಿಯಧಿಪತಿಯೆನಿಪೊಲಭಿಷೇಕಮಂ ರಚಿಸ ।
ಲವಿರಳದ ಋತ್ವಿಗ್ಜನಂಗಳೊಡವೆರದು ಗುರು ।
ವವಸರದಿ ರಚಿಸಲಾನಂದಗೊಳಲಖಿಳಜನನೇಮಮಂ ಪಾಲಿಸನಘ ॥ (33)

ತೋರಿದುದ ನೊರೆವೆನಿದಪತಿಕರಿಸಿ ದೊರೆತನದ ।
ಭಾರಮಂವಹಿಸಿ ಬಂದಪಯಶವನಪಹರಿಸಿ ।
ಕಾರುಣ್ಯದಿಂ ಪೊರೆವುದುತ್ತಮಂ ನಿರ್ದಯದಿ ನೀನುದಾಸೀನ ಗೈಯ್ಯೆ ॥
ಚೀರವಸನಂಗಳುರುತರಜಟಾಮಂಡಲದ ।
ಭಾರವಾಹತೆಯೊಳಳವಟ್ಟಿರ್ದನೆನುತಲಡಿ ।
ಸಾರಸಕ್ಕೆರಗಿ ಮುಂಗಾಣದಲೆ ದೈನ್ಯದಿಂ ಧರಣಿಯೊಳ್ಕೆಡದಿರ್ದನು ॥ (34)

ಈಪರಿಯ ನಿರ್ಬಂಧಗೊಳಿಪ ಭರತನ ಶುಚೋ ।
ದ್ದೀಪಕವಪರಿಹರಿಸಲೋಸುಗ ರಘೂದ್ವಹಂ ।
ಸೋಪಾಯಕರವಾಣಿಯಿಂದ ಮೆಲ್ಲನೆ ತಿಳುಪಲನುಗೈದ ವಿನಯದಿಂದ ॥
ಪಾಪವಿರಹಿತ ಸಜ್ಜನೋತ್ತಂಸ ನೀನುಸುರಿ ।
ದೀಪರಿಗಳೆಲ್ಲಂ ಯತಾರ್ಥವಾದರು ಪೇಳ್ವೆ ।
ಗೋಪಿತಾರ್ಥವನೊಂದ ತಿಳಿ ತಿಳಿದು ನಿಶ್ಚಲತೆಯಿಂದ ಭಾವನೆ ಗೈವುದು ॥ (35)

ನೆರದ ಪಿತೃಗಳನೋಡಿ ಪೂರ್ವದೊಳ್ಗಯನೆಂದ ।
ಪರಿಯ ಪೇಳುವೆನು ಪೂವೆಸರಾಂತು ಬಾಧಿಸುವ ।
ನಿರಯದಿಂ ಕಡೆಸಾರ್ಚೆ ಕಾಯ್ವನವ ಸತ್ಪುತ್ರನದರಿಂದ ಪಿತೃಗಳೆಲ್ಲ ॥
ಸುರರ ಪ್ರಾರ್ಥನೆಗೈದು ಬಹಳ ಪುತ್ರರಪಡೆಯ ।
ಲರಿತವರೊಳೋರ್ವ ಕ್ರತುವಂಮಾಳ್ಪ ಮತ್ತೋರ್ವ ।
ನಿರದೆ ಕನ್ಯಾದಾನ ಗೈವ ನೋರ್ವಂ ದಯದೊಳರ್ಚಿಸುವ ಭೂದಿವಿಜರ ॥(36)

ಈ ಸಾಧುಕೃತ್ಯದಿಂ ನಿರಯಂಗಳಂ ಪೋಗಿ ।
ಲೇಸಾದಪುದೆನುತ್ತಲರಿತು ಪಿತೃಗಳು ಪುತ್ರ ।
ರಾಶೆಗೈದಪರೆಂಬ ಧರ್ಮ ಸಂಗತಿಯನಂ ಕೇಳ್ದರಿಯದಾದೆ ತರಳ ॥
ಬೇಸರಂಗೊಳಸದಿರುವನ್ನಪೇಳ್ದುದ ಕೇಳಿ ।
ಭೂಸುರರಪ್ರತ್ಯಬ್ದದೊಳ್ ತೋಷಣಂಗೈದು ।
ಭಾಸುರದ ಭಕ್ತಿಯಿಂ ಗಯದೊಳನ್ನವನೀಯಲದು ಪುತ್ರಕೃತ್ಯವನಘ ॥ (37)

ನುಡಿಯ ನನೃತವ ನಮ್ಮ ಪೊಡವಿಪತಿ ಸತ್ಪುರುಷ ।
ನುಡಿದೆರಡನಾಡವಂದದಿ ಸತ್ಯಮಂ ಪೊರೆದು ।
ತುಡುಕಿದಂ ಪಾಕಶಾಸನನ ಪಟ್ಟವಣೆಯಂ ಮಿತ್ರಕುಲಮಾಳಿಯೆನಿಸಿ ॥
ವ್ಯಡನಮಶ್ಶಿವ ಬೊಪ್ಪನಿತ್ತನುಡಿಗಂತಪ್ಪ ।
ಲಡಸದಿಹುದೇಕಾಲ ಸೂತ್ರ ಪಿತೃಗಳ ದುಃಖ ।
ದೆಡೆಗಿಡುವತನಯ ಸಂಜನಿಸಿವರದೇಂ ಪುಟ್ಟದಿರಲುಮೇಂ ನಪ್ಪಜಗದಿ ॥ (38)

ಮದುವೆಯಂ ಮಾಳ್ಪಲ್ಲಿ ನಿಮ್ಮಮಾತಾಮಹಂ ।
ಬಾಧಸಮಾಡದಿ ಪೇಳ್ದ ಸುತೆರಾಜ್ಯ ಶುಲ್ಕಳಿಂ ।
ದಿದನರಿದುಕೊಳ್ಳೆನಲ್ಬೊಪ್ಪ ಸಮ್ಮತದಿಂವಲೊಪ್ಪಿಮಾತಿತ್ತನೊಲಿದ ॥
ಸುದತಿಕೇಕಯತನುಜೆ ದೇವಾಸುರರುನೆರದ ।
ಕದನ ದೊಳುಪ್ರೀತಿಯಂ ಘಳಿಸಿವರವಂ ಪಡೆದ ।
ಳದನು ಯಾಚನೆಗೈದಳಂದಿನವಸರದೊಳದ ನೊಪ್ಪಿಪಿತ ದಯೆಗೈದನು ॥ (39)

ಬೊಪ್ಪನಾಡಿದ ನುಡಿಯ ಸಫಲಮೆಂದೆನಿಸಿನಿತ್ತು ।
ತಪ್ಪದಂದದಿ ಪೊರೆವುದಿದು ಪುತ್ರಕೃತ್ಯ ಮೆಂ ।
ದಪ್ಪ ಶತ್ರುಘ್ನ ನೊಡೆವೆರದು ಜಗತೀತಳವ ಪಾಲಿಸುತಲಿರುತಿರ್ಪುದು ॥
ಇಪ್ಪೆಸವು (ಸೌ) ಮಿತ್ರಿಸಹ ದಂಡಕಾವಿಪಿನದೊಳ ।
ಗಿಪ್ಪ ಋಷಿಗಳ ಭಯವನಪಹರಿಸಿ ನೇಮವಂ ।
ಬಪ್ಪನ್ನ ಮಿದುಸತ್ಯ ಮೆಗುಳೆಂದಿಗುಂ ಮಿಥ್ಯವಾಗದ್ದೆ ಸಾಧುಸುತ್ತ್ಯ ॥ (40)

ಶುದ್ಧಾಂತರಂಗದಿಂ ನೆರೆದಿರ್ಪ ಪರಿಜನರ।
ಶುದ್ಧಾಂತರವ ಪಿರಿಯರೊಡಗೊಂಡು ನಡೆದವಿತ್ತ।
ಶ್ರದ್ಧಾನುಚರಣೆಯಿಂ ಪಿತೃವಾಕ್ಯಮಂ ಸಲಿಸು ನೃಪನೀತಿಯೆಂತು ಜವದಿ॥
ಉದ್ಧತಾಲೋಚನೆಗಳುಳಿದು ಸಜ್ಜನಸಾಧು।
ಬುದ್ಧಿಯನುಮತವಿಡಿದು ನಗರಿಗುಂ ನಡೆಯೆ ಸ।
ನ್ನದ್ಧನಾಗೆಂದೊರೆವುತಿರಲು ಜಾಬಾಲಿಮುನಿ ನುಡಿದ ಧರ್ಮಾಹಿತದಲಿ॥ (41)

ತಂದೆ ತಾಯಿ ಗುರು ತನುಜರನುಜ ಬಂಧುಗಳುಹಿತ।
ರೆಂದು ತಾನವರ ನನುಸರಣೆ ಗೈವುದು ವ್ಯರ್ಥ।
ಚೆಂದಿರನನೊಬಗು ಕಾನನದಿ ತೋರಿದ ತೆರದೊಲವಾಲನಿಷ್ಫಲ ಮತಿಯಿದು॥
ಬಂದಪನುತಾನೋರ್ವ ಗಮಿಸುವೆಡೆಯೊಳಗೋರ್ವ।
ಹಿಂದುಮುಂದಾರವನಿಗಿಲ್ಲ ಕೃತಕರ್ಮಂಗ।
ಳಂದ ಯೆಡೆಯಾಡುತಿಹ ಜಂತುವಲ್ಲದ ದಾರುದಾರಿಂಗೆ ಹಿತವರಹರು॥ (42)

ನೆವದಲೊಂದೆಡೆಯು ಗ್ರಾಮಾಂತರದಿ ಸಂಕ್ರಾಂತ।
ವಿವಿಧಜನರುಲ್ಲಾಸ ಸಲ್ಲಾಪ ಕೇಳಸಿ ನಿಸಿ।
ಯವನಿಕಾರೋಧಮಂ ಕಳದೈದುವರು ಮತ್ತದೋರ್ವರೋರ್ವರನೋಡದೆ॥
ಅವರಂತೆ ಪಿತೃಮಾತೃ ಭ್ರಾತೃ ಪುತ್ರಾದಿಗಳು।
ನೆವನೆವದೊಳೈತಂದು ತಂದರ್ಥಗಳನುಂಡು।
ತವಕದಿಂದೈದುವವರಲ್ಲದಾರಿಂಗಾರು ಹಿತವಚಿಂತಿಸುವರೊಲಿದು॥ (43)

ಜಂತುಜನಿಸಲ್ ಬೀಜ ಮಾತ್ರಕಾರಣ ಪಿತಂ।
ಕೊಂತಿರುಧಿರದಿ ಶುಕ್ಲಯುತು ದಿನದೊಳುದರದೊಳ।
ಗಾಂತ ಪಳುಮಾತೆಯೀದೃಶ ಕಾರಣಂಗಳೇತನುವಿದಖಿತಂ ನೋಳ್ಪರೇ॥
ಪಿಂತಕೈದಿದ ಜನಕನಾರು ತಾನಾರಾತ।
ನೆಂತಿರ್ಪನೆಂಬುದಂ ತಿಳಿದರಾರೀಜಗದಿ।
ಭ್ರಾಂತರರಿಯದೆ ತೊಳಲಿ ಬಳಲುತಿಹರಿದರೊಳನ್ನೇನುಂಟು ಬರಿಯಗಂಟು॥ (44)

ನಷ್ಟಜನರಂ ಕುರಿತು ತೋಷಣಂಗೈಯೆ ಮಗು।
ಳಷ್ಟಕಂ ಪಿತೃದೇವತೆಗಳೆಂದು ಶ್ರದ್ಧೆಯಿಂ।
ವೃಷ್ಟಾನ್ನಗಳ ನಿಡುವರಿವರುಣಲ್ಕತ್ತೃವರಿಗಹುದೆ ಸಂತೋಷ ಬಳಕ॥
ಕಷ್ಟದಿಂ ಫಲವೇನು ಪೋದವರಿಗೀವನ್ನ।
ವಿಷ್ಟಮಪ್ಪುದೆ ನರಕಸಗ್ಗಮೆರಡರೊಳಲ್ಲಿ।
ದಷ್ಟ ಮಾಗಿಹುದಕಂಡಿರ್ಪರಾರ್ ಲೋಕದೊಳು ಚಿತ್ತಚಾಂಚಲ್ಯಮಲ್ತೆ॥ (45)

ತಿಳಿದು ಯುಕ್ತ್ಯನುಭವಗಳಲತಿ ಸಿದರ್ಥಮಂ।
ಬಳಸಲನುಮಾನದಿಂ ದಿಟಮಹುದೆ ಜೀವದೊಳ।
ಗಿಳೆಯೊಳಪ್ಪನ್ನೆಗಂ ನೋಡಿದುದು ಮಾಡಿದುದು ಕೊಡುಕೊಡಿದುದೆಲ್ಲವು॥
ಬೆಳಗುವದು ಸಂತಸವ ಪೋದಬಳಿಕೇನುಂಟು।
ತಿಳಿಯದಜ್ಞರು ಶಾಸ್ತ್ರಗಂಹರದೊಳೆಂ ಸಿಲ್ಕಿ।
ತೊಳಲುವರು ಕುರುಡರಂದದಿ ಸಿಲುಕದಿಹಫಲಕೆ ಕೈಸಾರ್ಚಿ ಮರುಗುವಂತೆ॥ (46)

ಶಾಂತ ಸದ್ಗುಣಶೀಲ ಸತ್ಯವಂತರುಗಳಂ ।
ಸಂತಾಪ ಗೊಳುತಿರಲ್ ನೋಡಲಮ್ಮದೆ ತಿಳುಪು ।
ವಂತಿದುಚಿತಂ ಮಹಾರಾಜಸುತನತಿ ಭಕ್ತಿಯಿಂದ ಪ್ರಾರ್ಥನೆಗೈವುತ ।
ಮುಂತೆ ದೈನ್ಯಂ ಬಡುವರಂತಃಪುರಾಂಗನಾ ।
ಸಂತಾನ ಖೇದಗೊಳುತಿಹರಖಿಲ ಶಮಧನರ ।
ಸಂತೆಯನುಸರಿಸುತಿದೆ ಸರ್ವಜನಹೃತ್ತಾಪ ಘೋಪಂತೆನೀಂ ದಯದೊಳು ॥ (47)
ಪತಿಕರಿಸು ದೊರೆತನವ ಸರ್ವಲೋಕರ ಮನವ ।
ನತುಲಹರ್ಷಂಗೊಳಿಸು ಸಂತಸದಿ ಕೃಪೆವೆರಸು ।
ಸತತ ಪ್ರಾಣಿಗಳ ಹಿತಮೆನಿಸಿದಾತನೆ ದೈವವೆಂಬುದಂ ಮನದೊಳರಿಸು ।
ಕ್ಷಿತಿಯೊಳಗೆ ಭೂತಸಂತಸಗೊಳಪುದರ ನೋಡಿ ।
ಶಿತಿಕಂಠಚರಣ ಸೇವನೆಯಹುದು ಮತ್ತಿದ ।
ಕ್ಕತಿಶಯತಪಸ್ಸಿಲ್ಲವೆನುತೊರೆವ ಸಾಧುಗಳ ನುಡಿಗಳಂ ಸಾಧುವೆನಿಸು ॥ (48)
ಕೇಳು ರಘುವರ ತಪೋಧನರಾತ್ರು ಲೋಕಹಿತ ।
ಮೇಳವಿಸಲೆಂದಿನಿತ ಬಿತ್ತರಿಸಿ ಪೇಳ್ದುದಂ ।
ತಾಳ ಮನದೊಳು ಸಕಲಲೋಕ ಸಂತಸ ಗೊಂಬೊಲನಿಮಿಷಮೆಚ್ಚುವಂತೆ ॥
ಹೇಳಯನ್ವಯವರ್ಜವಂತೆ ನೃಪನೀತಿಗಳ್ ।
ಜಾಳಾಗದಂತೆ ಪೃಥ್ವೀಭರವನುಂ ತಾಳ್ದು ।
ಭಾಳನೇತ್ರನಸಖನ ತೆರದೊಳಖಿಳರ ಪೊರೆವ ಸುಖದಿಂದಲಿಹುದುಲೇಸು ॥ (49)
ಆ ಮಹಾ ಮೌನಿಯಿಾ ತೆರದಿ ಬೋಧಿಸೆ ಬಾಧ ।
ಸ್ತೋಮ ಮನವನುರ್ಕಡಸೆ ಭರತ ಪ್ರಿಯದೊಳ್ಬರಸೆ ।
ಕಾಮಮೆನೆ ನೆರೆದ ಪ್ರಜೆಪರಿವಾರವೆಲ್ಲರುಂ ತಮತಮಗೆ ಭಾಷೆಗೊಳಸೆ ॥
ರಾಮಪುರದರಸ ನಿಟ್ಟಿಸುತಲಾ ಮುನಿವಂಶ ।
ಸೋಮ ಜಾಬಾಲಿಗಂ ನಮಿಸಿ ಮಾನವನಂತೆ ।
ಪ್ರೇಮದಿಂ ಮಾರುತ್ತರವನೀಯಲುಜ್ಜುಗಂಗೊಂಡನೇವೇಂಬೆನಗಜೆ ॥ (50)

(ಸಂಧಿ 33 ಪದ 1472)

ಮೂವತ್ತನಾಲ್ಕನೆಯ ಸಂಧಿ

ಸೂಚನೆ ॥ ಗುರುವಸಿಷ್ಟರ ನೇಮದಿಂದ ಕೈಕಾತ್ರಸುಯ ।
ಹರುಷಮಾನಸನಾಗಿ ಪಾದುಕೆಗಳನ್ನು ನಿಜ ।
ಪರಿಮೌಳಿ ಭೂಷಣಾಯತ ಕಲಸೆ ಗೈದೈದಿ ಪುಟವೇದನಂ ಪೊಕ್ಕನು ॥
ಹಿಮಗಿರಿತನೂಜೆಕೇಳ್ ಜಾಬಾಲಿಯಾಡಿದತಿ ।
ಮಮತಾಸುವಾಣಿಗಳ ಮಗುಳುತ್ತರವನಿತ್ತು ।
ಸುಮನಸಾಗ್ರಣಿ ರಾಮನೇನೆಂಬೆ ತನುವಾಂತ ಧರ್ಮವಹುದೆಂಬಂದದಿ ।
ವಿಮಲಮತಿ ದುಷ್ಕಾರ್ಯಮಂ ಕಾರ್ಯರೂಪೆನಿಸಿ ।
ಸಮಲಪಾತಕವನಂ ಪುಣ್ಯಮೆನಿಸುತಮೆನ್ನ ।
ಮಮತೆಯಿಂ ಪೇಳ್ದನುಡಿ ಚಿತ್ರತರಮಾಯ್ತುರಘ ಪೇಳ್ವುದೇನುತ್ತರವನು । (1)

ಹೆಂಬೇಡಿಯುಂ ಕೂರ ಹೇಸಿಕೆಯು ಶೀಲಕುಭ।
ಮೆಂಬಂತಲಕ್ಷಣ ಮದೆಬಂಂತೆ ಢೆಂಬಮೋಹಕವ। ?
ಮೋಹಕವಾಗಿ ತೋರುವಂತೊರೆವ ನುಡಿಗಳ ನಿಚ್ಚಸಿ ॥
ಬೆಂಬಿಡದೆ ಕ್ರೂರಸಕ್ರಾ ಕುಲವ ಬೇರ್ಮಾಡುವ್ರು।
ಗಂಭೀರದಿಂದ ಕಾಣ್ಬುಡುವಂತೆ ತೋರುವದು।
ಬಿಂಬದಂತದರ ಸಾಧುಗಳೆಡೆಯುಲಿದ ನುಡಿಯುಲಹುದೆ ತಾಪಸವರೇಣ್ಯ ॥ (2)
ವಿಧಿವಿವರ್ಜಿತನಾಗಿ ಸ್ವಚ್ಛಂದವಲಿ ನಡೆದು।
ಬೆದರಿಸಿಯೆ ಸತ್ಯಮಂಬೆರದ ಧರ್ಮಸ್ಥಿತಿಯು।
ಬದುಕುವೆನದೇಸುದಿನ ಮತ್ತಾರ ಗತಿಯನುಂ ಪಡೆವೆಸಮ ಹೃದಯುರೆಡೆಯು ॥
ಪದವ ಪಡೆವೆನದೆಂತು ಧರ್ಮಧೂಷಕನೆಂದು।
ಬೆದರದಿಹುದೇಲೋಕ ಮಗುಳಾರು ಬಂದೆನ್ನ।
ವದನವಂ ನೋಡುವರು ನೃಪನೀತಿಯುಂ ಕಂಡು ಪ್ರಜೆಗಳಾರನುಸರಿಪರು ॥ (3)
ಸುರರು ಭೂಸುರರು ಋಷಿವರರು ಸಂತೋಷಿಸುವ।
ರುರುತರ ಸ್ವರ್ಗಸುಖಮೈಶ್ವರ್ಯ ಬೀಜವಿಾ।
ಧರಣಿಯೆ ಯಶಸ್ಕರಂ ದೀರ್ಘಾಯುಷವನೀವದೀ ಸತ್ಯಮೆಂದೆನುತಲಿ ॥
ನಿರುತಹುತವಹ ತುಷ್ಟಿ ಜಪತಪಂಗಳು ದಾನ।
ಗುರುಪವಿತ್ರತೆ ಸತ್ಯಮೆನುತ ವೇದಂಗಳರ ॥
ದೊರೆವದಂ ಧಿಕ್ಕರಿಸಲೆಂತಹುದು ಪೂರ್ವನುಮತವಲಂಘ್ಯಂ ಮುನಿವರ ॥ (4)
ಪೊರೆವಕುಲವನೊರ್ವ ನಿರಯಕೆಳದಪನೊರ್ವ।
ವರಿಪಸ್ವರ್ಗವನೊರ್ವ ಕರುಣ ಗೈದಪನೊರ್ವ।
ನರಸುಗಳನೇಕ ಮಿಾಪರಿಯುತೋರುವರ್ಪೆನೆ ಸತ್ಯಪರಮೆಂದರಿಯುದೆ ॥
ಭರತನುಪಚರಣೆಯಿಂ ಮಾತೆಯರ ನುಡಿಗಳಿಂ।
ದೊರೆವ ಬಂಧುಸುಮಿತ್ರರುಗಳ ಮೃದುವಾಣಿಯಿಂ।
ಬೆರದಾನದೆಂತು ಪರಗತಿಯು ಸೇರುವ ಸತ್ಯದಿರವ ಪಳದವೆನು ಜೀಯ ॥ (5)
ಪೊಡವಿಪತಿಗಿದಿರಿನಲಿ ಪಂಡಿತರ ಸಮ್ಮುಖದಿ।
ತುಡುಕಿದಪ್ರತಿಜ್ಞೆಯುಂ ಪಳದು ಸೌಖ್ಯಮುಬಯುಸಿ।
ನುಡಿದೆರಡನಾಡುವನೆ ರಾಮ ಮೋಹಾದಿಗಳ ವಂಚನೆಗಳೊಡಬಡುವನೆ ॥
ಪಿಡಿದವಾತುರದಿ ಪಿತೃದೇವತಾದಿಗಳಿಂಗೆ।
ಕೊಡುವ ಸಂತಸವ ಜನವಂನಿತ್ತು ಸದ್ಗತಿಯು।
ಬಿಡುವ ಸುರಧೇನು ಸತ್ಯವನು ಪಳದಪರುಂಟೆ ಪಳೆವಾತುಗಳನಿಳಯನೆ। (6)
ಮನದೊಳೊಂದಿಟ್ಟು ಮಾತಿನೊಳೊಂದ ತೋರುತ್ತ।
ತನುವಿನೊಳಗೊಂದೆಸಗುತನೃತಕರ ಪಾಪಗಳ।
ಮನೆಯೆನಿಪ ದುರ್ಮಾರ್ಗಕ್ಷತ್ರಧರ್ಮವ ಪಿಡಿದು ವಿಷಯುಸುಖದನುಭವಗಳಂ ॥
ಅನುಸರಿಸಿ ಜನಕನಾಡಿದ ನುಡಿಯು ಸತ್ಯಮೆಂ।
ದೆನಿಸಿ ದುರ್ಯಶವಾಂತು ಪರಗತಿಯು ನೀಗುವಿಂ।
ದಿನಿಸೆನಗೆ ಸಮನಿಪುದೆ ಸತ್ಯಪಂಥಾನವಂ ಮಿಾರಬಲ್ಲೆನೆ ಮುನಿಪರ ॥ (7)

ಅತಿಥಿಪೂಜೆಯು ದ್ವಿಜೋತ್ತಮ ಪಾದಸೇವೆಯುಂ ।
ಪ್ರತಿಭೂತದನುಕಂಪ ಸತ್ಯಧರ್ಮಂಗಳಂ ।
ವಿತತ ವಿಕ್ರಮಗುರುಜನಾನುಸೇವನ ಸ್ನಾನದಾನಪೂಜಾವಿಧಿಗಳು ॥
ಸತ್ಪುರುಷರನುಸರಿಪರಿಂದುವೆ ಸೋಪಾನ ಸ ।
ದ್ಗತಿಗೆನುತ ನಳನಹುಷ ಭರತ ಸಗರಾದಿಗಳ ।
ಮತವ ಧಿಕ್ಕರಿಸಲಳವಹುದೆ ಬುದ್ಧಾಚರಣೆ ಭವಬಂಧಕರಣೆಯಹುದೆ ॥ (8)
ಭರತಖಂಡದೊಳುದಿಸಿ ಬಹುಧರ್ಮಗಳಮಾಡಿ ।
ತುರಗಮೇಧಗಳೆಸಗಿ ಶತಮುಖ್ಯಸಗ್ಗಕುಂ ।
ದೊರೆಯಾದನಖಿಲ ಭೂಸುರರೆಲ್ಲರಿದನರಿತು ಸಾಧುಸೇವನೆಗಳಂದೆ ॥
ಪರಿಪರಿಯಸತ್ಕರ್ಮಗಳಮಾಡಿ ಕ್ರತುಗಳಂ ।
ಮರುತ್ತ ಶಿಖಿ ಮುಂತಾದ ದೇವರ್ಕಳಂ ತುಷ್ಟಿ ।
ಕರಗೊಳಿಸಿ ಸುಖದಲಿಹುದಂ ನೋಡುತ ಪ್ರಲಾಪಗೈವುದೇಂ ಮೇಧೆಜೀಯ ॥ (9)
ತಾತನಾಡಿದ ನುಡಿಯನನುಸರಿಸಿ ಭೃಗುವರಂ ।
ಮಾತೆಯಂ ತರಿದಿಟ್ಟ ಧರ್ಮಜ್ಞರೆಲ್ಲರೀ ।
ನೀತಿಯುಂ ತಿಳಿದು ಪಿತೃವಾಕ್ಯ ಪಾಲನೆಗೈದು ಸದ್ಗತಿಗಳಂ ಪಡೆವರು ॥
ಪ್ರೀತಿಯಿಂದಯ್ಯ ಪಾಲಿಸಿದ ವಾಣಿಯು ತಲೆಯೊ ।
ಳಾತು ಬುಧಜನರೆಡೆಯುಲಿಂದು ಸುಖದಿಚ್ಛೆಗಂ ।
ನೋತು ನಡೆದಡದಾರುಮೆಚ್ಚುವರು ಪರಸುಖಗಳೆಂತಪ್ಪುದೈ ತಪ್ಪದೆ ॥ (10)
ಬುದ್ಧಾಚರಣೆವಿಡಿದು ಭೌತಿಕಸುಖಂಗಳಲಿ ।
ಬದ್ಧಾಚರಣೆಗೈದು ಬಹುದೋಷಗಳತಳೆದ ।
ಬದ್ಧನುಡಿಗಳನಚ್ಚಿ ಧರ್ಮದಾರಿಯಚುಟ್ಚಿ ನಡೆದವನೆ ಸಿರಿಯುಮೆಚ್ಚ ॥
ಶುದ್ಧಾಂತರಂಗದಿಂ ಸುಜನರೊಪ್ಪಲ್ ಧರ್ಮ ।
ಬದ್ಧಕಂಕಣನಾಗಿ ಮದ್ವಂಶ ಸಂಭವನ ।
ನುದ್ಧರಿಸದಳಮನಸಮಾಡ್ದರಾರೊಪ್ಪುವರು ದುಷ್ಕೀರ್ತಿಗೆಸೆವತ್ತವರು ॥ (11)
ಎನುತಲೀಪರಿಯ ಕ್ರೋಧದೊಳೊರೆದ ವಾಣಿಯಂ ।
ಮುನಿಪತಿವಸಿಷ್ಟ ತಿಳದಿಂತೆಂದ ಪ್ರೇಮದಿಂ ।
ಜನಪಕೇಳ್ ಜಾಬಾಲಿ ಸರ್ವಜ್ಞನಿಧಿ ಸಕಲರಾಟಕೋಟಲೆಗಳನ್ನು ॥
ನೆನಹುಮಾತ್ರದೊಳರಿವ ಸಾದಡಂ ಪ್ರೀತಿಯಿಂ ।
ಮನೆಗೆ ಕರದೈದೆಲ್ಲರಂ ತೋಷಗೊಳಿಸಲೆಂ ।
ದನುನಯದಿ ಪೇಳ್ದನಲ್ಲದೆ ದುರಾಗತಮಲ್ಲ ಪೇಳ್ದಪೆಂ ಕೇಳುಸೊಲ್ಲ ॥ (12)
ಮೊದಲು ಜಲಮಯಮಾಗಿ ತೋರುತಿರ್ದುದು ಬ್ರಹ್ಮ ।
ನುದಯಮಾಗಲ್ಕ್ರೋಢರೂಪಿಂದ ಭೂಮಿಯಂ ।
ಮಧುಸೂದನಂಗೈದ ನಿಖಿಲದೇವರ್ಕಳಂ ಚತುರಮುಖಗಿಕ್ಕೆಯಾಗಿ ॥
ಬಿದಿಯಿಂ ಮರೀಚಿ ಕಶ್ಯಪನಾದಯಾಪರ ನಿ ।
ಗುದಿಸಿದ ವಿವಸ್ವಾನ್ಮಹೋತ್ಸಾಹಿಯಾತನಿಗೆ ।
ಸದಯಮನು ವಿಷ್ವಾಕುವಾತನಿಂದಂ ಕುಕ್ಷಿ ಯುವನಿಂ ವಿಕುಕ್ಷಿನೃಪತಿ ॥ (13)

ಸುರನಿಕಾಶಂ ಬಾಣನವನಿಂದಲನರಣ್ಯ ।
ಧುರವಿಜಯ ಪೃಥು ವವನತನಯಂ ತ್ರಿಶಂಕು ವು ।
ತ್ತ್ರರಿನಿಷೂದನ ದುಂಧುಮಾರ ಯುವನಾಶ್ವ ಮತ್ತಾತ್ತನಿಂ ಮಾಂಧಾತನು ।
ತರುಣಂ ಸುಸಂಧಿ ಯಾತನಿಗೆ ದೈವಸಂಧಿಯುಂ ।
ಭರತ ನಾತಂಗ ಸಿತ ಸಗರನಸಮಂಜಸಂ ।
ತರುಣನಾತನಿಗಂಶುಮಂತ ಮತ್ತವನಣುಗನಾದಂ ದಿಳೀಪನೃಪತಿ ॥ (14)
ಪಡೆದಂ ಭಗೀರಥನನವನಿಂದೆ ಕಾಕುಸ್ಥ ।
ಗೊಡನೆ ರಘುಕಲ್ಮಾಷಪಾದ ಶಂಖಣನವನ ।
ಪೊಡೆಯೊಳ್ಗುದಿಸಿದ ನಗ್ನಿವರ್ಣ ಸಿಂಗ್ರಗಪ್ರಶುಶ್ರುಕನಂಬರೀಷನಹುಷ ॥
ಪೊಡವಿಪನ ಪುತ್ರನಾಭಾಗನಿಂದುದಯಿಸಿದ ।
ನುಡುಪನಂದದೊಳಜಂಗಾದ ದಶರಥ ವಿಪುಲ ।
ದೃಢವಿಕ್ರಮಂಗೆ ನೀಂತನಯನಿನ್ನಯ ವಂಶದರಸುಗಳ ಧರ್ಮಗಳನು ॥ (15)
ತಿಳಿದು ನಡಸಲ್ವೇಳ್ಕುಮೆನುತಲುಸುರುವೆ ನಿಮ್ಮ ।
ಕುಲಪರಂಪರೆಯರಸಗಳು ಜ್ಯೇಷ್ಠಪುತ್ರರನು ।
ಪಾಳಿಗೆ ಪಾಲಕರೆನಿಪರಿದು ತಥ್ಯವನ್ವಯದ ಧರ್ಮವಂ ನತಿಗಳೆಯದೆ ॥
ತೊಳಪಸಿರಿಸಾಮ್ರಾಜ್ಯದಾಧಿಪತ್ಯವನು ಕೈ ।
ಕೊಳುತ ಧರ್ಮಾಭಿವರ್ಧನೆಗೈದು ಜಸದಿಂದ ।
ಬೆಳಗುಗೊಳಸೈ ಲೋಕಮೂಗನೆಂದೆಚ್ಚರಿಸಿ ನಗುತ ಮಗುಳಂತೆಂದನು ॥ (16)
ಪುರುಷನಿಗೆ ಗುರುಗಳುಂ ಮೂವರಲೆ ಲೋಕದೊಳು ।
ಪರಮ ಧರ್ಮಜ್ಞಪಿತ ಪೆತ್ತಾಕೆ ಧರ್ಮಗಳ ।
ನೊರೆವ ನಾಚಾರ್ಯರೀ ಮೂವರುಂ ಸಮಮುತ್ತಿ ತಾತಸಗ್ಗಕೈದಲು ॥
ವರಸಾಧ್ವಿಮಾತೆಗುರುವಾವೀರ್ವರುಂ ಪೇಳ್ವ ।
ಪರಿಯನಂಗೀಕರಿಸಿ ನಡೆಸುವದು ಸಾಧುಗಳ ।
ಚರಿತೆಗೊಣಯಮಹುದೆ ನೆರೆದ ವಿದ್ವಜ್ಜನರ ವಾಣಿಯೀಂ ವಿಫಲಮಹುದೆ ॥ (17)
ಶ್ರುತಿಯಿಂದುದಿತವಾಗಿ ವಿಹಿತಾಚರಣೆಯಾಗೆ ।
ಕ್ಷಿತಿಯಜನಗೊಪ್ಪದುದ ನೆಸಗಲಪ್ಪುದೆ ಸಾಧು ।
ಮತಿಯಿಂದ ಪಿತನಿತ್ತ ರಾಜ್ಯವಂ ಪ್ರೀತಿಯಿಂದೊಪ್ಪಿಸುವ ಭರತನೊಲಿದು ॥
ಸತ್ಪುರುಷರುಗಳ ಮಾತೆಯರನೆರದೀಜನರ ।
ನತ್ತಿಶಯದಿ ಸಂತಸಂಗೊಳಪುದಿದು ಸದ್ಧರ್ಮ ।
ಕತಿಕರವಿದಲ್ಲೆನುತ ಗುರುಬೆಸಸೆ ರಘುನಾಥ ನಸುನಗುತಲಿಂತೆಂದನು ॥ (18)
ಜೀಯದಯದಿಂದೊರೆದ ವಾಣಿಯತುಲಿತಸುಖೋ ।
ಪಾಯಕರವಾಗಿದೆಕೊ, ಸರ್ವಜನರೊಳಗೆಮ್ಮ ।
ತಾಯಮಾತಿಂಗೊಲಿದು ಕೊಟ್ಟನುಡಿಯ ಸಲಿಪೆನೆಂದಾನೊಡಂಬಟ್ಟೆನು ॥
ಆಯಮಾಗಲಿ ಸುಖವಿರಹಿತವಾಗಲ್ಕಿದಕೆ ।
ಪಾಯಮಂ ಚಿಂತಿಸಿದರೊದಗುವದು ದುರ್ಯಶಂ ।
ಕಾಯಸುಖಕೆಳಸುವರೆ ಕಾರ್ಯಸಾಧಕಧರ್ಮಮಂಗಳಪ ಸಾಧುಜನರು ॥ (19)

ತನುವನಿರ್ಮಿಸಿ ಪೋಷಣಂಗೈದ ಸ್ವಾತಂತ್ರ್ಯ ।
ದನುಪಮಂತ ತಾತ ವಿಕ್ರಮಗೈದಡಾವಮಾತಿ ।
ಗನುಪಚಿಂತಿಸಲಹುದೆ ಪೇಳ್ದಂತೆ ಕೇಳ್ವುದಿದು ಪುತ್ರ ಮತಜನ ಸಮ್ಮತ ॥
ಘನತರದ ಕಷ್ಟಗೊಳಲೇಂಫಲಂ ಸಾಧುಸ ।
ಜ್ಜನರ ಮತವಂಪಿಡಿದು ಪಟ್ಟಣದೊಳರಸೆನಿಪು ।
ದನು ತೊರೆದ ರಘುವರನ ನುಡಿಯನಾಲಿಸಿ ಭರತ ಪೇಳದಂ ಮಂತ್ರಿಯೊಡನೆ
ತಾತನನುಮತಿವಿಡಿದು ನಡಪುದಾರ್ಯಗೆಸೇವು । [(20)
ಭ್ರಾತಾಂಘ್ರಿಪಂಕಜವನನುಸರಿಪುದೆನ್ನಮತ ।
ನೀತಳುವದೈದಿ ಸ್ಥಂಡಿಲದೇಶದೊಳಗೆಸಗು ಜವದಿ ದರ್ಭಾಸನವನು ॥
ಪ್ರೀತಿಯಿಂ ಪ್ರಾಯೋಪವೇಶನಂ ಗೈದು ಸಂ ।
ಜಾತಕೃಪೆಯಿಂದಾರ್ಯ ನಿಟ್ಟಿಪನ್ನೆಗವಿರ್ಪೆ ।
ಭೂತಳದೊಳೆಲ್ಲರುಂ ನೋಡಲೆನುತಂ ಭರತ ಪೇಳಿ ಗಮಿಸುತ್ತಮಿರಲು ॥ (21)
ಭರತನಾಡಿದ ನುಡಿಗೆ ರಘುವರಂ ಬೆರಗಾಗಿ ।
ಗುರುವಿಗೇಕಾಂತದೊಳ್ ಸೂಚಿಸಲ್ಕೈತಂದು ।
ತರುಣಬಾರೆಂದು ಕರವಿಡಿದು ಗೋಪ್ಯಾರ್ಥವಂ ಬಿತ್ತರಿಸಲನುಗೈದನು ॥
ಧರೆಯಭಾರವನಿಳುಪೆ ಸರಸಿಜಾಸನಮತದಿ ।
ನರನೆನಿಸಿ ದಂಡಕಾವನದ ದೈತ್ಯರ ತರಿದು ।
ದುರುಳ ದಶಕಂಧರನ ಸಂಹರಿಸಲೈದುವಂ ರಘುನಾಥ ಕೇಳ್ಬಾಲಕ ॥ (22)
ಯೋಗೀಶ್ವರಂ ವಿಷ್ಣುವೀರಾಮನಾತನುರು ।
ಯೋಗಮಾಯೆಯೆ ಸೀತೆ ಭೋಗೀಶಲಕ್ಷ್ಮಣಂ ।
ರಾಗಮಂ ಸಲಿಸಲಮರೇಂದ್ರಾದಿಗಳಗಭಯಮಿತ್ತು ಬಂದಿರ್ಪರನಘ ॥
ಈಗುಪಿತದರ್ಥಮಂ ಪೇಳಲಸದಳ ಮನೋ ।
ರೋಗಮಂ ಪರಿಹರಿಸಿ ನಿಶ್ಚಿಂತನಾಗಿ ನೀಂ ।
ಬೇಗಲಪ್ಪಣೆವಿಡಿದು ತೆರಳೆನುತ್ತತಿಳುಪಿ ಗುರುವರನೈದಲಿತ್ತ ಭರತಂ ॥ (23)
ಪರಬೊಮ್ಮನೀರಾಮಚಂದ್ರನೆಂದರಿತು ಬಂ ।
ಧುರಶೋಕಮಂ ಗಲಲಹುದೆನುತ ಚಿಂತಿಸುತಿರ್ಪ ।
ಭರತನಂ ತಿಳುಪಲಿಚ್ಛೈಸಿ ರಘುನಾಯಕಂ ವಿನಯದಿಂದಿಂತೆಂದನು ॥
ದೊರೆಗಳೆಸಗುವ ವ್ರತಮಿದಲ್ಲಮತಿದಾರುಣಂ ।
ಬರಿದೆ ಬಳಲಲದೇನು ಬಿಡು ದುರಾಗ್ರಹವ ಶುಭೆ ।
ಕರಜಲಸ್ಪರ್ಶನಂ ಗೈದುಸುಖಿಯಾಗೆನುತ ನೇಮಿಸಲ್ಕೇಳಜವದಿ ॥ (24)
ತೊಳೆದು ಕರತಳಗಳಂ ಕೈಮುಗಿದು ನಾಲ್ದೆಸೆಗೆ ।
ನಳನಪತ್ರಾಕ್ಷನಂ ನಿಟ್ಟಿಸುತಲಿಂತೆಂದ ।
ನಿಳೆಯರಸ ಗಿತ್ತಭಾಷೆಯ ಸಲಿಸೆ ಪದಿನಾಲ್ಕುವರುಷಮೀವನದೇಶದಿ ॥
ನಿಳಯಗೈದಾನಿರ್ಪೆ ನೀವೈದಿಪಟ್ಟಣದಿ ।
ಪೊಳಪಗದ್ದುಗೆಯಲ್ಲಿ ಮಂಡಿಸಲ್ವೇಳ್ಪುದೆನೆ ।
ತಿಳಿದು ಭರತನಮತವ ಶ್ರೀರಾಮಚಂದ್ರಮಂ ಧರ್ಮವಿಡಿದಿಂತೆಂದನು ॥ (25)

ಬಲ್ಲೆನಿನ್ನಯ ಮನೋಭಾವಮಂ ಸಾಧುಗಳ ।
ಸಲ್ಲ ನಿನ್ನಯಭಕ್ತಿಯಿಂದ ಮೂಲೋಕಮಂ ।
ಸಲ್ಲಲಿತಹರ್ಷ ಗೊಂಡುದು ಕೇಳು ಪಿತ್ರವಿಹಿತದಿಂದಮವಿಹಿತದಿನುಡಿಯೆ ॥
ಬಲ್ಲವರ್ಪತಿಕರಿಸಿ ಕೊಟ್ಟಭಾಷೆಯ ಸಲಿಸು ।
ತೊಲ್ಲೆಯೆನ್ನದೆ ಸುಖಾಸ್ಪದಸಗ್ಗತ್ತು ಋಣ ।
ದಲ್ಲಿಮುಳುಗದೆ ಮುಕ್ತನಾದವಂ ಪುತ್ರನೆಲೆಸಾಧುಜನಸಮ್ಮತನೆಲೆ ॥ (26)

ಮೇರೆದಪ್ಪೆ ಮಹಾಬ್ಧಿ ಶಶಿಲಕ್ಷ್ಮಿಯಂಬಿಡೆ ತು ।
ಷಾರಮಂ ತುಹಿನಾದ್ರಿಯಂತ್ಯಜಿಸಲಾಂ ನುಡಿದು ।
ದಾರಬಾಷೆಗೆ ತಪ್ಪೆದುಷ್ಕರದ ದುರ್ನೀತಿಮಾರ್ಗಮನೊಪ್ಪೆತನಯ ॥
ತೀರಿಸಿ ಪ್ರತಿಜ್ಞೆಯಂ ತಿರುಗಿ ಬಹೆ ದಶರಥ ಕು ।
ಮಾರನಿ ನ್ನೊಡೆವೆರದು ಜಗತಿಯಂ ಪಾಲಿಸುವೆ ।
ಸಾರು ಸಂಕಟಗೊಳದೆ ಸರ್ವಜನರೊಡನೆನುತ ರಘುಜಂ ನಿರೂಪಿಸಿದನು ॥ (27)

ಇಂತಗ್ರಜಾನುಜರ ಸಲ್ಲಾಪಮಂ ಕೇಳಿ ।
ಸಂತಸದಲಖಿಳಋಷಿಗಣ ಜಾನಪದರೆಲ್ಲ ।
ಚಿಂತೆಯಂ ಬಿಸುಟು ಭರತಂಗೆ ಪೇಳವರೊಲಿದು ಸತ್ಯಾನುಮತವಬಲಿದು ॥
ಪಿಂತಣರಸುಗಳಲ್ಲಿ ನಿನ್ನಪೋಲುವ ಮೃದು ।
ಸ್ವಾಂತರಂ ಕಂಡರಿಯೆವತಿಶಯದ ಋತಾವಚನ ।
ಕಾಂತನೆನಿಸಿರು ಧರೆಗೆ ಬರುವ ರಘುಕುಲಶಿರೋರತ್ನ ಮಂದಿರಕೆ ನಿನ್ನ ॥ (28)

ದೇವಕಾರ್ಯಮಿದೆಂದು ಭಾವಿಸುತಮನದೊಳಗೆ ।
ಕೋವಿದರ ಮತವಿಡಿದು ನಡೆವುದೆನುತಂಪೇಳ್ದ ।
ಠೀವಿಯಂ ತಿಳಿಸು ಕೌಸಲ್ಯೆ ಭರತನೊಳಿಂದಳಣುಗ ಕೇಳ್ಬರಿದೆಬಳಲೆ ॥
ಆವುದಹುದಖಿಲ ಋಷಿನಿವಹ ನೇಮಿಸಿದಂತೆ ।
ಪಾವನತರಾಕಾರ ರಾಮಬೆಸನಿತ್ತಂತೆ ।
ಭಾವಿಸುತೆ ಮನದೊಳ್ಳೈದುವದು ಕರಲೇಸೆನುತ್ತುಸುರಿದಳ್ವನೆಯಮಿಡಿದು ॥ (29)

ರಾಮ ಬಾಲಕನೀತ ಭೂಮಿಪಾಲನೆಗೈಯೆ ।
ನೇಮಿಪುದು ಭವದೀಯ ಪಾದುಕೆಗಳಂ ಬುಧ ।
ಸ್ತೋಮ ಕ್ಷೇಮಂಕರ ಮದ್ಯೈದೆ ಧರಣೀವಲಯ ಪಾಲನಂಗೈದು ಶುಭದ ॥
ಸಾಮರಸಗೊಳಪುದಖಿಲರನೆಂದು ಕೌಸಲ್ಯೆ ।
ಪ್ರೇಮದಿಂ ದೊರೆಯೆ ಲೋಕಾನುಗ್ರಹಂ ಗೈದು ।
ತಾಮರಸನಯನ ಪಾದುಕೆಗಳೊಲಿದಿತ್ತನಾಭರತಂಗೆ ಜಗತಿನಲಿಯೆ ॥ (30)

ಸಕಲಭೂತಳದ ಯೋಗಕ್ಷೇಮ ಸುರಧಾಮ ।
ವಖಿಲಜೈವಾತವ ಶುಭೋದಯಮಿತ ಕಲ್ಪಲತೆ ।
ಶುಕವಾಮದೇವಾದಿ ವಿಧಿಭವಸುರೇಶರ ಹೃದಯಕಮಲಹಂಸನೆನುತ ॥
ಭಕುತಿಯಂ ಮಕುಟ ತಪದೊಳಗಿಟ್ಟು ಪೊಗಳ ಮುನಿ ।
ನಿಕರಮಧ್ಯದಿ ಭರತ ಶ್ರೀರಾಮಚಂದ್ರಮಗೆ ।
ಪ್ರಕಟಿಸಿದ ನಿಜಮನೋರಥವ ನಿರ್ವೃತಿಪಥವ ಕುಮತಿಜನರವಿರಥವನು ॥ (31)

ಧಾರುಣಿಯ ಭಾರಮಂ ಪಾದುಕೆಯೊಳಿಟ್ಟು ತಾ ।
ನೂರಪೊರವಳಯದೊಳಗೊಂದು ತಾಣದಿ ಜಟಾ ।
ಚೀರವಸನಂಗಳಿಂ ಮುನಿವೇಷಮಂ ಧರಿಸಿ ದಳಫಲಾಹಾರದಿಂದ ॥
ಚಾರಿಸುವೆ ಪದಿನಾಲ್ಕುವರುಷಗಳ ತುದಿಯೊಳಗೆ ।
ತೋರಲೀ ಸನ್ಮೂರ್ತಿ ತೋರಸಂತಸಗೊಂಬೆ ।
ತೋರದಿರೆ ಹುತವಹನಿಗರ್ಪಿಸುವೆ ನೀತನುವ ನಿನಪೊಂದು ಶಿಳೆಪ್ರವರುವ ॥ (32)

ಎನುತೊರೆದ ಕೈಕೇಯಿತನೂಭವನ ವಾಣಿಯಂ ।
ಸನುಮತಿಸಿ ತೆಗೆದಪ್ಪಿ ತೊಡೆಯೊಳಿಟ್ಟಂ ಕುಳ್ಳಿರಿಸಿ ।
ವಿನಯದಿಂ ಕುಸ್ತುರಿಸಿ ಕಳುಹಿದಪ್ಪಿ ಶತ್ರುಘ್ನನನುಮತಂಗೊಳಿಸಿ ಪ್ರಿಯದಿ ॥
ತನಯ ಜನನಿಯ ಕೂರ್ಪರಬುಷ್ಪಗಳನೇರಿಸಿಸೀ ।
ಕನಸಿನಿಂ ಮನವಸೋಯಿಸದೆ ಭಕ್ತಿಯಿಂ ಪದ ।
ವನಜಗಳೆಯೊಳೆರ್ಗಿದೆವತ್ತೆಣೆ ಧರ್ತರಿಜೆಯ ಮೇಲಾಣೆ ಗುರುವಿನಾಣೆ ॥ (33)

ಎಂದೊರೆದ ಪುತ್ರನಂದದ ಕಂಬನಿಗಳಂಬಡುತ ।
ಬಂದು ಭರತಂಗಪ್ಪಣೆಯ ನೀಯಲತಿಹರುಷ ।
ದಿಂದ ಪಾದುಕೆಗಳಂ ಮೌಳಿಭೂಷಣಗೈದು ಬಲಬಂದು ನಮಿಸಿನಲಿದು ॥
ಇಂದೀವರಾಕ್ಷಿ ಧರಣೀಸುತಗೆ ನಮಿಸುತೊಲ ।
ವಿಂದ ಸೌಮಿತ್ರಿಯಂ ಒಗಿದಪ್ಪಿ ಬೀಳ್ಕೊಂಡ ।
ಚಂದ್ರಾನನೆಂದಮದನೇಂಪೇಳ್ವೆ ನಶ್ವಪತಿಸುತೆಯಣುಗನಭ್ಯುದಯವಂ ॥ (34)

ಭರತನಪ್ಪಣೆಪಡೆದು ಹರುಷಗೊಳುತಂ ತಿರುಗೆ ।
ಕರುಣಾಪದಿಂ ಕೌಸಲ್ಯೆತನಯನಂ ತಳ್ಕೈಸಿ ।
ಪರಿಪರಿಯೊಳುಪಚರಿಸಲಾನಂದದೊಡೆಪೆರದು ಬೀಳ್ಕೊಂಡು ಧರಣಿಸುತೆಯ ॥
ಪರಿರಂಭನಂಗೈದ ಕಲ್ಯಾಣದ ಶಾಂತ್ರೈಸಿ ।
ಚರಣಾರತಿಯಂಗೊಂಡು ಬಲಿತ್ತೆಲಕ್ಷ್ಮಣನ ।
ಪುಲಿಗೆ ಸಂತಸಪಡುವ ಲಗಿನ ತನುವಿಂ ಪಿಡಿಪಿತ್ತಿ ಮುದ್ದಿಸಿದಳು ॥ (35)

ತರುಣತರ ಸುಮಿತ್ರೆಯೊ ಪರಿಯೊಳೆಲ್ಲರಂ ।
ಸದುಳವಿಂ ಬೆಸಗೊಂಡು ಪೊಗಲಕ್ಕರೆಪೂರೆಗೆ ।
ಸುದತಿಕೇಕಯಿತನುಜೆ ಯೇಕಾಂತತಾಣದೊಳ್ ಕರಗಳಂಪುಗಿಪ ನಯದಿ ॥
ಒದರಿಸುತ ಕಂಬನಿಗಳಂತೆಂದಳಯ್ಯ ನಿ ।
ಮುದಗೊಳಿಪ ಭವದೀಯ ಮಾಯಾಬಲದಿಕ್ಷೇಮ ।
ಮವಯವಕಣಿಯಾಗೈಮದೇಶಿಸದೆನ್ನಂ ಪೊರೆವುದುಭಯಕುಲಪೌತ್ರಕಯನು ॥ (36)

ಪರಬೊಮ್ಮ ಪಾವನಪರಾತ್ಪರಂ ಮಾನುಷರ ।
ಪರಿಯಿಂದೆ ಲೋಕಮೋಹನಗೈವ ಮತಿಯಿಂದ ।
ಪರಿಕಿಸಲು ಭವದೀಯಮಾಯೆ ಬಹುವಿಧರೂಪನಾಂತು ಮೋಹನಗೊಳಿಸುತ ॥
ಜಗವಶಂಗೈಯುಲವರಿಂಪಾತಕದ ಬುದ್ಧಿ ।
ದೊರೆದುದೆನ್ನಿಂದಾದ ಲೋಕವಿದ್ವಿಘ್ನಕರ ।
ತರಕವರ್ಗಗಳನೆನೆಯದಮಲಕರುಣಾಳುಗಳಪತಿಯೆಂಬ ಬಿರುದಮೊರೆದು ॥ (37)

ಭವದನುಗ್ರಹದಿಂದಲಿಂತು ಬಂದೊದಗಿದುದು ।
ಸುವಿವೇಕಮುಮಂದು ನೀಂ ಮಹಾಪುರುಷನೆಂ ।
ಬುವದ ತಿಳಿದೈತಂದೆ ಮಱೆಯೊಕ್ಕೈತಂದೆನೊಂದೆಸೆಯಯಾಶಗಳಿಂದೆ ॥
ಭವಬಂಧ ಬಾಂಧವಾದ್ಯಖಿಳಮೋಹಾತುರವ ।
ಸವರಿ ಕೃಪೆಯಿಂ ಕಾಯವೇಳ್ಕೆಂದು ಕೈಮುಗಿದು ।
ವಿವಿಧಪರಿಯಲಿ ನುತಿಸೆ ರಘುನಾಥ ನಸುನಗುತ ಮಾತೆಯೊಡನಿಂತೆಂದನು ॥ (38)
ತಾಯೆ ನೀನವಧರಿಸು ಪೇಳ್ದ ನುಡಿ ಪುಸಿಯಲ್ಲ ।
ಮಾಯೆ ಎನ್ನಧೀನ ಮದ್ಬಲೋದ್ಧತೆಯಿಂದೆ ।
ಸ್ತ್ರೀಯುಮಪ್ಪಂತಗಗಿ ಮೋಹಿಸುವುದಿದು ತಥ್ಯ ಮತ್ತೆ ೞೆರಣೆಯು ಮೀರದೆ ॥
ಬೇಯುದಮರರ ನುಡಿಯು ಸಲಿಸುವರೆ ಸಲಸತಿಯು ।
ಮಾಯದಿಂ ಭವದೀಯನುಡಿಯಿಂದ ನುಡಿಸಿದಳ ।
ಮಾಯಮೆಳ್ಳನಿತಿಲ್ಲ ನಡೆದುದೆಮ್ಮಭಿಮತದಿ ದೇವಕಾರ್ಯಾರ್ಥವಾಗಿ ॥ (39)
ಚಲಿಸಲಪ್ಪುದೆ ತೃಣಂ ಬೆಸನಿತ್ತೊಡಲ್ಲದಪ್ಪ ।
ಚಲಿಸಲೇಂ ಕಾರಣಂ ಮದಧೀನ ಪ್ರಕೃತಿ ಬಂ ।
ದೊಲಿದಖಿಳಪ್ರಾಣಿಗಳ ಬಂಧಿಸಿಹಳನು ದಿನದಿ ಮಿಸುಕಲೀಯದ ತೆಱದೊಳು ॥
ಕಲಿತ್ರಕತ್ತಲೆಯೊಳಂ ಬಾನೆಡೆಯು ತೋರ್ಪಂತೆ ।
ಸಿಲುಕದಾಂ ಸರ್ವತ್ರ ಸಮದೃಷ್ಟಿಯೆನಿಸಿಯೆ ।
ನೊಲುಮೆಯಿಂ ಭಜಿಸುವರ ಭಜಿಪೆನಲ್ಲದಲೊಂದು ಕ್ರಿಯೆಗಳಿಂ ಸಿಲುಕೆನವ್ವೆ ॥ (40)
ಅರಸಿ ಕಾಣವು ವೇದ ವರವಿಂದಭವಮುಖ್ಯ ।
ರರಿಯರೆನ್ನನನನ್ಯಭಕ್ತಿಯಿಂ ಮೈದೋಱ ।
ಪೊರವೆನಲ್ಲದೊಡುಳಿದ ಯೋಗಯಾಗಾದಿಗಳ ಬಲೆಯೊಳಾಂ ಸಿಲುಕೆ ತಾಯೆ ॥
ಮಱೆಗೊಂಡು ರಾಮನೆಂ ನರನಂತೆ ಸುಖದುಃಖ ।
ವೆರೆದಿರ್ಪನೆಂದೆನ್ನ ತಿಳಿದು ನಿರಯವನಾಳ್ವ ।
ನರಿಯಬಾರದು ತತ್ವ ಪ್ರಾಪ್ತಿದಾಕ್ಷಣಕಹುದು ನಿರ್ವಾಣಮುಖ್ಯಸೌಖ್ಯಂ ॥ (41)
ಪೊಂಡಿಯೇಕಾಂತನಿಳಯವ ವಿಷಯದುರುಭರಗ ।
ಳೊಂದನಂಟದೆ ಹೃದಯಮಂದಿರದ ಮಧ್ಯದೊಳು ।
ತಂದದಿಂ ಮನ್ಮೂರ್ತಿಯಂ ನಿಟ್ಟಿಸುತ ಮಭ್ಯಾಸಗೈವುತ್ತಮಿರಲು ॥
ಕುಂದಿ ಪಾತಕತತಿಗಳ್ಳೈದವವು ನಿಜಬೆಳಗಿ ।
ನಿಂದಲಾನಂದ ಸುಖಮುಯುಮಕ್ಕುಮಿದ ತಿಳಿವ ।
ರಂದಿಗುಂ ಭವಬಂಧ ಬೆಸನಿಲ್ಲದಂತಕ್ಕು ಧೃತಿ ಸತ್ಯ ಮಕ್ಕು ಮಿಕ್ಕು ॥ (42)
ಎನುತ ತತ್ವಾರ್ಥಮಂ ಬೋಧಿಸಲು ಕೈಕೆ ಪದ ।
ವನಜಗಳಗಭಿನಮಿಸಿ ಮಗುಳೆ ಪ್ರಾರ್ಥನೆಗೈದು ।
ಘನತರಾನಂದಬ್ಧಿಯೊಳಗಾಳುತ್ತೇಳುತಂ ತನಯನೆಡೆಗೈತಂದಳು ॥
ಮುನಿತಿಲಕ ಜಾಬಾಲಿಮುಖ್ಯವಿಪ್ರೋತ್ತಮರ ।
ಮನಗೊಂಡಖಂಡನಿಧಿಯಂ ಕಂಡು ಬೀಳ್ಕೊಂಡು ।
ಜನಪನೆಡೆಗೈತರಲ್ ಜನಪದಂ ಬೆಸಗೊಂಡು ವೇಗದಿಂದೈತಂದುದು ॥ (43)

ನೆರೆದಖಿಳಜನರಮಾತ್ಯರುಗಳನುಮತಿವಿಡಿದು ।
ಭರತನಾ ಪಾದುಕೆಗಳಂದು ಮಕುಟದೊಳಾಂತು ।
ಹರುಷದಿಂದೋಲಾಡುತೈತಂದ ಮಣಿರಥದ ಪೊರೆಗಾಗಲೊಲವಿನಿಂದೆ ॥
ಸರಭಸದಿ ಸ್ವರ್ಣಗದ್ದುಗೆಯಲ್ಲಿ ಪಾದುಕೆಗ ।
ಳಿರಿಸಿ ವಂದನೆಗೈದು ಮಗುಳೆಲ್ಲರೆಡೆಗೈದಿ ।
ಕರಕಲಿತಖಡ್ಗದಿಂದೆರಗಿ ಪಾರ್ಥಿವರಮಲಕುಲಧರ್ಮಮಂ ಮೀರದೆ ॥ (44)

ಸಾಮಂತರಿಂದಖಿಲಕಾರ್ಯಾರ್ಥಗಳನರಿದ ।
ಧೀಮಂತರಿಂದ ಪುರಜನ ಜಾನಪದದಿಂದ ।
ಲಾ ಮಹಾಂತನ ಚರಣಪಾದುಕಾವಂದನಂಗೈಸಿ ಜನ್ನೈಸಿ ಮನದಿ ॥
ಪ್ರೇಮಂದಳೆದು ತೇರಿನೊತ್ತಿನಲಿ ಹಯವೇರಿ ।
ಶ್ರೀಮಂತ ಭರತನೈದುತಲಿರಲ್ ತಮತಮ್ಮ ।
ಕಾಮಿತಗಜಾಶ್ವರಥಶಕಟಾದಿಗಳನಡರಿ ನಡೆದರೆಲ್ಲರ್ ಹರುಷದಿ ॥ (45)

ಕಳೆದು ಕಾನನಗಳುಳಿದಖಿಳಪರ್ವತಗ ।
ಳಳಿದು ಪ್ರಯಾಗಕೈತಂದಾ ಭರದ್ವಾಜ ।
ವಳಿವಾತಿನಧಿಪತಿಯ ನಿಳಯಮಂ ಸಾರಿ ಭಯಭಕ್ತಿಯಿಂ ನಮಿಸಿ ಬಳಿಕ ॥
ತಿಳುಪೆ ನಡೆದರ್ಥವಂ ಕೇಳಿ ಮುನಿಪೋತ್ತಮಂ ।
ತುಳುಕುತಾನಂದವಂ ತುಂಬಿ ಸುಖವೃಂದವಂ ।
ಜಲಜಾಪ್ತಕುಲಮಿತ್ರ ಸುಚರಿತ್ರನೊಡನೆಂದ ನಸುನಗುತ ಗೆಲವಿನಿಂದ ॥ (46)

ವಿಮಲಮತಿಕೃತಯುಗದ ನೃಪತಿಗಳೊಳಾವನುಂ ।
ಸಮನೆನಿಪ ಭವದೀಯಸಾಧುಚಾರಿತ್ರಕಂ ।
ಸುಮನಸ ಮಹರ್ಷಿಗಣ ಮುಮುಕ್ಷುಗಳು ಸಹಿತ ಹರುಷಮಾನಸರಾದರು ॥
ಅಮರತೋಷಣೆಯಮಿತಶ್ರೇಯಸ್ಕರವನಿತ್ತು ।
ಶಮೆಯೊಳೂರ್ಜಿತಗೃವ್ರುದೆನುತುಸಿರೆ ಜವದಿ ಪದ ।
ಕಮಲಂಗಳಿಗೆ ನಮಿಸಿ ಬೀಳ್ಕೊಂಡು ನಿಜಸೇನೆ ಸಹಿತ ನಡೆದಂ ಭರತನು ॥ (47)

ತ್ವರಿತಗತಿಯಿಂದೈದಿ ತರಣಿಸುತೆಯುಂ ದಾಂಟಿ ।
ಸುರನದಿಯನುತ್ತರಿಸಿ ಶೃಂಗಿವೇರದಿಗುಹನ ।
ಕರುಣದಿಂದುಪಚರಿಸಿ ನಿಜನಗರಿಯನೋಳ್ಪಡುಜ್ಜುಗದೊಳೈದುತಿರಲು ॥
ಪರಿವೇಷದಿಂದ ರಾಜಿಪ ರಾಜನಂದದಿಂ ।
ನಿರತಿಶಯತುಹಿನಪಿಹಿತಾದರ್ಶನದಿ ತೋರ ।
ದಿರುವ ನಗರಿಯ ವಿಟಪಿಗಳ ಕಾರುಹಿನಿಂ ತಿಳಿದು ಸೂತನೊಡನಿಂತೆಂದನು ॥ (48)

ಇನನವಿಟ್ಟ್ರಸದಂಬುಜಾತವೋ ತುಹಿನಕರ ।
ನಸುವ ಕಾಣದ ಸಿತಾಂಭೋಜಾತವೋ ಯೆನಲ್ ।
ಘನಘನಘನಾಪಿಹಿತದಾಕಾಶದಂದದಿಂ ನಗರಿ ಕಣ್ಗೆಸೆವುತಿದೆಕೋ ॥
ವನಿತಾಸಮೂಹ ಕ್ರೀಡಿಸುವ ನೆಲ ಜವ್ವನಿಗ ।
ರನುವಿನಿಂದ ವಿಲಾಸಗೈವ ತಾಣಂ ತುರಗ ।
ಧ್ವನಿಗೈವ ಪಂಥಾನವೆಲ್ಲ ನಿಷ್ಪ್ರಭೆಯಾಗಿ ಕಾಣುತಿದೆ ಮಂತ್ರಿತನಯ ॥ (49)

ರನ್ನದಂಗಡಿಗಳಂ ಬರದ ನೆಲೆ ಪೂವಸರ ।
ಚೆನ್ನಿಗರನೊಲಿಪ ಬೆಳ್ಕಿವೆಯನೆಲೆ ಪರಿಮಳಗ ।
ಳುನ್ನತಸ್ಥಾನಂಗಳಿಂದಲಂಕೃತಿವೆರಸಿ ಕಾಣದಿವೆ ಚಿತ್ರ ಕರದಿ ॥
ಸೆನ್ನುತಿಪ ವಂದಿಮಾಗಧರೊ ವರ್ಗರೆಡೆಯಾಡ ।
ರುನ್ನತದ ದೇವಾಲಯಂಗಳೊಳ್ ಶ್ರುತಿಮಧುರ ।
ಸಂನಾದ ಕೇಳದಿದೆ ಖಿನ್ನಚಾರಿತ್ರ ಯಶದರಸಿನಂತಿದೆ ನಗರವು ॥ (50)

ಮಂದಿರಗಳೆಡೆಯೆಡೆಯೊಳೊಲಿದು ವಾದಿಪ ಶಾಸ್ತ್ರ ।
ವೃಂದಮಲ್ಲಲ್ಲಿ ತರ್ಕಪರ ಸಲ್ಲಕ್ಷಣಾದಿ ।
ಪೊಂದಿ ಪೇಳುವ ನಿಗಮಮಾಗಮಂಗಳ ಕ್ರಿಯಾತಂತ್ರಗಳ ಬೋಧಿಸುವರ ॥
ಸಂದಣಿಗಳಲ್ಲದಿವೆ ಶಸ್ತ್ರಾಸ್ತ್ರದಭ್ಯಾಸ ।
ದಂಡ ವರಗಜವಾಜಿಯಾನದಾರೋಹಣದ ।
ವೃಂದ ವಿರಚಿತಮಾಗಿ ನಿಶ್ಶಬ್ದದಂಬುಧಿಯೊಲಿದೆಕೊ ಪಟ್ಟಣ ಸೂತಜ ॥ (51)

ಒಂದೆಸೆಯಲಂಕರಣವೆತ್ತ ಭದ್ರೇಭಂಗ ।
ಳೊಂದೆಸೆಯ ಶೃಂಗಾರಕಲಿಕಾಶ್ವಸಂದೋಹ ।
ಮೊಂದೆಸೆಯ ರತ್ನಮಯಪೊಂದೇರ ಗೊಂದಣಂ ಮಣಿಖಚಿತಶಕಟಂಗಳು ॥
ಒಂದೆಡೆಯ ಚದುರಾಂತ ಯಾನಸಂತತಿಗಳಂ ।
ಬಂದಖಿಳಮಕುಟವರ್ಧನರೆಂದಿರಂಪದಿಂ ।
ದಂವಪಡೆದೆಸೆಯೀ ರಾಜಮಂದಿರದೆಡೆಯ ಸೂತ ನೋಡೈ ವಿಭವಮಂ ॥ (52)

ಅರಸನೈತರುವಾಗ ಕರುಮಾಡವಗ್ರದಿಂ ।
ತರುಣಿಯರ್ ಚೆಲ್ಲುವಾಚಾರಲಾಜಂಗಳುಂ ।
ಪರಿಪರಿಯ ಫಲವೆರಸಿ ಮಂತ್ರಾಕ್ಷತೆಗಳೀವ ವಿಪ್ರಜನಸಂದಣಿಗಳುಂ ॥
ಕರವೆತ್ತಿ ಬಿರುದನುಘ್ಘಡಿಪ ಪಾಠಕ ಜನರ ।
ನೆರವಿ ಕಂಗೊಳಗದಿದೆ ಯೆನುತ ಮರುಗುತ ಪೊಕ್ಕ ।
ನರಮನೆಯ ಪಾದುಕೆಗಳಿಟ್ಟು ಮೂರ್ಧ್ನಿಯೊಳಮರತತಿ ನೋಡಿ ಹಿಗ್ಗುವಂತೆ ॥ (53)

ಮಾತೆಯರ ಮೃದುನುಡಿಯಲುಪಚರಿಸುತಲತುಲಸೌ ।
ಪ್ರೀತಿಯಿಂದರಮನೆಯೊಳಿಟ್ಟು ಸಂತಸದಿ ರಘು ।
ಜಾತ ಸಭೆಗೈತಂದು ನೆರೆದಮಾತ್ಯರ ಗುರುಗಳೆಡೆಯೊಳುಸಿರ್ದಂ ಪ್ರಿಯದೊಳು ॥
ಸೀತಾರಮಣ ನಿದೇಶದೀ ರಾಜಧಾನಿಯು ।
ಲ್ಲಾತ ಸಂತೋಷದಿಂದಾನಿರಲ್ವೇಳ್ಕು ವಿ ।
ಖ್ಯಾತನಗರಿಯೊಳಲ್ಲದಾನಿಪ್ಪುದುಂ ಸಲ್ಲ ಸಾಧುಸಮ್ಮತಮಿದಲ್ಲ ॥ (54)

ಚರಣಸೇವೆಯೊಳಿರುಳು ಪಗಲೆಂಬ ಭೇದಮಂ ।
ಮರೆದನಾಹಾರದಿಂ ನಡೆದವೃತ್ತಾಂತಮಂ ।
ತ್ವರಿತದಿಂ ಬಿನ್ನಪಿಸಿ ಪಾದದಪ್ಪಣೆವಿಡಿದು ಪತಿಕಾರ್ಯಮನ್ನೆಸಗಲು ॥
ಸರಯೂನದೀತಟದೊಳಪ್ಪ ನಂದಿಗ್ರಾಮ ।
ಪೊರೆಯೊಳೀ ಪಾದುಕೆಗಳಿಟ್ಟು ಪೂಜಿಸಿ ಮೋದ ।
ವೆರೆಯಲೆನ್ನಯ ಮನಂ ಸಂತಸಂಗೊಳುತಿದೆಕೊ ಯೆನುತೊರೆದು ನಡೆದನೊಲಿದು ॥ (55)

ನೋಡುತವಿಸಾಭಾವದಿಂದೆಸೆವ ಭಕುತಿಯಂ।
ಮೂಡಿದಾನಂದದಿಂದಖಿಲಋಷಿಗಣವಿಪ್ರ।
ರಾಡಿದರನೇಕವಿಧವಿಂ ಧರಾವಲಯಮಂ ಭುಲ್ಲವಿಸಿ ನಲಿವಂದದಿ॥
ಮೂಡಿದರಪಾರನುತಿಗಳ ದೇವತತಿಯುಂ ಸುಧೆ।
ಯಾಡಿದಂದದಿ ನಾರದಾದಿಗಳ್ ಸಂತಸಂ।
ಗೂಡಿ ಪಾಡಿದರೊಲಿದು ಸಚ್ಚರಿತೆಗಳ ಭರತ ನಡೆಯುವಾಶ್ಚರ್ಯಗಳನು॥(56)

ಪರಿಮಳ ಭೂಷಣಾಯತಮೆನಿಸಿ ಪಾವುಗೆಯು।
ಹರುಷದಿಂ ಶತ್ರುಘ್ನನೊಡನೆ ಗಮಿಸಿದ ನಾರ।
ಕೆರೆಯುದಲೆ ಭರತ ನಂದಿಗ್ರಾಮಕತಿವೇಗಭಕ್ತಿರಸಮಂ ತುಳ್ಕುತ॥
ಅರಸನೈದಿದನೆಂದು ಗುರುವಸಿಷ್ಠಾದಿಮುನಿ।
ವರರಮಾತ್ಯರು ಪೋಗಿ ಕೆಲಬಲದೊಳೊಪ್ಪಿದರ್।
ಸುರಪನೆಡಬಲದೊಳಾರಾಜಿಪ ಬೃಹಸ್ಪತಿಪ್ರಮುಖ ದ್ವಿಜಗೆಂಬಂದದಿ॥ (57)

ಸಾಧುಜನಸಮ್ಮತದೊಳೊಂದರಮನೆಯು ರಚಿಸಿ।
ಮೋದದಿಂ ಪಟ್ಟವಣೆಯೊಳು ಪಾವುಗೆಯನಿಟ್ಟು।
ಸಾದರದಿ ಪಟ್ಟಾಭಿಷೇಕಮಂ ವಿರಚಿಸಿಯೆ ಮುಂಗಡೆಯು ವೇತ್ರವಿಡಿದು।
ಶ್ರೀಧವ ಸುರೇಶನುತ ಜೀಯ ಪಾಯಾವಧರು।
ಮೇದಿನೀಯರಸ ದಯಗೈವುದೆನುತಂ ಸಮುಖ।
ದಾಧಿಪತ್ಯತೆಯಂತು ನಿಂತು ವೋಲಗಗೊಡತಲಿರ್ದ ಭರತಂ ಭಕ್ತಿಯಿಂ॥ (58)

ಆವ ಕಾರ್ಯವನೆಸಗಲದ ಪಾದಕೆಚ್ಚರಿಸು।
ತಾವಗಂ ನಡೆವುದಂ ಪಾದದಪ್ಪಣೆಯೆನುತ।
ಕೋವಿದರು ನುತಿಪಂತೆ ಕೊಡುವ ಪತ್ರಂಗಳಗೆ ಶ್ರೀರಾಮ ಪೆಸರನಿಟ್ಟು॥
ಆವಸುಧೆಯಂ ನಹುಷ ನಳದಿಳೀಪಾದಿಗಳ।
ತೀವಿಗಿಮ್ಮಡಿಯೆನಿಸಿ ಪಾಲಿಸುತ ತಾಂ ಶಿಷ್ಯ।
ಭಾವದಿಂದಿರ್ದ ಭರತನ ಸಾಧುಚರಿತೆಯಂ ಬೇಳಲಾರ್ಗಳವಪ್ಪುದು॥ (59)

ಹಾರೈಸದಲೆ ಸಿರಿಯು ಹಗಲಿರುಳು ಭಕ್ತಿಯ ವಿ।
ಚಾರದಿಂ ತನುಧನಮನಂಗಳರ್ಪಿತಗೈದು।
ವೀರವ್ರತವಂ ಪಿಡಿದು ಚೀರವಸನವ ಧರಿಸಿ ಪತ್ರಪರ್ಣಾಕಾರದಿಂ॥
ಕಾರಣಾತ್ಮಕನಂಘ್ರಿಪಂಕಜವ ಹೃದಯದಾ।
ಗಾರವೆಂದೆನಿಸಿ ಸಂತಸದಿಂದಲಾಳದಂ।
ಧಾರಿಣಿಯು ರಘುಭಗೀರಥರಿಂದಲೈವಡಿಯೆನಲ್ಕೆ ಭರತಂ ಮುದದೊಳು॥ (60)

ಪಗಲಿರುಳು ಸತ್ಕಥಾಸಲ್ಲಾಪಮದರಿಂದ।
ಲೊಗುವಿಗೆಯು ಶ್ರೀರಾಮ ಕೀರ್ತನಂ ತದಾಖ್ಯಾನ।
ಮಿಗೆ ಸವಾಧಿಗಳಂದ ರಾಮಾತ್ಮನೆಂದಿನಿಸಿ ಭೇದಮಿನಿಸಂ ತೋರದೆ॥
ಸೊಗಯಿಸಿದ ರಾಮಪುರದರಸ ಮಗುಳ್ದಿತಪ್ಪ।
ಬಗೆಯಂ ನಿರೀಕ್ಷಿಸುತಲಿರ್ದ ಭರತನ ಚರಿತೆ।
ಜಗತಿಗತಿಪಾವನಂ ಪೊಗಳಲಾ ದೇವನಂ ಫಣಿಪತಿಗಸಾಧ್ಯ ಮಗಜೆ॥ (61)

(ಸಂಧಿ 34 ಪದ 1533)

ಮೂವತ್ತೈದನೆಯ ಸಂಧಿ

ಸೂಚನೆ ॥ ಶರಣಾಗತತ್ರಾಣನೆಂಬ ಬಿರುದಂ ಮೆರೆಯೆ ।
ಕರುಣಾಳುಗಳ ದೇವ ರಘುನಾಥ ಪ್ರೇಮದಿಂ ।
ಕರುಣ ಸೌಮಿತ್ರಿಗಂ ವಿಸ್ತರಿಸಿ ಬೋಧಿಸಿದ ಪರಮತತ್ತ್ವದ ಪರಿಯನು ॥

ಹೈಮವತಿ ಕೇಳ್ ಭರತ ನಿಜನಗರಂಗೈದಲ್ಕೆ ।
ಪ್ರೇಮದನುರಾಗದಿಂ ಸೌಮಿತ್ರಿ ಸದ್ಗುಣ ।
ಸ್ತೋಮಗಳ ನೆನೆನೆನೆದು ತೊಳಲುತಿರೆ ನೋಡುತಂ ರಘುವೀರ ಕರೆದು ಪ್ರಿಯದಿ ॥
ಬಾ ಮಗನೆ ಭವದೀಯ ಚಿತ್ತಾನುತಾಪ ಬಲು ।
ಭ್ರಾಮಕಂಗೊಳಪುದಿದು ಬಯಲಮಾಯಾವರಣ ।
ತಾಮಸವಿದಲ್ಲದೊಳುಪೊಕ್ಕು ನೋಡಲ್ ಕ್ಲೇಶ ನಿಲವುದಕೆ ತಾಣವಿಲ್ಲ ॥ (1)

ಎನುತೊರೆಯೆ ಸೌಮಿತ್ರಿ ರಾಮಭದ್ರನ ಚರಣ ।
ವನಜಗಳಗಭಿನಮಿಸಿ ದೇವ ಮನೆ ಧನವೆಂಬ ।
ನೆನಹಿದೆಂತುಂ ಪೋಗಿ ನಿರತಿಶಯವಾನಂದದಿಂದಿರ್ಪ ಸುಖದೊಳಾತ್ಮಂ ॥
ಜನನಮರಣಗಳಾಟ ಕೋಟಲೆಗಳುಂ ಕ್ಲೇಶ ।
ಮನುರಾಗಪೋಪ ವಿಧವೆಂತದಂ ವಿಸ್ತರದೆ ।
ಎನಗೊರೆದು ಕೃತಕೃತ್ಯನಂ ಮಾಳ್ಪುದೆಂದೆರಗಿ ಬಿನ್ನಪಂಗೈದ ನೊಲಿದು । (2)

ಆದೊಡಾಲಿಸು ನಿತ್ಯ ನಿರುಪಮ ನಿಜಾನಂದ ।
ಬೋಧಮಯ ಚಿದ್ರೂಪ ಯೋಗಮಾಯೆಯ ಸೃಜಿಸಿ ।
ಸಾದರದೊಳದ ನಚ್ಚಿ ಮಚ್ಚುತೀಶ್ವರನೆನಿಸಿ ಲೀಲಾವಿಲಾಸದಿಂದ ॥
ಈ ಧರೆಯೊಳಾಮಾಯೆಗಖಿಲರೂಪುಗಳೀವು ।
ತಾದಾರಸಂಗದಿಂದಮಿತವಿಕೃತಿಗಳಾಂತು ।
ಬೋಧಾರಹಿತನಾಗಿ ಪಾಪ ಧರ್ಮದ ಲೇಪಕೊಳಗಪ್ಪ ಜೀವ ನೆನಿಸಿ ॥ (3)

ಕೃತ ಪುಣ್ಯಪಾಪಗಳ ಕತದಿಂದ ಪರಲೋಕ ।
ದತಿಶಯದ ಸುಖಕಷ್ಟಗಳನುಂಡು ಲೋಕಸಂ ।
ಸ್ಥಿತಿಯಳಿದು ವಾಯುಪಥವಿಡಿದು ಬಂದಾಭ್ರಪ ಮುಗುಳಭ್ರಮಂಡಲವನು ॥
ಕ್ಷಿತಿಗಿಳಿದು ಪನಿಯೊಡನೆ ಸಸ್ಯಾದಿಗಳೊಳಿರ್ದು ।
ಜತೆಗೊಂಡು ಧಾನ್ಯಮಂ ಭುಕ್ತಿಮಯದಿಂ ಜೀವ ।
ತತಿಗಾನುರಾಗಮಂ ಬೀರುತ್ತ ಶುಕ್ಲಮಯನಾಗುತುದರದೊಳಿರ್ದನು ॥ (4)

ಋತುಸಮಯದೊಳಗೆ ಸ್ತ್ರೀ ಪುರುಷಯೋಗದಿ ಯೋನಿ ।
ಪತನಮೆನಿಸಿದ ಶುಕ್ಲ ಶೋಣಿತದೊಳೊಡಗೂಡಿ ।
ಯಾತನಮಿಲ್ಲದೆ ಪ್ರಥಮದಿವಸ ಬುದ್ಬುದದಂತೆ ತೋರ್ಪುದೇಳನೆಯ ದಿನಕೆ ॥
ಕೃತಕಮೆನೆ ಗೋಳಕಾಕೃತಿಯಿಂದ ಶೋಭಿಸುವ ।
ಪತಿಶಯದ ಲೋಹಿತದಿ ಬಲಿದು ಬಲದಳ್ಳೆಯೊಳು ।
ವಿತತಮೆಂಟಂಗುಲಿತಮಾಗಿ ತೊಡೆ ಭುಜಗಳಂ ತೋರ್ಪನರುವತ್ತು ದಿನಕೆ ॥ (5)

ಕರಚರಣಗಳು ಕಕ್ಷಕಂಧರಗಳುಂ ಸಮೀ ।
ಕರಿಸಿ ಸಂಧಿಗಳೆಸೆವ ನಾಸಿಕ ಶ್ರುತಿ ನೇತ್ರ ।
ಮೆರೆವ ಗುದ ಗುಹ್ಯಂಗಳಾಕಾರವೊಂದೆನಿಪ ಮೈಯ್ಯ ತೊಂಭತ್ತುದಿನಕೆ ॥
ಕರಣ ಮುಖ ಮೇಹನ ಗುದಾಕ್ಷಿನಾಸಾಶ್ರುತಿಗ ।
ಳುರವುಂ ತೋರಲಾಪಿಂಡವೊಗ್ಗೇಣಿ ।
ಗಿರವಾಗಿ ಜಠರಾನಲನ ಶಿಖೆಯೊಳ್ಗಂ ಬೆಳೆದು ಬಹುದು ತಿಂಗಳುನಾಲ್ಕಕೆ ॥ (6)
ಅಂಗುಲಿಗಳುಂ ಕಟಿನಿಟಿಲ ಚುಬುಕಸ್ತನವು ।
ಭಂಗುರೋದರ ಪಾರ್ಶ್ವ ಕಕುದಗಂಡಂಗಳುಂ ।
ಸಂಘಟಿಪವೈದನೆಯ ತಿಂಗಳೊಳ್ ಗರ್ಭಸ್ಥವಾದ ಪಿಂಡಕ್ಕೈದೆ ॥
ಪೊಂಗುವವಯವಸಂಧಿ ಕಚ ನಿಕರ ನಖರದ ಬೆ ।
ಡಂಗಾಂತು ತೋರುವದು ನಿರಯಸನ್ನಿಭವೆನಿಸಿ ।
ಕಂಗೊಳಿಪ ಜಠರಪ್ರದೇಶದೊಳಗಾರನೆಯ ತಿಂಗಳೊಳು ಪಿಂಡವಿಂತು ॥ (7)
ವಿವಿಧಧಾತುಗಳ ನವಚಕ್ರಂಗಳಹ ತಾಣ ।
ವವರ ಸಂವರ್ತಿತೆಗಳೆಲು ನರಂಗಳು ಬಲಿದು ।
ಜವದಿಂದವೊಪ್ಪು ವಂಗೋಪಾಂಗ ಶಿಶುರೂಪವಾಗಿ ಗರ್ಭದಿ ಪೊರಳುತ ।
ನವರಸಾನ್ನವ ಕೊಳಲ್ ಮಾತೆ ರಸ ಪೊಕ್ಕುಳನ ।
ವಿವರದಿಂದೊಳಪೊಕ್ಕರಾ ತಂಪಿನಿಂ (ಬ) ಬೆಳೆದು ।
ತವೆ ತೋರ್ಪುದೇಳನೆಯ ತಿಂಗಳಗಾಪಿಂಡವೇನೆಂಬೆ ನಚ್ಚರಿಯನು । (8)
ನೆಲ ಗುದಂ ಜಲ ಶೀರ್ಷವಗ್ನಿ ನಾಭೀಕುಹರ ।
ಚಲನ ಹೃದಯಸ್ಸ್ವರ ಸ್ವಾಕಾಶಮುದರಿಂದ ।
ನಿಲನು ಹೃದ್ದೇಶದೊಳ್ ಬಲಿದನ್ನರಸವನುಂ ಕೊಡುತ ಜಠರಾನಲನಿಗೆ ॥
ಚಲಿಸುತಿರೆ ಸರ್ವಾಂಗ ಸಂಧಿಗಳಲನುಪದಂ ।
ಬಲುರಕ್ತಮೂತ್ರಗಳು ವಿವರದೊಳ್ ಬರೆ ಕಷ್ಟ ।
ಕಲನೆಯಿಂದೊದರುತಿಹ ಕರಪಾದಗಳ ಶಿಶುಕನೆಂಟನೆಯ ತಿಂಗಳೊಳಗೆ ॥ (9)
ಹೇಸಿಕೆಯ ಹೆಬ್ಬುಡಿಕೆ ಕೀವು ರಕ್ತದ ಕುಂಡ ।
ಮಾಸು ಸುತ್ತಿರೆ ಮುತ್ತಿ ಕಡಿವ ಕ್ರಿಮಿಸಂಕುಲಾ ।
ಯಾಸದಿಂದಳಲಿ ಬಳಲುತ ಸಂಕಟಂಗೊಳುತಲೊಮ್ಮೊಮ್ಮೆ ಸಂಚರಿಸುತ ॥
ಬೇಸತ್ತು ನಿರಯದನುಭವಗೈಯಲಾರದೆ ನಿ ।
ರಾಸಮತಿಯಿಂ ಜನ್ಮಕರ್ಮಗಳ ನೆನೆನೆನೆದು ।
ಕೂಸು ತನ್ನೊಳ್ ತಾನೆ ಹಂಬಲಿಪ ತೆರವದೇನೆಂಬೆ ನಚ್ಚರಿಯ ಪರಿಯ ॥ (10)
ನಿಂದಿಸುತ ಹರಿಹರರ ನಿಜಸತಿಯನುಳಿದು ಪರ ।
ಸುಂದರಿಯರಂ ಬಯಸಿ ಸಜ್ಜನರ್ಕಳ ಜರೆದು ।
ಬಂಧುರದ ಭೂಸುರದ್ವೇಷದಿಂ ಕರಿಗೊಂಡು ಗುರುವನರನೆಂದು ತಿಳಿದು ॥
ಇಂದಿರೇಶನ ಭಕ್ತರಂ ತಿರಸ್ಕೃತಗೈದು ।
ಕುಂದದೆ ತತ್ಕಥಾಶ್ರವಣಮಂ ಪಳಿದ ಕತ ।
ದಿಂದಲಡಸಿತು ನಿರಯ ನಿರ್ಭರ ಗರ್ಭಯಾತನೆ ಮಹೇಶ ಹಾಯೆಂದಳಲ್ವುದು ॥ (11)

ಪರಮಕರುಣಾವನಧಿ ಹರಿ ಯೆನ್ನ ಯಾತನೆಯ ।
ನರಿದು ಪರಿಹರಗೈದು ನರಕಬಾಧೆಯ ಬಿಡಿಸಿ ।
ಧರಣಿಯಂ ಕಾಣಿಸಲ್ಕನುದಿನದಿ ಶುಭನಾಮಕೀರ್ತನಂಗೈದು ಮುದದಿ ॥
ಚರಣಸೇವನೆಗೈದು ಸಾಧುಜನರೊಳು ಬೆರೆದು ।
ನಿರತಪೂಜಾದ್ಯಮಿತಭಕ್ತಿಯಿಂ ಮೆಚ್ಚಿಸುತ ।
ಪರಿವೆ ಭವಬಂಧಮಂ ಸ್ಮರಿಸೆ ಗರ್ಭದ ನೋಯನೆನುತುಲಿವುದದು ಮನದೊಳು॥ (12)
ಇಂತನಂತಪ್ರಲಾಪನಗೈವುತಲೆ ತನ್ನೊ ।
ಳಂತರಾತ್ಮನ ನೆನವುತಳುತಿರಲ್ಕನಿತರೊಳು ।
ಚಿಂತಾಯಕನ ನೇಮವಿಡಿದು ಯೋನಿದ್ವಾರದಿಂದಲೊಳಪೊಕ್ಕು ಜವದಿ ॥
ಕೊಂತಿ ಕೊಂಡಿಹ ಮಾಸಿನೊಳಗಿರ್ದ ಶಿಶುವನ ।
ತ್ಯಂತ ಬರಸಿಡಿಲಂತೆ ಪೊಡೆದು ಭ್ರಾಮಕಗೊಳಿಸಿ ।
ತಾಂ ತಿರುಗಿಸುವದೇನ ಪೇಳ್ವೆ ಸೂತ ಸಮೀರನುರುಬೆಯಂ ಹರಿಯಾಜ್ಞೆಯ ॥ (13)
ಆ ಮಹಾಯೋನಿಯಂತ್ರವ ಪೀಡನಾಬಲದಿ ।
ಭ್ರಾಮಕಂಗೊಂಡು ವಿವರದೊಳಳದು ಪೊರಬಿದ್ದು ।
ಭೂಮಿಯೊಳ್ ಕೆಡೆದಪುದು ಪ್ರಾರಬ್ಧಫಲದಿಂದ ಲೇಶ ಕಂಪದೆ ಕುಂದದೆ ॥
ಕಾಮಜನಕನ ಮಾಯೆ ಕಪಿಯಾಲಾರೋಹಿತ ।
ಸ್ತೋತ್ರಮದೊಳು ಜಂಬಾಲಕಲಿತರ್ಝುಷಮೆಂಬಂತೆ ।
ತಾಮಸದ ಮೂರ್ಛೆಯಿಂದರೆನಿಮಿಷ ಮೈಮರೆದು ಕೆಡೆದಿರ್ಪುದೇಂ ಪೇಳ್ವೆನು ॥
ಘನವಾಗೆ ಶೋಣಿತಂ ವನಿತೆಯುಪ್ಪಳು ಶುಕ್ಲ । [(14)
ಘನಮೆನಿಸೆ ತನಯನಹ ನುಭಯಸಮನೆಂದೆನಿಸೆ ।
ಜನಿಸುವ ನಪುಂಸಕಂ ತಂದೆತಾಯ್ಗಳ ಬಯಕೆಯಿಂದ ಕುಬ್ಜಂ ಕೇಕರಂ ।
ತನುಕಾರ್ಶ್ಯ ಪೀನತೆಯನನುಕರಿಸಿ ಪುಟ್ಟುವರು ।
ಬನದ ನಿಜನಿಜಕರ್ಮದಿಂದ ನಾನಾಯೋನಿ ।
ಯನುಸಾರ ಪಲವುವಿಧ ಸುಖದುಃಖಗಳನುಂಬರೇನೆಂಬೆ ಮರುಳರಿವರ ॥ (15)
ಪಲಪರಿಯ ಯೋನಿಗಳೊಳುದಿಸಿ ನಾನಾಚಿತ್ರ ।
ಕರದೂಟಗಳನುಂಡು ದಣಿವಿಲ್ಲದಲೆ ತನ್ನ ।
ಮರೆದಕೃತ್ಯಗಳೆಸಗಿ ನರಕಯಾತನೆಗಳನ್ನನುಭವಿಸಿ ಮನದೊಳಡದೆ ॥
ಮರುಳುತನದಿಂದಧಿಕಭೋಗಗಳ ಬಯಸುತಂ ।
ಕುರಿಗಳಂದದಿ ಸಿಲ್ಕಿ ತರಣಿ ಸಕ . . . . ಳಾಗಿ ।
ನರಳುವರದೇನೆಂಬೆ ವಿಷ್ಣುಮಾಯಾಮಹಿಮೆ ಯೆಂತುಟೋ ಪೇಳಲರಿದು ॥ (16)
ಪಗೆಯ ಮಂದಿರವಾಟ ಮಾರಿಯಿರುತಿಹ ಮನೆಯೊ ।
ಳೋಗುವಿಗೆಯ ಸಲಿದಾಟ ಬೇಟಶಾಖಾಮೃಗದ ।
ಮಿಗೆ ಸೀಧುಸೇವಕನ ಶೃಂಗಾರಕರ ನೋಟ ಕಲಹಕೇತನಮಿತ್ರತೆ ॥
ಮೃಗತೃಷ್ಣೆಯತಿಶಯಂ ಜಾರೆಯೆಸಗುವ ಪ್ರೀತಿ ।
ಸೊಗಯಿಸುವ ಖಲನುಡಿಯ ಸೊಂಪನನುಕರಿಪುದೀ ।
ಹಗರಣದ ಸಂಸಾರಸುಖವು ಬೀದಿಯೊಳಟ್ಟ ಸೊಡರಂತದೇ ಪೇಳ್ವೆನು ॥ (17)

ಮರುಮರೀಚಿಕದ ಸಿರಿ ಮರುತವೈಭವದ ಪರಿ ।
ಮೆರವಮಿಂಚುಗಳ ನಿರಿ ಮುಗಿಲವೈಖರಿ ಕನಸಿ ।
ಸುರುತರದ ಭೋಗಪ್ರೂಗಂ ಪುರಂದರಜಾಲದಿಂಪವಗ್ರಹದ ಸೊಂಪು ॥
ನಿರುತಮೆನ್ನುತ ನಚ್ಚಿ ನೀಚಸುಖಗಳ ಮಚ್ಚಿ ।
ಮರುಳಬುದ್ಧಿಯು ಮೆಚ್ಚಿ ಮರುಗಿ ಪಲ್ಗಳ ಬಿಚ್ಚಿ ।
ನರಳುವರು ಸಂಸಾರಘೋರಾಟವಿಯು ಕಳೆವುಪಾಯಮೊಂದಂ ತಿಳಿಯದೆ ॥ (18)

ಬಿಳಿಗಲ್ಲಪುಡಿಯು ಮೊಸರೋಗರಮೆನುತ್ತೆ ಪ್ರಿಯು ।
ದಳಿಮಂಡು ಪ್ರಾಣಗಳ ಬಿಡುವ ಹರುಕನ ತೆರದೊ ।
ಛಳಿಯೊಳಗೆ ಸಂಸಾರಸುಖ ನಿತ್ಯಮೆಂದೆನುತ ಬಯಲಾಸೆಯಿಂದ ಬಳಲಿ ॥
ಕಳೆಗುಂದಿ ಕಾರ್ಪಣ್ಯಗೊಳುವ ಪಾಮರಜನರ್ ।
ಗಳವೆ ಬೋಧಿಸಲು ತಲೆ ಹುಳಿತ ಸೊಣಗನ ತೆರದಿ ।
ತೊಳಲುವರು ಮುಂಗಾಣದಲೆ ಸಗ್ಗನರಕಗಳ ದೂರಪಂಥಾನವಿಡಿದು ॥ (19)

ಹುಸಿಯೆನಿಪ ಸಂಸಾರ ದಿಟಮೆಂದು ನಂಬಿ ಸಂ ।
ತಸಗೊಂಡು ಹಿಗ್ಗುತಿರೆ ಜನನಮರಣಾದಿಗಳ ।
ಹಸರ ಹೋಗದು ಸಕಲ ಶಾಸ್ತ್ರಂಗಳೋದಿನಿಂದುಪಕಾರ ಮಿನಿತಾಗದು ॥
ಸಸಿನೆ ಸದ್ಗುರುಚರಣಗಳ ಪಿಡಿದು ಭವರೋಗ ।
ವೆಸರ ಕೆಡಿಸುತ್ತಲಾನಂದದಿಂ ಪ್ರಾರಬ್ಧ ।
ದೆಸಕಮನ್ನುಂಡುಂಡು ಸುಖದೊಳಪ್ಪುದೆ ಬುದ್ಧಿ ಪರದ ಪಂಥಾನವನಘು ॥ (20)

ಮರುತ ಮನ ಬಿಂದುಗಳ್ ಮುಖ್ಯಮಾಗಿದೇಹ ।
ದಿರವೆನಿಸಿ ಪೊರಗೊಳಗೆ ಬಾಧಿಸುವ ಪದರಿಂದ ।
ಮರುತಾದಿಗಳ್ ಜೈಸಿದಾತ ಭವಬಂಧಗಳ ನೆಗ್ಗೊತ್ತಿ ಸುಖದೊಳರ್ಪಂ ॥
ಬರಿದೆ ವೇದಾಂತವಾಕ್ಯಗಳಾಶೆಯಿಂ ಬಳಲ ।
ಲರುಗುವದೆ ಮಾಯೆ ಮಾತಿನ ಮುಕ್ತಿಯಾನಂದ ।
ಕರಮೆನಿಸದಾರ್ಗಗೆ ಮೊದಲಿವಂ ಗೆಲವೇಳ್ಕು ಮುಕ್ತಿಯಂ ಕಾಂಕ್ಷಿಸುವರು ॥ (21)

ಪಿಡಿದು ಮೂಲಾಧಾರದಿಂದ ಲಾಕಿಣಿಗಂಟು ।
ತೊಡನೆ ಪ್ರತ್ಯಂಗಗಳ ಶೋಧಿಸುತ ಸಂಚಲಿಸಿ ।
ಒಡವಖಿಲವ್ಯಾಪಿಯೆಂದೆನಿಸಿ ಕರಣಂಗಳಂ ಸಾಧ್ಯಸಾರ್ಥಗಳ ಮಾಡಿ ॥
ತೊಡರಿ ಸಂಚರಣೋದನಭ್ರಮಣೆಯಂ ಗಗನ ।
ಕಡೆಯದಾಕುಂಚನದಲೆನಿಪ ಕಮಲಗಳಿಂದ ।
ಲಡಿಗಡಿಗೆ ವೈಕಾರಗೊಳಪುದನಿಲನ ಕೃತ್ಯ ಸತ್ಯ ಜೀವರ ಸಂತೆಗೆ ॥ (22)

ದೆರೆದಂತೆ ವೈಮುಖವ ಬೆಬ್ಬುರಿಸಿ ಪಲ್ಗಿರಿವ ।
ಮರದಂತಿರುವನೊಮ್ಮೆ ಪರಿದು ಬೆಚ್ಚುತಲಿರುವ ।
ತರತರಿಸುವಂ ಪಾರಿ ಬೀಗಿ ತೊಡೆವರೆಗುಟ್ಟು ನಗುವ ನರ್ತನವೆಸಗುವಂ ॥
ಪರಿದು ಕರಿಕರಿಗುಟ್ಟಿ ಕಣ್ಮುಟುತಾಕಳಿಸಿ ।
ಮರುಕೆಸುತ ಮುಸುಡಿನೊಳ್ ತೂಕಡಿಸುತೊಲಿದಾಡಿ ।
ಪರಿಪರಿಯ ಚೇಷ್ಟೆಗಳ ತೋರುವಂ ಮಾರುತನ ಬಲವಶಂವದತೆಯಿಂದೆ ॥ (23)

ಪಸರಿಸುತ ರಸ ರುಧಿರ ವಸೆ ಕುಂಡಪುಲಗಳಂ ।
ಸಸಿನೆ ಪೋಷಿಸುತ ದಶವೃತ್ತಿಯುಸ್ನಾಂತ್ರು ನರ ।
ಪಶುಸುರಾಸುರಮೂರ್ತಿ ಪಾಂಚಾಲಿಕೆಗಳ ಬಿಡದನುದಿನದಿ ಕುಣಿದಾಡಿಸಿ ॥
ಹಸನೆ ರೋದನ ಸ್ವಪ್ನ ವೈಭವಂಗಳ ತೋರಿ ।
ಮಿಸುಕಲೀಯದೆ ತನ್ನ ವಶವರ್ತಿಗೈದು ಭಂ ।
ಗಿಸುವನಿಲನಂ ಪಿಡಿದು ಬಾನೆಡೆಯೊಳಡಲಲ್ಲಿ ಸುಮ್ಮನಹ ಸುಖಮಪ್ಪುದು ॥ (24)

ಮನವೆನಿಪಶಾರ್ದೂಲ ಬಹುವಿಧ ಪ್ರಕೃತಿಗಳ ।
ಬನಗಳೊಳಗಾವರಿಸಿ ಮಾನವ ಮೂರ್ಛಾಜಡತೆ ।
ನೆನಹು ಮರವೆ ವಿಕಾರವೆನಿಪ್ಪೈದು ಚೇಷ್ಟೆಗಳಲಖಿಳದೇವಾಸುರರನು ॥
ಜನಕೆ ನಾನಾಪರಿಯು ಕುಣಿಸಿ ಕೂಗಿಸಿ ಕೆಡಹಿ ।
ಕೆನಿಸು ಭ್ರಾಂತಿ ವಿಕಾರಿ ಎನಿಸುತಂ ಮುರಿಮುರಿದು ।
ತಿನುತಿಹುದುಖಾಯುಸಾಸಿರಗಳೆಸಗಲು ಸಿಲುಕದಳಲಿಪುದದೇನೆಂಬೆನು ॥ (25)

ಯೋಗಿಗಳ ತಪದಿಂದ ಕೆಲಸಾರ್ಚೆ ವೈಸಿಕವಿ ।
ರಾಗಿಗಳ ಧ್ಯಾನದಿಂ ಪರೆದೆಗೆದು ಬಿಸುಟಾಗ ।
ಲಾಗವಿಾಕರಶ್ರಿಯಾಭ್ರಂಶವೆನಿಸುತ ತತ್ವವಿದರ ಚಾಪಣೆಯು ಕಳೆದು ॥
ಬೀಗಿಸಿ ಸಮಾಧಿಯುಂ ಮೌನಿಗಳ ಶುನಿಯಂತೆ ।
ಕೂಗಿಪ್ಪುದು ಮನವೊಂದೆ ಪದುಳದಿಂದೊಳಗಿರಲು ।
ಭೋಗಿಯುಹ ಪೊರಸೂಸೆ ಬಾಹ್ಯನಹ ಸುಖದುಃಖ ಕಾರಣಂ ಚಿತ್ರಮಲ್ತೆ ॥ (26)

ಪಲಲ ಮೇದೋಮಜ್ಜ ರಕ್ತಶಲ್ಯಾದಿಗಳ ।
ತೊಲಿದು ವ್ಯಾಪಿಸಿ ಭುಕ್ತಮಾದ ಷಡ್ರಸದಿಂದ ।
ಬಲಿದು ಸರ್ವಪ್ರಾಣಿಗಳ ದೇಹಕಾರಣತೆಯಾಂತು ಮನದಾಸೆವಿಡಿದು ॥
ಕುಲಫಲಂಗಳು ಸಾಧ್ವಸಾಧುಕೃತ್ಯಂಗಳುರು ।
ಕಲನೆಯುಂ ಬಿಟ್ಟು ಚಾಪಲ್ಯದಿಂ ತೊಳಲಿಪ್ಪುದು ।
ಲಲನಾನುರಾಗದಿಂದಿರುವೆ ಬಿದಿಪರಿಯಂತಲಾಬಿಂದು ವಿಚ್ಛರಿಯನೆ ॥ (27)

ಪಸಿವುತೃಷೆನಿದ್ರೆಗಳು ಮಸುಸಮುದ್ಭವ ಮದುವೆ ।
ಸಸಿನೆತನ್ನೊಳಗಿರಕ್ಕೇನೊಂದ ಮೆಲುವಲ್ಲಿ ।
ರಸನೆಯುಂ ವರ್ಜಿಸುವರಳವಲ್ಲಮದರಿಂದ ಕೊಂಡುದಂ ಗುಹ್ಯಕೆತ್ತು ॥
ಬಿಸಜಾಕ್ಷಿಯಾಸ್ನರಸಿ ಬೆರಸಿ ಕಾಮಾಂಧತೆಯು ।
ಹಸರದೊಳು ಮುಳುಗಿಸುತ ಪುಸಿಯು ಸುಖದಿಂ ತನುವ ।
ನಸಿವಂತೆ ಮಾಳ್ಪುದೀ ಬಿಂದು ಮುಲ್ಲೋಕಜನರಂದಮಂ ಕೆಡಿಸುತನಘ ॥ (28)

ಬಿಂದು ನಿಲೆ ತನುವಿನೊಳಗಾವನಾದರು ಮೃತಿಯು ।
ಪೊಂದುವನೆ ತರುಣಿಸುತಸಾರ್ಭಟೆಯು ಗಣನೆಗಂ ।
ತಂದಪನೆ ಶೈಥಿಲ್ಯಮಾಂತಪನೆ ಸಗ್ಗಿಗರ ಸಾತ್ವಿಕವನುಂಬಗವನೆ ॥
ಬಿಂದು ನಿಲಲಾನಂದಕಂದನಹ ಚಲಿಸಿದಡೆ ।
ದಂದುಗದ ಭವಬಂಧ ಬಿಡದಲೆವುದದರಿಂದ ।
ಮುಂದರಿತು ತಡೆದರೆಯು ಸಾಖ್ಯಹಸ್ತಾಮಲಕ ಮೆನೆ ಸುಲಭಮಹುದು ತನಯ ॥ (29)

ಮನೆದ ನೆನೆಹೇ ಮದನ ಪುಂಬರಿವ ಪವಮಾನ ।
ನನುವೆ ಶಮ ಮೋಹಕಂಗೊಳಪ ಧೃತಿಯೇ ಮಾಯೆ ।
ಮನಹುರುತ ಬಿಂದುಗಳ ಮೊದಲರಿದು ಸಾಧಿಸಲು ಸುಲಭದಿಂ ಮುಕುತಿಯಹುದು॥
ಮನಸಿನಿಂದಾಧಿಕ್ಯ ಮನುಮಥನೆ ಪವಮಾನ ।
ಕಿನಿಸಿಂದ ಸಮವರ್ತಿಗಧಿಕನೇಂ ಬಿಂದುವಿಂ ।
ಘನವೆ ಮಾಯಾಂಗನೆ ಮದಾಂಧತೆಯನುಳಿದಿವಂ ತಿಳಿದು ಪಿಡಿ ಸುಖಮಪ್ಪುದು॥
ಸ್ಥೂಲತನುವೇ ಬಿಂದು ಸೂಕ್ಷ್ಮವೆ ಜಗತ್ಪ್ರಾಣ । [(30)
ಮೇಲೆ ಮನಕಾರಣಂ ಮುಮ್ಮೂರ್ತಿಗಳ ಪಿಡಿದು ।
ಕೀಲಿಸಲುಪಾಯದಿಂ ಕನ್ನಡಿಯ ಪಿಡಿದಂತೆ ಕಾಣ್ಬಡುವದತಿವಿಭವದಿ ॥
ಶೀಲಗುರುಮೌನಿಗಳು ಸಿಲ್ಕಿ ಸಂದೆಗದಿಂದ ।
ಪೋಲಾದರೀ ಮರುತ ಮನಬಿಂದುಗಳ ಕುಹಕ ।
ಜಾಲದಿಂ ಕಂಗೆಟ್ಟು ಮುಂದರಿಯದೆನಿತೆನಿತು ತೊಳಲಿದರ್ ಲೋಕದೊಳಗೆ ॥ (31)
ಪಿಡಿದು ಮೂಲಾಧಾರಬಂಧಬಲದಿಂ ಮೇಲ ।
ಕಡರಿಸಿ ಮರುತ್ತನಂ ನಡುನಾಳದೊಳ್ ಪೊಗಿಸಿ ।
ತೊಡರಿಸುತಲಕ್ಷರದ್ವಯದಿಂದ ಬಂಧಿಸಲು ಚಲಿಸಲಮ್ಮದೆ ಗಗನದಿ ॥
ಎಡೆಯಾಡುವದನುಳಿದು ಪದುಳದಿಂದಿರೆ ಮನಂ ।
ಮಿಡುಕದಿಪ್ಪುದು ಬಿಂದು ವಲ್ಲಾಡದಿರೆ ಹರ್ಷ ।
ವಿಡಿದು ಬಿಡುಗಣ್ಣವರಧಿಕ್ಕರಿಪನಾನಂದ ಸೌಖ್ಯನಿಂ ಗಣನೆಗೊಳದೆ ॥ (32)
ಕಡೆಗೊಳಿಸಿ ಕಾಮಮಂ ಕಡಹಿ ಕಿನಿಸಂ ಭರದೊ ।
ಳಡಹಿ ಲೋಭವ ನೈದೆ ಕಡಿದು ಮೋಹದ ಬಲೆಯ ।
ನೊಡನೆ ಮದವಂ ತರಿದು ಬಡಿದು ಮಾತ್ಸರದಂಭದೆಡರುಗಳ ಗಡಣಗಳನು ॥
ಕಡುಮಮತೆಯಂ ಬಿಟ್ಟು ಪಿಡಿದು ಶಾಂತಿಯ ನತುಳ ।
ದೃಢತರದೆ ದಾಂತಿಯಂ ತುಡುಕಿ ಸದ್ಭಕ್ತಿಯಂ ।
ಬಿಡದೆ ರುತ ತತ್ವಗಳ ನೊಡ(ಲೊ)ಳಂ ಮಡಗುತಂ ಪಡೆ ಮುಕ್ತಿಯಂ ಬಾಲಕ ॥ (33)
ನಸುಗೆಂಪು ನಾಲ್ದಳಂ ವಸುಧೆಯುರುತರಗಂಧ ।
ವಶಷಸ ಚತುರ್ವರ್ಣ ಚತುರಮುಖನಿಹ ತಾಣ ।
ಬಿಸಜಮಂ ಬಲಿದು ಮರುದಾಕುಂಚನಂಗೈದು ಮೂಲಾಗ್ನಿವಿಡಿಯಲಿಮುಪ್ಪು ॥
ಪೊಸತೆನಿಪ ಷಡ್ದಳಂ ಶಿತವರ್ಣವಾರಿಯುತ ।
ರಸಭರಿತ ಬಭಮಯರಲಾಕ್ಷರ ಸ್ಥಲವನುಂ ।
ಬಸದೋರದೋಲ್ ಬಿಂದುವಂ ಕೊಂಡು ಮೇಲಕ್ಕಡರುವದೆ ನಿಯಮವನಘ॥(34)
ರನ್ನಮಯ ಪತ್ತುದಳ ಡಢಣತಥದಧನಪಫ ।
ವೆನ್ನುವಕ್ಕರರುದ್ರನಿಲಯ ದಗ್ನಿಯ ಬಲಿದು ।
ಚೆನ್ನಾಗಿ ಮರುತನಂ ಕುಂಭಿಸುವುದದನೋಡಲಾಸನವೆನಿಪ್ಪುದಣುಗ ॥
ಪನ್ನೆರಡು ದಳ ಕ ಖ ಗ ಘ ಙ ಚ ಛ ಜ ಝ ಞ ಟ ಠ ಗ ।
ಳೆನ್ನು ವಕ್ಕರ ವೀರನೆಲೆ ಕೃಷ್ಣವರ್ಣಚಲ ।
ನುನ್ನತಸ್ಥಾನದೊಳು ಪೂರಕದೊಳರುತಿಹುದೆ ಕೇಳು ಪ್ರಾಣಾಯಾಮವು ॥ (35)

ಪದಿನಾರುದಳದ ಪುಷ್ಕರರೂಪ ಶಬ್ದಮಯ ।
ಪುದಿದ ಸ್ವರವರ್ಣಂ ಸದಾಶಿವನ ಮಂದಿರವ ।
ನೊದಗಿ ಸಂಕೋಚಿಸಲ್ ತದಿಲಾಕ್ಷವಶತೆಯುಹುದದುವೆ ಪ್ರತ್ಯಾಹಾರವು ॥
ಉದಯಾಸ್ತಮಯಗಳುಂ ಪೋಗದಿಹ ಚಿದದ್ವಯದ ।
ಸದನವೆರೆದಕ್ಕರಾತ್ಮಕನಾಗಿ ರಾಜಿಸುವ ।
ಸದಮಲದ ತೇಜಮಂ ಒಡದೆ ನಿಚ್ಚಸುವುದದು ಧ್ಯಾನಾಂಗಮಪ್ಪುದಣುಗ ॥ (36)
ಸಾಸಿರದಳಗಳಂದೆಸೆವ ಸರಸೀರುಹಾ ।
ವಾಸವಾಗಿಹ ಸಸಿಯಲೊಸರುವಮೃತವನುಂ ವಿ ।
ಳಾಸದಿಂದುಂಡುಂಡು ಬೆರೆ ಸಾರದಿಹುದದುವೆ ಸುಖಮಯದ ದಾರುಣಮದು ॥
ಭಾಸುರದೊಳೀರೆಂಟು ಬೆರಳ ಪ್ರಮಾಣದಿನಿಂ ।
ಭಾಸಿಪ ಶಿಖಾಂತವೆಳಗಂ ನಾರಿ ಕಪ್ಪುರದ ।
ರಾಸಿಯುರಿಗೊಂಡಂತೆ ಚಿತ್ಸ್ವರೂಪದೊಳೀರ್ಪುದದು ಸಮಾಧ್ಯಂಗ ತನಯ ॥ (37)
ಯಮನ ಜಯ ಭಯ ಚಿಂತೆ ಪಸಿವು ಹುಸಿಣತ್ತೆ ನಿದ್ರೆ ।
ಹಿಮ ತೃಷ್ಣೆ ಭ್ರಮಣೆ ಮೊದಲಾದವುಂ ವಶವಹವು ।
ಶಮೆ ದಮೆ ತಿತಿಕ್ಷೆ ಧೈರ್ಯ ಸ್ಥೈರ್ಯ ನಿಸ್ಪೃಹತೆ ಶಾಂತಿಗಳ್ ಬಹವು ಯಮದೆ॥
ಪ್ರಮಾದ ಗುರುಸೇವೆ ಪರಪುರುಷಾರ್ಥಪರರ ಸ್ತ್ರೀ ।
ವಿಮುಖತೆ ಹಿತಾಹಿತದ ಚಿಂತೆ ನಾಮಸ್ಮರಣೆ ।
ವಿಮಲಮತಿ ಕಾಂತಸರ್ವಭೂತಸಮಾನಬುದ್ಧಿ ನಿಯಮದಲೆ ಬಹುದು ॥ (38)
ಜಲಜಭವ ಮೊದಲಾದರೆಲ್ಲರಂ ನೆರೆ ಪಿಡಿದ ।
ಪೊಲಬಿಗಡರಿಸಿ ತನುವ ಬಂಧಿಸಲ್ಕಾಸನದಿ ।
ನಿಲಲಗ್ನಿಯೂರ್ಧ್ವಮುಖಮಾಗಿ ಮಾರ್ಗದ ಮಲವ ಹರಿವುದಾಸನದ ಫಲವು ॥
ಬಲಿದೆಡದ ಮಡನ ಗುದದೆಡೆಯ ಬಲಮಡವನುಂ ।
ಬಲಿದು ಮೇಹನದೂರ್ಧ್ವದಲ್ಲಿಟ್ಟು ದೃಢಗೈದು ।
ಲುಲಿವು ರಿದ ಸಿದ್ಧಾಸನಂ ಮಹಾಸಿದ್ಧಿಕರ ಪರಮೋದಕರಮೆನತಲಿ ॥ (39)
ಇಂತತ್ರೀವ ರಹಸ್ಯತರದರ್ಥಮಂ ಮನದ ।
ಲಾಂತು ವಿಜನಸ್ಥಾನದಲಿ ಕುಳಿತು ತನ್ನೊಳಗೆ ।
ಚಿಂತಿಸುತ ಗುದ ಲಿಂಗ ನಾಭಿ ಹೃದಯಂ ಕಂಠಭ್ರೂಮಧ್ಯ ಶಿರಶಿಖೆಗಳ ॥
ಪಂತಿಯೊಳುಪಾಯದಿಂದಭ್ಯಾಸಬಲದಿಂದ ।
ಸ್ವಾಂತಮನ್ನಿಲಿಸಲಾನಂದವಶಮಹುದಲ್ಲ ।
ದಂತರದ ಕರ್ಮಗಳ ಪಿಡಿದು ತೊಳಲಲುಭವದ ಸಂತೆ ತಾ ಪಾರ ಮಣುಗ ॥(40)
ಖಳರ ಸಂಗವನುಳಿದು ತಿಳಿದು ಗುರುಮುಖದಿಂದ ।
ತಳೆದು ಮನದೊಳು ದಿವ್ಯಮೂರ್ತಿಯಂ ಸನ್ನಿಯೊಳು ।
ಪೊಳೆವ ಕನಕದ ವರ್ಣ ಭೂಮಿಯೊಳು ಮಾಣಿಕ್ಯಸಿರಿಯನುಂ ಬಳಸಿಕೊಂಡು ॥
ಬೆಳಗುವ ದಿವಾಕರನ ಕಾಂತ್ರಿಯುನ್ನುಚ್ಚಳಿಸಿ ।
ಥಳಥಳಪ ತೇಜದಿಂ ಪೊಂದಿ ಮತ್ತಗಲದಲೆ ।
ಬೆಳಗಿನೊಳ್ ಬೆಳಗೆನಿಸಿ ಹಾರೈಸದೊಂದನುಂ ಸುಖವ ನನುಭವಿಸು ತನಯ ॥ (41)

ಅರಿಶಂಖಲಾಂಛನಂ ವರದಾಭಯಪ್ರದಮು ।
ಕರಗಳಿಂದೆಡವಂಕದೊಳಗಾಂತ ಲಕುಮಿಯುಂ ।
ಮಿರುಮಿರುಪ ಮಣಿಮಕುಟಕರ್ಣಕುಂಡಲಹಾರಪದಕದಿವ್ಯಾಂಬರಗಳಂ ॥
ಮೆರೆವ ಶ್ರೀಹರಿಯ ಚಿನ್ಮೂರ್ತಿಯಂ ಮಾನಸದ ।
ಲಿರಿಸಿ ಮನದಿಚ್ಛೆಗಳದಲ್ಲಲ್ಲಿ ಸಂಚರಿಸ ।
ಲಿರದೆ ಭಾವಿಸುತಿರೆ ಪ್ರಪಂಚಂ ತದಾಕೃತಿಯೊಳಾಗಿ ತೋರ್ಪುದು ಬಾಲಕ ॥ (42)

ಎಲುಮಯದ ಪಂಜರವ ಚೇತನದ ಮಂದಿರವ ।
ಚೆಲುವಗೋಲ್ಲಾಟಸಿತಕಮಲ ಮರುತಂ ಸತತ ।
ಚಲಿಪ ಜಾತಿಯ ಪುತ್ಥಳಿಯ ದಿವ್ಯಸುಧೆಯಿಂದೆ ಕಲೆತಂತೆ ಕಲೆತು ಬರುವ ॥
ಪಲಬಗೆಯ ಮಿಂಚುಗಳ ತ್ರಿಥಿರಾತ್ರಗಳಗೆ . . . . ?।
ಯಿಲ್ಲದಿರುಳು ಪಗಲಂಟದಿಹ ತಾಣಮಂ . . . . ?।
ಸುಲಭದಿಂ ಸಾಧಿಸುವುದೆಡೆವಿಡದೆ ಮರೆದಿರದೆ ಮನಮಂ ತದಾತ್ಮನೆನಿಸಿ ॥ (43)

ಕ್ಷಿತಿಯ ಜಲದೊಳ್ ಕಲೆಸಿ ಕ್ಷಿತಿಜಲಗಳಗ್ನಿಯೊಳು ।
ಹುತವಹನ ಮರುತನೊಳ್ ಬೆರಸುತಾಗಸಕ್ಕೈದೆ ।
ಸತತಗತಿ ಚಲಿಸದಿಹನಲ್ಲಿ ಮಣಿಗಿರಿಯೊತ್ತಿಲತಿಶಯದ ಕಾಂತಿಯುತ್ತದ ॥
ಕ್ಷಿತಿಯೊಳಗಖಂಡತೇಜಃಪೀಠದೊಳಗಬ್ಧಿ ।
ಸುತೆಯುರಸನನ್ನಿಟ್ಟು ಶಾಂತಿಕುಸುಮಗಳಿಂದ ।
ಮತಿಯೊಳರ್ಚಿಸರಿವಿನುರುಳ ನೀನೆಂದೆನಿಸಿ ಬೆಳಗುತಿಹೆ ಬೆಳಗೆನಿಸುತ ॥ (44)

ಜಾಲನಂ ಮೋಹನಗಳಿಂದ ನಿಡಿದೆನಿಸಿರ್ಪ ।
ನಾಲಿಗೆಯ ವಿಪರೀತಗತಿಯಿಂದ ಪೊಗಿಸುತಂ ।
ತಾಲುವನ್ನಂಟುತ ಚಿದಾಕಾಶದೊಳು ತೋರ್ಪ ಸುಖಕರಸುಧಾಸೂತಿಯಿಂ ॥
ಲಾಲಿಸಲ್ಕಮೃತರಸ ಸೋಲಿಟ್ಟು ಬರುವುದದ ।
ಸೋಲದುಂಡುಂಡು ಸಂತಸಗೊಂಡು ಹರುಷದಿಂ ।
ಬಾಲಕ ಜರಾಮರಣಗಳ ಜರೆದು ಮಾನಸವ ಪಂಧು ಸುಖಮಿಹುದು ಬೆರೆದು ॥ (45)

ಪ್ರಣಮಮಯಶಂಕಿನಿಯು ಸೂಕ್ಷ್ಮವಹ ಕುಂಡಲಿಯು ।
ನಣುರೂಪಚಕ್ರಗಳ ದಂಡದಂಡಾಂಕುರಗ ।
ಳಣಿಮಾದಿಗಳನೀವ ನೀವಾರಶೂಕದಂತಿಹ ಸುಷುಮ್ನೆಯು ಕಂದಮಂ ॥
ಮಣಿದಿರ್ಪ ಪದ್ಮಮಂ ಮಗುಳೆ ದಹರಾಭ್ರಮಂ ।
ತಣಿವುದನುದಿನ ನೋಡಿ ಬಾಡಿಸುತಲಿರೆ ಗಗನ ।
ಮಣಿಸುಧಾಸೂತಿಗಳನತಿಗಳೆವ ಬೆಳಗಿನೊಳ್ ಬೆಳಗೆನಿಸಿ ತೋರ್ಪ ತನಯ ॥ (46)

ರನ್ನಗಿರಿಗಳ ಬಚ್ಚರದ ಮೊರಡಿಗಳ ಚೆಲುವ ।
ಪೊನ್ನಗಿರಿಗಳ ಕಾವ್ಯಶೈಲ ಕುಲಪರ್ವತಗ ।
ಳನ್ನು ತುಡುಕುತ ಚಿಣಿ ಚಿಣೀ ಚಿಣಿಯು ಘಂಟಿಕಾಶಂಖಮುದ್ದಳೆತಾಳೆವ ॥
ಮುನ್ನೆಲನುಸರಿಪ ಭೇರಿಯು ತಂತಿ ಮೇಘಸರ ।
ಮುನ್ನಡೆಸು ನಾದಗಳ ಭಾವಿಸುತ ಮರೆಯದಿರ ।
ಲನ್ನೆಗಂ ಸುಖದ ಸುಗ್ಗಿಯ ಸೂರೆಗೊಂಡೆ ಯಿದ ನಂಬಿ ನೀನೆಸಗು ತನಯ ॥ (47)

ನಾಡಿಗಳ ದ್ವಾರಗಳ ಕುಟಿಲರುಜು ಕೇರಿಗಳ ।
ಕೂಡೆ ಮರುತ್ತಂಗಳಂ ಧಾತುಗಳ್ ಪಟಲಗಳ ।
ಬೋಡೆ ತಾಕೇಮುಖವ ಸಂಧಿಗಳ ಮೇರುಗಿರಿ ವರ್ಣಗಳ್ ಸೇರುವೆಗಳ ॥
ನೋಡುತಿರೆ ಸಮವಿಷಮಗಳ ಪುಷ್ಪವೃಷ್ಟಿಗಳ ।
ನೀಡುತಿಹ ಸುರರ ದುಂದುಭಿ ದಿವ್ಯವಾದ್ಯಗಳ ।
ಕೂಡೆ ಸಂಚರಿಸುತಿಹ ಸರ್ವಭೂತಗಳಂ ಸತತ ಭಾವಿಸು ಬಾಲಕ ॥ (48)

ಸರಸದಸುಪ್ರೋಷ್ಟಿಕವ ಶೋಷ್ಟಿಕವಸೀತಳವ ।
ಕರಿಕರಂ ಭಸ್ತ್ರಿಕಾ ಮಟ ಸಮುದ್ಧರಣಿಯಂ ।
ಸುರುಚಿರದ ಕರ್ಕರಿಯು ಶಾಂಕರಿಯು ಭಕ್ಷಿಣಿಯು ವಿಭ್ರಮಗಳನ್ನು ಪಿಡಿದು ॥
ತರಹರಿಸಿ ರೇಚಕಂ ಪೂರಕಂ ಕುಂಭಕದಿ ।
ಬೆರೆದು ಶರಸಂತ್ರಾಟ ಭುಜಗಿಯು ಪಿಪೀಲಿಕಾ ।
ಸರಣಿಯಾಕುಂಚನದಿ ಕುಂಚನವೆನಿಪ್ಪವಂ ಮರೆಯದಿರು ಮನದಿ ತನಯ ॥ (49)

ಎನಿತು ಪೇಳುವುದೇನು ತನಯ ನಿನ್ನೊಳು ನೀನೆ ।
ಮನದೊಳಾಳೋಚಿಸಲು ಕೊನೆಯೊಳಗೆ ಮಿನುಗುತಿಹ ।
ಘನತೇಜ ವಶಮಹುದು ಕರದೊಳಹ ವ್ರಣಿಕೆನ್ನು ಕನ್ನಡಿಯನರಸಲೇಕೆ ॥
ಜನರ ಬೆಸಗೊಳಲೇನು ಜನನಾದಿ ಕರ್ಮಗಳ ।
ಕೊನೆಗಾಣಿಸುವರೆ ಕೋಟಲೆಗಳಂ ಬಿಡಿಸುವರೆ ।
ಬಿನದಗಳ ನೆನೆಯದಾಂ ಪೇಳ್ದಂತೆ ಗೋಪನದೊಳರಿದು ಸುಖಿಯಾಗು ತನಯ ॥ (50)

ರಾಗವು ವಿರಾಗಂಗಳಲ್ಲದೆ ಹಿತಾಹಿತಗ ।
ಳಾಗು ಹೋಗುಗಳರಿವ ವೆಚ್ಚರಿಕೆಯಿಾ ಲೋಕ ।
ಭೋಗಮೋಹ ಭ್ರಮೆಂಬುದೆ ಕನಸು ಕನಸಿನವಿಮರ್ಶವಂಕಳೆದು ಬರೆದ ॥
ಭಾಗೆಯಂತಿರೆ ನಿದ್ರೆಯಾತ್ರಮವನುಳದು ನಿಜ ।
ವಾಗಿರುವುದೇ ತುರ್ಯ ಮದ ಮರೆದು ಚಂದ್ರಿಕಾ ।
ಭೋಗ ತುರ್ಯಾತೀತ ಮಹುದು ಪಂಚಾವಸ್ಥೆಗಳು ಯೋಗಿಜನಕಣುಗನೆ ॥ (51)

ಭ್ರಮೆಗೊಂಡು ಕೋಟಲೆಯನನುಭವಿಪ ವರ್ಣಸಂ ।
ಕ್ರಮ ಕರ್ಮ ಕಾಲಗಳ ಕಳೆದಖಂಡಾನಂದ ।
ವಿಮಲಬೋಧಾಮೃತವ ಗುರುವಚನದಿಂದುಂಡು ಜನನಮರಣಗಳ ಕಳೆದು ॥
ಸುಮನಸರ ಪದಕೆ ಪದವೆನಿಪ ಶ್ರೀರಾಮಪುರ ।
ದಮಲ ಸದ್ಬ್ರಹ್ಮಾಹಮಸ್ಮೀತಿ ಯೆನುತ ಸಂ ।
ಭ್ರಮದಿಂದ ಪ್ರಾರಬ್ಧಮುಳ್ಳನಕ ಸಂಚರಿಸುತುತ್ತರಿಸು ಭವಜಲಧಿಯಂ ॥ (52)

(ಸಂಧಿ 35 ಪದ 1585)

ಮೂವತ್ತಾರನೆಯ ಸಂಧಿ

ಸೂಚನೆ ॥ ಬ್ರಹ್ಮಣ್ಯ ದೇವನೆಂದೆಂಬ ಬಿರುದನು ಮೆರೆಯೆ ।
ಬ್ರಹ್ಮ ಋಷಿಗಳ ನುಡಿಯ ಪ್ರತಿಕರಿಸುತೊಡಗೊಂಡು ।
ಬ್ರಹ್ಮಲೋಕೋಪಮಿತಮೆನಿಪತ್ರಿಯಾಶ್ರಮದೊಳಿರ್ದ ರಘುನಾಥನೊಲಿದು ॥

ಸಾದರದಿ ಲಕ್ಷ್ಮಣಂಗೆ ಪರತತ್ವದಿರವನುಂ ।
ಬೋಧಿಸಿ ನಿಜಾನಂದಮಯನೆನಿಸೆ ರಘುವರನ ।
ಪಾದಂಗಳಿಗೆ ಮಣಿದು ಪದುಳದಿಂ ಕೆಲಸಾರಿ ಭಾವಭಕ್ತಿಯೊಳಿರಲ್ಕೆ ॥
ಮೇದಿನೀಸುತೆಸಹಿತ ಯೋಗಮಾಯಾಕಲಿತ ।
ಮಾಧವಂ ಮಂದಿರದಿ ಮಂಡಿಸಿರಲತ್ತಂ ವಿ ।
ನೋದದಿಂ ನೆರದ ಮುನಿವರರೆಲ್ಲ ನೋಡುತ್ತ ಸಲ್ಲಾಪಗೈದರಗಣಿ ॥ (1)

ಮೆಲ್ಲನಲ್ಲಲ್ಲಿ ತಮ್ಮೊಳ್ ತಾವೆ ಮಾತುಗಳೆ ।
ನೊಲ್ಲಿಸುತಲಿರ್ಪ ತಾಪಸರ ಪರಿಯನ್ನೋಡಿ ।
ಮುಲ್ಲೋಕವಲ್ಲಭಂ ರಘುವರಂ ತನ್ನೊಳಗೆ ತಾನೆ ಚಿಂತಿಸಿ ಬೇಗದಿ ॥
ಬಲ್ಲವರ ಬೆಸಗೊಂಡನೇಂ ಕಾರಣಂ ಮುನಿಗ ।
ಳೆಲ್ಲರೊಂದೆಡೆಯಲ್ಲಿ ಕುಳಿತು ಯೋಚನೆಗೈದು ।
ಸಲ್ಲಲಿತದನುಲಾಪಕೆಳೆಸಿರ್ಪ್ರದಾರಿಂದಲಪರಾಧ ಮೆಸಗಿತೆನುತ ॥ (2)

ವಿನಯಪರ ಲಕ್ಷ್ಮಣಂ ಮುನಿಗಳುಪಚರಣೆಯಲಿ ।
ಮನವನೊಂಚಿಸದನೋ ಧರಣಿ ಸುತೆಯಿಂದೇನು ।
ಜನಿಸಿಹುದೊ ನಿಷ್ಠುರಂ ಮತ್ತೆನ್ನ ದೆಸೆಯಿಂದ ಲಪರಾಧಮೇಂ ಘಟಿಸಿತೊ ॥
ಇನಿತು ಜನರೊಂದೆಡೆಯ ಕೂಡಿ ನುಡಿವುದ ನೋಡೆ ।
ಕೆನಿಸೆಂದು ಭೀತಿಗೊಳುತಿದೆ ಚಿತ್ತ ಪೇಳ್ವುದೆನು ।
ತನುವಿನಿಂ ಬೆಸಗೊಂಡಡೊರ್ವ ಭೂಸುರವೃದ್ಧ ನಡೆನಡುಗುತಿಂತೆಂದನು ॥ (3)

ಸಕಲಭೂತಾನುಕಂಪಂ ಸರ್ವಜನಭಾಗ್ಯ ।
ನಿಕರದಾತಾರಂ ನಿರೀಹಂ ನಿಜಾನಂದ ।
ಸುಕರರೂಪಂ ನಿನ್ನದೆಸೆಯಿಂದಲೆಮಗೇನುಪಾಧಿ ಸಂಧಿಸುವದರಸ ॥
ಸುಕುಮಾರಚಿತ್ತ ಬುಧನಿಕರಸೇವಿತ ನನುಜ ।
ನಕಳಂಕ ಧರ್ಮದಾಕಾರೆ ಧರಣೀತನುಜೆ ।
ಭಕುತಿಯಿಂದನುದಿನದಿ ಪಾಲಿಸುವರವರಿಂದ ಲಘುಲೇಶ ಜನಿಸದನಘ ॥ (4)

ಕ್ರೂರಕುಲಿಶಸ್ವನ ಕರಾಳಮಾಂಸಾದನರ ।
ಘೋರಘೋರಾಕಾರ ರಕ್ಕಸರ ಬೆರೆಬೆರೆದು ।
ಧಾರಿಣೀಸುರರ ಶಮಧನರನೆಲ್ಲರ ಭೀತಿಗೊಳಿಸಿ ಬಾಧಿಸುತ ತಿನುವ ॥
ಚಾರಣಂಗೈವ ರಾವಣನನುಜ ಖರನೆಂಬ ।
ಘೋರಭೀಷಣರೂಪಮುಳದು ತದ್ವಿಘ್ನಮಂ ।
ತೋರಲಂತಃಕರಣ ಮೊಳಗೆಲ್ಲ ಮುನಿಗಳಂದನುವ ಚಿಂತಿಸುವರನಘ ॥ (5)

ವಿವಿಧರೂಪುಗಳಾಂತು ವಿಧವಿಧದೊಳೈತಂದು ।
ರವದಿಂದ ಸ್ರುಗ್ಭಾಂಡಗಳನಂಗಣದೊಳಿಟ್ಟು ।
ಕಿವಿಗಳಂ ಪಿಡಿದಲುಗಿ ಕೇಕರಿಸುತಗ್ನಿಯೊಳು ಶಾಂತಿಕಲಶಗಳನೊಡೆದು ॥
ಲವಲವಿಕೆಯಿಂ ಸಮಾಧಿಯೊಳಿರ್ದರಂ ತಿಂದು ।
ಜವದಿಂದ ಬಾಧೆಗೊಳಿಪರ್ ದುಷ್ಟರಕ್ಕಸರ್ ।
ಭವದಾಗಮನವಿಡಿದು ಬಾರದಿರದೀತಾಣ ಸುಕ್ಷೇತ್ರಕರಮಪ್ಪುದೆ ॥ (6)

ಈಶೈಲಕತಿದೂರದೊಳಗಿರ್ಪ್ಪವಾಶ್ರಮಾಗ ।
ಳೀಶಫಲ ಪುಷ್ಪಸಂಭರಿತ ತರುಗಣವು ಕೇ ।
ನಾಶಭಯದಿಂದಲ್ಲಿ ನಿಲಲಮ್ಮದೈತಂದು ನಿರತಿಶಯದಾನಂದದಿ ॥
ಪಾಶಹಸ್ತನ ಪೋಲ್ವ ನಿನ್ನನುಗ್ರಹದಿಂದ ।
ಕ್ಲೇಶಭಯ ತೋರದಿರ್ದವು ಮೊದಲನೆಲೆಗಳಾ ।
ವಾಸಕೆಳಸಲ್ ಜನಗಳೆಲ್ಲರಾಲೋಚನಂಗೈವರಲ್ಲಲ್ಲಿ ಮುದದಿ ॥ (7)

ಬಲುರಮ್ಯಕರವಾದ ತಾಣ ಬಾಧಿಪ ಕ್ರೂರ ।
ಬಲಿ ಖರಾಸುರಬಾಧೆ ಬರಲಮ್ಮದೆಂದರಿತು ।
ಸುಲಭದಿಂ ತಮತಮ್ಮ ನೆಲೆಗಳಂಗೈದಲೆಂದಾಲೋಚನಂಗೈವರು ॥
ಜಲಜಾಕ್ಷ ದಿವ್ಯಫಲಪುಷ್ಪದಿವ್ಯೋದಕಂ ।
ಪಲಬಗೆಯ ಕಂದಮೂಲಾದಿಗಳ್ ಸ್ವಾದುತರ ।
ಗೆಲವೀವ ನೆಲೆಯೆನುತ ಸಕಲದೇವತೆಯರುಂ ಪ್ರಾರ್ಥಿಸುವರನುದಿನದೊಳು ॥ (8)

ಮುನಿಗಳುರುವಚನರಚನೆಗಳನಾಲಿಸಿ ಪ್ರಿಯದಿ ।
ಜನನಾಥನೆಲ್ಲರಂ ಸಂತೈಸಿ ನಸುನಗುತ ।
ಮನದೊಳಾಲೋಚಿಸಿದ ಮುಂದಪ್ಪ ಕಜ್ಜಗಳ ದೇವತತಿಹಿತಕರಗಳ ॥
ವನಿತೆ ಲಕ್ಷ್ಮಣರುಗಳನೊಡಗೊಂಡು ಗಿರಿಯನಿಳ ।
ದನುವಿನಿಂ ಬರುತಲಿರಲಾ ತಪೋಧನರೆಲ್ಲ ।
ಘನತರದ ಹರ್ಷದಿಂದೊಡನೆ ಬರುತಿರಲಮರತತಿ ನೋಡಿ ಹಿಗ್ಗುವಂತೆ ॥ (9)

ಮುಂತಡಿಗಳಡುತ ರಘುನಂದನಂ ನಾಲ್ದೆಸೆಯ ।
ಸಂತಸದೊಳಟ್ಟಿಸುತಲಿದು ಭರತ ಬಂದು ತ ।
ನ್ನಂತರಂಗವನುಸಿರ್ದ ತಾಣವಿದು ಮಾತೆಯರ ಕಂಡು ವಂದಿಸಿದ ನೆಲನು ॥
ಸಂತರೊಪ್ಪಿದ ಧರಣಿಯಿದುವೆ ಪಟಗೃಹದ ನೆಲೆ ।
ದಂತಿವಾಜಿಗಳ ಬಂಧಿಸಿದ ಭೂಮಿಯು ಧರಾ ।
ಕಾಂತರುಗಳಿಳಿದ ಧರೆ ಯಿದನುಳಿದು ತೆಂಕದೆಸೆಗೈದವೇಳ್ಕೆನುತ ನುಡಿದಂ ॥ (10)

ಈ ಪರಿಯೊಳೆಲ್ಲಲ್ಲಿ ಮೆಲ್ಲನಿಟ್ಟಿಸುತ ರಘು ।
ದೀಪ ಶಮಧನರೊಡನೆ ಸಲ್ಲಾಪಮೆಸಗುತಂ ।
ನೀಪಮುಖ್ಯಾದಿವನಗಳ ಕಳೆದು ನಡೆತಂದ ನತ್ರಿಮುನಿವರನ ಬನಕೆ ।
ತಾಪೋಪಹರಗೈಯಲರೆನಿಮಿಷ ತರುನೆಳಲ ।
ಲಾ ಪರಮಪುರುಷ ಮಂಡಿಸಿ ಭ್ರಾತ್ರರಿಂ ತಿಳಿಪಿ ।
ಶ್ರೀಪನಿಭ ಮುನಿಪನನುಮತದಿಂದಲೊಳಪೊಕ್ಕು ಭೂಸುರಸಮೂಹದೊಡನೆ ॥ (11)

ನೆಲನನಿಟ್ಟಪ ಕೌತುಕದಿಂದಲೈತಂದಿರ್ಪ ।
ಜಲಜಪೀಠನೊ ಸುರೇಂದ್ರನ ಗುರುವೊ ರಜತಾದ್ರಿ ।
ನಿಲಯನೋ ಲಕುಮಿಯುರಸನೊ ಯೆನಲ್ಕಂಗೊಳಿಪ ದಿವ್ಯವಿಗ್ರಹವ ನೋಡಿ ॥
ಫಲಪುಷ್ಪಭರಿತಶಯದಿಂದಲೈತಂದು ಪದ ।
ಜಲಜಗಳ್ಗಭಿನಮಿಸಿ ನುತಿಸಿ ಕೆಲದೊಳ್ ನಿಲ ।
ಲ್ಕೆಲವಿಂದ ಸೌಮಿತ್ರಿ ವೈದೇಹಿಯರ್ ನಮಿಸಲನ್ನೆಗಂ ರಾಮ ನುಡಿದಂ ॥ (12)

ಪರಮತೇಜೋರಾಶಿ ಪಾವನಸುಮೂರ್ತಿ ತವ ।
ಚರಣದರ್ಶನದಿಂದಲಾಂ ಧನ್ಯನಾದೆ ನಿಜ ।
ಕರುಣದಿಂದೆನ್ನ ಪತ್ರಿಕರಿಸವೇಳ್ಕೆನೆ ಮೌನಿ ನಸುನಗೆಯುಲಿಂತೆಂದನು ॥
ಪರಬೊಮ್ಮ ನೀಂ ಮನುಜಲೀಲೆಗಳನನುಕರಿಸಿ ।
ನರರಾಟ ಕೋಟಲೆಗಳಲಿ ಮೋಹಸಂಗೊಳಿಸಿ ।
ಹರವಿರಿಂಚಾದಿಗಳ ನೇಮಕಂ ಸಿಲುಕದಿಹತತ್ತ್ವಮೆಂದರಿವೆ ಜೀಯ ॥ (13)

ಪಲಕಾಲಯೋಗದಿಂ ಭಜಿಸಲಬ್ಬದ ಭವ ।
ದ್ಬಲದೆ ನೀಂ ಮುಲ್ಲೋಕಘನವಾರ್ತೆಯೆನಗೆ ಕರ ।
ತಲಬದರದಂತೆ ಕಾಣ್ಬಡುವುದದರಿಂದೆನ್ನ ವ್ರತಕೆ ಫಲರೂಪವಾಗಿ ॥
ಕಲಿತಾನುರಾಗದಿಂದೈತಂದೆ ಯೆನುತೆನಗೆ ।
ಪಲಪರಿಯಪೂಜೆಯುಂ ಮಗುಳ್ ಭಕ್ತಿಯೊಳೆರಗಿ ।
ಸುಲಲಿತಾನಂದದಿಂ ನುತಿಗೈದ ರಾಮನಂ ಮುನಿತಿಲಕ ವಿನಯದಿಂದ ॥ (14)

ಯತಿಶಿಖಾಮಣಿ ಮನೋತ್ಸವದಿಂದ ಕುಳ್ಳಿರಿಸಿ ।
ಕ್ಷಿತಿಜಾರಮಣಗರ್ಘ್ಯಪಾದ್ಯಂಗಳಂ ಕೊಡುತ ।
ಲತಿಶಯದೊಳುಪಚರಿಸಿ ಕೃತಕೃತ್ಯನಾದೆ ನಿಜಯೋಗ ಕೈಸಾರ್ತೆನುತ ॥
ಮತಿಯೊಳಾನಂದಿಸುತ ಮತ್ತೆ ರಘುವೀರನೊಳು ।
ಸತಿಯುವಾರ್ತೆಯನು ಪ್ರಸ್ತುತದಿ ವಿಶ್ರುತಗೈದ ।
ಕತಿಪಯದ ಲೌಕಿಕಾಚರಣೆಯಿಂದೆಲ್ಲ ಸಂತೋಷಿಸುವ ತೆರದೊಳೊಲಿದು ॥ (15)

ಪತ್ತುಸಾಸಿರವರುಷ ತಪದಿಂದ ಪ್ರತ್ಯೂಹ ।
ಮೊತ್ತಂಗಳಂ ಪರಿದು ಮಗುಳನಾವೃಷ್ಟಿಯಿಂ ।
ಬಿತ್ತರದ ದುರ್ಭಿಕ್ಷ ಬರಲೆಲ್ಲರಂ ಪೊರೆದು ಜಾಹ್ನವಿಯ ಪೆತ್ತು ಬಳಿಕ ॥
ಪೊತ್ತಿರುಳನೊಂದೆನಿಸಿ ದೇವತಾಕಾರ್ಯಮಂ ।
ಪೊತ್ತೆಸಗಿದನಸೂಯೆ ಧರ್ಮಚಾರಿಣಿ ತಾಪ ।
ಸೋತ್ತಮಿಯು ಗೃಹದೊಳಿಹಳವನಿಜೆಯು ಕಾಣ್ಬಂತೆ ಜವದಿ ಬೆಸನೀವುದೆನುತ ॥

ವೃದ್ಧಳತಿಕೀರ್ತಿಪರಳಮಿತಧರಣೀವಲಯ । [(16)
ವೃದ್ಧಿಕರತಾಪಸಿಯ ದರ್ಶನದಿ ಸಂಪತ್ಸ ।
ಮೃದ್ಧಿ ಕೈಸಾರುವುದೆನುತ್ತ ಸಂಯಮಿ ಪೇಳೆ ರಘುನಾಥ ಪ್ರೀತಿಯಿಂದೆ ॥
ಶುದ್ಧಾಂತರಂಗಯುತೆಯಂ ಕರೆದು ದೇವಿಜಗ ।
ದುದ್ಧರಣ ಸೀತೆಯನಸೂಯೆಗಭಿನಮಿಸಿ ಶುಭ ।
ಸಿದ್ಧಿಯಂ ಪಡೆವುದೆನೆ ಜಾನಕಿ ಮನೋಹರ್ಷದಿಂದಲ್ಲೊಳಪೊಕ್ಕಳೊಲಿದು ॥ (17)

ಜರೆಯಿಂದ ಲತಿಜೀರ್ಣವಾಗಿ ತಪದಿಂದೊಣಗಿ ।
ನರೆಯಿಂದ ಬೆಳ್ಗುರುಳ್ಗಳನಾಂತ ಪ್ರೊಪ್ಪಿಡಿಯೊ ।
ಳಿರುವಂತೆ ಕಂಗೊಳಿಪ ದಿವ್ಯಮೂರ್ತಿಯ ನೋಡಿ ಹರ್ಷದಿಂದೈದಿ ಬೇಗ ॥
ಧರಣಿಸುತೆ ಯಭಿವಾದನಂಗೈದಳೆನುತಲು ।
ಚ್ಚರಿಸಿ ನಮಿಸಲ್ ವಿತತಹರ್ಷದಿಂ ತೆಗೆದಪ್ಪಿ ।
ಕರುಣದಿಂ ಗಲ್ಲಗಳನಲುಗಿ ಪೊರೆಯೊಳಗಿಟ್ಟನಾಮಯವ ಬೆಸಗೊಂಡಳು ॥

ಸೀತೆ ಸತ್ಯವ್ರತಸದಾಚಾರಸಂಕಲಿತೆ । [(18)
ಮಾತೆ ಭರ್ತೃಪ್ರೀತೆ ಭವದೀಯಸದ್ಗುಣ ।
ವ್ರಾತಂಗಳೆನಿತೆಂದು ಪೊಗಳ್ದು ಪೆಂಪಿತ್ತವಾಡೆ ಸಂಪತ್ಸಮೃದ್ಧಿಗಳನು ॥
ಜಾತುಬಯಸದೆ ಬನಕೆ ಪತಿಗೊಡನೆ ಬಂದು ಸೇ ।
ವಾತುರದಿ ಪ್ರಿಯಬಂಧುವೆಂದು ಪೂಜಿಪ ಜಗ ।
ನ್ಮಾತೆಯೆನಿಸಿದೆ ದೈವಗತಿಯಿಂದಲಾರ್ ಸಾಟಿ ಸುಚರಿತೆಯರಿಗೆ ಜಗದಿ ॥ (19)

ನಗರದಲ್ಲಿರಲಿ ಬನದಲ್ಲಿರಲಿ ಪಾತಕವ ।
ನೊಗಸಿರಲಿ ಸುಕೃತಿಯಾಗಲಿ ಕಾಮವೃತ್ತಿಯಿಂ ।
ಬಗೆಬಗೆಯ ದುಶ್ಶೀಲ ದಾರಿದ್ರ್ಯವಾಂತಿರಲಿ ಧನಿಕನೆಂದಿಸೆ ಪತಿಯೆ ॥
ಮಿಗೆ ದೇವತೆಯೆ ಬಂಧು ಗುರು ಪರಮೆನುತ್ತಿರಿದು ।
ಜಗತಿಯಂ ಪಾವನಿತವೆನಿಪ ನಾರೀಜನರ ।
ಬಗೆಗೆ ಪರಿಮಳವೀವೆ ಸುರಪಸತಿಸಾವಿತ್ರಿಯರುಂಧತಿಗೆ ತವ್ರರೆನಿಸಿಯೆ ॥ (20)

ಸಕಲಧರ್ಮಸ್ವರೂಪಿಣಿ ತಾಪಸೋತ್ತಮೆಯು ।
ರಕುತಿಯಿಂ ಬಿತ್ತರಿಸಿದಮೃತಮಯವಾಣಿಯಂ ।
ಭಕುತಿಯಿಂದಾಲಿಸುತೆ ಸೀತೆ ಕರಗಳ ಮುಗಿದು ವಿಜ್ಞಾಪನೆಂಗೈದಳು ॥
ಸಕಲಲೋಕಾರಾಧ್ಯ ಸರ್ವಗುಣಗಣನಿಳಯ ।
ನಕಳಂಕನಧಿಕಧರ್ಮಸ್ವರೂಪಂ ಸಾಧು ।
ನಿಕರಸಂಸ್ತುತ ರಾಮನೀ ಮಹಾಪುರುಷನಂ ಭಾವಿಸದರಾರಂಬಿಕೆ ॥ (21)

ಹುತವಹನ . . . . . ಳುದ್ವಾಹಸಮಯದೊಳ ।
ಗತಿಶಯದ ಸಭೆಯೆಡೆಯಲೆನ್ನ ಪಿತ್ರಾಕೆ ಸಂ ।
ತತಿವೆಚ್ಚಿಸಂತೆ ಪೇಳ್ದಬುದ್ಧಿಯ ಮನದಲಾಂತಿರ್ಪೆ ಕೇಳು ತಾಯೆ ॥
ಪತಿಸೇವೆಯಿಂದ ಸಾವಿತ್ರಿ ಶಚಿ ರೋಹಿಣಿಯು ।
ರತಿಶಯದಿ ಬೆಳಗುವದ ತಿಳದಾವಕಾಲದೊಳ್ ।
ಜತೆಯುಳಯದನುಸರಿಸಿ ಚಿತ್ತಾನುಮತವಿಡಿದು ಪರಗತಿಯ ಸಾಧಿಸೆನುತ॥ (22)

ಅತಿಕರುಣದಿಂದ ಬೋಧಿಸಿದ ಬುದ್ಧಿಯ ಮಹಿಮೆ ।
ಪತಿಯ ಸಚ್ಚರಿತೆ ಪೂರ್ವದ ಪುರಂಧ್ರಿಯರ ಸನು ।
ಮತಿವಿಡಿದು ಭವದೀಯಚರಣಯುಗಳವ ಕಂಡೆ ಮುಂದೆ ಶುಭಸಂತತಿಗಳು ॥
ಸತತಮಿಪ್ಪಂತನುಗ್ರಹಗೈಯವೇಳ್ಕೆನುತ ।
ಕ್ಷಿತಿಯ ಸುತೆ ಬಿನ್ನವಿಸೆ ಕೇಳಿ ಸಂತೋಷದು ।
ನ್ನತಿಯಿಂದ ತೆಗೆದಪ್ಪಿ ಮುದ್ದಿಸುತಲನಸೂಯೆ ಮಗುಳೆ ಸೀತೆಯೊಳೆಂದಳು ॥ (23)

ಇದೆ ವಸ್ತ್ರ ಶ್ರವಣಭೂಷಣ ಮಂಗರಾಗವು ।
ಭ್ಯುದಯಕರ ಕೊಳ್ಳೆನುತ ಕರತಳಕೆ ನೀಡಿ ಸಂ ।
ಮುದದಿಂದಲಾವಸ್ತುಗಳ ಮಹಿಮೆಯಂ ಪೇಳ್ದಳಾನಂದ ಸಂದಣಿಸುತ ॥
ಸುದರ ಕುಂಡಲಗಳಂ ಚಿರಸುವಾಸಿನಿಯೆನಿಪೆ ।
ಪದಿನಾರುವರುಷಜವ್ವನಮಪ್ಪುದಂ ಭರದಿ ।
ಮುದವೀವುದನುದಿನಂ ತನುಲೇಪನಂಗೈಯಲರಿಸಿನದ ಮಹಿಮೆಯನಘೆ ॥ (24)
ಎನುತ ಸಂಪ್ರೀತಿಯಿಂದೊಲಿದಿತ್ತು ಕುಸ್ತುರಿಸಿ ।
ಜನನಿ ನಿನ್ನಯಸ್ವಯಂವರದ ಕಥೆಯಂ ಕೇಳ್ವೆ ।
ನಿನಿತಿನಿತ ಜನರಿಂದ ತಿಳಿಯಲೆಳಸಿದೆ ಮನಂಬಿತ್ತರಿಸಿ ಪೇಳ್ವುದೆನಲು ॥
ವನಿತೆ ಸಂತಸದಿಂದ ಬಿನ್ನಪಂಗೈದಳತಿ ।
ವಿನಯದಿಂ ಜನನಸಂಗತಿಯ ಪೇಳ್ದಪೆ ಕೇಳು ।
ಜನಕ ಮಿಥಿಲಾಧಿಪತಿಧರ್ಮಜ್ಞನೊಂದುದಿನ ಯಾಗಮಂ ಗೈವೆನೆಂದು ॥ (25)
ನೆಲನ ಶೋಧಿಸುತಿರಲ್ ಕನಕಮಯದ ಕರಂಡ ।
ಹಲಮುಖದಿ ಸಿಲ್ಕಲಾರೆ ನೋಡಿ ನರನಾಯಕಂ ।
ಗೆಲವಿಂದಲುಂ ತೆಗೆದು ನೋಡುತೆನ್ನಂ ತನ್ನ ತನಯಳೆಂದಭಿಮಾನದಿ ॥
ನಲಿವುತಿರಲಂತರಿಕ್ಷದೊಳೊಂದು ಧ್ವನಿ ಕೇಳ ।
ಲಲಘುಮತಿ ಧರ್ಮದಿಂದೀ ತರುಣಿ ಸುತೆ ಯೆನುತ ।
ಲೊಲಿದು ಪಾಲಿಪುದೆನಲ್ ನೃಪವರ್ಯ ಸಂತಸದೆ ಪರಿಪಾಲನಂಗೈದನು ॥ (26)
ಸತಿಪತಿಗಳಿರ್ವರುಂ ಸಂತಸದಲೆನ್ನ ನಿಜ ।
ಸುತೆ ಯೆನುತ ಪ್ರೇಮದಿಂ ಪಾಲಿಸುತಲಿರೆ ವರ್ಷ ।
ಕತಿಪಯಂಗಳು ಕಳೆಯಲುದಿಸೆ ಜವ್ವನವೊಂದುದಿನ ನೋಡುತೆನ್ನ ಮನದಿ ।
ಮತಿಯುತೆಯಯೋನಿಜೆಯ ನಾರ್ಗೀವೆ ಸದ್ವಂಶ ।
ಪತಿ ದೊರೆವನೆಲ್ಲಿ ಮತ್ತೇಂಗೈವೆನೆಂದೀಗ ।
ಕ್ಷಿತಿಪಾಲ ತನ್ನೊಳಗೆ ತಾನೆ ಚಿಂತನೆಗೈದ ಮುಂಗಾಣದೇನೊಂದನು ॥ (27)
ಸರಸಿಜಾಸನನಾಗಲಮರಪತಿಯಾದೊಡಂ ।
ಹರನಾದೊಡಂ ಪೆಂಗಳನು ಪೆತ್ತೊಡಾಲಿಸಂ ।
ಭರಿತವಾದಡೆ ಮಾಣದೆನುವುದಕೆ ದೃಷ್ಟಾಂತ ಮಿಥಿಲಾಧಿರಾಜನಾದಂ ॥
ಪರಿಪರಿಯ ಚಿಂತೆಯೊಳು ತೊಳಲುವರಸಂಗಿನಿತು ।
ದೊರೆವುದತಿಶಯಬುದ್ಧಿ ಹರಚಾಪಮನ್ನೆತ್ತಿ ।
ದರಿಗೀವೆನೆನುತೊಂದು ಶಪಥಮಂ ಗೈದ ನಿಜಸಭೆಯಲಾಕ್ಷಣಮಂಬಕೆ ॥ (28)
ಶಿವನ ಕೋದಂಡಮಂ ಪೂಜಿಸುತಲೀ ಪರಿಯ ।
ವಿವರಪತ್ರಿಕೆಗಳಂ ನಾಲ್ದೆಸೆಗೆ ಕಳಿಪೆ ತಿಳಿ ।
ದವನಿಪತಿಗಳ್ ಬಂದರಾರಿಂದಲುಂ ಶೈವತ್ರಿಣತ ಚಲಿಸದೆ ನಿಲಲ್ಕೆ ॥
ಬವರಮಂ ಗೈದು ಪತ್ತಣಕೆ ಮುತ್ತಿಗೆಯಿಡಲ್ ।
ರವಿಯುದಯದಿಂ ಬಲವ ಘಳಿಸಿ ಭೂಭುಜರುಗಳ ।
ತವಕದಿಂದಟ್ಟಿ ಸುಖಮಿರ್ದ ಮಿಥಿಲಾಧಿಪಂ ನೆನೆನೆನೆದು ಕಾರ್ಯದಿರವ ॥ (29)

ಬಂದು ನಿಟ್ಟಿಸುತಲರಸುಗಳೆಲ್ಲ ಭಕ್ತಿಯಿಂ ।
ಚೆಂದದಿಂದೆರಗಿ ಧನುವಂ ಸುತ್ತಿಸಿ ಪೋಗುತ್ತಿರ ।
ಲಂದಿನಿಂದೆಮ್ಮಯ್ಯನತ್ತಿಚಿಂತೆಯಿಂದೆನ್ನ ನೋಡಿ ಮರುಗುತ್ತಲಿರಲು ॥
ಒಂದುದಿನ ಗಾಧೇಯ ಮುನಿರಾಯ ಸಂಪ್ರೀತಿ ।
ಯಿಂದ ಬಂದಾಸವನವಂ ನೋಡಲಾಸತ್ಯ ।
ಸಂಧರಿರ್ವರ ನೃಪೋತ್ತಮರನೊಡಗೊಂಡಾಗ ನೆಲವಿನಿಂದೈತಂದನು ॥ (30)
ಬರಲಾ ಮುನೀಂದ್ರನಂ ಹರುಷದಿಂ ಪೂಜಿಸುತ ।
ಲರಸ ಬೆಸಗೊಂಡನಿವರಾವ ಬಾಂಧವರು ಶಶಿ ।
ತರಣಿಯಂದದಿ ಧರಣಿಯುಂ ಬೆಳಗುತೇಂಕೆತ್ತವಲ್ಲೈತಂದರೀನಗರಿಗೆ ॥
ಒರೆಯಬೇಕೆನೆ ಮುನಿಪ ನತಿಹರುಷದಿಂ ಪೇಳ್ದ ।
ಧರಣೀಶ ದಶರಥ ಕುಮಾರರಿರ್ವರು ಯಜ್ಞ ।
ದಿರವ ನಿಟ್ಟಿಪ ಕುತೂಹಲದಿಂದಲೆಮ್ಮೊಡನೆ ಬಂದರತಿಪ್ರಿಯದೆನುತ ॥ (31)
ಭಾನುಕುಲಸಂಭೂತ ಚಕ್ರವರ್ತಿ ನೃಪಾಲ ।
ಸೂನುಗಳು ಜಯಲಕುಮಿ ಯಧಿಪರಿವರಿಗೆ ರವಿಕೃ ।
ಶಾನುಶಶಿನಯನನ ಶರಾಸನವ ತೋರಿಸಲು ನೋಡಿ ಹರ್ಷಿಸುವರೆನಲು ॥
ಮಾನವಾಧಿಪ ಚಾಪವಂ ತೋರೆ ರಘುನಾಥ ।
ತಾನತಿಪ್ರಿಯದಿಂದಲೆತ್ತಿ ತಿರುವಂ ತೊಡಿಸ ।
ಲೇನೆಂಬೆ ಪುಂಡ್ರೇಕ್ಷುವೆಂಬೊಲಿಕ್ಕಡಿಯಾದುದಾಕ್ಷಣದೊಳಚ್ಚರಿಯೆನೆ ॥ (32)
ಅತಿಬಲಾನ್ವಿತರೆನುತಲರಿದು ಮಿಥಿಲಾಧಿಪನು ।
ಯತಿಗಳನುಮತಿಯಿಂದ ಕರೆಸಿದಂ ಪಂಕ್ತಿರಥ ।
ಕ್ಷಿತಿಪತಿಯ ತತ್ಪುರೋಹಿತಬಂಧುಜನಸಹಿತಲುದ್ವಾಹಗೈಪೆನೆನುತ ॥
ಅತಿಶಯದ ವಾರ್ತೆಯಂ ಕೇಳೆ ದಶರಥಮಹೀ ।
ಪತಿ ಬರಲು ಜನಕನತಿಸಂಭ್ರಮದೊಳಂ ನೇಹ ।
ತತಿ ಪೆರ್ಚಲಾಗ ರಘುವರಗೆನ್ನನೊಲಿದಿತ್ತು ಪರಿಣಯಂಗೈದ ಮುದದಿ ॥ (33)
ಸುಕುಮಾರ ಲಕ್ಷ್ಮಣನ ನೋಡುತತಿಪ್ರೀತಿಯಿಂ ।
ದಕಳಂಕಳತಿಗುಣಾನ್ವಿತೆಯಪ್ಪ ನಿಜಸುತೆಯ ।
ರಕುತಿಯಿಂ ವೈವಾಹಗೈದಿತ್ತ ನೆರೆದಖಿಲಭೂಮಿಪತಿಗಳ್ ಮೆಚ್ಚಲು ॥
ಸಕಲ ಸಂತೋಷದಿಂದಂದಿನಿಂ ಶ್ರೀ ರಾಮ ।
ಭಕುತಿಯನ್ನೆಡೆವಿಡದೆ ಚರಣಸೇವನೆಯಿಂದ ।
ಪ್ರಕಟಿಸುವೆ ಭವದೀಯಚರಣಸೇವಕಳೆನುತ ವಿನಯದಿಂ ಸೀತೆ ನುಡಿಯೆ ॥ (34)
ಎನುತ ಧರಣಿಜೆ ಪೇಳ್ದ ವಾಣಿಯಿಂದನಸೂಯೆ ।
ಮನದಿ ಸಂತಸಗೊಂಡು ತಾಯೆ ಕೇಳ್ ಭೂತಳದಿ ।
ವನಿತೆಯರಿಗಖಿಲ ವ್ರತನೇಮನಿಷ್ಠೆಗಳೆಲ್ಲ ಪತಿಸೇವೆಗನ್ಯವಿಲ್ಲ ॥
ಅನುದಿನಂ ಪಿಡಿದ ಪಾತಿವ್ರತ್ಯದಿಂ ನಡೆಯೆ ।
ಘನಸುಖಂ ಕೈಸಾರ್ಪುದೀಕಥೆಯ ವಿಸ್ತರಿಸಿ ।
ನಿನಗೊರವೆ ಸಾವಧಾನದಿ ಕೇಳು ಸಾಧ್ವಿಯರ ಪಾವನಚರಿತ್ರಗಳನು ॥ (35)

ಪತಿಯೆ ಪರದೇವತೆ ಯೆನುತ್ತಲನುದಿನ ಮನೋ ।
ಹಿತದಿಂದ ಸೇವನಂಗೈವ ಪಾತಿವ್ರತ್ಯ ।
ಸತಿಗೆ ಬ್ರಹ್ಮಾನಂದಪದವಿ ಕೈಸಾರುವದು ಯಿದರೊಳೊಂದಿತಿಹಾಸವು ॥
ಮತಿವಂತೆ ಕೇಳ್ ಪೂರ್ವದೊಳು ಶೀಲವರ್ಣಗುಣ ।
ವತಿಯೊರ್ವ ಬ್ರಾಹ್ಮಣಿ ಪತಿವ್ರತೆಯು ಭಕ್ತಿಯಿಂ ।
ಸತತ ಸೇವನೆಗೈದು ಪರದೇವತಾಪ್ರೀತಿಯಿಂತಿರಲ್ಕಾ ವಿಪ್ರನು ॥ (36)
ಕಾಮಲಂಪಟನಾಗಿ ದುರ್ವೃತ್ತ ದುಷ್ಕೃತವ ।
ಕಾಮವೆನಲೆಸಗುತ್ತ ಪಶುವು ಕಾರ್ಯಾದಿದು ।
ಸರ್ವಮಕ್ಕೈಹಿತ ನೆನಿಸಿ ಕೆಲಕಾಲಮಿರುತಿರಲ್ ರುಜೆಯಡಸಲಾ ವಿಪ್ರಗೆ ।
ಭೀಮಬಲವಾತಪ್ರಕೋಪದಿಂದವಯವ ।
ಸ್ತೋಮಂಗಳುಡುಗುತ ವಿಕಾರಿಯಾಗನು ಮನಃ ।
ಪ್ರೇಮದಿಂದಾತನಂ ಬಿಡದೆ ಸೇವಿಸುತಿರ್ದಳಾ ಪುರಂಧ್ರಿಯು ಸಂತತಂ ॥ (37)
ಅತುಲದುರ್ವೃತ್ತಿಯಿಂದಾವಿಪ್ರನೈಶ್ವರ್ಯ ।
ಗತವಾಗಿ ಕರಣದಾಟಗಳುಡುಗಿ ಸಂಕೋಚ ।
ಪಥಿಕನಾದರು ಬಿಡದೆ ದೇವತಾಪತಿಭಕ್ತಿಯಿಂದೆ ಸೇವನೆಗೈಯುತ ॥
ಹಿತವೆನಿತನಿತ್ತೆಸಗುತತಿರುಜಾಕಲಿತನಂ ।
ಜೊತೆಯಾಗಲಲೀಯದುಪಚರಣೆ ಗೈಯುತ ಭಕ್ತಿ ।
ಮತಿಯಿಂದ ಪೋಷಣಂಗೈದಳಾ ಸುಚರಿತ್ರೆ ಜೀವನಾಧಿಕವೆನುತ್ತ ॥ (38)
ಉದಯದೊಳಗೆದ್ದು ಮತ್ತುದಗೊಂಡು ಪತಿಯಕರ ।
ಪದಮುಖಂಗಳ ತೊಳೆದು ಪದುಳಗೈದಾತನಂ ।
ಸದನದೊಳಗಿಟ್ಟು ವೀದಿಯೊಳೈದಿ ಮನೆಮನೆಗಳಲಿ ಯಾಚನಂ ಗೈಯುತ ॥
ಸದನಕೈತಂದದಂ ಪಾಕಸಿದ್ಧಂಗೈದು ।
ಮುದದಿಂದಲುಣಲಿತ್ತು ಮೋದಗೊಳಸುತ ಮಿಕ್ಕ ।
ದುದರಭರಣಂಗೈದು ಪಗಲಿರುಳು ಸನ್ನಿಧಿಯ ಸೇವೆಯೊಳಗೆಸದಿರ್ದಳು ॥ (39)
ದಿನದಿನದೊಳೀ ಪರಿಯ ಸುಚರಿತ್ರೆ ನಿಜಪತಿಯ ।
ಮನದೊಲವ ಪಿಡಿದು ನಡೆಯುತ್ತಿರಲ್ಕಾತನಿಗೆ ।
ಘನಮರುದ್ವ್ಯಾಧೆಯಿಂ ಕರಪದಂಗಳು ಪೋಗಿ ಕಾರ್ಪಣ್ಯ ಬೆರ್ಚೆ ಬರಲು ॥
ಮನೆಯೊಳೊರ್ವನ ಬಿಟ್ಟು ಪೊರಡಲಮ್ಮದಲುಳಿಯೆ ।
ತಿನುವರನುವಿಲ್ಲದಾ ಸಾಧ್ವಿ ಸಂಕಟಗೊಳ್ಳು ।
ತನುದಿನಂ ಪತಿಯ ಪೆಗಲೊಳಗಿಟ್ಟು ಮಂದಿರಗಳನು ತೊಳಲಲನುಗೈದಳು ॥
ಈ ಪರಿಯು ಕೆಲಕಾಲವಾ ಪುರಂದ್ರಿಯು ಕಷ್ಟ । [(40)
ಗೋಪನಂಗೈದು ಪತಿಸೇವೆಯೇ ಗತಿ ಯೆನುತ ।
ತಾಪಗೊಳದತಿಭಕ್ತಿಯಿಂದ ಪೊರೆಯುತಲಿರ್ದಳೊಂದುದಿನ ಬೀದಿಯೊಳಗೆ ॥
ಆಪಣದೊಳಟ್ಟು ಯಾಚಿಪೊಡೆ ಕೆಲಬಲಕೈದೆ ।
ರೂಪು ಜವ್ವನೆಯೊರ್ವೆ ವಿಟರ ನರಸುತ ನಿಜ ।
ವ್ಯಾಪಾರಕೆಂದು ಬರುತಿರ್ದಳಂಗಜನ ಕರದಲಗಿನೋಲ್ ಬೆಡಗನಾಂತು ॥ (41)

ಶಶಿವದನೆ ಸಾರಸಾಂಬಕಿ ಕೋಕಿಲಾಲಾಪೆ ।
ಮಿಸುಪ ಶುಕವಾಣಿ ಫಣಿವೇಣಿ ಸುಸ್ತನಿ ಮದನ ।
ವಿಶಿಖನಿಭಸುಕಟಾಕ್ಷಗಳ ಪರಪಿ ಗಜಗತಿಯಿಂದ ಜವ್ವನೆ ಬರುತಿರೆ ॥
ಪೊಸಬೇಟಮಂ ನೋಡುತಂಗಡಿಯೊಳೊರಗಿರ್ದ ।
ನಿಶಿತರೋಗಾವಿಷ್ಟ ವಿಪ್ರಾಧಮಗೆ ಚಿತ್ತ ।
ಕುಸಿದು ಕಂದಿದುದು ತನುವೇದನೆಯೊಳೇನೆಂಬೆನಾ ದುರಾವಸ್ಥೆಗಳನು ॥ (42)

ಮದನವಶನಾಗಿ ಮತ್ತಾ ಸುದತಿಯಂ ಬಯಸಿ ।
ಹೃದಯದನುತಾಪದಿಂ ಕರಗಿ ಕೊರಗುತ್ತಳಲಿ ।
ಮದವತಿಯು ನೆನೆನೆನೆದು ಮಂದಮತಿ ಪಲುಬುತಿರಲನ್ನೆಗಂ ಸತಿಯು ಬರಲು ॥
ಕುದಿಯುತ ಮನೋವೃತ್ತಿಯಂ ತಿಳಿಪಲಾ ಸಾಧ್ವಿ ।
ಮುದದಿಂದಲೈದಿ ವೇಶ್ಯಾಂಗನಾಮಂದಿರಕೆ ।
ವಿಧವಿಧದೊಳುಪಚರಿಸುತೆರಗಿ ಪ್ರಾರ್ಥನೆಗೈದಳೇನೆಂಬೆನಾ ಪರಿಯನು ॥ (48

ಸರಸಿಜಾಸನೆ ನೀನು ವೀಧಿಯೊಳ್ ಬರುತಿರಲ್ ।
ತರಳನಯನಾಪಾಂಗವಿಭ್ರಮವ ಬಯಸಿ ಪತಿ ।
ಸ್ಮರವೇದನಂಗೊಳುತ ನವಸಂಗಮೋತ್ಸುಕತೆಯಿಂತ ಮನದನುತಾಪದಿಂ ॥
ಮರುಗಲಾದುದು ಬರಲ್ ಕರಪಾದರೋಗದಿಂ ।
ಬರುವುದಿಲ್ಲವು ಕೊಡಲ್ಕಿಲ್ಲ ಕಾಂಕ್ಷೆಯು ತೊಡರಿ ।
ಧರೆಯನಂಜಿಹ ಪತಿಯು ಪೊರೆದೆನ್ನನುಳುಹೆನುತ ಪದಕೆರಗಿ ಪ್ರಾರ್ಥಿಸಿದಳು ॥

ಶಾರೀರ ಪಾರಮಂದಿರದಿ ವಸುಮಣಿಗಳರೆ । [(44)
ನಾರಿಯರ್ ಬಂದೊಲಿವರಲ್ಲದೀ ಪರಿಯ ದು ।
ಶ್ಚಾರಣೆಯು ಧವನ ರೋಗಿಷ್ಠನಂ ಮನದೊಲವ ಪಿಡಿದು ಭಕ್ತಿಯನೆಸಗುವ ॥
ನಾರಿ ಮೂಲೋಕದುಪಕಾರಿ ಸುಚರಿತ್ರೆ ।
ಯಾರ ತವರೆನಿಪಳೀ ಮಹಾಸತಿ ಯೆನುತ ।
ಲರಿತು ಸುಖಕಾರಣಕ್ಕೊಡಬಟ್ಟು ಸಂಕೇತನಿಲಯಮಂ ತೋರಿ ಬೀಳ್ಕೊಟ್ಟಳೊಲಿದು ॥

ಅತಿಕಷ್ಟದಿಂದಲಾ ಸತಿಯೊಡಂಬಡೆ ಬಂದು । [(45)
ಪತಿಗೆಚ್ಚರಿಸಲಾತನತಿಸಂತಸಂಗೊಂಡು ।
ಮತಿಯ ನಿಟ್ಟಿಸುತಿರ್ದನಮಂಭೋಜಬಾಂಧವನು ಪಶ್ಚಿಮಕೆ ಪೋಪ ಪರಿಯ ॥
ಹಿತವಾಗಿ ಕಳ್ತಲೆಯು ಕವಿಯೆ ನಾರಿಯೊಳೆಂದ ।
ಜತನದಿಂದೆನ್ನ ಕರದೊಯ್ದಲ್ಲಿ ಜವ್ವನೆಯ ।
ಜೊತೆಗೊಳಿಸಿ ಪೊರೆಯದೇತಕೆ ಜಾಗನೆಸಗುತಿಹೆ ಕರದೊಯ್ಯುವುದೆಲೆ ಸಾಧ್ವಿಯೆ॥

ಕಗ್ಗತ್ತಲೆಯೊಳು ಪೆಗಲೊಳಗಿಟ್ಟು ಪತಿಯ ಮತಿ । [(46)
ಯುಗ್ಗಡದೊಳೈತರುತಲಿರಲೊಂದು ತಾಣದೊಳ್ ।
ಬೊಬ್ಬೆಗ್ಗಜೋಲ್ದಿರ್ದ ಪದಮಿಾತನುರುಮಸ್ತಕ ಸೋಂಕಲದ ಪಿಡಿದು ಕರದಿ ॥
ಡಗ್ಗಲತಿವೇದನೆಯು ತೋರಲಾ ಪುರುಷ ಬೈ ।
ದಗ್ಗಳದ ಕೋಪದಿಂದಾತ್ಮವೇದನೆಯೊಳಂ ।
ಮುಗ್ಗುತ್ತಲಿಂತೆಂದನಾ ಮಹಾಕಳ್ತಲೆಯೊಳತಿಕಂಪನಂಗೊಳಸುತೆ ॥ (47)

ಕೃತದುಷ್ಕೃತದಿ ಶೂಲಹತನಾದ ಜೀವಿಯುಂ ।
ಖತಿಯಿಂದಲಾವ ಪಾಪಾಚಾರಿ ಪಿಡಿದೆಳೆದ ।
ಮತಿಹೀನನವತರಣಿಯುದಿಸಲೆಮ್ಮ ಸದನವನ್ನೈದಲೆನ್ನುತ ಶಪಿಸಲು ॥
ಪತಿಗಡಸಿದತಿವಿಪತ್ತೆಣಿಸಿ ಭಯದಿಂ ಬೇಗ ।
ಸತಿ ಜಲಾಶಯದೆಡೆಗೆ ನಡೆದು ತತ್ತಟದೊಳಂ ।
ಜತನದಿಂ ಕುಳ್ಳಿರಿಸಿ ಬೇಗ ಸ್ನಾನಂಗೈದು ಮನದಿ ನೆನೆದಳ್ ಪತಿಯನು ॥ (48)
ಮೊಗೆದು ಬೊಗಸೆಯೊಳುದಕವಂ ಸಾಧ್ವಿ ವ್ರತನಿಷ್ಠೆ ।
ಯೊಗುಮಿಗೆಯ ಸತ್ವದಿಂ ರವಿಯುದಿಸಬೇಡೆಂದು ।
ಮಿಗೆ ಜಲಕ್ಷೇಪಣಂಗೈದು ಪತಿಯೆಡೆಗೈದಿ ಸಂತಸದಿ ಕುಳ್ಳಿರ್ದಳು ॥
ಬೆಗಡುಗೊಂಡುದು ದೇವತತಿಯಿಂದ್ರನೆಡೆಗೈದಿ ।
ಸುಗುಣೆಯೆಸಗಿದ ಪರಿಯನುಸಿರಲಾತಂ ಹರನ ।
ಬಗೆಯೊಳಂ ಜಾನಿಸಲು ಮುಮ್ಮೂರ್ತಿಗಳ್ ಬಂದರಾ ಸಮಯಕೇನೆಂಬೆನು ॥ (49)
ಸರಸಿಜಾಸನ ವಿಷ್ಣು ಹರಸುರೇಶಾದಿಗಳ್ ।
ಧರಣಿ ಗೈತಂದು ಕಳ್ತಲೆಯೊಳೊಪ್ಪುವ ದಿವ್ಯ ।
ತರುಣಿಯಂ ಕಂಡು ತರಣಿಯ ಶಾಪಮೇಂ ಕತದೊಳಾದುದೆನುತಂ ಕೇಳಲು ॥
ಇರುಳೊಳಂ ದೆಸೆಯ ಶೂಲದ ಪೆಣದ ಪದಸೋಂಕ ।
ಲಿರದೆ ಕೋಪಿಸಿ ದಿನಪನುದಿಸೆ ಮೃತನಹನೆನುತ ।
ಭರದಿ ಶಾಪವನಿತ್ತೊಡಾನಂಜಿ ಭಾಸ್ಕರನ ಪ್ರಾರ್ಥನಂಗೈದೆ ಭಯದಿ ॥ (50)
ಪತಿಯು ಪರದೇವತೆಯೆನುತ್ತರಿದು ಸಂತಸದ ।
ಲತಿಕಷ್ಟವಂ ಸಹಿಸಿ ವ್ರತದಿಂದಲಿರೆ ದುಃಖ ।
ಜತೆಯಾದುದೈಸೆ ನಿಷ್ಕಾರಣದಲಿದ ನಾರಿಗೆಚ್ಚರಿಪೆನಾಗೊರೆವೆನು ॥
ಕ್ಷಿತಿಯೊಳೆನುತಾ ಸಾಧ್ವಿ ನುಡಿಯೆ ಹಿಗ್ಗುತ ದೇವ ।
ತತಿಗಳೊಡೆಯಂ ಪೇಳ್ದ ಪೇಳು ಮನದಿಷ್ಟವಂ ।
ಸತಿಶಿಖಾಮಣಿ ಬೇಡಿದುದನೀವೆನೆನಲಾಕೆ ಕೈಮುಗಿಯುತಿಂತೆಂದಳು ॥ (51)
ರೋಗಮಿಲ್ಲದೆ ಪತಿಯು ದೀರ್ಘಾಯುರಾರೋಗ್ಯ ।
ಮಾಗಿರಲ್ಕನುದಿನಂ ಚರಣಸೇವನೆಗೈವ ।
ಯೋಗಮೊಂದಂ ಕೇಳ್ವೆನಲ್ಲದನ್ಯವ ಬಯಸೆನೆನೆ ದೇವ ಸಭೆ ಮೆಚ್ಚುತೆ ॥
ಆಗಲಾರೋಗ್ಯವೈಶ್ವರ್ಯ ಜವ್ವನ ದೇವ ।
ಭೋಗಂಗಳಾತನಿಗೆ ಕೊಟ್ಟರಾಸುಚರಿತ್ರೆ ।
ಗಾಗಲಾನಂದ ರವಿಯುದಿಸಲೆಂದಪ್ಪಣೆಯನಿತ್ತಳತಿಹರ್ಷದಿಂದೆ ॥ (52)
ಪಾತಿವ್ರತಾಮಹಿಮೆ ಯೆಂತೊರೆಯಲಳವಪ್ಪು ।
ದೀತೆರದೊಳೊರ್ವ ಪುರುಷನ ನೊರ್ವೆಯನುಸರಿಸಿ ।
ಖ್ಯಾತಿಯಂ ಪಡೆದಳೀ ಲೋಕಕಚ್ಚರಿಯೆನಲ್ ಪದಿನಾಲ್ಕುಲೋಕಗಳಗೆ ॥
ಸೀತೆ ಶ್ರೀರಘುವರನ ಹೃತ್ಕಮಲದೊಳಗಿಟ್ಟು ।
ಪ್ರೀತಿಯಿಂದೊಡನೆ ಭಕ್ತಿಯನೆಸಗುತಿಹೆ ನೀನೆ ।
ಸೀತೆ ಭೂಲೋಕಪಾವನೆ ಭವನ್ಮಹಿಮೆಯಂ ಪೊಗಳಲೆನ್ನಳವಪ್ಪುದೆ ॥ (53)

ಎಂದುಸುರಿದನಸೂಯೆಯಮೃತಮಯನುಡಿಗಳಂ ।
ಪೊಂದಿ ಧರಣೀತನುಜೆ ಚರಣಕಾನತಳಾಗಿ ।
ಇಂದೆನಗೆ ಚಿತ್ತ ನಿರ್ಮಲಮಾಯ್ತು ತಾಯೆ ನಿಮ್ಮುಪದೇಶಮಹಿಮೆಯಿಂದೆ ॥
ಬಂಧುರದ ಭಕ್ತಿಯನ್ನೆಸಗಿ ತಾಂ ಕೃತಕೃತ್ಯೆ ।
ಳೆಂದೆನಿಪೆ ಪ್ರಿಯಚಿತ್ತ ಸಂಪ್ರೀಣನಂಗೈವೆ ।
ನಿಂದಿರಾವರನೆನುತಲರಿತು ಸೇವಿಪೆನೆನುತ ಜನಕಸುತೆ ಬಿನ್ನವಿಸಲು ॥ (54)
ಕೇಳ ವಿಸ್ಮಿತೆಯಾಗಿ ಸೆಳೆದಪ್ಪಿ ಮುದ್ದಿಸುತ ।
ಮೌಳಿಯಾಘ್ರಾಣಂಗೈದು ಸನ್ನುತಿಗೈದು ।
ನಾಳೀಕಭವನರಸಿ ಕಾಳ ಹರಿವಲ್ಲಭೆಯರುಗಳ ಸರಿ ನೀನೆನ್ನುತ ॥
ಬೇಳ ಪ್ರಿಯೆ ನಿನ್ನಗಲಲಳವಲ್ಲವಸ್ತಮಿತ ।
ಹೇಳಿಯಂ ಕಂಡು ಕಂಗಳ ಮುಗಿದ ಕಮಲಗಳ ।
ಬಾಳುವೆಯನುಳಿದು ಮಧುಕರ ನಗುವ ನೈದಿಲೆಂತು ಸಂತಸದಿ ಸಾರುತಿಹವು ॥ (55)
ಖಗಮೃಗಗಳೆಲ್ಲವು ಕುಲಾಯಕೈದುತಲಿವೆ ಕೊ ।
ನಗುವಳೆಂಬರಗಣಿಕೆ ಕುಂವದುಡುತತಿಗಳಂ ।
ಮಿಗೆ ಪರಪಿ ಸಕಲಭೂತಗಳು ವಿಷಯಗಳಿಂದಲುಪರಮಂಗೊಳ್ಳಲೆನುತ ॥
ಸೊಗಯಿಸುವ ಕ್ರತುಲಿಹನ ಪೂಜಿಸುವ ಕಾಲ ಮಾನ ।
ದೊಗುಮಿಗೆಯಲಂಗರಾಗವ ರಚಿಸುತಂಮುಕುರ ।
ಸೊಗಸಿಂದಲಂಕರಿಸಿ ತಾಟಂಕಮಂಡನದಿ ರಾಜಿಪ್ಪುದು ಬೆಂಗಳರಸಿ ॥ (56)
ಎನುತಲೀಪರಿಯಲನಸೂಯೆ ಯೆಸಗಿದುಪಚಾರಗಳೆ ।
ಜನಕಸುತೆ ತಾಪಸಿಯ ಚಿತ್ತಾನುಮೋದಸಂ ।
ಜನಿಪಂತಲಂಕರಿಸಿ ಚರಣಗಳಿಗಭಿನಮಿಸಿ ಬೀಳ್ಕೊಂಡು ಬೇಗಲೈದಿ ॥
ವಿನಯದಿಂದನಸೂಯೆ ಯೆಸಗಿದುಪಚಾರಗಳ ।
ಘನ ಕುಂಡಲಂಗಳಂಶುಕಮಂಗರಾಗಗಳ ।
ಮನದನ್ನನೊಳು ಪೇಳ ಮಮತೆಯಿಂ ವಂದಿಸಿದಳೆಂದು ಧರಣೀಜಾತೆಯು ॥ (57)
ಎಸಗಿ ಸಂಧ್ಯಾಕೃತ್ಯಗಳ ರಾಘವೇಶ್ವರಂ ।
ಪಶುಪತಿನಿಕಾಶ ಋಷಿಗೆರಗಿ ಕುಳ್ಳಿರ್ದ ತಾಂ ।
ಪೊಸತೆನಿಪ ಕಥೆಗಳಂ ವಿಪ್ರನಿಂದಲಿ ಕೇಳುತಾನಂದಮಯನಾಗುತ ॥
ಸಸಿಯು ವಾರುಣಿಯ ಮುಖಚುಂಬನಂಗೈವನ್ನ ।
ನಿಶಿ ಚಾರುತಿರೆ ನಭೋರನ್ನ ಬರುತಿರೆ ಹರಿಯು ।
ಬೆಸರ ಸತ್ಕೀರ್ತನೆಯನೆಸಗಿ ಬೇಗದೊಳುಪ್ಪವಡಿಸಿದಂ ರಘುನಾಥನು ॥ (58)
ಹರುಷದಿಂ ಪೂರ್ವಾಹ್ಣಿಕಕ್ರಿಯೆಗಳಂ ರಚಿಸಿ ।
ಸುರರ ಸಂತಸಗೊಳಿಸುತತ್ರಿಮುನಿಗಭಿನಮಿಸಿ ।
ಭರದೊಳಪ್ಪಣೆವಿಡಿದು ಧರಣಿಸುತೆ ಲಕ್ಷ್ಮಣರೊಡಮೆರೆದು ಕರುಣದಿಂದ ॥
ಪೊರೆಯೆ ಮುಲ್ಲೋಕಮಂ ರಾಮಪುರದರಸ ಮುನಿ ।
ಸರರು ಜಯಜಯಮೆನುತ ಬರಲು ದೇವರ್ಕಳುಂ ।
ಸುರಿಯುತಿರೆ ಪೂವಳೆಯನಾನಂದನಂದನವನೊಳಪೊಕ್ಕ ರಘುವೀರನು ॥ (59)

ಸಂಧಿ ಮೂವತ್ತಾರು ಪದ 1664.

ಶ್ರೀ : ಶ್ರೀ : ಶ್ರೀ :

“ ಮಂಗಳ ಮಹಾ ಶ್ರೀ ”

ಶ್ರೀ ಲಕ್ಷ್ಮೀ ನರಸಿಂಹಾಯನಮಃ । ಶ್ರೀಃ ॥

ಶ್ರೀ ರಾಮಚಂದ್ರಾಯ ನಮಃ ॥

ಗದ್ಯ ॥

ಇದು ರಾಮಚಂದ್ರ ಪಾದಾರವಿಂದವಂದನ ಪವನನಂದನವರಪ್ರಸಾದಾಸಾದಿತ ಸಾರಸ್ವತಾ
ಸಾಹಿತ್ಯಸಾಮ್ರಾಜ್ಯಸರ್ವಂಕಷ ಚತುರ್ವಿಧಕವಿತಾಪರಿಶೀಲಿತಾತ್ಮನಿಷ್ಠಾಗರಿಷ್ಠ
ಗಾಂಧರ್ವಕಳಾವಿದ ವಿವಿಧ ವಿದ್ವಜ್ಜನೋಪಲಾಲನೀಯ ರಾಮಪುರಿ
ಹಂಪೆಯಮಾತ್ಯತನೂ ಭವ ವೆಂಕಾಹ್ವಯ ವಿರಚಿತ
ವಾದ ಶ್ರೀಮದ್ರಾಮಾಯಣಮಹಾ
ಪ್ರಬಂಧದ ಶ್ರೀಮದಯೋಧ್ಯಾ
ಕಾಂಡಂ.

—॥ ಸಮಾಪ್ತಂ ॥—

ಮಂಗಳ ಮಹಾ ಶ್ರೀ

ಶ್ರೀ ಸೀತಾಲಕ್ಷ್ಮಣ ಭರತಶತ್ರುಘ್ನ ಹನುಮತ್ಸ
ಮೇತ ಶ್ರೀರಾಮಚಂದ್ರಾರ್ಪಣಮಸ್ತು ॥

ಶ್ರೀ ಲಕ್ಷ್ಮೀ ನರಸಿಂಹಾರ್ಪಣಮಸ್ತು.

ಶ್ರೀ : ಶ್ರೀ : ಶ್ರೀ :

LIST OF AGENTS FOR THE MADRAS GOVERNMENT PUBLICATIONS.

IN CITY.

ACCOUNT TEST INSTITUTE, Egmore, Madras
CITY BOOK COMPANY, POST BOX NO 605, Madras-1.
HIGGINBOTHAMS, Madras
P. VARADACHARI & CO, Madras.
THE SOUTH INDIA SAIVA SIDDHANTHA WORKS PUBLISHING SOCIETY, LIMITED, Madras
VENKATARAMA & CO, Madras
V. PERUMAL CHETTY AND SONS, Madras
V. RAMASAWMY SASTRULU & SONS, Madras
OTTRUMAI OFFICE, Madras-17.
M DORAISWAMY MUDALIAR & CO, Madras
FREE INDIA CO-OPERATORS' AGENCY, Madras-4
SOUTH INDIA TRADERS, R[illegible]apetta, Madras

IN MUFASSAL

M. C KRISHNIAH CHETTY, Madanapalle, Chittoor district.
THE EDUCATIONAL SUPPLIES COMPANY, P S. Puram, Coimbatore district.
D. SREEKRISHNAMURTHY, ONGOLE G[illegible]ur district
M SESHACHALAM & CO., Masulipatnam, Krishna district.
TRIVENI PUBLISHERS, Masulipatnam, Krishna district
HINDUSTAN DIARY PUBLISHERS, Vijayavada, Krishna district.
THE COMMERCIAL LINKS, Governorpet, Vijayavada, Krishna district
THE MANAGER, Gramodharana, Buckinghampet, Vijayavada, Krishna district
E. M. GOPALAKRISHNA KONE, Madurai, Madurai district.
K. P. AHMED KUNHI & BROS, Cannanore, Malabar district.
KERALA POLYTECHNIC CO-OPERATIVE SOCIETY, LTD, Kozhikode-5 (South Malabar).
P. K. BROTHERS, Kozhikode (South Malabar).
V. D. MOORTHY, Nellore, Nellore district.
A. VENKATASUBBAN, Vellore, North Arcot district.
TIMES MODERN MART, Salem, Salem district.
K. BHOJA RAO & CO, Mangalore, South Kanara district.
U. R. SHENOY & SONS, Mangalore, South Kanara district.
SRINIVAS & CO., Kumbakonam, Tanjore district.
P. N. SWAMINATHA SIVAN & CO, Pudukkottai, Tiruchirappalli district.
S. KRISHNASWAMI & CO., Tiruchirappalli, Tiruchirappalli district.
PALANIAPPA BROTHERS, Teppakulam, Tiruchirappalli, Tiruchirappalli district.
V. S. VASAN & CO., Tirunelveli, Tirunelveli district.
S. R SUBRAMANIA PILLAI, Tirunelveli, Tirunelveli district.
ARIVU NOOLAGAM, Market Street, Ootacamund.

IN OTHER STATES

BHANWARILAL JAIN, Mot[illegible]
SREE ABHIRAVA VAIDYA SHARADA BOOK DEPOT, Bangalore-2.
THE BANGALORE BOOK CENTRE, Bangalore-2.
THE STANDARD BOOK DEPOT, Bangalore-2.
HARI GOVIND BOOK STALL, Baroda.
NEW BOOK COMPANY, Bombay
THE POPULAR BOOK DEPOT, Lamington Road, Bombay-7.
THE BOOK COMPANY, Calcutta.
THACKER SPINK & CO, Calcutta.
BHARAT STORES, Ernakulam.
CHAROTAR BOOK STALL, Anand (Gujerat).
OSMANIA UNIVERSITY STUDENTS' CO-OPERATIVE BOOK DEPOT, Lallaguda P.O., Hyderabad (Deccan).
S. M. JAGANATHAN, Nagercoil.
S. V. KAMAT, Kumta (North Kanara).
JAIN BOOK AGENCY, New Delhi.
INTERNATIONAL BOOK SERVICE, Poona.